ಕರ್ನಾಟಕ ನಾಣ್ಯ ಪರಂಪರೆ

ಎ.ವಿ. ನರಸಿಂಹಮೂರ್ತಿ



ಆಕರ ಗ್ರಂಥಮಾಲೆ

ಕರ್ನಾಟಕ ನಾಣ್ಯ ಪರಂಪರೆ

ಎ.ವಿ. ನರಸಿಂಹಮೂರ್ತಿ

ಕನ್ನಡ ಪುಸ್ತಕ ಪ್ರಾಧಿಕಾರ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - 560 018

KARNATAKA NANYA PARAMPARE

(History of Karnataka Coins)

Written by

Prof. A.V. Narasimhamurthy

7A/2, Gokulam Road, Jaylakshmipuram

Mysore - 570 012

Published by :

Administrative Officer

Kannada Book Authority

Chamarajapet, Bangalore - 560 018

Year : 2003

Pages : xii + 364

Price : 200/-

ISBN No. 81-7713-125-7

Printed at :

Sathyasri Printers Pvt. Ltd.,

164, 5th Main, Chamarajapet, Bangalore 560 018

Phone : 6525736

ಅಕ್ಷರಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನಸಂಪತ್ತನ್ನು ಉಳಿಸಿ ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್ ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ ಪಾಲನೆ ಮತ್ತು ಪೋಷಣೆ ಎಂದೆಂದೂ ನಮಗೆ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ನಾನು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರ ದೂರದ ಕತ್ತಲೆಯ ಜಾಗಗಳೂ ಅಜ್ಞಾತ ವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ ಗ್ರಾಮಾಂತರಗಳಿಗೂ ತಾಲ್ಲೂಕು ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ತಿಳಿಯಾಗಿಸುವ, ಅಕ್ಷರ ಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ ಕನ್ನಡ ಪುಸ್ತಕ ಪ್ರಾಧಿಕಾರ ಎಂಬ ಮಾತಿಗೆ ಬೆಲೆ ಬರುತ್ತದೆ, ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು.

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು. ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು. ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳು ಮತ್ತು ಸಂಕಟಗಳು ಉಂಟು. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ. ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ. ಅನೇಕ ತಳವರ್ಗದ ಜನಸ್ತಾನಗಳು ಮೊದಲ ಬಾರಿಗೆ ಅಕ್ಷರ ಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲ ಹಂಬಲಿಸುವ ಆಶಯ ಆಗಬೇಕು. ಆ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ - ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದವು. 1820ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು - ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ್ವ ಅಗತ್ಯವಿದೆ. ಇಲ್ಲದೆ ಹೋದರೆ ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೂ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ಈ ಮಾಲೆಗಳಲ್ಲಿ ಜಾಗತಿಕ ಚಿಂತಕ ಮಾಲೆಯೂ ಒಂದು.

ಕನ್ನಡದಲ್ಲಿ ಹೊಸಶಾಸ್ತ್ರವಿಧಾನಗಳು ರೂಪಣಗೊಳ್ಳುವುದು ಇಂದು ತುಂಬಾ ಅತ್ಯಗತ್ಯವಿದೆ. ಪ್ರಾಚೀನ ಶಾಸ್ತ್ರ ವಿಧಾನಗಳು ಮರಳಿ ಮರಳಿ ರೂಪುಗೊಂಡಿದ್ದೇ ಸಂಸ್ಕೃತಿ

ಅಧ್ಯಯನಕ್ಕೆ ಹೊಸ ಬಾಗಿಲನ್ನು ತೆರೆಯಲು ಅವಕಾಶವಾಯಿತು. ಶಾಸ್ತ್ರವಿಧಾನವು ರೂಪುಗೊಂಡಿದ್ದು ಮಾತ್ರವಲ್ಲ; ಆ ಶಾಸ್ತ್ರವಿಧಾನಗಳ ಮೂಲಕ ಹೊಸ 'ನೋಟ'ಗಳಿಗೂ ಹೊಸ 'ಅಭಿವ್ಯಕ್ತಿ' ಕ್ರಮಗಳಿಗೂ ಕಾರಣವಾಯಿತು. ನಾವು ಈ ಅಂಶವನ್ನು ಮನಗಂಡರೆ ಹೊಸ ಶಾಸ್ತ್ರವಿಧಾನಗಳು ರೂಪುಗೊಳ್ಳುವುದು ಎಷ್ಟು ಅಗತ್ಯವಿದೆಯೆಂಬುದು ತಿಳಿದುಬರುತ್ತದೆ. ಈಗಾಗಲೇ ಹಳೆಯ ಶಾಸ್ತ್ರವಿಧಾನಗಳು ಹೊಸ ಶಾಸ್ತ್ರವಿಧಾನಗಳ ಜತೆ ಸಂಲಗ್ನಗೊಂಡಿದ್ದೂ ಮತ್ತೂ ಕೆಲವು ಹೊಸ ಶಾಸ್ತ್ರವಿಧಾನಗಳು ಹಳೆಯ ಶಾಸ್ತ್ರವಿಧಾನಗಳನ್ನು ಲಯಗೊಳಿಸಿದ್ದೂ ಉಂಟು! ಆದರೆ, ಶಾಸ್ತ್ರ ವಿಧಾನಗಳ ಪದಪಂಕ್ತಿಯಲ್ಲಿ ಹೊಸ ನಡೆ, ಹೊಸ ಶಕ್ತಿ, ಹೊಸ ಲಯ, ಹೊಸ ಭಾವಗಳಿಗೆ ನಾವು ಮೊರೆ ಹೋಗಬೇಕಾಗಿದೆ.

ಡಾ। ಎ.ವಿ. ನರಸಿಂಹಮೂರ್ತಿ ಅವರು ಪುರಾತತ್ತ್ವಶಾಸ್ತ್ರದಲ್ಲಿ ಅಂತಾರಾಷ್ಟ್ರೀಯ ಮನ್ನಣೆ ಪಡೆದವರು. ಅವರು ಇಂಗ್ಲೀಷ್‌ನಲ್ಲಿ ಬರೆದ ಲೇಖನಗಳೂ, ಪುಸ್ತಕಗಳೂ ಬಹುಜನ ವಿದ್ವಾಂಸರಿಗೆ ಪ್ರಿಯವಾಗಿವೆ. ಅವರು ಇಂಗ್ಲೀಷಿನಲ್ಲಿ ಬರೆದ ನಾಣ್ಯದ ಮೇಲಣ ಗ್ರಂಥ ಪ್ರಮಾಣಗ್ರಂಥವೆಂಬ ಹೆಸರಿಗೆ ಕೀರ್ತಿತವಾಗಿದೆ. ಆ ವಿಷಯಕ್ಕೆ ಸಂಬಂಧಿಸಿದಂತೆ ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಎ.ವಿ. ನರಸಿಂಹಮೂರ್ತಿ ಅವರು ಬರೆದ ಲೇಖನಗಳು ಆ ಕ್ಷೇತ್ರದ ವ್ಯಾಸಂಗಿಗಳಿಗೆ ಆಸಕ್ತರಿಗೆ ಜ್ಞಾನದ ಹೊಸಬಾಗಿಲನ್ನು ತೆರೆಸಿದಂತಾಗಿವೆ. ಈ ಅಂಶವನ್ನು ಇನ್ನೊಂದು ರೀತಿಯಿಂದ ನೋಡಬಹುದು. ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದು ಶಾಸ್ತ್ರವಿಧಾನವನ್ನು ಕನ್ನಡದಲ್ಲಿ ರೂಪಿಸಿದ ಕೀತಿಯೂ ಎ.ವಿ. ನರಸಿಂಹಮೂತಿಗಳದೇ. ಈ ಮಾತಿನಲ್ಲಿ ಎಳ್ಳಷ್ಟು ಉತ್ಪ್ರೇಕ್ಷೆಯಿಲ್ಲ. ನಾಣ್ಯ, ನಾಣ್ಯಶಾಸ್ತ್ರ ಎಂಬ ಮಾತುಗಳು ಪುರಾತತ್ತ್ವಶಾಸ್ತ್ರಕ್ಕೆ ಸೇರಿದ ಒಂದು ಭಾಗವೇನೋ ಹೌದು. ನಮ್ಮ ದೇಶದ ಅಥವಾ ಹೊರದೇಶದ ಅನೇಕ ವಿದ್ವಾಂಸರು, ಮಹನೀಯರು ಪುರಾತತ್ತ್ವಶಾಸ್ತ್ರದ ಒಂದು ಪ್ರಮುಖ ಭಾಗವಾದ ನಾಣ್ಯಶಾಸ್ತ್ರಕ್ಕೆ ಹೊಸ ಪರಿವಾರವನ್ನು ಸೇರಿಸುತ್ತಲೇ ಬರುತ್ತಿದ್ದಾರೆ. ಈ ಕೆಲಸವನ್ನು ಕನ್ನಡದಲ್ಲಿ ಉತ್ಥಿತ ಕೀರ್ತಿವಂತರಾಗಿ ಕಾರ್ಯನಿರ್ವಹಿಸಿದ್ದು ಪ್ರೊ. ಎ.ವಿ. ನರಸಿಂಹಶಾಸ್ತ್ರಿಯವರೇ. ಅವರೂ ಅವರ ಪ್ರಜ್ಞಾವಂತ ಶಿಷ್ಯರೂ ಈ ಶಾಸ್ತ್ರವಿಧಾನಕ್ಕೆ ಹೊಸ ಪರಿಕಲ್ಪನೆಗಳನ್ನೂ, ಹೊಸ ಪರಿಭಾಷೆಗಳನ್ನೂ ಟಂಕಿಸುತ್ತಿದ್ದಾರೆ. ಇದು ಈಗ ತುರ್ತಾಗಿ ಆಗಬೇಕಾದ ಕೆಲಸ. ಪರಿಭಾಷೆಗಳು ಒಂದು 'ಶಾಸ್ತ್ರ'ದಲ್ಲಿ ಕ್ರಿಯಾವಿಧಾನವಾದರೆ ಪರಿಕಲ್ಪನೆಗಳು ಆ 'ಶಾಸ್ತ್ರ'ದಲ್ಲಿ ಆನ್ವಯಿಕ ವಿಧಾನವೇ ಆಗುತ್ತವೆಂಬುದನ್ನು ಎಲ್ಲರೂ ತಿಳಿದುಬಲ್ಲರು. ಈ ಅಂಶವು ನಮ್ಮ ಗಮನಕ್ಕೆ ಬರುವುದು ಅವಶ್ಯವಿದೆ. ಅದು ಇಂದಿನ ಆವಶ್ಯಕತೆಗಳಲ್ಲಿ ಒಂದೆಂದು ನಾನು ತಿಳಿಯುತ್ತೇನೆ.

ಆಕರಗ್ರಂಥಮಾಲೆಯ ಅಡಿಯಲ್ಲಿ ಪ್ರಕಟವಾಗಿರುವ ಹಲವು ಪುಸ್ತಕಗಳು ವಿದ್ವಾಂಸರ, ವಿದ್ಯಾರ್ಥಿಗಳ, ಆಸಕ್ತರ, ಕ್ಷೇತ್ರತಜ್ಞರ - ವಿಶೇಷವಾದ ಆದರವನ್ನು ಪಡೆಯುತ್ತಿವೆ. ಅವು ಆಯಾಯ ವಿದ್ವಾಂಸರ ಪ್ರೇಮಕ್ಕೆ ಒಳಗಾಗಿವೆಯೆಂಬುದೂ ಸತ್ಯ.

ಅದೇ ಹೊತ್ತಿಗೆ ಆತ್ಮಮೂಲ್ಯವೂ ಜ್ಞಾನಪ್ರದಾಯಕವೂ ಆದ ಕೃತಿಪ್ರಕಟಣೆಗಳ ಕಡೆಗೆ ನಾವು ಸಾಗುತ್ತಿದ್ದೇವೆಂಬ ಅಂಶವನ್ನು ಜನತೆಯೊಡನೆ ಈ ಸಂದರ್ಭದಲ್ಲಿ ಹಂಚಿಕೊಳ್ಳುವುದು ಅಗತ್ಯವೆನಿಸುತ್ತದೆ.

ಕರ್ನಾಟಕ ನಾಣ್ಯ ಪರಂಪರೆ ಎಂಬ ಈ ಬೃಹತ್ ಹೊತ್ತಗೆಯು ಕರ್ನಾಟಕ ನಾಣ್ಯ ಪರಂಪರೆಯ ಎರಡು ಸಾವಿರ ವರ್ಷಗಳಿಗೂ ಮೀರಿದ ಚಾರಿತ್ರಿಕ ಹೆಜ್ಜೆ ಗುರುತುಗಳನ್ನು ಹಿಡಿಯಲು ಯತ್ನಿಸಿದೆ; ಇದು ಯಶಸ್ವಿಯೂ ಆಗಿದೆ. ಕರ್ನಾಟಕಕ್ಕೆ ಹಸ್ತಪ್ರತಿ ಚರಿತ್ರೆ ಇರುವಂತೆ, ಶಾಸನಗಳ ಚರಿತ್ರೆ ಇರುವಂತೆ, ಅಕ್ಷರಶಾಸ್ತ್ರದ ಚರಿತ್ರೆ ಇರುವಂತೆ, ನಾಣ್ಯದ ಚರಿತ್ರೆಯೂ ಕರ್ನಾಟಕ ಸಂಸ್ಕೃತಿಯ ಮೂಲ-ಚೂಲಗಳನ್ನು ತಿಳಿಯಲು ನೆರವಾಗುತ್ತದೆ. ಕರ್ನಾಟಕ ಸಂಸ್ಕೃತಿಯೆಂದರೆ ಜನ, ಭಾಷೆ, ನಿಸರ್ಗ, ವಸ್ತು, ಸಾಮಗ್ರಿ, ಆಚರಣೆ, ಪೂಜೆ, ತಪ, ಧ್ಯಾನ, ಕವಿತೆ, ತತ್ತ್ವಪದ, ಮಹಾಕಾವ್ಯ, ಲಿಖಿತ, ಅಲಿಖಿತ - ಹೀಗೆ ಎಷ್ಟೋ ಅಂಗಗಳು ಸೇರಿಕೊಳ್ಳುತ್ತವೆ. ಈ ಅಂಗಗಳೆಲ್ಲ ಸೇರಿದರೆ ಕರ್ನಾಟಕ ಸಂಸ್ಕೃತಿ ಎಂಬ ಬೃಹತ್ ವೃಕ್ಷ ಆಗುತ್ತದೆ. ಈ ವೃಕ್ಷ ರೂಪಕದ ಮೂಲಕ ಕರ್ನಾಟಕ ಸಂಸ್ಕೃತಿಯ ದರ್ಶನದ ಅಗತ್ಯವಿದೆಯೆಂದು ನಾನು ಭಾವಿಸುತ್ತೇನೆ. ಈ ಗ್ರಂಥವು ಹನ್ನೆರಡು ಅಧ್ಯಾಯಗಳಿಂದ ಕೂಡಿದೆ. ಆರಂಭ ಕಾಲದ ನಾಣ್ಯಗಳ ಬಗೆಗೆ ಎ.ವಿ. ನರಸಿಂಹಮೂರ್ತಿಯವರು ಈಚೀಚೆಗೆ ಉಪಲಬ್ಧಗೊಂಡ ಆಕರಗಳನ್ನು ಆಧರಿಸಿ ಬರೆದಿದ್ದಾರೆ. ಪೂರ್ವ ಹಾಗೂ ಉತ್ತರ ಪ್ರಾಚೀನ ಕಾಲದ ನಾಣ್ಯಗಳ ಬಗೆಗೆ ಬಂದಿರುವ ವಿವರಗಳು ಬಹು ರೋಚಕವಾಗಿವೆ. ವಿಜಯನಗರ ಮತ್ತು ಕೆಳದಿ ಸಂಸ್ಥಾನದ ಮೂಲಕ ಚಲಾವಣೆಗೆ ಬಂದ ನಾಣ್ಯಗಳು - ರಾಜಕಾರಣ, ಸಂಸ್ಕೃತಿ, ಇವುಗಳೊಳಗಿನ ಅಂತಃಸಂಬಂಧಗಳ ಬಗೆಗೆ ವಿಚಾರಿಸುತ್ತವೆ. ಶ್ರೀಮಂತರ, ಸುಲ್ತಾನರ ನಾಣ್ಯಗಳ ಬಗೆಗೆ ಬರೆದಿರುವ ವಿವರಗಳು, ಪರ್ಷಿಯನ್, ಅರೇಬಿಕ್ ಭಾಷೆ-ಲಿಪಿಗಳ ಕಡೆಗೂ ನಮ್ಮ ಗಮನವನ್ನು ಸೆಳೆಯುತ್ತವೆ. ಹೈದರ್, ಟೀಪು ಮತ್ತು ಒಡೆಯರ ಕಾಲದ ನಾಣ್ಯಗಳ ಬಗೆಗೆ ಎ.ವಿ. ನರಸಿಂಹಮೂರ್ತಿ ಅವರು ಬರೆದಿರುವ ವಿವರಗಳು ಯಥೋಚಿತವಾಗಿ ಚೆನ್ನಾಗಿವೆ. ವಿದೇಶಿ ಮತ್ತು ಇತರ ನಾಣ್ಯಗಳ ಬಗೆಗಿನ ಅಧ್ಯಾಯವು - ಆಧುನಿಕ ಮೈಸೂರು ರಾಜಕೀಯವಾಗಿ ದಮನಗೊಂಡು ಉತ್ಕ್ರಾಂತಕ್ಕೆ ನುಗ್ಗಿದ ಎರಡೂ ನೆಲೆಗಳನ್ನು ಪ್ರತಿನಿಧಿಸುತ್ತದೆ. ಈ ಗ್ರಂಥದ ಮೂಲಕ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ ವಿಶಾಲವಾದ ಕ್ರಮದಲ್ಲಿ ಅನಾವರಣಗೊಂಡಂತಾಗಿದೆ. ಇಂಥ ಉತ್ಕೃಷ್ಟ ಕೃತಿಯನ್ನು ಸಿದ್ಧಪಡಿಸಿಕೊಟ್ಟ ಪ್ರೊ. ಎ.ವಿ. ನರಸಿಂಹಮೂರ್ತಿಯವರನ್ನು ನಾನು ಮನವಾರೆ ಅಭಿವಂದಿಸುತ್ತೇನೆ. ಕನ್ನಡ ಜನ ಈ ಪುಸ್ತಕದ ಮಹತ್ವ ತಿಳಿದು ಓದಬೇಕೆಂದು ಆರಿಕೆ. ಈ ಪುಸ್ತಕ ಹೊರಬರಲು ಪ್ರಾಧಿಕಾರದ ಸದಸ್ಯಮಿತ್ರರು ಕಾರಣರಾಗಿದ್ದಾರೆ. ಮುಖಪುಟ ವಿನ್ಯಾಸಕರಿಗೆ, ಮುದ್ರಕರಾದ ಮೆ|| ಸತ್ಯಶ್ರೀ ಮಾಲೀಕರಿಗೆ ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು.

ಅರಿಕೆ

ಸುಮಾರು ಮೂವತ್ತು ವರ್ಷಗಳ ಹಿಂದೆ ಮಾನಸ ಗಂಗೋತ್ರಿಯಲ್ಲಿ ಭಾರತೀಯ ಇತಿಹಾಸ ಮತ್ತು ಪುರಾತತ್ವವನ್ನು ಬೋಧಿಸುವ ಸಮಯದಲ್ಲಿ ನಾಣ್ಯಶಾಸ್ತ್ರದ ಬಗೆಗೆ ಆಗಿರುವ ಅಧ್ಯಯನ ಮತ್ತು ಸಂಶೋಧನೆ ತೀರ ಕಡಿಮೆ ಎನ್ನುವುದರ ಅರಿವಾಗಿತ್ತು. ಕರ್ನಾಟಕದ ನಾಣ್ಯಶಾಸ್ತ್ರದ ಬಗೆಗೆ ಒಂದು ಪುಸ್ತಕವೂ ಇರಲಿಲ್ಲ. ಆದುದರಿಂದ ನಾಣ್ಯಶಾಸ್ತ್ರದ ಬಗೆಗೆ ವಿಶೇಷ ಅಧ್ಯಯನ ಮಾಡಬೇಕೆಂಬ ಅಪೇಕ್ಷೆಯುಂಟಾಯಿತು. ಈ ಮೂವತ್ತು ವರ್ಷಗಳಲ್ಲಿ ಭಾರತೀಯ ಮತ್ತು ಕರ್ನಾಟಕ ನಾಣ್ಯಶಾಸ್ತ್ರವನ್ನು ಕುರಿತು ಅಧ್ಯಯನ ಮತ್ತು ಸಂಶೋಧನೆ ನಡೆಸುತ್ತ ಬಂದಿದ್ದೇನೆ. ಇದೇ ಸಮಯದಲ್ಲಿ ವಾರಣಾಸಿಯಲ್ಲಿರುವ ಅಖಿಲ ಭಾರತೀಯ ನಾಣ್ಯಶಾಸ್ತ್ರ ಸಂಸ್ಥೆಯ ಅಧ್ಯಕ್ಷನಾಗಿ ಹಾಗೂ ಅದು ಪ್ರಕಟಿಸುವ ನಿಯತಕಾಲಿಕೆಯ ಪ್ರಧಾನ ಸಂಪಾದಕನಾಗಿ ಕೆಲಸ ನಿರ್ವಹಿಸುವ ಅವಕಾಶವೂ ಒದಗಿ ಬಂದಿತು. ಈ ಮಧ್ಯೆ ಮದರಾಸಿನ ದಕ್ಷಿಣ ಭಾರತೀಯ ನಾಣ್ಯ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತು ಅದರ ನಿಯತಕಾಲಿಕೆಯ ಪ್ರಧಾನ ಸಂಪಾದಕನಾಗಿ ಕೆಲಸ ಮಾಡುವ ಸುಯೋಗವೂ ಬಂದಿತು. ಇದರಿಂದ ನಾಣ್ಯಶಾಸ್ತ್ರದಲ್ಲಿದ್ದ ನನ್ನ ಆಸಕ್ತಿ ವಿಶೇಷವಾಗಿ ಬೆಳೆಯಿತು. ಇದೆಲ್ಲದರ ಫಲವಾಗಿ 'ಕಾಯಿನ್ಸ್ ಆಫ್ ಕರ್ನಾಟಕ' ಎಂಬ ಪುಸ್ತಕವನ್ನು ಪ್ರಕಟಿಸಿದೆ. ಇದು ತುಂಬ ಜನಪ್ರಿಯವಾಗಿ ಎರಡನೆಯ ಮುದ್ರಣವನ್ನೂ ಕಂಡಿತು. ಅನಂತರ ವಿಜಯನಗರ ನಾಣ್ಯಗಳನ್ನು ಕುರಿತು ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ ಗ್ರಂಥ ರಚನೆ ಮಾಡಿದೆ. ಸ್ವಲ್ಪ ಸಮಯದ ನಂತರ ಕರ್ನಾಟಕದಲ್ಲಿ ದೊರಕಿದ ವಿದೇಶೀ ನಾಣ್ಯಗಳನ್ನು ಕುರಿತು ಕನ್ನಡದಲ್ಲಿ ಪುಸ್ತಿಕೆಯನ್ನು ರಚಿಸಿದೆ. ಈ ಮಧ್ಯೆ ನಿಯತ ಕಾಲಿಕೆಗಳಲ್ಲಿ ಪ್ರಕಟವಾಗಿದ್ದ ನಾಣ್ಯಶಾಸ್ತ್ರದ ನನ್ನ ಲೇಖನಗಳೆಲ್ಲವನ್ನೂ ಒಟ್ಟುಗೂಡಿಸಿ

ಪ್ರಕಟಿಸಿದೆ. ಇಷ್ಟೆಲ್ಲ ಆದರೂ ಕನ್ನಡದಲ್ಲಿ ಕರ್ನಾಟಕದ ನಾಣ್ಯಗಳನ್ನು ಕುರಿತು ಬರೆಯ ಬೇಕೆಂದಿದ್ದ ಪುಸ್ತಕ ಕಾರಣಾಂತರಗಳಿಂದ ಆಗಿರಲಿಲ್ಲ. ಇಂತಹ ಸಮಯದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಸನ್ಮಾನ್ಯ ಪ್ರೊ|| ಮಲ್ಲೇಪುರಂ ಜಿ. ವೆಂಕಟೇಶ್ ಅವರು ಈ ಪುಸ್ತಕವನ್ನು ಬರೆಯುವುದಕ್ಕೆ ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟರು. ಇದನ್ನು ಯೋಗಾಯೋಗವೆಂದು ನಾನು ಭಾವಿಸಿದ್ದೇನೆ. ಆದುದರಿಂದ ಪ್ರೊ|| ಮಲ್ಲೇಪುರಂ ಜಿ. ವೆಂಕಟೇಶ್ ಅವರನ್ನು ಮೊಟ್ಟಮೊದಲು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಇಂತಹ ಪ್ರತಿಷ್ಠಿತ ಸಂಸ್ಥೆಯ ಆಶ್ರಯದಲ್ಲಿ ನನ್ನದೊಂದು ಪುಸ್ತಕ ಪ್ರಕಟವಾಗುತ್ತಿರುವುದಕ್ಕೆ ನಾನು ಹೆಮ್ಮೆಪಡುತ್ತೇನೆ.

ಪ್ರಸ್ತುತ ಗ್ರಂಥದಲ್ಲಿ ಕರ್ನಾಟಕ ನಾಣ್ಯ ಪರಂಪರೆಯ ಎರಡು ಸಾವಿರ ವರ್ಷಗಳಿಗೂ ಮೀರಿದ ವಿವಿಧ ಹೆಜ್ಜೆಗಳನ್ನು ಗುರುತಿಸಲು ಯತ್ನಿಸಿದ್ದೇನೆ. ಅತ್ಯಂತ ಸಂತೋಷದ ಸಂಗತಿ ಎಂದರೆ, ಇಲ್ಲಿ ಆಳಿದ ಪ್ರತಿಯೊಂದು ರಾಜವಂಶವೂ ತನ್ನದೇ ಆದ ನಾಣ್ಯಗಳನ್ನು ಟಂಕಿಸಿತೆಂಬುದು. ಆದ್ದರಿಂದ ಕರ್ನಾಟಕ ನಾಣ್ಯ ಪರಂಪರೆ ಶ್ರೀಮಂತವಾಯಿತು ಮತ್ತು ವೈವಿಧ್ಯಪೂರ್ಣವಾಯಿತು. ಬಾದಾಮಿ ಚಲುಕ್ಯರ, ಹೊಯ್ಸಳರ, ಸೇವುಣರ, ವಿಜಯನಗರ ದೊರೆಗಳ, ಬಹಮನಿ ಸುಲ್ತಾನರ, ಟೀಪು ಸುಲ್ತಾನನ ಮತ್ತು ಮೈಸೂರು ಒಡೆಯರ ಚಿನ್ನದ ನಾಣ್ಯಗಳನ್ನು ಮುಟ್ಟಿ ಅಧ್ಯಯನ ಮಾಡುವುದು ಒಂದು ದಿವ್ಯ ಆನಂದವೇ ಸರಿ. ಇಂತಹ ರಮ್ಯವಾದ ಕಥೆ ಓದುಗರಿಗೆ ಸಂತೋಷವನ್ನುಂಟುಮಾಡುತ್ತದೆ ಎಂದು ಭಾವಿಸಿದ್ದೇನೆ. ನಾಣ್ಯಗಳನ್ನು ವಿಶ್ಲೇಷಿಸುವಾಗ ಪ್ರಾಚೀನ ಕನ್ನಡ ಸಾಹಿತ್ಯದ ಮಾಹಿತಿ, ಶಾಸನಗಳ ಮಾಹಿತಿ ಹಾಗೂ ವಿದೇಶೀ ಬರಹಗಾರರ ಮಾಹಿತಿಗಳನ್ನು ಗಮನಿಸಿದ್ದೇನೆ. ಒಟ್ಟಿನಲ್ಲಿ ಕ್ರಿಸ್ತಪೂರ್ವದ ಆಸುಪಾಸಿನ ಶತಮಾನಗಳಿಂದ ಆರಂಭವಾಗಿ ಕ್ರಿ.ಶ. ಇಪ್ಪತ್ತನೆಯ ಶತಮಾನದ ಬ್ರಿಟಿಷರ ನಾಣ್ಯಗಳವರೆಗಿನ ಎಲ್ಲ ರಾಜವಂಶದ ನಾಣ್ಯಗಳೂ ಇಲ್ಲಿ ಅಡಕವಾಗಿವೆ.

ಈ ರೀತಿಯ ಕೆಲಸವನ್ನು ಮಾಡುವಾಗ ಅನೇಕ ಸಂಶೋಧಕರ ಮತ್ತು ನಾಣ್ಯ ಸಂಗ್ರಹಕಾರರ ಸಹಾಯ ಬೇಕಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಅನೇಕ ಯುವ ಪೀಳಿಗೆಯ ನಾಣ್ಯ ಸಂಶೋಧಕರು ಮುಂದೆ ಬಂದು ಈ ಕೈಂಕರ್ಯವನ್ನು ಸಮರ್ಥವಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ವಿದ್ವಾಂಸರಾದ

ಶ್ರೀ ಮುಕುಂದ ಪ್ರಭು, ಗ್ರಂಥಗಳನ್ನು ರಚಿಸಿ ಖ್ಯಾತರಾಗಿರುವ ಶ್ರೀ ಗಣೇಶ್ ಮತ್ತು ಗಿರಿಜಾಪತಿ, ಡಾ॥ ಚಾ.ರಾ. ಗೋಪಾಲ್, ಡಾ॥ ಎಚ್.ಆರ್. ರಘುನಾಥ ಭಟ್, ಡಾ॥ ಎನ್. ಹವಳಯ್ಯ, ಸರ್ವಶ್ರೀ ಬಾಹುಸಾರ್ ವಾಸುದೇವರಾವ್, ನಿತ್ಯಾನಂದ ಪೈ, ಕೇಶವಮೂರ್ತಿ, ಡಾ॥ ದೇವರಾಜ್, ಮಾದೇಶ್, ಸೋಹನಲಾಲ್ ಸಿಸೋಡಿಯ ಮುಂತಾದವರನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ. ಇವರೆಲ್ಲರ ಸಂಶೋಧನೆಯನ್ನು ನಾನು ಧಾರಾಳವಾಗಿ ಬಳಸಿಕೊಂಡಿದ್ದೇನೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಶಾಸನತಜ್ಞರಾಗಿರುವ ಶ್ರೀ ಎಚ್.ಎಂ. ನಾಗರಾಜರಾವ್ ಹಸ್ತಪ್ರತಿಯನ್ನು ಪರಿಶೀಲಿಸಿದ್ದಲ್ಲದೆ, ಕರಡನ್ನೂ ತಿದ್ದಿಕೊಟ್ಟಿದ್ದಾರೆ. ಇವರಿಗೆ ನನ್ನ ಧನ್ಯವಾದಗಳು ಸಲ್ಲುತ್ತವೆ. ಈ ಪುಸ್ತಕವನ್ನು ಬೆಂಗಳೂರಿನ ಸತ್ಯಶ್ರೀ ಪ್ರಿಂಟರ್ಸ್ ಅವರು ಸುಂದರವಾಗಿ ಮತ್ತು ಶೀಘ್ರವಾಗಿ ಮುದ್ರಿಸಿಕೊಟ್ಟಿದ್ದಾರೆ. ಇಲ್ಲಿ ಬಳಸಲಾಗಿರುವ ರೇಖಾಚಿತ್ರಗಳನ್ನು ಡಾ. ರಘುನಾಥ ಭಟ್ ಮತ್ತು ಡಾ. ಆರ್. ಎಚ್. ಕುಲಕರ್ಣಿ ಬರೆದುಕೊಟ್ಟಿದ್ದಾರೆ. ಇಲ್ಲಿರುವ ಚಿತ್ರಗಳನ್ನು ಮೂಡಬಿದರೆಯ ಶ್ರೀ ನಿತ್ಯಾನಂದ ಪೈ ಒದಗಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನಾನು ಕೃತಜ್ಞತೆ ಅರ್ಪಿಸುತ್ತೇನೆ. ರೇಖಾಚಿತ್ರಗಳು ನಾಣ್ಯಗಳ ಲಕ್ಷಣ ಮತ್ತು ಬರಹಗಳನ್ನು ಹೆಚ್ಚು ಸ್ಫುಟವಾಗಿ ತೋರಿಸುವುದರಿಂದ, ಅವುಗಳನ್ನು ವಿಶೇಷವಾಗಿ ಬಳಸಲಾಗಿದೆ. ಇದರಲ್ಲಿ ನಿರ್ದಿಷ್ಟ ಪ್ರಮಾಣವೇನಿಲ್ಲ. ನಾಣ್ಯವನ್ನು ವರ್ಣಿಸುವಾಗ ಅದರ ಅಳತೆಯನ್ನು ತಿಳಿಸಲಾಗಿದೆ.

ಈ ಪುಸ್ತಕ ಓದುಗರಿಗೆ ಇಷ್ಟವಾಗಿ, ಕರ್ನಾಟಕ ನಾಣ್ಯಶಾಸ್ತ್ರದಲ್ಲಿ ಅವರಿಗೆ ಆಸಕ್ತಿ ಉಂಟಾದರೆ ನನ್ನ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದೇವಗಿರಿ
ಜಯಲಕ್ಷ್ಮೀಪುರ
ಮೈಸೂರು-12

- ಎ.ವಿ. ನರಸಿಂಹಮೂರ್ತಿ

ವಿಷಯ ಸೂಚಿ

ಅಧ್ಯಾಯ 1
ಪೀಠಿಕೆ

ಹಿನ್ನೆಲೆ

ನಾಣ್ಯಗಳು ಎಲ್ಲರಿಗೂ ಬೇಕಾದ ಹಾಗೂ ಪ್ರಿಯವಾದ ವಸ್ತುಗಳು. ಅವು ಸರ್ವ ವ್ಯಾಪಿಯಾದವು. ಪ್ರಪಂಚದ ಯಾವ ಮೂಲೆಗೆ ಹೋದರೂ, ಅಲ್ಲಿ ಅವರದೇ ಆದ ನಾಣ್ಯಗಳಿರುತ್ತವೆ. ನಾಣ್ಯಗಳಿಲ್ಲದೇ ಇರುವ ಪ್ರಪಂಚವನ್ನು ಊಹಿಸುವುದೂ ಕಷ್ಟವೆನಿಸುತ್ತದೆ. ಆದರೆ ಸಾವಿರಾರು ವರ್ಷಗಳ ಹಿಂದೆ, ನಾಣ್ಯಗಳನ್ನು ಕಂಡು ಹಿಡಿಯುವುದಕ್ಕೆ ಮುಂಚೆ, ವಸ್ತುವಿನಿಮಯದ ಮೂಲಕ ವ್ಯಾಪಾರ ವ್ಯವಹಾರ ನಡೆಯುತ್ತಿದ್ದಿತು. ಇತ್ತೀಚಿನವರೆಗೆ ನಾಗರಿಕತೆಯಿಂದ ವಂಚಿತರಾಗಿದ್ದ ಬುಡಕಟ್ಟು ಜನಾಂಗದವರು ನಾಣ್ಯಗಳಿಲ್ಲದೆ ವಸ್ತುವಿನಿಮಯದ ಮೂಲಕವೇ ತಮ್ಮ ಎಲ್ಲ ವ್ಯವಹಾರಗಳನ್ನೂ ನಡೆಸುತ್ತಿದ್ದರು. ಆದರೆ ಸಮಾಜ ಸಂಕೀರ್ಣವಾದಂತೆ ವಸ್ತುವಿನಿಮಯದ ನ್ಯೂನತೆ ಮತ್ತು ಇತಿಮಿತಿಗಳಿಂದಾಗಿ ನಾಣ್ಯದ ಉಗಮ ಉಂಟಾಯಿತು. ಪ್ರಾರಂಭ ದೆಸೆಯ ಒರಟು ನಾಣ್ಯಗಳು ತಾಂತ್ರಿಕತೆಯ ಬೆಳವಣಿಗೆಯಿಂದಾಗಿ ಕಾಲಕ್ರಮದಲ್ಲಿ ವಿವಿಧ ಹಂತಗಳನ್ನು ದಾಟಿ ಉತ್ತಮ ರೀತಿಯ ನಾಣ್ಯಗಳಿಗೆ ನಾಂದಿಯಾದವು. ಇದೊಂದು ರೋಚಕವಾದ ಕಥೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಈ ಕಥೆಯನ್ನು ಮುಂದೆ ಗಮನಿಸಲಾಗಿದೆ.

ನಾಣ್ಯ ಎನ್ನುವ ಪದ ಕನ್ನಡ ಮತ್ತು ಇತರ ಭಾಷೆಗಳಲ್ಲಿ ಆಡಳಿತದ ಮುದ್ರೆಯೊತ್ತಿ ತಯಾರಿಸಿದ 'ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಲೋಹದ ಬಿಲ್ಲೆ' ಎನ್ನುವ ಅರ್ಥದಲ್ಲಿ ಬಳಕೆಯಾಗಿರುವುದು ಗೊತ್ತಾಗುತ್ತದೆ. ಕನ್ನಡದಲ್ಲಿ ನಾಣಯ, ನಾಣೆಯ, ನಾಣೆಯ, ನಾಣ್ಯ ಮುಂತಾದ ರೂಪಗಳಲ್ಲಿ ಕಂಡುಬರುತ್ತದೆ. ಈ ಮೇಲೆ ಗಮನಿಸಿದ ಅರ್ಥವಲ್ಲದೆ, ಈ ಪದಕ್ಕೆ ಶ್ರೇಷ್ಠ, ಬೆಲೆ ಬಾಳುವ, ಸೊಗಸಾದ, ನವಿರಾದ, ಗೌರವಯುತ ಮುಂತಾದ ಅರ್ಥಗಳೂ ಉಂಟು, ಆದರೆ ಸಾಮಾನ್ಯವಾಗಿ ಇದು ಮುದ್ರೆಯನ್ನು ಹೊಂದಿದ ಲೋಹದ ಬಿಲ್ಲೆ ಎನ್ನುವ ಅರ್ಥದಲ್ಲಿ ಬಳಕೆಯಾಗಿರುವುದೇ ಜಾಸ್ತಿ. ತಮಿಳಿನಲ್ಲಿ ನಾಣಯ ಮತ್ತು

ನಾಣೆಯ ತೆಲುಗಿನಲ್ಲಿ ನಾಣೆ, ನಾಣೆಯುಮು; ತುಳುವಿನಲ್ಲಿ ನಾಣ್ಯೋ; ಮಲಯಾಳಂನಲ್ಲಿ ನಾಣೆಯ್ಯ, ಮರಾಠಿಯಲ್ಲಿ ನಾಣೇ, ಗುಜರಾತಿಯಲ್ಲಿ ನಾಣುಂ ಎಂಬ ಪದಗಳು ಕಂಡುಬರುತ್ತವೆ. ಸಂಸ್ಕೃತದಲ್ಲಿ ರೂಪ ಅಥವಾ ಮುದ್ರಾ ಎನ್ನುವ ಪದ ನಾಣ್ಯವನ್ನು ಸೂಚಿಸುತ್ತದೆ. ಕೌಟಿಲ್ಯನು ಸುವರ್ಣ ರೂಪ, ರೌಪ್ಯರೂಪ ಮತ್ತು ತಾಮ್ರ ರೂಪ ಎನ್ನುವ ಪದಗಳನ್ನು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಸೂಚಿಸಲು ಉಪಯೋಗಿಸಿದ್ದಾನೆ. ನಾಣ್ಯದ ವಿಷಯವನ್ನು ತಿಳಿಸುವ ಅಧ್ಯಯನವೇ ನಾಣ್ಯವಿದ್ಯೆ, ನಾಣ್ಯಶಾಸ್ತ್ರ ಅಥವಾ ಮುದ್ರಾಶಾಸ್ತ್ರ. "ನ್ಯೂಮಿಸ್ಮ" ಎಂಬ ಗ್ರೀಕ್ ಪದಕ್ಕೆ ನಾಣ್ಯ ಎಂಬ ಅರ್ಥ ಉಂಟು. ಆದುದರಿಂದ ಈ ಶಾಸ್ತ್ರವನ್ನು ಇಂಗ್ಲೀಷಿನಲ್ಲಿ ನ್ಯೂಮಿಸ್‌ಮ್ಯಾಟಿಕ್ಸ್ ಎಂದು ಹೇಳುತ್ತೇವೆ.

ನಾಣ್ಯಶಾಸ್ತ್ರ ತನ್ನದೇ ಆದ ವಿಧಿ, ವಿಧಾನಗಳನ್ನು ಹೊಂದಿದ ಸ್ವತಂತ್ರವಾದ ಅಧ್ಯಯನ ವಿಷಯ. ಆದರೆ ಇದು ಮಾನವನ ನಾಗರಿಕತೆ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದ ವಿಷಯ ಎನ್ನುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಇದು ಇತಿಹಾಸದ ಮೇಲೆ ಬೆಳಕು ಚೆಲ್ಲುವ ವಿಷಯವೆಂದು ಪರಿಗಣಿತವಾಗಿದೆ. ಅಂದರೆ ಒಂದು ನಾಣ್ಯವು ಎಷ್ಟು ಮುಖ್ಯವೋ, ಅದು ಹೊರಗೆಡಹುವ ವಿಷಯಗಳೂ ಅಷ್ಟೇ ಮುಖ್ಯ. ಒಂದು ನಾಣ್ಯವನ್ನು ಟಂಕಿಸಿದ ದೊರೆ ಯಾರು, ಅವನು ಯಾವ ರಾಜವಂಶದವನು; ಅವನ ಧರ್ಮವೇನು; ಈ ನಾಣ್ಯದ ಮೌಲ್ಯವೇನು ಮುಂತಾದ ಪ್ರಶ್ನೆಗಳಿಗೆ ನಾಣ್ಯಗಳು ಉತ್ತರ ಹೇಳುತ್ತವೆ. ಆದುದರಿಂದ ನಾಣ್ಯವು ಒಂದು ನಿರ್ಜೀವ ಲೋಹದ ಬಿಲ್ಲೆಯಲ್ಲ; ಅದು ತಯಾರಾದ ಕಾಲದ ಒಂದು ಸಾಂಕೇತಿಕ ವಸ್ತು. ಆ ಕಾಲದ ಸಮಾಜಕ್ಕೂ ಆ ನಾಣ್ಯಕ್ಕೂ ಒಂದು ವಿಧದ ನಿಕಟವಾದ ಸಂಬಂಧ ಉಂಟು. ಆದುದರಿಂದ ಇತಿಹಾಸಕ್ಕೂ ನಾಣ್ಯ ಶಾಸ್ತ್ರಕ್ಕೂ ವಿಶೇಷವಾದ ನಂಟು. ಆಕಾರದಲ್ಲಿ ನಾಣ್ಯ ಚಿಕ್ಕದಾಗಿದ್ದರೂ ಅದು ಇತಿಹಾಸದ ಆಕರವಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಷಯಗಳ ಮೇಲೆ ಬೆಳಕನ್ನು ಚೆಲ್ಲಬಲ್ಲುದಾಗಿದೆ. ಹಾಗಾಗಿ ಇತಿಹಾಸಕಾರನು ನಾಣ್ಯಶಾಸ್ತ್ರವನ್ನು ಇತಿಹಾಸ ರಚನೆಗೆ ಉಪಯೋಗಿಸುವುದರಿಂದ, ಈ ಶಾಸ್ತ್ರಕ್ಕೆ ಮಹತ್ವ ಹೆಚ್ಚಿದೆ. ಈ ವಿಷಯದಲ್ಲಿ ನಾಣ್ಯಶಾಸ್ತ್ರ ಎರಡು ರೀತಿಗಳಲ್ಲಿ ಇತಿಹಾಸಕಾರನಿಗೆ ಉಪಯೋಗವೆನಿಸುತ್ತದೆ. ಇತರ ಆಕರಗಳು ತಿಳಿಸದೇ ಇರುವ ಮಾಹಿತಿಗಳನ್ನು ಕೊಡುವುದರ ಮೂಲಕ ನಾಣ್ಯಗಳು ಇತಿಹಾಸ ರಚನೆಗೆ ಮೂಲಭೂತ ಆಕರಗಳಾಗಿ ಸಹಾಯಮಾಡುತ್ತವೆ. ಕೆಲವು ಸಾರಿ ಇತರ ಆಕರಗಳು ನೀಡಿರುವ ಮಾಹಿತಿಗಳನ್ನು ಎಷ್ಟರ ಮಟ್ಟಿಗೆ ಸತ್ಯ ಎಂದು ತಿಳಿಯುವಲ್ಲಿ ನಾಣ್ಯಗಳು ಸಹಾಯಕವಾಗುತ್ತವೆ. ಅಂದರೆ ಇಲ್ಲಿ ಇತಿಹಾಸದ ಘಟನೆಗಳನ್ನು ದೃಢೀಕರಿಸುವುದರಲ್ಲಿ ಅಥವಾ ಪ್ರಮಾಣೀಕರಿಸುವುದರಲ್ಲಿ ನಾಣ್ಯಗಳು ಮುಖ್ಯ ಪಾತ್ರ ವಹಿಸುತ್ತವೆ. ಈ ವಿಷಯವನ್ನು ಉದಾಹರಣೆಗಳ ಮೂಲಕ ವಿಶದೀಕರಿಸಬಹುದು.

ಮೊದಲನೆಯದಾಗಿ ರಾಜಕೀಯ ಇತಿಹಾಸಕ್ಕೂ, ನಾಣ್ಯಶಾಸ್ತ್ರಕ್ಕೂ ಇರುವ ಸಂಬಂಧವನ್ನು ಗಮನಿಸಬಹುದು. ಶಾತವಾಹನರ ರಾಜಕೀಯ ಇತಿಹಾಸ ತೊಡಕಿನಿಂದ ಕೂಡಿದೆ. ಪುರಾಣಗಳಲ್ಲಿ ಅನೇಕ ಶಾತವಾಹನ ರಾಜರ ಹೆಸರುಗಳು ಕಾಣಬರುತ್ತವೆ. ಕೆಲವು ರಾಜರ ಶಾಸನಗಳು ಮಾತ್ರ ದೊರಕಿವೆ. ಆದರೆ ಇದಕ್ಕಿಂತ ಮಿಗಿಲಾಗಿ ಶಾತವಾಹನ ರಾಜರ ನಾಣ್ಯಗಳು ಹೇರಳವಾಗಿ ದೊರಕಿವೆ. ಆದುದರಿಂದ ನಾಣ್ಯಗಳನ್ನು ಟಂಕಿಸಿದ ರಾಜರು ಖಚಿತವಾಗಿಯೂ ಆಳಿದವರಾಗಿರಬೇಕು ಎನ್ನುವ ಮುಖ್ಯ ಸೂತ್ರವನ್ನು ಅನುಸರಿಸಿ ಶಾತವಾಹನರ ರಾಜಕೀಯ ಇತಿಹಾಸವನ್ನು ಇತ್ತೀಚಿಗೆ ರಚಿಸಲಾಗಿದೆ. ಶ್ರೀಮುಖ ಅಥವಾ ಚಿಮುಖ ಎಂಬುವನು ಈ ವಂಶದ ಮೊದಲನೆಯ ದೊರೆ ಎಂದು ಪುರಾಣಗಳ ಆಧಾರದ ಮೇಲೆ ಭಾವಿಸಲಾಗಿತ್ತು. ಆದರೆ ಈತನು ರಾಜ್ಯವಾಳಿದುದಕ್ಕೆ ಯಾವ ವಿಧವಾದ ಮಾಹಿತಿಗಳೂ ದೊರಕದೇ ಇದ್ದುದರಿಂದ, ಇವನೊಬ್ಬ ಪುರಾಣಪುರುಷನೆಂದು ಅನೇಕರು ಭಾವಿಸಿದ್ದರು. ಆದರೆ ಇತ್ತೀಚಿಗೆ ಶ್ರೀಮುಖನಿಗೆ ಸೇರಿದ ನಾಣ್ಯಗಳು ಸಿಕ್ಕಿದುದರಿಂದ, ಇವನು ರಾಜ್ಯವಾಳಿದ್ದು ಮಾತ್ರವಲ್ಲದೆ, ತನ್ನ ಹೆಸರಿನಲ್ಲಿ ನಾಣ್ಯಗಳನ್ನು ಟಂಕಿಸುವಷ್ಟು ಸಮರ್ಥನೂ ಆಗಿದ್ದನು ಎನ್ನುವ ವಿಷಯ ದೃಢಪಟ್ಟಿದೆ. ಕಲ್ಯಾಣ ಚಾಲುಕ್ಯ ರಾಜವಂಶದಲ್ಲಿ ಐದನೆಯ ವಿಕ್ರಮಾದಿತ್ಯನ ನಂತರ ಅಯ್ಯಣ ಎಂಬ ರಾಜಕುಮಾರನು ರಾಜನಾದನು ಎಂದು ಕೆಲವರು ವಾದಿಸಿದ್ದರು. ಆದರೆ ಇದಕ್ಕೆ ಖಚಿತವಾದ ಮಾಹಿತಿ ದೊರೆಯದಿದ್ದ ಕಾರಣ ಇದನ್ನು ಅನೇಕರು ಒಪ್ಪುತ್ತಿರಲಿಲ್ಲ. ಆದರೆ ಕೊಡೂರು ನಾಣ್ಯರಾಶಿಯಲ್ಲಿ ಅಯ್ಯಣನ ನಾಣ್ಯವು ದೊರಕಿದ್ದುದರಿಂದ ಈ ಅಂಶ ದೃಢಪಟ್ಟಿತು. ಇದೇ ರೀತಿಯಲ್ಲಿ ಇಮ್ಮಡಿ ತೈಲನಿಗೆ ದಶವರ್ಮ ಎಂಬ ಮಗನಿದ್ದು, ಅವನು ಕೆಲವು ಕಾಲ ರಾಜ್ಯವಾಳಿದನೆಂಬ ಅಂಶವನ್ನು ಪ್ರಮಾಣೀಕರಿಸಲು ಅವನ ನಾಣ್ಯಗಳು ಸಹಾಯಕವಾಗಿವೆ. ಸೇವುಣ ರಾಜವಂಶದಲ್ಲಿ ಮಹಾದೇವನ ನಂತರ ರಾಮಚಂದ್ರನು ದೊರೆಯಾದನೆಂದು ಇತಿಹಾಸಕಾರರು ನಂಬಿದ್ದರು. ಆದರೆ ಕೆಲವು ಮಹಾನುಭಾವ ಗ್ರಂಥಗಳ ಪ್ರಕಾರ ಮಹಾದೇವನ ನಂತರ ಅವನ ಮಗ ಆಮಣದೇವನು ರಾಜನಾದನು. ಇದನ್ನು ಸಹಿಸದ ರಾಮಚಂದ್ರನು ಅವನ ಮೇಲೆ ದಂಗೆಯೆದ್ದು, ಅವನನ್ನು ಕೊಂದು ತಾನೇ ರಾಜನಾದನು. ಆದರೆ ಇತಿಹಾಸಕಾರರು ಈ ಗ್ರಾಂಥಿಕ ಮಾಹಿತಿಯನ್ನು ಒಪ್ಪದೇ ಇದ್ದರು. ಆದರೆ ಇತ್ತೀಚಿಗೆ ಆಮಣದೇವನ ಚಿನ್ನದ ನಾಣ್ಯವೊಂದು ದೊರಕಿದ್ದು, ಇತಿಹಾಸಕಾರರು ಇವನು ಮಹಾದೇವನ ನಂತರ ರಾಜ್ಯವಾಳಿದನು ಎಂಬುದನ್ನು ಒಪ್ಪಿಕೊಂಡರು. ಇವನ ನಾಣ್ಯವು ದೊರಕದೇ ಇದ್ದರೆ, ಇತಿಹಾಸದ ಪುಟಗಳಲ್ಲಿ ಅವನ ಹೆಸರೇ ಇರುತ್ತಿರಲಿಲ್ಲ ಎಂಬ ಅಂಶವನ್ನು ಗಮನಿಸಬೇಕು. ಕರ್ನಾಟಕವನ್ನು ಬಿಟ್ಟು ಇತರ ಪ್ರದೇಶದ ಇತಿಹಾಸದಿಂದ ಒಂದು ಉತ್ತಮ ಉದಾಹರಣೆಯನ್ನು ಕೊಡಬಹುದು. ಕ್ರಿ.ಪೂ. 200 ರಿಂದ ಕ್ರಿ.ಪೂ. 100ರ ವರೆಗೆ ಪಂಜಾಬ್ ಪ್ರದೇಶದಲ್ಲಿ ಏನಾಯಿತು ಎಂಬುದು ಯಾರಿಗೂ ತಿಳಿಯದ ವಿಷಯವಾಗಿತ್ತು. ಯಾವ ಶಾಸನಗಳೂ, ವಿದೇಶೀ ಬರವಣಿಗೆಗಳೂ ಈ ಕಾಲಕ್ಕೆ

ಸಂಬಂಧಿಸಿದಂತೆ ದೊರಕಿರಲಿಲ್ಲವಾದ ಕಾರಣ ಈ ಕಾಲವನ್ನು ಕಗ್ಗತ್ತಲೆಯ ಕಾಲವೆಂದು ವರ್ಣಿಸಲಾಗಿತ್ತು. ಅದೃಷ್ಟವಶಾತ್ ಈ ಕಾಲದ ಚಿನ್ನದ ನಾಣ್ಯಗಳು ದೊರಕಿದವು. ಇವುಗಳ ಮೇಲೆ ಇದ್ದ ಬರಹ ಮತ್ತು ಕಾಲಮಾನದಿಂದ ಈ ಪ್ರದೇಶದಲ್ಲಿ ಮೂವತ್ತೆರಡು ಮಂದಿ ಬ್ಯಾಕ್ಟ್ರಿಯನ್ ದೊರೆಗಳು ಆಳಿದರೆಂಬ ವಿಷಯ ಹೊರಹೊಮ್ಮಿತು. ಭಾರತ ಮತ್ತು ಗ್ರೀಕ್ ದೇಶಗಳ ಇತಿಹಾಸಕ್ಕೆ ಅತ್ಯಂತ ಮುಖ್ಯವಾದ ಈ ಅಂಶ ಅವರ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳಿಂದ ತಿಳಿಯಬಂದಿತು. ಇವರ ಆಳ್ವಿಕೆಯ ನಂತರ ಇದೇ ಪ್ರದೇಶದಲ್ಲಿ ಆಳಿದ ಸಿಥಿಯನ್ ಮತ್ತು ಪಾರ್ಥಿಯನ್ ದೊರೆಗಳ ನಾಣ್ಯಗಳೂ ದೊರಕಿರುವುದರಿಂದ, ಈ ಪ್ರದೇಶದ ಪುರಾತನ ಚರಿತ್ರೆಯು ಸ್ಫುಟಗೊಂಡಿರುವುದಕ್ಕೆ ನಾಣ್ಯಗಳೇ ಮುಖ್ಯ ಆಕರಗಳು. ಈ ರೀತಿ ಹತ್ತಾರು ಉದಾಹರಣೆಗಳನ್ನು ಕೊಡಬಹುದು.

ನಾಣ್ಯಗಳು ಆಡಳಿತ ಇತಿಹಾಸದ ಮೇಲೂ ಬೆಳಕು ಚೆಲ್ಲುತ್ತವೆ ಎಂಬುದನ್ನು ಈ ಕೆಳಗಿನ ಉದಾಹರಣೆಗಳಿಂದ ಗಮನಿಸಬಹುದು. ಪ್ರಾಚೀನ ಭಾರತೀಯರಿಗೆ ರಾಜರ ಮೂಲಕ ಆಡಳಿತ ನಡೆಸುವ ಪದ್ಧತಿ ಮಾತ್ರ ತಿಳಿದಿತ್ತು. ಭಾರತದಲ್ಲಿ ಗಣರಾಜ್ಯಗಳ ಕಲ್ಪನೆಯೇ ಇರಲಿಲ್ಲವೆಂಬ ತೀರ್ಮಾನವನ್ನು ಕೈಗೊಂಡಿದ್ದು, ಅದನ್ನು ಎಲ್ಲರೂ ಒಪ್ಪಿಕೊಂಡಿದ್ದರು. ಆದರೆ ಕಾಲಕ್ರಮದಲ್ಲಿ ಮಾಳವ, ಯೌಧೇಯ, ಆರ್ಜುನಾಯನ ಎಂಬ ಗಣರಾಜ್ಯಗಳು ಪ್ರಾಚೀನ ಭಾರತದಲ್ಲಿ ಅಸ್ತಿತ್ವದಲ್ಲಿದ್ದವು ಎಂಬ ಹೊಸ ವಿಷಯ ಬೆಳಕಿಗೆ ಬಂದಿತು. ಇದಕ್ಕೆ ಅವು ಟಂಕಿಸಿದ ನಾಣ್ಯಗಳೇ ಮುಖ್ಯ ಆಕರಗಳು. 'ಮಾಳವಗಣಸ್ಯಜಯಃ', 'ಯೌಧೇಯಗಣಸ್ಯಜಯಃ' ಎಂಬ ಬರಹಗಳಿರುವ ನಾಣ್ಯಗಳು ದೊರಕಿ, ಪ್ರಾಚೀನ ಭಾರತೀಯರಿಗೆ ಗಣರಾಜ್ಯದ ಕಲ್ಪನೆ ಮಾತ್ರವಲ್ಲ, ಅದನ್ನು ಕಾರ್ಯಗತಗೊಳಿಸುವ ಮನಸ್ಸೂ ಇದ್ದಿತು ಎಂದು ಗೊತ್ತಾಯಿತು. ಕರ್ನಾಟಕದಲ್ಲಿ ಸಾಮಂತ, ಮಹಾಸಾಮಂತ, ಮಹಾಮಂಡಳೇಶ್ವರ ಎಂಬ ವಿವಿಧ ಹಂತಗಳ ಸಾಮಂತರು, ದೊರೆಗಳ ಆಶ್ರಯದಲ್ಲಿ ಆಳುತ್ತಿದ್ದರು. ಇವರು ಶಾಸನಗಳನ್ನು ಆಳುವ ದೊರೆಯ ಹೆಸರಿನಲ್ಲಿ ಮಾತ್ರ ಹೊರಡಿಸಬಹುದಾಗಿತ್ತು : ಆದರೆ ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ಹೊಂದಿರಲಿಲ್ಲವೆಂಬ ವಿಷಯವನ್ನು ಒಪ್ಪಿಕೊಳ್ಳಲಾಗಿತ್ತು. ಇತ್ತೀಚೆಗೆ ಮುಕುಂದ ಪ್ರಭು ಅವರು ಹತ್ತಾರು ಸಾಮಂತರ ನಾಣ್ಯಗಳನ್ನು ಬೆಳಕಿಗೆ ತಂದು, ಆಡಳಿತ ಇತಿಹಾಸದಲ್ಲಿ ಹೊಸ ಅಂಶವನ್ನು ಸೇರಿಸುವ ಹಾಗೆ ಮಾಡಿದರು. ನೊಳಂಬ, ಬಾಣ, ಗುತ್ತ, ನಿಡುಗಲ್, ದಂಡಿನಗೋವ, ನಗಿರೆ, ಸೋಂದ, ಹಾಗಲ್ವಾಡಿ, ಹರತಿ, ಮುಂತಾದವರಿಗೆ ಸಂಬಂಧಿಸಿದ ನಾಣ್ಯಗಳು ದೊರಕಿದ್ದು, ಈ ಅಂಶವನ್ನು ಸ್ಪಷ್ಟಗೊಳಿಸಿವೆ. ಆಳುವ ದೊರೆಗಳ ಹೆಸರುಗಳನ್ನು ಹಾಕದೆ, ಸಾಮಂತರು ತಮ್ಮ ಹೆಸರಿನಲ್ಲಿ ನಾಣ್ಯಗಳನ್ನು ಅಚ್ಚು ಮಾಡಿಸುವ ಹಕ್ಕುಗಳನ್ನು ಹೊಂದಿದ್ದರೆಂಬುದು ಇದರಿಂದ ಗೊತ್ತಾಗುತ್ತದೆ. ನಾಣ್ಯಗಳನ್ನು ಟಂಕಿಸುವ ಅಧಿಕಾರ ಕೇವಲ ರಾಜರಿಗೇ ಇದ್ದಿತು ಎನ್ನುವ ಅಂಶಕ್ಕೆ ಈಗ ದೊರಕಿರುವ ನಾಣ್ಯಗಳಿಂದ ತಿದ್ದುಪಡಿಯನ್ನು ಮಾಡಬೇಕಾಗಿದೆ. ರಾಜರು ಅನೇಕ ಸ್ಥಳೀಯ

ಸಂಸ್ಥೆಗಳು, ದೇವಾಲಯುಗಳು ಹಾಗೂ ಕೆಲವು ವ್ಯಕ್ತಿಗಳಿಗೂ ಈ ಹಕ್ಕನ್ನು ಬಿಟ್ಟುಕೊಟ್ಟಿದ್ದರೆಂಬ ಹೊಸ ಅಂಶ ಈಗ ಗಮನಕ್ಕೆ ಬಂದಿದೆ. ಆದರೆ ಇವರೆಲ್ಲರೂ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು ನಾಣ್ಯಗಳನ್ನು ರಾಜನು ನಿರ್ದೇಶಿಸಿದಂತೆ ಅಚ್ಚು ಹಾಕಬೇಕಾಗಿದ್ದಿತು ಎನ್ನುವ ಅಂಶವನ್ನು ಮರೆಯುವಂತಿಲ್ಲ. ಈ ರೀತಿ ಆಡಳಿತ ಇತಿಹಾಸದಲ್ಲಿಯೂ ನಾಣ್ಯಗಳು ಇತಿಹಾಸಕಾರನಿಗೆ ಸಹಾಯಕವಾಗಿವೆ.

ಆರ್ಥಿಕ ಇತಿಹಾಸ ರಚನೆಗೆ ನಾಣ್ಯಗಳು ವಿಶೇಷವಾಗಿ ಸಹಾಯಕವಾಗಿವೆ ಎನ್ನುವ ಮಾತನ್ನು ಎಲ್ಲರೂ ಒಪ್ಪುತ್ತಾರೆ. ಮೂಲತಃ ನಾಣ್ಯಗಳು ಆರ್ಥಿಕ ಸ್ಥಿತಿಗತಿಗಳ ದ್ಯೋತಕ. ಸಂಪದ್ಭರಿತವಾದ ರಾಜ್ಯ ಮಾತ್ರ ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಬಲ್ಲದು ಎಂಬುದು ಆರ್ಥಿಕ ಆಡಳಿತದ ಮುಖ್ಯ ಸೂತ್ರ. ಪ್ರಾಚೀನ ಕರ್ನಾಟಕದಲ್ಲಿ ಸಾಮಾನ್ಯವಾಗಿ ಎಲ್ಲ ರಾಜವಂಶಗಳೂ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಟಂಕಿಸುವಷ್ಟು ಆರ್ಥಿಕವಾಗಿ ಸಮರ್ಥವಾಗಿದ್ದವು. ವಿಜಯನಗರ ಕಾಲವನ್ನು ಸುವರ್ಣಯುಗ ಎಂದು ಕರೆಯಲಾಗಿದೆ. ವಿಜಯನಗರ ಚಕ್ರವರ್ತಿಗಳು ಟಂಕಿಸಿದಷ್ಟು ಶ್ರೀಮಂತವಾದ ಚಿನ್ನದ ನಾಣ್ಯಗಳನ್ನು ಇತರೆ ಯಾವ ರಾಜವಂಶದ ಅರಸರೂ ಟಂಕಿಸಲಿಲ್ಲವೆಂಬ ಅಂಶವನ್ನು ಗಮನಿಸಿದರೆ, ಇದು ನಿಜವಾಗಿಯೂ ಸುವರ್ಣಯುಗ ಎಂಬ ಅಂಶ ದೃಢಪಡುತ್ತದೆ. ಗುಪ್ತರ ಕಾಲದ ನಾಣ್ಯಗಳಿಗೂ ಇದೇ ಮಾತನ್ನು ಅನ್ವಯಿಸಬಹುದು. ಅನೇಕ ಸಾಮಂತರು ಮತ್ತು ಪಾಳೆಯುಗಾರರು ಕೇವಲ ತಾವ್ರುದ ನಾಣ್ಯಗಳನ್ನು ಅಚ್ಚುಮಾಡಿಸುವಷ್ಟು ಸಮರ್ಥರಾಗಿದ್ದರು. ವಿಜಯನಗರದ ನಾಣ್ಯಗಳನ್ನು ಇನ್ನೂ ಕೂಲಂಕಷವಾಗಿ ಅಭ್ಯಾಸ ಮಾಡಿದರೆ, ಆರ್ಥಿಕ ಸ್ಥಿತಿಗತಿಯ ಇನ್ನೊಂದು ಅಂಶ ನಮಗೆ ತಿಳಿಯಬರುತ್ತದೆ. ವಿಜಯನಗರದ ಮೊದಲ ಚಕ್ರವರ್ತಿಗಳು, ಅಂದರೆ ಸದಾಶಿವರಾಯನವರೆಗಿನ ಚಿನ್ನದ ನಾಣ್ಯಗಳನ್ನು ಪರೀಕ್ಷೆಗೆ ಒಳಪಡಿಸಿ ನೋಡಿದಾಗ, ಅವುಗಳು ಶೇಕಡ 85ರ ವರೆಗೆ ಚಿನ್ನದ ಶುದ್ಧತೆಯನ್ನು ತೋರಿಸಿದವು. ಇದನ್ನು ವಿದೇಶೀ ಬರಹಗಾರರೂ ಕೂಡ ಒಪ್ಪಿಕೊಂಡಿದ್ದಾರೆ. ಆನಂತರ ರಾಜಕೀಯ ಕ್ಷೋಭೆಗಳು ಉಂಟಾಗಿ ವಿಜಯನಗರದ ರಾಜಕೀಯ ಪರಿಸ್ಥಿತಿ ಅಷ್ಟೇನೂ ಸಮರ್ಪಕವಾಗಿರಲಿಲ್ಲ. ಹಂಪೆಯನ್ನು ಬಿಟ್ಟು ಪೆನುಗೊಂಡೆಗೆ ರಾಜಧಾನಿಯನ್ನು ಬದಲಾಯಿಸಬೇಕಾಯಿತು. ಈ ಕಾಲದಲ್ಲಿ ಚಿನ್ನದ ನಾಣ್ಯಗಳ ಸಂಖ್ಯೆಯೂ ತೀರ ಕಡಿಮೆ. ಅದಕ್ಕೂ ಮಿಗಿಲಾಗಿ ಈ ಚಿನ್ನದ ನಾಣ್ಯಗಳಲ್ಲಿ ಚಿನ್ನದ ಅಂಶವೂ ಕಡಿಮೆಯಾಗಿ ಕಾಣಬರುತ್ತದೆ. ಅಂದರೆ ಉತ್ತಮ ಗುಣದ ಅಥವಾ ಶುದ್ಧ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸುವಷ್ಟು ಈ ರಾಜರು ಸಮರ್ಥರಾಗಿರಲಿಲ್ಲವೆಂಬುದು ಖಚಿತವಾಗುತ್ತದೆ. ಆದುದರಿಂದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು ಎಂದು ದೃಢಪಡುತ್ತದೆ. ಬಹಮನಿ ಮತ್ತು ಆದಿಲ್ ಶಾಹಿ ಸುಲ್ತಾನರ ನಾಲ್ಕಾರು ನಮೂನೆಯ ಚಿನ್ನದ ನಾಣ್ಯಗಳು ದೊರಕಿದ್ದರೂ, ಬರೀದ್ ಶಾಹೀ ಸುಲ್ತಾನರು ಚಿನ್ನದ ನಾಣ್ಯಗಳನ್ನು ಟಂಕಿಸಿದುದಕ್ಕೆ ಯಾವ ಮಾಹಿತಿಗಳೂ ದೊರಕಿಲ್ಲ. ಇದು ಅವರ

ಕಾಲದ ಹದಗೆಟ್ಟ ಆರ್ಥಿಕ ಸ್ಥಿತಿಗತಿಗಳಿಗೆ ಸಾಕ್ಷಿಯೇ ಸರಿ. ಈ ಎಲ್ಲ ಅಂಶಗಳನ್ನೂ ಗಮನಿಸಿದರೆ, ನಾಣ್ಯಗಳು ಆರ್ಥಿಕತೆಯ ಪ್ರತಿಬಿಂಬ ಎನ್ನುವ ಮಾತು ಖಚಿತವಾಗುತ್ತದೆ.

ಧಾರ್ಮಿಕ ಇತಿಹಾಸವನ್ನು ರಚಿಸುವಲ್ಲಿ ನಾಣ್ಯಗಳ ಪಾತ್ರ ಹಿರಿದಾದುದು. ಭಾರತದ ಎಲ್ಲ ನಾಣ್ಯಗಳಂತೆ ಕರ್ನಾಟಕದ ಎಲ್ಲ ನಾಣ್ಯಗಳಿಗೂ ಒಂದು ಧಾರ್ಮಿಕ ಹಿನ್ನೆಲೆಯಿದೆ. ದೇವ - ದೇವತೆಗಳ ಇಲ್ಲವೇ ಧಾರ್ಮಿಕ ಚಿಹ್ನೆಗಳನ್ನು ಹೊಂದಿರದ ನಾಣ್ಯವೇ ಕರ್ನಾಟಕದಲ್ಲಿರಲಿಲ್ಲ ಎಂದರೆ ಅತಿಶಯೋಕ್ತಿಯಾಗಲಾರದು. ಶಿವ - ಪಾರ್ವತಿ, ವಿಷ್ಣು - ಲಕ್ಷ್ಮಿ, ಬ್ರಹ್ಮ - ಸರಸ್ವತಿ, ಶ್ರೀರಾಮ - ಸೀತೆ, ಲಕ್ಷ್ಮಿ - ನರಸಿಂಹ, ಗಣಪತಿ, ನಂದಿ, ಹನುಮಾನ್, ಕೃಷ್ಣ, ಗರುಡ ಮುಂತಾದ ದೇವ - ದೇವತೆಗಳು, ಶಂಖ, ಚಕ್ರ, ಡಮರು ಮುಂತಾದ ಧಾರ್ಮಿಕ ಚಿಹ್ನೆಗಳುಳ್ಳ ನಾಣ್ಯಗಳು ಕ್ರಿಸ್ತಪೂರ್ವದ ಶತಮಾನಗಳಿಂದ ಆರಂಭವಾಗಿ, ಬ್ರಿಟಿಷರ ಕಾಲದವರೆಗಿನ ಸಮಯುದವರೆಗೆ, ಕಾಲಕಾಲದಲ್ಲಿ ವಿಜೃಂಭಿಸುತ್ತಿದ್ದವು ಎಂದು ಸುಲಭವಾಗಿ ತಿಳಿಯುತ್ತದೆ. ಸಾಮಾನ್ಯವಾಗಿ ರಾಜರು ತಮ್ಮ ರಾಜ್ಯದಲ್ಲಿ ಪ್ರಚಲಿತವಾಗಿರುವ ಎಲ್ಲ ಧರ್ಮಗಳನ್ನೂ ಸಮಾನವಾಗಿ ಕಾಣುವ ದೃಷ್ಟಿಯಿಂದ, ಎಲ್ಲ ಧರ್ಮದ ದೇವಾಲಯಗಳನ್ನು ಕಟ್ಟಿಸುವುದೂ ಅವುಗಳಿಗೆ ದಾನಗಳನ್ನು ಕೊಡುವುದೂ ವಾಡಿಕೆ; ಇದು ಅವರ ಧರ್ಮವೂ ಹೌದು. ಆದರೆ ನಾಣ್ಯಗಳ ಮೇಲೆ ದೇವತೆಗಳ ಚಿತ್ರವನ್ನು ಅಳವಡಿಸುವಾಗ ತಮಗೆ ಅತ್ಯಂತ ಪ್ರಿಯವಾದ ದೇವತೆಯ ಚಿತ್ರವನ್ನು ಆರಿಸಿಕೊಳ್ಳುತ್ತಿದ್ದರು. ಹೊಯ್ಸಳ ದೊರೆ ವಿಷ್ಣುವರ್ಧನನು ಶೈವ, ವೈಷ್ಣವ ಮತ್ತು ಜೈನ ದೇವಾಲಯಗಳನ್ನು ನಿರ್ಮಿಸಿದನು ಮತ್ತು ಅವುಗಳಿಗೆ ದಾನ - ದತ್ತಿಗಳನ್ನು ಕೊಟ್ಟನು ಎಂಬುದು ತಿಳಿದೇ ಇದೆ. ಆದರೆ ಅವನ ನಾಣ್ಯಗಳ ಮೇಲೆ ದುರ್ಗಿಯ ಚಿತ್ರವನ್ನು ಇಲ್ಲವೇ ಆಕೆಯ ವಾಹನವಾದ ಸಿಂಹವನ್ನು ಮಾತ್ರ ಅಳವಡಿಸಿದನು. ಅವನು ವೈಷ್ಣವನಾದರೂ ವಿಷ್ಣು ಪರವಾದ ನಾಣ್ಯಗಳನ್ನು ಅಚ್ಚು ಹಾಕಿಸಲಿಲ್ಲ.

ವಿಜಯನಗರ ಚಕ್ರವರ್ತಿ ಕೃಷ್ಣದೇವರಾಯನು ತಿರುಪತಿ ವೆಂಕಟೇಶ್ವರನ ಪರಮಭಕ್ತನೆಂದು ನಾಲ್ಕಾರು ಶಾಸನಗಳಿಂದ ತಿಳಿದುಬಂದಿದೆ. ಅವನು ಈ ದೇವಾಲಯಕ್ಕೆ ಬಹು ಶ್ರೀಮಂತವಾದ ಕೊಡುಗೆಗಳನ್ನು ಕೊಟ್ಟನೆಂಬುದನ್ನು ಅವನ ಶಾಸನಗಳು ತಿಳಿಸುತ್ತವೆ. ಅವುಗಳಲ್ಲಿ ಮುಖ್ಯವಾದುದು ಅನರ್ಘ್ಯ ರತ್ನಖಚಿತವಾದ ನವರತ್ನ ಮಾಲಿಕೆ. ಇದರಲ್ಲಿ ಎಷ್ಟು ಚಿನ್ನ, ವಜ್ರ ಮತ್ತು ಇತರ ಪ್ರಶಸ್ತ ಶಿಲೆಗಳು ಇದ್ದುವೆಂಬುದನ್ನೂ ಶಾಸನಗಳು ತಿಳಿಸುತ್ತವೆ. ಈ ಮೇಲಿನ ಎಲ್ಲ ಮಾಹಿತಿಗಳನ್ನೂ ಖಚಿತಪಡಿಸುವಂತಹ ಎರಡು ವರಹ ಮೌಲ್ಯದ ವೆಂಕಟೇಶ್ವರನ ಚಿತ್ರವಿರುವ ಚಿನ್ನದ ನಾಣ್ಯಗಳನ್ನು ಕೃಷ್ಣದೇವರಾಯನು ಅಚ್ಚು ಹಾಕಿಸಿದನು. ಇದೇ ರೀತಿ ಇವನು ಬಾಲಕೃಷ್ಣನ ಚಿತ್ರವಿರುವ ಚಿನ್ನದ ನಾಣ್ಯಗಳನ್ನೂ ಅಚ್ಚು ಹಾಕಿಸಿದನು. ಜೊತೆಗೆ ಶಿವ - ಪಾರ್ವತಿಯರ ನಾಣ್ಯವನ್ನೂ ಮುಂದುವರಿಸಿದನು. ಇವಿಷ್ಟೇ ಅಲ್ಲದೆ ಗರುಡ ಮತ್ತು ನಂದಿ ನಮೂನೆಯ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಮೊದಲ ಎರಡು ನಮೂನೆಯ ನಾಣ್ಯಗಳು ಅವನ ವೈಯಕ್ತಿಕ ಧಾರ್ಮಿಕ ಒಲವನ್ನು

ಸೂಚಿಸಿದರೆ, ಮಿಕ್ಕ ನಮೂನೆಯ ನಾಣ್ಯಗಳು ಕೃಷ್ಣದೇವರಾಯನ ಧಾರ್ಮಿಕ ಸಹಿಷ್ಣುತೆಗೆ ಕನ್ನಡಿ ಹಿಡಿದಂತೆ ಕಾಣುತ್ತವೆ.

ಮೈಸೂರು ಒಡೆಯರ್ ಮನೆತನದ ಅರಸರ ಅಧಿದೇವತೆ ಚಾಮುಂಡೇಶ್ವರಿ ಎನ್ನುವುದು ಅನೇಕ ಆಕರಗಳಿಂದ ತಿಳಿದಿದೆ. ಇದು ಇವರ ನಾಣ್ಯಗಳಿಂದಲೂ ತಿಳಿದು ಬರುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ನಾಣ್ಯಗಳ ಮುಮ್ಮುಖದಲ್ಲಿ ಚಾಮುಂಡಿ ಎನ್ನುವ ಕನ್ನಡ ಬರಹ ಪ್ರಮುಖವಾಗಿ ಕಾಣುತ್ತದೆ. ಜೊತೆಗೆ ಚಾಮುಂಡಿಯ ವಾಹನವಾದ ಸಿಂಹವೂ ಈ ನಾಣ್ಯಗಳಲ್ಲಿ ಕಾಣಬರುತ್ತದೆ.

ಹೈದರನು ತನ್ನ ಕೆಲವು ನಾಣ್ಯಗಳ ಮೇಲೆ ಶಿವ - ಪಾರ್ವತಿಯರಿರುವ ಹಾಗೂ ಮತ್ತೊಂದು ನಾಣ್ಯದಲ್ಲಿ ಕುಳಿತಿರುವ ವಿಷ್ಣುವಿನ ಚಿತ್ರವಿರುವ ನಾಣ್ಯಗಳನ್ನು ಟಂಕಿಸಿದನು. ಇದೇ ರೀತಿ ಟೀಪು ಸುಲ್ತಾನನು ಶೃಂಗೇರಿಯ ದೇವತೆ ಶಾರದಾಂಬಾ ಚಿತ್ರವಿರುವ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿ, ಅವುಗಳನ್ನು ಶೃಂಗೇರಿಯ ಶಂಕರಾಚಾರ್ಯ ಮಹಾಸ್ವಾಮಿಗಳಿಗೆ ದಾನವಾಗಿ ಅರ್ಪಿಸಿದನು. ಇದನ್ನು ದೃಢಪಡಿಸುವ ಟೀಪು ಬರೆದ ನಾಲ್ಕಾರು ಸನ್ನದುಗಳೂ ದೊರಕಿವೆ. ಹಿಂದೂಗಳ ಪ್ರೀತಿ - ವಿಶ್ವಾಸಗಳನ್ನು ಗಳಿಸುವ ಸಲುವಾಗಿ ಇವರು ಈ ರೀತಿ ಮಾಡಿದರು ಎಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಅವರ ಉದ್ದೇಶ ಏನಾದರೂ ಇರಲಿ, ಈ ದೇವತೆಗಳ ಬಗೆಗೆ ಅವರಿಗಿದ್ದ ಒಲವು ವ್ಯಕ್ತವಾಗುತ್ತದೆ. ಹಿಂದೂ ದೇವತೆಗಳ ಚಿತ್ರವಿರುವ ನಾಣ್ಯಗಳನ್ನು ಬ್ರಿಟಿಷ್ ಈಸ್ಟ್ ಇಂಡಿಯ ಕಂಪೆನಿಯೂ ಅಚ್ಚು ಹಾಕಿಸಿತು ಎಂಬುದನ್ನು ಇಲ್ಲಿ ಗಮನಿಸಬೇಕು. ಕರ್ನಾಟಕದ ಹೊರಗಿನ ಕೆಲವು ಉದಾಹರಣೆಗಳೂ ಇದಕ್ಕೆ ಪೂರಕವಾಗಿವೆ. ಕುಷಾಣ ದೊರೆ ಕನಿಷ್ಕನು ಬುದ್ಧ ಹಾಗೂ ನಂದಿವಾಹನ ಶಿವನ ಚಿತ್ರಗಳಿರುವ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಕುಷಾಣರ ಕೆಲವು ನಾಣ್ಯಗಳಲ್ಲಿ ಉಮಾ, ವಿಶಾಖಾ, ಸ್ಕಂಧ, ಮಹಾಸೇನ ಹಾಗೂ ಲಕ್ಷ್ಮಿಯರ ಚಿತ್ರಗಳಿವೆ. ಆದರೆ ವೈಷ್ಣವ ದೇವತೆಗಳ ಚಿತ್ರಗಳಿಲ್ಲ. ಮುಹಮ್ಮದ್ ಘೋರಿಯ ಚಿನ್ನದ ನಾಣ್ಯಗಳ ಮೇಲೆ ಲಕ್ಷ್ಮಿಯ ಚಿತ್ರ ಹಾಗೂ ನಾಗರೀ ಲಿಪಿಯಲ್ಲಿ ಅವನ ಹೆಸರು ಇರುವುದು ಕುತೂಹಲಕಾರಿಯಾದ ಅಂಶ. ಅಕ್ಬರನ ನಾಣ್ಯಗಳ ಮೇಲೆ ಶ್ರೀರಾಮ - ಸೀತೆಯರ ಚಿತ್ರಗಳಿರುವುದು ಇನ್ನೊಂದು ಮಹತ್ವದ ಸಂಗತಿ. ಜಹಾಂಗೀರನು ನಾಣ್ಯಗಳ ಮೇಲೆ ಮೇಷ, ವೃಷಭ ಮುಂತಾದ ಹನ್ನೆರಡು ಹಿಂದೂ ರಾಶಿಗಳ ಚಿಹ್ನೆಗಳನ್ನು ಅಳವಡಿಸಿದನು. ವೆನಿಷಿಯನ್ ನಾಣ್ಯಗಳ ಮೇಲೆ ಕ್ರೈಸ್ತ ಸಂತ ಮಾರ್ಕನ ಚಿತ್ರವಿರುವುದನ್ನು ಗಮನಿಸಬೇಕು. ಸುರಪುರದ ನಾಯಕರ ನಾಣ್ಯಗಳ ಮೇಲೆ ವೈಷ್ಣವ ಮೂರು ನಾಮ ಹಾಗೂ ಶಂಖ-ಚಕ್ರಗಳಿರುವುದು ನಮ್ಮ ಗಮನವನ್ನು ಸೆಳೆಯುತ್ತದೆ. ಔರಂಗಜೇಬನು ತನ್ನ ನಾಣ್ಯಗಳ ಮೇಲಿದ್ದ ಕುರಾನಿನ ಬರಹಗಳನ್ನು ತೆಗೆದುಹಾಕುತ್ತಾನೆ. ಅದಕ್ಕೆ ಕಾರಣವೇನೆಂದರೆ, ವಿಗ್ರಹಾರಾಧಕರಾದ ಹಿಂದೂಗಳು ನಾಣ್ಯಗಳನ್ನು ಬಳಸಿದಾಗ

ಕುರಾನಿನ ಬರಹ ಅಪವಿತ್ರವಾಗುತ್ತದೆಂಬ ಆತನ ಭಾವನೆ. ಈ ಭಾವನೆಯಿಂದ ಕುರಾನಿನ ಬರಹಗಳನ್ನು ತೆಗೆದುಹಾಕಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಈ ರೀತಿ ನಾಣ್ಯಗಳು ಧಾರ್ಮಿಕ ವಿಷಯದಲ್ಲಿ ಬಲು ಮುಖ್ಯವಾದ ಮಾಹಿತಿಗಳನ್ನು ಒದಗಿಸುತ್ತವೆ ಎಂಬುದನ್ನು ಗಮನಿಸಬೇಕು.

ನಾಣ್ಯಗಳು ಅವುಗಳನ್ನು ಅಚ್ಚು ಹಾಕಿಸಿದ ರಾಜನ ಚಿತ್ರವನ್ನು ಒಳಗೊಂಡಿರುವುದರಿಂದ ಆ ರಾಜನ ಗುಣ - ಲಕ್ಷಣಗಳನ್ನು ತಿಳಿಸುವ ಸಾಧನಗಳಾಗುತ್ತವೆ, ಇಲ್ಲವೆ ಅಂತಹ ಮಾಹಿತಿಗಳನ್ನು ದೃಢಪಡಿಸುತ್ತವೆ. ವಿಜಯನಗರದ ದೊರೆ ಇಮ್ಮಡಿ ದೇವರಾಯನಿಗೆ ಆನೆಗಳು ಮತ್ತು ಅವುಗಳ ಬೇಟೆಯಲ್ಲಿ ವಿಶೇಷ ಆಸಕ್ತಿಯಿದ್ದಿತು. ಇದು ಶಾಸನಗಳಲ್ಲಿ ಹಾಗೂ ವಿದೇಶೀ ಬರವಣಿಗೆಗಳಲ್ಲಿ ಕಾಣಬರುತ್ತದೆ. ದೇವರಾಯನ ನಾಣ್ಯಗಳ ಮೇಲೆ ಆನೆಯ ಚಿತ್ರ ಹಾಗೂ 'ಗಜಬೇಂಟೆಕಾರ' ಮತ್ತು 'ರಾಯಗಜ ಗಂಡಭೇರುಂಡ' ಎಂಬ ಬರಹಗಳಿರುವುದರಿಂದ, ಅವನ ಈ ಸ್ವಭಾವ ನಾಣ್ಯಗಳ ಮೂಲಕ ದೃಢಪಡುತ್ತದೆ. ದಂಡಿನಗೋವನ ಚಿನ್ನದ ನಾಣ್ಯದಲ್ಲಿ ಶಿರಸ್ತ್ರಾಣವನ್ನು ಧರಿಸಿ ಕಠಾರಿಯನ್ನು ಹಿಡಿದುಕೊಂಡು ಮುನ್ನುಗ್ಗುತ್ತಿರುವ ವೀರನ ಚಿತ್ರವಿದೆ. ಅವನು ಹಾಕಿಕೊಂಡಿರುವ ಕೈ ಮತ್ತು ಕಾಲು ಆಭರಣಗಳು ಗಮನಾರ್ಹವಾದವು. ಈ ಚಿತ್ರ ದಂಡಿನಗೋವನನ್ನು ಕುರಿತದ್ದು ಎಂದು ಭಾವಿಸುವುದಾದರೆ, ಈ ನಾಣ್ಯ ಅವನ ಶೌರ್ಯಕ್ಕೆ ಸಾಕ್ಷಿಯಾಗಿದೆ. ಕರ್ನಾಟಕದ ಹೊರಗಡೆಯಿಂದ ಉದಾಹರಣೆಯನ್ನು ಕೊಡುವುದಾದರೆ, ಸಮುದ್ರಗುಪ್ತನ ನಾಣ್ಯಗಳನ್ನು ಗಮನಿಸಬೇಕು. 'ಇಂಡಿಯನ್ ನೆಪೋಲಿಯನ್' ಎಂದು ಖ್ಯಾತನಾಗಿರುವ ಸಮುದ್ರಗುಪ್ತನ ನಾಣ್ಯಗಳ ಮೇಲೆ ಶಿರಸ್ತ್ರಾಣವನ್ನು ಧರಿಸಿ, ಆಜಾನುಬಾಹುವಾಗಿ ಹಾಗೂ ವಿಶಾಲಭುಜವನ್ನು ಹೊಂದಿರುವ ಶೂರನ ಚಿತ್ರಣವನ್ನು ಕಾಣುತ್ತೇವೆ. ಇವನಿಗೆ ಸಂಗೀತದಲ್ಲಿ ವಿಶೇಷ ಆಸಕ್ತಿಯಿದ್ದಿತು ಎಂದು ಅಲಹಾಬಾದ್ ಪ್ರಶಸ್ತಿಯಿಂದ ತಿಳಿದು ಬರುತ್ತದೆ. ಇದು ಎಷ್ಟರ ಮಟ್ಟಿಗೆ ಸತ್ಯ ಎಂಬುದನ್ನು ಅವನ ನಾಣ್ಯಗಳು ದೃಢಪಡಿಸುತ್ತವೆ. ಇವನು ಅಚ್ಚು ಹಾಕಿಸಿದ ಒಂದು ನಮೂನೆಯ ನಾಣ್ಯದಲ್ಲಿ ಸಮುದ್ರಗುಪ್ತನು ವೀಣೆಯನ್ನು ನುಡಿಸುತ್ತಿರುವ ಚಿತ್ರವಿದೆ. ಮತ್ತೊಂದು ನಾಣ್ಯದಲ್ಲಿ ಇವನು ಹುಲಿಯನ್ನು ಕೊಲ್ಲುತ್ತಿರುವ ಚಿತ್ರ ಹಾಗೂ 'ವ್ಯಾಘ್ರಪರಾಕ್ರಮಃ' ಎನ್ನುವ ಬರಹವಿದೆ. ಮತ್ತೊಂದು ನಾಣ್ಯದಲ್ಲಿ ಅವನು ಒಂದು ಹೂವನ್ನು ಹಿಡಿದುಕೊಂಡು ಕುಳಿತಿರುವ ಚಿತ್ರವಿದೆ. ಈ ಎಲ್ಲ ನಾಣ್ಯಗಳ ಮಾಹಿತಿಯಿಂದ ಸಮುದ್ರಗುಪ್ತನ ದೇಹದಾರ್ಢ್ಯ, ಪರಾಕ್ರಮ ಮತ್ತು ಇತರ ಗುಣಗಳ ಸಚಿತ್ರ ಪರಿಚಯ ನಮಗೆ ಉಂಟಾಗುತ್ತದೆ.

ನಾಣ್ಯಗಳು ಪ್ರತಿಮಾಶಾಸ್ತ್ರದ ಅಧ್ಯಯನಕ್ಕೆ ಉತ್ತಮ ಮಾಹಿತಿಯನ್ನು ಒದಗಿಸುತ್ತವೆ. ಆಗಲೇ ಗಮನಿಸಿರುವಂತೆ ನಾಣ್ಯಗಳ ಮೇಲೆ ವಿಶೇಷವಾಗಿ ದೇವ-ದೇವತೆಗಳ ಚಿತ್ರಗಳು ಕಾಣಬರುತ್ತವೆ. ದೇವಾಲಯಗಳಲ್ಲಿ ವಿವಿಧ ದೇವತೆಗಳ ಶಿಲ್ಪಗಳು ವಿಪುಲವಾಗಿ

ಕಾಣಬರುತ್ತವೆ. ಇವೆಲ್ಲವೂ ಆಯಾಕಾಲದ ಶಿಲ್ಪಶಾಸ್ತ್ರ ಗ್ರಂಥಗಳಿಂದ ದೊರಕುವ ಮಾಹಿತಿಗಳ ಮೇಲೆ ಇಲ್ಲವೇ, ಪರಂಪರಾಗತವಾಗಿ ನಡೆದು ಬಂದ ಮಾಹಿತಿಗಳ ಮೇಲೆ ಆಧಾರಿತವಾಗಿರುತ್ತವೆ. ಇದೇ ಚಿತ್ರಗಳು ನಾಣ್ಯಗಳ ಮೇಲೆ ಮೂಡಿಬಂದಾಗ, ಅವು ಜನಸಾಮಾನ್ಯರಿಗೆ ಹತ್ತಿರವಾದಂತೆ ತೋರುತ್ತವೆ. ಶಿವ, ಪಾರ್ವತಿ, ವಿಷ್ಣು, ಲಕ್ಷ್ಮಿ, ಬ್ರಹ್ಮ, ಸರಸ್ವತಿ, ಗಣೇಶ, ಕೃಷ್ಣ, ನರಸಿಂಹ ಮುಂತಾದ ದೇವತೆಗಳ ಆಭರಣಗಳು, ಅವರ ಕೈಗಳಲ್ಲಿರುವ ವಸ್ತುಗಳು, ಮುದ್ರೆಗಳ ವಿನ್ಯಾಸ ಮುಂತಾದವು ಪ್ರತಿಮಾಶಾಸ್ತ್ರವನ್ನು ಅಭ್ಯಾಸ ಮಾಡುವವರಿಗೆ ವಿಶೇಷ ಮಾಹಿತಿಯನ್ನು ಒದಗಿಸುತ್ತವೆ. ಕೃಷ್ಣದೇವರಾಯನ ವೆಂಕಟೇಶ್ವರ ನಮೂನೆಯ ಚಿನ್ನದ ನಾಣ್ಯಗಳಲ್ಲಿ ತಿರುಪತಿಯ ದೇವರ ಚಿತ್ರವಿದೆ. ಇದೊಂದು ಅಮೂಲ್ಯ ದಾಖಲೆಯಾಗಿದ್ದು ವಿಜಯನಗರ ಕಾಲದಲ್ಲಿದ್ದ ಈ ಮೂರ್ತಿಯ ಅಸ್ತಿತ್ವಕ್ಕೆ ಕನ್ನಡಿ ಹಿಡಿದಂತಿದೆ. ಇದೇ ದೊರೆಯ ಬಾಲಕೃಷ್ಣನ ಚಿತ್ರವಿರುವ ನಾಣ್ಯವೂ ಇದೇ ಗುಂಪಿಗೆ ಸೇರುತ್ತದೆ. ಶ್ರೀರಾಮ - ಸೀತೆ ಹಾಗೂ ಭೂದೇವಿ - ಶ್ರೀದೇವಿಯರಿಂದ ಒಡಗೂಡಿದ ವೆಂಕಟೇಶ್ವರ ನಮೂನೆಯ ನಾಣ್ಯಗಳು ಪ್ರತಿಮಾ ಲಕ್ಷಣವನ್ನು ತಿಳಿಯುವಲ್ಲಿ ಸಹಕಾರಿಯಾಗಿವೆ. ಹೊಯ್ಸಳ ಸೋಮೇಶ್ವರನ ತಾಮ್ರದ ನಾಣ್ಯ, ಜಗದೇಕಮಲ್ಲನ ಚಿನ್ನದ ನಾಣ್ಯಗಳಲ್ಲಿ ಒಂದು ರೀತಿಯ ದೇವಾಲಯ ಗೋಪುರ ಕಾಣಬರುತ್ತದೆ. ಇವು ಆ ಕಾಲದ ವಾಸ್ತು ವಿನ್ಯಾಸವನ್ನು ತಿಳಿಯುವುದಕ್ಕೆ ಸಹಾಯಕವಾಗುತ್ತವೆ. ನಾಣ್ಯಗಳ ಮೇಲೆ ಕಾಣಬರುವ ದೇವ - ದೇವತೆಗಳ ಚಿತ್ರಗಳನ್ನು ಆಧರಿಸಿ ಒಂದು ಬೃಹದ್ಗ್ರಂಥವನ್ನು ಪ್ರತಿಮಾಶಾಸ್ತ್ರದ ಬಗೆಗೆ ಬರೆಯುವಷ್ಟು ಈ ವಿಷಯ ಶ್ರೀಮಂತವಾಗಿದೆ.

ನಾಣ್ಯಗಳು ಲೋಹಗಳಿಂದ ಮಾಡಿದ ವಸ್ತುಗಳಾದುದರಿಂದ, ಸಮಕಾಲೀನ ಲೋಹಗಾರಿಕೆಯ ತಾಂತ್ರಿಕತೆಯನ್ನು ತಿಳಿಯುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಪ್ರಾಚೀನ ಕಾಲದಲ್ಲಿ ಬಳಕೆಯಲ್ಲಿದ್ದ ಲೋಹದ ಪಾತ್ರೆಗಳು ಉತ್ಖನನಗಳಲ್ಲಿ ದೊರಕುವುದು ತೀರ ದುರ್ಲಭ. ಉದಾಹರಣೆಗೆ ಬಾದಾಮಿ ಚಲುಕ್ಯರ ಮತ್ತು ಹೊಯ್ಸಳರ ಕಾಲದ ಲೋಹದ ಉಪಕರಣಗಳು ಉತ್ಖನನಗಳಲ್ಲಿ ದೊರಕಿಲ್ಲ. ಕಡಿಮೆ ಸಂಖ್ಯೆಯಲ್ಲಿ ಕಂಚಿನ ವಿಗ್ರಹಗಳು ದೊರಕಿವೆ. ಇವು ಕಂಚಿನ ತಾಂತ್ರಿಕತೆಯ ಬಗೆಗೆ ಮಾತ್ರ ಮಾಹಿತಿಯನ್ನು ನೀಡಬಲ್ಲವು. ಇದೇ ಕಾಲದ ಚಿನ್ನ, ಬೆಳ್ಳಿ ಮತ್ತು ತಾಮ್ರ ಲೋಹಗಾರಿಕೆಯನ್ನು ತಿಳಿಯಬಯಸುವ ಇತಿಹಾಸಕಾರನು ಆ ಕಾಲದ ನಾಣ್ಯಗಳಿಗೇ ಮೊರೆಹೋಗಬೇಕು. ಇತ್ತೀಚಿನವರೆಗೆ ಒಂದು ನಾಣ್ಯವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಬೇಕಾದರೆ, ಆ ನಾಣ್ಯದ ಒಂದು ಚೂರನ್ನು ಕತ್ತರಿಸಿ, ಆ ಚೂರಿನಿಂದ ಪರೀಕ್ಷೆ ಮಾಡಲಾಗುತ್ತಿತ್ತು. ಈ ವಿಧಾನದಲ್ಲಿ ನಾಣ್ಯಗಳು ಹಾಳಾಗುತ್ತಿದ್ದುದರಿಂದ, ನಾಣ್ಯಶಾಸ್ತ್ರಜ್ಞರು ನಾಣ್ಯಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸುವುದಕ್ಕೆ ಆಸಕ್ತಿ ತೋರಿಸುತ್ತಿರಲಿಲ್ಲ. ಆದರೆ ಇತ್ತೀಚೆಗೆ ವಿಜ್ಞಾನದ ಬೆಳವಣಿಗೆಯೊಂದಿಗೆ ನಾಣ್ಯಗಳನ್ನು ಸ್ವಲ್ಪವೂ ಹಾಳುಮಾಡದಿರುವ ಹಾಗೂ ಅವುಗಳಿಗೆ ಯಾವ ಧಕ್ಕೆಯನ್ನೂ ಉಂಟುಮಾಡದಿರುವ

(ನಾನ್‌ಡಿಸ್ಟ್ರಕ್ಟೀವ್) ಹೊಸ ವಿಧಿ-ವಿಧಾನಗಳು ಬೆಳಕಿಗೆ ಬಂದಿವೆ. ಆದುದರಿಂದ ನಾಣ್ಯಗಳ ಲೋಹಗಾರಿಕೆಯನ್ನು ಅರಿಯಲು ನಾಣ್ಯಶಾಸ್ತ್ರಜ್ಞರು ಮುಂದಾಗುತ್ತಿದ್ದಾರೆ. ಉದಾಹರಣೆಗೆ ರಾಯಚೂರು ಜಿಲ್ಲೆಯ ಚಿಕ್ಕಸಿಂದೋಗಿ ಎಂಬಲ್ಲಿ ದೊರಕಿದ ಪಂಚ್ ಚಿಹ್ನೆಯ ಕೆಲವು ನಾಣ್ಯಗಳನ್ನು ಗಮನಿಸಬಹುದು. ಈ ರೀತಿಯ 152 ಬೆಳ್ಳಿಯ ನಾಣ್ಯಗಳನ್ನು ಲಕ್ನೋದಲ್ಲಿರುವ ರಾಷ್ಟ್ರೀಯ ಪ್ರಯೋಗಾಲಯದಲ್ಲಿ 'ವೇವ್‌ಲೆಂತ್ ಡಿಸ್ಪರ್ಸಿವ್ ಎಕ್ಸ್‌ರೇ ಫ್ಲೂರೆಸೆನ್ಸ್ ಸ್ಪೆಕ್ಟ್ರೊಮೀಟರ್ ಸಿಸ್ಟಂ' ಎನ್ನುವ ವಿಧಾನದಿಂದ ಪರೀಕ್ಷಿಸಲಾಯಿತು. ಇದರಿಂದ ತಿಳಿದುಬಂದ ಸಂಗತಿಗಳೇನೆಂದರೆ : ಈ ನಾಣ್ಯಗಳನ್ನು ಎರಕಹುಯ್ದು ತಯಾರಿಸಿದ ಬೆಳ್ಳಿಯ ಬಿಲ್ಲೆಗಳಿಂದ ಮಾಡಲಾಗಿತ್ತು : ಈ ನಾಣ್ಯಗಳಲ್ಲಿ ಬೆಳ್ಳಿಯ ಅಂಶವು ಶೇಕಡ 51 ರಿಂದ 94ರ ವರೆಗೂ, ತಾಮ್ರದ ಅಂಶವು 5 ರಿಂದ 46ರ ವರೆಗೂ ಇದ್ದಿತು. ಈ ನಾಣ್ಯಗಳ ಮೇಲುಮೈಯಲ್ಲಿ ಅನೇಕ ರಂಧ್ರಗಳು ಮತ್ತು ಬಿರುಕುಗಳು ಕಾಣಿಸಿದ್ದರಿಂದ, ಈ ಬೆಳ್ಳಿಯಲ್ಲಿ ವಿವಿಧ ಲೋಹಗಳು ಬೆರಕೆಯಾಗಿ ಸೇರಿದ್ದವು. ಇವುಗಳನ್ನು ಬೇರ್ಪಡಿಸುವ ತಾಂತ್ರಿಕ ವಿಧಾನಗಳು ಇವರಿಗೆ ಗೊತ್ತಿರಲಿಲ್ಲ. ಈ ಬೆಳ್ಳಿಯಲ್ಲಿ ಸೀಸವು ಶೇಕಡ 0.31 ರಿಂದ 1.88ರ ವರೆಗೆ ಇದ್ದು ಜಿಂಕ್ ಮತ್ತು ನಿಕ್ಕಲ್‌ಗಳು ಮಿಶ್ರಣವಾಗಿದ್ದವು. ಒಟ್ಟಿನಲ್ಲಿ ಈ ನಾಣ್ಯಗಳನ್ನು ತಯಾರು ಮಾಡಿದಾಗ ಅಂತಹ ಉತ್ತಮ ಮಟ್ಟದ ತಾಂತ್ರಿಕತೆಯನ್ನು ಬಳಸಲಿಲ್ಲ ಎಂಬುದು ಗೊತ್ತಾಗುತ್ತದೆ. ಬೇರೆ ಬೇರೆ ಕಾಲದ ಹಾಗೂ ರಾಜವಂಶದ ನಾಣ್ಯಗಳನ್ನು ಈ ರೀತಿ ಪರೀಕ್ಷೆಗೆ ಒಳಪಡಿಸಿದರೆ, ಲೋಹಗಾರಿಕೆಯ ತಾಂತ್ರಿಕತೆಯ ಸ್ಥಿತಿಯನ್ನು ತಿಳಿಯಬಹುದು.

ಕೊನೆಯದಾಗಿ ಆದರೆ ಪ್ರಮುಖವಾಗಿ, ನಾಣ್ಯಗಳು ವ್ಯಾಪಾರ ಸಂಬಂಧಗಳ ಉತ್ತಮ ಆಕರಗಳು ಎಂಬುದನ್ನು ಗಮನಿಸಬೇಕು. ವ್ಯಾಪಾರದ ಇತಿಹಾಸವನ್ನು ರಚಿಸುವುದಕ್ಕೆ ನಾಣ್ಯಗಳೇ ಮುಖ್ಯ ಆಕರಗಳು ಅಥವಾ ಸಾಧನಗಳು. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಕರ್ನಾಟಕದಲ್ಲಿ ದೊರಕಿರುವ ರೋಮನ್ ನಾಣ್ಯಗಳು. ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದಲ್ಲಿ ದೊರೆಯುತ್ತಿದ್ದ ಕಾಳುಮೆಣಸು, ಇತರ ಸಂಬಾರ ಪದಾರ್ಥಗಳು, ಪ್ರಶಸ್ತ ಶಿಲೆಗಳು ಮುಂತಾದ ವಿವಿಧ ವಸ್ತುಗಳಿಗೆ ಪಶ್ಚಿಮ ರಾಷ್ಟ್ರಗಳಲ್ಲಿ ತುಂಬ ಬೇಡಿಕೆಯಿದ್ದಿತು. ಆದುದರಿಂದ ರೋಮಿನ ವ್ಯಾಪಾರಿಗಳು ಇಲ್ಲಿಗೆ ಬಂದು, ನಮ್ಮ ಈ ಪದಾರ್ಥಗಳನ್ನು ತಮ್ಮ ರಾಜ್ಯದ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಕೊಟ್ಟು ಕೊಂಡುಕೊಳ್ಳುತ್ತಿದ್ದರು. ನಮ್ಮವರಿಗೆ ಚಿನ್ನದ ನಾಣ್ಯದ ಮೇಲಿನ ವ್ಯಾಮೋಹವಾದರೆ, ರೋಮಿನ ವ್ಯಾಪಾರಿಗಳಿಗೆ ನಮ್ಮಲ್ಲಿ ದೊರಕುವ ವಸ್ತುಗಳ ಮೇಲೆ ವ್ಯಾಮೋಹ. ಇದರಿಂದಾಗಿ ನಮಗೂ ರೋಮ್ ದೇಶಕ್ಕೂ ಶ್ರೀಮಂತವಾದ ವ್ಯಾಪಾರ ಸಂಬಂಧಗಳು ಪ್ರಾರಂಭವಾಗಿ, ವಿಶೇಷವಾಗಿ ಅಭಿವೃದ್ಧಿ ಹೊಂದಿದವು. ಇದನ್ನು ಮುಂದೆ ವಿಶದವಾಗಿ ಚರ್ಚಿಸಲಾಗಿದೆ. ಅಂದರೆ ಕ್ರಿಸ್ತಶಕದ ಆರಂಭದ ಶತಮಾನಗಳಲ್ಲಿ ನಡೆದ ಈ ಉತ್ತಮ ವ್ಯಾಪಾರದ ಬಗೆಗೆ ತಿಳಿಸುವ ಗ್ರಂಥಗಳಾಗಲೀ ಅಥವಾ ಶಾಸನಗಳಾಗಲೀ

ಇದುವರೆಗೆ ದೊರಕಿಲ್ಲ. ಈ ರೋಮನ್ ನಾಣ್ಯಗಳು ಕರ್ನಾಟಕದಲ್ಲಿ ದೊರೆಯದೇ ಹೋಗಿದ್ದರೆ, ಕರ್ನಾಟಕಕ್ಕೂ ರೋಂ ದೇಶಕ್ಕೂ ಇದ್ದ ನೂರಾರು ವರ್ಷಗಳ ವ್ಯಾಪಾರ ಸಂಬಂಧದ ಉಜ್ವಲ ಅಧ್ಯಾಯ ನಮಗೆ ತಿಳಿಯುತ್ತಲೇ ಇರಲಿಲ್ಲ. ಕರ್ನಾಟಕದಲ್ಲಿ ರೋಮನ್ ಚಕ್ರವರ್ತಿಗಳಾದ ಅಗಸ್ಟಸ್ ಮತ್ತು ಟೈಬೀರಿಯಸ್ ಅವರ ನಾಣ್ಯಗಳು ವಿಶೇಷವಾಗಿ ದೊರಕುವುದರಿಂದ ಈ ಕಾಲದಲ್ಲಿ ಕರ್ನಾಟಕಕ್ಕೂ ರೋಂ ದೇಶಕ್ಕೂ ಹೆಚ್ಚಿನ ಪ್ರಮಾಣದ ವ್ಯಾಪಾರಗಳು ನಡೆಯುತ್ತಿದ್ದವು ಎಂದೂ ಗೊತ್ತಾಗುತ್ತದೆ. ಆನಂತರದ ದೊರೆಗಳ ನಾಣ್ಯಗಳು ದೊರಕುವುದು ಸಂಖ್ಯೆಯಲ್ಲಿ ಕಡಿಮೆಯಾಗುತ್ತ ಹೋಗುತ್ತವೆ. ಅಂದರೆ ಸ್ವಲ್ಪ ಕಾಲದ ನಂತರ ವ್ಯಾಪಾರ ಸಂಬಂಧಗಳು ಕ್ಷೀಣಿಸುತ್ತ ಹೋದವು ಎಂಬುದೂ ಗೊತ್ತಾಗುತ್ತದೆ. ಕೊನೆಗೆ ಬೈಜಾಂಟೈನ್ ದೊರೆಗಳ ಕಾಲಕ್ಕೆ ಇನ್ನೂ ಕಡಿಮೆಯಾಗುತ್ತವೆ. ಈ ವಿಷಯಗಳೆಲ್ಲ ಗೊತ್ತಾಗುವುದು ರೋಮನ್ ನಾಣ್ಯಗಳಿಂದ ಮತ್ತು ಅವುಗಳ ಸಂಖ್ಯೆಗಳಿಂದ. ಈ ರೀತಿ ವ್ಯಾಪಾರದ ಸಾಂದ್ರತೆಯನ್ನು ಕೂಡ ನಾಣ್ಯಗಳಿಂದ ತಿಳಿಯಬಹುದಾಗಿದೆ.

ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬಹುದು. ಬಾದಾಮಿ ಚಲುಕ್ಯರ ಶಾಸನಗಳಲ್ಲಿ 'ಅಯ್ಯಾವೊಳೆ ಐನೂರ್ವರು' ಎನ್ನುವ ವ್ಯಾಪಾರಿ ಸಂಘಕ್ಕೆ ಸೇರಿದ ವ್ಯಾಪಾರಿಗಳು ಹೊರದೇಶಗಳಿಗೆ ಹೋಗಿ ವ್ಯಾಪಾರವನ್ನು ಮಾಡುತ್ತಿದ್ದರೆಂದು ಉಲ್ಲೇಖಿತವಾಗಿದೆ. ಆದರೆ ಇವರ ನಾಣ್ಯಗಳು ಹೊರದೇಶಗಳಲ್ಲಿ ದೊರಕಿಲ್ಲವಾದ ಕಾರಣ, ಶಾಸನದ ಮಾಹಿತಿ ಪ್ರಶಸ್ತಿ ರೂಪದಲ್ಲಿಯೇ ಉಳಿದಿದೆ. ಇದನ್ನು ನಾಣ್ಯಗಳು ಖಚಿತಪಡಿಸಿದರೆ, ಶಾಸನದ ಮಾಹಿತಿಗೆ ಬೆಲೆ ಬರುತ್ತದೆ.

ಶಾತವಾಹನರ ಕಾಲದಲ್ಲಿ ಹೊರದೇಶಗಳಿಗೆ ಹೋಗಿ ವ್ಯಾಪಾರ ಮಾಡುವ ಪ್ರವೃತ್ತಿ ಚೆನ್ನಾಗಿ ಬೆಳೆದಿದ್ದಿತೆಂದು ತಿಳಿದುಬಂದಿದೆ. ಶಾತವಾಹನರ ಕೆಲವು ನಾಣ್ಯಗಳ ಮೇಲೆ ಹಡಗಿನ ಚಿತ್ರವಿರುವುದನ್ನು ಗಮನಿಸಬೇಕು. ಈ ನಾಣ್ಯಗಳು ಅವರು ಹಡಗಿನಲ್ಲಿ ಪ್ರಯಾಣಮಾಡಿ ದೂರದೇಶಗಳಿಗೆ ಸಮುದ್ರದ ಮೂಲಕ ಪ್ರಯಾಣ ಮಾಡುತ್ತಿದ್ದರೆಂಬುದನ್ನು ದೃಢೀಕರಿಸುತ್ತದೆ. ಒಟ್ಟಿನಲ್ಲಿ ನಾಣ್ಯಗಳು ಇತಿಹಾಸಕಾರನಿಗೆ ವಿವಿಧ ರೀತಿಯಲ್ಲಿ ಸಹಾಯ ಮಾಡುತ್ತವೆ ಎಂಬುದನ್ನು ಮೇಲಿನ ಉದಾಹರಣೆಗಳು ದೃಢಪಡಿಸುತ್ತವೆ.

ನಾಣ್ಯ ತಯಾರಿಕೆಯ ತಾಂತ್ರಿಕ ವಿಧಾನಗಳು

ನಾಣ್ಯಗಳ ಅಧ್ಯಯನಕ್ಕೆ ಮೊದಲು ಅವುಗಳನ್ನು ಯಾವ ತಾಂತ್ರಿಕತೆಯ ವಿಧಾನಗಳಿಂದ ತಯಾರಿಸುತ್ತಿದ್ದರು ಎಂದು ತಿಳಿಯುವುದು ಆವಶ್ಯಕ. ಇದು ಕೇವಲ ನಾಣ್ಯಗಳ ವಿಷಯದಲ್ಲಿ ಮಾತ್ರವಲ್ಲದೆ, ಆ ಕಾಲದ ಲೋಹಗಾರಿಕೆ ಹಾಗೂ ರಾಸಾಯನಿಕ

ವಿಧಾನಗಳ ಬಗೆಗೂ ಬೆಳಕು ಚೆಲ್ಲುತ್ತದೆ. ಅಂದರೆ ನಾಣ್ಯಗಳು ನಾಗರಿಕತೆಯ ಈ ಅಂಶವನ್ನೂ ಪ್ರತಿಬಿಂಬಿಸುತ್ತವೆ. ದುರದೃಷ್ಟವಶಾತ್ ಇದನ್ನು ಅಧ್ಯಯನ ಮಾಡಲು ತಾಂತ್ರಿಕ ಗ್ರಂಥಗಳು ದೊರಕದೇ ಇರುವುದು ದೊಡ್ಡ ನ್ಯೂನತೆಯಾಗಿದೆ. ಪ್ರಾಚೀನ ಭಾರತದಲ್ಲಿ ರೂಪಸೂತ್ರ ಅಥವಾ ರೂಪಶಾಸ್ತ್ರ ಎಂಬ ಪ್ರಕಾರಕ್ಕೆ ಸೇರಿದ ಗ್ರಂಥಗಳು ಇದ್ದವೆಂದು ತಿಳಿದುಬಂದರೂ, ಅಂತಹ ತಾಳೆಗರಿ ಗ್ರಂಥ ನಮಗೆ ಇದುವರೆಗೆ ಲಬ್ಧವಾಗಿಲ್ಲ. ಆದುದರಿಂದ ದೊರಕಿರುವ ಪ್ರಾಚೀನ ನಾಣ್ಯಗಳನ್ನು ವಿಶ್ಲೇಷಿಸಿ ಅವು ಯಾವ ತಾಂತ್ರಿಕತೆಯಿಂದ ತಯಾರಾದವು ಎಂದು ತಿಳಿಯಬೇಕಾಗಿದೆ. ಈ ವಿಧಾನವನ್ನು ಅನುಸರಿಸಿ ಭಾರತೀಯ ನಾಣ್ಯಗಳ ತಯಾರಿಕೆಯ ತಾಂತ್ರಿಕತೆಯನ್ನು ಈ ಕೆಳಗೆ ಕಂಡಂತೆ ಐದು ವಿಭಾಗಗಳಾಗಿ ವಿಂಗಡಿಸಬಹುದು. ಇದು ಕಾಲಕ್ರಮ ಹಾಗೂ ತಾಂತ್ರಿಕತೆಯ ಬೆಳವಣಿಗೆಯನ್ನು ತಿಳಿಯಲೂ ಸಹಾಯಕವಾಗುತ್ತದೆ.

ಸಣ್ಣ ಹನಿ ವಿಧಾನ (ಡ್ರಾಪ್‌ಲೆಟ್)

ಇದು ಅತ್ಯಂತ ಪ್ರಾಚೀನ ನಾಣ್ಯ ತಯಾರಿಕಾ ವಿಧಾನವೆಂದು ಪರಿಗಣಿಸಲ್ಪಟ್ಟಿದೆ. ಒಂದು ಸಣ್ಣ ಮೂಸೆಯಲ್ಲಿ ಲೋಹವನ್ನು ಬೆಂಕಿಯ ಮೇಲಿಟ್ಟು ಕರಗಿಸುವುದು. ಅದು ದ್ರವರೂಪಕ್ಕೆ ಬಂದನಂತರ ಒಂದೇ ಒಂದು ಹನಿಯ ಆ ಲೋಹ ದ್ರವವನ್ನು ಒಂದು ಗಟ್ಟಿಯಾದ ಆದರೆ ನುಣುಪಾದ ಕಲ್ಲಿನ ಮೇಲೆ ಬೀಳುವಂತೆ ಹಾಕುವುದು. ಕೂಡಲೆ ನಾಣ್ಯದ ವಿನ್ಯಾಸ ಅಥವಾ ಚಿಹ್ನೆಯಿರುವ ಮೊಹರಿನಿಂದ ಅದನ್ನು ಒತ್ತುವುದು. ಇದರಿಂದ ವೃತ್ತಾಕಾರದ ಅಥವಾ ವಿವಿಧ ಆಕಾರದ ಹಾಗೂ ಒರಟಾದ ನಾಣ್ಯ ತಯಾರಾಗುತ್ತದೆ. ಕೆಲವು ಸಾರಿ ಜಾಸ್ತಿ ಬಲ ಪ್ರಯೋಗಮಾಡಿ ಒತ್ತಿದಾಗ ನಾಣ್ಯವು ಬಟ್ಟಲಿನ ಆಕಾರವನ್ನು ಪಡೆಯುವುದೂ ಉಂಟು. ಇದರ ಹಿಮ್ಮುಖದಲ್ಲಿ ಯಾವ ಚಿಹ್ನೆಯೂ ಇರುವುದಿಲ್ಲ. ಇನ್ನು ಕೆಲವು ಸಾರಿ ಲೋಹದ್ರವವನ್ನು ಸುಮಾರು ಒಂದು ಅಂಗುಲ ಉದ್ದವಿರುವ ಹಾಗೆ ಸುರಿದಾಗ, ವೃತ್ತಾಕಾರದ ನಾಣ್ಯದ ಬದಲು ಉದ್ದನೆಯ ಆಕಾರವನ್ನು ಅದು ಪಡೆಯುತ್ತದೆ. ಅದರ ಮೇಲೆ ಮೊಹರನ್ನು ಒತ್ತಿದಾಗ, ಆ ಉದ್ದನೆಯ ಚೂರು ಸ್ವಲ್ಪ ಬಾಗುತ್ತದೆ. ಈ ರೀತಿಯ ನಾಣ್ಯಗಳು ತಕ್ಷ ಶಿಲೆಯಲ್ಲಿ ನಡೆದ ಉತ್ಖನನದಲ್ಲಿ ದೊರಕಿವೆ. ಇವುಗಳನ್ನು 'ಬೆಂಟ್ ಬಾರ್ ನಾಣ್ಯ' ಎಂದು ನಾಣ್ಯಶಾಸ್ತ್ರಜ್ಞರು ಕರೆದಿದ್ದಾರೆ. ಇವುಗಳ ಕಾಲ ಸುಮಾರು ಕ್ರಿ.ಪೂ. ನಾಲ್ಕು - ಐದನೆಯ ಶತಮಾನ. ಭಾರತದಲ್ಲಿ ದೊರಕಿರುವ ನಾಣ್ಯಗಳಲ್ಲಿ ಇವೇ ಅತ್ಯಂತ ಪ್ರಾಚೀನವಾದದ್ದು ಎಂದು ಪರಿಗಣಿತವಾಗಿವೆ.

ಪಂಚ್ ಮಾಡುವ ವಿಧಾನ

ನಾಣ್ಯಗಳನ್ನು ಪಂಚ್ ಮಾಡಿ ಅವುಗಳ ಮೇಲೆ ಚಿಹ್ನೆಗಳು ಬೀಳುವಂತೆ ಮಾಡುವುದೇ ಈ ವಿಧಾನದ ಅತ್ಯಂತ ಮುಖ್ಯ ಲಕ್ಷಣ. ಆದುದರಿಂದ ಇವುಗಳನ್ನು

'ಪಂಚ್ ಮಾರ್ಕ್' ನಾಣ್ಯಗಳೆಂದು ನಾಣ್ಯಶಾಸ್ತ್ರಜ್ಞರು ಗುರುತಿಸಿದ್ದಾರೆ. ಈ ತಾಂತ್ರಿಕ ವಿಧಾನವನ್ನು ಬಳಸುವುದರಿಂದ ಈ ನಾಣ್ಯಗಳಿಗೆ ಆ ಹೆಸರನ್ನು ಕೊಟ್ಟಿದ್ದಾರೆ. ಇವುಗಳನ್ನು ಮುದ್ರಾಂಕಿತ ನಾಣ್ಯಗಳೆಂದೂ ಕರೆಯುವುದುಂಟು. ಆದರೆ ಸಮರ್ಪಕವಾದ ಅರ್ಥವನ್ನು ತಿಳಿಸುವ ಉದ್ದೇಶದಿಂದ ಪಂಚ್ ಎಂಬ ಪದವನ್ನೇ ಉಪಯೋಗಿಸಲಾಗಿದೆ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಕೂಟರೂಪಗಳನ್ನು (ಖೋಟ ನಾಣ್ಯ) ತಯಾರಿಸುವುದಕ್ಕಾಗಿ ಯಾವ ತಾಂತ್ರಿಕ ವಿಧಾನವನ್ನು ಅನುಸರಿಸುತ್ತಿದ್ದರು ಎಂದು ತಿಳಿಸುವ ಉದ್ದೇಶದಿಂದ ಈ ತಾಂತ್ರಿಕತೆಯನ್ನು ವಿವರಿಸಿದ್ದಾನೆ. ಇದೇ ತಾಂತ್ರಿಕತೆಯೇ ನೈಜ ನಾಣ್ಯಗಳನ್ನು ಟಂಕಿಸಲು ಬಳಸುತ್ತಿದ್ದರೆಂಬುದು ಸ್ಪಷ್ಟ. ಬೇಕಾದ ಲೋಹಗಳನ್ನು ಪುಡಿಮಾಡಿ ಅದನ್ನು ಮೂಸೆ (ಮೂಷ) ಗಳಲ್ಲಿ ಬೆಂಕಿಯ ಮೇಲಿಟ್ಟು ಕರಗಿಸುತ್ತಿದ್ದರು (ಅಂಗಾರ). ಇದಕ್ಕಾಗಿ ತಿದಿಯನ್ನು (ಭಸ್ತ್ರ) ಉಪಯೋಗಿಸುತ್ತಿದ್ದರು. ಲೋಹವು ಮೂಸೆಯಲ್ಲಿ ಕರಗಿ ದ್ರವರೂಪಕ್ಕೆ ಬಂದಾಗ ಅದನ್ನು ಶುದ್ಧಗೊಳಿಸಲು ಕ್ಷಾರಗಳನ್ನು ಸೇರಿಸುತ್ತಿದ್ದರು. ಆನಂತರ ನುಣುಪಾದ ಕಲ್ಲಿನ ಮೇಲೆ ಈ ದ್ರವವನ್ನು ಹುಯ್ಯುತ್ತಿದ್ದರು. ಅದು ಅರ್ಧ ಗಟ್ಟಿಯಾದಾಗ ಅದನ್ನು ಸುತ್ತಿಗೆಯಿಂದ (ಮುಷ್ಟಿಕಾ) ತಟ್ಟಿ ತಗಡಿನ ರೂಪಕ್ಕೆ ತರುತ್ತಿದ್ದರು. ಆಮೇಲೆ ತಗಡನ್ನು ತೂಕಕ್ಕೆ ತಕ್ಕಂತೆ ಕತ್ತರಿಸುತ್ತಿದ್ದರು (ಸಂದಂಶ). ಕತ್ತರಿಸುವಾಗ ಸ್ವಲ್ಪ ತೂಕ ಜಾಸ್ತಿಯಾದರೆ, ಮತ್ತೆ ಕತ್ತರಿಸುತ್ತಿದ್ದರು. ಹೀಗಾಗಿ ಸರಿಯಾದ ತೂಕದ ಚೂರು ತಯಾರಾಗುವವರೆಗೆ ಈ ರೀತಿ ಮಾಡಲಾಗುತ್ತಿದ್ದಿತು. ಹೀಗೆ ಮಾಡುವಾಗ ಇದು ನಿರ್ದಿಷ್ಟವಾದ ಆಕಾರವನ್ನು ಪಡೆಯುವುದು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಈ ರೀತಿಯ ನಾಣ್ಯಗಳು ವಿವಿಧ ರೂಪಗಳನ್ನು ಪಡೆಯುವುದು ಬಹಳ ಸಾಮಾನ್ಯವಾಗಿತ್ತು. ಇದೇ ರೂಪವಿರಬೇಕೆಂಬ ನಿಯಮವೂ ಇರಲಿಲ್ಲ. ಏಕೆಂದರೆ ಪ್ರಾಧಾನ್ಯ ತೂಕಕ್ಕೇ ನೀಡಲಾಗಿತ್ತು. ಈ ರೀತಿ ತೂಕಕ್ಕೆ ಅನುಗುಣವಾಗಿ ಲೋಹದ ಚೂರುಗಳನ್ನು ತಯಾರಿಸಿಕೊಂಡ ನಂತರ ಈ ಒಂದೊಂದೇ ಚೂರನ್ನು ಬಡಿಗಲ್ಲಿನ (ಅಧಿಕರಣಿ) ಮೇಲೆ ಇಟ್ಟು ಚಿಹ್ನೆಯನ್ನು ಹೊಂದಿದ ಮುದ್ರೆಯಿಂದ (ಬಿಂಬ ಟಂಕ) ಮೆದುವಾಗಿ ಸುತ್ತಿಗೆಯಿಂದ ಬಡಿಯುತ್ತಿದ್ದರು. ಈ ತಗಡಿನ ಚೂರಿನ ಮೇಲೆ ಮುದ್ರೆಯಲ್ಲಿದ್ದ ಚಿಹ್ನೆ ಬೀಳುತ್ತಿತ್ತು. ಇದರಿಂದ ಒಂದು ಚಿಹ್ನೆಯ ನಾಣ್ಯ ತಯಾರಾಗುತ್ತಿತ್ತು. ಐದು ಚಿಹ್ನೆಗಳು ನಾಣ್ಯದಲ್ಲಿರಬೇಕಾದರೆ ಇದೇ ರೀತಿ ಐದು ಸಾರಿ ಮಾಡಬೇಕಾಗುತ್ತಿದ್ದಿತು. ಇದರಿಂದ ಮುಮ್ಮುಖವುಳ್ಳ ನಾಣ್ಯಗಳು ತಯಾರಾಗುತ್ತಿದ್ದವು. ಇವುಗಳ ಹಿಮ್ಮುಖಗಳು ಖಾಲಿಯಾಗಿರುತ್ತಿದ್ದವು. ಈ ಚಿಹ್ನೆಗಳ ಅರ್ಥವನ್ನು ಮುಂದೆ ವಿವರಿಸಲಾಗಿದೆ. ಈ ರೀತಿ ಪಂಚ್ ಚಿಹ್ನೆಯ ನಾಣ್ಯಗಳನ್ನು ತಯಾರಿಸುತ್ತಿದ್ದರು. ಈ ರೀತಿಯ ನಾಣ್ಯಗಳನ್ನೇ ಕಾರ್ಷಾಪಣ ಎಂದು ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಕರೆಯಲಾಗಿದೆ. ಈ ರೀತಿಯ ನಾಣ್ಯಗಳು ಕರ್ನಾಟಕವೂ ಸೇರಿದಂತೆ ಪ್ರಾಚೀನ ಭಾರತದ ಎಲ್ಲೆಡೆ ಬಳಕೆಯಲ್ಲಿದ್ದವು. ಈ ರೀತಿಯ ನಾಣ್ಯಗಳು ಚಿನ್ನದಲ್ಲಿ ದೊರಕಿಲ್ಲ. ಕೇವಲ ಬೆಳ್ಳಿ ಮತ್ತು ತಾಮ್ರದ ಪಂಚ್ ಚಿಹ್ನೆಯ ನಾಣ್ಯಗಳು ಈವರೆವಿಗೆ ದೊರಕಿವೆ. ಚಿನ್ನವು ತೀರ

ಮೆದುವಾದುದರಿಂದ ಈ ತಾಂತ್ರಿಕತೆಗೆ ಹೊಂದಿಕೊಳ್ಳದೇ ಹೋಗಿದ್ದುದರಿಂದ, ಚಿನ್ನದ ಪಂಚ್ ಮಾರ್ಕ್ ನಾಣ್ಯಗಳನ್ನು ವಿಶೇಷವಾಗಿ ಪ್ರಾಚೀನ ಕಾಲದಲ್ಲಿ ತಯಾರಿಸಲಿಲ್ಲವೆಂದು ಊಹೆ ಮಾಡಲಾಗಿದೆ. ಆದರೆ ಈ ವಿಷಯದಲ್ಲಿ ಖಚಿತತೆಯಿಲ್ಲ. ಆದರೆ ಬೆಳ್ಳಿಯ ಪಂಚ್ ಚಿಹ್ನೆಯ ನಾಣ್ಯಗಳೇ ಭಾರತಾದ್ಯಂತ ವಿಶೇಷವಾಗಿ ದೊರಕಿವೆ ಎಂಬುದು ಮಾತ್ರ ಗಮನಾರ್ಹ ಸಂಗತಿ.

ಎರಕ ಹುಯ್ಯುವ ವಿಧಾನ

ಒಂದೊಂದೇ ನಾಣ್ಯವನ್ನು ಪಂಚ್ ಮಾರ್ಕ್ ವಿಧಾನದಲ್ಲಿ ತಯಾರು ಮಾಡುವುದು ತುಂಬ ನಿಧಾನವಾದ ಕೆಲಸ; ಸಾಕಷ್ಟು ಸಮಯವನ್ನು ಹಿಡಿಯುವ ಕೆಲಸ. ಕೆಲವೇ ನಾಣ್ಯಗಳು ಬೇಕಾದಾಗ ಈ ವಿಧಾನವನ್ನು ಅನುಸರಿಸಬಹುದು. ಕಾಲಕ್ರಮದಲ್ಲಿ ನಾಣ್ಯದ ಬಳಕೆ ಹೆಚ್ಚಾಗಿ, ಶೀಘ್ರಗತಿಯಲ್ಲಿ ನಾಣ್ಯಗಳನ್ನು ತಯಾರಿಸುವ ಆವಶ್ಯಕತೆ ತಲೆದೋರಿತು. ಆಗ ಹಿಂದಿನ ವಿಧಾನಗಳು ಅಸಮರ್ಪಕವೆನಿಸಿ, ಹೊಸ ತಾಂತ್ರಿಕ ವಿಧಾನವನ್ನು ಅನುಸರಿಸಲಾಯಿತು. ಈ ವಿಧಾನವೇ ಎರಕಹುಯ್ಯುವ ವಿಧಾನ. ಆರಂಭದಲ್ಲಿ ಕಲ್ಲಿನ ಇಲ್ಲವೇ ಸುಟ್ಟ ಮಣ್ಣಿನಿಂದ ಅಚ್ಚನ್ನು ತಯಾರಿಸಲಾಯಿತು. ಒಂದು ಭಾಗದಲ್ಲಿ ಮುಮ್ಮುಖದ ವಿನ್ಯಾಸ, ಮತ್ತೊಂದು ಭಾಗದಲ್ಲಿ ಹಿಮ್ಮುಖದ ವಿನ್ಯಾಸಗಳನ್ನು ಕೊರೆದು, ಅವುಗಳೆರಡನ್ನೂ ಒಂದರಮೇಲೆ ಒಂದರಂತೆ ಇಟ್ಟು, ಒಂದು ರಂಧ್ರವನ್ನು ಕೊರೆಯಲಾಯಿತು. ಈ ರಂಧ್ರದ ಮೂಲಕ ಕಾದ ಲೋಹದ ದ್ರವವನ್ನು ಸುರಿದಾಗ, ಅದು ಈ ಎರಡು ಅಚ್ಚುಗಳ ಮಧ್ಯೆ ಸೇರಿ ಪ್ರಸರಿಸಿ, ಎರಡು ಮುಖಗಳುಳ್ಳ ನಾಣ್ಯವಾಗುತ್ತಿತ್ತು. ಆರಿದ ನಂತರ ಇದನ್ನು ಅಚ್ಚುಗಳಿಂದ ಬೇರ್ಪಡಿಸಿದರೆ ನಾಣ್ಯವು ದೊರಕುತ್ತಿದ್ದಿತು. ಈ ರೀತಿ ಹತ್ತಾರು ಅಥವಾ ನೂರಾರು ಅಚ್ಚುಗಳನ್ನು ಬಳಸಿ ಒಂದೇ ಸಾರಿಗೆ ಬಹುಸಂಖ್ಯೆಯ ನಾಣ್ಯಗಳನ್ನು ಟಂಕಿಸಬಹುದಾಗಿದ್ದಿತು. ಆದುದರಿಂದ ಪಂಚ್ ಮಾರ್ಕ್ ಪದ್ಧತಿಯನ್ನು ಕೈಬಿಟ್ಟು ಈ ವಿಧಾನವನ್ನು ಅನುಸರಿಸಲು ಅಂದಿನ ರಾಜವಂಶಗಳು ಪ್ರಾರಂಭಿಸಿದವು. ಇದೇ ವಿಧಾನದಲ್ಲಿ ಸ್ವಲ್ಪ ಸಮಯದ ನಂತರ ಸುಧಾರಣೆಯನ್ನು ಮಾಡಲಾಯಿತು. ಒಂದೊಂದೇ ಅಚ್ಚು ಉಪಯೋಗಿಸುವ ಬದಲು ಹತ್ತಾರು ಅಚ್ಚುಗಳನ್ನು ಒಟ್ಟಿಗೆ ಸೇರಿಸುವ ವಿಧಾನವು ಬಳಕೆಗೆ ಬಂದಿತು (ಬೆಲ್ಲದಚ್ಚಿನ ರೀತಿಯಲ್ಲಿ). ಒಂದು ಚೌಕವಾದ ಅಥವಾ ಆಯತಾಕಾರದ ಕಲ್ಲಿನ ಅಥವಾ ಲೋಹದ ಇಲ್ಲವೇ ಜೇಡಿಮಣ್ಣಿನ ಮೇಲುಗಡೆ ನಾಣ್ಯದ ಮುಮ್ಮುಖ; ಇದೇ ರೀತಿಯ ಇನ್ನೊಂದರಲ್ಲಿ ಹಿಮ್ಮುಖದ ವಿನ್ಯಾಸಗಳನ್ನು ಕೊರೆಯಲಾಯಿತು. ಒಂದೊಂದು ನಾಣ್ಯದ ವಿನ್ಯಾಸವನ್ನೂ ರಂಧ್ರಗಳ ಮೂಲಕ ಸೇರಿಸಲಾಯಿತು. ಈ ಕಲ್ಲಿನ ಅಚ್ಚಿನ ಮಧ್ಯದಲ್ಲಿ ಒಂದು ರಂಧ್ರವನ್ನು ಮಾಡಿ, ಒಂದರ ಮೇಲೊಂದರಂತೆ ಅವುಗಳನ್ನು ಇಡಲಾಯಿತು. ಇವೆಲ್ಲವನ್ನೂ ಒಂದು ದೊಡ್ಡ ಲೋಹದ ಪಾತ್ರೆಯಲ್ಲಿಟ್ಟು ಕೆಳಗಿನಿಂದ ಉರಿಹಾಕಿ ಮೇಲಿನ ರಂಧ್ರದಿಂದ ಕಾದಿರುವ ಲೋಹದ ದ್ರವವನ್ನು

ಸುರಿಯಲಾಯಿತು. ಈ ದ್ರವವು ಮೇಲಿನ ಅಚ್ಚಿನಿಂದ ಕೆಳಗಿನ ಅಚ್ಚಿನವರೆಗೆ ಹರಿದು, ಪ್ರತಿಯೊಂದು ಅಚ್ಚಿನಲ್ಲಿರುವ ಹತ್ತಾರು ನಾಣ್ಯ ವಿನ್ಯಾಸಗಳಿಗೆ ಪ್ರವಹಿಸುತ್ತಿತ್ತು. ಅನಂತರ ಉರಿಯನ್ನು ನಂದಿಸಿ, ಇದು ಆರಿದ ನಂತರ ಒಂದೊಂದೇ ಅಚ್ಚನ್ನು ಈಚೆಗೆ ತೆಗೆದು, ಅದರಲ್ಲಿದ್ದ ಹತ್ತಾರು ನಾಣ್ಯಗಳನ್ನು ಹೊರತೆಗೆಯುತ್ತಿದ್ದರು. ಒಂದು ಸಾರಿಗೆ ನೂರು ಇಡ್ಡಲಿಗಳನ್ನು ಮಾಡುವಂತೆ, ಈ ವಿಧಾನದಲ್ಲಿ ನೂರಾರು ನಾಣ್ಯಗಳನ್ನು ಒಂದೇ ಸಾರಿಗೆ ಮಾಡುವ ಅವಕಾಶವಿದ್ದಿತು. ಆದುದರಿಂದ ಈ ವಿಧಾನ ಬಹಳ ಜನಾನುರಾಗಿಯಾಗಿ ಅನೇಕ ರಾಜವಂಶಗಳು ಈ ವಿಧಾನವನ್ನು ಅನುಸರಿಸಲು ಆರಂಭಿಸಿದವು. ಚಾಲುಕ್ಯ, ಗಂಗ, ರಾಷ್ಟ್ರಕೂಟ ಮುಂತಾದ ರಾಜವಂಶಗಳ ನಾಣ್ಯಗಳು ಈ ರೀತಿಯ ವಿಧಾನದಿಂದ ತಯಾರಾದವುಗಳಾಗಿವೆ. ಅತ್ರಂಜಿಖೇರ, ಸಾಂಚಿ, ನಲಂದ, ಕಾಶಿ ಮುಂತಾದ ಕಡೆಗಳಲ್ಲಿ ನಡೆಸಿದ ಉತ್ಖನನಗಳಲ್ಲಿ ನಾಣ್ಯಗಳನ್ನು ತಯಾರಿಸಲು ಬಳಸಲಾದ ಸುಟ್ಟ ಮಣ್ಣಿನ ಅಚ್ಚುಗಳು ಹೇರಳವಾಗಿ ದೊರಕಿವೆ. ಶಾತವಾಹನ ದೊರೆ ವಾಸಿಷ್ಠೀಪುತ್ರ ಪುಳುಮಾವಿಗೆ ಸೇರಿದ ನಾಣ್ಯದ ಅಚ್ಚುಗಳು ಕಾಂಚಿಯಲ್ಲಿ ನಡೆದ ಉತ್ಖನನದಲ್ಲಿ ದೊರಕಿವೆ. ಬನವಾಸಿಯಲ್ಲಿ ಹಾಗೂ ತಲಕಾಡಿನಲ್ಲಿ ದೊರಕಿರುವ ಅಚ್ಚುಗಳಿಂದ ರೋಮನ್ ಚಕ್ರವರ್ತಿ ಟೈಬೀರಿಯಸ್‌ನ ನಾಣ್ಯವನ್ನು ತಯಾರಿಸಲು ಬಳಸಲಾಗುತ್ತಿತ್ತು. ಕನ್ನಡ ಶಾಸನಗಳಲ್ಲಿ ಅಚ್ಚು ಎನ್ನುವ ಪದ ನಾಣ್ಯವನ್ನು ತಯಾರು ಮಾಡುವ ಸಾಧನ ಎನ್ನುವ ಅರ್ಥದಲ್ಲಿ ಬಳಸಲಾಗಿದೆ. ಇದರಿಂದ ತಯಾರಾದ ನಾಣ್ಯಗಳನ್ನು ಅಚ್ಚು ಎಂದು ಕರೆಯಲು ಆರಂಭಿಸಿದರು. ಹೇಮಾಚ್ಚು, ನವಿಲಚ್ಚು ಮುಂತಾದ ಪದಗಳು ಇದನ್ನೇ ಸೂಚಿಸುತ್ತವೆ. ಕರ್ನಾಟಕದಲ್ಲಿ ಈ ವಿಧಾನದಿಂದ ನಾಣ್ಯಗಳನ್ನು ತಯಾರಿಸುವ ಪರಂಪರೆ ಕ್ರಿ.ಪೂ. ಎರಡನೆಯ ಶತಮಾನರಿಂದ ಕ್ರಿ.ಶ. ಏಳನೆಯ ಶತಮಾನದವರೆಗೆ ನಡೆದುಬಂದಿತ್ತು.

ಉಬ್ಬು ವಿನ್ಯಾಸದ ವಿಧಾನ

ಈ ವಿಧಾನದಲ್ಲಿ ನಾಣ್ಯದ ಮುಮ್ಮುಖದ ವಿನ್ಯಾಸದ ಲೋಹದ ಪ್ರತಿಕೃತಿಯನ್ನು ಮೊದಲು ತಯಾರಿಸಿ, ನಂತರ ಅದನ್ನು ತೆಳ್ಳಗಿನ ಮೆದುವಾದ ಚಿನ್ನದ ತಗಡಿನ ಮೇಲೆ ಗಟ್ಟಿಯಾಗಿ ಒತ್ತಲಾಗುತ್ತಿತ್ತು. ಬೇಕೆನಿಸಿದರೆ ಮರದ ಸುತ್ತಿಗೆಯಿಂದ ಅದರ ಮೇಲೆ ಮೃದುವಾಗಿ ಹೊಡೆಯಲಾಗುತ್ತಿತ್ತು. ಇದೇ ರೀತಿ ಹಿಮ್ಮುಖದ ವಿನ್ಯಾಸವನ್ನೂ ತಯಾರಿಸಿ, ಈ ಎರಡನ್ನೂ ಸೇರಿಸಲಾಗುತ್ತಿತ್ತು. ಇದರಿಂದ ಎರಡು ಮುಖಗಳುಳ್ಳ ನಾಣ್ಯಗಳು ತಯಾರಾಗುತ್ತಿದ್ದವು. ಈ ರೀತಿಯ ನಾಣ್ಯಗಳನ್ನು ದಕ್ಷಿಣ ಕೋಸಲ, ವಿದರ್ಭ ಮುಂತಾದ ಕಡೆಗಳಲ್ಲಿ ಕ್ರಿ.ಶ. ಆರನೆಯ ಶತಮಾನದಲ್ಲಿ ಟಂಕಿಸಲಾಗುತ್ತಿತ್ತು. ಶರಭಪುರೀಯ ವಂಶದ ರಾಜರುಗಳಾದ ಮಹೇಂದ್ರಾದಿತ್ಯ, ಕ್ರಮಾದಿತ್ಯ ಈ ವಿಧಾನವನ್ನು ಅನುಸರಿಸಿ ನಾಣ್ಯಗಳನ್ನು ತಯಾರಿಸಿದ್ದರು. ನಳವಂಶದ ದೊರೆಗಳಾದ ವರಹರಾಜ, ಭವದತ್ತರಾಜ, ನಂದನರಾಜ ಮುಂತಾದವರ ನಾಣ್ಯಗಳೂ ಈ ತಾಂತ್ರಿಕ ವಿಧಾನದಿಂದ ತಯಾರಾದವುಗಳಾಗಿವೆ.

ಈ ಪದ್ಧತಿ ಅಷ್ಟೇನೂ ಜನಾನುರಾಗ್ಗಿಯಾಗಲಿಲ್ಲ. ಕರ್ನಾಟಕದಲ್ಲಿ ಈ ವಿಧಾನವನ್ನು ಯಾವ ರಾಜವಂಶಗಳೂ ಅನುಸರಿಸಲಿಲ್ಲ.

ದ್ವಿಮುದ್ರಾ ವಿಧಾನ

ಇದೇ ಅತ್ಯಂತ ಮುಂದುವರಿದ ವಿಧಾನವೆಂದು ಪರಿಗಣಿಸಬಹುದು. ಇದರಲ್ಲಿ ನಾಣ್ಯದ ಮುಮ್ಮುಖದ ವಿನ್ಯಾಸವನ್ನು, ಪರಿಶ್ರಮ ಹೊಂದಿದ ಅಕ್ಕಸಾಲಿಗಳಿಂದ ತಯಾರಿಸುವುದು ಮೊದಲನೆಯ ಕೆಲಸ. ಇದೇ ರೀತಿ ಹಿಮ್ಮುಖ ನಾಣ್ಯದ ವಿನ್ಯಾಸವನ್ನು ನಂತರ ತಯಾರಿಸಲಾಗುವುದು. ಇವುಗಳನ್ನು ಮುದ್ರೆ ಎಂದು ಕರೆಯಬಹುದು. ಈ ಮುದ್ರೆಗಳನ್ನು ಕಬ್ಬಿಣ ಅಥವಾ ಉಕ್ಕಿನಿಂದ ತಯಾರಿಸಲಾಗುವುದು. ಮುಮ್ಮುಖದ ಮುದ್ರೆಯನ್ನು ಕೆಳಗೆ ಇಡಲಾದ ಬಡಿಗಲ್ಲಿಗೆ ಸೇರಿಸಬೇಕು. ಅಂದರೆ ಮುದ್ರೆಯು ಸರಿಯಾಗಿ ಕುಳಿತುಕೊಳ್ಳುವಂತೆ, ಆದರೆ ಬೇಕಾದಾಗ ಬದಲಾಯಿಸುವಂತೆ, ಅದರಲ್ಲಿ ಅಳವಡಿಸಬೇಕು. ಇದೇ ರೀತಿ ಹಿಮ್ಮುಖದ ಮುದ್ರೆಯನ್ನು ಕೈದಂಡ ಅಥವಾ ಕಾವಿನಲ್ಲಿ ನಾಣ್ಯದ ವಿನ್ಯಾಸ ಕೆಳಗೆ ಕಾಣುವಂತೆ ಅಳವಡಿಸಬೇಕು. ಯಂತ್ರವನ್ನು ಕೈಯಿಂದ ಚಾಲನೆ ಮಾಡಿದಾಗ, ಮೇಲಿನ ಮುದ್ರೆಯು ಕೆಳಗಿನ ಮುದ್ರೆಯನ್ನು ಮೃದುವಾಗಿ ತಟ್ಟುವಂತೆ ಇರಬೇಕು. ಇನ್ನೊಂದು ಕಡೆ ನಾಣ್ಯಗಳ ತೂಕ, ಆಕಾರ ಮತ್ತು ದಪ್ಪಕ್ಕೆ ಅನುಸಾರವಾಗಿ ಲೋಹದ ಖಾಲಿ ಚೂರುಗಳನ್ನು ತಯಾರು ಮಾಡಿ ಇಟ್ಟುಕೊಂಡಿರಬೇಕು. ಎರಕ ಹುಯ್ಯುವ ವಿಧಾನವನ್ನು ಅನುಸರಿಸಿ, ಈ ರೀತಿಯ ಚೂರುಗಳನ್ನು ತಯಾರಿಸಿ ಇಟ್ಟುಕೊಂಡಿದ್ದು, ಅವುಗಳನ್ನು ಮಂದ ಉರಿಯಲ್ಲಿ ಕಾಯಿಸಬೇಕು. ಈ ರೀತಿ ಕಾಯಿಸಿದ ಲೋಹದ ಚೂರನ್ನು ಬಡಿಗಲ್ಲಿನ ಮೇಲೆ ಇಟ್ಟು ಕೈಯಿಂದ ಚಾಲನೆ ಮಾಡಬೇಕು. ಈ ಲೋಹದ ಚೂರು ಬಿಸಿಯಾಗಿರುವುದರಿಂದ, ಮೇಲಿನ ಮುದ್ರೆ ಮತ್ತು ಕೆಳಗಿನ ಮುದ್ರೆಗಳು ಒಂದಕ್ಕೊಂದು ತಟ್ಟುವುದರಿಂದ, ಕೊರೆಯಲಾಗಿದ್ದ ವಿನ್ಯಾಸಗಳು ಈ ಚೂರುಗಳ ಮೇಲೆ ಏಕಕಾಲದಲ್ಲಿ ಒತ್ತಲ್ಪಡುತ್ತವೆ. ಅದರಿಂದ ಮುಮ್ಮುಖ ಮತ್ತು ಹಿಮ್ಮುಖದ ನಾಣ್ಯವು ತಯಾರಾಗುತ್ತದೆ. ನಾಣ್ಯದಲ್ಲಿರುವ ಎಲ್ಲ ಚಿಹ್ನೆಗಳೂ ಏಕಕಾಲದಲ್ಲಿ ನಾಣ್ಯದ ಮೇಲೆ ಅಚ್ಚಾಗುತ್ತವೆ. ಇದರಿಂದ ನಾಣ್ಯಗಳನ್ನು ಶೀಘ್ರ ವೇಗದಲ್ಲಿ ತಯಾರಿಸಲು ಅನುಕೂಲವಾಗುತ್ತದೆ. ಪ್ರಾಚೀನ ಕಾಲದಲ್ಲಿ ನಾಣ್ಯಗಳನ್ನು ತಯಾರಿಸುವಾಗ ಈ ಮುದ್ರೆಗಳು ಅಜಾಗರೂಕತೆಯಿಂದ ಆಚೆ - ಈಚೆ ಹೊರಳುತ್ತಿದ್ದುದರಿಂದ ಅನೇಕ ನಾಣ್ಯಗಳ ಮೇಲೆ ಪೂರ್ಣ ವಿವರಗಳು ದೊರೆಯದೆ ಹೋಗುವುದು ಸಾಮಾನ್ಯವಾದ ಸಂಗತಿ. ತಾಮ್ರದ ನಾಣ್ಯಗಳಲ್ಲಿ ಇದು ಹೆಚ್ಚಾಗಿ ಕಾಣಬರುತ್ತದೆ. ಕರ್ನಾಟಕದಲ್ಲಿ ಹೊಯ್ಸಳ, ಸೇವುಣ, ವಿಜಯನಗರ, ನಾಯಕರು ಮುಂತಾದವರ ನಾಣ್ಯಗಳು ಈ ವಿಧಾನದಿಂದ ತಯಾರಾದವುಗಳಾಗಿವೆ.

ಕರ್ನಾಟಕದ ಕೆಲವು ಶಾಸನಗಳು ಈ ವಿಧಾನದ ಬಗೆಗೆ ಬೆಳಕು ಚೆಲ್ಲುತ್ತವೆ. ಶಾಸನಗಳಲ್ಲಿ ಉಂಡಿಗೆ (ರಾಜನ ಮುದ್ರೆ), ಕಮ್ಮಟದ ಆಣೆ, ಅಚ್ಚಿನಮೊಳೆ, ಅಚ್ಚಿನ

ಕಾಣೆ, ಆಣೆ, ಅಚ್ಚು ಮುಂತಾದ ಪದಗಳು ನಾಣ್ಯ ಟಂಕನ ಸಂದರ್ಭದಲ್ಲಿ ಕಾಣಬರುತ್ತವೆ. ಇವುಗಳ ಖಚಿತವಾದ ಸ್ವರೂಪ ತಿಳಿಯಬರದಿದ್ದರೂ, ಇವು ದ್ವಿಮುದ್ರಾವಿಧಾನದ ಸಾಧನಗಳು ಎಂಬುದರಲ್ಲಿ ಸಂದೇಹವಿಲ್ಲ. ಕೆಳದಿ ನಾಯಕರ ಕಾಲದ ಒಂದು ನಾಣ್ಯ ಟಂಕಿಸುವ ಯಂತ್ರವು ನಗರದಲ್ಲಿ ದೊರಕಿದೆ. ಅದು ರುಪಾಯಿಗಳನ್ನು ತಯಾರುಮಾಡುತ್ತಿದ್ದ 'ಟಂಕಶಾಲೆ ಕಲ್ಲು' ಎಂದು ಅದರ ಮೇಲಿನ ಶಾಸನದಿಂದ ಗೊತ್ತಾಗುತ್ತದೆ. ಉತ್ಖನನಗಳಲ್ಲಿ ಆಗಿನ ಕಾಲದ ನಾಣ್ಯಸಾಧನಗಳು ದೊರಕಿದ್ದರೆ, ಅವುಗಳ ತಾಂತ್ರಿಕತೆಯ ಬಗೆಗೆ ಹೆಚ್ಚು ಮಾಹಿತಿಗಳನ್ನು ತಿಳಿದುಕೊಳ್ಳಬಹುದು. ನಾವು ಆಗಲೇ ಗಮನಿಸಿರುವಂತೆ ವೈಜ್ಞಾನಿಕ ವಿಧಾನಗಳು ನಾಣ್ಯಶಾಸ್ತ್ರಜ್ಞನಿಗೆ ಲೋಹಗಾರಿಕಾ ತಂತ್ರಜ್ಞಾನವನ್ನು ತಿಳಿಸುವ ಸಾಧನಗಳಾಗಿವೆ. ನಾಣ್ಯಗಳ ಅಸ್ತಿತ್ವಕ್ಕೆ ಧಕ್ಕೆ ಬರದೇ ಇರದಂತಹ ವೈಜ್ಞಾನಿಕ ಮಾರ್ಗಗಳನ್ನು ಹೆಚ್ಚು ಹೆಚ್ಚಾಗಿ ಅಳವಡಿಸಿಕೊಂಡು ನಾಣ್ಯ ತಯಾರಿಕಾ ತಾಂತ್ರಿಕ ವಿಧಾಸಗಳನ್ನು ಇನ್ನಷ್ಟು ವಿಶದವಾಗಿ ಹಾಗೂ ಸ್ಪಷ್ಟವಾಗಿ ತಿಳಿಯಬಹುದಾಗಿದೆ. ಇತ್ತೀಚಿಗೆ ಈ ತಾಂತ್ರಿಕ ಪರೀಕ್ಷೆಗಳು ಹೆಚ್ಚಾಗಿ ನಡೆಯುತ್ತಿರುವುದು ಸಮಾಧಾನದ ಸಂಗತಿ.

ನಾಣ್ಯಗಳ ಪ್ರಾಚೀನತೆ

ಕರ್ನಾಟಕ ನಾಣ್ಯಗಳ ಪ್ರಾಚೀನತೆಯನ್ನು ತಿಳಿಯಬೇಕಾದರೆ, ಭಾರತದ ಪ್ರಾಚೀನ ನಾಣ್ಯಗಳ ಉಗಮ ಮತ್ತು ವಿಕಾಸವನ್ನು ತಿಳಿಯಬೇಕು. ಏಕೆಂದರೆ ಈ ಮೊದಲನೆಯದು ಎರಡನೆಯದರಲ್ಲಿ ಅಂತರ್ಗತವಾಗಿದೆ. ಈ ವಿಷಯದಲ್ಲಿ ಅನೇಕ ಸಿದ್ಧಾಂತಗಳಿದ್ದು ಖಚಿತವಾದ ಅಭಿಪ್ರಾಯಗಳು ರೂಪಿತವಾಗಿಲ್ಲ. ಮಾಹಿತಿಗಳ ಅಭಾವವೇ ಇದಕ್ಕೆ ಮುಖ್ಯ ಕಾರಣ. ಅತ್ಯಂತ ಪ್ರಾಚೀನ ಕಾಲದ ನಾಣ್ಯಗಳು ದೊರಕಿಲ್ಲವಾದುದರಿಂದ, ಸಾಹಿತ್ಯಿಕ ಮಾಹಿತಿಗಳು ಈ ವಿಷಯದ ಮೇಲೆ ಏನು ಬೆಳಕು ಚೆಲ್ಲುತ್ತವೆ ಎಂಬುದನ್ನು ಪ್ರಮುಖವಾಗಿ ಗಮನಿಸಬೇಕಾಗುತ್ತದೆ.

ನಮ್ಮ ದೇಶದ ಅತ್ಯಂತ ಪ್ರಾಚೀನ ಸಂಸ್ಕೃತಿ ಎಂದರೆ ಸಿಂಧೂ ನಾಗರಿಕತೆ. ಇದನ್ನು ಸಿಂಧೂ-ಸರಸ್ವತಿ ಎಂದೂ ಕರೆಯಲಾಗಿದೆ. ಇದು ಕ್ರಿ.ಪೂ. ಮೂರು ಸಾವಿರ ವರ್ಷಗಳಿಂದ ಆರಂಭವಾಗಿ ಹರಪ್ಪ, ಮೊಹೆಂಜೊದಾರೊ, ಲೊಥಾಲ್, ಕಾಲಿಬಂಗನ್, ರೂಪರ್ ಮುಂತಾದ ಕಡೆಗಳಲ್ಲಿ ಹರಡಿಕೊಂಡಿತ್ತು ಎನ್ನುವುದು ಇತ್ತೀಚಿನ ಸಂಶೋಧನೆಗಳಿಂದ ದೃಢಪಟ್ಟಿದೆ. ಮೊಹೆಂಜೊದಾರೊ ಉತ್ಖನನದಲ್ಲಿ ಒಂದು ಬೆಳ್ಳಿಯ ಹೂಜಿ ದೊರಕಿತು. ಅದರಲ್ಲಿ ಕೆಲವು ಆಭರಣಗಳು ಮತ್ತು ಬೆಳ್ಳಿಯ ಚೂರುಗಳು ಕಂಡುಬಂದವು. ಈ ಬೆಳ್ಳಿಯ ಚೂರುಗಳು ವಿವಿಧ ಆಕಾರಗಳಲ್ಲಿದ್ದು, ಅವುಗಳ ತೂಕವು ಒಂದೇ ಸಮನಾಗಿದ್ದಿತು. ಅವುಗಳ ಮೇಲೆ ಕೆಲವು ಚಿಹ್ನೆಗಳಿದ್ದವು. ಪಂಚ್ ಮಾರ್ಕಿನ ನಾಣ್ಯಗಳಲ್ಲಿ ಕಂಡುಬರುವ ಚಿಹ್ನೆಗಳಿಗೆ ಇವು ತೀರ ಸಮೀಪವಾಗಿದ್ದವು. ಇವು ಆಭರಣಗಳಿರಬೇಕೆಂದು ಕೆಲವರು ಭಾವಿಸಿದರೆ ಮತ್ತೆ ಕೆಲವರು ಇವು ತೂಕದ ಬಟ್ಟುಗಳು ಎಂದು ಅಭಿಪ್ರಾಯಪಟ್ಟರು.

ಇದನ್ನು ಪುನಃ ಪರಿಶೀಲಿಸಿದ ಕೊಶಾಂಬಿಯವರು ಇವು ನಾಣ್ಯಗಳು ಎಂಬುದರಲ್ಲಿ ಸಂದೇಹವಿಲ್ಲ ಎಂದು ವಿವರಿಸಿದರು. ಆಕಾರ ಮತ್ತು ಅಳತೆಗಳಲ್ಲಿ ಈ ಬೆಳ್ಳಿಯ ಚೂರುಗಳು ಆನಂತರದ ಪಂಚ್ ಮಾಡಿದ ಬೆಳ್ಳಿಯ ನಾಣ್ಯಗಳನ್ನು ಹೋಲುತ್ತಿದ್ದುದರಿಂದ, ಇವು ನಾಣ್ಯದ ಅತ್ಯಂತ ಪ್ರಾಚೀನ ಮಾದರಿಗಳು ಎಂಬುದು ಸ್ಪಷ್ಟ. ಆದರೆ ಈ ವಿಷಯದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಈ ಬೆಳ್ಳಿಯ ಚೂರುಗಳು ಸಿಂಧೂ ನಾಗರಿಕತೆಯ ಕೊನೆಯ ಹಂತಕ್ಕೆ ಸೇರಿದ ಸ್ತರಗಳಲ್ಲಿ ದೊರಕಿರುವುದರಿಂದ, ಈ ನಾಗರಿಕತೆಯ ಈ ಹಂತದಲ್ಲಿ ನಾಣ್ಯದ ಕಲ್ಪನೆ ಭಾರತೀಯರಿಗೆ ಇತ್ತು ಎಂದು ಊಹಿಸಬಹುದು. ಆದರೆ ಅನೇಕ ವಿದ್ವಾಂಸರು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ.

ಇದಾದ ನಂತರ ನಮಗೆ ಮಾಹಿತಿ ದೊರಕುವುದು ಋಗ್ವೇದ ಸೂಕ್ತಗಳಿಂದ. ಇದೇ ಅತ್ಯಂತ ಪ್ರಾಚೀನವಾದ ಸಾಹಿತ್ಯಿಕ ಆಕರ. ಋಗ್ವೇದ ಕಾಲದಲ್ಲಿ ಹಸುಗಳನ್ನು ಐಶ್ವರ್ಯ ಅಥವಾ ಧನವನ್ನಾಗಿ ಪರಿಗಣಿಸುತ್ತಿದ್ದರು. ಅನೇಕ ಸೂಕ್ತಗಳ ಪ್ರಕಾರ ಹಸುಗಳನ್ನು ಪದಾರ್ಥಗಳ ವಿನಿಮಯಕ್ಕೂ ಬಳಸುತ್ತಿದ್ದರು. ಆದರೆ ಋಗ್ವೇದ ಕಾಲದಲ್ಲಿ ನಿಷ್ಕ ಎಂಬ ನಾಣ್ಯದ ಬಳಕೆ ಇದ್ದಿತೆಂದು ಸ್ಪಷ್ಟವಾಗುತ್ತದೆ. ಹಿರಣ್ಯಪಿಂಡ, ಖಾಡಿ, ರುಕ್ಮ, ಕರ್ಣಶೋಭನ ಮುಂತಾದ ಚಿನ್ನದ ಆಭರಣಗಳ ಜೊತೆಯಲ್ಲಿ ನಿಷ್ಕವೂ ಒಂದು ರೀತಿಯ ಆಭರಣವಾಗಿದ್ದಿತೆಂದು, ಗೊತ್ತಾಗುತ್ತದೆ. ನಿಷ್ಕ ಒಂದು ಸರ ಎಂದು ಭಾವಿಸಲು ಅವಕಾಶವಿದ್ದಂತೆ, ಅದನ್ನು ನಾಣ್ಯದ ರೂಪದಲ್ಲಿ ಬಳಸುತ್ತಿದ್ದುದೂ ತಿಳಿಯಬರುತ್ತದೆ. ಅಂದರೆ ನಿಷ್ಕವೆನ್ನುವುದು ಒಂದು ಗೊತ್ತಾದ ಪ್ರಮಾಣದ ತೂಕದ ನಾಣ್ಯ. ಇಂತಹ ನಾಣ್ಯಗಳಿಂದ ಮಾಡಿದ ಸರವನ್ನು ನಿಷ್ಕ ಎಂದೇ ಕರೆಯುತ್ತಿದ್ದರು. ಆದುದರಿಂದ ನಿಷ್ಕ ಎನ್ನುವುದಕ್ಕೆ ಈ ಕಾಲದಲ್ಲಿ ಈ ಎರಡು ಅರ್ಥಗಳೂ ಇದ್ದವು. ನಾಣ್ಯಗಳಿಂದ ಸರವನ್ನು ತಯಾರಿಸುವ ಪರಂಪರೆ ಇಂದಿಗೂ ನಡೆದುಬಂದಿದೆ. ಕಾಸಿನಸರ ಇಂದೂ ಬೇಡಿಕೆಯುಲ್ಲಿರುವ ಆಭರಣ. ಅಂದರೆ ಲಕ್ಷ್ಮಿಯ ಚಿತ್ರವಿರುವ ನಾಣ್ಯರೂಪದ ಚೂರುಗಳನ್ನು ಒಟ್ಟಿಗೆ ಸೇರಿಸಿ ಮಾಡಿದ ಸರವೇ ಕಾಸಿನಸರ. ದಾನವನ್ನು ನೀಡಿದ ಉಲ್ಲೇಖಗಳಲ್ಲಿ ನಿಷ್ಕವನ್ನು ಹೆಸರಿಸಿದ್ದಾರೆಯೇ ಹೊರತು, ಇತರ ಆಭರಣಗಳಾದ ಖಾಡಿ, ರುಕ್ಮ ಮುಂತಾದವುಗಳನ್ನಲ್ಲವೆಂಬುದು ಗಮನಾರ್ಹ ಸಂಗತಿ. ಭವ್ಯನೆಂಬ ದೊರೆಯು ಕಕ್ಷೀವತ್ ಎಂಬ ಋಷಿಗೆ ಒಂದು ನೂರು ನಿಷ್ಕಗಳನ್ನು ದಾನವಾಗಿ ಕೊಟ್ಟನೆಂದು ಹೇಳಿದೆ. ಮತ್ತೊಂದು ಸಂದರ್ಭದಲ್ಲಿ ಒಬ್ಬ ಕವಿಗೆ ಒಂದು ನೂರು ನಿಷ್ಕಗಳನ್ನು ನೀಡಲಾಯಿತು ಎಂದು ಹೇಳಿದೆ. ಆದುದರಿಂದ ದಾನ-ದಕ್ಷಿಣೆಗಳನ್ನು ಕೊಡುವಾಗ ನಿಷ್ಕಗಳನ್ನು ನೀಡುತ್ತಿದ್ದರು ಎಂದು ಖಚಿತವಾಗುತ್ತದೆ. ಹಿರಣ್ಯ ಪಿಂಡ ಎನ್ನುವುದು ಮುದ್ರೆಯಿಲ್ಲದ ಚಿನ್ನದ ಗಟ್ಟಿಯಾದರೆ, ನಿರ್ದಿಷ್ಟ ಆಕಾರದ ಹಾಗೂ ತೂಕದ ಚಿನ್ನದ ಚೂರುಗಳೇ ನಿಷ್ಕ; ಅದರಿಂದ ಮಾಡಿದ ಸರವೂ ನಿಷ್ಕ ಎನ್ನುವ ಹೆಸರಿನಿಂದ ಪ್ರಸಿದ್ಧವಾಗಿತ್ತು. ಇದನ್ನು ಗಮನಿಸಿದರೆ ಅತ್ಯಂತ ಪ್ರಾಥಮಿಕ ಹಂತದ ನಾಣ್ಯದ ಕಲ್ಪನೆ ಋಗ್ವೇದದ ಆರ್ಯರಿಗಿತ್ತು ಎಂಬುದು

ಖಚಿತವಾಗುತ್ತದೆ. ಋಗ್ವೇದದ ಕಾಲದ ಬಗೆಗೂ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಅದು ಕ್ರಿ.ಪೂ. 2500ಕ್ಕೆ ಸೇರುತ್ತದೆ ಎಂದು ಕೆಲವರು ಭಾವಿಸಿದರೆ, ಮತ್ತೆ ಕೆಲವರು ಅದರ ಕಾಲ ಕ್ರಿ.ಪೂ. 1200 ಎಂದು ಅಭಿಪ್ರಾಯಪಟ್ಟಿದ್ದಾರೆ. ಇದರಲ್ಲಿ ಯಾವುದು ಸರಿ ಎಂಬ ಕ್ಲಿಷ್ಟವಾದ ಪ್ರಶ್ನೆಯನ್ನು ಬಿಟ್ಟು, ಋಗ್ವೇದ ಕಾಲದ ಆರ್ಯರಿಗೆ ನಾಣ್ಯದ ಪರಿಚಯವಿತ್ತು ಎಂದು ಮಾತ್ರ ಹೇಳಬಹುದು. ಆದುದರಿಂದ ಸಾಹಿತ್ಯಿಕ ಮಾಹಿತಿಗಳನ್ನು ಆಧರಿಸಿ ಹೇಳುವುದಾದರೆ ಭಾರತೀಯ ನಾಣ್ಯಗಳ ಪ್ರಾಚೀನತೆಯನ್ನು ಋಗ್ವೇದದ ಕಾಲಕ್ಕೆ ಹೊಂದಿಸಬೇಕಾಗುತ್ತದೆ.

ಋಗ್ವೇದ ಕಾಲದ ಅನಂತರ ಉತ್ತರ ವೈದಿಕ ಕಾಲವನ್ನು ಗಮನಿಸಬಹುದು. ಇದರಲ್ಲಿ ಇತರ ಮೂರು ವೇದಗಳು, ಬ್ರಾಹ್ಮಣಗಳು ಮತ್ತು ಉಪನಿಷತ್ತುಗಳನ್ನು ಸೇರಿಸಬಹುದು. ಈ ಕಾಲದಲ್ಲಿಯೂ ನಿಷ್ಕದ ಬಳಕೆ ಹೆಚ್ಚಾಗಿ ಕಾಣಬರುತ್ತದೆ. ಅದು ಒಂದು ನಿರ್ದಿಷ್ಟ ತೂಕದ ಚಿನ್ನವನ್ನು ಸೂಚಿಸುತ್ತಿತ್ತು. ಇದರ ಜೊತೆಗೆ ನಾಣ್ಯಗಳೇ ಆದ ಸುವರ್ಣ, ಶತಮಾನ ಮತ್ತು ಪಾದಗಳ ಉಲ್ಲೇಖಗಳೂ ಕಾಣಬರುತ್ತವೆ. ಅನಂತರದ ಕಾಲದಲ್ಲಿ ಸುವರ್ಣ ಎನ್ನುವುದು ಚಿನ್ನದ ನಾಣ್ಯವಾಗಿದ್ದು ಅದರ ತೂಕ 144 ಗ್ರೇನ್‌ಗಳಾಗಿತ್ತು. ಆದುದರಿಂದ ಈ ಕಾಲದಲ್ಲಿಯೂ ಅದರ ಸ್ವರೂಪ ಇದೇ ರೀತಿ ಇದ್ದಿರಬಹುದೆಂದು ಊಹಿಸಲು ಅವಕಾಶವಿದೆ. ಶತಮಾನ ಎಂಬ ನಾಣ್ಯದ ವಿಷಯದಲ್ಲಿ ಇದಕ್ಕಿಂತ ಸ್ಪಷ್ಟವಾದ ಮಾಹಿತಿ ದೊರಕುತ್ತದೆ. ಅದು ವೃತ್ತಾಕಾರದ ಮತ್ತು ನಿರ್ದಿಷ್ಟ ರೂಪದ ಚಿನ್ನದ ನಾಣ್ಯವೇ ಆಗಿತ್ತು. ಆದುದರಿಂದ ಯಜ್ಞ - ಯಾಗಾದಿ ಧಾರ್ಮಿಕ ಕಾರ್ಯಗಳಲ್ಲಿ ಅದನ್ನು ದಕ್ಷಿಣೆಯ ರೂಪದಲ್ಲಿ ಪುರೋಹಿತರಿಗೆ ಕೊಡುತ್ತಿದ್ದರು. ಈ ನಾಣ್ಯವನ್ನು (ಶತಮಾನ) ದಕ್ಷಿಣೆಯಾಗಿ ಕೊಡುವುದರಿಂದ ನೂರು ವರ್ಷಗಳ ದೀರ್ಘ ಆಯಸ್ಸು ಪಡೆಯಬಹುದೆಂಬ ನಂಬಿಕೆಯು ಜನಗಳಲ್ಲಿತ್ತು. ಪಾದ ಎನ್ನುವುದು ಅದರ ಅರ್ಥವೇ ಸೂಚಿಸುವಂತೆ ನಿಷ್ಕ, ಸುವರ್ಣ ಮತ್ತು ಶತಮಾನ ನಾಣ್ಯಗಳ ನಾಲ್ಕನೆಯ ಒಂದು ಭಾಗದ ನಾಣ್ಯವಾಗಿತ್ತು. ಈ ಕಾಲದ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ ಇನ್ನೊಂದು ಪದವೆಂದರೆ ಕೃಷ್ಣಲಾ. ಇದು ತೂಕದ ಮಾದರಿಯೋ ಅಥವಾ ನಾಣ್ಯವೋ ಎಂಬ ವಿಷಯದಲ್ಲಿ ಖಚಿತ ಮಾಹಿತಿಯಿಲ್ಲ. ಈ ಕಾಲದ ಗ್ರಂಥಗಳಿಂದ ಇಷ್ಟು ಮಾಹಿತಿಗಳು ಮಾತ್ರ ದೊರಕುತ್ತವೆ. ಇವುಗಳನ್ನು ತಯಾರು ಮಾಡುತ್ತಿದ್ದ ರೀತಿ, ಇವುಗಳ ತೂಕ ಮುಂತಾದ ವಿಚಾರಗಳ ಬಗೆಗೆ ಅವು ಬೆಳಕು ಚೆಲ್ಲುವುದಿಲ್ಲ. ಅವುಗಳ ಖಚಿತ ಸ್ವರೂಪ ಗೊತ್ತಿಲ್ಲದೇ ಇದ್ದರೂ ಅವು ಪ್ರಾಥಮಿಕ ಹಂತದ ನಾಣ್ಯಗಳನ್ನು ಸೂಚಿಸುತ್ತವೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಇದರ ಕಾಲ ಕ್ರಿ.ಪೂ. 1000 ಎಂದು ಭಾವಿಸುವುದಾರೆ, ಈ ಸಮಯಕ್ಕಾಗಲೇ ನಾಣ್ಯದ ವಿಷಯದಲ್ಲಿ ಸಾಕಷ್ಟು ಬೆಳವಣಿಗೆ ಆಗಿತ್ತು ಎನ್ನುವುದು ಖಚಿತವಾಗುತ್ತದೆ.

ವೇದೋತ್ತರ ವೈದಿಕ ಕಾಲದ ಸಾಹಿತ್ಯದಲ್ಲಿ ಸೂತ್ರಗ್ರಂಥಗಳು, ಬೌದ್ಧ ಜಾತಕ, ತ್ರಿಪಿಟಕಗಳು ಮತ್ತು ಪಾಣಿನಿಯ ಅಷ್ಟಾಧ್ಯಾಯಿ ಎಂಬ ವ್ಯಾಕರಣ ಗ್ರಂಥಗಳನ್ನು ಗಮನಿಸಬಹುದು. ಈ ಕಾಲದ ಸಾಹಿತ್ಯದಲ್ಲಿ ಚಿನ್ನದ ನಾಣ್ಯಗಳ ಉಲ್ಲೇಖ ವಿಶೇಷವಾಗಿ ಕಾಣಿಸಿಕೊಳ್ಳುತ್ತವೆ. ಅವು ಹೆಚ್ಚು ಜನಾನುರಾಗಿಯಾಗಿದ್ದವು. ಜಾತಕಗಳಲ್ಲಿ ನಿಷ್ಕ ಎಂಬುದು ನಾಣ್ಯದ ಅರ್ಥದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಒಬ್ಬ ಹಾವಾಡಿಗನು ಒಂದು ನೂರು ನಿಷ್ಕಗಳನ್ನು ಸಂಪಾದಿಸುತ್ತಿದ್ದನೆಂದು ಭೂರಿದತ್ತ ಜಾತಕ ತಿಳಿಸುತ್ತದೆ. ವೆಸ್ಸಂತರ ಜಾತಕದಲ್ಲಿ ಒಬ್ಬ ಖೈದಿಯನ್ನು ಬಿಡುಗಡೆ ಮಾಡಲು ಒಂದು ಸಾವಿರ ನಿಷ್ಕಗಳನ್ನು ನೀಡಲಾಯಿತು ಎಂದು ಹೇಳಿದೆ. ಕುಹಕ ಜಾತಕದಲ್ಲಿ ಸನ್ಯಾಸಿಯೊಬ್ಬನು ಒಂದು ನೂರು ನಿಷ್ಕಗಳನ್ನು ಕಳ್ಳತನ ಮಾಡಿದ ವಿಷಯ ಪ್ರಸ್ತಾಪಿತವಾಗಿದೆ. ಇಡೀ ಜೇತವನವನ್ನು ಅನಾಥಪಿಂಡಕನು ನಿಷ್ಕಗಳಿಂದ ತುಂಬಿಸಿದ್ದನು ಎಂದು ವಿನಯಪಿಟಕ ತಿಳಿಸುತ್ತದೆ. ಉದಯ ಜಾತಕದಲ್ಲಿ ಮಾಷಕ ಎಂಬ ಇನ್ನೊಂದು ಸಣ್ಣ ಚಿನ್ನದ ನಾಣ್ಯದ ಪ್ರಸ್ತಾಪವೂ ಇದೆ. ಬಹುಶಃ ಇದು ಸುವರ್ಣ ಎಂಬ ನಾಣ್ಯದ ಹದಿನಾರನೆಯ ಒಂದು ಭಾಗವಿರಬೇಕು. ಈ ಮೇಲೆ ಹೆಸರಿಸಿದ ಬೌದ್ಧ ಗ್ರಂಥಗಳ ಕಾಲ ಸುಮಾರು ಕ್ರಿ.ಪೂ. 500-400. ಆದುದರಿಂದ ಈ ಸಮಯಕ್ಕಾಗಲೇ ನಾಣ್ಯ ತಾಂತ್ರಿಕತೆಯಲ್ಲಿ ಸಾಕಷ್ಟು ಬೆಳವಣಿಗೆ ಆಗಿದ್ದಿತು ಎಂದು ಗೊತ್ತಾಗುತ್ತದೆ.

ಪಾಣಿನಿಯ ಅಷ್ಟಾಧ್ಯಾಯಿ, ಇನ್ನೂ ಹೆಚ್ಚಿನ ಮಾಹಿತಿಗಳನ್ನು ನೀಡುತ್ತದೆ. ಪಾಣಿನಿಯು ತನ್ನ ಗ್ರಂಥದಲ್ಲಿ ಪ್ರಾಸಂಗಿಕವಾಗಿ ಆಗಿನ ಕಾಲದ ನಾಣ್ಯ ಪದ್ಧತಿಯನ್ನು ಕುರಿತು ಹೆಚ್ಚಿನ ಮಾಹಿತಿ ನೀಡಿದ್ದಾನೆ. ಎರಡು ಅಥವಾ ಮೂರು ನಿಷ್ಕಗಳಿಂದ ಮಾಡಿದ ವ್ಯವಹಾರಗಳನ್ನು ಪಾಣಿನಿಯು ದ್ವಿನಿಷ್ಕಂ ಮತ್ತು ತ್ರಿನಿಷ್ಕಂ ಎಂದು ಹೆಸರಿಸಿದ್ದಾನೆ. ಒಂದು ನೂರು ನಿಷ್ಕಗಳನ್ನು ಹೊಂದಿದವನು ನೈಷ್ಕಶತಿಕನಾದರೆ, ಸಹಸ್ರ ನಿಷ್ಕಗಳ ಒಡೆಯ ನೈಷ್ಕಸಹಸ್ರಿಕನೆನಿಸಿಕೊಳ್ಳುತ್ತಾನೆ. ಪಾಣಿನಿಯು ಶತಮಾನ ಎನ್ನುವ ನಾಣ್ಯವನ್ನು ಉಲ್ಲೇಖಿಸುತ್ತಾನೆ. ಬಹುಶಃ ಇದು ಬೆಳ್ಳಿಯ ನಾಣ್ಯ. ಇದರ ತೂಕ ಒಂದು ನೂರು ರತ್ತಿಗಳು ಅಥವಾ 175 ಗ್ರೇನ್‌ಗಳು. ತಕ್ಷಶಿಲೆಯ ಉತ್ಖನನದಲ್ಲಿ ದೊರಕಿರುವ ಬಗ್ಗಿರುವ ಉದ್ದನೆಯ ಬೆಳ್ಳಿಯ ನಾಣ್ಯಗಳೇ ಶತಮಾನವೆಂದು ಕೆಲವರು ಭಾವಿಸುತ್ತಾರೆ. ಪಾಣಿನಿಯು ಹೆಸರಿಸುವ ಇನ್ನೊಂದು ಬೆಳ್ಳಿಯ ನಾಣ್ಯವೆಂದರೆ ಸಾಣ. 1 2 ಮತ್ತು 3 ಸಾಣ ನಾಣ್ಯಗಳಿಂದ ಮಾಡಿದ ವ್ಯವಹಾರಗಳನ್ನು ಪಾಣಿನಿ ಉದಾಹರಿಸುತ್ತಾನೆ. ಮಹಾಭಾರತದ ಪ್ರಕಾರ ಒಂದು ಶತಮಾನಕ್ಕೆ ಎಂಟು ಸಾಣ ಎಂಬ ನಾಣ್ಯಗಳು ಸಮ. ಆದುದರಿಂದ ಸಾಣ ನಾಣ್ಯದ ತೂಕ 22 ಗ್ರೇನ್ ಎಂದು ತೀರ್ಮಾನಿಸಬಹುದು. ಪಾಣಿನಿಯ ಪ್ರಕಾರ ಮಾಷ ಎನ್ನುವುದು ಬೆಳ್ಳಿಯ ಮತ್ತು ತಾಮ್ರದ ನಾಣ್ಯ. ಭೀರ್ ಗುಡ್ಡದ ಉತ್ಖನನಗಳಲ್ಲಿ ದೊರಕಿರುವ 2-3 ಗ್ರೇನ್ ತೂಕದ ಬೆಳ್ಳಿಯ ನಾಣ್ಯಗಳೇ ಮಾಷ ಎಂದು ಭಾವಿಸಲಾಗಿದೆ.

ಪಾಣಿನಿಯು ಹೆಸರಿಸುವ ಇನ್ನೊಂದು ನಾಣ್ಯವೆಂದರೆ ಕಾರ್ಷಾಪಣ. ಇದು ಈ ಕಾಲದಲ್ಲಿ ಬಹು ಜನಾನುರಾಗಿಯಾದ ನಾಣ್ಯವಾಗಿದ್ದಿತು. ಒಂದು ಕಾರ್ಷ ಅಂದರೆ ಒಂದು ಕಾಳಿನ ತೂಕವಿದ್ದುದರಿಂದ ಇದಕ್ಕೆ ಈ ಹೆಸರು ಬಂದಿತು. ಇದು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ಅಚ್ಚಾಗುತ್ತಿದ್ದ ನಾಣ್ಯ. ಆದರೆ ವ್ಯವಹಾರದಲ್ಲಿ ಕಾರ್ಷಾಪಣವೆಂದರೆ ಬೆಳ್ಳಿಯ ನಾಣ್ಯ ಎಂಬುದು ಹೆಚ್ಚಿಗೆ ಪ್ರಚಾರದಲ್ಲಿದೆ. ನಾಣ್ಯಶಾಸ್ತ್ರಜ್ಞರು ಪಂಚ್ ಮಾಡಿದ ಬೆಳ್ಳಿಯ ನಾಣ್ಯಗಳೇ ಕಾರ್ಷಾಪಣ ಎಂದು ಗುರುತಿಸಿದ್ದಾರೆ. ಕಾರ್ಷಾಪಣದ ತೂಕ 80 ರತ್ತಿ ಅಥವಾ 140 ಗ್ರೇನ್‌ಗಳು. ಅನೇಕ ಸಂದರ್ಭಗಳಲ್ಲಿ ಪುರಾಣ ಎನ್ನುವ ನಾಣ್ಯವನ್ನು ಕಾರ್ಷಾಪಣಕ್ಕೆ ಸಂವಾದಿಯಾಗಿ ಬಳಸಿರುವುದೂ ಉಂಟು. ಕಾರ್ಷಾಪಣಗಳ ಉಲ್ಲೇಖ ಬೌದ್ಧ ಸಾಹಿತ್ಯ ಗ್ರಂಥಗಳಲ್ಲಿಯೂ ಕಂಡುಬರುತ್ತದೆ. ಪಾಣಿನಿಯು ಒಂದು ಕಾರ್ಷಾಪಣ ಮಾತ್ರವಲ್ಲದೆ, ಅದರ ವಿವಿಧ ಭಾಗಗಳಾದ ಅರ್ಧ ಕಾರ್ಷಾಪಣ, ಕಾಲು ಕಾರ್ಷಾಪಣ, ಎಂಟನೆಯ ಒಂದು ಕಾರ್ಷಾಪಣ ಮತ್ತು ಹದಿನಾರನೆಯ ಒಂದು ಕಾರ್ಷಾಪಣವನ್ನೂ ಹೆಸರಿಸಿದ್ದಾನೆ. ಇವು ತೂಕದಲ್ಲಿ ಭಾರತದ ವಿವಿಧ ಕಡೆಗಳಲ್ಲಿ ದೊರಕಿರುವ ಪಂಚ್ ಮಾಡಿದ ನಾಣ್ಯಗಳಿಗೆ ಸಮನಾಗಿವೆ. ಪಾಣಿನಿಯು ತಾಮ್ರದ ಕಾರ್ಷಾಪಣಗಳು, ಮಾಷ ಮತ್ತು ವಿಂಶತಿಕ ಎಂಬ ನಾಣ್ಯಗಳನ್ನೂ ಹೆಸರಿಸಿದ್ದಾನೆ. ವಿಂಶತಿಕ ನಮೂನೆಯಲ್ಲಿ ಅರ್ಧ ವಿಂಶತಿಕ ಮತ್ತು ಪಾದ ವಿಂಶತಿಕ ನಾಣ್ಯಗಳ ಉಲ್ಲೇಖವೂ ಕಾಣಬರುತ್ತದೆ. ಪಾಣಿನಿಯು ನೀಡಿರುವ ಈ ಎಲ್ಲ ಮಾಹಿತಿಗಳನ್ನೂ ಗಮನಿಸಿದರೆ, ಆ ಕಾಲದಲ್ಲಿ ನಾಣ್ಯ ಪದ್ಧತಿಯನ್ನು ಭದ್ರ ಬುನಾದಿಯ ಮೇಲೆ ಅಳವಡಿಸಲಾಗಿತ್ತು ಎಂದು ಹೇಳಬಹುದು. ಪಾಣಿನಿಯ ಕಾಲ ಕ್ರಿ.ಪೂ. ಐದನೆಯ ಶತಮಾನ ಎಂದು ಭಾವಿಸುವುದಾದರೆ, ಈ ಸಮಯಕ್ಕಾಗಲೇ ನಾಣ್ಯ ಪದ್ಧತಿ ಹಾಗೂ ತಾಂತ್ರಿಕತೆ ಸಾಕಷ್ಟು ಬೆಳವಣಿಗೆಯನ್ನು ಹೊಂದಿದ್ದಿತು ಎಂದು ಗೊತ್ತಾಗುತ್ತದೆ.

ಕೊನೆಯದಾಗಿ, ಕೌಟಿಲ್ಯನು ನಾಣ್ಯ ಪದ್ಧತಿಯ ವಿಷಯದಲ್ಲಿ ಏನು ಮಾಹಿತಿಯನ್ನು ಒದಗಿಸುತ್ತಾನೆ ಎಂಬುದನ್ನು ಗಮನಿಸಬಹುದು. ಟಂಕಶಾಲೆಯ ಅಧಿಕಾರಿಯನ್ನು ಕೌಟಿಲ್ಯನು ಲಕ್ಷಣಾಧ್ಯಕ್ಷ ಎಂದು ಕರೆದಿದ್ದಾನೆ. ನಾಣ್ಯಗಳ ತೂಕ, ಲೋಹಗಳ ಶುದ್ಧತೆ ಹಾಗೂ ನಾಣ್ಯಗಳ ಮೇಲಿನ ಚಿಹ್ನೆಗಳನ್ನು ಪರೀಕ್ಷಿಸಿ ಅವು ಸರಿಯಾಗಿದ್ದರೆ ಮಾತ್ರ ಅವುಗಳನ್ನು ಚಲಾವಣೆಗೆ ಬಿಡುವುದು ಈ ಅಧಿಕಾರಿಯ ಮುಖ್ಯ ಕರ್ತವ್ಯ. ನಾಣ್ಯಗಳ ತಯಾರಿಕೆ ಸರ್ಕಾರದ ಹಕ್ಕಾಗಿತ್ತು. ಟಂಕಶಾಲೆಗಳನ್ನು ಸರ್ಕಾರ ನಿಯಂತ್ರಿಸುತ್ತಿತ್ತು. ಆಗಿನ ಕಾಲದಲ್ಲಿ ಖೋಟ ನಾಣ್ಯಗಳನ್ನು ತಯಾರು ಮಾಡುತ್ತಿದ್ದುದರಿಂದ ಅಂತಹವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ನಕಲಿ ನಾಣ್ಯಗಳನ್ನು ಅರ್ಥಶಾಸ್ತ್ರದಲ್ಲಿ ಕೂಟರೂಪ ಎಂದು ಕರೆಯಲಾಗಿದೆ. ಇಂತಹ ಖೋಟ ನಾಣ್ಯಗಳನ್ನು ತಯಾರು ಮಾಡುವವರನ್ನು ಗುರುತಿಸುವ ಬಗೆಯನ್ನು ಕೌಟಿಲ್ಯ ವಿವರಿಸಿದ್ದಾನೆ. ಇದರಿಂದ ನಾಣ್ಯಗಳ ತಾಂತ್ರಿಕತೆಯ ಬಗೆಗೂ ಇವನು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾನೆ. ಇವನ ಕಾಲದಲ್ಲಿ ನಾಣ್ಯಗಳನ್ನು ಯಾವ ತಾಂತ್ರಿಕ

ವಿಧಾನಗಳಿಂದ ತಯಾರು ಮಾಡುತ್ತಿದ್ದರು ಎನ್ನುವುದೂ ಗೊತ್ತಾಗುತ್ತದೆ. ಕೌಟಿಲ್ಯನು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಉಲ್ಲೇಖಿಸಿದ್ದಾನೆ. ಅವುಗಳೇ ಸುವರ್ಣ, ರೂಪ್ಯ ರೂಪ ಮತ್ತು ತಾಮ್ರ ರೂಪ. ಬೆಳ್ಳಿಯ ನಾಣ್ಯಗಳನ್ನು ತಯಾರಿಸಲು ಮುಕ್ಕಾಲು ಭಾಗ ಬೆಳ್ಳಿ ಮತ್ತು ಕಾಲು ಭಾಗ ತಾಮ್ರ ಮತ್ತು ಇತರ ಲೋಹಗಳನ್ನು ಉಪಯೋಗಿಸುತ್ತಿದ್ದರು. ಬೆಳ್ಳಿಯಲ್ಲಿ ಪಣ, ಅರ್ಧಪಣ, ಪಾದಪಣ ಮತ್ತು ಅಷ್ಟಭಾಗ ಎಂಬ ನಾಲ್ಕು ಮೌಲ್ಯದ ನಾಣ್ಯಗಳನ್ನು ಟಂಕಿಸುತ್ತಿದ್ದರು. ತಾಮ್ರದಲ್ಲಿ ಮಾಷಕ, ಅರ್ಧ ಮಾಷಕ, ಮತ್ತು ಕಾಕನಿ ಎಂಬ ನಾಣ್ಯಗಳನ್ನು ಟಂಕಿಸುತ್ತಿದ್ದರು. ಒಂದು ಮಾಷಕಕ್ಕೆ ನಾಲ್ಕು ಕಾಕನಿಗಳು ಸಮನಾಗಿದ್ದವು. ಲಕ್ಷಣಾಧ್ಯಕ್ಷನ ಕೈಕೆಳಗೆ ರೂಪದರ್ಶಕ ಎನ್ನುವ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು. ಈ ಎಲ್ಲ ಮಾಹಿತಿಗಳನ್ನು ಗಮನಿಸಿದರೆ ಕೌಟಿಲ್ಯನ ಕಾಲದಲ್ಲಿ, ಅಂದರೆ ಮೌರ್ಯರ ರಾಜ್ಯಭಾರ ಕಾಲದಲ್ಲಿ ನಾಣ್ಯಗಳ ತಾಂತ್ರಿಕತೆ, ಆಡಳಿತ, ನಿಯಂತ್ರಣ ಮುಂತಾದವು ವ್ಯವಸ್ಥಿತವಾಗಿ ನಡೆಯುತ್ತಿದ್ದವು ಎಂದು ಹೇಳಬೇಕು. ಅನೇಕ ಉತ್ಖನನಗಳಲ್ಲಿ ಮೌರ್ಯರ ಕಾಲಕ್ಕೆ ಸೇರಿದ ಸಾಂಸ್ಕೃತಿಕ ಸ್ತರಗಳಲ್ಲಿ ಬೆಳ್ಳಿಯ ಪಂಚ್ ಚಿಹ್ನೆಯ ನಾಣ್ಯಗಳು ದೊರಕಿರುವುದರಿಂದ, ಕೌಟಿಲ್ಯನ ಕಾಲದಲ್ಲಿ, ಅಂದರೆ ಮೌರ್ಯರ ಕಾಲದಲ್ಲಿ ಪಂಚ್ ಚಿಹ್ನೆಯ ನಾಣ್ಯಗಳು ಬಳಕೆಯಲ್ಲಿದ್ದವು ಎಂಬುದು ದೃಢಪಡುತ್ತದೆ. ಪಂಚ್ ಚಿಹ್ನೆಯ ನಾಣ್ಯಗಳು ತೀರ ಪ್ರಾಥಮಿಕ ಹಂತದ ನಾಣ್ಯಗಳಲ್ಲ; ಅವು ಸುಧಾರಿತ ನಾಣ್ಯಗಳು ಎಂಬುದು ನಾಣ್ಯಶಾಸ್ತ್ರಜ್ಞರ ಮತ. ಅಂದರೆ ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಇಷ್ಟೊಂದು ಸುಧಾರಿತ ನಾಣ್ಯ ಪದ್ಧತಿ ಬಳಕೆಯಲ್ಲಿದ್ದಿತೆಂದರೆ, ಇದರ ಉಗಮ ಆಗಿ ಇದು ಬೆಳವಣಿಗೆಯನ್ನು ಹೊಂದಲು ಕೊನೆಯ ಪಕ್ಷ ಐದಾರು ಶತಮಾನಗಳ ಕಾಲ ಬೇಕಾಗಿರುತ್ತದೆ. ಆದುದರಿಂದ ಕ್ರಿ.ಪೂ. ಹತ್ತನೆಯ ಶತಮಾನದ ಹೊತ್ತಿಗೆ ನಾಣ್ಯಗಳ ಕಲ್ಪನೆ ಭಾರತೀಯರಿಗೆ ಇದ್ದು ಪ್ರಾಥಮಿಕ ಹಂತದ ನಾಣ್ಯಗಳು ಬಳಕೆಯಲ್ಲಿದ್ದವು ಎಂದು ಹೇಳಬೇಕಾಗುತ್ತದೆ. ಈ ಅಭಿಪ್ರಾಯವನ್ನು ಮೇಲೆ ಹೆಸರಿಸಿದ ಅನೇಕ ಸಾಹಿತ್ಯಿಕ ಆಕರಗಳು ದೃಢಪಡಿಸುತ್ತವೆ.

ಆದರೆ ಕೆಲವು ನಾಣ್ಯಶಾಸ್ತ್ರಜ್ಞರು ನಾಣ್ಯಗಳ ಉಗಮ ಭಾರತದಲ್ಲಿ ಆಗಲಿಲ್ಲ; ಅವರಿಗೆ ನಾಣ್ಯಗಳ ಕಲ್ಪನೆಯೇ ಇರಲಿಲ್ಲ; ಅವರು ನಾಣ್ಯಗಳ ತಾಂತ್ರಿಕತೆಯನ್ನು ವಿದೇಶೀಯರಿಂದ ಕಲಿತರು ಎಂದು ವಾದಿಸಿದ್ದಾರೆ. ಜೇಮ್ಸ್ ಪ್ರಿನ್‌ಸೆಪ್ ಮತ್ತು ವಿಲ್ ಸನ್ ಅವರ ಪ್ರಕಾರ ಭಾರತೀಯರು ನಾಣ್ಯಶಾಸ್ತ್ರವನ್ನು ಗ್ರೀಕರಿಂದ ಕಲಿತರು. ವೈದಿಕ ಕಾಲದ ನಿಷ್ಕ, ಹಿರಣ್ಯ, ಶತಮಾನ ಹಾಗೂ ಬೌದ್ಧ ಸಾಹಿತ್ಯದ ಕಾರ್ಷಾಪಣ, ಪಣ ಮುಂತಾದವು ಈ ಮೇಲಿನ ವಿದ್ವಾಂಸರ ಪ್ರಕಾರ ನಾಣ್ಯಗಳೇ ಅಲ್ಲ. ಅವು ಒಂದು ನಿರ್ದಿಷ್ಟ ತೂಕದ ಲೋಹದ ಗಟ್ಟಿಗಳು. ಗ್ರೀಕರ ದಂಡಯಾತ್ರೆಯಿಂದ ಭಾರತೀಯರಿಗೆ ನಾಣ್ಯಗಳ ಪರಿಚಯವಾಯಿತು. ಇದರಿಂದ ಭಾರತೀಯರು ಗ್ರೀಕ್ ನಾಣ್ಯಗಳನ್ನು ಅನುಕರಿಸಿದರು ಎನ್ನುವುದು ಪ್ರಿನ್‌ಸೆಪನ ವಾದ. ಆದರೆ ಗ್ರೀಕರ ನಾಣ್ಯಗಳಿಗೂ ಭಾರತೀಯ

ಪ್ರಾಚೀನತಮ ನಾಣ್ಯಗಳಾದ ಪಂಚ್ ಚಿಹ್ನೆಯ ನಾಣ್ಯಗಳಿಗೂ ಯಾವ ವಿಧವಾದ ಹೋಲಿಕೆಗಳೂ ಇಲ್ಲ. ಗ್ರೀಕ್ ನಾಣ್ಯಗಳು ದ್ವಿಮುದ್ರಾ ನಾಣ್ಯಗಳು; ಆದರೆ ಪಂಚ್ ಚಿಹ್ನೆಯ ನಾಣ್ಯಗಳು ಪಂಚ್ ಮಾಡಿದ ನಮೂನೆಯವು. ಗ್ರೀಕ್ ನಾಣ್ಯಗಳಲ್ಲಿ ದೇವತೆಗಳ ವಿಗ್ರಹ ಮತ್ತು ಬರಹಗಳಿವೆ. ಆದರೆ ಪಂಚ್ ಚಿಹ್ನೆಯ ನಾಣ್ಯಗಳಲ್ಲಿ ದೇವತೆಗಳ ಚಿತ್ರವೂ ಇಲ್ಲ; ಬರವಣಿಗೆಯೂ ಇಲ್ಲ; ಅವುಗಳಲ್ಲಿ ವಿವಿಧ ರೀತಿಯ ದಿನನಿತ್ಯ ಬಳಕೆಯ ಚಿಹ್ನೆಗಳಿವೆ. ಗ್ರೀಕ್ ನಾಣ್ಯಗಳು ವೃತ್ತಾಕಾರದಲ್ಲಿವೆ. ಆದರೆ ಪಂಚ್ ಚಿಹ್ನೆಯ ನಾಣ್ಯಗಳು ಆಯತಾಕಾರ, ಚೌಕಾಕಾರ, ತ್ರಿಕೋನ, ಪಂಚಕೋನ ಮುಂತಾದ ಆಕಾರಗಳಲ್ಲಿ ಕಂಡುಬಂದಿವೆ. ಗ್ರೀಕ್ ನಾಣ್ಯಗಳಿಗೂ ಭಾರತದ ಪಂಚ್ ಚಿಹ್ನೆಯ ನಾಣ್ಯಗಳಿಗೂ ತೂಕದಲ್ಲಿಯೂ ಯಾವ ವಿಧವಾದ ಹೋಲಿಕೆ ಇಲ್ಲ. ಗ್ರೀಕ್ ನಾಣ್ಯಗಳಿಗೆ ಮುಮ್ಮುಖ ಮತ್ತು ಹಿಮ್ಮುಖಗಳುಂಟು. ಆದರೆ ಪಂಚ್ ಚಿಹ್ನೆಯ ನಾಣ್ಯಗಳಿಗೆ ಕೇವಲ ಮುಮ್ಮುಖ ಮಾತ್ರ ಉಂಟು. ಇಷ್ಟೊಂದು ಭಿನ್ನತೆಗಳಿರುವುದರಿಂದ ಗ್ರೀಕರ ನಾಣ್ಯಗಳು ಪಂಚ್ ಚಿಹ್ನೆಯ ನಾಣ್ಯಗಳಿಗೆ ಮಾದರಿಯನ್ನು ಒದಗಿಸಿದವು ಎಂಬುದು ಹಾಸ್ಯಾಸ್ಪದವೇ ಆಗುತ್ತದೆ. ಅದಕ್ಕಿಂತಲೂ ಮುಖ್ಯವಾಗಿ ಅಲೆಕ್ಸಾಂಡರನು ಭಾರತದೇಶದ ದಂಡಯಾತ್ರೆಯನ್ನು ಕೈಗೊಳ್ಳುವುದಕ್ಕೆ ಮುಂಚೆಯೇ ಭಾರತದಲ್ಲಿ ನಾಣ್ಯಗಳ ಬಳಕೆ ಇದ್ದಿತು ಎಂಬುದು ಗ್ರೀಕ್ ಚರಿತ್ರಕಾರನ ಬರವಣಿಗೆಯಿಂದಲೇ ತಿಳಿದುಬರುತ್ತದೆ. ಕ್ವಿಂಟಸ್ ಕರ್ಟಿಸ್ ಎಂಬ ಗ್ರೀಕ್ ಚರಿತ್ರಕಾರನ ಪ್ರಕಾರ, ತಕ್ಷಶಿಲೆಯ ದೊರೆಯು ಅಲೆಕ್ಸಾಂಡರನಿಗೆ ಕೊಟ್ಟ ಉಡುಗೊರೆಯಲ್ಲಿ ಬೆಳ್ಳಿಯ ನಾಣ್ಯಗಳು ಸೇರಿದ್ದವು. ಅಂದ ಮೇಲೆ ಭಾರತೀಯರು ಅಲೆಕ್ಸಾಂಡರನ ದಂಡಯಾತ್ರೆ ಆದ ಮೇಲೆ ನಾಣ್ಯ ತಾಂತ್ರಿಕತೆಯನ್ನು ಕಲಿತರು ಎನ್ನುವುದು ಸಾಧ್ಯವಲ್ಲದ ಸಂಗತಿಯಾಗುತ್ತದೆ.

ವಿನ್ಸೆಂಟ್ ಸ್ಮಿತ್, ಕೆನ್ನೆಡಿ ಮುಂತಾದ ವಿದ್ವಾಂಸರ ಪ್ರಕಾರ ಭಾರತೀಯರು ನಾಣ್ಯ ತಾಂತ್ರಿಕತೆಯನ್ನು ಬ್ಯಾಬಿಲಾನ್ ಜನಗಳಿಂದ ಕಲಿತರು. ಬ್ಯಾಬಿಲಾನಿನಲ್ಲಿ ಶೆಕೆಲ್ ಎಂಬ ನಾಣ್ಯಗಳು ಬಳಕೆಯಲ್ಲಿದ್ದವು. ಅವುಗಳ ಕಾಲ ಕ್ರಿ.ಪೂ. ಆರನೆಯ ಶತಮಾನ. ಅವು ಭಾರತೀಯರಿಗೆ ನಾಣ್ಯ ಮಾದರಿಯನ್ನು ಒದಗಿಸಿದವು ಎಂದು ಇವರು ಅಭಿಪ್ರಾಯ ಪಡುತ್ತಾರೆ. ಆದರೆ ಭಾರತೀಯ ನಾಣ್ಯಗಳಿಗೂ ಶೆಕೆಲ್‌ಗಳಿಗೂ ಯಾವ ರೂಪದ ಸಾಮ್ಯವೂ ಕಾಣಬರುವುದಿಲ್ಲ. ಅದಕ್ಕಿಂತ ಹೆಚ್ಚಾಗಿ, ಪ್ರಾಚೀನ ಭಾರತೀಯ ನಾಣ್ಯಗಳು ಕ್ರಿ.ಪೂ. ಆರನೆಯ ಶತಮಾನಕ್ಕೂ ಹಿಂದಿನವು. ಆದುದರಿಂದ ಬ್ಯಾಬಿಲಾನಿನ ಸಿದ್ಧಾಂತವನ್ನು ಸುಲಭವಾಗಿ ತಳ್ಳಿ ಹಾಕಬೇಕು.

ಖ್ಯಾತ ನಾಣ್ಯಶಾಸ್ತ್ರಜ್ಞ ಅಲೆನ್ ಅವರ ಪ್ರಕಾರ ಭಾರತೀಯರು ನಾಣ್ಯ ಪದ್ಧತಿಯನ್ನು ಅಕೆಮೇನಿಯನ್ ಪರ್ಷಿಯನ್ನರಿಂದ ಕಲಿತರು. ಈ ಎರಡು ದೇಶಗಳಿಗೂ ಪ್ರಾಚೀನ ಕಾಲದಿಂದ ವ್ಯಾಪಾರ ಸಂಬಂಧಗಳಿದ್ದುದರಿಂದ ಇದು ಸಾಧ್ಯವಾಯಿತು ಎಂಬುದು ಇವರ

ಅಭಿಪ್ರಾಯ. ಅಂದರೆ ಪರ್ಷಿಯದ ಸಿಗ್ಲಾಯ್ ನಾಣ್ಯಗಳೇ ಭಾರತೀಯ ಪಂಚ್ ಚಿಹ್ನೆಯ ನಾಣ್ಯಗಳಿಗೆ ಮಾದರಿಯನ್ನು ಒದಗಿಸಿದವು ಎನ್ನುವುದೇ ಇವರ ಮುಖ್ಯ ವಾದ. ಆದರೆ ಈ ಎರಡೂ ನಾಣ್ಯಗಳಿಗಿರುವ ಭಿನ್ನತೆಗಳಿಂದಲೇ ಈ ವಾದವನ್ನು ತಿರಸ್ಕರಿಸಬಹುದು. ಆದುದರಿಂದ ಈ ಮೇಲಿನ ವಿದೇಶೀಯ ಉಗಮದ ವಾದಗಳನ್ನು ಸುಲಭವಾಗಿ ತಳ್ಳಿಹಾಕಬಹುದು.

ಈ ಎಲ್ಲ ಮಾಹಿತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಗಿನ ನಿರ್ಧಾರಕ್ಕೆ ಬರಬಹುದು. ಪ್ರಾಚೀನ ಭಾರತೀಯರಿಗೆ ವಿದೇಶೀಯರಿಂದ ನಾಣ್ಯ ಪದ್ಧತಿಯನ್ನು ಕಲಿಯುವ ಹಾಗೂ ಅನುಕರಿಸುವ ಪ್ರಮೇಯವೇ ಬರಲಿಲ್ಲ. ಕ್ರಿ.ಪೂ. ಮೂರು ಸಾವಿರ ವರ್ಷಗಳಷ್ಟು ಪ್ರಾಚೀನವಾದ ಸಿಂಧೂ-ಸರಸ್ವತೀ ಸಂಸ್ಕೃತಿಯ ಕೊನೆಯ ಭಾಗಕ್ಕೆ ಸೇರಬಹುದಾದ ಮೊಹೆಂಜೊದಾರೊ ಉತ್ಖನನದಲ್ಲಿ ದೊರಕಿರುವ ಬೆಳ್ಳಿಯ ಚೂರುಗಳೇ ಭಾರತದ ಪ್ರಾಚೀನತಮ ನಾಣ್ಯಗಳು. ಇವುಗಳ ಪುನರಧ್ಯಯನ ನಡೆದರೆ ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಗಳು ದೊರೆತು ಈ ವಿಷಯದಲ್ಲಿ ಇನ್ನೂ ಖಚಿತವಾದ ಅಭಿಪ್ರಾಯಗಳು ರೂಪಗೊಳ್ಳುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಇದನ್ನು ಬಿಟ್ಟು, ವೈದಿಕ ಸಾಹಿತ್ಯದ ವಿವಿಧ ಸ್ತರಗಳ ಮಾಹಿತಿಯನ್ನು ಗಮನಿಸಿದರೆ, ಅತ್ಯಂತ ಪ್ರಾಥಮಿಕ ಹಂತದ ನಾಣ್ಯ ತಾಂತ್ರಿಕತೆ ಆ ಕಾಲದಲ್ಲಿದ್ದಿತು ಎಂಬುದು ಗೊತ್ತಾಗುತ್ತದೆ. ಕಾಲಮಾನ ದೃಷ್ಟಿಯಿಂದ ಇದನ್ನು ಗಮನಿಸಿದರೆ ಕ್ರಿ.ಪೂ. 1000 ದ ಸಮಯಕ್ಕೆ ಈ ತಾಂತ್ರಿಕತೆಯನ್ನು ಕೊಂಡೊಯ್ಯಬಹುದು. ಅಂದರೆ ಬೆಳ್ಳಿಯ ಪಂಚ್ ಚಿಹ್ನೆಯ ನಾಣ್ಯಗಳಿಗೆ ಭಾರತದ ಪ್ರಾಚೀನತಮ ನಾಣ್ಯಗಳೆಂಬ ಗೌರವ ಪ್ರಾಪ್ತವಾಗುತ್ತದೆ.

ನಾಣ್ಯಶಾಸ್ತ್ರ ಅಧ್ಯಯನ

ಪ್ರಾಚೀನ ಕರ್ನಾಟಕ ನಾಣ್ಯಗಳ ಇತಿಹಾಸ ಎಷ್ಟೇ ಆಕರ್ಷಕವಾಗಿದ್ದು ರೋಚಕವಾಗಿದ್ದರೂ, ಈ ವಿಷಯದಲ್ಲಿ ನಡೆದಿರುವ ಅಧ್ಯಯನ ಮತ್ತು ಸಂಶೋಧನೆ ಅಷ್ಟೇನೂ ತೃಪ್ತಿ ತರುವುದಿಲ್ಲ. ಇದಕ್ಕೆ ನಾಣ್ಯಗಳ ಕೊರತೆ ಕಾರಣವಲ್ಲ. ಏಕೆಂದರೆ ಸಾವಿರಾರು ಸಂಖ್ಯೆಯಲ್ಲಿ ಪ್ರಾಚೀನ ನಾಣ್ಯಗಳು ವಿವಿಧ ರೂಪಗಳಲ್ಲಿ ಹೊರ ಬಂದಿವೆ ಮತ್ತು ಈಗಲೂ ಬರುತ್ತಿವೆ. ನಾಣ್ಯ ಸಂಗ್ರಹಕಾರರಲ್ಲಿಯೂ ಸಾವಿರಾರು ನಾಣ್ಯಗಳು ಕಾಣಬರುತ್ತಿವೆ. ವಸ್ತು ಸಂಗ್ರಹಾಲಯಗಳಲ್ಲಿಯೂ ನಾಣ್ಯಗಳು ಪ್ರದರ್ಶಿಸಲ್ಪಡುತ್ತಿವೆ. ಈ ಎಲ್ಲ ಅಂಶಗಳನ್ನೂ ಗಮನಿಸಿದರೆ ಪ್ರಾಚೀನ, ಮಧ್ಯಕಾಲೀನ ಹಾಗೂ ಇತ್ತೀಚಿನ ನಾಣ್ಯಗಳು ಹೇರಳವಾಗಿವೆ ಎಂಬುದು ಖಚಿತವಾಗುತ್ತದೆ. ಆದರೆ ಇಂತಹ ಶ್ರೀಮಂತವಾದ ನಾಣ್ಯಸಂಪತ್ತನ್ನು ಅಧ್ಯಯನ ಮಾಡುವ ಹಾಗೂ ಅದ ವಿಷಯದಲ್ಲಿ ಸಂಶೋಧನೆ ನಡೆಸುವವರು ತೀರ ವಿರಳ. ಆದುದರಿಂದ ಇತಿಹಾಸದ ವಿವಿಧ ಆಕರಗಳಲ್ಲಿ ಹೆಚ್ಚು ಬಡಕಲಾಗಿ ಕಾಣುವ ವಿಷಯವೆಂದರೆ ಪ್ರಾಚೀನ ನಾಣ್ಯಶಾಸ್ತ್ರ. ಇತ್ತೀಚಿನ ವರ್ಷಗಳಲ್ಲಿ

ಸ್ವಲ್ಪಮಟ್ಟಿಗೆ ಈ ನಿರಾಶಾದಾಯಕ ಪರಿಸ್ಥಿತಿ ಬದಲಾಗುತ್ತಿರುವುದು ಸಂತಸ ತರುವ ಸಂಗತಿ. ಉತ್ತರ ಭಾರತಕ್ಕೆ ಹೋಲಿಸಿ ನೋಡಿದರೆ, ದಕ್ಷಿಣ ಭಾರತ ಹಾಗೂ ಕರ್ನಾಟಕ ನಾಣ್ಯಶಾಸ್ತ್ರ ಅಧ್ಯಯನದಲ್ಲಿ ತೀರ ಹಿಂದೆ ಬಿದ್ದಿದೆಯೆಂದು ಯಾರಿಗಾದರೂ ಅನ್ನಿಸುತ್ತದೆ. ನಾಣ್ಯಗಳು ತೀರ ಸಣ್ಣ ಆಕಾರದಲ್ಲಿದ್ದು ಅವುಗಳ ಮೇಲಿನ ಬರಹವನ್ನು ಓದುವುದು ಅಥವಾ ಚಿಹ್ನೆಗಳನ್ನು ಗುರುತಿಸುವುದು ಕಷ್ಟದ ಕೆಲಸ. ಇವು ತುಂಬ ಸೂಕ್ಷ್ಮವಾಗಿದ್ದು ಸಾಮಾನ್ಯ ಕಣ್ಣಿಗೆ ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಆದುದರಿಂದ ಮಸೂರ (ಲೆನ್ಸ್) ದ ಸಹಾಯದಿಂದ ಬರಹಗಳನ್ನು ಓದಬೇಕು ಮತ್ತು ಚಿಹ್ನೆಗಳನ್ನು ಗುರುತಿಸಬೇಕು. ನಿಜವಾಗಿಯೂ ಇದು ತ್ರಾಸದಾಯಕ ಕೆಲಸವೇ ಸರಿ. ಅನೇಕ ಸಾರಿ ಒಂದು ಕ್ಲಿಷ್ಟಕರ ನಾಣ್ಯವನ್ನು ಅರ್ಥಮಾಡಿಕೊಳ್ಳಲು ಕೆಲವು ತಿಂಗಳುಗಳೇ ಬೇಕಾಗುತ್ತವೆ. ನಾಣ್ಯಗಳ ಮೇಲೆ ಬರಹಗಳಿರುತ್ತವೆ. ಈ ಬರಹಗಳು ವಿವಿಧ ಕಾಲದ ಪ್ರಾಚೀನ ಲಿಪಿಗಳಲ್ಲಿರುತ್ತವೆ. ಈ ಲಿಪಿಯ ಲಕ್ಷಣಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ಆದುದರಿಂದ ನಾಣ್ಯಶಾಸ್ತ್ರಜ್ಞನಿಗೆ ಪ್ರಾಚೀನ ಲಿಪಿಶಾಸ್ತ್ರದ ಉತ್ತಮ ಜ್ಞಾನವಿರಬೇಕಾದುದು ಅತ್ಯಾವಶ್ಯಕ. ಅದೇ ರೀತಿಯಲ್ಲಿ ಲೋಹಶಾಸ್ತ್ರದ ಸಾಮಾನ್ಯ ಪರಿಚಯವೂ ಇರಬೇಕು. ಇತಿಹಾಸದ ಜ್ಞಾನವಂತೂ ಅತ್ಯಾವಶ್ಯಕ. ಜೊತೆಗೆ ಧಾರ್ಮಿಕ ಸ್ಥಿತಿಗಳ ಪರಿಚಯವೂ ಇರಬೇಕು, ಏಕೆಂದರೆ ಪ್ರಾಚೀನ ನಾಣ್ಯಗಳ ಮೇಲೆ ದೇವದೇವತೆಗಳ ಚಿತ್ರಗಳೂ ಹಾಗೂ ಧಾರ್ಮಿಕ ಚಿಹ್ನೆಗಳೂ ವಿಶೇಷವಾಗಿ ಕಂಡುಬರುತ್ತವೆ. ಇವುಗಳಿಂದ ಕಷ್ಟಕರವೆನಿಸಿದರೂ, ನಾಣ್ಯಗಳ ಅಧ್ಯಯನ ಬಲು ರೋಚಕವಾಗಿದ್ದು, ಅನೇಕರು ಇದನ್ನು ಹವ್ಯಾಸವಾಗಿ ಬೆಳೆಸಿಕೊಂಡು ಹೊಸ ಹೊಸ ನಾಣ್ಯಗಳನ್ನು ಪತ್ತೆ ಮಾಡುವುದರಲ್ಲಿ ಹಾಗೂ ಆ ರೀತಿಯ ನಾಣ್ಯಗಳನ್ನು ಗ್ರಂಥಗಳ ಮತ್ತು ಲೇಖನಗಳ ಮೂಲಕ ಜನಗಳ ಗಮನಕ್ಕೆ ತರುವ ಸ್ತುತ್ಯರ್ಹ ಕೆಲಸವನ್ನು ಮಾಡಿದ್ದಾರೆ. ಇಂತಹ ಆಸಕ್ತ ನಾಣ್ಯಶಾಸ್ತ್ರಜ್ಞರ ಪರಿಶ್ರಮದಿಂದಾಗಿ ಕರ್ನಾಟಕ ನಾಣ್ಯಶಾಸ್ತ್ರದ ವಿವಿಧ ವಿಷಯಗಳು ನಮಗೆ ತಿಳಿದುಬಂದಿವೆ. ಅವುಗಳಲ್ಲಿ ಮುಖ್ಯವಾದವನ್ನು ಈಗ ಗಮನಿಸಬಹುದು.

ಹಿಂದಿನ ಮೈಸೂರು ಸಂಸ್ಥಾನದಲ್ಲಿ ಪುರಾತತ್ವ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ಇಲಾಖೆಯನ್ನು 1884ರಲ್ಲಿ ಸ್ಥಾಪಿಸಲಾಯಿತು. ಈ ಇಲಾಖೆ ಶಾಸನ ಶಾಸ್ತ್ರದಲ್ಲಿ ಅಮೋಘ ಕಾರ್ಯವನ್ನು ಮಾಡಿ 'ಎಪಿಗ್ರಾಫಿಯ ಕರ್ನಾಟಿಕ' ದಂತಹ ಹೊತ್ತಿಗೆಗಳನ್ನು ಪ್ರಕಟಿಸಿ ವಿಶ್ವಕ್ಕೆ ಮಾದರಿಯೆನಿಸಿತು. ಆದರೆ ಇದು ನಾಣ್ಯಶಾಸ್ತ್ರ ವಿಷಯದಲ್ಲಿ ಗಮನಾರ್ಹವಾದ ಕೆಲಸವನ್ನೇನೂ ಮಾಡಲಿಲ್ಲ. ಎಂ.ಎಚ್. ಕೃಷ್ಣ ಅವರು ಈ ಇಲಾಖೆಯ ನಿರ್ದೇಶಕರಾದ ನಂತರ ನಾಣ್ಯಗಳನ್ನು ಕುರಿತು ವಿವರವಾಗಿ ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟುಗಳಲ್ಲಿ ಬರೆಯಲು ಆರಂಭಿಸಿದರು. ಇವುಗಳಲ್ಲಿ ಕರ್ನಾಟಕ ನಾಣ್ಯಗಳನ್ನು ಕುರಿತ ಉತ್ತಮವಾದ ಮಾಹಿತಿಗಳಿವೆ. 1956ರ ವರೆಗೆ ಈ ರೀತಿಯ ವರದಿಗಳು ಪ್ರಕಟವಾಗುತ್ತ ಬಂದಿವೆ. ಆನಂತರದ ವರದಿಗಳು ಇನ್ನೂ ಪ್ರಕಟವಾಗದೆ, ಕರ್ನಾಟಕ

ಪುರಾತತ್ವ ಇಲಾಖೆಯಲ್ಲಿ ಪ್ರತಿವರ್ಷವೂ ಸಂಗ್ರಹವಾದ ನಾಣ್ಯಗಳು ಅಧ್ಯಯನವಿಲ್ಲದೆ ಇವೆ. ಆದಷ್ಟು ಬೇಗ ಈ ಸ್ಥಿತಿ ಕೊನೆಗೊಳ್ಳಬೇಕು. 1856ರಲ್ಲಿ ಹಾಕ್ಸ್ ಎನ್ನುವವರು ಮೈಸೂರು ಸಂಸ್ಥಾನದಲ್ಲಿ ದೊರಕಿದ್ದು ಅವರ ಸಂಗ್ರಹದಲ್ಲಿದ್ದ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಕುರಿತು ಒಂದು ಗ್ರಂಥವನ್ನು ಬರೆದರು. ಬಹುಶಃ ಕರ್ನಾಟಕದ ನಾಣ್ಯ ಶಾಸ್ತ್ರವನ್ನು ಕುರಿತಾದ ಮೊದಲನೆಯ ಗ್ರಂಥವಿದು. 1883ರಲ್ಲಿ ಬಿಡೀ ಎನ್ನುವವರು ಚಾಲುಕ್ಯ, ವಿಜಯನಗರ ಮತ್ತು ಮೈಸೂರು ಒಡೆಯರ ನಾಣ್ಯಗಳನ್ನು ಕುರಿತು ಪುಸ್ತಿಕೆಯೊಂದನ್ನು ಪ್ರಕಟಿಸಿದರು. 1884ರಲ್ಲಿ ಸರ್ ವಾಲ್ಟರ್ ಇಲಿಯಟ್ ಅವರು 'ಕಾಯಿನ್ಸ್ ಆಫ್ ಸದರ್ನ್ ಇಂಡಿಯ' ಎಂಬ ಉತ್ತಮ ಗ್ರಂಥವನ್ನು ಪ್ರಕಟಿಸಿದರು. ಇದರಲ್ಲಿ ಕರ್ನಾಟಕ ನಾಣ್ಯಗಳೂ ಸೇರಿವೆ. ಇದಾದ ನಾಲ್ಕು ವರ್ಷಗಳ ನಂತರ ಥರ್ಸ್ಟನ್ ಅವರು ಮದ್ರಾಸಿನ ಸರ್ಕಾರಿ ಸಂಗ್ರಹಾಲಯದಲ್ಲಿದ್ದ ನಾಣ್ಯಗಳನ್ನು ಕುರಿತು ಒಂದು ಕ್ಯಾಟಲಾಗನ್ನು ಪ್ರಕಟಿಸಿದರು. ಇದರಲ್ಲಿ ಕರ್ನಾಟಕದ ಅನೇಕ ರಾಜಮನೆತನಗಳ ನಾಣ್ಯಗಳೂ ಸೇರಿವೆಯಾದುದರಿಂದ ನಮಗೆ ಉಪಯುಕ್ತವೆನಿಸಿದೆ. 1889ರಲ್ಲಿ ಟಫ್ನೆಲ್ ಎಂಬ ವಿದ್ವಾಂಸನು ಬೆಂಗಳೂರಿನ ಸಂಗ್ರಹಾಲಯದಲ್ಲಿದ್ದ ನಾಣ್ಯಗಳನ್ನು ಕುರಿತು ನಾಣ್ಯಪಟ್ಟಿಯನ್ನು ತಯಾರಿಸಿ ಪ್ರಕಟಿಸಿದನು. ಇದರಲ್ಲಿ ಸಂಗ್ರಹಾಲಯದಲ್ಲಿರುವ ನಾಣ್ಯಗಳಿಗೆ ಸೀಮಿತವಾಗಿರುವಂತೆ ಮಾಹಿತಿಗಳು ದೊರಕುತ್ತವೆ.

1891ರಲ್ಲಿ ಬೆಂಗಳೂರಿನಲ್ಲಿ ರೋಮನ್ ನಾಣ್ಯಗಳು ದೊರಕಿದವು. ಆಗ ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಲೂಯಿ ರೈಸ್ ಅವರು ಈ ನಾಣ್ಯಗಳನ್ನು ಪ್ರಕಟಿಸಿ ರೋಮನ್ ನಾಣ್ಯಗಳ ಅಧ್ಯಯನಕ್ಕೆ ಬುನಾದಿಯನ್ನು ಹಾಕಿದರು. ಆರ್.ಪಿ. ಜಾಕ್ಸನ್ ನಾಣ್ಯಗಳ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸಿದರು. ಅವರು ಅಂದಿನ ಮೈಸೂರು ಸಂಸ್ಥಾನ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ಸರ್ವೇಕ್ಷಣೆ ನಡೆಸಿ, ತಮಗೆ ದೊರಕಿದ ನಾಣ್ಯಗಳನ್ನು ಕುರಿತು ಮೂರು ಗ್ರಂಥಗಳನ್ನು ಪ್ರಕಟಿಸಿದರು. ಮೊದಲನೆಯ ಪುಸ್ತಕವೇ 'ಕಾಯಿನ್ ಕಲೆಕ್ಟಿಂಗ್ ಇನ್ ಮೈಸೂರ್'. ಇದರಲ್ಲಿ ಟೀಪು ಮತ್ತು ಮೈಸೂರು ಒಡೆಯರ್ ದೊರೆಗಳಿಗೆ ಸೇರಿದ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಕುರಿತಾದ ವಿವರಣೆಗಳಿವೆ. ಎರಡನೆಯ ಪುಸ್ತಕದ ಹೆಸರು 'ಕಾಯಿನ್ ಕಲೆಕ್ಟಿಂಗ್ ಇನ್ ಡೆಕನ್'. ಇದರಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಬಹಮನಿ ಸುಲ್ತಾನರ ಕೆಲವು ನಾಣ್ಯಗಳ ವಿವರಣೆಯನ್ನು ಕಾಣಬಹುದು. ಇವರು ರಚಿಸಿದ ಮೂರನೆಯ ಪುಸ್ತಕದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯ ಕಂಪೆನಿಯ ದಕ್ಷಿಣ ಭಾರತದ ನಾಣ್ಯಗಳ ವಿವರಣೆಗಳಿವೆ. ಟೀಪು ಸುಲ್ತಾನನ ನಾಣ್ಯಗಳನ್ನು ಕುರಿತಾದ ಎರಡು ಗ್ರಂಥಗಳನ್ನು ಹೆಸರಿಸಬಹುದು. ಮೊದಲನೆಯದು ಜಿ.ಪಿ. ಟೈಲರ್ ಅವರು 1914ರಲ್ಲಿ ಪ್ರಕಟಿಸಿದ 'ದಿ ಕಾಯಿನ್ಸ್ ಆಫ್ ಟೀಪು ಸುಲ್ತಾನ್'. ಎರಡನೆಯ ಪುಸ್ತಕವನ್ನು ರಚಿಸಿದವರು ಹೆಂಡರ್‌ಸನ್. ಇವರು 1921ರಲ್ಲಿ 'ಕಾಯಿನ್ಸ್ ಆಫ್ ಹೈದರ್ ಅಲಿ ಅಂಡ್ ಟೀಪು ಸುಲ್ತಾನ್' ಎಂಬ ಪುಸ್ತಕ ಪ್ರಕಟಿಸಿದರು. ಇದು ಉತ್ತಮವಾದ

ಪುಸ್ತಕವಾಗಿದ್ದು ಸುಂದರ ಛಾಯಾ ಚಿತ್ರಗಳನ್ನೊಳಗೊಂಡು ಇಂದಿಗೂ ಪ್ರಮಾಣ ಪೂರ್ವಕವೆನಿಸಿದೆ. ಟಂಕಶಾಲೆಗಳಿಗನುಗುಣವಾಗಿ ಇವರು ಟೀಪುವಿನ ನಾಣ್ಯಗಳನ್ನು ಅಧ್ಯಯನ ಮಾಡಿದ್ದಾರೆ.

ಆರ್. ನರಸಿಂಹಾಚಾರ್ ಅವರು ಮೈಸೂರು ಪ್ರಾಚ್ಯವಸ್ತು ಇಲಾಖೆಯ ನಿರ್ದೇಶಕರಾಗಿದ್ದ 1908-1921ರ ಸಮಯದಲ್ಲಿ, ತಮ್ಮ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಶಾತವಾಹನ, ಚುಟು, ವಿಜಯನಗರ, ಮೈಸೂರು ಒಡೆಯರ್ ಮತ್ತು ಟೀಪು ನಾಣ್ಯಗಳನ್ನು ಕುರಿತು ಟಿಪ್ಪಣಿಗಳನ್ನು ಸೇರಿಸಿದ್ದಾರೆ. ಅನಂತರ ನಿರ್ದೇಶಕರಾದ ಎಂ.ಎಚ್. ಕೃಷ್ಣ ಅವರು 'ಡೆಕ್ಕನ್ ನ್ಯೂಮಿಸ್ ಮ್ಯಾಟಿಕ್ಸ್' ಎಂಬ ವಿಷಯವನ್ನು ಕುರಿತು ಲಂಡನ್ನಿನಲ್ಲಿ ಸಂಶೋಧನೆ ನಡೆಸಿದರು. ಅವರ ಈ ಗ್ರಂಥ ಪ್ರಕಟವಾಗದೇ ಇದ್ದರೂ, ಇದರಲ್ಲಿದ್ದ ಚಾಲುಕ್ಯ, ಹೊಯ್ಸಳ, ಸೇವುಣ, ರಾಷ್ಟ್ರಕೂಟ, ಕದಂಬ, ವಿಜಯನಗರ. ಮುಂತಾದ ನಾಣ್ಯಗಳನ್ನು ಕುರಿತಾದ ವಿವರಣೆಗಳನ್ನು ತಾವೇ ಪ್ರಕಟಿಸಿದ ಪ್ರಾಚ್ಯ ವಸ್ತು ಇಲಾಖೆಯ ವಾರ್ಷಿಕ ವರದಿಗಳಲ್ಲಿ ಸೇರಿಸಿ ಮಹದುಪಕಾರ ಮಾಡಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ನಾಣ್ಯಗಳನ್ನು ಕುರಿತಂತೆ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಕೆಲವು ಪುಸ್ತಕಗಳು ಪ್ರಕಟವಾಗಿವೆ. ಮೊದಲನೆಯದಾಗಿ ಹೆಸರಿಸಬೇಕಾದುದು ಎ.ವಿ. ನರಸಿಂಹಮೂರ್ತಿಯವರ ಇಂಗ್ಲಿಷ್ ಪುಸ್ತಕ 'ಕಾಯಿನ್ಸ್ ಅಂಡ್ ಕರೆನ್ಸಿ ಸಿಸ್ಟಂ ಇನ್ ಕರ್ನಾಟಕ'. 25 ವರ್ಷಗಳ ಹಿಂದೆ ಇದೇ ಲೇಖಕರು ಬರೆದಿದ್ದ 'ಕಾಯಿನ್ಸ್ ಆಫ್ ಕರ್ನಾಟಕ' ಎಂಬ ಪುಸ್ತಕದ ವಿಸ್ತೃತ ಹಾಗೂ ಪರಿಷ್ಕೃತ ರೂಪದ ಈ ಪುಸ್ತಕದ ವೈಶಿಷ್ಟ್ಯವೆಂದರೆ, ನಾಣ್ಯಶಾಸ್ತ್ರದೃಷ್ಟಿಯಿಂದ ಇಡೀ ಕರ್ನಾಟಕವನ್ನು ಪರಿಗಣಿಸುವ ದೃಷ್ಟಿಕೋನ. ಇದೇ ಲೇಖಕರು 'ಕಾಯಿನ್ಸ್ ಅಂಡ್ ಕರೆನ್ಸಿ ಸಿಸ್ಟಂ ಇನ್ ವಿಜಯನಗರ ಎಂಪೈರ್' (1991) ಎಂಬ ಕೃತಿಯನ್ನು ಬರೆದು ವಿಜಯನಗರ ಸಾಮ್ರಾಜ್ಯವು ನಾಣ್ಯ ಸಂಪತ್ತಿಗೆ ನೀಡಿದ ಕೊಡುಗೆಗಳನ್ನು ನಾಣ್ಯಗಳ, ಶಾಸನಗಳ ಹಾಗೂ ವಿದೇಶೀ ಯಾತ್ರಿಕರ ಮಾಹಿತಿಗಳ ಮೂಲಕ ವಿಶ್ಲೇಷಿಸಿದ್ದಾರೆ. ಎ.ವಿ. ನರಸಿಂಹಮೂರ್ತಿಯವರ ಇನ್ನೊಂದು ಪುಸ್ತಕ 'ಸ್ಟಡೀಸ್ ಇನ್ ಕರ್ನಾಟಕ ನ್ಯೂಮಿಸ್‌ಮ್ಯಾಟಿಕ್ಸ್' (1996). ಇದರಲ್ಲಿ ಕರ್ನಾಟಕ ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದ ಮೂವತ್ತ ನಾಲ್ಕು ಬಿಡಿ ಲೇಖನಗಳಿವೆ. ನಾಣ್ಯಶಾಸ್ತ್ರದ ವಿವಿಧ ನಿಯತಕಾಲಿಕೆಗಳಲ್ಲಿ ಹಾಗೂ ಸಂಭಾವನಾ ಗ್ರಂಥಗಳಲ್ಲಿ ಲೇಖಕರು ಬರೆದ ಲೇಖನಗಳನ್ನು ಇಲ್ಲಿ ಜೋಡಿಸಿ ಪ್ರಕಟಿಸಲಾಗಿದೆ. ಕರ್ನಾಟಕದ ನಾಣ್ಯಶಾಸ್ತ್ರವನ್ನು ತಿಳಿಯುವವರಿಗೆ ಇದು ಬಲು ಉಪಯುಕ್ತ ಗ್ರಂಥವೆನಿಸಿದೆ. ಇದೇ ಲೇಖಕರು 'ಅರ್ಲಿ ಹಿಸ್ಟಾರಿಕ್ ಆರ್ಕಿಯಾಲಜಿ ಅಂಡ್ ನ್ಯೂಮಿಸ್‌ಮ್ಯಾಟಿಕ್ಸ್ ಆಫ್ ಕರ್ನಾಟಕ' (1991) ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ನಾಣ್ಯಗಳು ಯಾವ ರೀತಿ ಪುರಾತತ್ವದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ವಿಶ್ಲೇಷಿಸುವುದಲ್ಲದೆ ಕರ್ನಾಟಕ ನಾಣ್ಯ

ಶಾಸ್ತ್ರದ ಇತ್ತೀಚಿನ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಜೊತೆಗೆ ಕನ್ನಡ ಸಾಹಿತ್ಯಿಕ ಗ್ರಂಥಗಳಲ್ಲಿ ನಾಣ್ಯಗಳ ಬಗೆಗೆ ದೊರಕುವ ಮಾಹಿತಿಗಳನ್ನೂ ಗುರುತಿಸಿದ್ದಾರೆ. ಇದೇ ಲೇಖಕರು ಸಂಪಾದಿಸಿರುವ 'ಆರ್ಕಿಯಾಲಜಿ ಆಫ್ ಕರ್ನಾಟಕ' (1978) ಎಂಬ ಗ್ರಂಥದಲ್ಲಿ ಕರ್ನಾಟಕ ನಾಣ್ಯಗಳನ್ನು ಕುರಿತಾದ ದೀರ್ಘ ಲೇಖನವಿದೆ.

ಎ.ವಿ. ನರಸಿಂಹಮೂರ್ತಿಯವರು ಕರ್ನಾಟಕ ನಾಣ್ಯಗಳನ್ನು ಕುರಿತು ಕನ್ನಡದಲ್ಲಿ ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಮೊದಲನೆಯದು ವಿಜಯನಗರ ನಾಣ್ಯ ಸಂಪತ್ತು. ಹೆಸರೇ ತಿಳಿಸುವಂತೆ ಇದು ವಿಜಯನಗರ ಸಾಮ್ರಾಜ್ಯದ ನಾಣ್ಯಗಳ ವಿವರವಾದ ಅಧ್ಯಯನ. ಎರಡನೆಯದು ಮಕ್ಕಳಿಗಾಗಿ ಬರೆದ ಪುಟ್ಟ ಪುಸ್ತಿಕೆ ಕರ್ನಾಟಕ ನಾಣ್ಯ ಸಂಪತ್ತು. ಮೂರನೆಯದು ಕರ್ನಾಟಕದಲ್ಲಿ ದೊರಕಿರುವ ವಿದೇಶೀ ನಾಣ್ಯಗಳನ್ನು ಕುರಿತಾದ ಅಧ್ಯಯನ. ಕೊನೆಯ ಪುಸ್ತಕ ಭಾರತೀಯ ನಾಣ್ಯಗಳು. ಇದರಲ್ಲಿ ಕರ್ನಾಟಕ ನಾಣ್ಯಗಳನ್ನು ಕುರಿತಾದ ವಿವರಣೆಗಳು ಸಂಗ್ರಹರೂಪದಲ್ಲಿವೆ.

ಗಣೇಶ್ ಮತ್ತು ಗಿರಿಜಾಪತಿಯವರು ಮೂರು ಪುಸ್ತಕಗಳನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸಿದ್ದಾರೆ. ಮೊದಲನೆಯದು 'ಕಾಯಿನ್ಸ್ ಆಫ್ ದಿ ವಿಜಯನಗರ ಎಂಪೈರ್'. ಇದರಲ್ಲಿ ವಿಜಯನಗರಕ್ಕೆ ಸಂಬಂಧಿಸಿದ ಹೊಸ ನಾಣ್ಯಗಳ ಮಾಹಿತಿಯಿದೆ. ಇದೇ ಲೇಖಕರ 'ಕರ್ನಾಟಕ ನ್ಯೂಮಿಸ್‌ಮ್ಯಾಟಿಕ್ ಸ್ಟಡೀಸ್' ಮತ್ತು 'ಕಾಯಿನ್ಸ್ ಆಫ್ ದಿ ಹೊಯ್ಸಳಾಸ್' ಉಪಯುಕ್ತ ಪುಸ್ತಕಗಳು. ಇದೇ ಗುಂಪಿಗೆ ಸೇರಬಹುದಾದ ಇನ್ನೊಂದು ಕೃತಿಯೆಂದರೆ ಖಂಡೋಬ ರಾವ್ ಅವರ ನಾಣ್ಯ ಕರ್ನಾಟಕ. 1999ರಲ್ಲಿ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯವರು ಒಂದು ನಾಣ್ಯಶಾಸ್ತ್ರ ಸಮ್ಮೇಳನವನ್ನು ಏರ್ಪಡಿಸಿದ್ದರು. ಅದರಲ್ಲಿ ಮಂಡಿಸಿದ ಪ್ರಬಂಧಗಳನ್ನು 'ಸ್ವಾತಂತ್ರ್ಯೋತ್ತರದಲ್ಲಿ ಕರ್ನಾಟಕ ನಾಣ್ಯಶಾಸ್ತ್ರ' ಎಂಬ ಹೆಸರಿನಲ್ಲಿ ಎಂ.ವಿ. ಕೃಷ್ಣಪ್ಪ ಮತ್ತು ಆರ್. ಗೋಪಾಲ್ ಸಂಪಾದಿಸಿ ಪ್ರಕಟಿಸಿದ್ದಾರೆ.

ಆಂಧ್ರ ಪ್ರದೇಶದ ಪುರಾತತ್ವ ಇಲಾಖೆಯು ಕರ್ನಾಟಕ ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಕೆಲವು ಗ್ರಂಥಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ಹೆಸರಿಸಬಹುದು. ಮೊದಲನೆಯದು ಎನ್. ರಮೇಶನ್ ಅವರು ತಯಾರಿಸಿ ಪ್ರಕಟಿಸಿರುವ ವಿಜಯನಗರ ನಾಣ್ಯಗಳ ಕ್ಯಾಟಲಾಗ್. ಇದು ಆಂಧ್ರಪ್ರದೇಶ ಸರ್ಕಾರದ ವಸ್ತುಸಂಗ್ರಹಾಲಯದಲ್ಲಿರುವ ನಾಣ್ಯಗಳ ಪಟ್ಟಿ. ಇದೊಂದು ಉಪಯುಕ್ತ ಗ್ರಂಥ. ಇದೇ ಸಂಗ್ರಹಾಲಯದಲ್ಲಿರುವ ಸೇವುಣ ನಾಣ್ಯಗಳ ಪಟ್ಟಿಯನ್ನು ಆರ್. ಸುಬ್ರಮಣ್ಯಂ ಅವರು ಪ್ರಕಟಿಸಿದ್ದಾರೆ. ಇದೇ ರೀತಿಯಲ್ಲಿ ಅಬ್ದುಲ್ ವಲಿ ಖಾನ್ ಅವರು, ಇದೇ ಸಂಗ್ರಹಾಲಯದಲ್ಲಿರುವ ಬಹಮನಿ ನಾಣ್ಯಗಳನ್ನು ಪ್ರಕಟಿಸಿದ್ದಾರೆ. ಎಂ. ರಾಮರಾವ್ ಅವರು ಇದೇ ಸಂಗ್ರಹಾಲಯದಲ್ಲಿರುವ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಕೆಲವು ಚಾಲುಕ್ಯ ರಾಜರಿಗೆ ಸೇರಿದವುಗಳಾಗಿವೆ.

ತಮಿಳುನಾಡಿನ ಸರ್ಕಾರದ ಸಂಗ್ರಹಾಲಯದಲ್ಲಿರುವ ಕೆಲವು ನಾಣ್ಯಗಳು ಕರ್ನಾಟಕದ ರಾಜಮನೆತನಗಳಿಗೆ ಸೇರಿದ್ದು, ಅವುಗಳನ್ನು ಈ ಸಂಗ್ರಹಾಲಯ ಪ್ರಕಟಿಸಿದೆ. ಇದರಲ್ಲಿ ಅತಿ ಮುಖ್ಯವಾದುದು ಎಸ್. ಶಂಕರನಾರಾಯಣ ಅವರು ಪ್ರಕಟಿಸಿರುವ ವಿಜಯನಗರ ನಾಣ್ಯಗಳ ಕ್ಯಾಟಲಾಗ್. ಇದು ಉಪಯುಕ್ತ ಗ್ರಂಥವೆನಿಸಿದೆ.

ನಾಣ್ಯಶಾಸ್ತ್ರದ ಅಧ್ಯಯನ ಮತ್ತು ಸಂಶೋಧನೆಗೋಸ್ಕರ ಇರುವ ಮೂರು ಮುಖ್ಯ ಸಂಸ್ಥೆಗಳನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಅಖಿಲ ಭಾರತ ವ್ಯಾಪ್ತಿಯುಳ್ಳ ಭಾರತೀಯ ಮುದ್ರಾ ಪರಿಷತ್ ವಾರಾಣಾಸಿಯಿಂದ ಕಾರ್ಯ ನಿರ್ವಹಿಸುತ್ತಿದೆ. 1910ರಲ್ಲಿ ಸ್ಥಾಪಿತವಾದ ಈ ಸಂಸ್ಥೆಯ ಮುಖ್ಯ ಉದ್ದೇಶ ಭಾರತೀಯ ನಾಣ್ಯಶಾಸ್ತ್ರದ ಅಧ್ಯಯನ ಮತ್ತು ಸಂಶೋಧನೆ. ಈ ಸಂಸ್ಥೆಯು ಪ್ರತಿ ವರ್ಷವೂ ನಾಣ್ಯ ಸಮ್ಮೇಳನವನ್ನು ದೇಶದ ವಿವಿಧ ಸ್ಥಳಗಳಲ್ಲಿ ಏರ್ಪಡಿಸುತ್ತದೆ. ಅಂತೆಯೇ ವರ್ಷಕ್ಕೆ ಒಂದು ಸಂಪುಟವನ್ನು ಪ್ರಕಟಿಸುತ್ತದೆ. ಈ ಸಂಸ್ಥೆ ಪ್ರಕಟಿಸುತ್ತಿರುವ 'ದಿ ಜರ್ನಲ್ ಆಫ್ ದಿ ನ್ಯೂಮಿಸ್‌ಮ್ಯಾಟಿಕ್ ಸೊಸೈಟಿ ಆಫ್ ಇಂಡಿಯ' ಎನ್ನುವ ವಾರ್ಷಿಕ ನಿಯತಕಾಲಿಕೆಯಲ್ಲಿ ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದ ಉತ್ತಮ ಸಂಶೋಧನಾ ಲೇಖನಗಳು ಪ್ರಕಟವಾಗುತ್ತಿವೆ. ಇದು ಅಖಿಲ ಭಾರತ ವ್ಯಾಪ್ತಿಯ ಸಂಸ್ಥೆಯಾದುದರಿಂದ, ಇದರಲ್ಲಿ ಭಾರತದ ಎಲ್ಲ ರಾಜವಂಶಗಳಿಗೆ ಸೇರಿದ ನಾಣ್ಯಗಳ ಲೇಖನಗಳು ಪ್ರಕಟವಾಗುತ್ತಿವೆ. ಇದರಲ್ಲಿ ಕರ್ನಾಟಕ ನಾಣ್ಯಗಳಿಗೆ ಸಂಬಂಧಿಸಿದ ನಾಣ್ಯಗಳೂ ಪ್ರಕಟಗೊಂಡಿವೆ. ಇದುವರೆಗೆ ಈ ನಿಯತ ಕಾಲಿಕೆಯ 57 ಸಂಪುಟಗಳು ಪ್ರಕಟವಾಗಿವೆ. ಇದರಲ್ಲಿ ಮುಕುಂದ ಪ್ರಭು ಅವರು ಆಳುಪ ನಾಣ್ಯಗಳಿಗೆ ಸಂಬಂಧಿಸಿದ ಸೊಗಸಾದ ಲೇಖನವನ್ನು ಬರೆದಿದ್ದಾರೆ. ಎ.ವಿ. ನರಸಿಂಹಮೂರ್ತಿಯವರು ಅನೇಕ ಲೇಖನಗಳನ್ನು ಇದರಲ್ಲಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಮಾನೌಮೀಚೌಪದದಲ್ಲಿ ಕಾಣಬರುವ ನಾಣ್ಯ ವಿಷಯಗಳು, ಕನ್ನಡ ಸಂಖ್ಯೆಯ ನಾಣ್ಯಗಳು, ಕರ್ನಾಟಕ ನಾಣ್ಯಗಳ ಮೇಲೆ ದೇವ-ದೇವತೆಗಳು, ಬನವಾಸಿಯ ನಾಣ್ಯದ ಅಚ್ಚು, ಕರ್ನಾಟಕದ ಶಾಸನಗಳಲ್ಲಿ ಕಾಣಬರುವ ನಾಣ್ಯ ತಾಂತ್ರಿಕತೆ, ಯಾದವ ಭಿಲ್ಲಮನ ಪದ್ಮಟಂಕಗಳು, ಮತ್ತು ಹಳೆಯ ಪ್ರಾಚೀನ ನಾಣ್ಯಗಳು. ಇಂದಿಗೂ ಈ ನಾಣ್ಯ ಸಂಸ್ಥೆ ಉತ್ತಮ ಕೆಲಸ ಮಾಡುತ್ತಿದ್ದು ನಾಣ್ಯಶಾಸ್ತ್ರಕ್ಕೆ ತನ್ನ ಕೊಡುಗೆಯನ್ನು ನೀಡುತ್ತಿದೆ. ಪ್ರಸಕ್ತ ಲೇಖಕರು ಈ ನಿಯತಕಾಲಿಕೆಯ ಕೆಲವು ಸಂಪುಟಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ಎರಡನೆಯ ಸಂಸ್ಥೆಯಾದ ದಕ್ಷಿಣ ಭಾರತೀಯ ನಾಣ್ಯಶಾಸ್ತ್ರ ಸಂಘ ಮದರಾಸಿನಿಂದ ಕಾರ್ಯನಿರ್ವಹಿಸುತ್ತಿದೆ. 1990ರಲ್ಲಿ ಸ್ಥಾಪಿತವಾದ ಈ ಸಂಸ್ಥೆ ತನ್ನದೇ ಆದ 'ಸ್ಟಡೀಸ್ ಇನ್ ಸೌತ್ ಇಂಡಿಯನ್ ಕಾಯಿನ್ಸ್' ಎಂಬ ನಿಯತಕಾಲಿಕೆಯನ್ನು ಇಂಗ್ಲಿಷಿನಲ್ಲಿ ಪ್ರಕಟಿಸುತ್ತಿದೆ. ಈವರೆಗೆ ಈ ನಿಯತ ಕಾಲಿಕೆಯ ಹನ್ನೆರಡು ಸಂಪುಟಗಳು ಹೊರಬಂದಿವೆ. ಇದರಲ್ಲಿ ಸುಮಾರು ನೂರು ಲೇಖನಗಳು ಕರ್ನಾಟಕ ನಾಣ್ಯಶಾಸ್ತ್ರಕ್ಕೆ

ಸಂಬಂಧಪಟ್ಟವುಗಳಾಗಿವೆ ಎನ್ನುವುದು ಹೆಮ್ಮೆಯ ಸಂಗತಿ. ನುರಿತ ನಾಣ್ಯಶಾಸ್ತ್ರಜ್ಞರಿಂದ ಹಿಡಿದು ಇತ್ತೀಚೆಗೆ ಈ ವಿಷಯದಲ್ಲಿ ಆಸಕ್ತಿ ತೋರಿಸುತ್ತಿರುವ ಯುವಕರ ಲೇಖನಗಳು ಇದರಲ್ಲಿ ಅಚ್ಚಾಗುತ್ತಿವೆ. ಮುಕುಂದ ಪ್ರಭು, ಎ.ವಿ. ನರಸಿಂಹಮೂರ್ತಿ, ಗಣೇಶ್, ಗಿರಿಜಾಪತಿ, ಆರ್. ಗೋಪಾಲ್, ಎಂ.ವಿ. ಕೃಷ್ಣಪ್ಪ, ಹವಳಯ್ಯ, ರಘುನಾಥಭಟ್, ರವಿಶಂಕರ್, ನಿತ್ಯಾನಂದ ಪೈ, ವಾಸುದೇವರಾವ್ ಮುಂತಾದ ಅನೇಕ ನಾಣ್ಯಶಾಸ್ತ್ರಜ್ಞರ ವಿವಿಧ ಲೇಖನಗಳು ಈ ನಿಯತಕಾಲಿಕೆಯಲ್ಲಿ ಪ್ರಕಟವಾಗಿವೆ. ಎರಡೂವರೆ ಹಣ ಎನ್ನುವ ಸಂಖ್ಯೆಯ ನಾಣ್ಯ, ಕಂಠೀರವ ನಗಸರಾಜ ಒಡೆಯರ ನಾಣ್ಯಗಳು, ರಾಷ್ಟ್ರಕೂಟರ ನಾಣ್ಯ, ಅನೇಕ ಸಾಮಂತರ ನಾಣ್ಯಗಳು, ವೀಣಾಧಾರಿ ಸರಸ್ವತಿಯ ನಾಣ್ಯಗಳು, ಹರತಿ ನಾಯಕರ ನಾಣ್ಯಗಳು, ರಾಮಾನುಜಾಚಾರ್ಯರ ಚಿತ್ರವಿರುವ ನಾಣ್ಯ, ವಿಜಯನಗರ ಬೆಳ್ಳಿ ನಾಣ್ಯಗಳು ಮುಂತಾದ ಕರ್ನಾಟಕಕ್ಕೆ ಸಂಬಂಧಿಸಿದ ಅನೇಕ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ಒಟ್ಟಿನಲ್ಲಿ ಕರ್ನಾಟಕ ನಾಣ್ಯ ಅಧ್ಯಯನದ ವಿದ್ಯಾರ್ಥಿಗಳಿಗೆ ಇದೊಂದು ಅಮೂಲ್ಯ ಆಕರ. ಇದರ ಮೊದಲ ಆರು ಸಂಪುಟಗಳನ್ನು ಎ.ವಿ. ನರಸಿಂಹಮೂರ್ತಿ ಅವರು ಸಂಪಾದಿಸಿದ್ದಾರೆ.

ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿರುವ ಅಂಜನೇರಿ ಎಂಬಲ್ಲಿ ಪ್ರಖ್ಯಾತವಾದ ಭಾರತೀಯ ನಾಣ್ಯ ಸಂಶೋಧನಾ ಸಂಸ್ಥೆಯಿದೆ. ಖ್ಯಾತ ನಾಣ್ಯಶಾಸ್ತ್ರಜ್ಞ ಪರಮೇಶ್ವರ ಲಾಲ್ ಗುಪ್ತ ಅವರಿಂದ ಸ್ಥಾಪಿತಗೊಂಡ ಈ ಸಂಸ್ಥೆ ಉತ್ತಮ ಗ್ರಂಥಾಲಯವನ್ನು ಹೊಂದಿದೆ. ಇಲ್ಲಿ ನಾಣ್ಯಶಾಸ್ತ್ರದಲ್ಲಿ ತರಬೇತಿಯನ್ನೂ ಕೊಡಲಾಗುತ್ತಿದೆ. ಈ ಸಂಸ್ಥೆ ಆರಂಭದಿಂದ 'ನ್ಯೂಮಿಸ್‌ಮ್ಯಾಟಿಕ್ ಡೈಜೆಸ್ಟ್' ಎಂಬ ನಿಯತಕಾಲಿಕೆಯನ್ನು ಪ್ರಕಟಿಸುತ್ತಿದೆ. ಇದುವರೆಗೆ ಈ ನಿಯತ ಕಾಲಿಕೆಯ 24 ಸಂಪುಟಗಳು ಪ್ರಕಟಗೊಂಡಿವೆ. ಬನವಾಸಿಯ ಪದ್ಮಟಂಕಗಳು, ಶಾಸನೋಕ್ತ ಗದ್ಯಾಣಗಳು, ಮುಘಲ್ ನಾಣ್ಯಗಳು, ನೊಳಂಬ ನಾಣ್ಯ, ಕನ್ನಡ ಸಂಖ್ಯೆಯ ನಾಣ್ಯ ಮುಂತಾದ ಕರ್ನಾಟಕಕ್ಕೆ ಸಂಬಂಧಿಸಿದ ಲೇಖನಗಳು ಇದರಲ್ಲಿ ಪ್ರಕಟಗೊಂಡಿವೆ.

ಕರ್ನಾಟಕದ ರಾಜವಂಶಗಳನ್ನು ಕುರಿತಾದ ಅನೇಕ ಇತಿಹಾಸ ಗ್ರಂಥಗಳು ಪ್ರಕಟಗೊಂಡಿವೆ. ಇಂತಹ ಗ್ರಂಥಗಳಲ್ಲಿ ಆಯಾ ರಾಜವಂಶದ ನಾಣ್ಯಗಳನ್ನು ಕುರಿತ ಉಲ್ಲೇಖನಗಳು, ಆಕರದ ರೂಪದಲ್ಲಿ ಇಲ್ಲವೇ ಆರ್ಥಿಕ ಪರಿಸ್ಥಿತಿಯ ಅಧ್ಯಾಯದಲ್ಲಿ ಕಾಣಬರುತ್ತವೆ. ಮೊರೇಸ್ ಅವರ ಕದಂಬಕುಲ, ಎ.ವಿ. ನರಸಿಂಹಮೂರ್ತಿಯವರ ಸೇವುಣರ ಇತಿಹಾಸ, ಕೆ.ವಿ. ರಮೇಶ್ ಅವರ ತುಳುನಾಡಿನ ಇತಿಹಾಸ, ಆಳತೇಕರ್ ಅವರ ರಾಷ್ಟ್ರಕೂಟರ ಇತಿಹಾಸ, ಆರ್. ಗೋಪಾಲ್ ಅವರ ಹೊಯ್ಸಳ ಶಾಸನ ಗ್ರಂಥ, ಚಿಟ್ನಿಸ್ ಅವರ ಕೆಳದಿ ನಾಯಕರನ್ನು ಕುರಿತಾದ ಗ್ರಂಥ ಮುಂತಾದವುಗಳಲ್ಲಿ ಕ್ರಮವಾಗಿ ಬನವಾಸಿ ಮತ್ತು ಗೋವ ಕದಂಬರ ನಾಣ್ಯಗಳು, ಸೇವುಣ ವಂಶದ ನಾಣ್ಯಗಳು, ಆಳುಪರ

ನಾಣ್ಯಗಳು, ರಾಷ್ಟ್ರಕೂಟರ ನಾಣ್ಯಗಳು, ಹೊಯ್ಸಳ ನಾಣ್ಯಗಳು ಮತ್ತು ಕೆಳದಿ ನಾಯಕರ ನಾಣ್ಯಗಳನ್ನು ಕುರಿತಾದ ವಿವರಣೆಗಳು ದೊರಕುತ್ತವೆ.

ಕರ್ನಾಟಕದಲ್ಲಿ ಹತ್ತಾರು ಪುರಾತತ್ವ ಉತ್ಖನನಗಳು ನಡೆದಿವೆ. ಈ ಉತ್ಖನನಗಳಲ್ಲಿ ಮಣ್ಣಿನ ಪದರಗಳಲ್ಲಿ ವಿವಿಧ ನಾಣ್ಯಗಳು ದೊರಕಿವೆ ಇದರಿಂದ ಉತ್ಖನನದ ಮಣ್ಣಿನ ಪದರಗಳ ಕಾಲಮಾನವನ್ನು ತಿಳಿಯುವುದು ಸಾಧ್ಯವಾಗುತ್ತಿದೆ. ಆದುದರಿಂದ ಉತ್ಖನನ ವರದಿಗಳು ನಾಣ್ಯಶಾಸ್ತ್ರ ವಿದ್ಯಾರ್ಥಿಗೆ ತುಂಬ ಅಮೂಲ್ಯವೆನಿಸಿವೆ. ವೀಲರ್ ಅವರು ಚಂದ್ರವಳ್ಳಿಯಲ್ಲಿ ನಡೆಸಿದ ಉತ್ಖನನದಲ್ಲಿ ರೋಮನ್ ಮತ್ತು ಶಾತವಾಹನ, ಚುಟು ಹಾಗೂ ಮಹಾರಠಿ ಮತ್ತು ಪಂಚ್ ಮಾರ್ಕಿನ ನಾಣ್ಯಗಳು ದೊರಕಿದವು. ಬನವಾಸಿ ಮತ್ತು ವಡಗಾಂವ್ ಮಾಧವಪುರಗಳ ಉತ್ಖನನಗಳಲ್ಲಿ ಪಂಚ್ ಚಿಹ್ನೆಯ ಮತ್ತು ಶಾತವಾಹನ ನಾಣ್ಯಗಳು ದೊರಕಿದವು. ತಲಕಾಡಿನ ಉತ್ಖನನದಲ್ಲಿ ರೋಮನ್ ಮುದ್ರೆ ಮತ್ತು ವಿಜಯನಗರ ನಾಣ್ಯಗಳು ದೊರಕಿದವು. ಐಹೊಳೆ ಮತ್ತು ಪಟ್ಟದಕಲ್ಲಿನಲ್ಲಿ ನಡೆದ ಉತ್ಖನನಗಳಲ್ಲಿ ಶಾತವಾಹನ ನಾಣ್ಯಗಳು ದೊರೆತಿವೆ. ಸನ್ನತಿಯ ಮತ್ತು ಕಂಗನಹಳ್ಳಿಯ ಉತ್ಖನನಗಳಲ್ಲಿ ಶಾತವಾಹನ ನಾಣ್ಯಗಳು ದೊರಕಿವೆ. ಆದುದರಿಂದ ಈ ಉತ್ಖನನಗಳ ವರದಿಗಳು ನಾಣ್ಯಗಳ ವಿಷಯದಲ್ಲಿ ಉತ್ತಮ ಮಾಹಿತಿಯನ್ನು ಹೊಂದಿದ್ದು ನಾಣ್ಯಶಾಸ್ತ್ರಜ್ಞನಿಗೆ ಉತ್ತಮ ಮಾಹಿತಿಯನ್ನು ಒದಗಿಸುತ್ತವೆ. ಅಷ್ಟೇ ಅಲ್ಲದೆ ನಾಣ್ಯಗಳು ಯಾವ ಕಾಲದಲ್ಲಿ ಚಲಾವಣೆಯಲ್ಲಿದ್ದವು ಎಂಬುದನ್ನು ಸ್ತರಗಳ ಮೂಲಕ ಖಚಿತ ಪಡಿಸುತ್ತವೆ ಹಾಗೂ ನಾಣ್ಯಗಳ ಭೌಗೋಳಿಕ ವ್ಯಾಪ್ತಿಯನ್ನು ತಿಳಿಯಲು ತುಂಬ ಸಹಾಯ ಮಾಡುತ್ತವೆ. ಈ ಎಲ್ಲ ಅಂಶಗಳಿಂದ ಉತ್ಖನನದ ವರದಿಗಳನ್ನು ನಾಣ್ಯಶಾಸ್ತ್ರಜ್ಞನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ.

ಇತ್ತೀಚೆಗೆ ನಾಣ್ಯಶಾಸ್ತ್ರ ಅಧ್ಯಯನದಲ್ಲಿ ಎರಡು ಹೊಸ ಬೆಳವಣಿಗೆಗಳು ಕಾಣಬರುತ್ತಿವೆ. ಮೊದಲನೆಯದು ಶಾಸನಗಳಲ್ಲಿ ಕಾಣಬರುವ ನಾಣ್ಯಶಾಸ್ತ್ರ ಮಾಹಿತಿಗಳ ಅಧ್ಯಯನ; ಎರಡನೆಯದು ಸಾಹಿತ್ಯಿಕ ಕೃತಿಗಳಲ್ಲಿ ಕಂಡುಬರುವ ನಾಣ್ಯಗಳನ್ನು ಕುರಿತಾದ ವಿವರಣೆ. ನಾಣ್ಯಶಾಸ್ತ್ರವು ಸ್ವತಂತ್ರ ಅಧ್ಯಯನದ ವಿಷಯವೇ ಆದರೂ, ಶಾಸನಶಾಸ್ತ್ರವು ಅದಕ್ಕೆ ವಿಶೇಷ ಸಹಾಯ ಮಾಡುತ್ತದೆ. ನಾಣ್ಯಗಳ ಉದ್ದ, ಅಗಲ, ತೂಕ, ಹಿಮ್ಮುಖ - ಮುಮ್ಮುಖಗಳ ಚಿಹ್ನೆ ಮತ್ತು ಬರಹಗಳು ಹೇಳಲಾಗದ ವಿಷಯಗಳನ್ನು ಶಾಸನಗಳು ತಿಳಿಸುತ್ತವೆ ಎಂದರೆ ಅತಿಶಯೋಕ್ತಿಯಲ್ಲ. ಎಲ್ಲೋ ಒಂದೆರಡು ನಾಣ್ಯಗಳನ್ನು ಬಿಟ್ಟರೆ, ಇತರೆ ಯಾವ ನಾಣ್ಯಗಳ ಮೇಲೂ, ಆ ನಾಣ್ಯಗಳ ಹೆಸರು ಕಾಣಬರುವುದಿಲ್ಲ. ಇದು ಸಾಮಾನ್ಯ ಪದ್ಧತಿ. ಆದುದರಿಂದ ನಾಣ್ಯಗಳ ಹೆಸರುಗಳು ನಮಗೆ ತಿಳಿಯುವುದು ಮೂಲಭೂತವಾಗಿ ಶಾಸನಗಳಿಂದ ಎನ್ನುವುದನ್ನು ಗಮನಿಸಬೇಕು. ವರಹ, ಗದ್ಯಾಣ, ಹಣ, ಪೊನ್, ತಾರ, ಕಾಕನಿ ಮುಂತಾದ ಹತ್ತಾರು ನಾಣ್ಯಗಳ ಹೆಸರುಗಳು ನಮಗೆ

ತಿಳಿದುಬಂದಿರುವುದು ಶಾಸನಗಳಿಂದ ಎನ್ನುವುದನ್ನು ಮರೆಯುವಂತಿಲ್ಲ. ಶಾಸನಗಳು ದೇವಾಲಯಗಳಿಗೆ, ಬ್ರಾಹ್ಮಣರಿಗೆ, ಅಗ್ರಹಾರಗಳಿಗೆ ಮುಂತಾದವುಗಳಿಗೆ ಕೊಡುವ ದಾನವನ್ನು ಉಲ್ಲೇಖಿಸುವಾಗ ನಾಣ್ಯಗಳ ಹೆಸರು ಮತ್ತು ಸಂಖ್ಯೆಯನ್ನು ತಿಳಿಸುತ್ತವೆ. ಅದೇ ರೀತಿ ಹಳ್ಳಿಗಳ ಕಂದಾಯ, ತೆರಿಗೆಗಳನ್ನು ತಿಳಿಸುವಾಗಲೂ ನಾಣ್ಯಗಳ ಹೆಸರುಗಳನ್ನು ಉಲ್ಲೇಖಿಸುತ್ತವೆ. ಆದುದರಿಂದ ಆ ಶಾಸನಗಳನ್ನು ಬರೆಯಿಸಿದ ರಾಜವಂಶ ಅಥವಾ ರಾಜನ ಕಾಲದಲ್ಲಿ ಉಲ್ಲೇಖಿತ ನಾಣ್ಯಗಳು ಬಳಕೆಯಲ್ಲಿದ್ದವು ಎಂಬುದು ಸುಲಭವಾಗಿ ಗೊತ್ತಾಗುತ್ತದೆ. ಅದೇ ರೀತಿಯಲ್ಲಿ ನಾಣ್ಯಗಳ ವೈವಿಧ್ಯದ ವಿಷಯದಲ್ಲಿ ಶಾಸನಗಳು ವರ್ಣನಾತ್ಮಕ ವಿವರಣೆಗಳನ್ನು ಒದಗಿಸುತ್ತವೆ. ಇದನ್ನು ಹೇಳುವಾಗ ಟಂಕಶಾಲೆಗಳು, ಚಿಹ್ನೆಗಳು, ಲೋಹ, ಮೌಲ್ಯ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ವರಹ ಗದ್ಯಾಣ (ವರಹದ ಚಿಹ್ನೆಯಿರುವ), ಅರ್ಧ ಕಾಟಿ ಗದ್ಯಾಣ, ದೊಡ್ಡ ಗದ್ಯಾಣ, ಚಿಕ್ಕ ಗದ್ಯಾಣ, ಶುದ್ಧ ಗದ್ಯಾಣ, ಬಾರಕೂರು ಗದ್ಯಾಣ, ಲೊಕ್ಕಿಗುಂಡಿ ಗದ್ಯಾಣ, ಕುಳ ಗದ್ಯಾಣ, ಘಟ್ಟಿ ವರಹ, ಶುದ್ಧ ವರಹ, ಚಕ್ರ ವರಹ, ಸಣ್ಣ ಪ್ರತಾಪ, ಗಜ ಬೇಟೆಕಾರ ಹೊನ್ನು ಮುಂತಾದ ಪದಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ಇವುಗಳಿಂದ ಈ ನಾಣ್ಯಗಳ ನಿಜವಾದ ಸ್ವರೂಪ, ಉಪಯೋಗ, ಟಂಕಶಾಲೆ ಮುಂತಾದ ವಿವರಗಳು ತಿಳಿದುಬರುತ್ತವೆ. ಕೇವಲ ನಾಣ್ಯಗಳ ಪರೀಕ್ಷೆಯಿಂದ ಈ ವಿವರಗಳು ದೊರೆಯುವುದಿಲ್ಲ.

ಅದೇ ರೀತಿಯಲ್ಲಿ ನಾಣ್ಯಗಳ ಪರಸ್ಪರ ಮೌಲ್ಯಗಳನ್ನು ತಿಳಿಯುವುದು ಕಷ್ಟದ ಕೆಲಸ. ಉದಾಹರಣೆಗೆ ಒಂದು ಗದ್ಯಾಣಕ್ಕೆ ಎಷ್ಟು ಹಣಗಳು, ಒಂದು ಹಣಕ್ಕೆ ಎಷ್ಟು ಹಾಗ ಮುಂತಾದ ಪ್ರಶ್ನೆಗಳನ್ನು ಉತ್ತರಿಸಬೇಕಾದರೆ, ಶಾಸನಗಳ ಮೊರೆ ಹೋಗಬೇಕು. ಈ ಶಾಸನಗಳಲ್ಲಿ ಪ್ರಾಸಂಗಿಕವಾಗಿ ಈ ಮಾಹಿತಿಗಳು ಉಲ್ಲೇಖಿತವಾಗಿರುತ್ತವೆ. ಮೂರನೆಯ ಬಲ್ಲಾಳನ ಕ್ರಿ.ಶ. 1298ರ ಶಾಸನದಲ್ಲಿ ಅನೇಕರಿಂದ ನೀಡಲ್ಪಟ್ಟ ದಾನಗಳು ಉಲ್ಲೇಖಿತವಾಗಿವೆ. ಇವುಗಳೆಲ್ಲದರ ಮೊತ್ತ 11 ಗದ್ಯಾಣ ಮತ್ತು 40 ಪಣಗಳಾಗುತ್ತವೆ. ಶಾಸನದಲ್ಲಿ ಈ ಮೊತ್ತವನ್ನು 15 ಗದ್ಯಾಣವೆಂದು ತಿಳಿಸಿದೆ. ಅಂದರೆ ನಾಲ್ಕು ಗದ್ಯಾಣಗಳಿಗೆ 40 ಪಣಗಳು ಸಮನಾಗುವುದರಿಂದ, ಒಂದು ಗದ್ಯಾಣಕ್ಕೆ 10 ಪಣ ಎನ್ನುವುದು ಖಚಿತವಾಗುತ್ತದೆ. ಬೇಲೂರಿನ ಮತ್ತೊಂದು ಶಾಸನದಲ್ಲಿ 36 ಹಾಗಗಳು 9 ಪಣಗಳಿಗೆ ಸಮಾನ ಎಂದು ಹೇಳಿರುವುದರಿಂದ, ಒಂದು ಪಣಕ್ಕೆ ನಾಲ್ಕು ಹಾಗ ಎಂಬುದು ಖಚಿತವಾಗುತ್ತದೆ. ಈ ರೀತಿ ಶಾಸನಗಳ ಅಧ್ಯಯನದಿಂದ ಪ್ರಾಚೀನ ಕಾಲದ ನಾಣ್ಯಗಳ ಪರಸ್ಪರ ಮೌಲ್ಯವನ್ನು ನಿರ್ಧರಿಸಬಹುದು.

ಬಾರಕೂರು ಗದ್ಯಾಣ, ಮಂಗಳೂರು ಗದ್ಯಾಣ, ಲೊಕ್ಕಿಗುಂಡಿ ಗದ್ಯಾಣ ಎನ್ನುವ ಪದಗಳು ಶಾಸನಗಳಲ್ಲಿ ಕಾಣಸಿಗುತ್ತವೆ. ಆದುದರಿಂದ ಬಾರಕೂರು, ಮಂಗಳೂರು, ಲೊಕ್ಕಿಗುಂಡಿಗಳಲ್ಲಿ ಟಂಕಶಾಲೆಗಳಿದ್ದವೆಂದು ಸುಲಭವಾಗಿ ತಿಳಿಯಬಹುದು. ಈ ನಾಣ್ಯಗಳ

ಮೇಲೆ ಟಂಕಶಾಲೆಗಳ ಹೆಸರಿನ ಉಲ್ಲೇಖವಿಲ್ಲದಿದ್ದರೂ, ಶಾಸನಗಳ ಸಹಾಯದಿಂದ ಈ ವಿಷಯವನ್ನು ತಿಳಿಯಬಹುದಾಗಿದೆ.

ಪ್ರಾಚೀನ ಕರ್ನಾಟಕದ ಕೆಲವು ಕಾಲಘಟ್ಟಗಳಲ್ಲಿ ದೊರಕಿರುವ ನಾಣ್ಯಗಳ ಸಂಖ್ಯೆ ತೀರ ಕಡಿಮೆ. ಇದನ್ನು ಆಧರಿಸಿ ಕೆಲವು ವಿದ್ವಾಂಸರು ಆ ಕಾಲದಲ್ಲಿ ಕರ್ನಾಟಕದಲ್ಲಿ ನಾಣ್ಯಗಳ ಚಲಾವಣೆ ತುಂಬ ವಿರಳವಾಗಿತ್ತು, ವಸ್ತುವಿನಿಮಯವೇ ಆರ್ಥಿಕ ಜೀವನದ ಮುಖ್ಯ ಲಕ್ಷಣವಾಗಿತ್ತೆಂದು ವಾದಿಸಿದರು. ಆದರೆ ಇವರು ಆ ಕಾಲದಲ್ಲಿ ಹೊರಡಿಸಲಾದ ನೂರಾರು ಶಾಸನಗಳಲ್ಲಿ ದೊರಕುವ ಮಾಹಿತಿಯನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಆ ಕಾಲದ ಶಾಸನಗಳನ್ನು ಗಮನಿಸಿದರೆ ಗದ್ಯಾಣ, ಸುವರ್ಣ, ಹಣ, ಹಾಗ ಇತ್ಯಾದಿ ನಾಣ್ಯಗಳನ್ನು ತೆರಿಗೆಗಳನ್ನು ಕೊಡುವುದಕ್ಕಾಗಿ, ಯಜ್ಞಯಾಗಾದಿಗಳಲ್ಲಿ ದಕ್ಷಿಣೆಯನ್ನು ನೀಡುವುದಕ್ಕಾಗಿ, ಭೂಮಿಯನ್ನು ಕೊಳ್ಳುವುದಕ್ಕಾಗಿ, ಅಂದರೆ ಧಾರ್ಮಿಕ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ಬಳಸುತ್ತಿದ್ದರು ಎಂಬುದನ್ನು ಗಮನಿಸಿದಾಗ ಮೇಲಿನ ಸಿದ್ಧಾಂತ ನಿರಾಧಾರವಾದುದು ಎಂದು ಸುಲಭವಾಗಿ ಗೊತ್ತಾಗುತ್ತದೆ. ಈ ರೀತಿ ಹತ್ತು ಹಲವು ವಿಧಗಳಲ್ಲಿ ಶಾಸನಗಳು ನಾಣ್ಯಶಾಸ್ತ್ರಜ್ಞನಿಗೆ ಉಪಯೋಗಕ್ಕೆ ಬರುತ್ತವೆ. ಆದುದರಿಂದ ಕರ್ನಾಟಕ ನಾಣ್ಯಗಳ ಇತಿಹಾಸವನ್ನು ರಚಿಸುವ ವಿದ್ವಾಂಸನು ಶಾಸನಗಳಲ್ಲಿ ದೊರಕುವ ಮಾಹಿತಿಗಳನ್ನು ಆವಶ್ಯಕವಾಗಿ ಬಳಸಬೇಕು. ಆಗ ಅಂತಹ ಅಧ್ಯಯನ ಪೂರ್ಣವಾಗಿರುತ್ತದೆ ಎಂಬುದನ್ನು ಒತ್ತಿ ಹೇಳಬೇಕು. ಈ ವಿಷಯವನ್ನು ಆಯಾ ರಾಜವಂಶಗಳ ನಾಣ್ಯಗಳನ್ನು ಪರಿಶೀಲಿಸುವಾಗ ಮುಂದೆ ಗಮನಿಸಲಾಗಿದೆ.

ಈ ಮೇಲಿನ ಮಾತುಗಳು ಕನ್ನಡ ಸಾಹಿತ್ಯಿಕ ಗ್ರಂಥಗಳಿಗೂ ಅನ್ವಯಿಸುತ್ತವೆ. ಪ್ರಾಚೀನ ಕನ್ನಡ ಗ್ರಂಥಕರ್ತರು ತಮ್ಮ ಗ್ರಂಥಗಳನ್ನು ರಚಿಸುವಾಗ ಪ್ರಾಸಂಗಿಕವಾಗಿ ಆ ಕಾಲದ ನಾಣ್ಯದ ಹೆಸರು ಮತ್ತು ಕೆಲವು ವಿಷಯಗಳನ್ನು ತಮ್ಮ ಬರಹಗಳಲ್ಲಿ ಸೇರಿಸಿದ್ದಾರೆ. ಕವಿರಾಜಮಾರ್ಗದಿಂದ ಆರಂಭವಾಗಿ ಎಂ. ಎಸ್. ಪುಟ್ಟಣ್ಣನವರ ಚಿತ್ರದುರ್ಗದ ಪಾಳೆಯಗಾರರು ಎನ್ನುವ ಕೃತಿಯವರೆಗೆ ರಚಿತವಾಗಿರುವ ಗ್ರಂಥಗಳಲ್ಲಿ ನಾಣ್ಯಕ್ಕೆ ಸಂಬಂಧಪಟ್ಟ ವಿಷಯಗಳು ದೊರಕುತ್ತವೆ. ಈ ರಚಯಿತರಿಗೆ ತಾವು ಹೆಸರಿಸಿರುವ ನಾಣ್ಯಗಳ ಪರಿಚಯವಿದ್ದಿತು. ಬಹುಶಃ ಅವರು ಅವುಗಳನ್ನು ನೋಡಿದ್ದರು ಮತ್ತು ಉಪಯೋಗಿಸಿದ್ದರು. ತಿರುಪತಿ ಗದ್ಯಾಣ, ಬೆಣ್ಣೆಮುದ್ದೆ ಹಣ ಎಂಬ ಪದಗಳನ್ನು ಈ ಕರ್ತೃಗಳು ಬಳಸಿರುವುದರಿಂದ, ಆ ಕಾಲದಲ್ಲಿ ಜನಗಳು ಈ ನಾಣ್ಯಗಳನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದರೆಂದು ಗೊತ್ತಾಗುತ್ತದೆ. ಪಂಪಭಾರತದಲ್ಲಿ 'ಸಾಯಿರ ಗದ್ಯಾಣದ ಪೊನ್ನೇ ಸಾಲ್ಗು ಮಗ್ಗಲಂ ಬೇಡ' ಎಂದು ಹೇಳಿದೆ. ಕನ್ನಡ ಪಂಚತಂತ್ರದಲ್ಲಿ 'ಸಾಸಿರ ಗದ್ಯಾಣಕ್ಕಲ್ಲದೆ ಕಥೆಯಂ ಪೇಳ್ವಳಲ್ಲ' ಎಂದು ಉಲ್ಲೇಖಿತವಾಗಿದೆ. ಶಾಂತೀಶ್ವರ ಚರಿತಂ ಎಂಬ ಗ್ರಂಥದಲ್ಲಿ 'ಅವನ ಕೋಳಿ ಗೆಲಲುಮದರೊಡನೆ ಸಾವಿರ ಗದ್ಯಾಣವನು ಈವೆನಲು'

ಎಂದಿದೆ. ಕಳಲೆ ವೀರರಾಜೇಂದ್ರನ ಸಕಲ ವೈದ್ಯ ಸಂಹಿತ ಸಾರಾರ್ಣವ ಎನ್ನುವ ಗ್ರಂಥದಲ್ಲಿ ಒಂದು ಗದ್ಯಾಣಕ್ಕೆ ಹತ್ತು ಪಣವೆಂದು ಹೇಳಿದೆ. ಇಲ್ಲಿ ಇದು ತೂಕದ ಅರ್ಥದಲ್ಲಿ ಬಳಕೆಯಾಗಿರುವುದನ್ನು ಗಮನಿಸಬೇಕು.

ಕಾಸು ಎಂಬ ನಾಣ್ಯದ ಬಗ್ಗೆಯೂ ಕನ್ನಡ ಗ್ರಂಥಗಳಲ್ಲಿ ಉಲ್ಲೇಖಗಳು ದೊರಕುತ್ತವೆ. ಮೋಳಿಗೆಯ ಮಾರಯ್ಯನ ವಚನಗಳಲ್ಲಿ 'ಈಶ ಲಾಂಛನವ ಹೊತ್ತು ಕಾಸಿಗಾಗಿ ಕಾರ್ಪಣ್ಯವ ಬೇಡುವವನಲ್ಲ' ಎಂದು ಕಂಡುಬರುತ್ತದೆ. ಚಾಮುಂಡರಾಜನ ಅಭಿನವ ದಶಕುಮಾರ ಚರಿತೆಯಲ್ಲಿಯೂ ಕಾಸಿನ ಪ್ರಸ್ತಾಪವಿದೆ. ವೀರಭದ್ರವಿಜಯವೆಂಬ ಹದಿನಾರನೆಯ ಶತಮಾನದ ಗ್ರಂಥದಲ್ಲಿ 'ದಟ್ಟ ದರಿದ್ರನಂತೆ ಕಾಸಿಗೆ ಮನಮಿತ್ತನೆಂದು' ಎಂಬುದಾಗಿ ಹೇಳಿದೆ. ಪುರಂದರದಾಸರಿಗೂ ಕಾಸುವೀಸದ ಪರಿಚಯ ಚೆನ್ನಾಗಿದ್ದಿತೆಂದು ಗೊತ್ತಾಗುತ್ತದೆ. ಅವರ ರಚನೆಯಲ್ಲಿ 'ಕಾಸುವೀಸಕಾಗಿ ಹರಿಯದಾಸನೆಂದು ತಿರುಗಿ ತಿರುಗಿ' ಎಂದು ಉಲ್ಲೇಖಿತವಾಗಿದೆ. 'ಕಾಸುವೀಸದ ಆಸೆಗೋಸುಗ ಘಾಸಿಮಾಡಿವಿತರನು' ಎಂದು ಶರಣಲೀಲಾಮೃತವೆಂಬ ಗ್ರಂಥದಲ್ಲಿ ಹೇಳಿದೆ. 'ಪಳಂಗಾಸು' ಎನ್ನುವ ಪದ ಅನೇಕ ಹಳಗನ್ನಡ ಗ್ರಂಥಗಳಲ್ಲಿ ಕಾಣಬರುತ್ತದೆ. ಕಾಟಿ ಎಂಬ ನಾಣ್ಯದ ಬಗೆಗೆ ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ಮಾಹಿತಿ ಸಿಗುತ್ತದೆ 'ಕಾಟಿಗೆ ಸರಿಗಂಡು ದಿವ್ಯ ಭೂಷಣವ ಕಿರೀಟಯಿತ್ತನು ದೆಸೆದೆಸೆಗೆ' ಎಂದು ಈ ಗ್ರಂಥದಲ್ಲಿ ಹೇಳಿದೆ. ಇತ್ತೀಚಿನ ಲೇಖಕರಾದ ಗಳಗನಾಥರೂ ಭಗವತಾಮೃತ ಎಂಬ ತಮ್ಮ ಗ್ರಂಥದಲ್ಲಿ 'ಕುಬೇರನಲ್ಲಿ ಕಾಟಿಯನ್ನು ಯಾಚಿಸಿದಂತೆಯೇ ಸರಿ' ಎಂದು ಉಲ್ಲೇಖಿಸಿದ್ದಾರೆ.

ಹೊಯ್ಸಳ ಇಮ್ಮಡಿ ಬಲ್ಲಾಳನ ಆಸ್ಥಾನ ಕವಿಯಾಗಿದ್ದ ರಾಜಾದಿತ್ಯನು ತನ್ನ ವ್ಯವಹಾರ ಗಣಿತದಲ್ಲಿ ಕಾಗಿಣಿ ಎಂಬ ನಾಣ್ಯದ ಉಲ್ಲೇಖವನ್ನು ಮಾಡಿ, ಅದು ನಾಲ್ಕು ವೀಸಗಳಿಗೆ ಸಮ ಎಂದು ಹೇಳಿದ್ದಾನೆ (ಕಾಗಿಣಿ ನಾಲ್ಕವು ವೀಸಮುಮಾಗಿರಲ್). ನಾಗಚಂದ್ರನು ತನ್ನ ಪಂಪರಾಮಾಯಣದಲ್ಲಿ 'ಕಾಗಿಣೆಗೆ ಮರಂ ಬೀಳ್ವೆಗಿರ್ಕುಂ' ಎಂದು ಹೇಳಿದ್ದಾನೆ. ಮೇಘಣಂದಿಯ ಶ್ರಾವಕಾಚಾರದಲ್ಲಿಯೂ ಈ ನಾಣ್ಯದ ಉಲ್ಲೇಖವಿದೆ (ಕಾಗಿಣಿ ನಾಲ್ಕು ವೀಸಂ). ಭೀಮಕವಿಯ ಬಸವಪುರಾಣ, ನಯಸೇನನ ಧರ್ಮಾಮೃತ ಮತ್ತು ಬೊಮ್ಮರಸನ ಸೌಂದರಪುರಾಣಗಳಲ್ಲಿ ಅರೆಕಾಣಿ ಎಂಬ ನಾಣ್ಯದ ಉಲ್ಲೇಖ ಕಾಣಬರುತ್ತದೆ. ಮಂಗರಸನು ತನ್ನ ಸೂಪಶಾಸ್ತ್ರದಲ್ಲಿ 'ಕಲಸಿ ದುಗ್ಗಾಣೆಯಂದದಿ ಮಾಡಿ' ಎಂದು ದುಗ್ಗಾಣಿಯನ್ನು ಉಲ್ಲೇಖಿಸಿದ್ದಾನೆ. 'ದುಗ್ಗಾಣಿ ಬಲು ಕೆಟ್ಟದಣ್ಣ' ಎಂದು ಪುರಂದರದಾಸರು ಈ ನಾಣ್ಯದ ಬಗೆಗೆ ಹೇಳಿದ್ದಾರೆ.

ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯಲ್ಲಿ, 'ಎಂಟು ದಮ್ಮದ ಪುಳ್ಳಿಯಂ ತಂದು' ಎಂದಿದ್ದು ದ್ರಮ್ಮ ಎಂಬ ನಾಣ್ಯದ ಬಗೆಗೆ ಉಲ್ಲೇಖವಿದೆ. 1730ರಲ್ಲಿ ರಚಿತವಾದ ಮಾನೌಮಿಚೌಪದ ಎಂಬ ಗ್ರಂಥದಲ್ಲಿ ಒಡೆಯರ ಕಾಲದ ನಾಣ್ಯಗಳ ಬಗೆಗೆ ಉತ್ತಮ

ಮಾಹಿತಿ ದೊರಕುತ್ತದೆ. ಚಿನ್ನವಯ್ಯ ಎಂಬ ಟಂಕಾಧಿಕಾರಿಯ ನೇತೃತ್ವದಲ್ಲಿ ನಡೆಯುತ್ತಿದ್ದ ಟಂಕಶಾಲೆ, ಅಲ್ಲಿ ಅಚ್ಚಾಗುತ್ತಿದ್ದ ಇಪ್ಪತ್ತನಾಲ್ಕು ವಿವಿಧ ನಾಣ್ಯಗಳ ವಿವರಗಳು ಕಂಡು ಬರುತ್ತವೆ. ಇದೇ ರೀತಿ ಎಂ.ಎಸ್. ಪುಟ್ಟಣ್ಣನವರ ಚಿತ್ರದುರ್ಗದ ಪಾಳೆಯಗಾರರು ಎನ್ನುವ ಗ್ರಂಥದಲ್ಲಿಯೂ ಅನೇಕ ನಾಣ್ಯಗಳ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆ.

ಈ ಮೇಲೆ ಉಲ್ಲೇಖಿಸಿದ ಮಾಹಿತಿಗಳು ವ್ಯವಸ್ಥಿತ ಅಧ್ಯಯನವಲ್ಲ. ಕನ್ನಡ ಗ್ರಂಥಗಳಲ್ಲಿ ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದ ಮಾಹಿತಿಗಳು ಯಾವ ರೀತಿ ದೊರಕುತ್ತವೆ ಎಂಬುದರ ಇಣುಕು ನೋಟ ಮಾತ್ರ. ಸಮಗ್ರ ಕನ್ನಡ ಸಾಹಿತ್ಯ ಗ್ರಂಥಗಳನ್ನು ಪರಿಶೀಲಿಸಿದರೆ ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದ ಉಪಯುಕ್ತ ಮಾಹಿತಿಗಳು ದೊರಕುತ್ತವೆ. ಈ ಮಾಹಿತಿಗಳನ್ನು ಶಾಸನಗಳಲ್ಲಿ ದೊರಕುವ ಮಾಹಿತಿಗಳೊಂದಿಗೆ ಹೋಲಿಸಿನೋಡುವುದು ಮತ್ತು ಇವುಗಳನ್ನು ದೊರಕಿರುವ ನಾಣ್ಯಗಳಿಗೆ ಹೋಲಿಸಿ ನೋಡಿದರೆ, ಸಮರ್ಪಕವಾದ ಚಿತ್ರಣ ದೊರೆಯುವುದರಲ್ಲಿ ಸಂಶಯವಿಲ್ಲ. ಆದುದರಿಂದ ನಾಣ್ಯಶಾಸ್ತ್ರ ಸಂಶೋಧಕನು ಪ್ರಾಚೀನ ಕನ್ನಡ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡುವ ಆವಶ್ಯಕತೆಯಿದೆ ಎಂದು ತೋರಿಸುವುದೇ ಇದರ ಮುಖ್ಯ ಉದ್ದೇಶ. ಈ ಎಲ್ಲ ಮಾಹಿತಿಗಳನ್ನೂ ಉಪಯೋಗಿಸಿಕೊಂಡು, ವಿಶೇಷವಾಗಿ ಈವರೆಗೆ ದೊರಕಿರುವ ನಾಣ್ಯಗಳನ್ನು ಗಮನಿಸಿ, ಕರ್ನಾಟಕದಲ್ಲಿ ನಾಣ್ಯಗಳು ನಡೆದು ಬಂದ ದಾರಿಯನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ. ಇದನ್ನು ಮಾಡುವಾಗ ಕಾಲಾನುಕ್ರಮಣಿಯ ವಿಧಾನವನ್ನು ಅನುಸರಿಸಲಾಗಿದೆ. ಇದರಿಂದ ನಾಣ್ಯಶಾಸ್ತ್ರವು ಕರ್ನಾಟಕದಲ್ಲಿ ಯಾವ ವಿವಿಧ ಹಂತಗಳಲ್ಲಿ ತಾಂತ್ರಿಕವಾಗಿ ಮುಂದುವರಿಯಿತು ಎಂಬುದರ ಅರಿವೂ ಉಂಟಾಗುತ್ತದೆ. ನಮ್ಮ ಸಂಸ್ಕೃತಿಯ ಒಂದು ಅಂಗವಾದ ನಾಣ್ಯಗಳ ಮೂಲಕ ನಮ್ಮ ಶ್ರೀಮಂತ ಇತಿಹಾಸವನ್ನು ತಿಳಿಯುವುದೇ ಮುಖ್ಯ ಉದ್ದೇಶ.

❍

ಅಧ್ಯಾಯ 2

ಆರಂಭ ಕಾಲದ ನಾಣ್ಯಗಳು

1. ಪಂಚ್ ಮಾಡಿದ ನಾಣ್ಯಗಳು

ಕರ್ನಾಟಕದಲ್ಲಿ ಮಾತ್ರವಲ್ಲದೆ, ಇಡೀ ಭಾರತ ದೇಶದಲ್ಲೇ ಚಲಾವಣೆಯಲ್ಲಿದ್ದ ಅತ್ಯಂತ ಪ್ರಾಚೀನ ನಾಣ್ಯಗಳೇ ಪಂಚ್ ಮಾಡಿದ ನಾಣ್ಯಗಳು. ಮೊದಲ ವಿದ್ವಾಂಸರು ಇವುಗಳನ್ನು ಪಂಚ್ ಮಾರ್ಕ್ಡ್ ನಾಣ್ಯಗಳೆಂದು ಕರೆದಿದ್ದರಿಂದ ಈ ಹೆಸರೇ ಈ ನಾಣ್ಯಗಳಿಗೆ ಉಳಿದುಬಂದಿತು. ಕೆಲವರು ಇವುಗಳನ್ನು ಮುದ್ರಾಂಕಿತ ನಾಣ್ಯಗಳೆಂದೂ ಕರೆಯುವುದುಂಟು. ಈ ನಾಣ್ಯಗಳ ವಿಶೇಷವೆಂದರೆ ಇವುಗಳನ್ನು ತಯಾರು ಮಾಡುವ ತಾಂತ್ರಿಕ ವಿಧಾನ. ಬೆಳ್ಳಿಯ ಮತ್ತು ತಾಮ್ರದ ತಗಡುಗಳನ್ನು ಮೊದಲು ತಯಾರು ಮಾಡಲಾಗುತ್ತಿದ್ದಿತು. ಆನಂತರ ತೂಕಕ್ಕೆ ಸರಿಯಾಗಿ ಇವುಗಳನ್ನು ಕತ್ತರಿಸಲಾಗುತ್ತಿತ್ತು. ಒಂದು ಚೂರು ವ್ಯತ್ಯಾಸ ಬಂದರೆ ಅದನ್ನು ಮತ್ತೆ ಕತ್ತರಿಸಿ ತೂಕಕ್ಕೆ ಸರಿ ಹೊಂದುವಂತೆ ಮಾಡಲಾಗುತ್ತಿತ್ತು. ಅಂದರೆ ಈ ನಾಣ್ಯಗಳಲ್ಲಿ ತೂಕಕ್ಕೆ ಹೆಚ್ಚಿನ ಮಹತ್ವ. ಹೀಗೆ ನಾಲ್ಕಾರು ಬಾರಿ ಕತ್ತರಿಯ ಪ್ರಯೋಗಕ್ಕೆ ಒಳಗಾದ ಈ ಲೋಹದ ಚೂರು ಅನೇಕ ಆಕಾರಗಳಲ್ಲಿ ಕಾಣಬರುವುದಕ್ಕೆ ಇದೇ ಮುಖ್ಯ ಕಾರಣ. ಕೆಲವು ಗುಂಡಾಗಿದ್ದರೆ ಮತ್ತೆ ಕೆಲವು ಚೌಕಾಕಾರ, ಆಯುತಾಕಾರ, ತ್ರಿಕೋಣ, ಐದು ಮೂಲೆ ಅಥವಾ ಆರು ಮೂಲೆಯುನ್ನು ಹೊಂದಿದವುಗಳಾಗಿದ್ದವು. ಈ ರೀತಿ ತಯಾರಾದ ಬೆಳ್ಳಿಯ ಹಾಗೂ ತಾಮ್ರದ ಚೂರುಗಳನ್ನು ಒಂದೊಂದಾಗಿ ತೆಗೆದುಕೊಂಡು ಅವುಗಳ ಮೇಲೆ ಚಿಹ್ನೆಗಳನ್ನು ಪಂಚ್ ಮಾಡುತ್ತಿದ್ದರು. ನಾಲ್ಕು ಅಥವಾ ಐದು ಪಂಚ್‌ಗಳಿದ್ದರೆ, ಇದನ್ನು ನಾಲ್ಕು ಸಾರಿ ಅಥವಾ ಐದು ಸಾರಿ ವಿವಿಧ ಚಿಹ್ನೆಗಳನ್ನು ಪಂಚ್ ಮಾಡುತ್ತಿದ್ದರು. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಪಂಚ್ ಮಾಡಿದ ಮುಂಭಾಗದಲ್ಲಿ ಮಾತ್ರ ಆ ಚಿಹ್ನೆಯು ತೆಳ್ಳಗೆ ಬೆಳ್ಳಿಯ ಚೂರಿನ ಮೇಲೆ ಒತ್ತಲ್ಪಡುತ್ತಿದ್ದಿತೆಂಬುದು. ಹಿಂಭಾಗದಲ್ಲಿ ಆ ಚಿಹ್ನೆಯು ಬೀಳುತ್ತಿರಲಿಲ್ಲ. ಆದುದರಿಂದ ಸಾಮಾನ್ಯವಾಗಿ ಪಂಚ್ ಮಾಡಿದ ನಾಣ್ಯಗಳಿಗೆ ಒಂದೇ

ಮುಖ ಕಾಣಬರುತ್ತದೆ. ಹಿಮ್ಮುಖ ಖಾಲಿಯಾಗಿರುತ್ತದೆ. ಒಂದು ನಾಣ್ಯಕ್ಕೆ ಎರಡು ಮುಖ ಎಂದು ಹೇಳುವಾಗ, ಪಂಚ್ ಮಾಡಿದ ನಾಣ್ಯಗಳು ಇದಕ್ಕೆ ಅಪವಾದವೆನಿಸುತ್ತವೆ. ಹೀಗೆ ಸಾವಿರಾರು ನಾಣ್ಯಗಳನ್ನು ತಯಾರು ಮಾಡುವಾಗ, ಒಂದೊಂದಾಗಿ ತೆಗೆದುಕೊಂಡು ಈ ರೀತಿ ಮಾಡುವುದು ನಾಣ್ಯ ತಾಂತ್ರಿಕತೆಯ ಮೊಟ್ಟಮೊದಲನೆಯ ಹಂತ. ಇದು ಅಸಮರ್ಪಕವಾಗಿ ಕಂಡುಬಂದಿದ್ದರಿಂದ ಈ ಪದ್ಧತಿಯನ್ನು ಕೈಬಿಟ್ಟು ಎರಕ ಹುಯ್ದು ನಾಣ್ಯಗಳನ್ನು ತಯಾರಿಸುವ ತಾಂತ್ರಿಕತೆ ಆನಂತರ ಬಳಕೆಗೆ ಬಂದಿತು. ಅದು ಮುಂದಿನ ಹಂತ. ಆದುದರಿಂದ ತಾಂತ್ರಿಕತೆಯ ದೃಷ್ಟಿಯಿಂದ ಮತ್ತು ಕಾಲಮಾನದ ದೃಷ್ಟಿಯಿಂದ ಭಾರತದಲ್ಲಿ ಬಳಕೆಯಲ್ಲಿದ್ದ ನಾಣ್ಯಗಳಲ್ಲಿ ಪಂಚ್ ಮಾಡಿದ ನಾಣ್ಯಗಳೇ ಅತ್ಯಂತ ಪ್ರಾಚೀನವಾದವು ಎಂಬುದನ್ನು ಗಮನಿಸಬೇಕು.

ಈ ನಾಣ್ಯಗಳ ವೈಶಿಷ್ಟ್ಯವೆಂದರೆ ಇದರಲ್ಲಿ ಕೇವಲ ನಾಲ್ಕು ಅಥವಾ ಐದು ಚಿಹ್ನೆಗಳಿರುವುದು. ಯಾವ ವಿಧವಾದ ಬರವಣಿಗೆಯೂ ಕಾಣಬರುವುದಿಲ್ಲ. ಅಂದರೆ ಇವುಗಳಲ್ಲಿ ಪಂಚ್ ಮಾಡಿದ ಚಿಹ್ನೆಗಳಿಗೇ ವಿಶೇಷ ಮಹತ್ವ. ಈ ರೀತಿಯ ನಾಣ್ಯಗಳು ಮೊದಲು ದೊರಕಿದಾಗ, ಅವುಗಳ ಮೇಲಿನ ಚಿಹ್ನೆಗಳ ಅಂತರಾರ್ಥ ತಿಳಿಯದೇ ಇದ್ದುದರಿಂದ ಈ ಚಿಹ್ನೆಗಳನ್ನು ಮನಸ್ಸಿಗೆ ಬಂದಂತೆ ಹಾಕಲಾಗುತ್ತಿದ್ದಿತು ಎಂದು ಭಾವಿಸಿದ್ದರೆ ಆಶ್ಚರ್ಯವೇನಿಲ್ಲ. ಆದರೆ ಕಾಲಕ್ರಮದಲ್ಲಿ ಈ ನಾಣ್ಯಗಳನ್ನು ಕುರಿತು ಸಂಶೋಧನೆಗಳು ನಡೆದ ಮೇಲೆ ಈ ಅಭಿಪ್ರಾಯ ಬದಲಾಗಿದೆ. ಇವು ವ್ಯವಸ್ಥಿತವಾಗಿ ಹಾಕಲ್ಪಟ್ಟ ಮುದ್ರೆಗಳು ಅಥವಾ ಚಿಹ್ನೆಗಳು. ಅದರಲ್ಲಿ ಒಂದು ಕ್ರಮವೂ ಕಾಣಬರುತ್ತದೆ. ಪ್ರತಿಯೊಬ್ಬರಿಗೂ ಈ ಚಿಹ್ನೆಗಳನ್ನು ಹಾಕುವ ಅಧಿಕಾರವೂ ಇರಲಿಲ್ಲ. ದೊರೆ ಅಥವಾ ಅವನಿಂದ ನಿಯಮಿತನಾದ ಅಧಿಕೃತ ಅಧಿಕಾರಿಗೆ ಮಾತ್ರ ಈ ಚಿಹ್ನೆಗಳನ್ನು ಹಾಕುವ ಅಥವಾ ಹಾಕಿಸುವ ಅಧಿಕಾರವಿದ್ದಿತು. ಕೌಟಿಲ್ಯನ ಕಾಲದಲ್ಲಿ ಈ ರೀತಿಯ ನಾಣ್ಯಗಳು ಚಲಾವಣೆಯಲ್ಲಿದ್ದವು. ಅವನು ಬರೆದ ಅರ್ಥಶಾಸ್ತ್ರದಿಂದ ನಾಣ್ಯಗಳನ್ನು ಅಚ್ಚುಹಾಕಿಸುವ ಹೊಣೆಗಾರಿಕೆ ಪೂರ್ಣವಾಗಿ ರಾಜನ ಮೇಲೆ ಇದ್ದಿತು ಎಂಬುದು ತಿಳಿಯುಬರುತ್ತದೆ. ಕೆಲವು ಗಣರಾಜ್ಯಗಳೂ ಈ ನಾಣ್ಯಗಳನ್ನು ಅಚ್ಚು ಹಾಕಿಸುತ್ತಿದ್ದವು. ಅಲ್ಲಿಯೂ ಕೂಡ ಅಧಿಕೃತವಾದ ಅಧಿಕಾರಿಯು ಈ ಕೆಲಸವನ್ನು ನಿರ್ವಹಿಸುತ್ತಿದ್ದನು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕಾಣಬರುವ 'ರಾಜಾಂಕ' ಎನ್ನುವ ಮಾತು ಗಮನಾರ್ಹ. ಅಂದರೆ ಒಂದು ಮುದ್ರೆ ರಾಜನನ್ನು ಪ್ರತಿನಿಧಿಸುತ್ತಿತ್ತು ಎಂದು ತಿಳಿಯುತ್ತದೆ. ಬೌದ್ಧಗ್ರಂಥಗಳಲ್ಲಿ 'ಸಂಘಾಂಕ' ಎನ್ನುವ ಶಬ್ದ ಕಾಣಬರುತ್ತದೆ. ಈ ಚಿಹ್ನೆಯು ಒಂದು ಚುನಾಯಿತ ಪ್ರತಿನಿಧಿಗಳ ಸಂಘವನ್ನು ನಿರ್ದೇಶಿಸುತ್ತದೆ. ಅಂದರೆ ಈ ನಾಣ್ಯಗಳ ಮೇಲೆ ಕಾಣಬರುವ ಪ್ರತಿಯೊಂದು ಚಿಹ್ನೆಗೂ ಒಂದು ಸಾಂಕೇತಿಕವಾದ ಅರ್ಥವಿದೆ. ವೃಷಭವು ಮಗಧದಲ್ಲಿ ಆಳಿದ ಬೃಹದ್ರಥ

ರಾಜವಂಶದ ಚಿಹ್ನೆ. ಆದುದರಿಂದ ಈ ಚಿಹ್ನೆಯು ಕಂಡುಬಂದರೆ, ಆ ನಾಣ್ಯ ಬೃಹದ್ರಥ ರಾಜವಂಶಕ್ಕೆ ಸೇರಿದ್ದು ಎಂದು ಭಾವಿಸಬೇಕು. ಬೆಸ್‌ನಗರದಲ್ಲಿ ದೊರಕಿರುವ ನೂರಾರು ನಾಣ್ಯಗಳ ಮೇಲೆ ಒಂದು ನದಿಯ ಚಿಹ್ನೆಯಿದೆ. ಅದನ್ನು ವೇತ್ರಾವತಿ ನದಿ ಎಂದು ಭಾವಿಸಬೇಕು. ಉತ್ತಮ ನಾಣ್ಯ ಪರೀಕ್ಷಕನು, ಪಂಚ್ ಚಿಹ್ನೆಗಳನ್ನು ಗುರುತಿಸಿ ಅವುಗಳ ಅರ್ಥವನ್ನು ವಿವರಿಸುವಷ್ಟು ನಿಷ್ಣಾತನಾಗಿದ್ದನೆಂದು ತಿಳಿದುಬರುತ್ತದೆ. ಆದರೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದೆ ಈ ನಾಣ್ಯಗಳು ಬಳಕೆಯಲ್ಲಿದ್ದು, ನಂತರ ಹೊಸ ನಮೂನೆಯ ನಾಣ್ಯಗಳು ಬಳಕೆಗೆ ಬಂದಿದ್ದುದರಿಂದ ಈ ಚಿಹ್ನೆಗಳ ಸಾಂಕೇತಿಕ ಅರ್ಥವನ್ನು ಮರೆತರೆಂದರೆ ಆಶ್ಚರ್ಯವೇನಲ್ಲ.

ಆದರೆ ಈ ಚಿಹ್ನೆಗಳನ್ನು ನಾಣ್ಯಶಾಸ್ತ್ರಜ್ಞರು ಅರ್ಥಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಉದಾಹರಣೆಗೆ ಐದು ಚಿಹ್ನೆಗಳ ಈ ನಾಣ್ಯಗಳನ್ನು ಗಮನಿಸೋಣ. ಮೊದಲನೆಯ ಚಿಹ್ನೆ ರಾಜವಂಶಕ್ಕೆ ಸೇರಿದ್ದು; ಎರಡನೆಯ ಚಿಹ್ನೆ ಈ ನಾಣ್ಯವನ್ನು ಟಂಕಿಸಿದ ರಾಜನಿಗೆ ಸಂಬಂಧಿಸಿದ್ದು; ಮೂರನೆಯದು ಅವನ ರಾಜ್ಯಕ್ಕೆ ಸೇರಿದ್ದು; ನಾಲ್ಕನೆಯದು ಧರ್ಮಕ್ಕೆ ಸಂಬಂಧಿಸಿದ್ದು ಮತ್ತು ಕೊನೆಯದು ಟಂಕಶಾಲೆಯ ಗುರುತು. ಖ್ಯಾತ ಇತಿಹಾಸಕಾರ ಡಿ.ಡಿ. ಕೋಶಾಂಬಿಯವರು ಸಾವಿರಾರು ಪಂಚ್ ಚಿಹ್ನೆಯ ನಾಣ್ಯಗಳನ್ನು ಪರೀಕ್ಷಿಸಿ ಈ ರೀತಿಯ ವಿವರಣೆಯನ್ನು ಕೊಟ್ಟರು. ಸಾಮಾನ್ಯವಾಗಿ ಎಲ್ಲರೂ ಈ ವಿವರಣೆಯನ್ನು ಒಪ್ಪಿಕೊಂಡಿದ್ದಾರೆ. ಅವು ಯಾವುವೆಂದರೆ ಮನುಷ್ಯನ ಆಕೃತಿಗಳು; ಸ್ತೂಪ, ನಕ್ಷತ್ರ, ಬಿಲ್ಲು - ಬಾಣ ಮುಂತಾದವು; ಪ್ರಾಣಿಗಳಾದ ವೃಷಭ, ಸಿಂಹ, ಆನೆ, ಕುದುರೆ, ಆಡು ಮುಂತಾದವು; ಛತ್ರಿ, ಕಟಾಂಜನ, ಮರಗಿಡಗಳು, ರೆಂಬೆಗಳು, ಹಣ್ಣುಗಳು; ತ್ರಿಶೂಲ, ಲಿಂಗ, ಸೂರ್ಯನಕಿರಣ ಮುಂತಾದವು ಮತ್ತು ವಿವಿಧ ರೀತಿಯ ವಸ್ತುಗಳು. ಕೆಲವನ್ನು ಅನೇಕರು ಬೌದ್ಧಧರ್ಮದ ಚಿಹ್ನೆಗಳು ಎಂದು ಭಾವಿಸಿದ್ದರು. ಆದರೆ ಕೋಶಾಂಬಿಯವರು ತಿಳಿಸಿರುವಂತೆ, ಇವು ಪೂರ್ಣವಾಗಿ ಧಾರ್ಮಿಕ ಚಿಹ್ನೆಗಳಲ್ಲ; ಅದರಲ್ಲಿಯೂ ಕೇವಲ ಬೌದ್ಧಧರ್ಮಕ್ಕೆ ಮಾತ್ರ ಸೀಮಿತವಾದ ಚಿಹ್ನೆಗಳಂತೂ ಅಲ್ಲವೇ ಅಲ್ಲ. ಲಿಂಗವು ಶೈವಧರ್ಮದ ಚಿಹ್ನೆಯಾದರೆ, ಛತ್ರಿ ಹಾಗೂ ಸ್ತೂಪ ಬೌದ್ಧಧರ್ಮದ ಚಿಹ್ನೆಗಳಾಗುತ್ತವೆ. ಯಾವ ಧರ್ಮಕ್ಕೂ ಸೇರದೆ ಇರುವ ತ್ರಿಕೋಣ, ಚೌಕ, ಆಯತಾಕಾರ ಮುಂತಾದ ಚಿಹ್ನೆಗಳೂ ಹೇರಳವಾಗಿ ಕಾಣಬರುತ್ತವೆ. ಈ ಕೆಲವು ಚಿಹ್ನೆಗಳನ್ನು ಆಧರಿಸಿ ಕೆಲವು ವಿದ್ವಾಂಸರು ಇವು ಸಿಂಧೂ ನಾಗರಿಕತೆಗೆ ಸಂಬಂಧಿಸಿದ ಮಣ್ಣಿನ ಮುದ್ರೆಗಳ ಮೇಲಿರುವ ಚಿಹ್ನೆಗಳಿಗೆ ತೀರ ಸಮೀಪವಾಗಿರುವುದರಿಂದ ಇವು ಸಿಂಧೂ ನಾಗರಿಕತೆಯ ಬರವಣಿಗೆ (ಚಿತ್ರಲಿಪಿ) ಎಂದು ಭಾವಿಸಲಾಗಿರುವ ಚಿಹ್ನೆಗಳು ಎಂದು ತೀರ್ಮಾನಿಸಿದ್ದಾರೆ. ಆದುದರಿಂದ ಸಿಂಧೂ ನಾಗರಿಕತೆಗೂ, ಪಂಚ್ ಚಿಹ್ನೆಯ ನಾಣ್ಯಗಳಿಗೂ ಸಂಬಂಧವನ್ನು

ಕಲ್ಪಿಸಲು ಪ್ರಯತ್ನಿಸಿದ್ದಾರೆ. ಆದರೆ ಹೋಲಿಕೆಯೊಂದೇ ಈ ಸಂಬಂಧವನ್ನು ದೃಢಪಡಿಸುವುದಿಲ್ಲ; ಏಕೆಂದರೆ ಈ ಎರಡೂ ವರ್ಗದ ಚಿಹ್ನೆಗಳಿಗೂ ಇರುವ ಕಾಲದ ಅಂತರವನ್ನು ನಾವು ಮರೆಯುವಂತಿಲ್ಲ. ಮತ್ತೆ ಕೆಲವರು ಇತಿಹಾಸ ಪೂರ್ವಕಾಲದ ಚಿತ್ರಕಲೆಯಲ್ಲಿ ಕಾಣಬರುವ ಚಿಹ್ನೆಗಳ ಸಾಮ್ಯವನ್ನು ಹೋಲಿಸಿ ನೋಡಲು ಪ್ರಯತ್ನಿಸಿದ್ದಾರೆ. ಮತ್ತೆ ಕೆಲವು ವಿದ್ವಾಂಸರು ಬುಡಕಟ್ಟು ಜನಾಂಗದವರಲ್ಲಿ ಕಾಣಬರುವ ಚಿಹ್ನೆಗಳಿಗೂ ಪಂಚ್ ಚಿಹ್ನೆಗಳಿಗೂ ಇರುವ ಸಾಮ್ಯದ ಆಧಾರದ ಮೇಲೆ ಇವುಗಳನ್ನು ಅರ್ಥೈಸಲು ಯತ್ನಿಸಿದ್ದಾರೆ. ಇವೆಲ್ಲ ಕೇವಲ ಅಭಿಪ್ರಾಯವಾಗಿ ಉಳಿಯುತ್ತವೆಯೇ ಹೊರತು, ಈ ನಾಣ್ಯಗಳ ಚಿಹ್ನೆಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಲು ಸಹಕಾರಿಯಾಗಿಲ್ಲ. ಈ ವಿಷಯದಲ್ಲಿ ಹೆಚ್ಚಿನ ಸಂಶೋಧನೆಯನ್ನು ಮಾಡಿರುವ ಕನಿಂಗ್ ಹ್ಯಾಂರವರು, ಈ ಚಿಹ್ನೆಗಳನ್ನು ಭಾವಲಿಪಿಯೆಂದು ಭಾವಿಸುತ್ತಾರೆ. ಸೂರ್ಯನ ಚಿಹ್ನೆಯಿದ್ದರೆ ಅದನ್ನು ಸೂರ್ಯದೇವ ಎಂಬುವನನ್ನು ಗುರುತಿಸುತ್ತದೆ; ಆನೆಯ ಚಿಹ್ನೆಯು ಗಜಸಿಂಹನನ್ನು ನಿರ್ದೇಶಿಸುತ್ತದೆ; ಬಿಲ್ಲನ್ನು ಹಿಡಿದಿರುವ ಮಾನವನ ಚಿಹ್ನೆಯು ವೀರದೇವನಿಗೆ ಸಂಬಂಧಿಸಿದ್ದು ಎಂದು ಪ್ರತಿಯೊಂದು ಚಿಹ್ನೆಗೂ ಒಂದು ಸಾಂಕೇತಿಕ ಅರ್ಥವನ್ನು ಕೊಡಲು ಪ್ರಯತ್ನಿಸಿದ್ದಾರೆ. ಆದರೆ ಇವು ಸರಿಯೇ - ತಪ್ಪೇ ಎಂದು ತೀರ್ಮಾನಿಸುವ ಖಚಿತವಾದ ಮಾಹಿತಿ ದೊರಕಿಲ್ಲವಾದುದರಿಂದ, ಇವುಗಳ ಬಗ್ಗೆ ಏನೂ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಮಾತ್ರ ಹೇಳಬಹುದು. ನಾಣ್ಯದ ಈ ಚಿಹ್ನೆಗಳಿಗೂ ಬ್ರಾಹ್ಮೀ ಲಿಪಿಯ ಕೆಲವು ಅಕ್ಷರಗಳಿಗೂ ಇರುವ ಸಾಮ್ಯತೆ ಕೆಲವರು ಗಮನಿಸಿ, ಇವು ಬ್ರಾಹ್ಮೀ ಲಿಪಿಯಿಂದ ಉಗಮವಾದ ಚಿಹ್ನೆಗಳಿರಬೇಕೆಂದು ವಾದಿಸುತ್ತಾರೆ. ಬ್ರಾಹ್ಮೀ ಲಿಪಿಯ ಕ, ಯ, ಮ, ಮುಂತಾದ ಅಕ್ಷರಗಳಿಗೂ ಈ ಕೆಲವು ಚಿಹ್ನೆಗಳಿಗೂ ಸಾಮ್ಯ ಇರುವುದು ಕೇವಲ ಆಕಸ್ಮಿಕವೇ ಹೊರತು, ಒಂದರಿಂದ ಇನ್ನೊಂದು ಉಗಮವಾಯಿತು ಅಥವಾ ಪ್ರಭಾವ ಹೊಂದಿತು ಎಂದು ಹೇಳಲು ಆಧಾರಗಳು ಸಾಲದು. ನಾಣ್ಯಗಳ ಮೇಲಿನ ವೃತ್ತಾಕಾರ, ಚತುಷ್ಕೋಣ, ಪಂಚಕೋಣ, ತ್ರಿಕೋಣ ಮುಂತಾದವು ತಾಂತ್ರಿಕ ಮತದ ಬೀಜಮುದ್ರೆಗಳಿಗೆ ಸಮೀಪವಾಗಿರುವುದರಿಂದ, ಇವು ತಾಂತ್ರಿಕ ಚಿಹ್ನೆಗಳೆಂದೂ ಕೆಲವರು ವಾದಿಸುತ್ತಾರೆ.

ತಕ್ಷಶಿಲಾ ನಾಣ್ಯರಾಶಿಯಲ್ಲಿ ದೊರಕಿರುವ ಈ ನಾಣ್ಯಗಳನ್ನು ಅಧ್ಯಯನ ಮಾಡಿದರೆ ಕೆಲವು ಹೊಸ ಸಂಗತಿಗಳು ಕಾಣಬರುತ್ತವೆ. ಇವುಗಳಲ್ಲಿ ಅನೇಕ ನಾಣ್ಯಗಳ ಮೇಲೆ ಇರುವ ಮೊದಲ ನಾಲ್ಕು ಚಿಹ್ನೆಗಳು ಒಂದೇ ರೀತಿಯಲ್ಲಿದ್ದು, ಐದನೆಯದು ಮಾತ್ರ ಭಿನ್ನವಾಗಿದೆ. ಆದುದರಿಂದ ಈ ನಾಣ್ಯಗಳು ಒಂದು ವಂಶದ ಹಾಗೂ ಒಬ್ಬನೇ ರಾಜನ ಮತ್ತು ಒಂದೇ ರಾಜ್ಯದ ನಾಣ್ಯಗಳೆಂಬುದು ಖಚಿತವಾಗುತ್ತದೆ. ಮೌರ್ಯ ವಂಶದವರು ನವಿಲಿನೊಡನೆ ನಿಕಟ ಸಂಪರ್ಕವನ್ನು ಹೊಂದಿದ್ದರೆಂದು ತಿಳಿದುಬಂದಿದೆ (ಮಯೂರ

ಪೋಷಕಾಃ). ಆದುದರಿಂದ ನವಿಲಿನ ಚಿಹ್ನೆಯುಳ್ಳ ನಾಣ್ಯಗಳನ್ನು ಮೌರ್ಯವಂಶದ ರಾಜರು ಟಂಕಿಸಿದರೆಂದು ಭಾವಿಸಲಾಗಿದೆ.

ಈ ಚಿಹ್ನೆಗಳ ಆಧಾರದ ಮೇಲೆ ಪಂಚ್ ಚಿಹ್ನೆಯ ನಾಣ್ಯಗಳನ್ನು ಚಕ್ರಾಧಿಪತ್ಯದ ನಾಣ್ಯಗಳು ಮತ್ತು ಸ್ಥಳೀಯ ನಾಣ್ಯಗಳು ಎಂದು ವಿಭಾಗಿಸಲಾಗಿದೆ. ಶೂರಸೇನ, ಗಂಧಾರ, ಮಲ್ಲ, ಕೋಸಲ, ಕಲಿಂಗ, ಪಾಂಚಾಲ ಮುಂತಾದ ಸ್ಥಳೀಯ ರಾಜವಂಶಗಳ ನಾಣ್ಯಗಳಲ್ಲಿ ಕಾಣಬರುವ ಈ ಚಿಹ್ನೆಗಳು ತೀರ ಭಿನ್ನವಾಗಿರುವುದರಿಂದ ಈ ರೀತಿ ನಾಣ್ಯಗಳನ್ನು ಗುರುತಿಸಲು ಸಾಧ್ಯವಾಗಿದೆ. ಇವುಗಳ ಚಿಹ್ನೆಗಳು, ತೂಕ, ದಪ್ಪ, ಲೋಹದ ಗುಣ ಮತ್ತು ಗಾತ್ರಗಳಲ್ಲಿಯೂ ಭಿನ್ನತೆ ಕಾಣಬರುತ್ತದೆ. ಮೌರ್ಯರ ನಾಣ್ಯಗಳನ್ನು ಈ ಸ್ಥಳೀಯ ನಾಣ್ಯಗಳಿಗೆ ಹೋಲಿಸಿ ನೋಡಿದರೆ, ಮೊದಲನೆಯ ಗುಂಪಿನ ನಾಣ್ಯಗಳು ಉನ್ನತ ಮಟ್ಟದಲ್ಲಿರುವುದು ಸುಲಭವಾಗಿ ತಿಳಿದುಬರುತ್ತದೆ.

ಕಾಲಕ್ರಮದಲ್ಲಿ ಪಂಚ್ ಚಿಹ್ನೆಯ ನಾಣ್ಯಗಳಲ್ಲಿ ಹಿಮ್ಮುಖದಲ್ಲಿಯೂ ತೆಳ್ಳನೆಯ ಚಿಹ್ನೆಗಳನ್ನು ಮೂಡಿಸುವ ತಾಂತ್ರಿಕತೆ ಆರಂಭವಾಯಿತು. ಈ ಹಿಮ್ಮುಖದ ಚಿಹ್ನೆಗಳು ತೀರ ಅಸ್ಫುಟವಾಗಿದ್ದು, ಅವುಗಳನ್ನು ನಿಗಮಗಳು ಹಾಕಿಸಿರಬೇಕೆಂದು ಭಾವಿಸಲಾಗಿದೆ. ಅನೇಕ ವರ್ಷಗಳ ಸತತ ಬಳಕೆಯಿಂದ ಈ ನಾಣ್ಯಗಳು ಅಲ್ಪಸ್ವಲ್ಪ ಸವೆದುಹೋದಾಗ ಅವುಗಳ ತೂಕ ಸರಿಯಾಗಿದೆಯೇ ಎಂಬುದನ್ನು ಪರೀಕ್ಷಿಸಿ, ಹಾಗಿದ್ದಲ್ಲಿ ಅವುಗಳ ಮೇಲೆ ಹಿಮ್ಮುಖದಲ್ಲಿ ನಿಗಮಗಳು ತಮ್ಮ ಚಿಹ್ನೆಯನ್ನು ಹಾಕಿ ಉಪಯೋಗಕ್ಕೆ ಬಿಡುತ್ತಿದ್ದವು. ಇಂತಹ ಕೆಲಸವನ್ನು ಕೇಂದ್ರ ಸರ್ಕಾರದ ರೂಪದರ್ಶಕ ಎನ್ನುವ ಅಧಿಕಾರಿಯೂ ಮಾಡುತ್ತಿದ್ದನೆಂದು ಕೌಟಿಲ್ಯನ ಅರ್ಥಶಾಸ್ತ್ರದಿಂದ ತಿಳಿದುಬರುತ್ತದೆ. ಇನ್ನು ಕೆಲವು ಸಮಯಗಳಲ್ಲಿ ಸ್ಥಳೀಯ ರಾಜರುಗಳು ಬೇರೊಬ್ಬ ರಾಜನನ್ನು ಸೋಲಿಸಿ ಅವನ ರಾಜ್ಯವನ್ನು ತಾವು ಆಕ್ರಮಿಸಿಕೊಂಡಾಗ ಆ ರಾಜ್ಯದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳ ಮೇಲೆ ತಮ್ಮ ರಾಜ್ಯದ ಇಲ್ಲವೇ ರಾಜನ ಸಾಂಕೇತಿಕ ಚಿಹ್ನೆಯನ್ನು ಹಿಮ್ಮುಖದಲ್ಲಿ ಹಾಕಿಸಿ, ಅದು ಅಧಿಕೃತ ನಾಣ್ಯವೆಂಬುದನ್ನು ತೋರಿಸಿಕೊಡುತ್ತಿದ್ದರು.

ಪಂಚ್ ಮಾಡಿದ ನಾಣ್ಯಗಳ ಕಾಲಮಾನದ ಬಗ್ಗೆಯೂ ವಿದ್ವಾಂಸರಲ್ಲಿ ಒಮ್ಮತವಿಲ್ಲ : ಅದಕ್ಕೆ ಕಾರಣ ಮಾಹಿತಿಗಳು ಲಭ್ಯವಿಲ್ಲದೆ ಇರುವುದೇ ಆಗಿದೆ. ತಕ್ಷಶಿಲೆಯ ಭೀರ್ ಎಂಬಲ್ಲಿ ನಡೆದ ಉತ್ಖನನಗಳಲ್ಲಿ ಹೇರಳವಾಗಿ ಪಂಚ್ ಮಾಡಿದ ನಾಣ್ಯಗಳು ದೊರಕಿವೆ. ಸ್ತರಶಾಸ್ತ್ರದ ರೀತಿಯಿಂದ ಈ ನಾಣ್ಯಗಳನ್ನು ಗಮನಿಸಿದರೆ, ಅವುಗಳಲ್ಲಿ ಅತ್ಯಂತ ಪ್ರಾಚೀನವಾದವು ಕ್ರಿ.ಪೂ. ಆರನೆಯ ಶತಮಾನಕ್ಕೆ ಸೇರುತ್ತವೆ. ಈ ತಾಂತ್ರಿಕತೆಯು ಬೆಳೆಯುವುದಕ್ಕೆ ಎರಡು ಶತಮಾನಗಳಷ್ಟು ಕಾಲಾವಕಾಶವನ್ನು ಕಲ್ಪಿಸಿದರೆ, ಪಂಚ್ ಮಾಡಿದ ನಾಣ್ಯಗಳು ಕ್ರಿ.ಪೂ. ಎಂಟನೆಯ ಶತಮಾನದಲ್ಲಿ ಆರಂಭಗೊಂಡಿರಬೇಕು

ಎಂದು ಹೇಳಬೇಕಾಗುತ್ತದೆ. ನಾಣ್ಯಗಳ ವರ್ಗೀಕರಣದಿಂದಲೂ ಈ ಕಾಲಮಾನವನ್ನು ದೃಢಪಡಿಸಬಹುದು. ಪಂಚ್ ಮಾಡಿದ ನಾಣ್ಯಗಳ ತಾಂತ್ರಿಕತೆಯನ್ನು ಗಮನಿಸಿದರೆ, ಅವುಗಳನ್ನು ಮೌರ್ಯಕಾಲದ ನಾಣ್ಯಗಳು ಹಾಗೂ ಮೌರ್ಯಪೂರ್ವ ಕಾಲದ ನಾಣ್ಯಗಳು ಎಂದು ಗುರುತಿಸಬಹುದು. ಈ ಎರಡನೆಯ ವರ್ಗದ ಪಂಚ್ ನಾಣ್ಯಗಳು ಅಷ್ಟೇನೂ ಉತ್ತಮವಲ್ಲದ ತಾಂತ್ರಿಕತೆಯನ್ನು ಹೊಂದಿರುವುದು ನಮ್ಮ ಗಮನವನ್ನು ಸೆಳೆಯುತ್ತದೆ. ಆದರೆ ಮೌರ್ಯರ ಕಾಲದ ಪಂಚ್ ಚಿಹ್ನೆಯ ನಾಣ್ಯಗಳು ಅಚ್ಚುಕಟ್ಟಾಗಿದ್ದು ಮೊದಲ ಗುಂಪಿಗೆ ಸೇರಿದ ನಾಣ್ಯಗಳಿಗಿಂತ ಹೆಚ್ಚಿನ ಬೆಳವಣಿಗೆಯನ್ನು ಪ್ರದರ್ಶಿಸುತ್ತವೆ. ಆದುದರಿಂದ ಮೌರ್ಯ-ಪೂರ್ವಕಾಲದ ಪಂಚ್ ಚಿಹ್ನೆಯ ನಾಣ್ಯಗಳೇ ಅತ್ಯಂತ ಪ್ರಾಚೀನ ನಾಣ್ಯಗಳೆಂದು ಭಾವಿಸಬೇಕಾಗುತ್ತದೆ.

ಇವಿಷ್ಟೂ ಈ ನಾಣ್ಯಗಳಿಂದ ತಿಳಿದುಬರುವ ಮಾಹಿತಿಗಳು. ಸುಮಾರಾಗಿ ಇದೇ ಕಾಲಮಾನಕ್ಕೆ ಸೇರಬಹುದಾದ ಪಾಣಿನಿ, ಪತಂಜಲಿಯರ ಕೃತಿಗಳು, ಬೌದ್ಧ ಗ್ರಂಥಗಳು ಹಾಗೂ ಸ್ವಲ್ಪ ಅನಂತರದ ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದವುಗಳಿಂದ ಕೆಲವು ಮಾಹಿತಿಗಳು ದೊರೆಯುತ್ತವೆ. ಶತಮಾನ, ಅರ್ಧ ಶತಮಾನ, ಪಾದಶತಮಾನ, ಪಾದಾರ್ಧ ಶತಮಾನ ಹಾಗೂ ಸಾಣ, ಅರ್ಧಸಾಣ ಎಂಬ ಬೆಳ್ಳಿಯ ನಾಣ್ಯಗಳು ಬಳಕೆಯಲ್ಲಿದ್ದವು. ಶತಮಾನ ನಾಣ್ಯದ ತೂಕ ಒಂದು ನೂರು ರತ್ತಿಗಳಾಗಿದ್ದವು. ಸಾಣ ನಾಣ್ಯದ ತೂಕ 12.5 ರತ್ತಿಗಳಾಗಿದ್ದವು. ಮತ್ತೊಂದು ವಿಧದ ನಾಣ್ಯವೇ ವಿಂಶತಿಕ, ದ್ವಿವಿಂಶತಿಕ ಹಾಗೂ ತ್ರಿವಿಂಶತಿಕ, ಅರ್ಧವಿಂಶತಿಕ ಹಾಗೂ ಪಾದವಿಂಶತಿಕ. ಮತ್ತೊಂದು ನಮೂನೆಯ ನಾಣ್ಯವೇ ಕಾರ್ಷಾಪಣ. ಕೌಟಿಲ್ಯನ ಪ್ರಕಾರ ಇದು ಚಿನ್ನದ ಪಣ. ಇದರಲ್ಲಿ ಅರ್ಧ, ಕಾಲು ಹಾಗೂ ಎಂಟನೆಯ ಒಂದು ಭಾಗದ ಮೌಲ್ಯದ ನಾಣ್ಯಗಳೂ ಇದ್ದವು. ಮಾಷ ಮತ್ತು ಕಾಕನಿ ಎನ್ನುವುದು ತಾಮ್ರದ ನಾಣ್ಯಗಳು. ತ್ರಿಮಾಷ ಮತ್ತು ಅರ್ಧ ಕಾಕನಿ ನಾಣ್ಯಗಳ ಉಲ್ಲೇಖ ಅರ್ಥಶಾಸ್ತ್ರದಲ್ಲಿ ಕಾಣಬರುತ್ತದೆ. ಈ ಎಲ್ಲ ನಾಣ್ಯಗಳೂ ಪಂಚ್ ಚಿಹ್ನೆಯ ನಾಣ್ಯಗಳು ಎಂದು ಭಾವಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ದೊರಕಿರುವ ಪಂಚ್ ಮಾಡಿದ ನಾಣ್ಯಗಳನ್ನು ಈಗ ಗಮನಿಸಬಹುದು. ಸಾಮಾನ್ಯವಾಗಿ ಹೇಳುವುದಾದರೆ ಉತ್ತರ ಭಾರತದಲ್ಲಿ ಚಲಾವಣೆಯಲ್ಲಿದ್ದ ಪಂಚ್ ಮಾಡಿದ ನಾಣ್ಯಗಳೇ ಕರ್ನಾಟಕದಲ್ಲಿಯೂ ಬಳಕೆಯಲ್ಲಿದ್ದವು. ಇತಿಹಾಸ ಆರಂಭದ ಕಾಲದಲ್ಲಿ ಮೌರ್ಯರು ಕರ್ನಾಟಕದಲ್ಲಿಯೂ ಆಧಿಪತ್ಯವನ್ನು ನಡೆಸುತ್ತಿದ್ದುದರಿಂದ, ತಮ್ಮ ಪಂಚ್ ಚಿಹ್ನೆಯ ನಾಣ್ಯಗಳನ್ನೇ ಇಲ್ಲಿಯೂ ಚಲಾವಣೆಗೆ ತಂದರು. ಅಂದರೆ ಕರ್ನಾಟಕದಲ್ಲಿ ಸ್ಥಳೀಯವಾಗಿ ಪಂಚ್ ಮಾಡಿದ ನಾಣ್ಯಗಳನ್ನು ಟಂಕಿಸುತ್ತಿದ್ದರೆಂಬುದಕ್ಕೆ ಆಧಾರಗಳು ದೊರೆತಿಲ್ಲ. ಎಂ.ಎಚ್. ಕೃಷ್ಣರವರು ಪುರಾತತ್ವ

ಇಲಾಖೆಯ ಸಂಗ್ರಹದಲ್ಲಿದ್ದ ಪಂಚ್ ಮಾಡಿದ ಹತ್ತೊಂಬತ್ತು ಬೆಳ್ಳಿಯ ನಾಣ್ಯಗಳನ್ನು ವರ್ಣಿಸಿದ್ದಾರೆ. ಇವುಗಳಲ್ಲಿ ಹದಿನಾಲ್ಕು ನಾಣ್ಯಗಳು ಮೊದಲೇ ಇದ್ದವು. ಮಿಕ್ಕ ಐದು ನಾಣ್ಯಗಳನ್ನು ಮದ್ರಾಸಿನ ಒಂದು ಸಂಸ್ಥೆಯು ದಾನವಾಗಿ ಕೊಟ್ಟಿದ್ದಿತು. ಆದುದರಿಂದ ಈ ನಾಣ್ಯಗಳು ದೊರಕಿದ ಸ್ಥಳಗಳ ವಿವರಗಳು ತಿಳಿದುಬಂದಿಲ್ಲ. ಈ ನಾಣ್ಯಗಳ ಚಿಹ್ನೆಗಳನ್ನು ಆಧರಿಸಿ ಹೇಳುವುದಾದರೆ, ಇವು ಮೌರ್ಯರ ಕಾಲದ ಪಂಚ್ ಮಾಡಿದ ನಾಣ್ಯಗಳು. ತೂಕವನ್ನು ಗಮನಿಸಿದರೆ ಇವು ಕಾರ್ಷಾಪಣ, ಅರ್ಧ ಕಾರ್ಷಾಪಣ ಮತ್ತು ಕಾಲು ಕಾರ್ಷಾಪಣಗಳೆಂದು ತೀರ್ಮಾನಿಸಬಹುದು. ಇವುಗಳ ತೂಕ ಹೀಗಿದೆ : ಕಾರ್ಷಾಪಣ - 3.3 ರಿಂದ 2.9 ಗ್ರಾಂ; ಅರ್ಧ ಕಾರ್ಷಾಪಣ - 1.70 ರಿಂದ 1.50 ಗ್ರಾಂ; ಕಾಲು ಕಾರ್ಷಾಪಣ - 0.85 ರಿಂದ 0.7 ಗ್ರಾಂ. ಕೆಲವು ನಾಣ್ಯಗಳ ಹಿಮ್ಮುಖ ಖಾಲಿಯಾಗಿದೆ. ಇಲ್ಲಿ ವಿಶೇಷವಾಗಿ ಕಾಣಬರುವ ಚಿಹ್ನೆಗಳೆಂದರೆ ಸೂರ್ಯ, ನವಿಲು, ವೃಷಭ, ಆನೆ ಮತ್ತು ಚೈತ್ಯ.

ಧಾರವಾಡದಲ್ಲಿ ಹನ್ನೊಂದು ಬೆಳ್ಳಿಯ ಪಂಚ್ ಚಿಹ್ನೆಯ ನಾಣ್ಯಗಳು ದೊರಕಿದವು. ಅವುಗಳೆಲ್ಲವೂ ಆಯತಾಕಾರದಲ್ಲಿದ್ದವು; ಅವು ಕಾರ್ಷಾಪಣ ನಾಣ್ಯಗಳು. ಅವುಗಳ ತೂಕ 3.1 ರಿಂದ 2.9 ಗ್ರಾಂ. ಈ ನಾಣ್ಯಗಳ ಎರಡು ಮುಖಗಳಲ್ಲಿಯೂ ಚಿಹ್ನೆಗಳಿವೆ. ಸೂರ್ಯ, ನವಿಲು, ಬೆಟ್ಟ, ವೃಷಭ, ಸ್ವಸ್ತಿಕ ಹಾಗೂ ಕಪ್ಪೆಯ ಚಿಹ್ನೆಗಳು ಈ ನಾಣ್ಯಗಳ ಮೇಲೆ ಕಾಣಬರುತ್ತವೆ. ಈ ನಾಣ್ಯಗಳು ಮೌರ್ಯ ಮತ್ತು ಅನಂತರದ ಕಾಲಕ್ಕೆ ಸೇರಿದವು ಎಂದು ಕಾಣಬರುತ್ತದೆ.

ಗುಲ್ಬರ್ಗ ತಾಲೂಕಿನ ಹೆಬ್ಬಾಳ್ ಎನ್ನುವ ಗ್ರಾಮದಲ್ಲಿ 1940ರಲ್ಲಿ ಬೆಳ್ಳಿಯ ಪಂಚ್ ಚಿಹ್ನೆಯ ನಾಣ್ಯಗಳು ಪತ್ತೆಯಾದವು. ಒಟ್ಟು 225 ಬೆಳ್ಳಿಯ ನಾಣ್ಯಗಳನ್ನು ಒಂದು ತುಂಡು ಬಟ್ಟೆಯಲ್ಲಿ ಕಟ್ಟಿ, ಮಡಕೆಯಲ್ಲಿಡಲಾಗಿತ್ತು. ಪಿ.ಎಲ್. ಗುಪ್ತ ಅವರು ಈ ನಾಣ್ಯರಾಶಿಯನ್ನು ವಿಶೇಷವಾಗಿ ಅಧ್ಯಯನ ಮಾಡಿ ಹೊಸ ವಿಷಯಗಳನ್ನು ತಿಳಿಸಿದ್ದಾರೆ. ಈ ನಾಣ್ಯಗಳು ನಾಲ್ಕು ವಿವಿಧ ಸ್ತರಗಳಿಗೆ ಸೇರಿದವುಗಳಾಗಿವೆ. ಮೊದಲನೆಯದು ಮೌರ್ಯ-ಪೂರ್ವ ಕಾಲಕ್ಕೆ ಸೇರಿದ್ದು. ಇವು ಸ್ವಲ್ಪ ತೆಳ್ಳಗಿದ್ದು ಇವುಗಳ ಮೇಲೆ ಐದು ಚಿಹ್ನೆಗಳಿದ್ದವು; ಸಾಮಾನ್ಯವಾಗಿ ಮೊದಲನೆಯ ಚಿಹ್ನೆ ಸೂರ್ಯ. ಇವುಗಳ ತೂಕ 2.8 ರಿಂದ 2.5 ಗ್ರಾಂ. ಎರಡನೆಯ ಹಂತದ 53 ನಾಣ್ಯಗಳು ಮಧ್ಯಮ ವರ್ಗದ ತಾಂತ್ರಿಕತೆಗೆ ಸೇರಿವೆ : ಸ್ವಲ್ಪ ದಪ್ಪ ಜಾಸ್ತಿ. ಇವುಗಳ ಮೇಲೆ ಆರರಿಂದ ಒಂಬತ್ತು ಚಿಹ್ನೆಗಳಿವೆ. ಇವುಗಳ ತೂಕ 3.0 ರಿಂದ 2.5 ಗ್ರಾಂ. 98 ನಾಣ್ಯಗಳು ಮೂರನೆಯ ಗುಂಪಿಗೆ ಸೇರಿವೆ. ಇವು ಚೌಕ ಇಲ್ಲವೆ ವೃತ್ತಾಕಾರದಲ್ಲಿದ್ದು, ಸ್ವಲ್ಪ ದಪ್ಪನಾಗಿವೆ. ಇವುಗಳ ತೂಕ 3.1 ರಿಂದ 2.7 ಗ್ರಾಂ. 29 ನಾಣ್ಯಗಳು ನಾಲ್ಕನೆಯ ವರ್ಗಕ್ಕೆ ಸೇರುತ್ತವೆ. ಇವು ಸ್ವಲ್ಪ ದಪ್ಪನಾಗಿದ್ದು, ನಾಜೂಕಾಗಿ ಕಾಣುವುದಿಲ್ಲ. ಇವುಗಳ ತೂಕ 3.1 ರಿಂದ 2.6 ಗ್ರಾಂ.



ಕರ್ನಾಟಕದಲ್ಲಿ ಪಂಚ್ ಚಿಹ್ನೆಯ ನಾಣ್ಯಗಳು

ರಾಯಚೂರು ನಗರದ ರೈಲ್ವೆ ನಿಲ್ದಾಣದ ಬಳಿ 1935ರಲ್ಲಿ ನೆಲವನ್ನು ಅಗೆಯುತ್ತಿದ್ದಾಗ ಪಂಚ್ ಮಾಡಿದ 63 ಬೆಳ್ಳಿಯ ನಾಣ್ಯಗಳು ಪತ್ತೆಯಾದವು. ಬೆಳ್ಳಿಯ ತಗಡನ್ನು ಕತ್ತರಿಸಿ ಮಾಡಿದ ನಾಣ್ಯಗಳಾದುದರಿಂದ, ಇದರಲ್ಲಿ ವೃತ್ತಾಕಾರದ ನಾಣ್ಯಗಳಿಲ್ಲ. ಚೌಕಾಕಾರ ಹಾಗೂ ಪಂಚಕೋಣಾಕಾರದ ನಾಣ್ಯಗಳೇ ಜಾಸ್ತಿ. ಸ್ವಲ್ಪ ದಪ್ಪವಾಗಿರುವ ನಾಣ್ಯಗಳೂ ಹೆಚ್ಚು. ಇವುಗಳನ್ನು ಕೂಡ ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಹಂತದ ಐದು ನಾಣ್ಯಗಳು ತೆಳ್ಳಗಿವೆ. ಇವುಗಳ ಮೇಲೆ ಐದು ಚಿಹ್ನೆಗಳಿದ್ದು, ಸೂರ್ಯನ ಚಿಹ್ನೆ ಎಲ್ಲದರಲ್ಲಿಯೂ ಕಾಣಬರುತ್ತದೆ. ಆರು ಬಾಹುಗಳ, ಪ್ರಾಣಿ-ಪಕ್ಷಿಗಳ ಚಿಹ್ನೆಗಳೂ ಇಲ್ಲಿವೆ. ಇವುಗಳ ಹಿಂಭಾಗದಲ್ಲಿ ತೆಳ್ಳಗಿನ ಚಿಹ್ನೆಗಳು ಪಂಚ್ ಮಾಡಲ್ಪಟ್ಟಿವೆ. ಇವುಗಳ ತೂಕ 2.9 ರಿಂದ 2.7 ಗ್ರಾಂ. ಎರಡನೆಯ ಸ್ತರದ 40 ನಾಣ್ಯಗಳಲ್ಲಿ ಮಧ್ಯಮವರ್ಗದ ತಾಂತ್ರಿಕತೆಯನ್ನು ಕಾಣುತ್ತೇವೆ. ಇವುಗಳಲ್ಲಿ ಸೂರ್ಯನ ಚಿಹ್ನೆಯೂ ಸೇರಿದಂತೆ ಐದು ಚಿಹ್ನೆಗಳಿವೆ. ಕೆಲವು ಚಿಹ್ನೆಗಳು ಅಪರೂಪವಾಗಿರುವುದು ಕಂಡುಬರುತ್ತದೆ. ಇವುಗಳ ತೂಕ 3.3 ರಿಂದ 2.8 ಗ್ರಾಂ. ಹನ್ನೊಂದು ನಾಣ್ಯಗಳು ಮೂರನೆಯ ಗುಂಪಿಗೆ ಸೇರಿವೆ. ಇವು ಚೌಕಾಕಾರವಾಗಿದ್ದು ಸ್ವಲ್ಪ ದಪ್ಪಗಿವೆ. ಇವುಗಳ ಮೇಲೆ ಐದು ಚಿಹ್ನೆಗಳಿವೆ. ಅನೇಕ ನಾಣ್ಯಗಳ ಮೇಲೆ ಹಿಮ್ಮುಖದ ಚಿಹ್ನೆ ಕಾಣಬರುವುದಿಲ್ಲ. ಇವುಗಳ ತೂಕ ಸಾಮಾನ್ಯವಾಗಿ 3.1 ಗ್ರಾಂ. ನಾಲ್ಕನೆಯ ಗುಂಪಿಗೆ ಸೇರಿದ ನಾಲ್ಕು ನಾಣ್ಯಗಳಿವೆ. ಇವುಗಳು ಚೌಕಾಕಾರವಾಗಿದ್ದು, ಸ್ವಲ್ಪ ದಪ್ಪಗಿವೆ. ಸೂರ್ಯನ ಚಿಹ್ನೆಯೂ ಸೇರಿದಂತೆ, ಇವುಗಳ ಮೇಲೆ ಐದು ಚಿಹ್ನೆಗಳು ಪಂಚ್ ಮಾಡಲ್ಪಟ್ಟಿವೆ. ಇವುಗಳ ತೂಕ ಸಾಮಾನ್ಯವಾಗಿ 3.1 ಗ್ರಾಂ. ಈ ನಾಣ್ಯಗಳಲ್ಲಿ ಕೆಲವು ಭೀರ್ ನಾಣ್ಯಗಳಿಗೆ ಸಮೀಪವಾಗಿರುವುದರಿಂದ, ಇವುಗಳ ಕಾಲಮಾನವನ್ನು ನಿರ್ಧರಿಸಬಹುದಾಗಿದೆ. ಸೂಕ್ಷ್ಮ ವಿವರಗಳಿಗೆ ಹೋಗದೆ ಹೇಳುವುದಾದರೆ, ಈ ನಾಣ್ಯ ರಾಶಿಯು ಕ್ರಿ.ಪೂ. ಮೂರನೆಯ ಶತಮಾನಕ್ಕಿಂತ ಮುಂಚಿನ ಕಾಲಕ್ಕೆ ಸೇರುತ್ತದೆ. ಈ ದೃಷ್ಟಿಯಿಂದ ಇದೊಂದು ಮುಖ್ಯವಾದ ನಾಣ್ಯರಾಶಿ.

ರಾಯಚೂರು ಜಿಲ್ಲೆಯ ಚಿಕ್ಕಸಿಂದೋಗಿ ಎಂಬಲ್ಲಿ ದೊರಕಿದ ಪಂಚ್ ಮಾಡಿದ ನಾಣ್ಯರಾಶಿ ಬಲು ಆಸಕ್ತಿಕರವಾದುದು. ರೈತರು ಹೊಲವನ್ನು ಉಳುತ್ತಿದ್ದಾಗ ಈ ನಾಣ್ಯರಾಶಿಯು ಬೆಳಕಿಗೆ ಬಂದಿತು. ಇದರಲ್ಲಿ 5534 ಪಂಚ್ ಮಾಡಿದ ನಾಣ್ಯಗಳು ಕಂಡುಬಂದವು. ಈ ನಾಣ್ಯಗಳನ್ನು ಒಂದು ಚಿಕ್ಕ ಮಡಕೆಯಲ್ಲಿ ಹಾಕಿ, ಆ ಮಡಕೆಯನ್ನು ಒಂದು ತಾಮ್ರದ ಪಾತ್ರೆಯಲ್ಲಿ ಇಡಲಾಗಿತ್ತು. ಇದರ ಒಟ್ಟು ತೂಕ 16.69 ಕಿ.ಗ್ರಾಂ. ಸ್ವಾರಸ್ಯಕರ ಸಂಗತಿ ಎಂದರೆ, ಈ ತಾಮ್ರದ ಪಾತ್ರೆಯ ಮೇಲೆ 'ಚಂತಸ' ಎನ್ನುವ

ಬ್ರಾಹ್ಮೀ ಲಿಪಿಯ ಅಕ್ಷರಗಳು ಕೆತ್ತಲ್ಪಟ್ಟಿದ್ದವು. ಇದರ ಅಕ್ಕಪಕ್ಕದಲ್ಲಿ ಶ್ರೀವತ್ಸ ಮತ್ತು ನಂದಿಪಾದ ಚಿಹ್ನೆಗಳೂ ಕೆತ್ತಲ್ಪಟ್ಟಿದ್ದವು. ಲಿಪಿಶಾಸ್ತ್ರದ ಆಧಾರದ ಮೇಲೆ ಅಕ್ಷರಗಳು ಕ್ರಿ.ಶ. ಎರಡು-ಮೂರನೆಯ ಶತಮಾನಕ್ಕೆ ಸೇರುತ್ತವೆ. ಆದುದರಿಂದ ಈ ನಾಣ್ಯರಾಶಿಯು ಈ ಕಾಲಕ್ಕೆ ಸೇರಿದ್ದು ಎಂಬುದು ಖಚಿತವಾಗಿತ್ತದೆ. 'ಚಂತ' ಎನ್ನುವುದನ್ನು ಒಬ್ಬ ಮನುಷ್ಯನ ಹೆಸರು ಎಂದು ಭಾವಿಸುವುದಾದರೆ, 'ಚಂತಸ' ಎಂದರೆ 'ಚಂತನಿಗೆ ಸೇರಿದ್ದು' ಎಂದು ಅರ್ಥೈಸಬೇಕಾಗುತ್ತದೆ. ಆಗ ಚಂತ ಈ ನಾಣ್ಯರಾಶಿಯ ಒಡೆಯನಾಗಿದ್ದ ಎಂದು ಭಾವಿಸಬಹುದು. ಚಂತ, ಶಂತ, ಚಾಂತ, ಶಾಂತ ಎಂಬ ರೂಪ ಹೆಸರುಗಳು ಆಂಧ್ರದಲ್ಲಿ ಆಳಿದ ಇಕ್ಷ್ವಾಕು ದೊರೆಗಳ ವಂಶದಲ್ಲಿ ಕಾಣಬರುತ್ತದೆ (ಚಾಂತಮೂಲ ಅಥವಾ ಶಾಂತಮೂಲ). ಆದುದರಿಂದ ಇವನೊಬ್ಬ ಸ್ಥಳೀಯ ಮುಖಂಡನಿರಬಹುದೆಂದು ಭಾವಿಸಲು ಅಡ್ಡಿಯಿಲ್ಲ. ಇಲ್ಲಿನ ನಾಣ್ಯಗಳು ವಿವಿಧ ಆಕಾರಗಳಲ್ಲಿದ್ದು ವಿಶೇಷವಾಗಿ ಮೌರ್ಯ ವಂಶದ ಪಂಚ್ ಚಿಹ್ನೆಯ ನಾಣ್ಯಗಳನ್ನು ಹೋಲುತ್ತವೆಯಾದುದರಿಂದ, ಈ ಭಾಗದಲ್ಲಿ ಮೌರ್ಯರ ನಾಣ್ಯಗಳೇ ಚಲಾವಣೆಯಲ್ಲಿದ್ದವು ಎಂಬುದು ಖಚಿತವಾಗುತ್ತದೆ. ಈ ದೃಷ್ಟಿಯಿಂದ ಹಾಗೂ ಬೃಹತ್ ಸಂಖ್ಯೆಯ ದೃಷ್ಟಿಯಿಂದ ಚಿಕ್ಕ ಸಿಂದೋಗಿಯ ನಾಣ್ಯರಾಶಿ ಗಮನಾರ್ಹವಾದದ್ದು.

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಹಲವಾಗಲು ಎಂಬ ಗ್ರಾಮದಲ್ಲಿ ಪಂಚ್ ಮಾಡಿದ 144 ಬೆಳ್ಳಿಯ ನಾಣ್ಯಗಳು ದೊರಕಿವೆ. ಈ ನಾಣ್ಯಗಳನ್ನು ಒಂದು ಮಣ್ಣಿನ ಕುಡಿಕೆಯಲ್ಲಿ ಇಡಲಾಗಿದ್ದಿತು. ಭೂಮಿಯನ್ನು ಉಳುತ್ತಿದ್ದಾಗ ಈ ನಾಣ್ಯಗಳು ಹೊರಬಂದವು. ಇವುಗಳಲ್ಲಿ 133 ನಾಣ್ಯಗಳು ಆಯತಾಕಾರದಲ್ಲಿಯೂ, ಉಳಿದ 11 ನಾಣ್ಯಗಳು ವೃತ್ತಾಕಾರದಲ್ಲಿಯೂ ಇವೆ. ಇವುಗಳ ಮುಮ್ಮುಖದಲ್ಲಿ ಐದು ಚಿಹ್ನೆಗಳಿವೆ. ಹಿಮ್ಮುಖದಲ್ಲಿ ಚಿಹ್ನೆಗಳಿದ್ದರೂ, ಅವು ಸರಿಯಾಗಿ ಕಾಣುವುದಿಲ್ಲ. ಚಿಹ್ನೆಗಳ ಆಧಾರದ ಮೇಲೆ ಇವು ಮೌರ್ಯ ವಂಶದ ಪಂಚ್ ಮಾಡಿದ ನಾಣ್ಯಗಳೆಂದು ತಿಳಿಯಬಹುದು.


ಪುರಾತತ್ವ ಭೂ ಉತ್ಖನನಗಳಲ್ಲಿ ಪಂಚ್ ಮಾಡಿದ ನಾಣ್ಯಗಳು ದೊರಕಿರುವುದು ಒಂದು ವಿಶೇಷವಾದ ಸಂಗತಿ. ಇಂತಹ ನಾಣ್ಯಗಳಿಗೆ ಹೆಚ್ಚು ಮೌಲ್ಯ; ಏಕೆಂದರೆ ಅವು ಸಾಂಸ್ಕೃತಿಕ ಭೂಸ್ತರಗಳಲ್ಲಿ ದೊರಕುವುದರಿಂದ ಅವುಗಳ ಕಾಲಮಾನ, ಅವುಗಳನ್ನು ಬಳಸಿದ ಜನಗಳು ಮುಂತಾದ ವಿಷಯಗಳು ತಿಳಿದುಬರುತ್ತವೆ. ಅನೇಕ ಸಾರಿ ಈ ನಾಣ್ಯಗಳೇ ಭೂಸ್ತರಗಳ ಕಾಲಮಾನವನ್ನು ತಿಳಿಯಲೂ ಸಹಾಯಕವಾಗುತ್ತವೆ. ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ನಡೆದ ಎರಡನೆ ಸಾರಿಯ ಉತ್ಖನನದಲ್ಲಿ ಪಂಚ್

ಮಾಡಿದ ಒಂಬತ್ತು ನಾಣ್ಯಗಳು ದೊರಕಿದವು. ಇವುಗಳಲ್ಲಿ ಎರಡು ಬೆಳ್ಳಿಯಿಂದಲೂ ಮಿಕ್ಕ ಏಳು ತಾಮ್ರದಿಂದಲೂ ತಯಾರಾದವು. ಇವುಗಳಲ್ಲಿ ಕೆಲವು ದಪ್ಪಗಿದ್ದರೆ ಮಿಕ್ಕವು ಮಧ್ಯಮ ವರ್ಗಕ್ಕೆ ಸೇರಿದವು. ಅಗಲವಾದ ತಗಡನ್ನು ಕತ್ತರಿಸಿ ಮಾಡಿದ ಆಯತಾಕಾರದ ನಾಣ್ಯಗಳೇ ವಿಶೇಷವಾಗಿ ಕಾಣಬರುತ್ತವೆ. ಒಂದು ನಾಣ್ಯ ಮಾತ್ರ ವೃತ್ತಾಕಾರವಾಗಿದೆ. ಈ ನಾಣ್ಯಗಳ ಚಿಹ್ನೆ ಮತ್ತು ಇತರ ಲಕ್ಷಣಗಳ ಆಧಾರದ ಮೇಲೆ ಇವುಗಳನ್ನು ಐದು ಗುಂಪುಗಳಾಗಿ ವಿಂಗಡಿಸಲಾಗಿದೆ. ಈ ನಾಣ್ಯಗಳ ತೂಕ 2.6 ರಿಂದ 3.4 ಗ್ರಾಂ. ಈ ನಾಣ್ಯಗಳ ಮುಮ್ಮುಖದಲ್ಲಿ ಐದು ಚಿಹ್ನೆಗಳು ಕಾಣಬರುತ್ತವೆ. ಒಂಬತ್ತು ನಾಣ್ಯಗಳ ಮೇಲೆ ಸೂರ್ಯ, ಆರು ಬಾಹುಗಳು, ಮೂರು ಹಂತದ ಬೆಟ್ಟ, ಆನೆ ಮತ್ತು ವೃಷಭ ಚಿಹ್ನೆಗಳಿವೆ. ಇವುಗಳ ಆಧಾರದ ಮೇಲೆ ಈ ನಾಣ್ಯಗಳು ಮೌರ್ಯ-ಪೂರ್ವ ಕಾಲಕ್ಕೆ ಸೇರಿದ್ದವೆಂದು ಅಭಿಪ್ರಾಯಪಡಲಾಗಿದೆ. ಅಂದರೆ ಮೌರ್ಯರ ಕಾಲಕ್ಕೂ ಮುಂಚೆ ಪಂಚ್ ಮಾಡಿದ ನಾಣ್ಯಗಳು ಕರ್ನಾಟಕದಲ್ಲಿ ಬಳಕೆಯಲ್ಲಿದ್ದವು ಎಂಬ ವಿಷಯ ಇದರಿಂದ ಹೊರಹೊಮ್ಮುತ್ತದೆ. ಇದೇ ನೆಲೆಯಲ್ಲಿ ಬೃಹತ್ ಶಿಲಾಸಮಾಧಿ ಸಂಸ್ಕೃತಿಯ ಜನಗಳ ವಸತಿ ಇದ್ದುದರಿಂದ, ಈ ಮೆಗಾಲಿತಿಕ್ ಕಾಲದ ಕೂಲಿಗಳಿಗೆ ಕೊಟ್ಟ ಹಣವೇ ಈ ನಾಣ್ಯಗಳು ಎಂದು ಪಿ.ಎಲ್. ಗುಪ್ತ ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೆ ಇನ್ನೂ ಆಧಾರಗಳು ಬೇಕು.

1947ರಲ್ಲಿ ವೀಲರ್ ಅವರು ಚಂದ್ರವಳ್ಳಿಯಲ್ಲಿ ಉತ್ಖನನ ನಡೆಸಿದರು. ಇದರಲ್ಲಿ ಪಂಚ್ ಮಾಡಿದ ಒಂದು ಬೆಳ್ಳಿಯ ನಾಣ್ಯ ದೊರಕಿತು. ಇದು ಆಯತಾಕಾರವಾಗಿದ್ದು, ಇದರ ತೂಕ 2.6 ಗ್ರಾಂ. ಇದರ ಮುಮ್ಮುಖದಲ್ಲಿ ಐದು ಚಿಹ್ನೆಗಳಿದ್ದವು. ಅವು ಯಾವುವೆಂದರೆ ಸೂರ್ಯ, ಡಮರು, ಬಾಣ, ವೃಷಭ ಮತ್ತು ಹೂವಿನ ವಿನ್ಯಾಸ. ಈ ನಾಣ್ಯ ಮಧ್ಯ ಆಂಧ್ರ ಸಂಸ್ಕೃತಿಯ ಸ್ತರದಲ್ಲಿ ದೊರಕಿರುವುದರಿಂದ ಕ್ರಿ.ಶ. ಒಂದನೆಯ ಶತಮಾನಕ್ಕೆ ಸೇರುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದ ಪುರಾತತ್ವ ವಿಭಾಗದವರು ಬನವಾಸಿಯಲ್ಲಿ 1969 - 72ರ ಸಮಯದಲ್ಲಿ ಉತ್ಖನನ ನಡೆಸಿದರು. ಈ ಉತ್ಖನನದಲ್ಲಿ ಪಂಚ್ ಚಿಹ್ನೆಯ ಒಂದು ಬೆಳ್ಳಿಯ ನಾಣ್ಯ ದೊರಕಿದೆ. ಈ ನಾಣ್ಯವು ಶಾತವಾಹನ ಕಾಲದ ಗಜಪೃಷ್ಠಾಕಾರದ ಇಟ್ಟಿಗೆಯ ಕಟ್ಟಡದ ಎರಡು ಗೋಡೆಗಳ ಮಧ್ಯೆ ದೊರಕಿತು. ಇಲ್ಲಿ ಕಂಡುಬಂದ ಒಂದು ಕುಳಿಯಲ್ಲಿ ಕೆಳಗಿನ ಸ್ತರಗಳಲ್ಲಿ ಈ ನಾಣ್ಯ ದೊರಕಿತು. ಸಾಂಸ್ಕೃತಿಕ ಸ್ತರದ ದೃಷ್ಟಿಯಿಂದ ಇದು ಶಾತವಾಹನರ ಕಾಲಕ್ಕಿಂತ ಪ್ರಾಚೀನವಾದುದು. ಅಂದರೆ ಮೌರ್ಯರ ಕಾಲದ

ಮೇಲಿನ ಸ್ತರಕ್ಕೆ ಸೇರುತ್ತದೆ. ಈ ನಾಣ್ಯವು ಆಯತಾಕಾರದಲ್ಲಿದ್ದು ಇದರಲ್ಲಿ ಕಾಣಬರುವ ಸೂರ್ಯ, ಆನೆ ಮುಂತಾದ ಚಿಹ್ನೆಗಳಿಂದ ಇದು ಮೌರ್ಯರ ಕಾಲಕ್ಕೆ ಸೇರುತ್ತದೆ; ಅಂದರೆ ಮೌರ್ಯರ ಕಾಲದ ಕೊನೆಯ ಭಾಗದಲ್ಲಿ ಈ ನಾಣ್ಯ ಉಪಯೋಗದಲ್ಲಿದ್ದಿತೆಂದು ತಿಳಿಯಬಹುದು.



ಬೆಳಗಾಂ ನಗರಕ್ಕೆ ಸೇರಿದಂತೆ ಇರುವ ವಡಗಾಂ ಮಾಧವಪುರದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದವರು 1972ರಲ್ಲಿ ಉತ್ಖನನವನ್ನು ನಡೆಸಿದರು. ಇಲ್ಲಿ ಪಂಚ್ ಮಾಡಿದ ಎಂಟು ನಾಣ್ಯಗಳು ದೊರಕಿದವು. ಶಾತವಾಹನ ಕಾಲದ ಇಟ್ಟಿಗೆಯ ಕಟ್ಟಡದ ಕೋಣೆಯೊಂದರಲ್ಲಿ ಈ ನಾಣ್ಯಗಳು, ಸಮಕಾಲೀನ ಮಡಕೆಗಳೊಂದಿಗೆ ಕಂಡುಬಂದವು. ಈ ಸ್ತರದ ಕಾಲ ಕ್ರಿ.ಶ. ಒಂದನೆಯ ಶತಮಾನ. ಆದುದರಿಂದ ಈ ನಾಣ್ಯಗಳು ಈ ಸಮಯದಲ್ಲೇ ಚಲಾವಣೆಯಲ್ಲಿದ್ದವೆಂದು ಹೇಳಬೇಕಾಗುತ್ತದೆ. ಈ ನಾಣ್ಯಗಳು ಚೌಕಾಕಾರವಾಗಿಯೂ ಮತ್ತು ಆಯತಾಕಾರವಾಗಿಯೂ ಇವೆ. ಇವುಗಳ ಮೇಲೆ ಐದು ಚಿಹ್ನೆಗಳಿವೆ. ಅವುಗಳಲ್ಲಿ ಮುಖ್ಯವಾದವು ಸೂರ್ಯ, ಬೆಟ್ಟ, ವೃಷಭ ಮತ್ತು ಏಣಿ. ಕೆಲವು ತಾಮ್ರದ ನಾಣ್ಯಗಳಿಗೆ ಬೆಳ್ಳಿಯ ಲೇಪವನ್ನು ಕೊಡಲಾಗಿದ್ದಿತೆಂದೂ ತಿಳಿದುಬಂದಿದೆ. ಆದುದರಿಂದ ಅವು ನೋಡಲು ಬೆಳ್ಳಿಯ ನಾಣ್ಯಗಳಂತೆ ಕಾಣುತ್ತವೆ. ಇವೇನಾದರೂ ಖೋಟ ನಾಣ್ಯಗಳೇ ಎನ್ನುವ ಸಂದೇಹಕ್ಕೂ ಎಡೆಮಾಡಿಕೊಡುತ್ತವೆ. ಈ ಎಲ್ಲ ನಾಣ್ಯಗಳ ಹಾಗೂ ಅವಶೇಷಗಳ ಪೂರ್ಣ ಅಧ್ಯಯನ ಆದರೆ, ಈ ಪಂಚ್ ಮಾಡಿದ ನಾಣ್ಯಗಳ ಮಹತ್ವವನ್ನು ಅರಿಯಬಹುದು.

ಗುಲ್ಬರ್ಗ ಜಿಲ್ಲೆಯ ಸನ್ನತಿಯಲ್ಲಿ ಬೃಹತ್ಪ್ರಮಾಣದಲ್ಲಿ ಉತ್ಖನನಗಳು ನಡೆಯುತ್ತಿವೆ. ಇದು ವಿಶೇಷವಾಗಿ ಶಾತವಾಹನ ಸಂಸ್ಕೃತಿಗೆ ಸಂಬಂಧಿಸಿದ ಪ್ರಾಚೀನ ನೆಲೆಯಾದರೂ, ಇಲ್ಲಿ ಅಶೋಕನ ಕಾಲದ ಮಡಕೆಗಳು ಮತ್ತು ಇತರ ವಸ್ತುಗಳು ಹೇರಳವಾಗಿ ದೊರಕಿವೆ. ಅಶೋಕನ ಶಾಸನವೂ ಇಲ್ಲಿ ದೊರಕಿರುವುದು ಇನ್ನೊಂದು ಮಹತ್ವದ ಅಂಶ. ಆದುದರಿಂದ ಮೌರ್ಯರ ಕಾಲದ ನೆಲೆಯು ಇಲ್ಲಿದ್ದಿತೆಂದು ಖಚಿತವಾಗಿ ತಿಳಿಯುತ್ತದೆ. ಇಲ್ಲಿ ಪಂಚ್ ಮಾಡಿದ ಎಂಟು ಬೆಳ್ಳಿಯ ನಾಣ್ಯಗಳು ದೊರಕಿವೆ. ಇವುಗಳ ಅಧ್ಯಯನ ಇನ್ನೂ ನಡೆದಿಲ್ಲದಿರುವುದರಿಂದ ಅವುಗಳ ಬಗೆಗೆ ಏನನ್ನೂ ಹೇಳಲಾಗುವುದಿಲ್ಲ. ಬಹುಶಃ ಇವು ಮೌರ್ಯರ ಕಾಲದ ಪಂಚ್ ಮಾಡಿದ ನಾಣ್ಯಗಳಾಗಿರಬೇಕೆಂದು ಊಹಿಸಬಹುದು.

ಒಟ್ಟಿನಲ್ಲಿ ಈ ಮೇಲಿನ ಎಲ್ಲ ಅಂಶಗಳನ್ನೂ ಪರಿಶೀಲಿಸಿದರೆ, ಕರ್ನಾಟಕಕ್ಕೆ ಸಂಬಂಧಿಸಿದಂತೆ, ಪಂಚ್ ಮಾಡಿದ ನಾಣ್ಯಗಳ ಬಗೆಗೆ ಈ ರೀತಿ ಹೇಳಬಹುದು: ಪಂಚ್ ಮಾಡಿದ ನಾಣ್ಯಗಳೇ ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನ ನಾಣ್ಯಗಳು. ಇವುಗಳನ್ನು ಬೆಳ್ಳಿ ಮತ್ತು ತಾಮ್ರಗಳಲ್ಲಿ ತಯಾರಿಸುತ್ತಿದ್ದರು. ಇವುಗಳ ತಯಾರಿಕೆ ಮೌರ್ಯರ ಕಾಲದಲ್ಲಿ ಅಂದರೆ ಕ್ರಿ.ಪೂ. ನಾಲ್ಕು-ಮೂರನೆಯ ಶತಮಾನಗಳಲ್ಲಿ ಆರಂಭವಾಗಿ, ಕ್ರಿ.ಶ. ಮೂರನೆಯ ಶತಮಾನದವರೆಗೆ ಇವು ನಮ್ಮಲ್ಲಿ ಬಳಕೆಯಲ್ಲಿದ್ದವು. ಸದ್ಯಕ್ಕೆ ತಿಳಿದಿರುವ ಮಟ್ಟಿಗೆ ಇವು ಉತ್ತರ ಭಾರತದಲ್ಲಿ ತಯಾರಾಗಿ ಇಲ್ಲಿ ಚಲಾವಣೆಗೆ ಬಂದಿದ್ದವು. ಇವುಗಳನ್ನು ಸ್ಥಳೀಯವಾಗಿ ಕರ್ನಾಟಕದಲ್ಲಿ ತಯಾರು ಮಾಡುತ್ತಿದ್ದುದಕ್ಕೆ ಇನ್ನೂ ಆಧಾರಗಳು ದೊರಕಿಲ್ಲ. ಇವು ಇಂದಿನ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ದೊರಕಿರುವುದರಿಂದ ಪ್ರಾಚೀನ ಕರ್ನಾಟಕದ ಎಲ್ಲೆಡೆ ಮೌರ್ಯರ ಕಾಲದಲ್ಲಿ ಈ ನಾಣ್ಯಗಳೇ ಚಲಾವಣೆಯಲ್ಲಿದ್ದವು ಎಂಬುದಂತೂ ಖಚಿತವಾದ ವಿಷಯ. ಪುರಾತತ್ವ ಅನ್ವೇಷಣೆ ಮತ್ತು ಉತ್ಖನನ ಇನ್ನೂ ಹೆಚ್ಚಿಗೆ ನಡೆದರೆ, ಈ ಪಂಚ್ ಮಾಡಿದ ನಾಣ್ಯಗಳ ವಿಷಯದಲ್ಲಿ ಹೊಸ ಮಾಹಿತಿಗಳು ದೊರೆಯುತ್ತವೆ.

2. ಮಹಾರಠಿಗಳ ನಾಣ್ಯಗಳು

ಮೌರ್ಯವಂಶದ ಪತನ ಆರಂಭವಾದ ಕೂಡಲೆ, ಕರ್ನಾಟಕದಲ್ಲಿ ಅನೇಕ ಸಾಮಂತ ರಾಜರು ತಲೆ ಎತ್ತಿದರು. ಈ ರಾಜರು ಇಡೀ ಕರ್ನಾಟಕವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಅಸಮರ್ಥರಾಗಿದ್ದುದರಿಂದ, ಸಣ್ಣ ರಾಜ್ಯಗಳನ್ನು ಕಟ್ಟಿಕೊಂಡು ಸ್ವತಂತ್ರರಾಗಿ ಆಳಲು ಪ್ರಾರಂಭಿಸಿದರು. ಮೌರ್ಯರ ಕಾಲದಲ್ಲಿ ರಾಜ್ಯಪಾಲರಾಗಿದ್ದ ಮಹಾರಠಿಗಳು ಚಿತ್ರದುರ್ಗ - ಕಾರವಾರ - ಬನವಾಸಿ ಪ್ರದೇಶಗಳಲ್ಲಿ ತಮ್ಮ ಪ್ರಾಬಲ್ಯವನ್ನು ಬೆಳೆಸಿಕೊಂಡು ಮೌರ್ಯರಿಂದ ಸ್ವತಂತ್ರರಾಗಿ ರಾಜ್ಯವಾಳಲು ಆರಂಭಿಸಿದರು. ಇದೇ ರೀತಿ ದಖನ್ನಿನ ಇತರ ಪ್ರದೇಶಗಳಲ್ಲಿಯೂ ಮಹಾರಠಿಗಳು ತಮ್ಮ ರಾಜ್ಯವನ್ನು ಸ್ಥಾಪಿಸಿದರು. ಕರ್ನಾಟಕದ ಪ್ರದೇಶಗಳಲ್ಲಿ ಆಳಿದ ಮಹಾರಠಿಗಳ ನಾಣ್ಯಗಳು ಹೇರಳವಾಗಿ

ದೊರಕಿರುವುದರಿಂದ ಇವರ ಇತಿಹಾಸವನ್ನು ರಚಿಸಬಹುದಾಗಿದೆ. ಇವರ ಹೆಸರುಗಳ ಹಿಂದೆ 'ಸದಕನ' ಎಂಬ ಪದವಿರುವುದರಿಂದ, ಇವರನ್ನು ಸದಕನ ವಂಶದವರೆಂದೂ ಕರೆಯುವುದುಂಟು.

ದೊರಕಿರುವ ನಾಣ್ಯಗಳ ಆಧಾರದ ಮೇಲೆ ಕರ್ನಾಟಕದಲ್ಲಿ ಆಳಿದ ಈ ವಂಶದಲ್ಲಿ ನಾಲ್ಕು ತಲೆಮಾರಿನ ರಾಜರು ಇದ್ದರೆಂದು ತಿಳಿದುಬಂದಿದೆ. ಅವರೆಂದರೆ

ಸದಕನ ಕಲಲಯ ಮಹಾರಠಿ
|
ಸದಕನ ಕನ್ಹ ಮಹಾರಠಿಪುತ
|
ಸದಕನ ಚುಟುಕನ್ಹ ಮಹಾರಠಿ
|
ಮಹಾರಠಿ (ಹೆಸರು ತಿಳಿದಿಲ್ಲ)

ಕ್ರಿ.ಪೂ. 150ರ ನಾನಾಘಾಟ್ ಶಾಸನದಲ್ಲಿ ಕಲಲಯ ಮಹಾರಠಿಯ ಹೆಸರು ಕಾಣಬರುವುದರಿಂದ ಈತನು ಕ್ರಿ.ಪೂ. ಎರಡನೆಯ ಶತಮಾನಕ್ಕೆ ಸೇರಿದವನೆಂದು ತಿಳಿಯಬಹುದು. ಆದರೆ ಕೆಲವು ಮಹಾರಠಿ ನಾಣ್ಯಗಳು ಆನಂತರದ ರೋಮನ್ ನಾಣ್ಯಗಳೊಡನೆ ದೊರೆತಿರುವುದರಿಂದ, ಇವರನ್ನು ಕೆಲವರು ಗೌತಮೀಪುತ್ರ ಶಾತಕರ್ಣಿಯ ಸಾಮಂತರು ಎಂದೂ ಭಾವಿಸುತ್ತಾರೆ. ಅಂದರೆ ಇವರು ಕ್ರಿ.ಶ. ಒಂದನೆಯ ಶತಮಾನದಲ್ಲಿ ಆಳಿದರೆಂಬುದು ಕೆಲವರ ಅಭಿಪ್ರಾಯ. ಇದನ್ನು ಖಚಿತವಾಗಿ ತಿಳಿಯಲು ಮಾಹಿತಿಗಳು ಸಾಲದು.

ಮೊಟ್ಟಮೊದಲನೆಯ ಬಾರಿಗೆ ಈ ವಂಶದ ನಾಣ್ಯಗಳನ್ನು ಬೆಳಕಿಗೆ ತಂದ ಕೀರ್ತಿ ಮೆರ್ವಿನ್ ಸ್ಮಿತ್ ಎಂಬ ಇಂಜಿನಿಯರನಿಗೆ ಸೇರುತ್ತದೆ. ಆದರೆ ಈ ನಾಣ್ಯಗಳ ಮಹತ್ವ ಅವನಿಗೆ ತಿಳಿದಿರಲಿಲ್ಲ. ತನಗೆ ದೊರಕಿದ ಈ ನಾಣ್ಯಗಳನ್ನು ಆತನು ಅನೇಕ ಸಂಗ್ರಹಾಲಯಗಳಿಗೆ 1888ರಲ್ಲಿ ಕೊಟ್ಟನು. ಆನಂತರ ಈ ರೀತಿಯ ನಾಣ್ಯಗಳು ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ದೊರಕಲು ಆರಂಭಿಸಿದ ಮೇಲೆ ಇವುಗಳ ಸಮಗ್ರ ಅಧ್ಯಯನ ನಡೆಯಿತು. ಮೈಸೂರು ಪುರಾತತ್ವ ಇಲಾಖೆಯ ಎಂ.ಎಚ್. ಕೃಷ್ಣ ಅವರ ಮಾರ್ಗದರ್ಶನದಲ್ಲಿ ಚಂದ್ರವಳ್ಳಿಯಲ್ಲಿ 1931ರಲ್ಲಿ ಉತ್ಖನನ ನಡೆಯಿತು. ಈ ಉತ್ಖನನದಲ್ಲಿ ಈ ರಾಜರ ಅನೇಕ ನಾಣ್ಯಗಳು ದೊರಕಿದವು. ಆನಂತರ ಇದೇ ನೆಲೆಯಲ್ಲಿ ಸರ್ ಮಾರ್ಟಿಮರ್ ವೀಲರ್ 1947ರಲ್ಲಿ ಉತ್ಖನನ ನಡೆಸಿದರು. ಈಗ ಈ ರಾಜರ ನಾಣ್ಯಗಳು ಕಾಲಮಾನದ ಕುರುಹುಗಳನ್ನು ಹೊಂದಿದ್ದ ಮಣ್ಣಿನ ಪದರಗಳಲ್ಲಿ ದೊರೆತವು. ಇದರಿಂದ ಈ ನಾಣ್ಯಗಳ ಕಾಲಮಾನದ ಬಗೆಗೆ ಹೆಚ್ಚಿನ ಅಂಶಗಳು ಬೆಳಕಿಗೆ ಬರಲು ಕಾರಣವಾಯಿತು.

1954ರಲ್ಲಿ ಎಂ. ರಾಮರಾಯರು ಚಿತ್ರದುರ್ಗ ವಸ್ತು ಸಂಗ್ರಹಾಲಯದಲ್ಲಿದ್ದ ಈ ರೀತಿಯ ನಾಣ್ಯಗಳನ್ನು ಪರೀಕ್ಷಿಸಿ, ಒಂದು ಯಾದಿಯನ್ನು ತಯಾರಿಸಿದರು. ಇತ್ತೀಚೆಗೆ ಈ ನಾಣ್ಯಗಳು ಅನೇಕ ನೆಲೆಗಳಲ್ಲಿ ದೊರಕಿವೆ.

ಮಹಾರಠಿಯವರ ನಾಣ್ಯಗಳು ಸೀಸದಿಂದ ತಯಾರು ಮಾಡಿದವು. ತುಂಬ ತೂಕವಾಗಿರುವ ಈ ನಾಣ್ಯಗಳು ನೋಡಲು ಬಲು ಆಕರ್ಷಕವಾಗಿರುತ್ತವೆ. ಇವು ವೃತ್ತಾಕಾರದಲ್ಲಿದ್ದು, ಇವುಗಳ ಅಗಲ ಒಂದಂಗುಲದಿಂದ ಒಂದೂವರೆ ಅಂಗುಲಗಳವರೆಗೆ ಇರುತ್ತವೆ. ಅತ್ಯಂತ ಭಾರದವು 14 ಗ್ರಾಂ ತೂಗಿದರೆ, ತೀರ ಸಣ್ಣವು 5 ಗ್ರಾಂ ತೂಗುತ್ತವೆ. ಈ ನಾಣ್ಯಗಳ ಮುಮ್ಮುಖದ ಮಧ್ಯದಲ್ಲಿ ವೃಷಭದ ಚಿತ್ರವಿರುತ್ತದೆ; ಅದರ ಸುತ್ತಲೂ ತ್ರಿಕೋನ ತಲೆಯ ಬ್ರಾಹ್ಮೀ ಲಿಪಿಯಲ್ಲಿ ರಾಜನ ಹೆಸರು ಇರುತ್ತದೆ. ಹಿಮ್ಮುಖದಲ್ಲಿ ಬೆಟ್ಟ, ಬೆಟ್ಟದ ಮೇಲೆ ವೃಕ್ಷ ಇಲ್ಲವೇ ಕೇವಲ ವೃಕ್ಷಗಳಿರುತ್ತವೆ. ಕೆಲವು ಚಿಹ್ನೆಗಳಿರುವುದೂ ಉಂಟು. ಮೊಧಲನೆಯ ದೊರೆ ಎಂದು ಪರಿಗಣಿತನಾಗಿರುವ ಸದಕನ ಕಲಲಯ ಮಹಾರಠಿಯ ನಾಣ್ಯಗಳನ್ನು ಈ ಕೆಳಕಂಡಂತೆ ಗುರುತಿಸಬಹುದು.

ಮು : ಮಧ್ಯದಲ್ಲಿ ಡುಬ್ಬವಿರುವ ವೃಷಭ : ಅದರ ಸುತ್ತಲೂ ಬ್ರಾಹ್ಮೀ ಲಿಪಿಯ ಸದಕನ ಕಲಲಯ ಮಹಾರಠಿ ಎಂಬ ಬರಹ

ಹಿ : ಆರು ಕಮಾನುಗಳ ಬೆಟ್ಟ; ಅದರ ಮೇಲೆ ಅರ್ಧ ಚಂದ್ರಾಕೃತಿ; ಕೆಳಗಡೆ ತರಂಗದಂತಹ ಗೆರೆ; ನಂದಿಪಾದ ಮತ್ತು ಸ್ವಸ್ತಿಕ ಚಿಹ್ನೆಗಳು; ಎರಡು ಮೀನುಗಳ ಮೇಲಿರುವ ಧ್ವಜ





ಇವು ಮುಖ್ಯವಾಗಿ ಕಂಡುಬಂದರೂ, ಅನೇಕ ನಾಣ್ಯಗಳ ಮೇಲೆ ಸಣ್ಣ - ಪುಟ್ಟ ಬದಲಾವಣೆಗಳು ಕಾಣಬರುತ್ತವೆ.

ಸದಕನ ಚುಟುಕನ್ನ ಮಹಾರಠಿಯ ನಾಣ್ಯದಲ್ಲಿ ಹಿಮ್ಮುಖದಲ್ಲಿ ಬದಲಾವಣೆ ಕಾಣಬರುತ್ತದೆ.

ಮು : ಮಧ್ಯದಲ್ಲಿ ಡುಬ್ಬವಿರುವ ವೃಷಭ; ಸುತ್ತಲೂ ಬ್ರಾಹ್ಮೀ ಲಿಪಿಯ ಸದಕನ ಚುಟುಕನ್ನ ಮಹಾರಠಿ ಎಂಬ ಬರಹ

ಹಿ : ಆರು ಕಮಾನುಗಳ ಬೆಟ್ಟ; ಅದರ ಮೇಲೆ ಅರ್ಧ ಚಂದ್ರಾಕೃತಿ; ಪಕ್ಕದಲ್ಲಿ ಕಟಾಂಜನದಲ್ಲಿರುವ ವೃಕ್ಷ





ಸದಕನ ಮಹಾರಠಿಪುತ ಎಂಬ ರಾಜನ ನಾಣ್ಯದಲ್ಲಿಯೂ ಇದೇ ರೀತಿಯ ಚಿಹ್ನೆಗಳು ಕಾಣಬರುತ್ತವೆ.

ಮು : ಮಧ್ಯದಲ್ಲಿ ಡುಬ್ಬವಿರುವ ವೃಷಭ; ಅದರ ಸುತ್ತಲೂ ಬ್ರಾಹ್ಮೀ ಲಿಪಿಯ ಸದಕನ ಕನಸ ಮಹಾರಠಿಪುತಸ ಎಂಬ ಬರಹ


ಹಿ : ಐದು ಕಮಾನುಗಳ ಬೆಟ್ಟದ ಮೇಲಿರುವ ವೃಕ್ಷದ ಚಿತ್ರ; ಕೆಳಗಡೆ ಗೆರೆಗಳು

ಪೂರ್ಣವಾಗಿ ಹೆಸರು ಗೊತ್ತಿಲ್ಲದ ಮಹಾರಠಿಯ ನಾಣ್ಯಗಳೂ ದೊರಕಿವೆ.

ಮು : ಮಧ್ಯದಲ್ಲಿ ಡುಬ್ಬವಿರುವ ವೃಷಭ; ಬ್ರಾಹ್ಮೀ ಲಿಪಿಯ ಮಹಾರಠಿಸ ಎನ್ನುವ ಬರಹ

ಹಿ : ಕಟಾಂಜನದಲ್ಲಿರುವ ವೃಕ್ಷ; ಮೂರು ಕಮಾನಿನ ಬೆಟ್ಟದ ಮೇಲಿರುವ ಅರ್ಧ ಚಂದ್ರಾಕೃತಿ; ಕೆಲವು ಅಸ್ಪಷ್ಟ ಚಿಹ್ನೆಗಳು

ಚಂದ್ರವಳ್ಳಿ ಉತ್ಖನನದಲ್ಲಿ ವೀಲರ್ ಅವರಿಗೆ ಇದೇ ಗುಂಪಿಗೆ ಸೇರಬಹುದಾದ ಹದಿನಾಲ್ಕು ನಾಣ್ಯಗಳು ದೊರಕಿದವು. ಆದರೆ ಇವುಗಳಲ್ಲಿ ಯಾವ ಬರವಣಿಗೆಯೂ ಕಾಣಬರಲಿಲ್ಲ. ನಾಣ್ಯಗಳ ಲಕ್ಷಣ, ತೂಕ ಮುಂತಾದವುಗಳನ್ನು ಗಮನಿಸಿದರೆ, ಇವೂ ಮಹಾರಠಿ ನಾಣ್ಯಗಳೇ ಇರಬೇಕು ಎಂದು ಊಹಿಸಲು ಅವಕಾಶ ಉಂಟು. ಆದುದರಿಂದ ಇವೂ ಮಹಾರಠಿ ನಾಣ್ಯಗಳು ಎಂದು ನಿರ್ಧರಿಸುವುದಲ್ಲದೆ, ಬರಹವಿರುವ ನಾಣ್ಯಗಳಿಗಿಂತ ಇವು ಹೆಚ್ಚು ಪ್ರಾಚೀನವಾದುವು ಎಂದು ನಂಬಲಾಗಿದೆ. ಅಂದರೆ ಬರಹವಿಲ್ಲದ ನಾಣ್ಯಗಳನ್ನು ಮೊದಲು ಟಂಕಿಸಿ, ನಂತರ ಬರಹವನ್ನುಳ್ಳ ನಾಣ್ಯಗಳನ್ನು ಮಹಾರಠಿಗಳು ಟಂಕಿಸಿದರು ಎಂದು ತಿಳಿಯಬೇಕಾಗುತ್ತದೆ.



ಕರ್ನಾಟಕದಲ್ಲಿ ಮಹಾರಠಿ ಮತ್ತು ಚುಟು ನಾಣ್ಯಗಳು

3. ಚುಟು ವಂಶದ ಅರಸರ ನಾಣ್ಯಗಳು

ಮಹಾರಠಿಗಳ ನಂತರ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಚುಟು ವಂಶದ ಮೂವರು ದೊರೆಗಳು ಆಳಿದರು. ಈ ರಾಜರ ಹೆಸರು ಆನಂದ ಎಂಬ ಪದದಲ್ಲಿ ಕೊನೆಗೊಳ್ಳುವುದರಿಂದ, ಇವರನ್ನು ಕೆಲವು ವಿದ್ವಾಂಸರು ಆನಂದ ವಂಶದ ದೊರೆಗಳು ಎಂದೂ ಕರೆಯುವುದುಂಟು. ಇದುವರೆಗೆ ಮೂರು ತಲೆಮಾರಿನ ಅರಸರ ಹೆಸರುಗಳು ನಮಗೆ ದೊರಕಿವೆ. ಅವರೇ ಚುಟುಕುಲಾನಂದ, ಮುಡಾನಂದ ಮತ್ತು ಶಿವಲಾನಂದ. ಇವರ ನಾಣ್ಯಗಳು ವಿಶೇಷವಾಗಿ ಕಾರವಾರ, ಚಿತ್ರದುರ್ಗ, ಚಂದ್ರವಳ್ಳಿ ಹಾಗೂ ಬನವಾಸಿಗಳಲ್ಲಿ ದೊರಕಿರುವುದರಿಂದ, ಇವರು ಈ ಪ್ರದೇಶಗಳಲ್ಲಿ ಆಳುತ್ತಿದ್ದರೆಂದು ಹೇಳಬಹುದು. ಆನಂತರ ಇಲ್ಲಿ ಆಳಿದ ಶಾತವಾಹನರು ಇವರನ್ನು ಸೋಲಿಸಿದರು. ಇವರ ನಾಣ್ಯಗಳಲ್ಲಿ ರಞೋ ಅಂದರೆ ರಾಜ ಎಂಬ ಬಿರುದು ಇರುವುದರಿಂದ ಇವರು ಈ ಪ್ರದೇಶದಲ್ಲಿ ಸ್ವತಂತ್ರವಾಗಿ ರಾಜ್ಯವಾಳಿದರು ಎಂದು ಊಹಿಸಬಹುದು. ಅಷ್ಟೇ ಅಲ್ಲದೆ ಕರ್ನಾಟಕದಲ್ಲಿ ಈ ಬಿರುದನ್ನು ಧರಿಸಿದ ಪ್ರಥಮ ರಾಜವಂಶಕ್ಕೆ ಇವರು ಸೇರಿದವರು ಎಂಬುದು ಇವರ ಹೆಗ್ಗಳಿಕೆ.

ಮೊಟ್ಟಮೊದಲನೆಯ ಬಾರಿಗೆ ಇವರ ನಾಣ್ಯಗಳನ್ನು ಪತ್ತೆ ಹಚ್ಚಿದವನು ಮೆರ್ವಿನ್ ಸ್ಮಿತ್ ಎಂಬ ಇಂಜಿನಿಯರ್. ಅನಂತರ ಜನರಲ್ ಪಿಯರ್ಸ್‌ಗೆ ಕಾರವಾರದಲ್ಲಿ ಇವರ ನಾಣ್ಯಗಳು ದೊರೆತವು. ಆಮೇಲೆ ಚಟುಕುಲಾನಂದನ ನಾಣ್ಯಗಳು ಚಂದ್ರವಳ್ಳಿ ಉತ್ಖನನದಲ್ಲಿ ದೊರೆತವು. ಇತ್ತೀಚಿಗೆ ನಡೆದ ಬನವಾಸಿ ಉತ್ಖನನದಲ್ಲಿ ಚುಟುಕುಲಾನಂದ ಮತ್ತು ಮುಡಾನಂದರ ನಾಣ್ಯಗಳು ದೊರಕಿದವು. ಬನವಾಸಿಯಲ್ಲಿ ವರದಾ ನದಿಯ ದಂಡೆಯಲ್ಲಿ ಅಗೆಯುತ್ತಿದ್ದಾಗ ಶಿವಲಾನಂದ ಎಂಬ ರಾಜನ ನಾಣ್ಯವು ದೊರಕಿತು. ಇತ್ತೀಚಿಗೆ ಚಿಕ್ಕಮಗಳೂರು ಸಮೀಪದ ಅನುವನಹಳ್ಳಿಯಲ್ಲಿ ಚುಟುಕುಲಾನಂದನ ನಾಣ್ಯವು ದೊರಕಿದೆ.

ಇವರ ನಾಣ್ಯಗಳು ಸೀಸದಿಂದ ತಯಾರು ಮಾಡಿದವು. ವೃತ್ತಾಕಾರದ ಈ ನಾಣ್ಯಗಳು ಒಂದಂಗುಲದಿಂದ ಒಂದೂಕಾಲು ಅಂಗುಲದವರೆಗೆ ಅಗಲವಾಗಿರುತ್ತವೆ. ನೋಡಲು ಅಷ್ಟೇನೂ ಸುಂದರವಾಗಿ ಕಾಣುವುದಿಲ್ಲ. ಇವುಗಳ ತೂಕ 13 ರಿಂದ 16 ಗ್ರಾಂ. ಇರುತ್ತದೆ.

ಮುಮ್ಮುಖದಲ್ಲಿ ಬ್ರಾಹ್ಮೀ ಲಿಪಿಯ ಬರವಣಿಗೆ ಮತ್ತು ಬೆಟ್ಟದ ಚಿತ್ರವಿದ್ದರೆ, ಹಿಮ್ಮುಖದಲ್ಲಿ ಚೈತ್ರ ವೃಕ್ಷವಿರುತ್ತದೆ. ಇವರ ಕೆಲವು ನಾಣ್ಯಗಳು ಹೀಗಿವೆ :

ಚುಟುಕುಲಾನಂದನ ನಾಣ್ಯ :

ಮು : ಮೂರು ಹಂತಗಳ ಎಂಟು ಕಮಾನುಗಳ ಬೆಟ್ಟ; ಕೆಳಗಡೆ ತರಂಗದಂತಹ ಗೆರೆ; ಸುತ್ತಲೂ ತ್ರಿಕೋನ ತಲೆಯ ಬ್ರಾಹ್ಮೀ ಲಿಪಿಯ ರಞೋ ಚುಟುಕುಲಾನಂದಸ ಎಂಬ ಬರಹ


ಹಿ : ಕಟಾಂಜನದಲ್ಲಿರುವ ವೃಕ್ಷ, ನಂದಿಪಾದ, ಸ್ವಸ್ತಿಕ ಮುಂತಾದ ಚಿಹ್ನೆಗಳು



ಮುಡಾನಂದನ ನಾಣ್ಯ :

ಮು : ಮೂರು ಹಂತಗಳ ಎಂಟು ಕಮಾನುಗಳ ಬೆಟ್ಟ; ಸುತ್ತಲೂ ತ್ರಿಕೋನ ತಲೆಯ ಬ್ರಾಹ್ಮೀ ಲಿಪಿಯ ರಞೋ ಮುಡಾ(ಳಾ)ನದಸ ಎಂಬ ಬರಹ


ಹಿ : ಕಟಾಂಜನದಲ್ಲಿರುವ ವೃಕ್ಷ, ತ್ರಿರತ್ನ, ಸ್ವಸ್ತಿಕ ಮುಂತಾದ ಚಿಹ್ನೆಗಳು



ಶಿವಲಾನಂದನ ನಾಣ್ಯ :

ಮು : ಮೂರು ಹಂತಗಳ ಎಂಟು ಕಮಾನುಗಳ ಬೆಟ್ಟ; ಸುತ್ತಲೂ ರಞೋ ಶಿವಲಾನಂದಸ ಎಂಬ ತ್ರಿಕೋನ ತಲೆಯ ಬ್ರಾಹ್ಮೀ ಲಿಪಿಯ ಬರಹ

ಹಿ : ಕಟಾಂಜನದಲ್ಲಿರುವ ವೃಕ್ಷ; ಬಿಲ್ಲು - ಬಾಣ ಮತ್ತು ಇತರ ಚಿಹ್ನೆಗಳು



ಚಂದ್ರವಳ್ಳಿ ಉತ್ಖನನದಲ್ಲಿ ಕೆಲವು ಸೀಸದ ನಾಣ್ಯಗಳು ದೊರೆತಿವೆ. ಅವುಗಳ ಮುಮ್ಮುಖ - ಹಿಮ್ಮುಖಗಳಲ್ಲಿ ಮೇಲೆ ವಿವರಿಸಿದ ಚಿಹ್ನೆಗಳೇ ಕಾಣಬರುತ್ತವೆ. ಆದರೆ ಇವುಗಳಲ್ಲಿ ಬ್ರಾಹ್ಮೀ ಲಿಪಿಯ ಬರಹವಿಲ್ಲ. ಆದುದರಿಂದ ಈ ಸಾಮ್ಯದ ಆಧಾರದ ಮೇಲೆ ಇವುಗಳನ್ನೂ ಬರಹವಿಲ್ಲದ ಚುಟುವಂಶದ ನಾಣ್ಯಗಳೆಂದು ಪರಿಗಣಿಸಬಹುದು. ಬಹುಶಃ ಈ ರೀತಿಯ ನಾಣ್ಯಗಳನ್ನು ಮೊದಲು ಟಂಕಿಸಿ, ಅನಂತರ ಬರಹವುಳ್ಳ ನಾಣ್ಯಗಳನ್ನು ಟಂಕಿಸಿದರೆಂದು ತಿಳಿಯಬಹುದು. ಒಟ್ಟಿನಲ್ಲಿ ಈ ನಾಣ್ಯಗಳು ಉತ್ಖನನದಲ್ಲಿ ದೊರೆತಾಗ, ಸ್ತರಗಳ ಕಾಲ ನಿರ್ಣಯಕ್ಕೂ ಸಹಾಯಕವಾಗಿವೆ ಎಂಬುದು ಗಮನಾರ್ಹ ಸಂಗತಿ.

4. ಶಾತವಾಹನ ನಾಣ್ಯಗಳು

ಶಾತವಾಹನರು ದಖನ್‌ನಲ್ಲಿ ಆಳಿದ ಪ್ರಾಚೀನ ರಾಜವಂಶಗಳಲ್ಲಿ ಅತ್ಯಂತ ಪ್ರಮುಖರು. ಇತಿಹಾಸ ಆರಂಭ ಕಾಲದಲ್ಲಿ ಸುಮಾರು ನಾಲ್ಕು ಶತಮಾನಗಳ ಕಾಲ ರಾಜ್ಯವಾಳಿದ ಶಾತವಾಹನರ ರಾಜಕೀಯ ಇತಿಹಾಸ ಅನೇಕ ವಿಷಯಗಳಲ್ಲಿ ಅಸ್ಪಷ್ಟತೆಯಿಂದ ಕೂಡಿದೆ. ಪ್ರಮುಖ ರಾಜವಂಶದ ಹಾಗೂ ಸಾಮಂತರ ಹೆಸರುಗಳಲ್ಲಿ ಸಾಮ್ಯ ಕಂಡುಬರುವುದರಿಂದ ಈ ಅಸ್ಪಷ್ಟತೆ ಇನ್ನೂ ಹೆಚ್ಚಿದೆ. ದೊರಕಿರುವ ಶಾಸನಗಳಲ್ಲಿ ಕಾಣಬರುವ ಶಾತವಾಹನ ರಾಜರ ಹೆಸರುಗಳು ಹಾಗೂ ಪುರಾಣ ಗ್ರಂಥಗಳಲ್ಲಿ ಕಾಣಬರುವ ಹೆಸರುಗಳು ತಾಳೆ ಹೊಂದುವುದಿಲ್ಲ. ಇದರಿಂದಾಗಿ ಶಾತವಾಹನ ನಾಣ್ಯಗಳನ್ನು ಕುರಿತು ಸ್ಪಷ್ಟವಾದ ಚಿತ್ರಣವನ್ನು ನೀಡುವುದು ಕಷ್ಟ. ಇವರ ಕಾಲಮಾನದ ಬಗೆಗೂ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಶಾತವಾಹನರ ರಾಜ್ಯ ಆಂಧ್ರ, ಕರ್ನಾಟಕ, ಮಹಾರಾಷ್ಟ್ರ, ವಿದಿಶಾಪ್ರದೇಶಗಳನ್ನು ಒಳಗೊಂಡಿದ್ದಿತು. ಆದುದರಿಂದ ಈ ಎಲ್ಲ ರಾಜ್ಯಗಳಲ್ಲಿ ಇವರ ನಾಣ್ಯಗಳು ದೊರೆತಿವೆ. ಇಲ್ಲಿ ನಮ್ಮ ಆಸಕ್ತಿಯನ್ನು ಕರ್ನಾಟಕದಲ್ಲಿ ದೊರೆತ ಶಾತವಾಹನ ನಾಣ್ಯಗಳಿಗೆ ಸೀಮಿತಗೊಳಿಸಲಾಗಿದೆ.


ಶಾತವಾಹನರು ಬೆಳ್ಳಿ, ತಾಮ್ರ, ಸೀಸ ಮತ್ತು ಪೋಟಿನ್ (ಮಿಶ್ರಲೋಹದ) ನಾಣ್ಯಗಳನ್ನು ಟಂಕಿಸಿದರು. ಈ ನಾಣ್ಯಗಳಲ್ಲಿ ವೈವಿಧ್ಯ ಕಂಡುಬರುತ್ತದೆ. ವಿದಿಶಾದಲ್ಲಿ ಪಂಚ್ ಮಾಡಿದ ನಾಣ್ಯಗಳನ್ನು ಬಳಸಿದರೆ, ಇತರ ಕಡೆಗಳಲ್ಲಿ ಎರಕ ಹುಯ್ದ ನಾಣ್ಯಗಳನ್ನು ಉಪಯೋಗಿಸಿದರು. ಸಾಮಾನ್ಯವಾಗಿ ಶಾತವಾಹನ ನಾಣ್ಯಗಳು ವೃತ್ತಾಕಾರದಲ್ಲಿರುತ್ತವೆ. ಆದರೆ ಚೌಕಾಕಾರದ ಹಾಗೂ ಆಯತಾಕಾರದ ನಾಣ್ಯಗಳು ಕಾಣಬರುತ್ತವೆ. ಇವುಗಳ ಮೇಲೆ, ಸಿಂಹ, ಆನೆ, ಕುದುರೆ, ಬೆಟ್ಟ, ಉಜ್ಜಯಿನಿ ಚಿಹ್ನೆ ಮತ್ತು ಆ ಕಾಲದ ಬ್ರಾಹ್ಮೀ ಲಿಪಿಯ ಬರಹ ಇರುತ್ತವೆ. ಬರಹವಿಲ್ಲದ ನಾಣ್ಯಗಳೂ ದೊರಕಿವೆ. ಕೆಲವು ನಾಣ್ಯಗಳ ಮೇಲೆ ಆಳಿದ ದೊರೆಯ ಚಿತ್ರಗಳೂ ಇರುತ್ತವೆ. ಮತ್ತೆ ಕೆಲವು ನಾಣ್ಯಗಳ ಮೇಲೆ ಹಡಗಿನ ಚಿತ್ರಣವಿದ್ದು, ಅದು ಆ ಕಾಲದ ವ್ಯಾಪಾರವನ್ನು ಪ್ರತಿಬಿಂಬಿಸುತ್ತದೆ. ಶಾತವಾಹನ ನಾಣ್ಯಗಳ ತೂಕ ಮತ್ತು ಅಳತೆಗಳನ್ನು ಗಮನಿಸಿದರೆ, ಕೊನೆಯ ಪಕ್ಷ ನಾಲ್ಕೈದು ಮೌಲ್ಯದ ನಾಣ್ಯಗಳು ಇವರ ಕಾಲದಲ್ಲಿ ಚಲಾವಣೆಯಲ್ಲಿದ್ದವು ಎಂಬುದು ತಿಳಿಯಬರುತ್ತದೆ. 1.5 ಅಂಗುಲ, 0.9 ಅಂಗುಲ ಹಾಗೂ 0.6 ಅಂಗುಲವಿರುವ ನಾಣ್ಯಗಳು ಸಾಮಾನ್ಯವಾಗಿ ಕಾಣಬರುತ್ತವೆ. ಈ ಮೇಲಿನ ಅಳತೆಗೆ ಸರಿ ಹೊಂದದ ನಾಣ್ಯಗಳೂ ಅನೇಕವಿವೆ. ಇದೇ ಮಾತು ಇವುಗಳ ತೂಕಕ್ಕೂ ಅನ್ವಯಿಸುತ್ತದೆ. ಅತ್ಯಂತ ಭಾರವಾದ ಇವರ ನಾಣ್ಯ 20 ಗ್ರಾಂ ತೂಗಿದರೆ, ತೀರ ಸಣ್ಣ ನಾಣ್ಯದ ತೂಕ ಕೇವಲ 1.8 ಗ್ರಾಂ. ತಾಂತ್ರಿಕ ದೃಷ್ಟಿಯಿಂದ ಶಾತವಾಹನರ ನಾಣ್ಯಗಳು ಗಮನಾರ್ಹವಾದುವು. ಇವುಗಳಲ್ಲಿ ವಿದೇಶೀ ಪ್ರಭಾವ ತೀರ ಕಡಿಮೆ. ಈ ನಾಣ್ಯಗಳ ಮೇಲೆ ರಾಜನ ಹೆಸರು ಇದ್ದರೂ, ಒಂದೇ ಹೆಸರಿನ ಅನೇಕ ರಾಜರು ಇದ್ದುದರಿಂದ, ಖಚಿತವಾಗಿ ರಾಜನನ್ನು ಗುರುತಿಸುವುದು ಕಷ್ಟದ ಕೆಲಸ. ಇವು ಶಾತವಾಹನ ನಾಣ್ಯಗಳ ಪ್ರಮುಖ ಲಕ್ಷಣಗಳು. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ದೊರಕಿರುವ ಶಾತವಾಹನ ನಾಣ್ಯಗಳನ್ನು ಈಗ ಗಮನಿಸಬಹುದು.

ದೊರೆ ಶಾತವಾಹನನ ನಾಣ್ಯಗಳು : ಮೊದಲಿನ ದೊರೆಗಳಲ್ಲಿ ಒಬ್ಬನೆನಿಸಿದ ಈತನ ನಾಣ್ಯಗಳು ಸನ್ನತಿಯಲ್ಲಿ ದೊರಕಿವೆ. ಆದುದರಿಂದ ಶಾತವಾಹನ ದೊರೆಗಳ ಆರಂಭದ ನಾಣ್ಯಗಳೂ ಕರ್ನಾಟಕದಲ್ಲಿ ದೊರಕಿರುವುದು ಇದರಿಂದ ಖಚಿತವಾದಂತೆ ಆಯಿತು. ಒಂದು ನಮೂನೆಯ ನಾಣ್ಯದ ತೂಕ 10 ಗ್ರಾಂ.; ವ್ಯಾಸ 21 ರಿಂದ 23 ಮಿ.ಮಿ.

ಮು : ಮೂರು ಕಮಾನುಗಳ ಬೆಟ್ಟ; ಆದರ ಮೇಲೆ ಧ್ವಜ; ಸುತ್ತಲೂ ರಞೋ ಸಿರಿಸಾತವಾಹನಸ ಎಂಬ ಕ್ರಿ.ಪೂ. ಎರಡನೆಯ ಶತಮಾನದ ಬ್ರಾಹ್ಮೀ ಲಿಪಿಯ ಬರಹ

ಹಿ : ಉಜ್ಜಯಿನಿ ಚಿಹ್ನೆ; ತುದಿಯಲ್ಲಿ ಅರ್ಧಚಂದ್ರಾಕಾರದ ಚಿಹ್ನೆ

ಇದೇ ರೀತಿಯ ಇನ್ನೊಂದು ನಾಣ್ಯದ ತೂಕ 13 ರಿಂದ 17 ಗ್ರಾಂ.; ವ್ಯಾಸ 2.2 ರಿಂದ 3.3 ಮಿ.ಮಿ. ಇದರ ಮುಮ್ಮುಖದಲ್ಲಿ ಸ್ವಸ್ತಿಕದ ಚಿಹ್ನೆಯಿದೆ. ಹಿಮ್ಮುಖದಲ್ಲಿ ಉಜ್ಜಯಿನಿ ಚಿಹ್ನೆ.



ಕರ್ನಾಟಕದಲ್ಲಿ ಶಾತವಾಹನ ನಾಣ್ಯಗಳು

ಈ ನಾಣ್ಯಗಳ ಮೇಲೆ ಕಾಣಬರುವ ಮೂರು ಕಮಾನಿನ ಬೆಟ್ಟ ಗಮನಾರ್ಹವಾದುದು. ಇದು ಹಿಂದೆ ಆಳಿದ ಮೌರ್ಯರ ನಾಣ್ಯಗಳಲ್ಲಿ, ಅವರ ಮುಖ್ಯ ಚಿಹ್ನೆಯಾಗಿ ಕಾಣಬರುತ್ತಿತ್ತು. ಶಾತವಾಹನರು ಮೌರ್ಯರನ್ನು ಸೋಲಿಸಿ ಕರ್ನಾಟಕದಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು. ಅದನ್ನು ಜನಗಳಿಗೆ ತಿಳಿಯಪಡಿಸುವುದಕ್ಕೋಸ್ಕರ ಎರಡನೆಯ ದೊರೆ ಶಾತವಾಹನನು ತನ್ನ ನಾಣ್ಯಗಳ ಮೇಲೆ ಮೂರು ಕಮಾನುಗಳ ಬೆಟ್ಟವನ್ನು ಸೂಚಿಸಿ ಅದರ ಮೇಲೆ ಧ್ವಜಸ್ತಂಭವನ್ನು ವಿನ್ಯಾಸಗೊಳಿಸಿರುವುದು ನಮ್ಮ ಊಹೆಯನ್ನು ಸ್ಪಷ್ಟಗೊಳಿಸುತ್ತದೆ.

ಎರಡನೆಯ ಶಾತಕರ್ಣಿ : ಈ ದೊರೆಯ ನಾಣ್ಯಗಳು ಸನ್ನತಿಯ ಉತ್ಖನನ ಮತ್ತು ಹಿಪ್ಪರ್ಗಿಯಲ್ಲಿ ದೊರಕಿವೆ. ಇವನ ನಾಣ್ಯಗಳಲ್ಲಿ ಹತ್ತು ನಮೂನೆಗಳನ್ನು ಕಾಣಬಹುದು. ಮುಖ್ಯವಾಗಿರುವುದನ್ನು ಇಲ್ಲಿ ಗಮನಿಸಬಹುದು.


ನಮೂನೆ 1 : ಅಳತೆ 19 × 15 ಮಿ.ಮಿ. : ತೂಕ 3.1 ಗ್ರಾಂ.

ಮು : ಮೂರು ಕಮಾನುಗಳ ಬೆಟ್ಟ; ಸುತ್ತಲೂ ರಞೋ ಸಾತಕಣಿಸ ಎಂಬ ಬ್ರಾಹ್ಮೀ ಬರವಣಿಗೆ

ಹಿ : ಉಜ್ಜಯಿನಿ ಚಿಹ್ನೆ

ನಮೂನೆ 2 : ಅಳತೆ 17 ಮಿ.ಮಿ. : ತೂಕ 2.3 ಗ್ರಾಂ.

ಮು : ಮೂರು ಕಮಾನುಗಳ ಬೆಟ್ಟ; ಸುತ್ತಲೂ ರಞೋ ಸಾತಕಣಿಸ ಎಂಬ ಬ್ರಾಹ್ಮೀ ಬರಹ



ಒಂದನೆಯ ಪುಳುಮಾವಿ : ಈ ದೊರೆಯ ನಾಣ್ಯಗಳು ಸನ್ನತಿಯಲ್ಲಿ ದೊರಕಿವೆ.

ಅಳತೆ : 20 ಮಿ.ಮಿ. ತೂಕ 3.6 ಗ್ರಾಂ.

ಮು : ಮೂರು ಕಮಾನುಗಳ ಬೆಟ್ಟ; ಸುತ್ತಲೂ... ಪುಳುಮಾವಿಸ ಎನ್ನುವ ಬ್ರಾಹ್ಮೀ ಬರಹ

ಹಿ : ಕೆಲವು ಚಿಹ್ನೆಗಳೊಡನೆ ಉಜ್ಜಯಿನಿ ಚಿಹ್ನೆ

ಗೌತಮೀಪುತ್ರ ಶಾತಕರ್ಣಿ : ಈ ದೊರೆಯ ನಾಣ್ಯಗಳು ಬನವಾಸಿ, ಸನ್ನತಿ ಮತ್ತು ಹರದನಗೆರೆಗಳಲ್ಲಿ ದೊರಕಿವೆ.

ನಮೂನೆ 1 : ಅಳತೆ 17 ಮಿ.ಮಿ.; ತೂಕ 4.4 ಗ್ರಾಂ.

ಮು : ಡುಬ್ಬವಿರುವ ವೃಷಭ; ಶ್ರೀವತ್ಸ ಚಿಹ್ನೆ; ಸುತ್ತಲೂ... ಪುತ ಸಿರಿಸಾತಕಣಿಸ ಎನ್ನುವ ಬರಹ

ಹಿ : ಎಲೆಗಳಿಂದ ಕೂಡಿದ ಮರದ ರೆಂಬೆ

ನಮೂನೆ 2 : ಅಳತೆ 10 ಮಿ.ಮಿ.; ತೂಕ 4.3 ಗ್ರಾಂ.

ಮು : ಮೇಲಿನ ನಾಣ್ಯದಂತೆ

ಹಿ : ಉಜ್ಜಯಿನಿ ಚಿಹ್ನೆ

ನಮೂನೆ 3 :

ಮು : ಮೂರು ಕಮಾನುಗಳ ಬೆಟ್ಟ; ಸುತ್ತಲೂ ರಞೋ **ಗೋ**ತಮಿಪುತಸ ಸಿರಿ ಸಾತಕಣಿಸ ಎಂಬ ಬರಹ

ಹಿ : ವೃತ್ತಾಕಾರದ ತುದಿಗಳಿರುವ ಉಜ್ಜಯಿನಿ ಚಿಹ್ನೆ

ವಾಸಿಷ್ಠೀಪುತ್ರ ಪುಳುಮಾವಿಯ ನಾಣ್ಯ : ಚಂದ್ರವಳ್ಳಿ ಉತ್ಖನನದಲ್ಲಿ ಈ ದೊರೆಯ ನಾಣ್ಯವು ದೊರಕಿದೆ. ಅಳತೆ ಅರ್ಧ ಅಂಗುಲ : ತೂಕ, 1.6 ಗ್ರಾಂ.

ಮು : ಸೊಂಡಿಲನ್ನು ಮೇಲೆತ್ತಿ ನಿಂತಿರುವ ಆನೆ ಹಾಗೂ ಬರಹ... ಪುಳುಮಾವಿ

ಹಿ : ಉಜ್ಜಯಿನಿ ಚಿಹ್ನೆ

ವಾಸಿಷ್ಠೀಪುತ್ರ ಶಾತಕರ್ಣಿಯ ನಾಣ್ಯ : ಇದು ಕುಂದೂರಿನಲ್ಲಿ ದೊರಕಿದೆ.


ಮು : ಸೊಂಡಿಲನ್ನು ಮೇಲೆತ್ತಿರುವ ಆನೆ ಹಾಗೂ ಬರಹ... ರಞೊ ಸತಕಣಿ

ಹಿ : ಉಜ್ಜಯಿನಿ ಚಿಹ್ನೆ

ಯಜ್ಞಶ್ರೀಶಾತಕರ್ಣಿಯ ನಾಣ್ಯಗಳು ಚಂದ್ರವಳ್ಳಿ, ಕುಂದೂರು ಮತ್ತು ಬನವಾಸಿಗಳಲ್ಲಿ ದೊರಕಿವೆ. ಅವುಗಳ ಮುಮ್ಮುಖದಲ್ಲಿ ಆನೆಯ ಚಿತ್ರ ಹಾಗೂ ಸಿರಿ

ಯಣ ಸಾತಕಣಿಸ ಎಂಬ ಬರಹ; ಹಿಮ್ಮುಖದಲ್ಲಿ ಉಜ್ಜಯಿನಿ ಚಿಹ್ನೆ ಇದೆ. ಹಿಪ್ಪರ್ಗಿಯಲ್ಲಿ ದೊರೆತಿರುವ ನಾಣ್ಯವೂ ಇದೇ ರೀತಿ ಇದೆ. ನಾಲ್ಕನೆಯ ಪುಳುಮಾವಿಯ ನಾಣ್ಯಗಳು ಕುಂದೂರಿನಲ್ಲಿ ದೊರಕಿವೆ. ಇವುಗಳ ಮುಮ್ಮುಖದಲ್ಲಿ ಸೊಂಡಿಲನ್ನು ಮೇಲೆತ್ತಿಕೊಂಡಿರುವ ಆನೆ ಹಾಗೂ ಸಿರಿ ಪುಳುಮಾವಿ ಎನ್ನುವ ಬರಹವಿದೆ. ಹಿಮ್ಮುಖದಲ್ಲಿ ಉಜ್ಜಯಿನಿ ಚಿಹ್ನೆಯಿದೆ.

ಇತ್ತೀಚಿಗೆ ಗುಲ್ಬರ್ಗ ಜಿಲ್ಲೆಯ ಹರದನಗೆರೆ ಎಂಬ ಗ್ರಾಮದಲ್ಲಿ ಗೌತಮೀಪುತ್ರ ಸಿರಿ ಶಾತಕರ್ಣಿಗೆ ಸೇರಿದ ಸೀಸದ ನಾಣ್ಯಗಳು ದೊರಕಿದವು. ಅವುಗಳ ಮುಮ್ಮುಖದಲ್ಲಿ ಮೂರು ಕಮಾನುಗಳ ಬೆಟ್ಟ ಹಾಗೂ ಗೌತಮೀಪುತ ಸಿರಿ ಸಾತಕಣಿಸ ಎಂಬ ಬರಹ; ಹಿಮ್ಮುಖದಲ್ಲಿ ವೃತ್ತಾಕಾರದಿಂದೊಡಗೂಡಿದ ತುದಿಯಿರುವ ಉಜ್ಜಯಿನಿ ಚಿಹ್ನೆ ಕಂಡು ಬಂದಿತು. ಇವುಗಳಲ್ಲಿ ಮೂರು ವಿಧಗಳ - ಅಂದರೆ 20, 15 ಮತ್ತು 10 ಗ್ರಾಂ. ತೂಕದ - ನಾಣ್ಯಗಳು ಕಂಡುಬಂದವು. ಇವುಗಳ ಅಳತೆ 3.1 ರಿಂದ 2.3 ಸೆಂ.ಮಿ. ಹರದನಗೆರೆಯು ಸನ್ನತಿಗೆ ಸಮೀಪವಾಗಿದೆ ಎಂಬುದನ್ನು ಗಮನಿಸಬೇಕು. ಹರದನಗೆರೆಯಲ್ಲಿ ಈ ನಾಣ್ಯಗಳ ಜೊತೆಗೆ ನೂತನ ಶಿಲಾಯುಗ, ಹಾಗೂ ಮೆಗಾಲಿತಿಕ್ ಸಂಸ್ಕೃತಿಯ ಅವಶೇಷಗಳೂ ದೊರಕಿರುವುದು ಗಮನಾರ್ಹ. ಆದುದರಿಂದ ಇದೊಂದು ಶಾತವಾಹನ ನೆಲೆಯಾಗಿದ್ದಿತೆಂದು ಊಹಿಸಬಹುದು. ಇಲ್ಲಿ ಉತ್ಖನನ ನಡೆದರೆ ಶಾತವಾಹನ ಕಾಲದ ಇತರ ರಾಜರ ನಾಣ್ಯಗಳು ದೊರಕುವುದರಲ್ಲಿ ಸಂದೇಹವಿಲ್ಲ.



ಉತ್ತರ ಕನ್ನಡ ಜಿಲ್ಲೆಯ ಕುಂದೂರಿನಲ್ಲಿ ಸುಮಾರು 850 ಶಾತವಾಹನ ನಾಣ್ಯಗಳು ದೊರಕಿವೆ. ತಾಮ್ರ ಮತ್ತು ಸೀಸದ ನಾಣ್ಯಗಳನ್ನುಳ್ಳ ಈ ನಾಣ್ಯಸಿರಿಯ ಪೂರ್ಣ ಅಧ್ಯಯನ

ನಡೆದಿಲ್ಲ. ಆದರೆ ತಿಳಿದುಬಂದಿರುವಂತೆ ಸೊಂಡಿಲನ್ನು ಮೇಲೆತ್ತಿಕೊಂಡಿರುವ ಆನೆಯ ಚಿತ್ರವಿರುವ ನಾಣ್ಯಗಳೇ ಹೆಚ್ಚಾಗಿವೆ. ಈ ನಾಣ್ಯಗಳು ಸಿರಿ ಶಾತಕರ್ಣಿ (116-145), ಶಿವ ಶ್ರೀ ಪುಳುಮಾವಿ (145-162), ರಞೋ ಶಾತಕರ್ಣಿ (162-165), ಶ್ರೀ ಯಜ್ಞ ಶಾತಕರ್ಣಿ (165-194) ಮತ್ತು ನಾಲ್ಕನೆಯ ಸಿರಿ ಪುಳುಮಾವಿ (203-210) - ಈ ರಾಜರಿಗೆ ಸೇರಿದ್ದೆಂದು ಭಾವಿಸಲಾಗಿದೆ. ಆನೆಯ ಚಿತ್ರವಿರುವ ಹಾಗೂ ಹಕುಶ್ರೀ ಎಂಬ ಬರಹವಿರುವ ನಾಣ್ಯವೂ ಇದೇ ವಂಶಕ್ಕೆ ಸೇರಿದ್ದೆಂದು ಭಾವಿಸಲಾಗಿದೆ. ಮತ್ತೊಂದು ನಾಣ್ಯದ ಮುಮ್ಮುಖದಲ್ಲಿ ನಾಗ ಮತ್ತು ಕಟಾಂಜನದಲ್ಲಿರುವ ವೃಕ್ಷದ ಚಿಹ್ನೆಯಿದೆ. ಇದರಲ್ಲಿ ಶ್ರೀ ಸದಕ ಎಂಬ ಸಮಕಾಲೀನ ಬರಹವಿರುವುದರಿಂದ ಇದೂ ಶಾತವಾಹನ ನಾಣ್ಯವೆಂದು ತಿಳಿಯಲಾಗಿದೆ.

ಒಟ್ಟಿನಲ್ಲಿ ಶಾತವಾಹನರ ಕಾಲದ ಅನೇಕ ನೆಲೆಗಳು, ಶಿಲ್ಪಗಳು, ಶಾಸನಗಳು ಕರ್ನಾಟಕದಲ್ಲಿ ದೊರಕಿರುವುದರಿಂದ, ಇಲ್ಲಿ ಕೆಲಸಮಯ ಶಾತವಾಹನರ ಆಳ್ವಿಕೆ ಇದ್ದಿತೆಂಬುದು ಖಚಿತ. ಇದನ್ನು ಇಲ್ಲಿ ದೊರಕಿರುವ ನಾಣ್ಯಗಳು ಇನ್ನೂ ಸ್ಪಷ್ಟಗೊಳಿಸುತ್ತವೆ. ಅನೇಕ ಶಾತವಾಹನ ನೆಲೆಗಳು ಕರ್ನಾಟಕದಲ್ಲಿ ಉಳಿದುಬಂದಿವೆ. ಅವುಗಳ ವೈಜ್ಞಾನಿಕ ಉತ್ಖನನ ನಡೆದರೆ, ಶಾತವಾಹನ ನಾಣ್ಯಗಳೂ ಸೇರಿದಂತೆ, ಶಾತವಾಹನ ಸಂಸ್ಕೃತಿಯ ಬಗೆಗೆ ಹೆಚ್ಚಿನ ಬೆಳಕು ಬೀರುವುದರಲ್ಲಿ ಯಾವ ಸಂಶಯವೂ ಇಲ್ಲ.

○

ಅಧ್ಯಾಯ 3

ಪೂರ್ವ ಪ್ರಾಚೀನ ಕಾಲದ ನಾಣ್ಯಗಳು


1. ಬನವಾಸಿ ಕದಂಭರ ನಾಣ್ಯಗಳು

ಶಾತವಾಹನರ ಪತನಾನಂತರ ಮಯೂರಶರ್ಮನು ಕದಂಬ ವಂಶವನ್ನು ಸ್ಥಾಪಿಸಿ, ಬನವಾಸಿಯಿಂದ ರಾಜ್ಯವಾಳಲು ಪ್ರಾರಂಭಿಸಿದನು. ತಮಿಳುನಾಡಿನ ಪಲ್ಲವರಿಂದ ಹೊರಬಂದು ಕರ್ನಾಟಕಕ್ಕೆ ಗೌರವವನ್ನು ತಂದು ಕೊಟ್ಟ ಕೀರ್ತಿ ಮಯೂರಶರ್ಮನಿಗೆ ಸೇರಬೇಕು. ಉತ್ತಮ ಸಂಸ್ಕೃತ ಭಾಷೆಯ ಶಾಸನಗಳನ್ನೂ ಮತ್ತು ಪ್ರಸಿದ್ಧವಾದ ಹಲ್ಮಿಡಿಯ ಕನ್ನಡ ಶಾಸನವನ್ನೂ ಬರೆಯಿಸಿ ಕರ್ನಾಟಕ ಇತಿಹಾಸಕ್ಕೆ ಉತ್ತಮ ಸಾಮಗ್ರಿಯನ್ನು ಒದಗಿಸಿದ ಕೀರ್ತಿಯೂ ಇವರಿಗೆ ಸೇರುತ್ತದೆ. ಆದರೆ ನಾಣ್ಯಗಳ ವಿಷಯದಲ್ಲಿ ಈ ಮಾತನ್ನು ಹೇಳುವಂತಿಲ್ಲ. ರಾಜರುಗಳ ಹೆಸರಿನ ಬರಹವನ್ನು ಹೊಂದಿರುವ ಇವರಿಗೆ ಸೇರಿದ ಒಂದು ನಾಣ್ಯವೂ ದೊರೆತಿಲ್ಲವಾದುದರಿಂದ, ಇವರ ನಾಣ್ಯಗಳ ಬಗೆಗೆ ಖಚಿತತೆಯಿಲ್ಲ. ಇದೇ ಮಾತು ಖ್ಯಾತ ಮೌರ್ಯ ರಾಜವಂಶಕ್ಕೂ ಅನ್ವಯಿಸುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಪದ್ಮಟಂಕ ಎಂಬ ನಮೂನೆಯ ಚಿನ್ನದ ನಾಣ್ಯವನ್ನು ಕರ್ನಾಟಕದಲ್ಲಿ ಆರಂಭಿಸಿದವರು ಬನವಾಸಿಯ ಕದಂಬರು ಎಂದು ಸರ್ವಸಾಮಾನ್ಯವಾಗಿ ನಂಬಲಾಗಿದೆ. ಪಂಚ್ ಮಾಡಿದ ನಮೂನೆಗೆ ಸೇರಿದ ನಾಣ್ಯಗಳು ಇವು. ತೆಳುವಾದ ಚಿನ್ನದ ತಗಡನ್ನು ತೂಕಕ್ಕೆ ಸರಿಯಾಗಿ ಕತ್ತರಿಸಿ, ಅದರ ಮಧ್ಯದಲ್ಲಿ ಅಷ್ಟದಳಗಳನ್ನುಳ್ಳ ಪದ್ಮವನ್ನು ಪಂಚ್ ಮಾಡಿರುವುದೇ ಪದ್ಮಟಂಕ ನಾಣ್ಯ. ಚಿನ್ನವು ಮೆದುವಾದುದರಿಂದ ಹಾಗೂ ಮಧ್ಯದಲ್ಲಿ ಒತ್ತಡದಿಂದ ಪಂಚ್ ಮಾಡುವುದರಿಂದ, ಈ ನಾಣ್ಯಗಳು ಸ್ವಲ್ಪ ಬಾಗಿ ಬಟ್ಟಲಿನ ಆಕಾರವನ್ನು ಪಡೆಯುತ್ತವೆ. ಮುಮ್ಮುಖದಲ್ಲಿ ಮಾತ್ರ ಪಂಚ್ ಚಿಹ್ನೆಗಳು ಇರುವುದೂ ಉಂಟು. ಆದುದರಿಂದ ಬರಹವಿಲ್ಲದ ಈ ರೀತಿಯ ಪದ್ಮಟಂಕಗಳು ಬನವಾಸಿಯ ಕದಂಬರಿಗೆ ಸೇರಿದವು ಎಂದು ನಾಣ್ಯಶಾಸ್ತ್ರಜ್ಞರು ಸಕಾರಣವಾಗಿ ಭಾವಿಸಿದ್ದಾರೆ. ಅಂದರೆ ಮೌರ್ಯರಿಂದ ಆರಂಭಿಸಲ್ಪಟ್ಟ ಈ ತಾಂತ್ರಿಕತೆಯು ಬನವಾಸಿಯ ಕದಂಬರಿಂದ

ಮುಂದುವರಿಸಲ್ಪಟ್ಟಿತು. ಆನಂತರ ಇದೇ ತಾಂತ್ರಿಕತೆಯನ್ನು ಕಲ್ಯಾಣದ ಚಾಲುಕ್ಯರು ಮತ್ತು ದೇವಗಿರಿಯ ಸೇವುಣರು (ಯಾದವರು) ಮುಂದುವರಿಸಿದರು. ಈ ರೀತಿಯ ಚಿನ್ನದ ಪದ್ಮಟಂಕ ನಮೂನೆಯ ನಾಣ್ಯಗಳು ವಿಶೇಷವಾಗಿ ಇವರ ರಾಜಧಾನಿಯಾದ ಬನವಾಸಿಯಲ್ಲಿ ದೊರಕಿರುವುದು, ಈ ಅಭಿಪ್ರಾಯಕ್ಕೆ ಪುಷ್ಟಿಯನ್ನು ಒದಗಿಸುತ್ತದೆ.





ಬನವಾಸಿಯ ಕದಂಬರ ಇತಿಹಾಸವನ್ನು ವಿಶೇಷವಾಗಿ ಸಂಶೋಧಿಸಿರುವ ಜಾರ್ಜ್ ಮೊರೇಸ್ ಅವರು ಅನೇಕ ಪದ್ಮಟಂಕ ನಾಣ್ಯಗಳನ್ನು ಗುರುತಿಸಿದ್ದಾರೆ. ಅವು ಮುಂಬೈನ ರಾಯಲ್ ಏಷ್ಯಾಟಿಕ್ ಸೊಸೈಟಿಯ ಸಂಗ್ರಹಾಲಯದಲ್ಲಿದ್ದವು. ಅವು ವೃತ್ತಾಕಾರದಲ್ಲಿದ್ದು ಮಧ್ಯದಲ್ಲಿ ಅಷ್ಟದಳ ಪದ್ಮವಿದೆ. ಜೊತೆಗೆ ಕೆಲವು ಚಿಹ್ನೆಗಳೂ ಕಾಣಬರುತ್ತವೆ. ಒಂದಂತೂ ಖಚಿತವಾಗಿ ಶಂಖ; ಮತ್ತೊಂದು ಸ್ವಸ್ತಿಕವಿರಬಹುದು. ಮತ್ತೊಂದು ನಾಣ್ಯದ ಸುತ್ತಲೂ ಚುಕ್ಕಿಯ ವೃತ್ತವಿದ್ದು, ಅದರ ಮಧ್ಯದಲ್ಲಿ ದೊಡ್ಡದಾದ ಅಷ್ಟದಳ ಪದ್ಮವಿದೆ. ಈ ರೀತಿಯ ಒಂದು ಚಿನ್ನದ ನಾಣ್ಯದಲ್ಲಿ 'ವಿರ' ಎಂಬ ಕನ್ನಡ ಬರಹವಿದೆ. ಹಿಮ್ಮುಖದಿಂದ ಇದು 'ರವಿ' ಎಂದು ಕಾಣಬರುತ್ತದೆ. ಆದುದರಿಂದ ಈ ನಾಣ್ಯ ರವಿವರ್ಮನಿಗೆ ಸೇರಿರಬೇಕೆಂದು ಊಹಿಸಲಾಗಿದೆ. ಇನ್ನೊಂದು ನಾಣ್ಯದ ಮೇಲೆ 'ಬಗಿ' ಎನ್ನುವ ಅಕ್ಷರಗಳಿವೆ. ಇದು ಭಗೀರಥವರ್ಮನ ನಾಣ್ಯವೆಂದು ಭಾವಿಸಲಾಗಿದೆ. ಮತ್ತೊಂದು ಚಿನ್ನದ ನಾಣ್ಯದ ಮೇಲೆ ಕದಂಬ ಎಂಬ ಬರಹವಿದ್ದು, ಅದರ ಹಿಂಭಾಗದಲ್ಲಿ ರ ಎಂಬ ಅಕ್ಷರವಿದೆ. ಮೊರೇಸ್ ಅವರು ಇದು ರಘುವರ್ಮನಿಗೆ ಸೇರಿದ್ದೆಂದು ಭಾವಿಸುತ್ತಾರೆ. ಆದರೆ ಇದರಲ್ಲಿ ಖಚಿತತೆ ಇಲ್ಲ. ಈ ರೀತಿಯ ನಾಣ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿಲ್ಲ.

ಮೈಸೂರು ಪುರಾತತ್ವ ಇಲಾಖೆಯಲ್ಲಿದ್ದ ಕೆಲವು ಚಿನ್ನದ ಪದ್ಮಟಂಕಗಳನ್ನು ಎಂ.ಎಚ್. ಕೃಷ್ಣ ಅವರು ಗುರುತಿಸಿದ್ದಾರೆ. ಅವುಗಳ ಮುಮ್ಮುಖದಲ್ಲಿ ದೊಡ್ಡದಾದ ಅಷ್ಟದಳ ಪದ್ಮ ಸುತ್ತ ಹೂವಿನ ಒಂದೊಂದು ದಳ : ಹಿಮ್ಮುಖದಲ್ಲಿಯೂ ಹೂವಿನ ವಿನ್ಯಾಸದ ಪಂಚ್ ಇದೆ. ಈ ರೀತಿಯ ಒಂದು ನಾಣ್ಯದ ಹಿಮ್ಮುಖದಲ್ಲಿ ಸಿಂಹದ ಪಂಚ್ ಅನ್ನು ಅವರು ಗುರುತಿಸಿದ್ದಾರೆ. ಬೆಳಗಾಂ ಜಿಲ್ಲೆಯ ರಾಮದುರ್ಗದಲ್ಲಿ ಎರಡು ಪದ್ಮಟಂಕ ನಾಣ್ಯಗಳು ದೊರಕಿದವು. ಒಂದು ನಾಣ್ಯದ ಮುಮ್ಮುಖದಲ್ಲಿ ಚೌಕಾಕಾರದ ವಿನ್ಯಾಸದಲ್ಲಿ ಅಷ್ಟದಳ ಪದ್ಮ ಚಿಹ್ನೆ ಕಂಡು ಬಂದರೆ, ಹಿಮ್ಮುಖದಲ್ಲಿ ಒಂದು ಪುಷ್ಪಾಲಂಕಾರದ ವಿನ್ಯಾಸವಿದ್ದಿತು.

ಮತ್ತೊಂದರಲ್ಲಿ ಅಷ್ಟದಳ ಪದ್ಮದ ಜೊತೆಗೆ ಸ್ವಸ್ತಿಕ ಚಿಹ್ನೆಯಿದ್ದಿತು. ಈ ಎಲ್ಲ ಮಾಹಿತಿಗಳನ್ನು ಗಮನಿಸಿದರೆ ಬನವಾಸಿ ಕದಂಬರು ಮೌರ್ಯರ ಮೇಲ್ಪಂಕ್ತಿಯನ್ನನುಸರಿಸಿ ಪದ್ಮಟಂಕವೆಂದು ಈಗ ಕರೆಯಲಾಗುವ ಪಂಚ್ ಮಾಡಿದ ಚಿನ್ನದ ನಾಣ್ಯಗಳನ್ನು ಟಂಕಿಸಿದರೆಂದು ಹೇಳಬೇಕು. ಪದ್ಮಟಂಕ ಎನ್ನುವ ಪದ ಮಾತ್ರ ಸಮಕಾಲೀನ ಶಾಸನಗಳಲ್ಲಿ ಕಾಣಬರುವುದಿಲ್ಲವೆಂಬುದನ್ನು ಗಮನಿಸಬೇಕು.

2. ತಲಕಾಡು ಗಂಗರ ನಾಣ್ಯಗಳು

ಹಿಂದಿನ ಮೈಸೂರು ಸಂಸ್ಥಾನದ ಹೆಚ್ಚಿನ ಜಿಲ್ಲೆಗಳನ್ನು ಒಳಗೊಂಡ ಗಂಗವಾಡಿ ಪ್ರಾಂತ್ಯದ ಒಡೆಯರಾಗಿ ಪಶ್ಚಿಮ ಗಂಗರು ಸುಮಾರು ನಾಲ್ಕನೆಯ ಶತಮಾನದಿಂದ ಆಳಿದರು. ತಲಕಾಡು ಇವರ ರಾಜಧಾನಿಯಾದುದರಿಂದ, ಇವರನ್ನು ತಲಕಾಡು ಗಂಗರು ಎಂದು ಕರೆಯುವುದು ವಾಡಿಕೆ. ಇತ್ತೀಚೆಗೆ ತಲಕಾಡಿನಲ್ಲಿ ಪುರಾತತ್ವ ಇಲಾಖೆಯವರು ಉತ್ಖನನ ನಡೆಸಿ ಅನೇಕ ಅವಶೇಷಗಳನ್ನು ಬೆಳಕಿಗೆ ತಂದಿದ್ದಾರೆ. ಆದರೆ ಇಲ್ಲಿ ಗಂಗರ ನಾಣ್ಯಗಳು ದೊರೆಯಲಿಲ್ಲ. ಹತ್ತಾರು ಕಲ್ಲಿನ ಮತ್ತು ತಾಮ್ರಶಾಸನಗಳನ್ನು ಬರೆಯಿಸಿ, ಗಂಗರು ಕರ್ನಾಟಕ ಇತಿಹಾಸದಲ್ಲಿ ಖ್ಯಾತರಾಗಿದ್ದಾರೆ. ಈ ಶಾಸನಗಳಿಂದ ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಮಾಹಿತಿಗಳು ದೊರೆಯುತ್ತವೆ. ಸಿಂಹವರ್ಮನ ಪೆರೂರು ತಾಮ್ರಶಾಸನದಲ್ಲಿ ದಾನಕ್ಕೆ ಕಾರ್ಷಾಪಣವನ್ನು ಉಪಯೋಗಿಸಿದ ಉಲ್ಲೇಖ ದೊರೆಯುತ್ತದೆ. ಕೊಂಗಣಿವರ್ಮನ ನೊಣಮಂಗಲ ತಾಮ್ರಶಾಸನದ ಪ್ರಕಾರ ಜಿನಾಲಯಕ್ಕೆ ಕಾಲು ಕಾರ್ಷಾಪಣ ನಾಣ್ಯವನ್ನು ಕೊಟ್ಟ ಉಲ್ಲೇಖವಿದೆ. ನಾವು ಆಗಲೇ ಗಮನಿಸಿರುವಂತೆ ಪಂಚ್ ಚಿಹ್ನೆಯ ಮೌರ್ಯರ ಕಾಲದ ನಾಣ್ಯಗಳನ್ನು ಕಾರ್ಷಾಪಣ ಎಂದು ಕರೆಯುತ್ತಿದ್ದರು. ಬಹುಶಃ ಆ ನಾಣ್ಯ ಉಳಿದುಬಂದಿದ್ದು ಈ ಉಲ್ಲೇಖಗಳು ಅದಕ್ಕೆ ಸಂಬಂಧಿಸಿದ್ದಿರಬೇಕು. ನೀತಿಮಾರ್ಗ ಎರೆಗಂಗನ ಕೆರೆಹಳ್ಳಿ ತಾಮ್ರಶಾಸನದಲ್ಲಿ ಆ ಹಳ್ಳಿಯ ಸಿದ್ಧಾಯ ಇಪ್ಪತ್ತು ನಿಷ್ಕಗಳು ಎಂದು ಹೇಳಿದೆ. ನಿಷ್ಕ ಎಂಬುದು ಬಲು ಹೆಚ್ಚಿನ ಮೌಲ್ಯದ ಚಿನ್ನದ ನಾಣ್ಯ ಎಂಬುದು ತಿಳಿದುಬಂದಿದೆ. ಆದರೆ ಅದರ ಸ್ವರೂಪ ತಿಳಿದಿಲ್ಲ. ಬಹುಶಃ ಗದ್ಯಾಣವನ್ನು ಆ ಹೆಸರಿನಿಂದಲೇ ಕರೆಯುತ್ತಿದ್ದಿರಬೇಕು. ಸತ್ಯವಾಕ್ಯ ಪೆರ್ಮಾನಡಿಯ ಕ್ರಿ.ಶ. 919ರ ಕೃಷ್ಣಾಪುರ ಶಾಸನದಲ್ಲಿ ಗದ್ಯಾಣದ ಪ್ರಸ್ತಾಪ ಕಾಣಬರುತ್ತದೆ. ಇಮ್ಮಡಿ ಮಾರಸಿಂಹನ ಕುಕ್ಕನೂರು ಶಾಸನದಲ್ಲಿ ದೀನಾರ ಎಂಬ ನಾಣ್ಯದ ಉಲ್ಲೇಖ ಕಾಣಬರುತ್ತದೆ. ಆಗಿನ ಕಾಲದಲ್ಲಿ ರೋಮನ್ ನಾಣ್ಯಗಳನ್ನು ದೀನಾರ ಎಂದು ಕರೆಯುತ್ತಿದ್ದರು. ಅಥವಾ ಈ ಪದವನ್ನು ಚಿನ್ನದ ನಾಣ್ಯ ಎನ್ನುವ ಅರ್ಥದಲ್ಲಿಯೂ ಬಳಸಿರಬೇಕು. ಈ ನಾಣ್ಯಗಳಿಗಿದ್ದ ಪರಸ್ಪರ ಮೌಲಿಕ ಸಂಬಂಧ ಶಾಸನಗಳಿಂದ ತಿಳಿಯಬರುವುದಿಲ್ಲ. ಆದರೆ ಸಮಕಾಲೀನ ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ ಮೌಲಿಕ ಸಂಬಂಧಗಳನ್ನು ಗಮನಿಸಿ, ಇದೇ ಸಂಬಂಧವು ಗಂಗರ ಕಾಲದಲ್ಲಿಯೂ ಇದ್ದಿತು ಎಂದು ಭಾವಿಸಲು ಆಸ್ಪದವಿದೆ. ಅದರ ಪ್ರಕಾರ :

1 ಗದ್ಯಾಣ = 10 ಪಣ = 60 ಗ್ರೇನ್

1 ಪಣ = 4 ಹಾಗ = 6 ಗ್ರೇನ್

1 ಹಾಗ = 1.5 ಗ್ರೇನ್

ಗಂಗರ ನಾಣ್ಯಗಳಲ್ಲಿ ಎರಡು ನಮೂನೆಗಳಿವೆ. ಮೊದಲನೆಯದು ಬರಹವಿಲ್ಲದ್ದು; ಎರಡನೆಯದು ಬರಹವುಳ್ಳದ್ದು. ಗಂಗರ ರಾಜಲಾಂಛನ ಆನೆ. ಸಾಮಾನ್ಯವಾಗಿ ಅವರ ಶಾಸನಗಳ ಮುದ್ರೆಗಳಲ್ಲಿ ಇದು ಕಾಣಬರುತ್ತದೆ. ಆದುದರಿಂದ ಆನೆಯ ಚಿತ್ರವನ್ನುಳ್ಳ ಚಿನ್ನ ಮತ್ತು ತಾಮ್ರದ ನಾಣ್ಯಗಳನ್ನು ಬರಹವಿಲ್ಲದಿದ್ದರೂ ಗಂಗರಿಗೆ ಸೇರಿದ್ದೆಂದು ಭಾವಿಸಲಾಗಿದೆ. ಬರಹವಿಲ್ಲದ ನಾಣ್ಯಗಳಲ್ಲಿ ತೂಕದ ಪ್ರಕಾರ 60, 6 ಮತ್ತು 1.5 ಗ್ರೇನ್ ನಾಣ್ಯಗಳು ದೊರಕಿವೆ. ಅವುಗಳೇ ಗದ್ಯಾಣ, ಪಣ ಮತ್ತು ಹಾಗ ಎಂದು ಭಾವಿಸಲಾಗಿದೆ. ಇವುಗಳಲ್ಲಿ ಕೆಲವನ್ನು ಗಮನಿಸಬಹುದು.

ಮು : ಅಲಂಕಾರದ ಹೊದಿಕೆಯುನ್ನುಳ್ಳ ಎತ್ತರದ ಆನೆ; ಅದು ಪೂರ್ಣವಾಗಿ ಅಲಂಕಾರಗೊಂಡಿದೆ; ಸೊಂಡಿಲಿನ ಪಕ್ಕದಲ್ಲಿ ಪುಷ್ಪ ವಿನ್ಯಾಸ; ಮೇಲ್ಗಡೆ ದೇವ ಎಂಬ ಕನ್ನಡ ಬರಹ

ಹಿ : ವಿಶಾಲವಾದ ಪುಷ್ಪಾಲಂಕಾರದ ವಿನ್ಯಾಸ

ಇನ್ನೊಂದು ತಾಮ್ರದ ನಾಣ್ಯದ ಮೇಲೂ ಇದೇ ರೀತಿಯ ವಿನ್ಯಾಸವಿದೆ; ಇದರ ತೂಕ 1.5 ಗ್ರೇನ್; ಅಳತೆ 0.15".

ಮು : ಅಲಂಕಾರದ ಹೊದಿಕೆಯನ್ನುಳ್ಳ ಆನೆ; ಪಕ್ಕದಲ್ಲಿ ಗಂಟೆಯಸರ

ಹಿ : ಎರಡು ಸಾಲಿನ ಅಸ್ಪಷ್ಟ ಬರಹ.

ಮತ್ತೊಂದು ನಮೂನೆಯ ಚಿನ್ನದ ನಾಣ್ಯದ ತೂಕ 36 ಗ್ರೇನ್; ಅಳತೆ 0.6".

ಮು : ಅಲಂಕಾರದ ಮಾಡಿದ ಆನೆ; ರಾಜದಂಡ; ಸೂರ್ಯ-ಚಂದ್ರರು

ಹಿ : ಅಗಲವಾದ ಪುಷ್ಪಾಲಂಕಾರ ವಿನ್ಯಾಸ; ಅಂಕುಶ






ಇತ್ತೀಚೆಗೆ ದೊರಕಿದ, ಶ್ರೀಪುರುಷನಿಗೆ ಸೇರಿದ ತಾಮ್ರದ ನಾಣ್ಯವು ಬಲು ಮುಖ್ಯವಾದುದು. ಇದರ ಅಳತೆ 0.6"; ತೂಕ 62 ಗ್ರೇನ್.

ಮು : ನಿಂತಿರುವ ಆನೆ; ಮೇಲೆ ಸೂರ್ಯ-ಚಂದ್ರರು

ಹಿ : ಎರಡು ಸಾಲುಗಳ ಕನ್ನಡ ಬರಹ; ಅಂಕುಶ

ಶ್ರೀಪು

ರುಷ




ಬರಹವುಳ್ಳ ಇನ್ನೊಂದು ಚಿನ್ನದ ನಾಣ್ಯವು (ವರ್ಣೇಕರ್ ಸಂಗ್ರಹ) ದೊರಕಿದ್ದು, ಅದನ್ನು ಗಣೇಶ್-ಗಿರಿಜಾಪತಿ ಪ್ರಕಟಿಸಿದ್ದಾರೆ. ಇದರ ತೂಕ 58 ಗ್ರೇನ್, ಅಗಲ 0.6".

ಮು : ಅಲಂಕೃತ ಹೊದಿಕೆಯಿರುವ ಆನೆ

ಹಿ : ಎರಡು ಸಾಲುಗಳ ಕನ್ನಡ ಬರಹ

ಶ್ರೀ ಶ್ರೀ

ನನ್ನಿಯ ಗಂಗ



ಗಂಗ ಇಮ್ಮಡಿ ಬೂತುಗನಿಗೆ ಈ ಬಿರುದು ಇದ್ದಿತು. ಇವನ ಆತಕೂರು ಶಾಸನ ಖ್ಯಾತವಾಗಿದೆ. ಇವನು ರಾಷ್ಟ್ರಕೂಟರ ಅಧೀನದಲ್ಲಿ ಆಳುತ್ತಿದ್ದನು. ಬಿರುದಿನ ಆಧಾರದ ಮೇಲೆ ಈ ನಾಣ್ಯ ಇವನಿಗೆ ಸೇರಿದ್ದೆಂದು ತಿಳಿಯಬೇಕು.

ಗಂಗ ಇಮ್ಮಡಿ ಮಾರಸಿಂಹನ ಮಾವ ನಿಜಗಲಿಗೆ ಸಂಬಂಧಿಸಿದ ಒಂದು ಮುದ್ರೆಯನ್ನು ಇಲ್ಲಿ ಗಮನಿಸಬಹುದು. ವೃತ್ತಾಕಾರದ ಈ ಮುದ್ರೆಯಲ್ಲಿ 'ಶ್ರೀ ನಿಜಗಲಿ' ಎಂಬ ಕನ್ನಡ ಬರಹವೂ ಅದರ ಕೆಳಗೆ ವರಾಹದ ಚಿತ್ರವೂ ಇದೆ. ನಿಜಗಲಿಯು ಬಾದಾಮಿ ಚಲುಕ್ಯರ ಸಾಮಂತನಾಗಿದ್ದುದರಿಂದ ತನ್ನ ಹೆಸರಿನ ಕೆಳಗೆ ಚಾಲುಕ್ಯರ ಲಾಂಛನವನ್ನು ಮುದ್ರಿಸಿರಬೇಕು. ಒಟ್ಟಿನಲ್ಲಿ ಈ ಎಲ್ಲ ಮಾಹಿತಿಗಳನ್ನು ಗಮನಿಸಿದರೆ ಅಷ್ಟೊಂದು

ವಿಶಾಲವಾದ ರಾಜ್ಯವನ್ನು ಅನೇಕ ಶತಮಾನಗಳವರೆಗೆ ಆಳಿದ ತಲಕಾಡು ಗಂಗರ ನಾಣ್ಯಗಳ ಬಗೆಗೆ ದೊರಕಿರುವ ಮಾಹಿತಿ ತೀರ ಕಡಿಮೆ ಎಂದೇ ಹೇಳಬೇಕು.



3. ಬಾದಾಮಿ ಚಲುಕ್ಯರ ನಾಣ್ಯಗಳು

ಬಾದಾಮಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಚಲುಕ್ಯರು ಕರ್ನಾಟಕದಲ್ಲಿ ಮಾತ್ರವಲ್ಲದೆ ದಕ್ಷಿಣ ಭಾರತೀಯ ಇತಿಹಾಸದಲ್ಲೂ ಖ್ಯಾತಿವೆತ್ತ ಮನೆತನವೆಂದೆನಿಸಿಕೊಂಡಿದ್ದಾರೆ. ಉತ್ತರ ಭಾರತಕ್ಕೆ ಹೋಗಿ ಹರ್ಷನಂತಹ ರಾಜನನ್ನು ಸೋಲಿಸಿದ ಕೀರ್ತಿವಂತ ದೊರೆ ಪುಲಕೇಶಿ ಹುಟ್ಟಿದ್ದು ಈ ವಂಶದಲ್ಲಿ. ರಾಜಕೀಯದಲ್ಲಿ ಮಾತ್ರವಲ್ಲದೆ ಶಿಲ್ಪ ಕಲೆಯಲ್ಲಿಯೂ ಈ ರಾಜರು ಖ್ಯಾತಿ ಗಳಿಸಿದ್ದಾರೆ. ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ಕಾಣಬರುವ ಅನೇಕ ದೇವಾಲಯಗಳು ಇವರ ಖ್ಯಾತಿಯನ್ನು ಸಾರುತ್ತಿವೆ. ಸುಮಾರು ಮುನ್ನೂರಕ್ಕೂ ಹೆಚ್ಚಿನ ತಾಮ್ರ ಮತ್ತು ಕಲ್ಲಿನ ಶಾಸನಗಳನ್ನು ಬರೆಯಿಸಿದ್ದಾರೆ. ಈ ಶಾಸನಗಳಿಂದ ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದ ಮಾಹಿತಿಗಳೂ ದೊರಕುತ್ತವೆ. ಅವುಗಳಿಂದ ಇವರ ನಾಣ್ಯಗಳನ್ನು ತಿಳಿಯುವುದಕ್ಕೆ ಅನುಕೂಲವಾಗುತ್ತದೆ.

ಚಲುಕ್ಯರ ರಾಜಲಾಂಛನ ವರಾಹ. ಆದುದರಿಂದ ಅವರು ತಮ್ಮ ಚಿನ್ನದ ನಾಣ್ಯಗಳ ಮೇಲೆ ವರಾಹವನ್ನು ಟಂಕಿಸಿದರು. ಆಗಿನ ಕಾಲದಲ್ಲಿ ಈ ನಾಣ್ಯಗಳು ತುಂಬ ಪ್ರಸಿದ್ಧವಾಗಿದ್ದವು. ಈ ರೀತಿಯ ಚಿನ್ನದ ನಾಣ್ಯಗಳನ್ನು ಸಮಕಾಲೀನ ಜನಗಳು ವರಹ ಎಂಬ ಹೆಸರಿನಿಂದ ಗುರುತಿಸಲು ಆರಂಭಿಸಿದರು. ಕಾಲಕ್ರಮದಲ್ಲಿ ಈ ನಾಣ್ಯದ ಖ್ಯಾತಿ ಹೆಚ್ಚಾಗಿ ವರಹ ಅಥವಾ ವರಾಹ ಎಂಬುದನ್ನು ಗರಿಷ್ಠ ಮೊತ್ತದ ಚಿನ್ನದ ನಾಣ್ಯಕ್ಕೆ ಪರ್ಯಾಯ ಪದವಾಗಿ ಬಳಸಲು ಆರಂಭವಾಯಿತು. ಇಂತಹ ಚಿನ್ನದ ನಾಣ್ಯಗಳ ಮೇಲೆ ವರಹದ ಚಿತ್ರವಿಲ್ಲದಿದ್ದರೂ, ಜನಗಳು ಇವನ್ನು ವರಹವೆಂದೇ ವ್ಯವಹರಿಸುತ್ತಿದ್ದರು. ಅಂದರೆ ಗದ್ಯಾಣ ಎಂಬ ಪದಕ್ಕೆ ಪರ್ಯಾಯ ಪದವಾಗಿ ನಾಣ್ಯದ ಇತಿಹಾಸದಲ್ಲಿ

ಈ ಪದ ಉಳಿದುಕೊಂಡು ಬಂದಿತು. ಇಂದಿಗೂ ಈ ಪದವನ್ನು ನಾಣ್ಯದ ಅರ್ಥದಲ್ಲಿ ಬಳಸುತ್ತೇವೆ. ಬಹುಶಃ ಚಲುಕ್ಯರು ನಾಣ್ಯಶಾಸ್ತ್ರಕ್ಕೆ ಕೊಟ್ಟ ಅತ್ಯಂತ ಅಮೂಲ್ಯ ಕಾಣಿಕೆ ಇದೆಂದು ಭಾವಿಸಿದರೆ ಅತಿಶಯೋಕ್ತಿಯಲ್ಲ. ಕಾಲಕ್ರಮದಲ್ಲಿ ಇವರ ನಂತರ ಬಂದ ರಾಜವಂಶಗಳು ವರಹವನ್ನು ಅಧಿಕೃತವಾಗಿ ಬಳಸಲು ಆರಂಭಿಸಿದವು. ವಿಜಯನಗರದ ಅರಸರೂ ಇದೇ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದರು. ಮೈಸೂರು ಒಡೆಯರ ನಾಣ್ಯಗಳೂ ಇದೇ ಹೆಸರಿನಿಂದ ಪ್ರಸಿದ್ಧಿ ಪಡೆದವು. ಗದ್ಯಾಣವೆಂಬ ಪದ ಹಿಂದಕ್ಕೆ ಬಿದ್ದಿತು.

ಚಲುಕ್ಯರ ಶಾಸನಗಳನ್ನು ಗಮನಿಸಿದರೆ, ಈ ಕಾಲದಲ್ಲಿ ಗದ್ಯಾಣ (ವರಹ), ಸುವರ್ಣ, ಧರಣ, ಪೊನ್, ಪಣ ಅಥವಾ ಹಣ, ಪಲ, ವೀಸ ಹಾಗೂ ರೂಪಕ ಎಂಬ ವಿವಿಧ ನಾಣ್ಯಗಳ ಹೆಸರುಗಳು ಕಾಣಬರುತ್ತವೆ. ಗದ್ಯಾಣವೆಂಬುದು ಅತ್ಯಂತ ಗರಿಷ್ಠ ಮೌಲ್ಯದ ಚಿನ್ನದ ನಾಣ್ಯ. ಐಹೊಳೆ ಮತ್ತು ಪಟ್ಟದಕಲ್ಲಿನ ಶಾಸನಗಳಲ್ಲಿ ಈ ನಾಣ್ಯವನ್ನು ಧಾರ್ಮಿಕ ಹಾಗೂ ವ್ಯಾಪಾರದ ಕಾರ್ಯಗಳಲ್ಲಿ ಬಳಸಿರುವುದು ನಮ್ಮ ಗಮನ ಸೆಳೆಯುತ್ತದೆ. ಸುವರ್ಣ ಎನ್ನುವುದು ಮತ್ತೊಂದು ಚಿನ್ನದ ನಾಣ್ಯ. ಇದು ವಿಶೇಷವಾಗಿ ಉತ್ತರ ಭಾರತದಲ್ಲಿ ಬಳಕೆಯಲ್ಲಿತ್ತು. ಬಹುಶಃ ಗದ್ಯಾಣ ಎಂಬ ಅರ್ಥದಲ್ಲಿ ಚಲುಕ್ಯರ ಶಾಸನಗಳಲ್ಲಿ ಈ ಪದ ಬಳಕೆಯಾಗಿರಬೇಕು. ಧರಣ ಎಂಬುದು ಇನ್ನೊಂದು ಚಿನ್ನದ ನಾಣ್ಯ. ಇದು ಉತ್ತರ ಭಾರತದಲ್ಲಿ ಬೆಳ್ಳಿಯ ನಾಣ್ಯವಾಗಿಯೂ ಬಳಕೆಯಲ್ಲಿದ್ದಿತು. ದಕ್ಷಿಣ ಭಾರತದಲ್ಲಿ ಇದು ಅಷ್ಟಾಗಿ ಉಪಯೋಗದಲ್ಲಿರಲಿಲ್ಲ. ಆದರೆ ರಾಷ್ಟ್ರಕೂಟರ ಶಾಸನಗಳಲ್ಲಿ ಈ ನಾಣ್ಯದ ಪ್ರಸ್ತಾಪವಿದೆ. ಇದು ಗದ್ಯಾಣದ ನಾಲ್ಕನೆಯ ಒಂದು ಭಾಗ ಮೌಲ್ಯದ ನಾಣ್ಯವೆಂದು ತಿಳಿದುಬಂದಿದೆ. ಇಮ್ಮಡಿ ಪುಲಕೇಶಿಯ ಕಟ್ಟೆಬಂಡೆ ಶಾಸನದಲ್ಲಿ ಪೊನ್ ಎಂಬ ನಾಣ್ಯ ಪ್ರಸ್ತಾಪಿತವಾಗಿದೆ. ವಿಜಯನಗರ ಕಾಲದಲ್ಲಿ ಗದ್ಯಾಣ ಮತ್ತು ಪೊನ್ ಒಂದೇ ಮೌಲ್ಯದ ಚಿನ್ನದ ನಾಣ್ಯಗಳಾಗಿದ್ದವು. ಚಲುಕ್ಯ ಶಾಸನದಲ್ಲಿ 'ನವಿಲಪೊನ್' ಎಂಬ ನಾಣ್ಯದ ಪ್ರಸ್ತಾಪವಿದೆ. ಬಹುಶಃ ಈ ನಾಣ್ಯದ ಮೇಲೆ ನವಿಲಿನ ಚಿತ್ರವಿದ್ದಿರಬೇಕು. ಇತ್ತೀಚಿಗೆ ನವಿಲಿನ ಚಿತ್ರವಿರುವ ಚಿನ್ನದ ನಾಣ್ಯಗಳು ಬೆಳಕಿಗೆ ಬಂದಿವೆ. ಅವುಗಳೇ ಈ ಶಾಸನೋಕ್ತ 'ನವಿಲಪೊನ್' ಎಂದು ಭಾವಿಸಬಹುದು. ಚಲುಕ್ಯರ ಮನೆದೇವತೆಯಾದ ಕಾರ್ತಿಕೇಯನ ವಾಹನ ನವಿಲು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಇಮ್ಮಡಿ ವಿಕ್ರಮಾದಿತ್ಯನ ಲಕ್ಷ್ಮೇಶ್ವರ ಶಾಸನದಲ್ಲಿ ಪಣ ಅಥವಾ ಹಣ ಎಂಬ ಚಿನ್ನದ ನಾಣ್ಯದ ಉಲ್ಲೇಖ ಕಾಣಬರುತ್ತದೆ. ಐಹೊಳೆಯ ದುರ್ಗಾ ಗುಡಿಯ ಶಾಸನದಲ್ಲಿ ವೀಸ ಎಂಬ ನಾಣ್ಯದ ಪ್ರಸ್ತಾಪವಿದೆ. ಚಲುಕ್ಯರ ಸಾಮಂತರಾಗಿದ್ದ ಕಳಚೂರಿಗಳ ಶಾಸನಗಳಲ್ಲಿ ರೂಪಕ

ಎಂಬ ನಾಣ್ಯದ ಹೆಸರು ಕಾಣಬರುತ್ತದೆ. ಬಹುಶಃ ಇದು ಬೆಳ್ಳಿಯ ನಾಣ್ಯ. ಈ ಮೇಲಿನ ಮಾಹಿತಿಗಳನ್ನು ಕ್ರೋಡೀಕರಿಸಿದರೆ, ಚಲುಕ್ಯರ ಕಾಲದ ನಾಣ್ಯಗಳನ್ನು ಈ ರೀತಿ ಗುರುತಿಸಬಹುದು :

1 ಗದ್ಯಾಣ = ಸುವರ್ಣ = 1 ಹೊನ್ = 60 ಗ್ರೇನ್

1 ಧರಣ = ಕಾಲು ಗದ್ಯಾಣ = 15 ಗ್ರೇನ್

1 ಗದ್ಯಾಣ = 10 ಪಣ = 60 ಗ್ರೇನ್

1 ಪಣ = 16 ವೀಸ = 6 ಗ್ರೇನ್

ಇವಿಷ್ಟೂ ಶಾಸನಗಳಿಂದ ದೊರಕಿದ ಮಾಹಿತಿಗಳು. ಇನ್ನು ದೊರಕಿರುವ ನಾಣ್ಯಗಳನ್ನು ಗಮನಿಸಬಹುದು.

ಒಂದನೆಯ ಪುಲಕೇಶಿಯ ನಾಣ್ಯ : ತೂಕ 4.15 ಗ್ರಾಂ; ಅಳತೆ 1.9 ಸೆ.ಮಿ.

ಮು : ಮುಂದಿನ ಕಾಲುಗಳನ್ನು ಮೇಲಕ್ಕೆತ್ತಿರುವ ಸಿಂಹ; ಬಾಲ ಗುಂಗುರು ಆಕಾರದಲ್ಲಿ

ಹಿ : ದೀಪ ಮತ್ತು ಶಂಖ; ಕ್ರಿ.ಶ. ಆರನೆಯ ಶತಮಾನದ ಕನ್ನಡ ಲಿಪಿಯಲ್ಲಿರುವ ಶ್ರೀ ಪೃಥಿವೀ... ಎಂಬ ಬರಹ

ಶ್ರೀ ಪೃಥಿವೀವಲ್ಲಭ ಎನ್ನುವ ಬಿರುದನ್ನು ಮೊದಲನೆಯ ಪುಲಕೇಶಿಯು ಹೊಂದಿದ್ದನಾದ್ದರಿಂದ, ಹಾಗೂ ಲಿಪಿ ಲಕ್ಷಣಗಳ ಆಧಾರದ ಮೇಲೆ ಈ ನಾಣ್ಯವನ್ನು ಒಂದನೆಯ ಪುಲಕೇಶಿಗೆ ಸೇರಿದ್ದೆಂದು ಭಾವಿಸಲಾಗಿದೆ. ಇನ್ನೊಂದು ನಮೂನೆಯ ನಾಣ್ಯ ಹೀಗಿದೆ :

ಮು : ವೃಷಭ; ಶ್ರೀ ರಣವಿಕ್ರಮ ಎನ್ನುವ ಬರಹ

ಹಿ : ಕಲಶ ಮತ್ತು ದೀಪಸ್ತಂಭ

ಮೊದಲನೆಯ ಪುಲಕೇಶಿಗೆ ರಣವಿಕ್ರಮ ಎಂಬ ಬಿರುದು ಇದ್ದುದರಿಂದ ಈ ನಾಣ್ಯವನ್ನು ಆ ರಾಜನಿಗೆ ಸೇರಿದ್ದೆಂದು ಭಾವಿಸಲಾಗಿದೆ (ವರಾಹದ ಚಿತ್ರವಿಲ್ಲದಿದ್ದರೂ).

ಒಂದನೆಯ ಕೀರ್ತಿವರ್ಮನ ನಾಣ್ಯ : ಸೀಸದ ನಾಣ್ಯ; ಅಗಲ 1.8 ಸೆ.ಮಿ.; ತೂಕ 4 ಗ್ರಾಂ.

ಮು : ವೃಷಭ ಬಲಕ್ಕೆ

ಹಿ : ಕಲಶ ಮತ್ತು ದೀಪಸ್ತಂಭ; ಶ್ರೀ ಕೃತರಾಜ ಎಂಬ ಬರಹ

ಕೃತರಾಜ ಎಂಬ ಬರಹವನ್ನು ಕೀರ್ತಿರಾಜ ಎಂದು ಭಾವಿಸಿ ಈ ನಾಣ್ಯವನ್ನು ಚಲುಕ್ಯ ರಾಜನಿಗೆ ಸೇರಿದ್ದೆಂದು ಭಾವಿಸಲಾಗಿದೆ.


ಇಮ್ಮಡಿ ಪುಲಕೇಶಿಯ ನಾಣ್ಯ : ಇತ್ತೀಚೆಗೆ ಎಲಿಫಾಂಟ ದ್ವೀಪದಲ್ಲಿ ಅಗೆಯುತ್ತಿದ್ದಾಗ ಈ ತಾಮ್ರದ ನಾಣ್ಯಗಳು ದೊರಕಿದವು. ಸುಮಾರಾಗಿ ಆಯತಾಕಾರದಲ್ಲಿರುವ ಈ ನಾಣ್ಯಗಳ ಅಳತೆ 1.1 × 0.9 ಸೆ.ಮಿ.; ತೂಕ 1.3 : 0.7 ಮತ್ತು 0.5 ಗ್ರಾಂ. ಅಂದರೆ ಇವು ಮೂರು ಭಿನ್ನ ತೂಕದ ಹಾಗೂ ಮೌಲ್ಯದ ನಾಣ್ಯಗಳು.

ಮು : ಎರಡು ಸಾಲುಗಳ ಕನ್ನಡ ಬರಹ :

ಶ್ರೀ ಸತ್ಯಾ

ಶ್ರಯ

ಹಿ : ವೃಷಭ



ಸತ್ಯಾಶ್ರಯ ಎಂಬ ಬಿರುದನ್ನು ಚಲುಕ್ಯ ವಂಶದಲ್ಲಿ ಮೊದಲನೆಯ ಪುಲಕೇಶಿ, ಮಂಗಳೇಶ ಮತ್ತು ಇಮ್ಮಡಿ ಪುಲಕೇಶಿ ಧರಿಸಿದ್ದರು. ಆದುದರಿಂದ ಈ ಮೂರರಲ್ಲಿ ಯಾರಾದರೂ ಈ ನಾಣ್ಯವನ್ನು ಟಂಕಿಸಿರಬಹುದು. ಆದರೆ ಈ ನಾಣ್ಯ ದೊರಕಿರುವುದು ಎಲಿಫಾಂಟದಲ್ಲಿ. ಕ್ರಿ.ಶ. ಏಳನೆಯ ಶತಮಾನದಲ್ಲಿ ಈ ಸ್ಥಳವನ್ನು ಪುರಿ ಅಥವಾ ಘಾರಾಪುರಿ ಎಂದು ಕರೆಯುತ್ತಿದ್ದರು. ಇಲ್ಲಿ ಕೊಂಕಣದ ಮೌರ್ಯರು ಆಳುತ್ತಿದ್ದರು. ಇವರನ್ನು ಸೋಲಿಸಿದವನು ಚಲುಕ್ಯ ಇಮ್ಮಡಿ ಪುಲಕೇಶಿ. ಆದುದರಿಂದ ಈ ನಾಣ್ಯ ಈ ರಾಜನಿಗೇ ಸೇರುತ್ತದೆ ಎಂಬುದು ಖಚಿತವಾಗುತ್ತದೆ.

ಮೊದಲನೆಯ ವಿಕ್ರಮಾದಿತ್ಯನ ನಾಣ್ಯ : ಇದೊಂದು ಚಿನ್ನದ ನಾಣ್ಯ. ಇದರ ತೂಕ 117 ಗ್ರೇನ್; ಅಳತೆ 0.75".

ಮು : ಬಲಕ್ಕಿರುವ ವರಾಹ; ತುದಿಯಲ್ಲಿ ದೀಪಸ್ತಂಭ; ಮೇಲೆ ಸೂರ್ಯ-ಚಂದ್ರರು; ಕೆಳಭಾಗದಲ್ಲಿ ಕನ್ನಡ ಲಿಪಿಯ ಬರಹ : ಶ್ರೀ ವಿಕ್ರಮ

ಹಿ : ನಿಂತಿರುವ ಮನುಷ್ಯಾಕೃತಿ; ಪಕ್ಕದಲ್ಲಿ ಸರ್ಪ : ತುದಿಯಲ್ಲಿ ವರಾಹ ಎಡ ತುದಿಯಲ್ಲಿ ವಿಕ್ರಮ ಎಂಬ ಬರಹ

ಇದೇ ದೊರೆಯ ಚಿನ್ನ-ಬೆಳ್ಳಿ ಮಿಶ್ರ ಲೋಹದ ಮೂರು ನಾಣ್ಯಗಳನ್ನೂ ರಾಮಯ್ಯನವರು ಪತ್ತೆ ಮಾಡಿದ್ದಾರೆ. ಈ ನಾಣ್ಯಗಳು ಮೇಲೆ ಹೇಳಿದ ನಾಣ್ಯದಂತೆಯೇ ಇವೆ. ಆದರೆ ಬರಹ ಮಾತ್ರ ಶ್ರೀವಿಕ್ರಮ ಮಹಾರಾಜ ಎಂದಿದೆ. ಲಿಪಿಲಕ್ಷಣದ ಆಧಾರದ ಮೇಲೆ ಇದು ಮೊದಲನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರುತ್ತದೆ. ಹಿಮ್ಮುಖದಲ್ಲಿ ನಿಂತಿರುವ ಮನುಷ್ಯಾಕೃತಿಯನ್ನು ಕಾರ್ತಿಕೇಯನೆಂದು ಭಾವಿಸಲಾಗಿದೆ. ಈ ಎಲ್ಲ ಕಾರಣಗಳಿಂದ ಈ ಚಿನ್ನದ ಹಾಗೂ ಮಿಶ್ರಲೋಹದ ನಾಣ್ಯಗಳನ್ನು ಮೊದಲನೆಯ ವಿಕ್ರಮಾದಿತ್ಯನಿಗೆ ಸೇರಿದ್ದೆಂದು ಭಾವಿಸಲಾಗಿದೆ.

ಬರಹವಿಲ್ಲದಿರುವ ಕೆಲವು ಚಿನ್ನದ ನಾಣ್ಯಗಳನ್ನು ಈಗ ಗಮನಿಸಬಹುದು. ಮೊದಲನೆಯದಾಗಿ ವರಹ ನಮೂನೆಯ ನಾಣ್ಯ, ತೂಕ 57.2 ಗ್ರೇನ್, ಅಳತೆ 0.55".

ಮು : ಅಲಂಕಾರಿಕ ಹೊದಿಕೆ ಇರುವ ವರಾಹ; ಮೇಲೆ ಸೂರ್ಯ-ಚಂದ್ರರು

ಹಿ : ಅಷ್ಟದಳಾಕಾರದ ಪದ್ಮ

ಹಿಮ್ಮುಖದಲ್ಲಿರುವ ಅಷ್ಟದಳಾಕಾರದ ಪದ್ಮವು, ಬನವಾಸಿ ಕದಂಬರ ಪದ್ಮಟಂಕ ನಾಣ್ಯಗಳ ಮೇಲೆ ಕಂಡುಬರುವ ವಿನ್ಯಾಸದಂತೆಯೇ ಇದೆ. ಆದುದರಿಂದ ಚಲುಕ್ಯ ಮೊದಲನೆಯ ಪುಲಕೇಶಿಯು ಕದಂಬರನ್ನು ಸೋಲಿಸಿದುದರ ಕುರುಹಾಗಿ, ಈ ರೀತಿಯ ನಾಣ್ಯವನ್ನು ಟಂಕಿಸಿರಬಹುದು ಎಂದು ಊಹಿಸಲಾಗಿದೆ. ನಮಗೆ ತಿಳಿದಿರುವಂತೆ ಮೊದಲನೆಯ ಪುಲಕೇಶಿಯು ಕದಂಬ ಕೀರ್ತಿವರ್ಮನನ್ನು ಸೋಲಿಸಿ ರಾಜ್ಯವನ್ನು ಬಲಪಡಿಸಿದನು. ಅದರ ಸ್ಮಾರಕವಾಗಿ ಈ ನಾಣ್ಯವನ್ನು, ಅಂದರೆ ಮುಂಭಾಗದಲ್ಲಿ ಚಲುಕ್ಯರ ವರಾಹ, ಹಿಮ್ಮುಖದಲ್ಲಿ ಕದಂಬರ ಅಷ್ಟದಳ ಪದ್ಮದ ಚಿಹ್ನೆಗಳನ್ನು ವಿನ್ಯಾಸಗೊಳಿಸಿ, ಟಂಕಿಸಿರಬಹುದು.

ಇಲಿಯಟ್ ಅವರ ಸಂಗ್ರಹದಲ್ಲಿದ್ದ ಎರಡು ಚಲುಕ್ಯ ನಾಣ್ಯಗಳನ್ನು ಈಗ ಗಮನಿಸಬಹುದು. ಅವುಗಳ ಮೇಲೆ ಬರಹವಿಲ್ಲ. ಆದರೆ ಮುಮ್ಮುಖದಲ್ಲಿ ವರಾಹದ

ಚಿತ್ರವಿರುವುದರಿಂದ ಅವುಗಳನ್ನು ಚಲುಕ್ಯರ ನಾಣ್ಯಗಳೆಂದು ಭಾವಿಸಲಾಗಿದೆ. ಒಂದು ನಾಣ್ಯದ ತೂಕ 66 ಗ್ರೇನ್; ಅಳತೆ 0.6".





ಮು : ವರಾಹದ ಚಿತ್ರ; ಮೇಲೆ ಸೂರ್ಯ-ಚಂದ್ರರು

ಹಿ : ಅಗಲವಾದ ಪುಷ್ಪ ವಿನ್ಯಾಸ

ಮತ್ತೊಂದು ಚಿನ್ನದ ನಾಣ್ಯದ ತೂಕ 62 ಗ್ರೇನ್; ಅಳತೆ 0.6".

ಮು : ಅಲಂಕೃತ ಹೊದಿಕೆಯಿರುವ ವರಾಹ; ಮೇಲೆ ಸೂರ್ಯ-ಚಂದ್ರರು

ಹಿ : ಅಷ್ಟಬಾಹುಗಳ ಚಕ್ರವಿನ್ಯಾಸ (ಅಷ್ಟದಳ ಪದ್ಮವೂ ಆಗಬಹುದು)

ಈ ನಾಣ್ಯಗಳು ನೋಡಲು ಅಂದವಾಗಿದ್ದು, ಚಲುಕ್ಯ ನಾಣ್ಯಗಳ ತೂಕ ಮತ್ತು ಅಳತೆಗಳಿಗೆ ಸರಿ ಹೋಗುತ್ತವೆ. ಅದಕ್ಕೂ ಮುಖ್ಯವಾಗಿ ಅವುಗಳ ಮುಮ್ಮುಖದಲ್ಲಿ ವರಾಹದ ಸುಂದರವಾದ ಚಿತ್ರವಿದೆ. ಈ ಎಲ್ಲ ಅಂಶಗಳನ್ನು ಗಮನಿಸಿ, ಈ ರೀತಿಯ ನಾಣ್ಯಗಳು, ಚಲುಕ್ಯರಿಗೆ ಸೇರಿದ್ದೆಂದು ನಿರ್ಧರಿಸಬಹುದು. ಬಹುಶಃ ಇವುಗಳೇ ವರಹ ಅಥವಾ ವರಾಹವೆಂದು ಪ್ರಸಿದ್ಧಿ ಪಡೆದ ನಾಣ್ಯಗಳು.

4. ರಾಷ್ಟ್ರಕೂಟರ ನಾಣ್ಯಗಳು

ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಪ್ರಾಚೀನ ಭಾರತದಲ್ಲಿ ಪ್ರಸಿದ್ಧಿ ಪಡೆದ ರಾಜಮನೆತನಗಳಲ್ಲಿ ರಾಷ್ಟ್ರಕೂಟರು ಮುಖ್ಯರು. ಉತ್ತರ ಭಾರತಕ್ಕೆ ನುಗ್ಗಿ ದಿಗ್ವಿಜಯಗಳನ್ನು ಸಾಧಿಸಿ ಅವರಿಗೆ ಸಿಂಹಸ್ವಪ್ನವಾಗಿದ್ದರು. ರಾಷ್ಟ್ರಕೂಟರ ಸೈನ್ಯವೆಂದರೆ ಅನೇಕ ರಾಜ ಮನೆತನಗಳು ದಿಗಿಲು ಬೀಳುವಷ್ಟರ ಮಟ್ಟಿಗೆ ಇವರು ಖ್ಯಾತರಾಗಿದ್ದರು. ಆರ್ಥಿಕವಾಗಿ

ವ್ಯಾಪಾರದ ಮೂಲಕ ವಿಶೇಷ ಪ್ರಸಿದ್ಧಿ ಪಡೆದಿದ್ದ ರಾಷ್ಟ್ರಕೂಟ ದೊರೆಗಳು, ಆಡಳಿತ, ಸಾಹಿತ್ಯ ಮತ್ತು ಕಲೆಗಳಿಗೆ ಸಾಕಷ್ಟು ಪೋಷಣೆಯನ್ನು ನೀಡಿದರು. ಎಲ್ಲೋರ, ಎಲಿಫಾಂಟ ಮುಂತಾದ ಕಡೆಗಳಲ್ಲಿ ಅವರು ನಿರ್ಮಿಸಿದ ಗುಹಾಲಯಗಳಿಂದ ಕಲಾ ಇತಿಹಾಸದಲ್ಲಿಯೂ ಇವರು ಅಮರರಾಗಿದ್ದಾರೆ. ಇಷ್ಟೊಂದು ಪ್ರಸಿದ್ಧಿಯನ್ನು ಗಳಿಸಿದ ಈ ರಾಜಮನೆತನದ ನಾಣ್ಯಗಳನ್ನು ಕುರಿತು ಬರೆಯುವಾಗ ತೀರ ನಿರಾಸೆಯಾಗುತ್ತದೆ. ಮೊನ್ನೆ ಮೊನ್ನೆಯವರೆಗೆ ಈ ರಾಜವಂಶದ ಒಂದು ನಾಣ್ಯವೂ ದೊರಕಿರಲಿಲ್ಲ. ಆದರೆ ಇವರ ಕಾಲ್ದದಲ್ಲಿ ವಿವಿಧ ರೀತಿ ನಾಣ್ಯಗಳಿದ್ದುವು ಎಂಬುದು ಇವರ ನೂರಾರು ಶಾಸನಗಳಿಂದ ಸ್ಪಷ್ಟವಾಗಿದ್ದಿತು. ಅವುಗಳ ಹೆಸರುಗಳೂ ನಮಗೆ ಶಾಸನಗಳಿಂದ ಲಭ್ಯವಾಗಿವೆ. ಸದ್ಯಕ್ಕೆ ಆ ಮಾಹಿತಿಗಳಿಂದಲೇ ನಾವು ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಪ್ರಾಚೀನ ಕಾಲದಲ್ಲಿ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಆಗಾಗ್ಗೆ ಕರಗಿಸುತ್ತಿದ್ದರು. ಅದರಲ್ಲಿಯೂ ಒಂದು ರಾಜವಂಶದ ಪತನವಾಗಿ ಇನ್ನೊಂದು ರಾಜವಂಶವು ಅಧಿಕಾರಕ್ಕೆ ಬಂದಾಗ, ಆ ಹಳೆಯ ನಾಣ್ಯಗಳನ್ನು ಕರಗಿಸಿ, ಹೊಸ ರಾಜವಂಶದ ನಾಣ್ಯಗಳನ್ನು ಟಂಕಿಸುತ್ತಿದ್ದರು. ಹೀಗಾಗಿ ಅನೇಕ ರಾಜವಂಶಗಳ ನಾಣ್ಯಗಳು ತೀರ ಕಡಿಮೆ ಸಂಖ್ಯೆಯಲ್ಲಿ ನಮಗೆ ಉಪಲಬ್ಧವಾಗಿವೆ. ಆದರೆ ಶಾಸನಗಳನ್ನು ಗಮನಿಸಿದಾಗ, ಅವುಗಳಲ್ಲಿ ನೂರಾರು ವ್ಯವಹಾರಗಳಲ್ಲಿ ನಾಣ್ಯಗಳು ಉಪಯೋಗವಾಗಿರುವುದು ನಮ್ಮ ಗಮನ ಸೆಳೆಯುತ್ತದೆ. ಅದರಲ್ಲಿಯೂ ದೇವಾಲಯಗಳಿಗೆ ಪೂಜಾ ಕೈಂಕರ್ಯಗಳಿಗೋಸ್ಕರ ದಾನ ಕೊಡುವುದು, ಬ್ರಾಹ್ಮಣರಿಗೆ ದಕ್ಷಿಣೆ ಕೊಡುವುದು, ಭೂಮಿಯ ಕ್ರಯ, ವಿದ್ಯಾ ಕೇಂದ್ರಗಳಿಗೆ ದಾನ ಮುಂತಾದ ವ್ಯವಹಾರಗಳಲ್ಲಿ ಹತ್ತಾರು ರೀತಿಯ ನಾಣ್ಯಗಳನ್ನು ರಾಷ್ಟ್ರಕೂಟರ ಕಾಲದಲ್ಲಿ ಬಳಸಿದ್ದುದು ನಮ್ಮ ಗಮನವನ್ನು ಸೆಳೆಯುತ್ತದೆ. ರಾಷ್ಟ್ರಕೂಟರ ಶಾಸನಗಳಿಂದ ತಿಳಿದುಬರುವ ನಾಣ್ಯಶಾಸ್ತ್ರ ಮಾಹಿತಿಯನ್ನು ಈಗ ಗಮನಿಸಬಹುದು.

ಇವರ ಶಾಸನಗಳಲ್ಲಿ ಆಗಾಗ್ಗೆ ಉಲ್ಲೇಖಿತವಾಗಿರುವ ನಾಣ್ಯಗಳೆಂದರೆ, ದ್ರಮ್ಮ ಸುವರ್ಣ, ಗದ್ಯಾಣ, ಕಳಂಜು, ಕಾಸು, ಮಂಜಡಿ ಮತ್ತು ಅಕ್ಕಂ. ದ್ರಮ್ಮ ಎನ್ನುವುದು ಗ್ರೀಕ್ ಡ್ರಾಕ್ಮ ಎಂಬುದರ ಇನ್ನೊಂದು ರೂಪ. ಇದೊಂದು ಚಿನ್ನದ ನಾಣ್ಯ. ಸಾಮಾನ್ಯವಾಗಿ ಚಿನ್ನದ ನಾಣ್ಯ ಎಂಬುದಕ್ಕೆ ದ್ರಮ್ಮ ಎಂಬ ಪದವನ್ನೂ ಉಪಯೋಗಿಸುತ್ತಿದ್ದರೇ ಹೊರತು, ಗ್ರೀಕ್ ದ್ರಮ್ಮಗಳೇ ಇಲ್ಲಿ ಬಳಕೆಯಲ್ಲಿರಲಿಲ್ಲವೆಂಬುದನ್ನು ಗಮನಿಸಬೇಕು. ಹೆಸರೇ ತಿಳಿಸುವಂತೆ ಸುವರ್ಣ ಎಂಬುದು ಚಿನ್ನದ ನಾಣ್ಯ. ಆಗಲೇ ಗಮನಿಸಿರುವಂತೆ ಇದು ಉತ್ತರ ಭಾರತದಲ್ಲಿ ವಿಶೇಷವಾಗಿ ಚಲಾವಣೆಯಲ್ಲಿದ್ದ ನಾಣ್ಯ. ಗದ್ಯಾಣವೆಂಬುದು ಕರ್ನಾಟಕದಲ್ಲಿದ್ದ ಅತ್ಯಂತ ವರಿಷ್ಠ ಚಿನ್ನದ ನಾಣ್ಯ. ಅಳತೇಕರ್ ಅವರ ಪ್ರಕಾರ ಈ ಕಾಲದ ಗದ್ಯಾಣದ ತೂಕ 96 ಗ್ರೇನ್. ಕಳಂಜು ಎನ್ನುವುದು ಈ ಕಾಲದ ಇನ್ನೊಂದು ನಾಣ್ಯ. ಒಂದು ಶಾಸನದ ಪ್ರಕಾರ ಒಂದು ಗದ್ಯಾಣಕ್ಕೆ ಎರಡು ಕಳಂಜುಗಳು ಸಮ. ಆದುದರಿಂದ ಕಳಂಜುವಿನ ತೂಕ 48 ಗ್ರೇನ್‌ಗಳು ಎಂದು ತಿಳಿಯಬಹುದು.

ಸಾಮಾನ್ಯವಾಗಿ ಈ ನಾಣ್ಯ ತಮಿಳುನಾಡಿನಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದಿತು. ಅಲ್ಲಿ ಅದು ತೂಕದ ಬಟ್ಟಾಗಿಯೂ ಉಪಯೋಗದಲ್ಲಿದ್ದಿತು. ಕರ್ನಾಟಕದಲ್ಲಿ ಈ ನಾಣ್ಯದ ಬಳಕೆ ತೀರ ಕಡಿಮೆ. ಕಾಸು ಎನ್ನುವುದು ಮತ್ತೊಂದು ಚಿನ್ನದ ನಾಣ್ಯ. ರಾಷ್ಟ್ರಕೂಟರ ಶಾಸನವೊಂದರಿಂದ ಏಳು ಕಳಂಜುಗಳಿಗೆ ಇಪ್ಪತ್ತು ಕಾಸುಗಳು ಸಮ ಎಂದು ತಿಳಿದು ಬರುತ್ತದೆ. ಆದುದರಿಂದ ಒಂದು ಕಾಸಿನ ತೂಕ 15 ಗ್ರೇನ್‌ಗಳಾಗುತ್ತವೆ. ಮಂಜಡಿ ಎಂಬುದು ಈ ಕಾಲದ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಮತ್ತೊಂದು ನಾಣ್ಯ. ಒಂದು ಶಾಸನದ ಪ್ರಕಾರ ಒಂದು ಕಳಂಜುವಿಗೆ ಇಪ್ಪತ್ತು ಮಂಜಡಿಗಳು ಸಮ. ಆದುದರಿಂದ ಒಂದು ಮಂಜಡಿ ನಾಣ್ಯದ ತೂಕ 2.8 ಗ್ರೇನ್. ಅಕ್ಕಂ ಎನ್ನುವುದು ಇನ್ನೊಂದು ನಾಣ್ಯ. ಹನ್ನೆರಡು ಅಕ್ಕಂ ನಾಣ್ಯಗಳು ಒಂದು ಕಾಸಿಗೆ ಸಮ ಎಂದು ಶಾಸನವೊಂದು ತಿಳಿಸುತ್ತದೆ. ಆದುದರಿಂದ ಒಂದು ಅಕ್ಕಂ ನಾಣ್ಯದ ತೂಕ 1.5 ಗ್ರೇನ್. ರಾಷ್ಟ್ರಕೂಟರ ಶಾಸನಗಳಿಂದ ದೊರಕುವ ಈ ಮಾಹಿತಿಗಳನ್ನು ಕ್ರೋಡೀಕರಿಸಿದರೆ ಈ ಕೆಳಗಿನ ನಾಣ್ಯ ಕೋಷ್ಟಕವನ್ನು ರಚಿಸಬಹುದು.

ದ್ರಮ್ಮ = ಸುವರ್ಣ = ಗದ್ಯಾಣ = 96 ಗ್ರೇನ್

1 ಗದ್ಯಾಣ = 2 ಕಳಂಜು = 96 ಗ್ರೇನ್

20 ಕಾಸು = 7 ಕಳಂಜು; 1 ಕಾಸು = 15 ಗ್ರೇನ್

1 ಕಳಂಜು = 20 ಮಂಜಡಿ; 1 ಮಂಜಡಿ = 2.8 ಗ್ರೇನ್

1 ಕಾಸು = 12 ಅಕ್ಕಂ; 1 ಅಕ್ಕಂ = 1.5 ಗ್ರೇನ್

ಇತ್ತೀಚಿಗೆ ಮುಕುಂದ ಪ್ರಭು ಅವರು ಒಂದು ಚಿನ್ನದ ನಾಣ್ಯವನ್ನು ರಾಷ್ಟ್ರಕೂಟ ಮೂರನೆಯ ಕೃಷ್ಣನಿಗೆ ಸೇರಿದ್ದೆಂದು ಅಭಿಪ್ರಾಯಪಟ್ಟಿದ್ದಾರೆ. ಈ ನಾಣ್ಯದ ವಿವರಗಳು ಹೀಗಿವೆ :

ಮು : ಅಲಂಕೃತವಾದ ಆನೆ

ಹಿ : ಎರಡು ಗೆರೆಗಳ ನಡುವೆ

ಶ್ರೀ ಛಲಕೆ

ನಲ್ಲಾತ ಎಂಬ ಕನ್ನಡ ಬರಹ

ರಾಷ್ಟ್ರಕೂಟ ಮೂರನೆಯ ಕೃಷ್ಣನಿಗೆ ಛಲಕೆ ನಲ್ಲಾತ, ಆನೆ ವಿಡಂಗ, ಮದಗಜಮಲ್ಲ ಎಂಬ ಬಿರುದುಗಳಿದ್ದುದು ಬಾಗಳಿ ಮತ್ತು ಸೊರಟೂರು ಶಾಸನಗಳಿಂದ ತಿಳಿಯುತ್ತದೆ. ಈ ಶಾಸನಗಳಲ್ಲಿ ಆನೆಯ ಪೊನ್ ಗದ್ಯಾಣವನ್ನು ದಾನವಾಗಿ ಕೊಟ್ಟ ವಿಷಯವೂ ಪ್ರಸ್ತಾಪಿತವಾಗಿದೆ. ಆದುದರಿಂದ ಈ ನಾಣ್ಯವನ್ನು ಆನೆಯ ಪೊನ್ ಗದ್ಯಾಣವೆಂದು

ಕರೆಯುತ್ತಿದ್ದುದು, ಅದರ ಮೇಲಿರುವ ಆನೆಯ ಚಿತ್ರದಿಂದ ಸ್ಪಷ್ಟಗೊಳ್ಳುತ್ತದೆ. ಛಲಕೆ ನಲ್ಲಾತ ಎಂಬ ಬಿರುದು ಮೂರನೆಯ ಕೃಷ್ಣನಿಗಿದ್ದುದರಿಂದ ಈ ನಾಣ್ಯ ಇದೇ ರಾಷ್ಟ್ರಕೂಟ ದೊರೆಗೆ ಸಂಬಂಧಿಸಿದ್ದು ಎಂದು ತೀರ್ಮಾನಿಸಬಹುದು.



ಇತ್ತೀಚಿಗೆ ನಿತ್ಯಾನಂದ ಪೈ ಅವರು ರಾಷ್ಟ್ರಕೂಟ ನಾಲ್ಕನೆಯ ಗೋವಿಂದನಿಗೆ ಸೇರಿದ ಚಿನ್ನದ ನಾಣ್ಯವನ್ನು ಪ್ರಕಟಿಸಿದ್ದಾರೆ. ಇದರ ತೂಕ 66 ಗ್ರೇನ್, ಅಗಲ 0.6".

ಮು : ಚುಕ್ಕಿಯ ವೃತ್ತದೊಳಗೆ ಮುಂಗಾಲುಗಳನ್ನು ಮೇಲೆತ್ತಿಕೊಂಡಿರುವ ಸಿಂಹ

ಹಿ : ಚುಕ್ಕಿಯ ವೃತ್ತದೊಳಗೆ ಎರಡು ಸಾಲುಗಳ ಕನ್ನಡ ಬರಹ

ಶ್ರೀ ನನ್ನಿ

ವೆಡೆಂಗ

ಕ್ರಿ.ಶ. 930ರಿಂದ 934ರವರೆಗೆ ಆಳಿದ ನಾಲ್ಕನೆಯ ಗೋವಿಂದನಿಗೆ ಪ್ರಭೂತವರ್ಷ ಮತ್ತು ನನ್ನಿವೆಡೆಂಗ ಎಂಬ ಬಿರುದುಗಳಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. ಆದುದರಿಂದ ಈ ನಾಣ್ಯವನ್ನು ಟಂಕಿಸಿದವನು ನಾಲ್ಕನೆಯ ಗೋವಿಂದನೆಂದು ಖಚಿತವಾಗುತ್ತದೆ.



ಈ ಹಿಂದೆ 'ಪರಮ ಮಾಹೇಶ್ವರ ಮಾತಾಪಿತೃನುಧ್ಯಾತ ಶ್ರೀ ಕೃಷ್ಣರಾಜಸ್ಯ' ಎಂಬ ನಾಗರೀ ಬರಹವುಳ್ಳ ಚಿನ್ನದ ನಾಣ್ಯಗಳನ್ನು ರಾಷ್ಟ್ರಕೂಟ ಮೊದಲನೆಯ ಕೃಷ್ಣನಿಗೆ ಸಂಬಂಧಿಸಿದ್ದು ಎಂದು ಭಾವಿಸಲಾಗಿತ್ತು. ಆನಂತರದ ಸಂಶೋಧನೆಗಳಿಂದ ಈ ಬೆಳ್ಳಿಯ ನಾಣ್ಯಗಳು ಕಳಚೂರಿ ದೊರೆ ಕೃಷ್ಣರಾಜನಿಗೆ ಸೇರಿದ್ದೆಂದು ತಿಳಿದುಬಂದಿತು. ಮಳಖೇಡದಲ್ಲಿ ದೊರಕಿದ ಕೆಲವು ತಾಮ್ರದ ನಾಣ್ಯಗಳ ಮೇಲೆ ಕಾಕರಾಯ ಎಂಬ ಬರಹವಿದೆ ಎಂದು ಭಾವಿಸಿ, ಅವುಗಳನ್ನು ರಾಷ್ಟ್ರಕೂಟ ಕರ್ಕರಾಜನಿಗೆ ಸೇರಿದ್ದೆಂದು ಭಾವಿಸಲಾಗಿತ್ತು. ಈ ನಾಣ್ಯಗಳನ್ನು ಮತ್ತೆ ಪರೀಕ್ಷಿಸಿದಾಗ ಇವುಗಳ ಮೇಲಿನ ಬರಹ 'ಕಾಕತೀಯ' ಎಂದು ತಿಳಿದುಬಂದಿತು. ಇದೇ ರೀತಿಯಲ್ಲಿ ಮಾನ, ಪರ ಎಂಬ ಬರಹ ಹೊಂದಿದ್ದ ಚಿನ್ನದ ನಾಣ್ಯಗಳನ್ನು (ಮಾನ್ಯಖೇಟ, ಪರಮೇಶ್ವರ) ರಾಷ್ಟ್ರಕೂಟರ ಗದ್ಯಾಣಗಳು ಎಂದು ಭಾವಿಸಲಾಗಿತ್ತು. ಆದರೆ ಇವು ಈ ವಂಶದ ನಾಣ್ಯಗಳಲ್ಲವೆಂಬುದು ಈಗ ಸ್ಪಷ್ಟವಾಗಿದೆ. ಒಟ್ಟಿನಲ್ಲಿ ಹೊಸ ನಾಣ್ಯಗಳು ದೊರಕುವವರೆಗೂ, ರಾಷ್ಟ್ರಕೂಟರ ನಾಣ್ಯಗಳ ಬಗೆಗಿನ ಮಾಹಿತಿ ಅಸ್ಪಷ್ಟವಾಗಿಯೇ ಉಳಿಯುತ್ತದೆ. ಹೊಸ ಅನ್ವೇಷಣೆಗಳಿಂದ ಮಾತ್ರ ಇವರ ಹೊಸ ನಾಣ್ಯಗಳನ್ನು ಪತ್ತೆ ಹಚ್ಚುವುದು ಸಾಧ್ಯ.

○

ಅಧ್ಯಾಯ 4

ಉತ್ತರ ಪ್ರಾಚೀನ ಕಾಲದ ನಾಣ್ಯಗಳು

ಕಲ್ಯಾಣದ ಚಾಲುಕ್ಯರ ಕಾಲದಿಂದ ಆರಂಭವಾಗಿ, ಹೊಯ್ಸಳರ ಪತನದವರೆಗಿನ ಕಾಲವನ್ನು ಪ್ರಾಚೀನ ಕಾಲದ ಉತ್ತರಾರ್ಧವೆಂದು ಕರೆಯಬಹುದು. ಕ್ರಿ.ಶ. ಹತ್ತನೆಯ ಶತಮಾನದ ಮಧ್ಯಭಾಗದಿಂದ ಕ್ರಿ.ಶ. ಹದಿನಾಲ್ಕನೆಯ ಶತಮಾನದವರೆಗಿನ ಕಾಲವೆಂದೂ ಇದನ್ನು ಗುರುತಿಸಬಹುದು. ಈ ಅವಧಿಯಲ್ಲಿ ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ದೇವಗಿರಿಯ ಸೇವುಣರು, ಕಲಚೂರಿಗಳು, ಗೋವೆಯ ಕದಂಬರು ಹಾಗೂ ತುಳುನಾಡಿನ ಆಳುಪರು ತಮ್ಮ ತಮ್ಮ ರಾಜ್ಯಗಳಲ್ಲಿ ರಾಜ್ಯಭಾರ ನಡೆಸಿದರು. ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ ಸೇವುಣರು ಮತ್ತು ಹೊಯ್ಸಳರು ಮುಸ್ಲಿಮರ ದಾಳಿಗೆ ತುತ್ತಾದರು. ಆದರೆ ಇದರ ಬೆನ್ನಿನಲ್ಲೇ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಯಿತು. ಇಲ್ಲಿಗೆ ಪ್ರಾಚೀನ ಕರ್ನಾಟಕದ ಮುಖ್ಯವಾದ ಘಟ್ಟ ಮುಗಿದು ಮಧ್ಯಕಾಲೀನ ಕರ್ನಾಟಕದ ಆರಂಭವನ್ನು ಗುರುತಿಸಬಹುದು.

ನಾಣ್ಯಶಾಸ್ತ್ರದ ದೃಷ್ಟಿಯಿಂದ, ಈ ಹಿಂದೆ ಕಂಡುಬಂದಿದ್ದ ಅಸ್ಪಷ್ಟತೆ ಈ ಕಾಲದಲ್ಲಿ ಮಾಯವಾಗುತ್ತದೆ. ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ವಿಶೇಷವಾಗಿ ದೊರಕುತ್ತವೆ. ಹೆಚ್ಚು ಕಡಿಮೆ ಪ್ರಮುಖ ರಾಜರ ನಾಣ್ಯಗಳು ದೊರಕಿರುವುದು ಸಂತೋಷದ ವಿಷಯ. ನಾಣ್ಯಗಳ ಮೇಲೆ ಬರವಣಿಗೆ ಕಂಡುಬಂದು, ಈ ನಾಣ್ಯಗಳು ಯಾವ ರಾಜವಂಶಕ್ಕೆ ಅಥವಾ ದೊರೆಗೆ ಸೇರಿದ್ದೆಂಬ ಅಂಶವೂ ಸ್ಪಷ್ಟವಾಗುತ್ತದೆ. ಈ ಕಾಲದಲ್ಲಿ ಶಾಸನಗಳ ಸಂಖ್ಯೆಯೂ ವಿಶೇಷವಾಗಿ ಹೆಚ್ಚುವುದರಿಂದ, ನಾಣ್ಯಗಳಿಗೆ ಸಂಬಂಧಿಸಿದಂತೆ ಮಾಹಿತಿಗಳು ವಿಶೇಷವಾಗುತ್ತವೆ. ಕೆಲವು ಶಾಸನಗಳು ನಾಣ್ಯಗಳ ತಾಂತ್ರಿಕತೆಯನ್ನೂ ಕುರಿತು ಮಾಹಿತಿ ನೀಡುತ್ತವೆ. ನಾಣ್ಯಗಳ ಪರಸ್ಪರ ಸಂಬಂಧಗಳನ್ನು ತಿಳಿಸುವ ಶಾಸನಗಳ ಸಂಖ್ಯೆ ಹೆಚ್ಚಾಗುತ್ತದೆ. ಅನೇಕ ಶಾಸನಗಳಲ್ಲಿ ಟಂಕಶಾಲೆಗಳ ಹೆಸರೂ ಕಾಣಬರುತ್ತವೆ. ಈ ಎಲ್ಲ ದೃಷ್ಟಿಗಳಿಂದ ಈ ಕಾಲದ ನಾಣ್ಯಗಳ ಅಧ್ಯಯನ ಹೆಚ್ಚು ಉಪಯುಕ್ತವೆನಿಸುತ್ತದೆ. ಅಷ್ಟೇ ಅಲ್ಲದೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಇತಿಹಾಸದ ರಚನೆಗೆ ಉತ್ತಮವಾದ ಮಾಹಿತಿಯನ್ನೂ ನೀಡುತ್ತವೆ. ಇದೊಂದು ಸ್ವಾಗತಾರ್ಹ ಸಂಗತಿ.

1. ಕಲ್ಯಾಣದ ಚಾಲುಕ್ಯರ ನಾಣ್ಯಗಳು

ಕಲ್ಯಾಣದ ಚಾಲುಕ್ಯರ ಶಾಸನಗಳನ್ನು ಗಮನಿಸಿದರೆ, ಈ ಕಾಲದಲ್ಲಿ, ಗದ್ಯಾಣ, ದ್ರಮ್ಮ, ಹೊನ್ನು, ಪಣ, ಹಾಗೂ ಕಾಗಿನಿ, ವೀಸ, ಗುಳಿಕೆ ಮತ್ತು ಬೇಳೆ ಎಂಬ ನಾಣ್ಯಗಳು ವಿಶೇಷವಾಗಿ ಚಲಾವಣೆಯಲ್ಲಿದ್ದವು ಎಂಬುದು ಗೊತ್ತಾಗುತ್ತದೆ. ಈ ನಾಣ್ಯಗಳು ರಾಜ್ಯದಲ್ಲಿದ್ದ ವಿವಿಧ ಟಂಕಶಾಲೆಗಳಲ್ಲಿ ತಯಾರಾಗುತ್ತಿದ್ದವು. ಲೊಕ್ಕಿಗುಂಡಿ ಅಥವಾ ಲಕ್ಕುಂಡಿಯಲ್ಲಿ ಅತ್ಯಂತ ಮುಖ್ಯವಾದ ಟಂಕಶಾಲೆಯಿದ್ದಿತು. ಇಲ್ಲಿ ತಯಾರಾದ ನಾಣ್ಯಗಳ ಜೊತೆಗೆ ಈ ಟಂಕಶಾಲೆಯ ಹೆಸರನ್ನೂ ಜೋಡಿಸಿ, ಲೊಕ್ಕಿಗುಂಡಿ ಗದ್ಯಾಣ ಅಥವಾ ಲೊಕ್ಕಿಪೊನ್ ಅಥವಾ ಲೊಹೊನ್ ಎಂದು ಕರೆಯುವುದು ವಾಡಿಕೆಯಾಗಿದ್ದಿತು. ಈ ರೀತಿ ಲೊಕ್ಕಿಗುಂಡಿಯ ಟಂಕಶಾಲೆಯಲ್ಲಿ ತಯಾರಾದ ನಾಣ್ಯಗಳ ಉಲ್ಲೇಖ ಶಾಸನಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುತ್ತದೆ. ಮತ್ತೊಂದು ಟಂಕಶಾಲೆಯು ಸೂಡಿ ಎಂಬಲ್ಲಿತ್ತು ಎನ್ನುವುದು ತ್ರಿಭುವನಮಲ್ಲನ ಕಾಲದ ಶಾಸನದಿಂದ ತಿಳಿಯುತ್ತದೆ. ಉತ್ತವೋಜ ಎಂಬ ಸುವರ್ಣ ಕುಶಲಕರ್ಮಿಯು ಈ ಟಂಕಶಾಲೆಯ ಮುಖ್ಯ ಟಂಕಾಧಿಕಾರಿಯಾಗಿದ್ದನು. ಇಲ್ಲಿ ಕಮ್ಮಟೇಶ್ವರ ಎನ್ನುವ ದೇವಾಲಯವೂ ಇದ್ದಿತು. ಇದಕ್ಕೂ ಈ ಟಂಕಶಾಲೆಗೂ ನಿಕಟ ಸಂಪರ್ಕವಿದ್ದು, ಟಂಕಶಾಲೆಯು ಅನೇಕ ದತ್ತಿ - ದಾನಗಳನ್ನು ಈ ದೇವಾಲಯಕ್ಕೆ ನೀಡುತ್ತಿದ್ದಿತು. ಈ ಟಂಕಶಾಲೆಯಲ್ಲಿ ಚಿನ್ನದ ನಾಣ್ಯಗಳು ತಯಾರಿಸಲ್ಪಡುತ್ತಿದ್ದವು. ಟಂಕಾಧಿಕಾರಿ ಉತ್ತವೋಜನು ಉನ್ನತ ಅಧಿಕಾರಿಯಾಗಿದ್ದುದರಿಂದ ರಾಜನ ಮೊಹರಿದ್ದ (ಉಂಡಿಗೆ) ಕಮ್ಮಟದ ಆಣೆಯನ್ನು ಸ್ವತಃ ಇಟ್ಟುಕೊಂಡು, ನಾಣ್ಯವನ್ನು ತಯಾರು ಮಾಡುವಾಗ ಬಳಸುವ ಅಧಿಕಾರವನ್ನು ಹೊಂದಿದ್ದನು. ಅವನ ಅಪ್ಪಣೆಯ ಮೇರೆಗೆ ಈ ಟಂಕ ಶಾಲೆಯಲ್ಲಿ ಚಿನ್ನದ ನಾಣ್ಯಗಳು ತಯಾರಾಗುತ್ತಿದ್ದವು. ನಾಲ್ಕನೆಯ ಸೋಮೇಶ್ವರನ ಕಾಲದ ಲಕ್ಕುಂಡಿ ಶಾಸನವು ಇನ್ನೂ ಕೆಲವು ತಾಂತ್ರಿಕ ವಿಷಯಗಳನ್ನು ನೀಡುತ್ತದೆ. ಇಲ್ಲಿನ ಟಂಕಶಾಲೆಯಲ್ಲಿ ಅಚ್ಚು, ಆಣೆ, ಅಚ್ಚಿನ ಕಾಣೆ, ಮತ್ತು ಅಚ್ಚಿನ ಮೊಳೆಗಳನ್ನು ಬಳಸುತ್ತಿದ್ದರು. ಇವೆಲ್ಲವೂ ನಾಣ್ಯಗಳನ್ನು ಟಂಕಿಸಲು ಬೇಕಾದ ತಾಂತ್ರಿಕ ಸಲಕರಣೆಗಳಾದರೂ, ಅವುಗಳ ಖಚಿತವಾದ ಸ್ವರೂಪ ಗೊತ್ತಿಲ್ಲವೆಂದೇ ಹೇಳಬೇಕು. ಇದೇ ಶಾಸನದಲ್ಲಿ ಬೆಳ್ಳಿಯಗಮ್ಮಟದ ಪ್ರಸ್ತಾಪವಿದೆ. ಆದುದರಿಂದ ಇಲ್ಲಿ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಟಂಕಿಸುತ್ತಿದ್ದುದು ಖಚಿತವಾಗುತ್ತದೆ.

ಸಾಮಾನ್ಯವಾಗಿ ನಾಣ್ಯಗಳನ್ನು ಟಂಕಿಸುವುದು ಸರ್ಕಾರದ ಅಥವಾ ರಾಜನ ಅಧಿಕಾರ ಮತ್ತು ಅದು ರಾಜತ್ವದ ಸಂಕೇತ ಕೂಡ. ಈ ಹಕ್ಕನ್ನು ರಾಜರು ತಮ್ಮಲ್ಲಿ ಇಟ್ಟುಕೊಂಡು ಪರವಾನಗಿ ಪಡೆದ ಕೆಲವು ಖಾಸಗಿ ವರ್ತಕ ಸಂಸ್ಥೆಗಳಿಗೆ ಅಥವಾ ಗಣ್ಯರಿಗೂ ಕೊಡುತ್ತಿದ್ದರು ಎಂಬುದು ಚಾಲುಕ್ಯರ ಕಾಲದ ಶಾಸನಗಳಿಂದ ತಿಳಿದುಬರುತ್ತದೆ. ಅಂದರೆ ನಾಣ್ಯಗಳ ರೂಪ, ತೂಕ, ಅಳತೆ ಮುಂತಾದ ವಿಷಯಗಳ ಮೇಲೆ ಚಾಲುಕ್ಯ ರಾಜರು ತಮ್ಮ

ಹತೋಟಿಯನ್ನು ಇಟ್ಟುಕೊಂಡು, ಇದಕ್ಕೆ ಅನುಗುಣವಾಗಿ ನಾಣ್ಯಗಳನ್ನು ಟಂಕಿಸುವ ಕೆಲಸವನ್ನು ಮಾತ್ರ ವರ್ತಕ ಸಂಸ್ಥೆಗಳಿಗೆ ಮತ್ತು ಕೆಲವು ವ್ಯಕ್ತಿಗಳಿಗೆ ಗುತ್ತಿಗೆಯ ಆಧಾರದ ಮೇಲೆ ಕೊಡುತ್ತಿದ್ದರು. ಅಂದರೆ ಇಂತಹವರನ್ನು ಆರಿಸುವಾಗ ಚಿನ್ನ, ಬೆಳ್ಳಿ ಕೆಲಸ ಕಾರ್ಯಗಳಲ್ಲಿ ನಿಷ್ಣಾತರೂ ನಂಬಿಕೆಗೆ ಅರ್ಹರಾದವರೂ ಆದ ಜವಾಬ್ದಾರಿಯುತ ಪ್ರಾಮಾಣಿಕ ವ್ಯಕ್ತಿಗಳನ್ನು ನಿಯಮಿಸುತ್ತಿದ್ದರು. ಸಾಮಾನ್ಯವಾಗಿ ಸೆಟ್ಟಿಗಳು ಈ ಕೆಲಸವನ್ನು ನಿರ್ವಹಿಸುತ್ತಿದ್ದರು. ಇವರು ತಮ್ಮ ಕೈಕೆಳಗೆ ಕುಶಲ ಕರ್ಮಿಗಳನ್ನು ನಿಯಮಿಸಿಕೊಂಡು, ಅವರಿಂದ ಕೆಲಸ ಮಾಡಿಸುತ್ತಿದ್ದರು. ಬಿಡಿಗಮ್ಮಟ್ಟ ಅಥವಾ ಚಿನ್ನ - ಬೆಳ್ಳಿಯ ಚೂರುಗಳಿಗೆ ಆಕಾರವನ್ನು ಕೆಲವರೂ ಕೊಡುತ್ತಿದ್ದರು; ಮತ್ತೆ ಕೆಲವರು ಈ ರೀತಿಯ ಚೂರುಗಳನ್ನು ಸಮವಾಗಿ ಉಜ್ಜಿ ಸರಿಯಾದ ಆಕಾರ / ತೂಕಕ್ಕೆ ತರುತ್ತಿದ್ದರು. ಇವರೇ ಸೌ(ಚೌ)ಕಟ್ಟುಕಾರ ಅಥವಾ ಸಮಕಟ್ಟುಕಾರರು. ಮತ್ತೆ ಕೆಲವರು ಈ ರೀತಿಯ ಚೂರುಗಳ ಮೇಲೆ, ರಾಜಚಿಹ್ನೆಯಿರುವ ಉಂಡಿಗೆಯಿಂದ ಮುದ್ರೆಯನ್ನು ಒತ್ತಿ ನಾಣ್ಯವನ್ನು ಚಲಾವಣೆಗೆ ಬಿಡುಗಡೆ ಮಾಡುತ್ತಿದ್ದರು. ಸಾಮಾನ್ಯವಾಗಿ ಎಷ್ಟು ನಾಣ್ಯಗಳನ್ನು ತಯಾರುಮಾಡುತ್ತಿದ್ದರೋ, ಅದರ ಪ್ರಕಾರ ಸ್ಥಳೀಯ ಕಮ್ಮಟೇಶ್ವರ ದೇವಾಲಯಗಳಿಗೆ ದಾನಗಳನ್ನು ಕೊಡುತ್ತಿದ್ದರು. ಒಂದು ಶಾಸನವು ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಇದರ ಪ್ರಕಾರ ಬೇಲೂರು ತಾಲೂಕಿನ ಮಾದೇನಹಳ್ಳಿಯ ಆಚಾರಿಗಳು ಒಂದು ಸಾವಿರದ ಅಚ್ಚಿನ ಮೊಳಿಗೆ, ಪ್ರತಿದಿನಕ್ಕೆ ಒಂದು ಹಾಗ ನಾಣ್ಯದಂತೆ ದೇವಾಲಯಕ್ಕೆ ದಾನ ನೀಡುತ್ತಿದ್ದರು.

ನಾವು ಆಗಲೇ ಗಮನಿಸಿರುವಂತೆ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಕರಗಿಸಿ ಹೊಸ ನಾಣ್ಯಗಳನ್ನು ಟಂಕಿಸುವ ಪದ್ಧತಿ ಪ್ರಾಚೀನ ಕಾಲದಲ್ಲಿ ವಿಶೇಷವಾಗಿ ಪ್ರಚಲಿತವಾಗಿದ್ದಿತು. ನಾಣ್ಯಗಳು ಸವೆದು ಹೋದರೆ, ಇಲ್ಲವೇ ಹೊಸ ರಾಜವಂಶ ಅಥವಾ ಹೊಸ ರಾಜನು ಅಧಿಕಾರಕ್ಕೆ ಬಂದರೆ, ನಾಣ್ಯಗಳನ್ನು ಹೊಸದಾಗಿ ಟಂಕಿಸುವ ಪ್ರಮೇಯ ಉದ್ಭವವಾಗುತ್ತಿದ್ದಿತು. ಆದುದರಿಂದಲೇ ಶಾಸನಗಳಲ್ಲಿ ಹಳೆಯ ನಾಣ್ಯ ಮತ್ತು ಹೊಸ ನಾಣ್ಯ ಎಂಬ ಪದಗಳು ಕಾಣಬರುತ್ತವೆ. ಈ ರೀತಿ ಹಳೆಯ ನಾಣ್ಯಗಳನ್ನು ಕರಗಿಸಿ ಹೊಸ ನಾಣ್ಯಗಳಾಗಿ ಪರಿವರ್ತಿಸುವ ಕಾರ್ಯ ಆಗಾಗ ನಡೆಯುತ್ತಿದ್ದಿತು. ಇದಕ್ಕೆ ಒಂದು ಉದಾಹರಣೆಯನ್ನು ಕುಡಿತಿನಿ ಎಂಬಲ್ಲಿ ದೊರಕಿರುವ ಚಾಲುಕ್ಯ ಕಾಲದ ಶಾಸನ ಒದಗಿಸುತ್ತದೆ. ಈ ಶಾಸನದ ಪ್ರಕಾರ ಎರಡು ರೀತಿಯ ಪೊನ್‌ಗಳಿದ್ದವು. ಮೊದಲನೆಯದು ನವಿಲಚ್ಚಿನ ಪೊನ್ ಮತ್ತು ಎರಡನೆಯದು ಲೊಕ್ಕಿ ಪೊನ್. ಬಹುಶಃ ಮೊದಲನೆಯದರಲ್ಲಿ ನವಿಲಿನ ಚಿತ್ರವಿದ್ದಿರಬೇಕು ಅಥವಾ ನವಿಲೂರು ಟಂಕಶಾಲೆಯಲ್ಲಿ ತಯಾರಾಗಿರಬೇಕು. ಎರಡನೆಯದು ಲೊಕ್ಕಿಗುಂಡಿ ಟಂಕಶಾಲೆಯಲ್ಲಿ ತಯಾರಾದ ಪೊನ್. ಸಾವಿಮೋಜ ಎನ್ನುವವನು ಲೊಕ್ಕಿ ಪೊನ್‌ಗಳನ್ನು ತೆಗೆದುಕೊಂಡು, ಅವುಗಳನ್ನು ಕರಗಿಸಿ, ಬಂದ ಚಿನ್ನದಿಂದ ನವಿಲಚ್ಚಿನ ಪೊನ್ನುಗಳನ್ನು ತಯಾರಿಸಲು ಅಧಿಕಾರ ಪಡೆದನು. ಲೊಕ್ಕಿಗುಂಡಿ

ಫೊನ್ ಚಿನ್ನದ ನಾಣ್ಯಗಳ ತೂಕ ಎಷ್ಟು ಇದ್ದಿತೋ, ಅಷ್ಟೇ ತೂಕದ ಹೊಸ ನಾಣ್ಯಗಳನ್ನು ಕೊಡಲು ಅವನು ಒಪ್ಪಿಕೊಂಡನು. ಇದಕ್ಕೆ ಪ್ರತಿಯಾಗಿ ಅವನು ವರ್ಷಕ್ಕೆ ಹನ್ನೆರಡು ಗದ್ಯಾಣಗಳನ್ನು ಸ್ವಾಮಿದೇವ ದೇವಾಲಯಕ್ಕೆ ಕೊಡಲೂ ಒಪ್ಪಿದನು. ಇದೊಂದು ಉತ್ತಮ ಉದಾಹರಣೆ.

ಮುಮ್ಮಡಿ ತೈಲನ ಕಾಲಕ್ಕೆ ಸೇರಿದ ಇನ್ನೊಂದು ಶಾಸನವು ಏಚಿಸೆಟ್ಟಿ ಎಂಬ ಟಂಕಾಧಿಕಾರಿಯ ಪರಿಚಯವನ್ನು ಮಾಡಿಕೊಡುತ್ತದೆ. ನರಗುಂದದ ಒಂದು ಭಾಗವಾದ ಹೇಮಂಗೇರಿಯಲ್ಲಿ ಒಂದು ಟಂಕಶಾಲೆಯು ಇದ್ದಿತು. ಇಲ್ಲಿ ಚಿನ್ನದ ನಾಣ್ಯಗಳನ್ನು ತಯಾರಿಸುತ್ತಿದ್ದರು. ಇದರ ಟಂಕಾಧಿಕಾರಿಯೇ ಏಚಿಸೆಟ್ಟಿ. ಇವನು ಬಹಳ ಪ್ರಾಮಾಣಿಕನಾಗಿಯೂ ಸಚ್ಚಾರಿತ್ರವುಳ್ಳವನಾಗಿಯೂ, ಕೆಟ್ಟಗುಣಗಳು ಇಲ್ಲದವನಾಗಿಯೂ ಇದ್ದುದರಿಂದ, ತೈಲ ಮಹಾರಾಜನು ಟಂಕಾಧಿಕಾರಿ ಕೆಲಸಕ್ಕೆ ಇವನೇ ಯೋಗ್ಯನೆಂದು ಭಾವಿಸಿ, ಆ ಕೆಲಸಕ್ಕೆ ಇವನನ್ನು ನಿಯಮಿಸಿದನು. ಅದಕ್ಕನುಗುಣವಾಗಿ ಏಚಿಸೆಟ್ಟಿಯು ಕಾರ್ಯವನ್ನು ನಿರ್ವಹಿಸಿದನು. ಅದನ್ನು ಗಮನಿಸಿದ ತೈಲನು ಇವನಿಗೆ ಹೇಮಕುಪ್ಪಟಿ ಎಂಬ ಬಿರುದನ್ನು ಕೊಟ್ಟನು. ಆ ಹೆಸರಿನಿಂದಲೇ, ಹೇಮಕುಪ್ಪಟಿ ಏಚಿಸೆಟ್ಟಿ ಎಂದು ಪ್ರಖ್ಯಾತನಾದನು. ಶಾಸನದಲ್ಲಿ ಇವನನ್ನು ಅಚ್ಚಿನ ಅಧಿಕಾರಿ ಎಂದು ಕರೆಯಲಾಗಿದೆ. ಇವನು ನಾಣ್ಯಗಳ ಶುದ್ಧಾಶುದ್ಧತೆಯನ್ನು ತೀರ್ಮಾನಿಸುವಲ್ಲಿ ಪರಿಣತಿಯನ್ನು ಹೊಂದಿದ್ದನು. ಈ ರೀತಿಯ ಹತ್ತಾರು ಟಂಕಾಧಿಕಾರಿಗಳು ಇದ್ದರೂ ಅವರ ಹೆಸರುಗಳು ನಮಗೆ ತಿಳಿದುಬಂದಿಲ್ಲ.

ಚಾಲುಕ್ಯರ ಶಾಸನಗಳಲ್ಲಿ ಅವರ ನಾಣ್ಯಗಳಿಗೆ ಸಂಬಂಧಿಸಿದ ಅನೇಕ ಪದಗಳು ದೊರಕುತ್ತವೆ. ಗದ್ಯಾಣವೇ ಈ ಕಾಲದ ಅತ್ಯಂತ ಹೆಚ್ಚಿನ ಮೌಲ್ಯದ ಚಿನ್ನದ ನಾಣ್ಯ. ಇದರ ತೂಕ 58 ಗ್ರೇನ್. ಶಾಸನಗಳಲ್ಲಿ ವಿವಿಧ ರೀತಿಯ ಗದ್ಯಾಣಗಳು ಹೆಸರಿಸಲ್ಪಟ್ಟಿವೆ. ಲೊಕ್ಕಿ ಗದ್ಯಾಣವೆಂಬುದು ಲೊಕ್ಕಿಗುಂಡಿಯಲ್ಲಿದ್ದ ಟಂಕಶಾಲೆಯಲ್ಲಿ ತಯಾರಾದ ನಾಣ್ಯವೆಂದು ನಾವು ಆಗಲೇ ಗಮನಿಸಿದ್ದೇವೆ. ಭೂಲೋಕಮಲ್ಲನ ಕೊಂಡುಗುಳಿ ಶಾಸನದಲ್ಲಿ ವರ್ತಕ ಲೊಕ್ಕಿಗದ್ಯಾಣ, ಕಟಕ ಗದ್ಯಾಣ ಮತ್ತು ಕಟಕಪ್ರಿಯ ಗದ್ಯಾಣಗಳೆಂಬ ನಾಣ್ಯಗಳ ಹೆಸರು ಕಾಣಬರುತ್ತದೆ. ವರ್ತಕ ಲೊಕ್ಕಿ ಗದ್ಯಾಣವೆಂದರೆ, ಲೊಕ್ಕಿಗುಂಡಿಯ ವರ್ತಕ ಶ್ರೇಣಿಯವರು ಟಂಕಿಸಿದ ಗದ್ಯಾಣವಿರಬಹುದು. ಕಟಕ ಎಂಬುದಕ್ಕೆ ರಾಜಧಾನಿ ಎನ್ನುವ ಅರ್ಥವಿರುವುದರಿಂದ ಇದು ರಾಜಧಾನಿಯ (ಕಲ್ಯಾಣನಗರ) ಟಂಕಶಾಲೆಯಲ್ಲಿ ತಯಾರಾದ ಗದ್ಯಾಣವಿದ್ದಿರಬೇಕೆಂದು ಹೇಳಬಹುದು. ಪ್ರಿಯಗದ್ಯಾಣವೆಂದರೆ ಚಿನ್ನದ ಅಂಶ ಜಾಸ್ತಿಯಿರುವ ಗದ್ಯಾಣವೆಂದು ಭಾವಿಸಲಾಗಿದೆ. ಇಮ್ಮಡಿ ಜಗದೇಕಮಲ್ಲನ ಕುರಹಟ್ಟಿ ಶಾಸನದಲ್ಲಿ ಲೊಕ್ಕಿಯಚ್ಚಿನ ಗದ್ಯಾಣದ ಪ್ರಸ್ತಾಪವಿದೆ. ಅಚ್ಚು ಎನ್ನುವ ಪದ ಟಂಕಶಾಲೆ ಎನ್ನುವ ಅರ್ಥದಲ್ಲಿಯೂ ಬಳಕೆಯಲ್ಲಿದ್ದುದರಿಂದ ಲೊಕ್ಕಿಗುಂಡಿಯ ಟಂಕಶಾಲೆಯಲ್ಲಿ

ಅಚ್ಚಾದ ಗದ್ಯಾಣವೆಂದು ಇದನ್ನು ವರ್ಣಿಸಬಹುದು. ಅದೇ ರೀತಿ ಮತ್ತೊಂದು ಶಾಸನವು ಲೊಕ್ಕಿ ಶ್ರಾಹೇಯ ಗದ್ಯಾಣವನ್ನು ಉಲ್ಲೇಖಿಸುತ್ತದೆ. ಶ್ರಾಹೇಯ ಎನ್ನುವ ಪದಕ್ಕೆ ಈಗ ಚಲಾವಣೆಯಲ್ಲಿರುವ ಅಥವಾ ಹೊಸ ಎನ್ನುವ ಅರ್ಥವಿದೆ. ಆದುದರಿಂದ ಈ ಮೇಲಿನ ನಾಣ್ಯವು ಪ್ರಸ್ತುತ ಕಾಲದಲ್ಲಿ ಚಲಾವಣೆಯಲ್ಲಿದ್ದ ನಾಣ್ಯ ಎಂದು ಭಾವಿಸಬಹುದು.

ಕೆಲವು ಶಾಸನಗಳಲ್ಲಿ ದೊರಕುವ ಮಾಹಿತಿಗಳಿಂದ, ಚಾಲುಕ್ಯರ ಕಾಲದ ನಾಣ್ಯಗಳ ಮೌಲ್ಯಗಳನ್ನು ತಿಳಿಯಬಹುದಾಗಿದೆ. ಉದಾಹರಣೆಗೆ ನಿಡುಗುಂಡಿ ಶಾಸನದಲ್ಲಿ ಐದು ಗದ್ಯಾಣ ಮತ್ತು ಹತ್ತು ಪಣಗಳು, ಆರು ಗದ್ಯಾಣಗಳಿಗೆ ಸಮ ಎಂದು ಹೇಳಿದೆ. ಆದುದರಿಂದ ಒಂದು ಗದ್ಯಾಣಕ್ಕೆ ಹತ್ತು ಪಣಗಳೆನ್ನುವುದು ಖಚಿತವಾಗುತ್ತದೆ. ಇತರ ಶಾಸನಗಳಿಂದ ದೊರೆಯುವ ಮಾಹಿತಿಗಳನ್ನು ಆಧರಿಸಿ ಚಾಲುಕ್ಯರ ಕಾಲದ ನಾಣ್ಯಗಳ ಮೌಲ್ಯವನ್ನು ಈ ರೀತಿ ತೋರಿಸಬಹುದು.

1 ಗದ್ಯಾಣ = 10 ಪಣ = 58 ಗ್ರೇನ್

1 ಪಣ = 4 ಹಾಗ

1 ಹಾಗ = 4 ಅಥವಾ 5 ವೀಸ

1 ಹಾಗ = 2 ಬೇಳೆ

ಕಲ್ಯಾಣ ಚಾಲುಕ್ಯರ ಶಾಸನಗಳು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಉಲ್ಲೇಖಿಸುತ್ತವೆಯಾದರೂ, ಇದುವರೆಗೆ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಮಾತ್ರ ದೊರಕಿವೆ. ಚಾಲುಕ್ಯರ ನಾಣ್ಯಗಳು ವೃತ್ತಾಕಾರದಲ್ಲಿದ್ದು, ಇವುಗಳ ಮೇಲೆ ಅನೇಕ ಪಂಚ್‌ಗಳಿರುತ್ತವೆ. ಹಿಮ್ಮುಖ ಖಾಲಿಯಾಗಿರುತ್ತದೆ. ಈ ಪಂಚ್‌ಗಳಲ್ಲಿ ಕನ್ನಡ ಅಕ್ಷರ ಶ್ರೀ, ರಾಜನ ಬಿರುದಿನ ಅಕ್ಷರಗಳು, ಸೂರ್ಯ, ಚಂದ್ರ, ಆನೆ, ಸಿಂಹ, ವರಾಹ, ದೇವಾಲಯದ ಗೋಪುರ ಮುಂತಾದ ಚಿಹ್ನೆಗಳಿರುತ್ತವೆ. ಇಷ್ಟೊಂದು ಪಂಚ್‌ಗಳನ್ನು ಚಿನ್ನದ ಹಾಗೂ ಬೆಳ್ಳಿಯ ತಗಡುಗಳ ಮೇಲೆ ಮಾಡುವುದರಿಂದ, ಈ ನಾಣ್ಯಗಳು ಸ್ವಲ್ಪ ಬಾಗಿದ್ದು ಬಟ್ಟಲಿನಾಕಾರವನ್ನು ಪಡೆಯುತ್ತವೆ. ಚಾಲುಕ್ಯರ ನಾಣ್ಯಗಳು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ದೊರಕಿವೆ. ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಕೊಡೂರು ಎಂಬಲ್ಲಿ 15,462 ಚಿನ್ನದ ನಾಣ್ಯಗಳು ದೊರಕಿದವು. ಅವುಗಳಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ನಾಣ್ಯಗಳು ಚಾಲುಕ್ಯರಿಗೆ ಸೇರಿವೆ. ಈ ನಾಣ್ಯರಾಶಿಯೇ ಚಾಲುಕ್ಯರ ನಾಣ್ಯಗಳನ್ನು ಅಧ್ಯಯನ ಮಾಡಲು ಮುಖ್ಯ ಆಕರ. ಹೊಸಕೋಟೆ ಕೃಷ್ಣಶಾಸ್ತ್ರಿಗಳು ಈ ನಾಣ್ಯಗಳ ಯಾದಿಯನ್ನು ತಯಾರಿಸಿ ತಮಿಳುನಾಡು ಸರ್ಕಾರದ ಆಶ್ರಯದಲ್ಲಿ ಅಧಿಕೃತ ದಾಖಲೆಯಾಗಿ ಪ್ರಕಟಿಸಿದ್ದಾರೆ. ದೊರಕಿರುವ ಚಾಲುಕ್ಯರ ನಾಣ್ಯಗಳನ್ನು ಈಗ ಗಮನಿಸಬಹುದು. ಆಳಿದ ಚಾಲುಕ್ಯ ರಾಜರಲ್ಲಿ ಕೆಲವರ ನಾಣ್ಯಗಳು ಮಾತ್ರ ಉಪಲಬ್ಧವಾಗಿವೆ.

ಇಮ್ಮಡಿ ಜಯಸಿಂಹನ ನಾಣ್ಯಗಳು (ಕ್ರಿ.ಶ. 1015-1044)

ಈ ವಂಶದಲ್ಲಿ ಜಯಸಿಂಹ ಎಂಬ ಹೆಸರಿನ ಮೂವರು ದೊರೆಗಳಿದ್ದರು. ಇವರಲ್ಲಿ ಇಮ್ಮಡಿ ಜಯಸಿಂಹ ಅತ್ಯಂತ ಪ್ರಸಿದ್ಧನಾಗಿದ್ದನು. ಇವನಿಗೆ ಒಂದನೆಯ ಜಗದೇಕಮಲ್ಲ ಎಂಬ ಬಿರುದೂ ಇದ್ದಿತು. ಆದುದರಿಂದ ಈ ರೀತಿಯ ಹೆಸರಿರುವ ನಾಣ್ಯಗಳೆಲ್ಲವೂ ಈ ದೊರೆಗೆ ಸೇರಿದ್ದೆಂದು ಭಾವಿಸಲಾಗಿದೆ. ಕೆಲವು ನಾಣ್ಯಗಳ ಮೇಲೆ ಹೆಸರಿದ್ದರೆ, ಮತ್ತೆ ಕೆಲವು ನಾಣ್ಯಗಳ ಮೇಲೆ ಜಗದೇಕಮಲ್ಲ ಎನ್ನುವ ಬಿರುದು ಕಾಣಬರುತ್ತದೆ. ಇದರಲ್ಲಿ ಅನೇಕ ನಮೂನೆಗಳನ್ನು ಗುರುತಿಸಬಹುದು.

ಮೊದಲನೆಯ ನಮೂನೆಯ ನಾಣ್ಯಗಳು 58-59 ಗ್ರೇನ್ ತೂಗುತ್ತವೆ; 0.75" ಅಳತೆ. ಇವುಗಳ ಮುಮ್ಮುಖದಲ್ಲಿ ಒಂಬತ್ತು ಪಂಚ್ ಚಿಹ್ನೆಗಳಿವೆ; ಅವುಗಳಲ್ಲಿ ಐದರಲ್ಲಿ ಸಿಂಹ, ಎರಡರಲ್ಲಿ ಶ್ರೀ ಎಂಬ ಕನ್ನಡ ಅಕ್ಷರ, ಎಂಟನೆಯ ಪಂಚ್‌ನಲ್ಲಿ 'ಜಯ' ಎಂಬ ಕನ್ನಡ ಬರಹ, ಒಂಬತ್ತನೆಯ ಪಂಚ್‌ನಲ್ಲಿ 'ದೇವ' ಎನ್ನುವ ಕನ್ನಡ ಬರಹಗಳಿವೆ. ಜಯದೇವನನ್ನು ದೊರೆ ಜಯಸಿಂಹನೆಂದು ಭಾವಿಸಲಾಗಿದೆ.

ಆಂಧ್ರಪ್ರದೇಶದ ಹೈದರಾಬಾದ್‌ನಲ್ಲಿರುವ ಪುರಾತತ್ವ ಸಂಗ್ರಹಾಲಯದಲ್ಲಿರುವ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಎರಡನೆ ನಮೂನೆಗೆ ಸೇರುತ್ತವೆ. ಇವುಗಳ ಅಳತೆ 0.63" ರಿಂದ 0.83", ತೂಕ 54 ರಿಂದ 61 ಗ್ರೇನ್. ಇವುಗಳ ಮುಮ್ಮುಖದಲ್ಲಿ ನಾಲ್ಕು ಪಂಚ್‌ಗಳಿವೆ. ಮೊದಲನೆಯದರಲ್ಲಿ ವರಾಹ, ಎರಡು ಮತ್ತು ಮೂರರಲ್ಲಿ ಶ್ರೀ ಎಂಬ ಕನ್ನಡ ಅಕ್ಷರ ಮತ್ತು ನಾಲ್ಕನೆಯ ಪಂಚ್‌ನಲ್ಲಿ 'ಜಯ' ಎನ್ನುವ ಕನ್ನಡ ಬರಹವಿದೆ. ಈ ನಾಣ್ಯಗಳು ಕಲ್ಯಾಣ ಚಾಲುಕ್ಯರ ರಾಜ್ಯಕ್ಕೆ ಸೇರಿದ್ದ ಮೇಡಕ್, ನಲ್ಗೊಂಡ, ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ವಿಶೇಷವಾಗಿ ದೊರೆಯುತ್ತವೆ.

ಮೂರನೆಯ ನಮೂನೆಯ ನಾಣ್ಯದಲ್ಲಿ ಒಂಬತ್ತು ಚಿಹ್ನೆಗಳಿವೆ. ಅದರ ಅಳತೆ 0.8"; ತೂಕ 59.6 ಗ್ರೇನ್. ಮೊದಲ ಏಳು ಪಂಚ್‌ಗಳಲ್ಲಿ ವರಾಹವಿದೆ; ಎಂಟು ಮತ್ತು ಒಂಬತ್ತನೆಯ ಪಂಚ್‌ಗಳಲ್ಲಿ 'ಜಯ' ಮತ್ತು 'ದೇವ' ಎನ್ನುವ ಕನ್ನಡ ಬರಹ. ಐದನೆಯ ನಮೂನೆಯ ನಾಣ್ಯದಲ್ಲಿ ನವಿಲಿನ ಚಿತ್ರವಿದೆ. ಇದೇ ನವಿಲಚ್ಚಿನ ಗದ್ಯಾಣ. ಇವಿಷ್ಟೂ ಜಯದೇವ ಎನ್ನುವ ಬರಹವಿರುವ ನಾಣ್ಯಗಳು.

ಜಗದೇಕಮಲ್ಲನ ನಾಣ್ಯಗಳು

ಮತ್ತೆ ಕೆಲವು ನಾಣ್ಯಗಳ ಮೇಲೆ ಜಗದೇಕಮಲ್ಲ ಎಂಬ ಬಿರುದು ಕಾಣಬರುತ್ತದೆ. ಇವುಗಳಲ್ಲಿಯೂ ವಿವಿಧ ನಮೂನೆಗಳಿವೆ. ಮೊದಲನೆಯ ನಮೂನೆಗೆ ಸೇರಬಹುದಾದ ಅರವತ್ತೆರಡು ಚಿನ್ನದ ನಾಣ್ಯಗಳು ಕೊಡೂರು ನಾಣ್ಯರಾಶಿಯಲ್ಲಿದ್ದವು. ಅವುಗಳ ಅಳತೆ 0.6 ರಿಂದ 0.8". ತೂಕ 67 ರಿಂದ 69 ಗ್ರೇನ್. ಜಗ, ಜಗದೇ ಅಥವಾ ಜಗದೇಕ

ಎನ್ನುವ ಕನ್ನಡ ಅಕ್ಷರದ ಪಂಚ್ ಚಿಹ್ನೆಗಳು ನಾಣ್ಯದ ಮೇಲ್ಭಾಗದಲ್ಲಿ ಅಥವಾ ಕೆಳಭಾಗದಲ್ಲಿ ಕಾಣಬರುತ್ತವೆ. ಅದಕ್ಕೆ ಎದುರಾಗಿ ಸಣ್ಣ ಪ್ರಮಾಣದ ದೇವಾಲಯದ ಗೋಪುರದ ಚಿಹ್ನೆ; ಮಧ್ಯದಲ್ಲಿ ಶ್ರೀ ಎಂಬ ಕನ್ನಡ ಅಕ್ಷರಗಳಿವೆ. ಹಿಮ್ಮುಖದಲ್ಲಿ ಅಪರೂಪವಾಗಿ ನಾಗ, ಚಾಮರ, ಸ್ವಸ್ತಿಕ ಚಿಹ್ನೆಗಳು ಕಾಣಬರುತ್ತವೆ. ಕೆಲವು ನಾಣ್ಯಗಳಲ್ಲಿ ಮುಮ್ಮುಖದಲ್ಲಿ ಅರ್ಧಚಂದ್ರ ಚಿಹ್ನೆಯೂ ಇರುತ್ತದೆ. ಎರಡನೆಯ ನಮೂನೆಯ ನಾಣ್ಯದ ಅಳತೆ 1.00", ತೂಕ 67 ರಿಂದ 69 ಗ್ರೇನ್. ಅಂದರೆ ಇದು ತುಂಬ ಅಗಲದ ನಾಣ್ಯ. ನಾಣ್ಯದ



ಮಧ್ಯದಲ್ಲಿ ದೊಡ್ಡ ದೇವಾಲಯದ ಗೋಪುರ; ಎಡ ಬಲಗಳಲ್ಲಿ ಶ್ರೀ ಎಂಬ ಕನ್ನಡ ಅಕ್ಷರ; ಜಗದೇಕಮಲ್ಲ ಎನ್ನುವ ಕನ್ನಡ ಬರಹ ಆಚೆ - ಈಚೆ; ಮೇಲ್ಭಾಗದಲ್ಲಿಯೂ ಇದೇ ಬರಹ; ಒಟ್ಟು ನಾಲ್ಕು ಬಾರಿ ಈ ಕನ್ನಡ ಬರಹ ಈ ನಾಣ್ಯದ ಮೇಲೆ ಕಾಣಬರುತ್ತದೆ. ನಾಣ್ಯ ಅಗಲವಾಗಿರುವುದರಿಂದ ಇದಕ್ಕೆ ಅವಕಾಶವೂ ಇದೆ; ಕೆಲವು ನಾಣ್ಯಗಳ ಮೇಲೆ ಕೇವಲ 'ಜಗದೇ' ಎಂಬ ಬರಹವಿರುವುದೂ ಉಂಟು. ಇವೆಲ್ಲವೂ ಪಂಚ್ ಮಾಡಿದ ಚಿಹ್ನೆಗಳು. ಕೆಲವು ನಾಣ್ಯಗಳ ಮೇಲೆ ಕಮಲ ಪುಷ್ಪದ ಚಿಹ್ನೆಯಿರುವುದೂ ಉಂಟು. ಒಟ್ಟಿನಲ್ಲಿ ಇದೊಂದು ವಿಶಿಷ್ಟವಾದ ಹಾಗೂ ಆಕರ್ಷಕವಾದ ಚಿನ್ನದ ನಾಣ್ಯ.



ಮೂರನೆಯ ನಮೂನೆಯ ನಾಣ್ಯದ ಅಗಲ ಕಡಿಮೆ; ಅದು ಕೇವಲ 0.6". ನಾಣ್ಯದ ಎರಡು ಕಡೆಗಳಲ್ಲಿ ಶ್ರೀ ಎಂಬ ಕನ್ನಡ ಅಕ್ಷರ; ಸ್ವಲ್ಪ ಮೇಲೆ 'ಜಗದೇ' ಎನ್ನುವ ಕನ್ನಡ ಬರಹ; ಮಧ್ಯದಲ್ಲಿ ಕುಳಿತಿರುವ ಮತ್ತು ಕಿರೀಟ ಧರಿಸಿರುವ ಮನುಷ್ಯಾಕೃತಿ. ಇದು ಯಾವುದಾದರೂ ದೇವರ ಚಿಹ್ನೆಯೋ ಅಥವಾ ರಾಜನ ಚಿತ್ರವೋ ಎಂದು ಹೇಳಲು ಸಾಧ್ಯವಿಲ್ಲ. ಆದರೆ ನಮೂನೆಯ ವಿವರಗಳಿಂದ ಹಾಗೂ ಕನ್ನಡ ಬರಹದಿಂದ ಇದು ಜಗದೇಕಮಲ್ಲನ ನಾಣ್ಯವೆಂದು ಮಾತ್ರ ತೀರ್ಮಾನಿಸಬಹುದು. ಆಂಧ್ರಪ್ರದೇಶದ

ಮತ್ತೂರು ಎಂಬಲ್ಲಿ ದೊರಕಿರುವ ಮತ್ತೊಂದು ನಮೂನೆಯ ಚಿನ್ನದ ನಾಣ್ಯ ಗಮನಾರ್ಹ. ಇದರ ಅಳತೆ 0.7"; ತೂಕ 58 ಗ್ರೇನ್. ಈ ನಾಣ್ಯದ ಮಧ್ಯದಲ್ಲಿ ವೇದಿಯ ಮೇಲಿರುವ ಲಿಂಗವಿದೆ. ಅದರ ಕೆಳಗೆ 'ಶ್ರೀ ಜಗದೇಕ' ಎನ್ನುವ ಕನ್ನಡ ಬರಹವಿದೆ. ಮತ್ತೊಂದು ನಮೂನೆಯ ನಾಣ್ಯದ ಅಳತೆ 0.6"; ತೂಕ 54 ಗ್ರೇನ್. ಈ ನಾಣ್ಯದ ಮಧ್ಯದಲ್ಲಿ ವರಾಹದ ಚಿಹ್ನೆಯಿದೆ : ಶ್ರೀ ಎಂಬ ಎರಡು ಕನ್ನಡ ಅಕ್ಷರಗಳಿವೆ; ಹಾಗೂ 'ಜಗ' ಎಂಬ ಕನ್ನಡ ಬರಹವಿದೆ.



ಜಗದೇಕಮಲ್ಲ ಎನ್ನುವ ಬಿರುದನ್ನು ಹೊಂದಿದ್ದ ಮೂವರು ದೊರೆಗಳು ಚಾಲುಕ್ಯ ವಂಶದಲ್ಲಿ ಆಳಿದರು. ಮೂರನೆಯ ಜಗದೇಕಮಲ್ಲನು ಪ್ರಾಂತಪಾಲನಾಗಿ ರಾಜ್ಯವಾಳಿದನು. ಇನ್ನು ಇಬ್ಬರು ದೊರೆಗಳಾಗಿದ್ದರು. ಮೊದನೆಯ ಜಗದೇಕಮಲ್ಲನು (1015-44) ಕ್ರಿ.ಶ. ಹನ್ನೊಂದನೆಯ ಶತಮಾನದ ಆದಿಯಲ್ಲಿದ್ದರೆ, ಎರಡನೆಯ ಜಗದೇಕಮಲ್ಲನು (1139-49) ಕ್ರಿ.ಶ. ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿ ಆಳಿದನು. ಅಂದರೆ ಇವರಿಬ್ಬರಿಗಿದ್ದ ಅಂತರ ಒಂದು ಶತಮಾನ ಆದುದರಿಂದ ಈ ಮೇಲಿನ ನಾಣ್ಯಗಳಲ್ಲಿ ಕಾಣಬರುವ ಕನ್ನಡ ಅಕ್ಷರಗಳ ಲಿಪಿಲಕ್ಷಣಗಳನ್ನು ಗಮನಿಸಿದರೆ, ಇದು ಹನ್ನೆರಡನೆಯ ಶತಮಾನಕ್ಕೆ ಸರಿಹೊಂದುತ್ತದೆ. ಈ ಆಧಾರದ ಮೇಲೆ ಈ ಮೇಲಿನ ನಾಣ್ಯಗಳನ್ನು ಎರಡನೆಯ ಜಗದೇಕಮಲ್ಲನಿಗೆ ಸೇರಿದ್ದೆಂದು ತೀರ್ಮಾನಿಸಲಾಗಿದೆ.

ತ್ರೈಲೋಕ್ಯಮಲ್ಲ ಮೊದಲನೆಯ ಸೋಮೇಶ್ವರನ ನಾಣ್ಯಗಳು (ಕ್ರಿ.ಶ. 1044-1068)

ಈ ದೊರೆಯ ಚಿನ್ನದ ನಾಣ್ಯಗಳು ದೊರೆತಿವೆ. ಈ ಚಿನ್ನದ ನಾಣ್ಯಗಳ ಅಗಲ 1.0"; ತೂಕ 58 ಗ್ರೇನ್. ಇವೂ ಪಂಚ್ ಚಿಹ್ನೆಯ ನಾಣ್ಯಗಳು. ಇದರಲ್ಲಿ ಒಂಬತ್ತು ಪಂಚ್ ಚಿಹ್ನೆಗಳಿವೆ. ಮೊದಲ ಐದರಲ್ಲಿ ಸಿಂಹಗಳಿವೆ; ಮುಂದಿನ ಎರಡರಲ್ಲಿ ಶ್ರೀ ಎಂಬ ಕನ್ನಡ ಅಕ್ಷರವಿದೆ; ಎಂಟು ಮತ್ತು ಒಂಬತ್ತನೆಯ ಚಿಹ್ನೆಗಳನ್ನು ಸೇರಿಸಿದರೆ ಕನ್ನಡ ಲಿಪಿಯ 'ತ್ರೈಲೊಮಲ್ಲ' ಎಂಬ ಬರಹ ಕಾಣಬರುತ್ತದೆ. ಅಂದರೆ ಇದು ತ್ರೈಲೋಕ್ಯಮಲ್ಲ ಇರಬೇಕು. ಇತರ ಎಲ್ಲ ದೃಷ್ಟಿಗಳಿಂದ ಇದು ಚಾಲುಕ್ಯರ ನಾಣ್ಯಗಳನ್ನು ಹೋಲುವುದರಿಂದ ಇದನ್ನು ಚಾಲುಕ್ಯ ತ್ರೈಲೋಕ್ಯಮಲ್ಲ ಬಿರುದಾಂಕಿತ ಮೊದಲನೆಯ ಸೋಮೇಶ್ವರನ ನಾಣ್ಯವೆಂದು ಭಾವಿಸಬೇಕು.

ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನ ನಾಣ್ಯಗಳು (ಕ್ರಿ.ಶ. 1068-1076)

ಕೊಡೂರು ನಾಣ್ಯರಾಶಿಯಲ್ಲಿ ಸುಮಾರು ತೊಂಬತ್ತು ನಾಣ್ಯಗಳ ಮೇಲೆ ಭುವನ ಎಂಬ ಕನ್ನಡ ಬರಹವನ್ನು ಕಾಣುತ್ತೇವೆ. ಈ ನಾಣ್ಯಗಳು ಎಲ್ಲ ದೃಷ್ಟಿಗಳಿಂದಲೂ ಚಾಲುಕ್ಯರ ನಾಣ್ಯಗಳನ್ನೇ ಹೋಲುತ್ತವೆ. ಆದುದರಿಂದ ಈ ನಾಣ್ಯಗಳನ್ನೂ ಚಾಲುಕ್ಯರಿಗೆ ಸೇರಿದ್ದೆಂದು ಭಾವಿಸಬಹುದು. ಇಮ್ಮಡಿ ಸೋಮೇಶ್ವರನಿಗೆ ಭುವನೈಕಮಲ್ಲ ಎಂಬ ಬಿರುದು ಇದ್ದಿತು. ಈ ನಾಣ್ಯಗಳಲ್ಲಿ ಕಾಣಬರುವ 'ಭುವನ' ಎಂಬುದು ಭುವನೈಕಮಲ್ಲ ಎಂಬುದರ ಹ್ರಸ್ವರೂಪ ಎಂದು ಭಾವಿಸಬಹುದು. ಜಗದೇಕಮಲ್ಲನ ನಾಣ್ಯಗಳ ಮೇಲೆ ಜಗ ಅಥವಾ ಜಗದೇಕ




ಎನ್ನುವ ರೂಪವಿರುವುದನ್ನು ಮೇಲೆ ಗಮನಿಸಿದ್ದೇವೆ. ಈ ಚಿನ್ನದ ನಾಣ್ಯಗಳ ಅಳತೆ 0.6"; ತೂಕ 58 ಗ್ರೇನ್. ಇವುಗಳ ಮೇಲೆ ಒಂಬತ್ತು ಪಂಚ್‌ಗಳಿವೆ. ನಾಣ್ಯದ ಮಧ್ಯದಲ್ಲಿ ಸಿಂಹವಿದೆ; ಅಕ್ಕ ಪಕ್ಕಗಳಲ್ಲಿ ಕನ್ನಡಾಕ್ಷರ 'ಶ್ರೀ' ಇವೆ. ಮೇಲೆ ಸೂರ್ಯ-ಚಂದ್ರರನ್ನೂ ಕಾಣಬಹುದು. ಮೇಲ್ಭಾಗದಲ್ಲಿ ಹನ್ನೆರಡನೆಯ ಶತಮಾನದ ಕನ್ನಡ ಲಿಪಿಯಲ್ಲಿ ಭುವನ ಎಂಬ ಬರಹವಿದೆ. ಇದೇ ರೀತಿಯಲ್ಲಿದ್ದು, ಮಧ್ಯದಲ್ಲಿ ಆನೆಯಿರುವ ನಾಣ್ಯವನ್ನು ಇದೇ ದೊರೆಯ ಮತ್ತೊಂದು ನಮೂನೆಯ ನಾಣ್ಯವೆಂದು ಭಾವಿಲಾಗಿದೆ.

ಇತ್ತೀಚೆಗೆ ಮುಕುಂದ ಪ್ರಭು ಅವರು ಈ ದೊರೆಯ ಸಾಮಂತನಾದ ಮಾಚಿ ಭೂಪಾಲನ ಬೆಳ್ಳಿಯ ನಾಣ್ಯವನ್ನು ಬೆಳಕಿಗೆ ತಂದಿದ್ದಾರೆ. ಇದರ ತೂಕ 16 ಗ್ರೇನ್, ಅಗಲ 0.6".

ಮು : ಅಂಕುಶವನ್ನು ಹಿಡಿದಿರುವ ಸಿಂಹ

ಹಿ : ಒಂದು ಹೂವು; ಅದರ ಮೇಲೆ ಎರಡು
ಸಾಲುಗಳ ನಾಗರೀ ಬರಹ
ಮಾಚಿ
ಭೂಪಾಲ

ಶಾಸನಗಳ ಆಧಾರದ ಮೇಲೆ ಇವನಿಗೆ ಮಾಧವರಸ ಎನ್ನುವ ಹೆಸರೂ ಇದ್ದಿತೆಂದೂ ಇವನು ಸೋಮೇಶ್ವರನ ಸಾಮಂತನಾಗಿದ್ದನೆಂದೂ ತಿಳಿಯುತ್ತದೆ.



ಆರನೆಯ ವಿಕ್ರಮಾದಿತ್ಯನ ನಾಣ್ಯಗಳು (ಕ್ರಿ.ಶ. 1076-1127)

ಈ ವಂಶದಲ್ಲಿ ಮಾತ್ರವಲ್ಲ, ಕರ್ನಾಟಕದಲ್ಲೇ ಅತ್ಯಂತ ಪ್ರಸಿದ್ಧನೆನಿಸಿದ ದೊರೆ ಆರನೆಯ ವಿಕ್ರಮಾದಿತ್ಯನ ನಾಣ್ಯಗಳು ಅಷ್ಟಾಗಿ ದೊರಕಿಲ್ಲ. ಹನುಮಕೊಂಡದಲ್ಲಿ ಕೆಲವು ಚಿನ್ನದ ನಾಣ್ಯಗಳು ದೊರಕಿದ್ದು, ಅವು ಚಾಲುಕ್ಯರ ನಾಣ್ಯಗಳನ್ನೇ ವಿಶೇಷವಾಗಿ ಹೋಲುತ್ತವೆ; ಅವುಗಳಲ್ಲಿ ಒಂಬತ್ತು ಪಂಚ್‌ಗಳಿವೆ. ಮಧ್ಯದಲ್ಲಿ ವರಾಹವಿದೆ; ಇಕ್ಕೆಲಗಳಲ್ಲಿ ಶ್ರೀ ಎಂಬ ಅಕ್ಷರ ಕನ್ನಡ ಲಿಪಿಯಲ್ಲಿದೆ; ಮೇಲ್ಭಾಗದಲ್ಲಿ ಹನ್ನೆರಡನೆಯ ಶತಮಾನದ ಕನ್ನಡ ಲಿಪಿಯಲ್ಲಿ ಚಾಲುಕ್ಯರಾಮ ಎಂಬ ಬರಹವಿದೆ. ಚಾಲುಕ್ಯರಾಮ ಎಂಬ ಬಿರುದು ಆರನೆಯ ವಿಕ್ರಮಾದಿತ್ಯನಿಗೆ ಇದ್ದಿತು. ಕೊಲನುಪಾಕದಲ್ಲಿ ದೊರೆತಿರುವ ಶಾಸನದಿಂದ ಈ ವಿಷಯ ದೃಢಪಡುತ್ತದೆ. ಆದುದರಿಂದ ಈ ನಾಣ್ಯವನ್ನು ಆರನೆಯ ವಿಕ್ರಮಾದಿತ್ಯನಿಗೆ ಸೇರಿದ್ದೆಂದು ಭಾವಿಸಲು ಯಾವ ಅಡ್ಡಿಯೂ ಇಲ್ಲ.

ಮಯೂರ ಗದ್ಯಾಣ ಎಂಬ ಪದವನ್ನು ನಾವು ಮೇಲೆ ಗಮನಿಸಿದ್ದೇವೆ. ಬೆಳಗಾಂ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಮಯೂರದ ಚಿತ್ರವಿರುವ ಚಿನ್ನದ ನಾಣ್ಯಗಳು ದೊರಕಿವೆ. ಕುಡುತಿನಿ ಎಂಬಲ್ಲಿ ದೊರಕಿರುವ ಶಾಸನದಲ್ಲಿ ಆರನೆಯ ವಿಕ್ರಮಾದಿತ್ಯನು ಮಯೂರ ಗದ್ಯಾಣಗಳನ್ನು ದಾನವಾಗಿ ಕೊಟ್ಟನು ಎನ್ನುವ ವಿಷಯ ತಿಳಿಸಲ್ಪಟ್ಟಿದೆ. ಆದುದರಿಂದ ಮಯೂರದ ಚಿತ್ರವಿರುವ ಚಿನ್ನದ ನಾಣ್ಯಗಳು ಮಯೂರ ಗದ್ಯಾಣಗಳು ಮತ್ತು ಅವು ಆರನೆಯ ವಿಕ್ರಮಾದಿತ್ಯನಿಗೆ ಸೇರಿದವು ಎಂದು ಭಾವಿಸಬೇಕಾಗುತ್ತದೆ. ಆದರೆ ಈ ನಾಣ್ಯಗಳ ಮೇಲೆ ಬರವಣಿಗೆಯಿಲ್ಲವೆಂಬುದನ್ನು ಗಮನದಲ್ಲಿಡಬೇಕು.

ಗಜಪತಿ ಪಗೋಡ ಎಂದು ಬ್ರಿಟಿಷ್ ನಾಣ್ಯಶಾಸ್ತ್ರಜ್ಞರು ಕರೆದಿರುವ ನಾಣ್ಯಗಳು ಕಲ್ಯಾಣ ಚಾಲುಕ್ಯ ನಾಣ್ಯಗಳಿಗೆ ಸಮೀಪವಾಗಿವೆ. ಕಲ್ಹಣನ ರಾಜತರಂಗಿಣಿಯ ಪ್ರಕಾರ ಕಾಶ್ಮೀರದ ದೊರೆಯಾದ ಹರ್ಷದೇವನು (ಕ್ರಿ.ಶ. 1089) ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಇವು ಕರ್ನಾಟಕದ ನಾಣ್ಯಗಳಂತೆಯೇ ಇದ್ದವು ಎಂದು ಕಲ್ಹಣನ ಅಭಿಪ್ರಾಯ. ಆದುದರಿಂದ ಕಾಶ್ಮೀರದ ನಾಣ್ಯಗಳಿಗೆ ಮಾದರಿಯನ್ನು ಒದಗಿಸಿದ್ದು ಚಾಲುಕ್ಯ ಆರನೆಯ

ವಿಕ್ರಮಾದಿತ್ಯನ ನಾಣ್ಯಗಳು ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಆನೆಯ ಚಿತ್ರವನ್ನು ಹೊಂದಿರುವ ಚಿನ್ನದ ನಾಣ್ಯಗಳನ್ನು ಆರನೆಯ ವಿಕ್ರಮಾದಿತ್ಯನು ಟಂಕಿಸಿದನು ಎಂದು ವಿದ್ವಾಂಸರು ಭಾವಿಸಿದ್ದಾರೆ. ಆದರೆ ಇವು ದೊರಕಿಲ್ಲ. ಕರುನಾಡಭೂಪ ಅಥವಾ ಬಸವನಭಟರು ಎಂಬ ಕನ್ನಡ ಬರಹವಿರುವ ಚಿನ್ನದ ನಾಣ್ಯಗಳು ಈ ರಾಜನಿಗೆ ಸೇರಿದ್ದೆಂದು ಕೆಲವರು ಭಾವಿಸುತ್ತಾರೆ. ಆದರೆ ಇದರಲ್ಲಿ ಖಚಿತತೆಯಿಲ್ಲ.

ಅಯ್ಯಣನ ನಾಣ್ಯ (ಕ್ರಿ.ಶ.1015)

ಕೊಡೂರು ನಾಣ್ಯರಾಶಿಯಲ್ಲಿ ಯಣ ಎನ್ನುವ ಕನ್ನಡ ಬರಹವಿರುವ ನಾಣ್ಯಗಳು ದೊರಕಿವೆ. ಇವು ಬಹುಶಃ ರಾಜಕುಮಾರ ಅಯ್ಯಣನಿಗೆ ಸೇರಿದ ನಾಣ್ಯವಿರಬೇಕು. ಇತರ ಎಲ್ಲ ರೀತಿಗಳಿಂದಲೂ ಇವು ಚಾಲುಕ್ಯ ನಾಣ್ಯಗಳನ್ನೇ ಹೋಲುತ್ತವೆ.

ದಶವರ್ಮನ ನಾಣ್ಯ

ಕೊಡೂರು ನಾಣ್ಯರಾಶಿಯಲ್ಲಿ ಚಾಲುಕ್ಯ ಜಯಸಿಂಹನ ನಾಣ್ಯಗಳನ್ನೇ ವಿಶೇಷವಾಗಿ ಹೋಲುವಂತಹ ಚಿನ್ನದ ನಾಣ್ಯವು ಕಾಣಬಂದಿದೆ. ಈ ನಾಣ್ಯದ ಮಧ್ಯದಲ್ಲಿ ಆನೆಯ ಚಿತ್ರವಿದೆ. ಎರಡು ಕಡೆಗಳಲ್ಲಿ ಸೂರ್ಯ-ಚಂದ್ರರಿದ್ದಾರೆ. ಮೇಲ್ಭಾಗದಲ್ಲಿ ಹನ್ನೆರಡನೆಯ ಶತಮಾನದ ಕನ್ನಡ ಲಿಪಿಯಲ್ಲಿರುವ ದಶವರ್ಮ ಎಂಬ ಬರಹವಿದೆ. ಆದುದರಿಂದ ಈ ನಾಣ್ಯವು ದಶವರ್ಮನಿಗೆ ಸೇರಿದ್ದೆಂದು ಭಾವಿಸಬಹುದು.

ಭೋರ್ ಸಂಸ್ಥಾನದ ಕೋಶದಲ್ಲಿ ಕೆಲವು ಚಿನ್ನದ ನಾಣ್ಯಗಳು ಕಂಡುಬಂದವು. ಇವು ನೋಡುವುದಕ್ಕೆ ಚಾಲುಕ್ಯರ ನಾಣ್ಯಗಳಂತೆಯೇ ಇವೆ. ಈ ನಾಣ್ಯದ ಮಧ್ಯದಲ್ಲಿ ಎಂಟು ದಳದ ಪದ್ಮವೂ, ಎರಡು ಕಡೆಗಳಲ್ಲಿ ಶಂಖವೂ, ಕೆಳಗಡೆ ರಾಜಖಡ್ಗವೂ ಇದ್ದು, ಇದರ ಮೇಲೆ 'ಶ್ರೀ ಲಕ್ಷುಮಾ' ಎನ್ನುವ ಹನ್ನೆರಡನೆಯ ಶತಮಾನದ ಕನ್ನಡ ಲಿಪಿಯ ಬರಹವಿದೆ. ಆದುದರಿಂದ ಇದು ಕರ್ನಾಟಕದ ನಾಣ್ಯವೆಂಬುದು ಖಚಿತವಾಯಿತು. ಈ ನಾಣ್ಯದಲ್ಲಿ ಉಲ್ಲೇಖಿತಳಾಗಿರುವ ಲಕ್ಷುಮಾ ಅಥವಾ ಲಕ್ಷ್ಮೀ ಯಾರು ಎನ್ನುವ ವಿಷಯದಲ್ಲಿ ಜಿಜ್ಞಾಸೆ ಪ್ರಾರಂಭವಾಯಿತು. ಆರನೆಯ ವಿಕ್ರಮಾದಿತ್ಯನ ಪಿರಿಯರಸಿಯ ಹೆಸರು ಲಕ್ಷ್ಮೀದೇವಿ. ಈಕೆಯು ರಾಜ್ಯಭಾರ ಮಾಡುತ್ತಿದ್ದಳೆಂಬುದಕ್ಕೆ ಅನೇಕ ಶಾಸನಗಳು ಸಾಕ್ಷಿಯಾಗಿವೆ. ಆದುದರಿಂದ ಈ ಮೇಲಿನ ನಾಣ್ಯವನ್ನು ಟಂಕಿಸಿದವಳು ಈಕೆ ಎಂದು ಹೇಳಬಹುದಾಗಿದೆ.

ಕೊಡೂರು ನಾಣ್ಯರಾಶಿಯಲ್ಲಿ, ಚಾಲುಕ್ಯರ ನಾಣ್ಯಗಳನ್ನೇ ಹೋಲುವಂತಹ ಆದರೆ ಭುಜಬಲ ಎಂಬ ಕನ್ನಡ ಬರಹವಿರುವ ನಾಣ್ಯಗಳು ಕಂಡುಬಂದಿವೆ. ಈ ಭುಜಬಲ ಯಾರು ಎನ್ನುವುದು ಸರಿಯಾಗಿ ತಿಳಿದಿಲ್ಲ. ಆದರೆ ಬಹುತೇಕ ಚಾಲುಕ್ಯ ದೊರೆಗಳು ಭುಜಬಲ ಚಕ್ರವರ್ತಿ ಎನ್ನುವ ಬಿರುದನ್ನು ಧರಿಸಿದ್ದರು. ಆದುದರಿಂದ ಈ ನಾಣ್ಯಗಳು

ಕಲ್ಯಾಣದ ಚಾಲುಕ್ಯರಿಗೆ ಸೇರಿದ್ದು ಎಂದು ಭಾವಿಸಲು ಅಡ್ಡಿಯಿಲ್ಲ. ಆದರೆ ಖಚಿತವಾಗಿ ಯಾವ ರಾಜನಿಗೆ ಸೇರಿದ್ದೆಂದು ಹೇಳಲು ಮಾಹಿತಿ ಸಾಲದು.

ಮಹಾರಾಷ್ಟ್ರದ ಸತಾರ ಜಿಲ್ಲೆಯ ವಲ್ವೆ ಎಂಬಲ್ಲಿ ಇಂಗ್ಲೀಷ್ ಅಕ್ಷರ 'ವಿ' ಯನ್ನು ಆಕಾರದಲ್ಲಿ ಹೋಲುವ ಬೆಳ್ಳಿಯ ನಾಣ್ಯಗಳು ಹೇರಳವಾಗಿ ದೊರಕಿವೆ. ಇವುಗಳು ಪಂಚ್ ಮಾಡಿದ ನಾಣ್ಯಗಳು. ಇವುಗಳ ಮೇಲೆ ಹನ್ನೊಂದನೆಯ ಶತಮಾನಕ್ಕೆ ಸೇರಬಹುದಾದ ಕನ್ನಡ ಲಿಪಿಯ ಬರಹಗಳಿವೆ. ಭವೆ ಅರಸ, ಮಾಚ, ರಾಯಗೊಬ, ರಾಯಭೋಜ, ಶ್ರೀಸುಭ, ಪರಸ ಮುಂತಾದ ಬರಹಗಳು ಇವುಗಳ ಮೇಲಿವೆ. ಈ ಬರಹಗಳು ಯಾವ ಅರ್ಥವನ್ನೂ ಕೊಡುವುದಿಲ್ಲ. ಆದರೂ ಈ ಬರಹ ಹನ್ನೊಂದನೆಯ ಶತಮಾನದ ಕನ್ನಡ ಲಿಪಿಯಲ್ಲಿರುವುದರಿಂದ ಮತ್ತು ಇವು ದೊರಕಿರುವ ಸತಾರ ಜಿಲ್ಲೆ ಕಲ್ಯಾಣದ ಚಾಲುಕ್ಯರ ರಾಜ್ಯಕ್ಕೆ ಸೇರಿದ್ದುದರಿಂದ, ಇವು ಅಲ್ಲಿ ಆಳಿದ ಚಾಲುಕ್ಯ ಸಾಮಂತರ ನಾಣ್ಯಗಳಿರಬೇಕೆಂದು ತರ್ಕಿಸಲಾಗಿದೆ. ಇವುಗಳ ಬಗೆಗೆ ಇನ್ನೂ ಸಂಶೋಧನೆಯ ಅಗತ್ಯವಿದೆ.



2. ಹೊಯ್ಸಳರ ನಾಣ್ಯಗಳು

ಕಲ್ಯಾಣದ ಚಾಲುಕ್ಯರ ಆಶ್ರಯದಲ್ಲಿ ಸಾಮಂತರಾಗಿ ಆಡಳಿತವನ್ನು ಆರಂಭಿಸಿದ ಹೊಯ್ಸಳರು, ಅವರನ್ನು ಸೋಲಿಸಿ ದಕ್ಷಿಣ ಕರ್ನಾಟಕದ ಬಹುಭಾಗಗಳನ್ನು ತಮ್ಮದನ್ನಾಗಿ ಮಾಡಿಕೊಂಡು ಪ್ರಸಿದ್ಧಿಯನ್ನು ಪಡೆದು ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದರು. ಉತ್ತರ ಕರ್ನಾಟಕದಲ್ಲಿ ಆಳುತ್ತಿದ್ದ ದೇವಗಿರಿಯ ಸೇವುಣರೊಡನೆ ಸಾಕಷ್ಟು ಯುದ್ಧಗಳನ್ನು ಮಾಡಿ ಕೊನೆಗೆ ಮುಸ್ಲಿಮರಿಂದ ಸೋಲಿಸಲ್ಪಟ್ಟು, ಕ್ರಿ.ಶ. ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ ಇತಿಹಾಸದಿಂದ ನಿರ್ಗಮಿಸಿದರು. ಈ ವಂಶದಲ್ಲಿ ವಿಷ್ಣುವರ್ಧನ, ಇಮ್ಮಡಿ ಬಲ್ಲಾಳ, ಸೋಮೇಶ್ವರ ಮುಂತಾದ ಖ್ಯಾತ ದೊರೆಗಳು ಆಳಿ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಹೊಯ್ಸಳರು ಪ್ರಸಿದ್ಧರಾಗುವಂತೆ ಮಾಡಿದರು. ಧಾರ್ಮಿಕ ಇತಿಹಾಸದಲ್ಲಿ ರಾಮಾನುಜಾಚಾರ್ಯರಿಂದಾಗಿ ಈ ವಂಶ ಪ್ರಸಿದ್ಧಿ ಪಡೆದರೆ, ನೂರಾರು ಸುಂದರ ದೇವಾಲಯಗಳನ್ನು ನಿರ್ಮಿಸಿ ಹೊಯ್ಸಳರು ಇತಿಹಾಸದಲ್ಲಿ ಅಮರರಾಗಿದ್ದಾರೆ. ಕನ್ನಡ, ಸಂಸ್ಕೃತ ಮತ್ತು ತಮಿಳು ಭಾಷೆಗಳಲ್ಲಿ ನೂರಾರು ಶಾಸನಗಳನ್ನು

ಹೊರಡಿಸಿ, ಆ ದಿಕ್ಕಿನಲ್ಲಿಯೂ ಖ್ಯಾತಿಯನ್ನು ಪಡೆದಿದ್ದಾರೆ. ಇಷ್ಟೆಲ್ಲ ಆದರೂ ಇವರಿಗೆ ಸಂಬಂಧಿಸಿದ ನಾಣ್ಯಗಳು ದೊರಕಿರುವುದು ತೀರ ಕಡಿಮೆ ಎಂದೇ ಹೇಳಬೇಕು. ಆದರೆ ಇವರ ಶಾಸನಗಳಿಂದ ಇವರು ಟಂಕಿಸಿದ ನಾಣ್ಯಗಳಿಗೆ ಸೇರಿದ ಅನೇಕ ವಿಷಯಗಳು ತಿಳಿದುಬರುತ್ತವೆ. ಅವುಗಳ ಹಿನ್ನೆಲೆಯಲ್ಲಿ ದೊರಕಿರುವ ನಾಣ್ಯಗಳನ್ನು ಪರೀಕ್ಷಿಸಿದರೆ, ವಿಷಯ ಹೆಚ್ಚು ಸ್ಪಷ್ಟವಾಗುತ್ತದೆ.

ಹೊಯ್ಸಳರ ಶಾಸನಗಳಲ್ಲಿ, ಇವರ ಕಾಲದಲ್ಲಿ ಚಲಾವಣೆಯಲ್ಲಿದ್ದ ನಿಷ್ಕ, ಗದ್ಯಾಣ, ವರಹ, ಹೊನ್ ಅಥವಾ ಪೊನ್, ತಾರ, ಪಣ ಅಥವಾ ಹಣ, ಹಾಗ, ವೀಸ, ಬೇಳೆ ಕಾಣಿ ಮತ್ತು ಅಡ್ಡ ಎಂಬ ನಾಣ್ಯಗಳ ಉಲ್ಲೇಖ ಕಾಣಬರುತ್ತದೆ. ನಿಷ್ಕ ಎನ್ನುವುದು ಋಗ್ವೇದದ ಕಾಲದಿಂದಲೂ ಚಲಾವಣೆಯಲ್ಲಿದ್ದ ಚಿನ್ನದ ನಾಣ್ಯ. ಚಿನ್ನದ ನಾಣ್ಯ ಎಂಬುದಕ್ಕೆ ಪರ್ಯಾಯವಾಗಿ ನಿಷ್ಕ ಎನ್ನುವ ಪದವನ್ನು ಅನಂತರದ ಕಾಲದಲ್ಲಿ ಅಪರೂಪವಾಗಿ ಬಳಸಲಾಗುತ್ತಿತ್ತು. ಕ್ರಿ.ಶ. 1220ರ ಎರಡನೆಯ ನರಸಿಂಹನ ದಿಂಡಗೂರು ಶಾಸನದಲ್ಲಿ ಆ ಗ್ರಾಮದ ಆದಾಯವು ನಿಷ್ಕದಲ್ಲಿ ಹೇಳಲ್ಪಟ್ಟಿದೆ. ಈದರೆ ಹೊಯ್ಸಳರು ನಿಷ್ಕ ಎನ್ನುವ ಯಾವ ವಿಶಿಷ್ಟವಾದ ನಾಣ್ಯವನ್ನೂ ಟಂಕಿಸಲಿಲ್ಲ. ಆಗಿನ ಕಾಲದಲ್ಲಿ ಹೆಚ್ಚಿಗೆ ಬಳಕೆಯಲ್ಲಿದ್ದ ಚಿನ್ನದ ಗದ್ಯಾಣವನ್ನು ಸೂಚಿಸಲು ನಿಷ್ಕ ಎನ್ನುವ ಪದವನ್ನು ಬಳಸುತ್ತಿದ್ದರು. ಇನ್ನೆರಡು ಶಾಸನಗಳಲ್ಲಿ ಶುದ್ಧ ಸುವರ್ಣ ನಿಷ್ಕ ಎನ್ನುವ ಪದ ಕಾಣಬರುತ್ತದೆ. ಇದರ ಅರ್ಥ ಏನೆಂದರೆ ಶುದ್ಧವಾದ ಚಿನ್ನದ ನಾಣ್ಯ ಎಂದು. ಆದುದರಿಂದ ನಿಷ್ಕ ಮತ್ತು ಗದ್ಯಾಣ ಒಂದೇ ನಾಣ್ಯ ಎಂಬುದನ್ನು ತಿಳಿಯಬೇಕು.

ಹೊಯ್ಸಳರ ಕಾಲದ ಅತ್ಯಂತ ವರಿಷ್ಠ ಚಿನ್ನದ ನಾಣ್ಯವೆಂದರೆ ಗದ್ಯಾಣ. ಇದರ ತೂಕ 62 ಗ್ರೇನ್. ಈ ನಾಣ್ಯನ್ನು ವಿವಿಧ ರೀತಿಯ ವ್ಯವಹಾರಗಳಲ್ಲಿ ಬಳಸುತ್ತಿದ್ದರು. ಅಂದರೆ ಧಾರ್ಮಿಕ ಕಾರ್ಯಗಳಿಗೆ, ತೆರಿಗೆಯನ್ನು ಕಟ್ಟುವುದಕ್ಕೆ, ಕಂದಾಯವನ್ನು ತೆರುವುದಕ್ಕೆ ಹಾಗೂ ವ್ಯಾಪಾರದ ವಹಿವಾಟಿಗೆ - ಈ ರೀತಿ ಎಲ್ಲ ರೀತಿಯ ವ್ಯವಹಾರಗಳಲ್ಲಿಯೂ ಈ ನಾಣ್ಯ ಬಳಕೆಯಾಗುತ್ತಿದ್ದಿತು. ಶಾಸನಗಳಲ್ಲಿ ಕೆಲವು ಗದ್ಯಾಣ ಪ್ರಭೇದಗಳು ಉಲ್ಲೇಖಿತವಾಗಿವೆ. ಅವುಗಳ ಸರಿಯಾದ ಮಹತ್ವ ತಿಳಿಯದಿದ್ದರೂ, ಅವುಗಳನ್ನು ಅರ್ಥೈಸಬಹುದು. ಗಂಗನ ಗದ್ಯಾಣದ ಉಲ್ಲೇಖ ಒಂದು ಶಾಸನದಲ್ಲಿ ಕಾಣಬರುತ್ತದೆ. ಗಂಗರಾಜನೆನ್ನುವವನು ವಿಷ್ಣುವರ್ಧನನ ಬಲು ಪ್ರಸಿದ್ಧ ಮಂತ್ರಿಯಾಗಿದ್ದನು. ಆದುದರಿಂದ ಇವನು ಈ ನಾಣ್ಯವನ್ನು ದೊರೆಯ ಅಪ್ಪಣೆಯ ಮೇರೆಗೆ ಟಂಕಿಸಿದ್ದಿರಬಹುದು ಎಂದು ಊಹಿಸಬಹುದು. ಅದಕ್ಕೆ ಈ ಹೆಸರು ಬಂದಿರಬೇಕು. ಒಂದು ಸ್ಥಳದ ಹೆಸರು ಎಂದು ಭಾವಿಸುವುದಾದರೆ, ಅಲ್ಲಿದ್ದ ಟಂಕಶಾಲೆಯಲ್ಲಿ ತಯಾರಾದ ನಾಣ್ಯವಿದೆಂದು ಭಾವಿಸಬಹುದು. ಲೊಕ್ಕಿ ಗದ್ಯಾಣದ ಉಲ್ಲೇಖವೂ ಅನೇಕ ಶಾಸನಗಳಲ್ಲಿ ಕಾಣಬರುತ್ತದೆ. ಲೊಕ್ಕಿಗುಂಡಿಯಲ್ಲಿದ್ದ ಟಂಕಶಾಲೆಯಲ್ಲಿ ತಯಾರಾದ ನಾಣ್ಯವಿದೆಂದು ಆಗಲೇ

ಗಮನಿಸಿದ್ದೇವೆ. ಅಂದರೆ ಲೊಕ್ಕಿಗುಂಡಿಯ ಟಂಕಶಾಲೆಯು ಹೊಯ್ಸಳರ ಕಾಲದಲ್ಲೂ ಮುಂದುವರೆಯುತ್ತಿತ್ತು ಎಂದು ಗೊತ್ತಾಗುತ್ತದೆ. ಬೇಲೂರಿನ ಶಾಸನ ಒಂದರಲ್ಲಿ ಹೊಯ್ಸಳ ಗದ್ಯಾಣದ ಪ್ರಸ್ತಾಪವಿದೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಇದೇ ಸಮಯದಲ್ಲಿ ದೇವಗಿರಿಯ ಸೇವುಣರು ರಾಜ್ಯಭಾರ ಮಾಡುತ್ತಿದ್ದರು. ಅವರು ಕೂಡ ಗದ್ಯಾಣಗಳನ್ನು ಉಪಯೋಗಿಸುತ್ತಿದ್ದರು. ಆದುದರಿಂದ ಸೇವುಣರ ಗದ್ಯಾಣಗಳಿಗಿಂತ ಭಿನ್ನವಾದ ಗದ್ಯಾಣ ಎಂಬ ವಿಷಯವನ್ನು ತಿಳಿಸುವುದಕ್ಕೋಸರ ಈ ನಾಣ್ಯಗಳನ್ನು ಹೊಯ್ಸಳ ಗದ್ಯಾಣವೆಂದು ಕರೆದಿರಬಹುದು. ಮತ್ತೊಂದು ಶಾಸನದಲ್ಲಿ ಹೆಸರಿಸಿರುವ ಹೊಸಳಕ್ಕಿ ಗದ್ಯಾಣದ ಅರ್ಥ ತಿಳಿಯದು. ತುಮಕೂರಿನ ಶಾಸನ ಒಂದರಲ್ಲಿ ಉತ್ತಮವಾಗಿರುವ ತಿಪ್ಪೂರಿನ ಗದ್ಯಾಣವು ತಿಪ್ಪೂರಿನ ಟಂಕಶಾಲೆಯಲ್ಲಿ ತಯಾರಾದ ನಾಣ್ಯ. ಬೇಲೂರು ತಾಲ್ಲೂಕಿನ ಶಾಸನ ಒಂದರಲ್ಲಿ ನರಸಿಂಹ ಗದ್ಯಾಣದ ಪ್ರಸ್ತಾಪವಿದೆ. ಬಹುಶಃ ಈ ಗದ್ಯಾಣದ ಮೇಲೆ ನರಸಿಂಹನ ಚಿತ್ರವಿದ್ದಿರಬೇಕು; ಇಲ್ಲದಿದ್ದರೆ ದೊರೆ ನರಸಿಂಹ ಈ ನಾಣ್ಯವನ್ನು ಟಂಕಿಸಿರಬೇಕು. ಮಂಡ್ಯ ಜಿಲ್ಲೆಯ ಶಾಸನ ಒಂದರಲ್ಲಿ ದುಗದ ಗದ್ಯಾಣ ಎಂಬ ನಾಣ್ಯದ ಉಲ್ಲೇಖವಿದೆ. ದುಗದ ಎಂದರೆ ಎರಡು ಎನ್ನುವ ಅರ್ಥವಿರುವುದರಿಂದ, ಈ ನಾಣ್ಯ ಎರಡು ಗದ್ಯಾಣಗಳ ಮೌಲ್ಯದ ನಾಣ್ಯವಿರಬೇಕು. ಈ ರೀತಿಯ ಎರಡು ಗದ್ಯಾಣ ಮೌಲ್ಯದ ನಾಣ್ಯಗಳು, ಅನೇಕ ರಾಜವಂಶಗಳಿಂದ ಬಳಸಲ್ಪಡುತ್ತಿದ್ದಿತು. ಇದರ ಪ್ರಸ್ತಾಪ ವಿಜಯನಗರ ಕಾಲದಲ್ಲಿ ವಿಶೇಷವಾಗಿ ಬರುತ್ತದೆ.

ವರಹ ಎನ್ನುವ ನಾಣ್ಯ ಹೊಯ್ಸಳ ಶಾಸನಗಳಲ್ಲಿ ಉಲ್ಲೇಖಿತವಾಗಿದ್ದರೂ, ಗದ್ಯಾಣಕ್ಕೆ ಹೋಲಿಸಿದರೆ, ವರಹದ ಸಂಖ್ಯೆ ತೀರ ಕಡಿಮೆ. ಅಂದರೆ ವರಹ ಎಂಬ ನಾಣ್ಯ ಇನ್ನೂ ಜನಾನುರಾಗಿಯಾಗಿರಲ್ಲಿಲ್ಲ. ಆದರೆ ಇದು ಗದ್ಯಾಣಕ್ಕೆ ಸಮನಾದ ಚಿನ್ನದ ನಾಣ್ಯ. ಇಮ್ಮಡಿ ಬಲ್ಲಾಳನ ಶಾಸನದಲ್ಲಿ ನಲವತ್ತಾರು ವರಹ ಗದ್ಯಾಣಗಳನ್ನು ಕೊಟ್ಟು ಭೂಮಿಯನ್ನು ಕ್ರಯಮಾಡಿದ ಪ್ರಸ್ತಾಪವಿದೆ. ಇದರಲ್ಲಿ ಯಾವ ವೈಶಿಷ್ಟ್ಯವೂ ಇಲ್ಲದೆ ಜನಾನುರಾಗಿಯಾಗಿದ್ದ ಗದ್ಯಾಣ ಅಥವಾ ವರಹವನ್ನು ಇದು ಸೂಚಿಸುತ್ತದೆ.

ಪೊನ್ ಅಥವಾ ಹೊನ್ ಎಂಬುವ ಚಿನ್ನದ ನಾಣ್ಯದ ಪ್ರಸ್ತಾಪ ಅನೇಕ ಶಾಸನಗಳಲ್ಲಿ ಕಾಣಬರುತ್ತದೆ. ಶ್ರವಣಬೆಳಗೊಳದ ಒಂದು ಶಾಸನದಿಂದ ಗದ್ಯಾಣ ಮತ್ತು ಹೊನ್ ಎರಡೂ ಒಂದೇ ನಾಣ್ಯವನ್ನು ಸೂಚಿಸುತ್ತವೆಯೆಂದು ತಿಳಿದುಬರುತ್ತದೆ. ಲೊಕ್ಕಿ ಪೊನ್ ಮತ್ತು ಹೊಳೆ ಹೊನ್ ಎಂಬ ಪ್ರಭೇದಗಳನ್ನು ಈ ಕಾಲದ ಶಾಸನಗಳಲ್ಲಿ ಕಾಣುತ್ತೇವೆ.

ಪಣ ಅಥವಾ ಹಣ ಎನ್ನುವುದು ಹೊಯ್ಸಳರ ಕಾಲದಲ್ಲಿ ವಿಶೇಷವಾಗಿ ಚಲಾವಣೆಯಲ್ಲಿದ್ದ ಚಿನ್ನದ ನಾಣ್ಯ. ಸಾಮಾನ್ಯವಾಗಿ ಶಾಸನಗಳಲ್ಲಿ ಗದ್ಯಾಣದ ನಂತರ ಪಣದ ಉಲ್ಲೇಖ ಕಾಣಬರುತ್ತದೆ. ಅನೇಕ ಶಾಸನಗಳು ಗದ್ಯಾಣ ಮತ್ತು ಪಣಗಳಿಗಿರುವ ಪರಸ್ಪರ ಮೌಲ್ಯವನ್ನು ಸೂಚಿಸುತ್ತವೆ. ಉದಾಹರಣೆಗೆ ಮೂರನೆಯ ಬಲ್ಲಾಳನ (1298)

ಶಾಸನವನ್ನು ಗಮನಿಸಬಹುದು. ಇದರಲ್ಲಿ ಅನೇಕ ಕೊಡುಗೆಗಳು ಉಲ್ಲೇಖಿಸಲ್ಪಟ್ಟಿವೆ. ಅವೆಲ್ಲವನ್ನೂ ಕೂಡಿದರೆ ಅದರ ಮೊತ್ತ 11 ಗದ್ಯಾಣ ಮತ್ತು 40 ಪಣಗಳಾಗುತ್ತದೆ. ಆದರೆ ಶಾಸನದಲ್ಲಿ ಈ ಮೊತ್ತವನ್ನು 15 ಗದ್ಯಾಣಗಳೆಂದು ಉಲ್ಲೇಖಿಸಿದೆ. ಅಂದರೆ 40 ಪಣಗಳಿಗೆ 4 ಗದ್ಯಾಣಗಳು ಸಮ; ಅಂದರೆ ಒಂದು ಗದ್ಯಾಣಕ್ಕೆ 10 ಪಣ ಎನ್ನುವುದು ಖಚಿತವಾಗುತ್ತದೆ.

ಈ ಕಾಲದ ಶಾಸನಗಳಲ್ಲಿ ಅಡ್ಡ ಎಂಬ ಚಿನ್ನದ ನಾಣ್ಯದ ಪ್ರಸ್ತಾಪ ಕಾಣಬರುತ್ತದೆ. ಮೂರನೆಯ ನರಸಿಂಹನ (1262) ಬಸ್ತಿಹಳ್ಳಿ ಶಾಸನದ ಪ್ರಕಾರ ಒಂದು ಗಾಡಿಯ ವೀಳೆಯದೆಲೆಯ ಮೇಲೆ ಒಂದು ಅಡ್ಡ ತೆರಿಗೆಯನ್ನು ಕೊಡಬೇಕಾಗಿದ್ದಿತು. ಇದನ್ನು ಪಣದ ಅರ್ಧ ಭಾಗವೆಂದು ಭಾವಿಸಲಾಗಿದೆ. ಮತ್ತೊಂದು ಸಂದರ್ಭದಲ್ಲಿ ಇದು ವರಹ ನಾಣ್ಯದ ಹದಿನೆಂಟನೆಯ ಒಂದನೆಯ ಭಾಗವೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಇದು ಶಾಸನಗಳಲ್ಲಿ ಹಣದ ನಂತರ ಬರುವುದರಿಂದ, ಇದು ಹಣದ ಅರ್ಧ ಮೌಲ್ಯದ ಚಿನ್ನದ ನಾಣ್ಯ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಹಾಗ ಎನ್ನುವುದು ಈ ಕಾಲದ ಇನ್ನೊಂದು ಚಿನ್ನದ ನಾಣ್ಯ. ಶಾಸನಗಳಲ್ಲಿ ಈ ನಾಣ್ಯದ ಉಲ್ಲೇಖ ವಿಶೇಷವಾಗಿ ಕಂಡುಬರುತ್ತದೆ. ಬೇಲೂರು ತಾಲೂಕಿನ ನರಸಿಪುರದ ಶಾಸನದಲ್ಲಿ 36 ಹಾಗಗಳನ್ನು ಉಲ್ಲೇಖಿಸಿ, ಇದರ ಮೊತ್ತ 9 ಪಣಗಳೆಂದು ಹೇಳಿದೆ. ಆದುದರಿಂದ 1 ಪಣಕ್ಕೆ 4 ಹಾಗಗಳೆನ್ನುವುದು ಖಚಿತ. ಮತ್ತೊಂದು ಶಾಸನದಲ್ಲಿ ಅನೇಕ ದಾನಗಳನ್ನು ಹೇಳಿದ್ದು ಅವುಗಳ ಒಟ್ಟು ಮೊತ್ತ 9 ಗದ್ಯಾಣಗಳು ಅಥವಾ 360 ಹಾಗಗಳು ಎಂದು ಹೇಳಿದೆ. ಇದು ಕೂಡ ಮೇಲಿನ ಮೌಲ್ಯವನ್ನು ದೃಢಪಡಿಸುತ್ತದೆ.

ವೀಸ ಎನ್ನುವುದು ಇನ್ನೊಂದು ಸಣ್ಣ ನಾಣ್ಯ. ಸಣ್ಣ ಸಣ್ಣ ವ್ಯವಹಾರಗಳಲ್ಲಿ ಇದು ವಿಶೇಷವಾಗಿ ಉಪಯೋಗಿಸಲ್ಪಡುತ್ತಿದ್ದಿತು ಎನ್ನುವುದು ಶಾಸನದ ಉಲ್ಲೇಖಗಳಿಂದ ತಿಳಿದು ಬರುತ್ತದೆ. ಬೇಲೂರಿನ ಶಾಸನದಲ್ಲಿ ದೇವಾಲಯಕ್ಕೆ ಒದಗಿಸಿದ ಹಾಲಿನ ಬೆಲೆ ಎರಡು ಗದ್ಯಾಣ ಎರಡೂವರೆ ಪಣ ಅಥವಾ 360 ವೀಸ ಎಂದು ಹೇಳಿದೆ. ಇದರಿಂದ ಒಂದು ಹಾಗಕ್ಕೆ ನಾಲ್ಕು ವೀಸ ಎನ್ನುವುದು ಖಚಿತವಾಗುತ್ತದೆ.

ಬೇಳೆ ಎನ್ನುವುದು ಇನ್ನೂ ಸಣ್ಣ ನಾಣ್ಯ. ಶಾಸನಗಳ ಆಧಾರದ ಮೇಲೆ ಈ ನಾಣ್ಯ ಅರ್ಧ ವೀಸಕ್ಕೆ ಸಮ ಎಂದು ತಿಳಿದುಬರುತ್ತದೆ.

ತಾರ ಎನ್ನುವುದು ಬೆಳ್ಳಿಯ ನಾಣ್ಯ. ಶಿವಮೊಗ್ಗ ಜಿಲ್ಲೆಯ ಕ್ರಿ.ಶ. 1286ರ ಶಾಸನದಲ್ಲಿ ಈ ನಾಣ್ಯದ ಉಲ್ಲೇಖವಿದೆ. ಇದರ ವಿವರಗಳು ತಿಳಿದುಬಂದಿಲ್ಲ.

ಕಾಣೆ ಅಥವಾ ಕಾಗಿಣೆ ಎನ್ನುವುದು ತಾಮ್ರದ ನಾಣ್ಯ. ಈ ನಾಣ್ಯದ ಅರ್ಧ ಭಾಗವೇ ಅರೆಕಾಣೆ ಎಂಬ ನಾಣ್ಯ. ಇವಿಷ್ಟೂ ಶಾಸನಗಳಿಂದ ದೊರೆಯುವ ಮಾಹಿತಿ.

ಅನೇಕ ಸಾಹಿತ್ಯಿಕ ಗ್ರಂಥಗಳಲ್ಲಿ ನಾಣ್ಯಗಳ ಉಲ್ಲೇಖ ಕಾಣಬರುತ್ತದೆ. ಹೊಯ್ಸಳರ ಕಾಲಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ರಾಜಾದಿತ್ಯನ ವ್ಯವಹಾರ ಗಣಿತ ಉತ್ತಮ ಮಾಹಿತಿಯನ್ನು ಒದಗಿಸುತ್ತದೆ. ಇವನು ವಿಷ್ಣುವರ್ಧನನ ಆಸ್ಥಾನ ಕವಿಯಾಗಿದ್ದು ವ್ಯವಹಾರ ಗಣಿತ, ಕ್ಷೇತ್ರಗಣಿತ, ವ್ಯವಹಾರ ರತ್ನ, ಲೀಲಾವತಿ ಮುಂತಾದ ಗ್ರಂಥಗಳನ್ನು ರಚಿಸಿದ್ದಾನೆ. ಇವನ ವ್ಯವಹಾರ ಗಣಿತದಲ್ಲಿ ಈ ಕೆಳಗಿನ ನಾಣ್ಯ ಮಾಹಿತಿ ದೊರೆಯುತ್ತದೆ : 4 ಕಾಣಿ = 1 ವೀಸ; 5 ವೀಸ = 1 ಹಾಗ; 4 ಹಾಗ = 1 ಪಣ; 10 ಪಣ = 1 ಗದ್ಯಾಣ. ಇವನ ಲೀಲಾವತಿ ಎಂಬ ಗ್ರಂಥದಲ್ಲಿ ಇನ್ನೊಂದು ರೀತಿಯ ಮಾಹಿತಿಯಿದೆ; 20 ಕವಡೆ = 1 ಕಾಕಿಣೀ; 4 ಕಾಕಿಣೀ = 1 ಪಣ; 16 ಪಣ = 1 ದ್ರಮ್ಮ; 16 ದ್ರಮ್ಮ = 1 ನಿಷ್ಕ. ನಯಸೇನನ ಧರ್ಮಾಮೃತದಲ್ಲಿ ಕಾಣಿ ಮತ್ತು ಅರೆಕಾಣಿಗಳ ಉಲ್ಲೇಖವಿದೆ. ಶ್ರಾವಕಾಚಾರದ ಕರ್ತೃವಾದ ಮೇಘಣಂದಿಯು ಕಾಗಿಣಿ, ವೀಸ ಮತ್ತು ಪಣ ಎಂಬ ನಾಣ್ಯಗಳನ್ನು ಉಲ್ಲೇಖಿಸಿದ್ದಾನೆ. ನಾಗಚಂದ್ರನು ಪಂಪರಾಮಾಯಣದಲ್ಲಿ ಕಾಗಿಣಿ ಎಂಬ ನಾಣ್ಯವನ್ನು ಉಲ್ಲೇಖಿಸಿದ್ದಾನೆ. ಈ ರೀತಿ ನಾಣ್ಯಶಾಸ್ತ್ರಜ್ಞನಿಗೆ ಕನ್ನಡ ಸಾಹಿತ್ಯ ಗ್ರಂಥಗಳಲ್ಲಿ ಅನುಕೂಲವಾಗುವ ಮಾಹಿತಿಗಳು ದೊರಕುತ್ತವೆ. ಇಂತಹ ಅಧ್ಯಯನ ವ್ಯವಸ್ಥಿತವಾಗಿ ನಡೆಯಬೇಕು.

ಈ ಮೇಲೆ ಗಮನಿಸಿದ ಶಾಸನಗಳ ಹಾಗೂ ಸಾಹಿತ್ಯ ಗ್ರಂಥಗಳ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು, ಹೊಯ್ಸಳ ನಾಣ್ಯಗಳ ಯಾದಿಯನ್ನು ಈ ರೀತಿ ರಚಿಸಬಹುದು.

1 ಗದ್ಯಾಣ = 1 ನಿಷ್ಕ = 1 ವರಹ = 1 ಪೊನ್

1 ಗದ್ಯಾಣ = 10 ಪಣ = 62 ಗ್ರೇನ್

1 ಪಣ = 4 ಹಾಗ = 6.2 ಗ್ರೇನ್

1 ಪಣ = 2 ಅಡ್ಡ

1 ಹಾಗ = 4 ವೀಸ = 1.5 ಗ್ರೇನ್

1 ವೀಸ = 2 ಬೇಳೆ = 0.8 ಗ್ರೇನ್

1 ಬೇಳೆ = 2 ಕಾಣಿ

1 ಕಾಗಿಣಿ = 2 ಅರೆಕಾಣಿ

ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ಹೊಯ್ಸಳರು ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದರೂ, ನಾಣ್ಯಗಳ ವಿಷಯದಲ್ಲಿ ಅವರಿಗಿಂತ ಭಿನ್ನವಾದ ತಾಂತ್ರಿಕತೆಯನ್ನು ಅನುಸರಿಸಿದರು. ಚಾಲುಕ್ಯರ ನಾಣ್ಯಗಳು ಪಂಚ್ ಮಾಡಿದ ಗುಂಪಿಗೆ

ಸೇರಿದರೆ, ಹೊಯ್ಸಳರು ದ್ವಿಮುಖ ಮುದ್ರೆಗಳಿಂದ ನಾಣ್ಯಗಳನ್ನು ಟಂಕಿಸಿದರು. ತೂಕದ ವಿಷಯದಲ್ಲಿಯೂ ಇವರು ಭಿನ್ನರೆನಿಸಿದರು. ಚಾಲುಕ್ಯ ಗದ್ಯಾಣದ ತೂಕ 58 ಗ್ರೇನ್ ಆಗಿದ್ದರೆ, ಹೊಯ್ಸಳರು 62 ಗ್ರೇನ್ ಮಾದರಿಯ ನಾಣ್ಯಗಳನ್ನು ಟಂಕಿಸಲು ಆರಂಭಿಸಿದರು. ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು. ದಕ್ಷಿಣ ಭಾರತದಲ್ಲಿ ಚೋಳರು ಖ್ಯಾತರಾಗಿದ್ದು, ತಮ್ಮದೇ ಆದ ನಾಣ್ಯ ಪದ್ಧತಿಯನ್ನು ರೂಢಿಗೆ ತಂದಿದ್ದರು. ಬಹುಶಃ ಹೊಯ್ಸಳರು ಚೋಳರ ನಾಣ್ಯಗಳಿಂದ ಪ್ರಭಾವಿತರಾಗಿದ್ದರೆನ್ನುವುದು ತಿಳಿದುಬರುತ್ತದೆ. ದ್ವಿಮುಖ ಮುದ್ರೆಗಳಿಂದ ನಾಣ್ಯವನ್ನು ತಯಾರಿಸುವ ತಾಂತ್ರಿಕತೆ, 62 ಗ್ರೇನ್ ತೂಕದ ಚಿನ್ನದ ನಾಣ್ಯ, ಹಿಮ್ಮುಖ ಮತ್ತು ಮುಮ್ಮುಖಗಳ ಬರವಣಿಗೆಯ ವಿನ್ಯಾಸ ಇವುಗಳು ಚೋಳರ ಹಾಗೂ ಹೊಯ್ಸಳರ ನಾಣ್ಯಗಳಿಗಿರುವ ಮುಖ್ಯ ಸಾಮ್ಯ. ಚೋಳರು ಕರ್ನಾಟಕದ ಅನೇಕ ಭಾಗಗಳನ್ನು ತಮ್ಮ ವಶಮಾಡಿಕೊಂಡು, ಈ ಪ್ರದೇಶಗಳಲ್ಲಿ ತಮ್ಮ ನಾಣ್ಯ ಪದ್ಧತಿಯನ್ನು ಜಾರಿಗೆ ತಂದಿದ್ದರು. ವಿಷ್ಣುವರ್ಧನನು ಚೋಳರನ್ನು ತಲಕಾಡು ಕದನದಲ್ಲಿ ಸೋಲಿಸಿ, ಕರ್ನಾಟಕದಿಂದ ಅವರು ಕಾಲ್ತೆಗೆಯುವ ಹಾಗೆ ಮಾಡಿದನು. ಅದರ ನೆನಪಿಗಾಗಿ 'ತಲಕಾಡುಗೊಂಡ' ನಮೂನೆಯ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಆದುದರಿಂದ ಈ ಪ್ರದೇಶಗಳಲ್ಲಿ ಜನಜನಿತವಾಗಿದ್ದ ತಾಂತ್ರಿಕತೆಯೇ ಮುಂದುವರೆಯಿತು ಎಂದು ಊಹಿಸಬಹುದು. ಆದರೆ ತಮ್ಮದೇ ಆದ ವಿನ್ಯಾಸಗಳನ್ನು ರೂಪಿಸಿಕೊಂಡು ನಾಣ್ಯಗಳನ್ನು ಟಂಕಿಸಿದರು. ಈಗ ದೊರಕಿರುವ ಹೊಯ್ಸಳ ನಾಣ್ಯಗಳನ್ನು ಗಮನಿಸಬಹುದು.

ವಿನಯಾದಿತ್ಯನ ನಾಣ್ಯ (ಕ್ರಿ.ಶ. 1045-1098)

58.2 ಗ್ರೇನ್ ತೂಕದ ಚಿನ್ನದ ನಾಣ್ಯದ ಮುಮ್ಮುಖದಲ್ಲಿ, ಐದು ಸಿಂಹಗಳ ಚಿಹ್ನೆ ಪಂಚ್ ಮಾಡಲ್ಪಟ್ಟಿದೆ. ಅದರ ಪಕ್ಕದಲ್ಲಿ ಶ್ರೀ ಎನ್ನುವ ಅಕ್ಷರವಿದೆ. ಹಿಮ್ಮುಖದಲ್ಲಿ ವಿನಯ (ಉನಯ) ಎನ್ನುವ ಕನ್ನಡ ಬರಹವಿದೆ. ಈ ಬರಹದ ಆಧಾರದ ಮೇಲೆ ಈ ನಾಣ್ಯವನ್ನು ವಿನಯಾದಿತ್ಯನಿಗೆ ಸೇರಿದ್ದು ಎಂದು ಭಾವಿಸಲಾಗಿದೆ. ಆದರೆ ಇದಕ್ಕೆ ಇರುವ ಮುಖ್ಯ ಬಾಧಕವೆಂದರೆ, ಇದು ಪಂಚ್ ಚಿಹ್ನೆಯನ್ನುಳ್ಳ ನಾಣ್ಯ. ಇದುವರೆಗೆ ದೊರಕಿರುವ ಇತರ ಹೊಯ್ಸಳ ದೊರೆಗಳ ನಾಣ್ಯಗಳು ದ್ವಿಮುಖ ಮುದ್ರೆಗಳ ನಮೂನೆಯ ನಾಣ್ಯ. ಆದುದರಿಂದ ಇದು ಹೊಯ್ಸಳ ನಾಣ್ಯಗಳ ವ್ಯಾಪ್ತಿಗೆ ಬರುವುದು ಕಷ್ಟ ಎಂದು ಕೆಲವರ ಅಭಿಪ್ರಾಯ. ಆರಂಭದಲ್ಲಿ ಹೊಯ್ಸಳರು ಚಾಲುಕ್ಯರ ಪಂಚ್ ಚಿಹ್ನೆಯ ನಾಣ್ಯಗಳನ್ನೇ ಅನುಕರಿಸಿದರು. ಆದರೆ ವಿಷ್ಣುವರ್ಧನನು ಈ ತಾಂತ್ರಿಕತೆಯನ್ನು ಬದಲಾಯಿಸಿ ದ್ವಿಮುಖ ಮುದ್ರೆಯ ತಾಂತ್ರಿಕತೆಯನ್ನು ಅನುಸರಿಸಲು ಆರಂಭಿಸಿದನು ಎಂದು ಕೆಲವರು ಸಮಾಧಾನ ಸೂಚಿಸಿದ್ದಾರೆ. ಒಟ್ಟಿನಲ್ಲಿ ಇದರ ಖಚಿತತೆಯನ್ನು ತಿಳಿಯುವುದು ಕಷ್ಟ. ವಿನಯಾದಿತ್ಯನಿಗೆ

'ಮಲಪರೊಳುಗಂಡ' ಎಂಬ ಬಿರುದು ಇದ್ದುದರಿಂದ ಈ ರೀತಿಯ ಕನ್ನಡ ಬರಹವಿರುವ ನಾಣ್ಯಗಳನ್ನು ಈ ರಾಜನಿಗೆ ಸೇರಿದ್ದೆಂದು ಕೆಲವರು ಭಾವಿಸುತ್ತಾರೆ. ಇದು ಸಂದೇಹಾಸ್ಪದ.

ವಿಷ್ಣುವರ್ಧನನ ನಾಣ್ಯಗಳು (ಕ್ರಿ.ಶ. 1108-1142)

ವಿಷ್ಣುವರ್ಧನ ಹೊಯ್ಸಳ ವಂಶದಲ್ಲೇ ಅತ್ಯಂತ ಪ್ರಖ್ಯಾತನಾದ ರಾಜ. ಚೋಳರನ್ನು ಕರ್ನಾಟಕದಿಂದ ಹೊಡೆದೋಡಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ಇವನಿಗೆ ತಲಕಾಡುಗೊಂಡ, ನೊಳಂಬವಾಡಿಗೊಂಡ, ಮಲಪರೊಳುಗಂಡ ಎಂಬ ಬಿರುದುಗಳಿದ್ದುದು ಇವನ ನೂರಾರು ಶಾಸನಗಳಿಂದ ತಿಳಿದುಬರುತ್ತದೆ. ಆದುದರಿಂದ ಈ ಬಿರುದುಗಳಿರುವ ನಾಣ್ಯಗಳು ಈ ದೊರೆಗೆ ಸೇರಿದ್ದೆಂದು ಸರಿಯಾಗಿ ಭಾವಿಸಲಾಗಿದೆ. ಮಲಪರೊಳುಗಂಡ ಎನ್ನುವ ಬಿರುದು, ಇವನ ಹಿಂದಿನವನಾದ ವಿನಯಾದಿತ್ಯನಿಗೂ ಇತ್ತು, ಹಾಗೂ ಅವನ ನಂತರ ಆಳಿದ ಕೆಲವು ದೊರೆಗಳಿಗೂ ಇತ್ತು. ಇದೇ ರೀತಿಯಲ್ಲಿ ತಲಕಾಡುಗೊಂಡು ಮತ್ತು ನೊಳಂಬವಾಡಿಗೊಂಡ ಎನ್ನುವ ಬಿರುದುಗಳನ್ನು ವಿಷ್ಣುವರ್ಧನನು ಮಾತ್ರವಲ್ಲದೆ ಅವನ ನಂತರ ಆಳಿದ ಹೊಯ್ಸಳ ದೊರೆಗಳೂ ಧರಿಸಿದ್ದರು. ಆದುದರಿಂದ ಈ ಬಿರುದುಗಳನ್ನುಳ್ಳ ನಾಣ್ಯಗಳನ್ನು ಕೇವಲ ವಿಷ್ಣುವರ್ಧನನಿಗೆ ಸೇರಿದ್ದೆಂದು ಭಾವಿಸುವುದು ತಪ್ಪು ಎಂದು ಕೆಲವು ವಿದ್ವಾಂಸರು ಭಾವಿಸಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಹೊಯ್ಸಳ ಇತಿಹಾಸದಲ್ಲಿ ವಿಷ್ಣುವರ್ಧನನ ಪಾತ್ರ, ಇವನ ನಂತರ ಆಳಿದ ರಾಜರು ಈ ಬಿರುದುಗಳನ್ನು ತಮ್ಮ ಪ್ರಶಸ್ತಿಯಲ್ಲಿ ರೂಢಿಯಂತೆ ಸೇರಿಸಿಕೊಂಡರು. ಅವರು ಯಾರೂ ಚೋಳರನ್ನು ಸೋಲಿಸಲಿಲ್ಲ. ಆದುದರಿಂದ ಈ ಬಿರುದುಗಳು ವಿಷ್ಣುವರ್ಧನನ ವಿಷಯುದಲ್ಲಿ ಕೇವಲ ಪ್ರಶಸ್ತಿಯಾಗಿರಲಿಲ್ಲ; ನಿಜಕ್ಕೂ ಆಗಿದ್ದಿತು. ಇನ್ನು ಮಲಪರೊಳುಗಂಡ ಎನ್ನುವ ಬಿರುದು ವಿನಯಾದಿತ್ಯನಿಗೂ ಇದ್ದಿತು ಎನ್ನುವುದು ನಿಜವಾದರೂ, ಈ ಬರಹವನ್ನೊಳಗೊಂಡ ನಾಣ್ಯಗಳನ್ನು ತಲಕಾಡುಗೊಂಡ ಮತ್ತು ನೊಳಂಬವಾಡಿಗೊಂಡ ನಮೂನೆಯ ನಾಣ್ಯಗಳಿಗೆ ಹೋಲಿಸಿ ನೋಡಿದರೆ, ಈ ಮೂರೂ ನಮೂನೆಯ ನಾಣ್ಯಗಳು ಒಬ್ಬನೇ ರಾಜನ ಕಾಲಕ್ಕೆ ಸೇರಿದವು ಎಂಬುದು ಖಚಿತವಾಗುತ್ತದೆ. ಅಷ್ಟೇ ಅಲ್ಲದೆ ವಿನಯಾದಿತ್ಯನು ಇನ್ನೂ ಸಾಮಂತನಾಗಿದ್ದು, ಈ ರೀತಿಯ ನಾಣ್ಯವನ್ನು ಟಂಕಿಸುವಷ್ಟು ಪ್ರಭಾವವನ್ನು ಬೆಳೆಸಿಕೊಂಡಿರಲಿಲ್ಲ ಎನ್ನುವ ಮಾತನ್ನೂ ಮರೆಯುವಂತಿಲ್ಲ. ಆದುದರಿಂದ 'ಗೊಂಡ' ನಮೂನೆಯ ನಾಣ್ಯಗಳನ್ನು ಆರಂಭಿಸಿದವನು ವಿಷ್ಣುವರ್ಧನ ಎನ್ನುವುದರಲ್ಲಿ ಸಂದೇಹ ಉಳಿಯುವುದಿಲ್ಲ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಮುಂದೆ ವಿವರಿಸಲಾಗಿರುವ ನಾಣ್ಯಗಳನ್ನು ವಿಷ್ಣುವರ್ಧನನಿಗೆ ಸೇರಿದ್ದೆಂದು ಭಾವಿಸಲಾಗಿದೆ.

ಮೊದಲನೆಯ ನಮೂನೆಯ ಚಿನ್ನದ ನಾಣ್ಯದ ಅಳತೆ 0.6"; ತೂಕ 62 ಗ್ರೇನ್.

ಮು : ನಾಣ್ಯದ ಸುತ್ತಲೂ ಗೆರೆಯಿಂದ ಮಾಡಿದ ವೃತ್ತಾಕಾರ; ಅದರೊಳಗೆ ಎರಡು ಸಿಂಹಗಳು; ಒಂದು ದೊಡ್ಡದು, ಮತ್ತೊಂದು ಸಣ್ಣದು; ಮೇಲ್ಗಡೆ ಸೂರ್ಯ-ಚಂದ್ರರು; ದೊಡ್ಡ ಸಿಂಹವು ತನ್ನ ಮುಂಗಾಲುಗಳನ್ನು ಮೇಲಕ್ಕೆತ್ತಿದೆ; ಅದು ಚಕ್ರವಿರುವ ಕಂಬವನ್ನು ನೋಡುತ್ತಿದೆ.

ಹಿ : ಗೆರೆಯಿಂದ ಮಾಡಿದ ವೃತ್ತಾಕಾರದಲ್ಲಿ ಕ್ರಿ.ಶ. ಹನ್ನೆರಡನೆಯ ಶತಮಾನದ ಕನ್ನಡ ಲಿಪಿಯಲ್ಲಿರುವ, ಮೂರು ಸಾಲುಗಳ ಬರಹ
ಶ್ರೀ ತ
ಳಕಾಡು
ಗೊಣ್ಡ

ಈ ರೀತಿಯ ಕೆಲವು ನಾಣ್ಯಗಳಲ್ಲಿ ಸ್ವಲ್ಪ ಭಿನ್ನತೆಯಿರುವುದನ್ನು ಗಮನಿಸಬೇಕು. ಹಿಮ್ಮುಖದ ಬರವಣಿಗೆಯ ಕೆಳಗಡೆ ಸರಳ ರೇಖೆಗಳು ಕಾಣಬರುತ್ತವೆ. ಕೆಲವರು ಈ ರೀತಿಯ ನಾಣ್ಯಗಳನ್ನು ಭಿನ್ನ ನಮೂನೆಯ ನಾಣ್ಯವೆಂದೂ ಭಾವಿಸುತ್ತಾರೆ.



ಮತ್ತೊಂದು ನಮೂನೆಯ ನಾಣ್ಯ ದೊರಕಿದೆ. ಇದರ ಅಳತೆ 0.6"; ತೂಕ 62 ಗ್ರೇನ್.

ಮು : ನಾಣ್ಯದ ಪೂರ್ತಿ ಇರುವ ಸಿಂಹ; ಅದರ ಬಾಲ ಸುರುಳಿಯಾಗಿ ಶರೀರದ ಮೇಲಿದೆ; ಮೇಲ್ಭಾಗದಲ್ಲಿ ಸೂರ್ಯ-ಚಂದ್ರರು

ಹಿ : ಕ್ರಿ.ಶ. ಹನ್ನೆರಡನೆಯ ಶತಮಾನದ ಕನ್ನಡ ಲಿಪಿಯ ಬರಹ
ಶ್ರೀ ತ
ಳಕಾಡು
ಗೊಣ್ಡ

ಮೊದಲನೆಯ ಮತ್ತು ಎರಡನೆಯ ಸಾಲುಗಳ ಮಧ್ಯೆ ಗೆರೆಗಳಿವೆ.



ಇನ್ನೊಂದು ನಮೂನೆಯ ಗದ್ಯಾಣ ಮೌಲ್ಯದ ನಾಣ್ಯ; ಇದರ ಅಳತೆ 0.6"; ತೂಕ 63 ಗ್ರೇನ್.

ಮು : ನಾಣ್ಯದ ಸುತ್ತಲೂ ವೃತ್ತಾಕಾರ; ಅದರೊಳಗೆ ಸಿಂಹದ ಮೇಲೆ ಕುಳಿತಿರುವ ದುರ್ಗಾ; ಆಕೆಯ ಕೈಗಳಲ್ಲಿ ಆಯುಧಗಳಿವೆ. ಆಕೆ ಕಿರೀಟಧಾರಿಯಾಗಿದ್ದಾಳೆ.

ಹಿ : ಕ್ರಿ.ಶ. ಹನ್ನೆರಡನೆಯ ಶತಮಾನದ ಕನ್ನಡ ಲಿಪಿಯ ಬರಹ ಮೂರು ಸಾಲುಗಳಲ್ಲಿ :

ಶ್ರೀ ನೊ

ಣಂಬವಾಡಿ

ಗೊಣ್ಡ



ಮೊದಲನೆಯ ಮತ್ತು ಎರಡನೆಯ ಸಾಲುಗಳ ನಡುವೆ ಗೆರೆಗಳಿವೆ.

ವಿಷ್ಣುವರ್ಧನನು ನೊಳಂಬರನ್ನು ಸೋಲಿಸಿದುದರ ಜ್ಞಾಪಕಾರ್ಥವಾಗಿ ಈ ಮೇಲಿನ ಬಿರುದನ್ನು ಧರಿಸಿದನು. ಆದುದರಿಂದ ಈ ನಾಣ್ಯವು ಅವನಿಗೆ ಸೇರುತ್ತದೆ.

ಇನ್ನೊಂದು ನಮೂನೆಯು ಗದ್ಯಾಣ ಮೌಲ್ಯದ ಚಿನ್ನದ ನಾಣ್ಯ : ಇದರ ಅಳತೆ 0.6"; ತೂಕ 62 ಗ್ರೇನ್.

ಮು : ವೃತ್ತಾಕಾರದಲ್ಲಿ ಒಂದು ದೊಡ್ಡ ಮತ್ತೊಂದು ಸಣ್ಣ ಸಿಂಹ

ಹಿ : ಮೂರು ಸಾಲುಗಳ ಕನ್ನಡ ಬರಹ

ಶ್ರೀ ಮ

ಲಪರೊ

ಳಗಣ್ಡ



ರಾಣಿ ಶಾಂತಲದೇವಿಯ ನಾಣ್ಯಗಳು

ಇತ್ತೀಚಿಗೆ ಎರಡು ಹೊಸ ಚಿನ್ನದ ನಾಣ್ಯಗಳು ಪ್ರಕಟಿಸಲ್ಪಟ್ಟಿವೆ. ಮೊದಲನೆಯದರ ತೂಕ 54 ಗ್ರೇನ್, ಅಗಲ 0.6" (ಮುಕುಂದ ಪ್ರಭುಗಳ ಶೋಧ).

ಮು : ಶ್ರೀರಾಮ, ಸೀತೆ ಮತ್ತು ಹನುಮಂತ

ಹಿ : ಎರಡು ಸಾಲುಗಳ ಕನ್ನಡ ಬರಹ

ಶ್ರೀ ಈ

ಸಪುರ

ಶಾಸನಗಳ ಪ್ರಕಾರ ಶಾಂತಲದೇವಿಯು ಬಲಿಪುರದ ಧರ್ಮೇಶ್ವರದೇವರ ವರಪ್ರಸಾದದಿಂದ ಜನಿಸಿದವಳು. ಅವಳು ಈಶಪುರದಲ್ಲಿ ರಾಮೇಶ್ವರ ದೇವಾಲಯವನ್ನು ನಿರ್ಮಿಸಿದಳು. ಆ ಈಶಪುರವೇ ಈಗಿನ ಈಸೂರು. ಆದುದರಿಂದ ಶಾಂತಲದೇವಿಯ ಅಪ್ಪಣೆ ಮೇರೆಗೆ ಈ ನಾಣ್ಯವನ್ನು ಅಚ್ಚು ಮಾಡಲಾಯಿತು ಎಂದು ಭಾವಿಸಬಹುದು. ಇದರ ಮೇಲೆ ಶ್ರೀರಾಮನ ಚಿತ್ರವಿರುವುದರಿಂದ ಇದನ್ನು ಶಾಸನಗಳಲ್ಲಿ ಶ್ರೀರಾಮದೇವರ ಗದ್ಯಾಣವೆಂದು ಉಲ್ಲೇಖಿಸಲಾಗಿದೆ.



ಇನ್ನೊಂದು ನಾಣ್ಯ ಚಿನ್ನದ ಪಣ. ಇದನ್ನು ನಿತ್ಯಾನಂದ ಪೈ ಪ್ರಕಟಿಸಿದ್ದಾರೆ. ಇದರ ತೂಕ 0.4 ಗ್ರಾಂ; ಅಳತೆ 0.4".

ಮು : ಬಲಗಡೆ ಮುಖಮಾಡಿ ಅಂಜಲಿಮುದ್ರೆಯಲ್ಲಿರುವ ಹನುಮಾನ್

ಹಿ : ಎರಡು ಸಾಲುಗಳ ಕನ್ನಡ ಬರಹ
ಶ್ರೀ ಈ
ಸಪುರ

ಈ ಎರಡು ನಾಣ್ಯಗಳನ್ನೂ ಈಸಪುರದ ದೇವಾಲಯವು ಶಾಂತಲದೇವಿಯ ಗೌರವಾರ್ಥ ಟಂಕಿಸಿತೇ ಅಥವಾ ಇವು ಚಲಾವಣೆಯಲ್ಲಿದ್ದವೇ ಎಂಬುದನ್ನು ಖಚಿತವಾಗಿ ಹೇಳುವುದು ಕಷ್ಟ. ಒಟ್ಟಿನಲ್ಲಿ ಇವೆರಡೂ ಮುಖ್ಯವಾದ ನಾಣ್ಯಗಳು ಎಂಬುದನ್ನು ಮಾತ್ರ ಹೇಳಬೇಕು.

ಮೊದಲನೆಯ ನರಸಿಂಹನ ನಾಣ್ಯ (ಕ್ರಿ.ಶ. 1142-1173)

ಇದೊಂದು ಚಿನ್ನದ ಗದ್ಯಾಣ. ಇದರ ಅಳತೆ 0.55"; ತೂಕ 63 ಗ್ರೇನ್.

ಮು : ವೃತ್ತಾಕಾರದಲ್ಲಿ ಸಿಂಹದ ಮೇಲೆ ಕುಳಿತಿರುವ ದುರ್ಗಾ; ಕೈಗಳಲ್ಲಿ ಆಯುಧಗಳಿವೆ; ಕಿರೀಟಧಾರಿಯಾಗಿದ್ದಾಳೆ

ಹಿ : ಕನ್ನಡ ಲಿಪಿಯ ಮೂರು ಸಾಲುಗಳ ಬರಹ
ಶ್ರೀ ಪ್ರ
ತಾಪನಾರ
ಸಿಂಹ



ಇದೇ ರಾಜನಿಗೆ ಸೇರಬಹುದಾದ ಮತ್ತೊಂದು ಚಿನ್ನದ ನಾಣ್ಯವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೊರಕಿದೆ. ಇದರ ಅಳತೆ 0.6"; ತೂಕ 60 ಗ್ರೇನ್.

ಮು : ಸಿಂಹದ ಮೇಲೆ ಕುಳಿತಿರುವ ದುರ್ಗಾ

ಹಿ : ಮೂರು ಸಾಲುಗಳ ಕನ್ನಡ ಬರಹ
ಶ್ರೀ ಜ
ಗದೇಕಮಲ್ಲ
.. ರಾಜ

ಇದು ದ್ವಿಮುಖ ಮುದ್ರೆಯ ನಾಣ್ಯವಾದುದರಿಂದ ಕಲ್ಯಾಣದ ಚಾಲುಕ್ಯರ ನಾಣ್ಯವಲ್ಲ ಎಂಬುದು ಖಚಿತ. ಹೊಯ್ಸಳ ಮೊದಲನೆಯ ನರಸಿಂಹನು 1143 ರಲ್ಲಿ ಜಗದೇಕಮಲ್ಲನ ಮೇಲೆ ಯುದ್ಧ ಮಾಡಿ ಸೋತನು. ಅಂತಹ ಪರಿಸ್ಥಿತಿಯಲ್ಲಿ ಇವನು ಜಗದೇಕಮಲ್ಲನೆಂಬ ಬಿರುದನ್ನು ಧರಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಆದುದರಿಂದ ಈ ನಾಣ್ಯವನ್ನು ಮೊದಲನೆಯ ನರಸಿಂಹನ ನಾಣ್ಯವೆಂದು ಭಾವಿಸಬಹುದು.

ಇಮ್ಮಡಿ ನರಸಿಂಹನ ನಾಣ್ಯ (ಕ್ರಿ.ಶ. 1220-1235)

ಇದೊಂದು ಚಿನ್ನದ ನಾಣ್ಯ; ಇದರ ಅಳತೆ 0.65"; ತೂಕ 6.7 ಗ್ರೇನ್. ಆದುದರಿಂದ ಇದು ಪಣ.

ಮು : ಸಿಂಹ

ಹಿ : ಪದ್ಮಾಸನದಲ್ಲಿ ಕುಳಿತಿರುವ ನರಸಿಂಹ; ಕೈಯಲ್ಲಿ ಶಂಖ, ಚಕ್ರಗಳಿವೆ

ಈ ನಾಣ್ಯದ ಮೇಲೆ ಬರಹವಿಲ್ಲವಾದುದರಿಂದ ಖಚಿತವಾಗಿ ಈ ನಾಣ್ಯ ಯಾರಿಗೆ ಸೇರಿದ್ದೆಂದು ಹೇಳುವುದು ಕಷ್ಟ. ಇದು ವಿಜಯನಗರ ನಮೂನೆಯಲ್ಲ. ಹೊಯ್ಸಳ ಶಾಸನಗಳಲ್ಲಿ ನರಸಿಂಹ ಗದ್ಯಾಣ ಎಂಬ ನಾಣ್ಯದ ಪ್ರಸ್ತಾಪವಿದೆ. ಆದರೆ ಇದು ಗದ್ಯಾಣವಲ್ಲ; ಪಣ. ನರಸಿಂಹನ ಚಿತ್ರವಿರುವ ನಾಣ್ಯಗಳನ್ನು ಈ ರಾಜನು ಟಂಕಿಸಿರಬೇಕು ಎನ್ನುವ ನಂಬಿಕೆಯಿಂದ ಈ ನಾಣ್ಯವನ್ನು ಇಮ್ಮಡಿ ನರಸಿಂಹನಿಗೆ ಸೇರಿದ್ದೆಂದು ಭಾವಿಸಲಾಗಿದೆ.

ಸೋಮೇಶ್ವರನ ನಾಣ್ಯ (ಕ್ರಿ.ಶ. 1235-1253)

ಇತ್ತೀಚಿಗೆ ಅಮರಾವತಿ ನದಿಯ ದಡದಲ್ಲಿರುವ ಕರೂರಿನಲ್ಲಿ ಒಂದು ತಾಮ್ರದ ನಾಣ್ಯ ದೊರಕಿತು. ವೃತ್ತಾಕಾರದ ಈ ನಾಣ್ಯದ ಅಳಕತೆ 0.7"; ತೂಕ 90 ಗ್ರೇನ್.

ಮು : ಮೂರು ಕಮಾನುಗಳುಳ್ಳ ದೇವಾಲಯದಂತಹ ಕಟ್ಟಡ; ಮೇಲೆ ಅಂಕುಶ; ಸೂರ್ಯ-ಚಂದ್ರರು.

ಹಿ : ಮೂರು ಸಾಲುಗಳ ತಮಿಳು ಬರಹ
ಪೊಸ
ಳೇ
ಶ್ವರ



ಹೊಯ್ಸಳ ದೊರೆ ಸೋಮೇಶ್ವರನು ವಿಶೇಷವಾಗಿ ತಮಿಳುನಾಡಿನ ಭಾಗಗಳಿಂದ ಆಳುತ್ತಿದ್ದನು. ಕಣ್ಣಾನೂರು ಅವನ ರಾಜಧಾನಿ. ತನ್ನ ಮಕ್ಕಳಾದ ರಾಮನಾಥ ಮತ್ತು ಮುಮ್ಮಡಿ ನರಸಿಂಹರಿಗೋಸ್ಕರ ಹೊಯ್ಸಳ ರಾಜ್ಯವನ್ನು ಇಬ್ಭಾಗ ಮಾಡಿ, ರಾಮನಾಥನಿಗೆ ದಕ್ಷಿಣದ ಭಾಗವನ್ನು ಕೊಟ್ಟನು. ಸೋಮೇಶ್ವರನು ಹತ್ತಾರು ತಮಿಳು ಶಾಸನಗಳನ್ನು ಹಾಕಿಸಿದ್ದು ಮಾತ್ರವಲ್ಲದೆ ಪೊಯ್ಸಳೀಶ್ವರ ದೇವಾಲಯವನ್ನು ನಿರ್ಮಿಸಿದನು. ತಮಿಳುನಾಡಿನಲ್ಲಿ ಅಧಿಕಾರ ನಡೆಸಬೇಕಾಗಿ ಬಂದುದರಿಂದ ಇವೆಲ್ಲವನ್ನೂ ಮಾಡಬೇಕಾಯಿತು. ಕಣ್ಣಾನೂರಿನಲ್ಲಿ ಒಂದು ಹೊಯ್ಸಳ ಟಂಕಶಾಲೆಯನ್ನೂ ಆರಂಭಿಸಿ, ಈ ಭಾಗಕ್ಕೆ ನಾಣ್ಯಗಳನ್ನು ಪೂರೈಸುತ್ತಿದ್ದನು. ಈ ಭಾಗದ ಜನಗಳಿಗೆ ಗೊತ್ತಾಗುವಂತೆ ಸೋಮೇಶ್ವರನು ಈ ನಾಣ್ಯದ ಮೇಲೆ ಪೊಸಳೇಶ್ವರ ಎನ್ನುವ ತಮಿಳು ಲಿಪಿಯ ನಾಣ್ಯವನ್ನು ಅಚ್ಚು ಹಾಕಿಸಿದ್ದು ಸಮಂಜಸವಾಗಿಯೇ ಇದೆ. ರಾಮನಾಥನು ಶಕ್ತಿಯುತನಾಗಿಲ್ಲದ ದೊರೆಯಾಗಿದ್ದುದರಿಂದ, ಈ ನಾಣ್ಯವನ್ನು ಸೋಮೇಶ್ವರನೇ ಅಚ್ಚು ಹಾಕಿಸಿದನೆಂದು ಖಚಿತವಾಗಿ ಹೇಳಬಹುದು. ಇತ್ತೀಚಿಗೆ ಇನ್ನೊಂದು ತಾಮ್ರದ ನಾಣ್ಯವೂ ದೊರಕಿದೆ. ಅದರ ಅಳತೆ 0.9"; ತೂಕ 195 ಗ್ರೇನ್ (ಗಣೇಶ್-ಗಿರಿಜಾಪತಿ ಶೋಧ).

ಮು : ಕುಳಿತಿರುವ ವೃಷಭ

ಹಿ : ಸೂರ್ಯ-ಚಂದ್ರರ ಮಧ್ಯೆ ತ್ರಿಶೂಲ; ಕೆಳಗೆ ಸೋಮೇಶ್ವರ ಎನ್ನುವ ಕನ್ನಡ ಬರಹ

ಇದರಲ್ಲಿ ಹೆಸರೇ ಇರುವುದರಿಂದ ಈ ನಾಣ್ಯ ಸೋಮೇಶ್ವರನಿಗೆ ಸೇರಿದ್ದೆಂಬುದು ಖಚಿತ.

ವೀರರಾಯಿ ಹಣ ಎಂಬ ನಾಣ್ಯಗಳು ಹೊಯ್ಸಳ ರಾಜ್ಯದಲ್ಲಿ ಹೇರಳವಾಗಿ ದೊರಕಿವೆ. ಇವುಗಳ ಮುಮ್ಮುಖದಲ್ಲಿ ಸಿಂಹದ ಚಿತ್ರಗಳಿವೆ. ಈ ಚಿತ್ರಗಳು ಹೊಯ್ಸಳ ನಾಣ್ಯಗಳ ಮೇಲೆ ಕಾಣಬರುವ ಸಿಂಹವನ್ನೇ ವಿಶೇಷವಾಗಿ ಹೋಲುತ್ತವೆ. ಹಿಮ್ಮುಖದಲ್ಲಿ ಅನೇಕ ಚಿಹ್ನೆಗಳು ಕಾಣಬರುತ್ತವೆ. ಸಾಮಾನ್ಯವಾಗಿ ಈ ನಾಣ್ಯಗಳ ತೂಕ 6 ರಿಂದ 6.5 ಗ್ರೇನ್. ಈ ಎಲ್ಲ ಸಾಮ್ಯಗಳನ್ನು ಗಮನಿಸಿ, ಇವು ಹೊಯ್ಸಳ ನಾಣ್ಯಗಳು, ಅದರಲ್ಲಿಯೂ ವಿಶೇಷವಾಗಿ ಮುಮ್ಮಡಿ ಬಲ್ಲಾಳನಿಗೆ ಸೇರಿದವು ಎಂದು ವಿದ್ವಾಂಸರು ಭಾವಿಸಿದ್ದಾರೆ. ಮುಮ್ಮಡಿ ಬಲ್ಲಾಳನ ಕಾಲ ಹೊಯ್ಸಳರಿಗೆ ತೊಂದರೆಯ ಕಾಲ. ಆದುದರಿಂದ ಸಣ್ಣ

ಸಣ್ಣ ಪಣಗಳನ್ನು ವಿಶೇಷವಾಗಿ ಟಂಕಿಸಿದರು ಎಂದು ಕೆಲವರು ಭಾವಿಸುತ್ತಾರೆ. ಸಾಮಾನ್ಯವಾಗಿ ಎಲ್ಲ ಹೊಯ್ಸಳ ರಾಜರ ಹೆಸರುಗಳೂ ವೀರ ಎಂಬ ಬಿರುದಿನಿಂದ ಕೂಡಿದ್ದುವು. ಕೆಲವು ಈ ರೀತಿಯ ನಾಣ್ಯಗಳ ಮೇಲೆ ವೀರ ಎಂಬ ಬರಹವಿರುವುದೂ ಉಂಟು. ಆದುದರಿಂದ ಈ ಎಲ್ಲ ವಿಷಯಗಳನ್ನು ಗಮನಿಸಿ, ವೀರರಾಯಿ ಹಣಗಳನ್ನು ಹೊಯ್ಸಳ ಕಾಲದ ನಾಣ್ಯವೆಂದು ಭಾವಿಸಲಾಗಿದೆ. ಆದರೆ ಇದರಲ್ಲಿ ಖಚಿತತೆಯಿಲ್ಲವೆಂಬುದನ್ನು ಗಮನದಲ್ಲಿಡಬೇಕು.

ಇತ್ತೀಚಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಣ್ಣ ಬೆಳ್ಳಿಯ ನಾಣ್ಯಗಳು ದೊರಕಿವೆ. ಅವುಗಳ ಮುಮ್ಮುಖದಲ್ಲಿ ಆನೆ ಹಾಗೂ ಹಿಮ್ಮುಖದಲ್ಲಿ ಕೆಲವು ಚಿಹ್ನೆಗಳ ಜೊತೆಗೆ ಹೊಯ್ಸಳ ಕಾಲಕ್ಕೆ ಸೇರಬಹುದಾದ ಕನ್ನಡ ಲಿಪಿಯ ಬ ಮತ್ತು ಬಿ ಎಂಬ ಅಕ್ಷರಗಳೂ ಇವೆ. ಬ ಎಂದರೆ ಬಲ್ಲಾಳನೆಂದೂ, ಬಿ ಎಂದರೆ ಬಿಟ್ಟಿದೇವ ಎಂದೂ ಭಾವಿಸಿ ಈ ನಾಣ್ಯಗಳನ್ನು ಹೊಯ್ಸಳರಿಗೆ ಸಂಬಂಧಿಸಿದ್ದೆಂದು ಗಣೇಶ್-ಗಿರಿಜಾಪತಿ ಭಾವಿಸುತ್ತಾರೆ. ಆದರೆ ಇವುಗಳ ಮೇಲಿರುವ ಲಿಪಿ, ವಿಜಯನಗರ ಕಾಲಕ್ಕೂ ಸೇರಲು ಅವಕಾಶವಿದೆ. ಆದುದರಿಂದ ಇವುಗಳನ್ನು ಹೊಯ್ಸಳ ನಾಣ್ಯಗಳೆಂದು ಭಾವಿಸುವುದು ಕಷ್ಟವಾಗುತ್ತದೆ. ಇವುಗಳ ಅಳತೆ 0.4"; ತೂಕದಲ್ಲಿ ಬದಲಾವಣೆ ಕಾಣಬರುತ್ತದೆ.

ಹೊಯ್ಸಳ ದೊರೆಗಳಿಗೆ ಸೇರದೇ ಇದ್ದರೂ, ಆ ಕಾಲದ ಧಾರ್ಮಿಕ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ರಾಮಾನುಜಾಚಾರ್ಯರ ಚಿತ್ರವಿರುವ ನಾಣ್ಯವನ್ನು ಇಲ್ಲಿ ಪ್ರಸ್ತಾಪಿಸಬಹುದು. ಇದೊಂದು ತಾಮ್ರದ ನಾಣ್ಯ. ಇದರ ಅಳತೆ 0.6"; ತೂಕ 35 ಗ್ರೇನ್. ಈ ನಾಣ್ಯ ದೊರಕಿರುವುದು ದಕ್ಷಿಣ ಆರ್ಕಾಟ್‌ಗೆ ಸೇರಿದ ತಿರುಕ್ಕೋಯಿಲೂರು ಎಂಬಲ್ಲಿ.

ಮು : ಪದ್ಮಾಸನದಲ್ಲಿ ಕುಳಿತಿರುವ ಸಂತ; ಅವರ ಬಲಭುಜದ ಮೇಲೆ ಬಟ್ಟೆಯನ್ನು ಕಟ್ಟಿರುವ ದಂಡವಿದೆ; ಕೈಗಳು ಅಂಜಲಿ ಮುದ್ರೆಯಲ್ಲಿವೆ; ಹಿಂಭಾಗದಲ್ಲಿ ಪ್ರಭಾವಳಿಯು ಕಾಣುತ್ತದೆ.

ಹಿ : ಎರಡು ಸಾಲುಗಳು ಕನ್ನಡ ಬರಹ

ಶ್ರೀ ಪಟ್ಟಣ
ಅಥವಾ
ಶ್ರೀ ಕೃಷ್ಣ ಪ




ಮುಮ್ಮುಖದಲ್ಲಿರುವ ಸಂತರ ಚಿತ್ರವನ್ನು ನೋಡಿದರೆ ಅವರು ರಾಮಾನುಜಾಚಾರ್ಯರಿರಬೇಕೆಂದು ಊಹಿಸಲು ಅವಕಾಶವಿದೆ. ಕೈಯಲ್ಲಿ ದಂಡವಿರುವುದರಿಂದ ಅದು ಯಾವ ದೇವರ ಚಿತ್ರವೂ ಅಲ್ಲ. ಹಿಮ್ಮುಖದ ಬರವಣಿಗೆಯನ್ನು ಓದುವುದರಲ್ಲಿ ಭಿನ್ನತೆಯಿದೆ. ಕೆಲವರು ಈ ಬರಹವನ್ನು ಶ್ರೀಪಟ್ಟಣ ಎಂದು ಓದಿ ಇದು ಶ್ರೀರಂಗಪಟ್ಟಣ ಅಥವಾ ಶ್ರೀರಂಗಂ ಇರಬಹುದು ಎಂದು ಭಾವಿಸಿದರು. ಈ ಎರಡು ಸ್ಥಳಗಳೂ ರಾಮಾನುಜಾಚಾರ್ಯರಿಗೆ ಸಂಬಂಧಿಸಿದವು. ಗಣೇಶ್-ಗಿರಿಜಾಪತಿಯವರು ಹಿಮ್ಮುಖದ ಬರಹವನ್ನು ಶ್ರೀ ಕೃಷ್ಣಪ ಎಂದು ಓದಿದ್ದಾರೆ. ಈತನು ಬೇಲೂರು ನಾಯಕರ ವಂಶಕ್ಕೆ ಸೇರಿದ ದೊರೆ. ಈ ಹೆಸರಿನ ಅನೇಕ ದೊರೆಗಳು ವಿಜಯನಗರದ ಸಾಮಂತರಾಗಿ ರಾಜ್ಯವಾಳಿದರು. ಇದನ್ನು ಬೇಲೂರಿನ ಕೃಷ್ಣಪ್ಪನಾಯಕ ಎಂದು ಭಾವಿಸಿದರೆ, ಅದಕ್ಕೆ ಪೂರಕವಾಗಿ ಬೇಲೂರಿನ ಕ್ರಿ.ಶ. 1565ರ ಶಾಸನವು ನಮ್ಮ ಸಹಾಯಕ್ಕೆ ಬರುತ್ತದೆ. ಎಂಬರುಮಾನಾರ್ ಜೀಯರ್ ಎಂಬ ತಿರುಕೋಯಿಲೂರಿನ ಯತಿಗಳು ಬೇಲೂರಿಗೆ ಬಂದು ನೆಲಸಿದ್ದರೆಂದೂ, ಅವರಿಗೆ ಒಂದು ದಾನವನ್ನು ಕೊಡಲಾಯಿತೆಂದೂ ಈ ಶಾಸನ ತಿಳಿಸುತ್ತದೆ. ಎರ್ರ ಕೃಷ್ಣಪ್ಪನಾಯಕ, ಅವನ ತಂದೆ - ತಾಯಿಗಳು ಮತ್ತು ಹೆಂಡತಿಯ ಪುಣ್ಯಾರ್ಥವಾಗಿ ಈ ದಾನವನ್ನು ನೀಡಲಾಗಿದೆ ಎಂದು ಶಾಸನ ಖಚಿತಪಡಿಸುತ್ತದೆ. ಅಂದರೆ ತಿರುಕ್ಕೊಯಿಲೂರಿಗೂ ರಾಮಾನುಜಕೂಟಕ್ಕೂ ಈ ಕಾಲದಲ್ಲಿ ಸಂಬಂಧವಿದ್ದುದು ಖಚಿತವಾಗುತ್ತದೆ. ಈ ನಾಣ್ಯ ದೊರಕಿರುವುದು ತಿರುಕ್ಕೋಯಿಲೂರಿನಲ್ಲಿ ಎಂಬುದನ್ನು ಮರೆಯುವಂತಿಲ್ಲ. ಈ ನಾಣ್ಯದ ಹಿಮ್ಮುಖದ ಬರಹದ ಖಚಿತತೆ ಏನೇ ಇರಲಿ, ಮುಮ್ಮುಖ ಮಾತ್ರ ರಾಮಾನುಜಾಚಾರ್ಯರಿಗೆ ಸೇರಿದ್ದು ಎನ್ನುವುದರಲ್ಲಿ ಸಂಶಯವಿಲ್ಲ. ಒಟ್ಟಿನಲ್ಲಿ ಇದೊಂದು ವಿಶಿಷ್ಟ ನಾಣ್ಯ. ಇದು ಚಲಾವಣೆಯಲ್ಲಿದ್ದ ನಾಣ್ಯವಲ್ಲ; ಇದೊಂದು ಸ್ಮಾರಕ ನಾಣ್ಯವೆಂದು ಭಾವಿಸಬೇಕು.

ಈ ಮೇಲಿನ ಎಲ್ಲ ಅಂಶಗಳನ್ನೂ ಗಮನಿಸಿದರೆ, ಹೊಯ್ಸಳ ನಾಣ್ಯ ಇತಿಹಾಸದಲ್ಲಿ ಅನೇಕ ಕೊರೆಗಳಿರುವುದು ನಮ್ಮ ಗಮನ ಸೆಳೆಯುತ್ತದೆ. ಇಮ್ಮಡಿ ಬಲ್ಲಾಳ, ಮುಮ್ಮಡಿ ಬಲ್ಲಾಳ, ನಾರಸಿಂಹ, ರಾಮನಾಥ ಮುಂತಾದವರ ನಾಣ್ಯಗಳು ಇನ್ನೂ ದೊರಕಬೇಕಾಗಿವೆ. ಹೊಯ್ಸಳ ರಾಜಧಾನಿಗಳಲ್ಲಿ ಉತ್ಖನನ ನಡೆಸಿದರೆ, ಇವರ ನಾಣ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯಬಹುದೆಂಬ ನಿರೀಕ್ಷೆಯಿದೆ.

3. ದೇವಗಿರಿಯ ಸೇವುಣರ ನಾಣ್ಯಗಳು

ದೇವಗಿರಿಯ ಸೇವುಣರು ಅಥವಾ ಯಾದವರು ದಖನ್ನಿನ ಇತಿಹಾಸದಲ್ಲಿ ಮುಖ್ಯ ಪಾತ್ರ ವಹಿಸಿದವರು. ಕರ್ನಾಟಕಕ್ಕೆ ಸೇರಿದ ಇವರು ಹೊಯ್ಸಳರೊಡನೆ ಸಾಕಷ್ಟು ಸೆಣಸಾಡಿ, ಕೊನೆಗೆ ದಕ್ಷಿಣ ಕರ್ನಾಟಕಕ್ಕೆ ಬರಲಾರದೆ, ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದ ಕೆಲವು ಭಾಗಗಳನ್ನು ತಮ್ಮದಾಗಿಸಿಕೊಂಡು ದೇವಗಿರಿಯಿಂದ

ರಾಜ್ಯವಾಳಿದರು. ಕ್ರಿ.ಶ. 1000 ದಿಂದ ಆರಂಭಿಸಿ ಕ್ರಿ.ಶ. 1325ರ ವರೆಗೆ ವಿಶಾಲವಾದ ಈ ರಾಜ್ಯವನ್ನು ಆಳಿ ಕೊನೆಗೆ ಮುಸ್ಲಿಮರ ಆಘಾತದಿಂದ ಇತಿಹಾಸದ ಹೊರಕ್ಕೆ ನಿರ್ಗಮಿಸಿದರು. ಕಲ್ಯಾಣದ ಚಾಲುಕ್ಯರು ಬಲಹೀನರಾಗುತ್ತಿದ್ದಂತೆ, ಅವರ ರಾಜ್ಯವನ್ನು ಕಬಳಿಸಲು ಹೊಯ್ಸಳರು ಮತ್ತು ಸೇವುಣರು ಪ್ರಯತ್ನಿಸಿದರು. ಒಂದರ ಮೇಲೆ ಒಂದರಂತೆ ಅನೇಕ ಯುದ್ಧಗಳು ಈ ಪರಸ್ಪರರಲ್ಲಿ ನಡೆದವು. ಇಬ್ಬರಿಗೂ ಮನಶ್ಶಾಂತಿ ಲಭಿಸಲಿಲ್ಲ. ಇದರಿಂದಾಗಿ ಎರಡೂ ರಾಜ್ಯಗಳ ಸಂಪತ್ತು ನಾಶವಾಗಿ, ಮುಸ್ಲಿಮರು ಇವರನ್ನು ಸೋಲಿಸುವುದು ಸುಲಭವಾಯಿತು. ಚಾಲುಕ್ಯರ ಸಾಮಂತರಾಗಿ, ಅದಕ್ಕೂ ಮೊದಲು ರಾಷ್ಟ್ರಕೂಟರ ಸಾಮಂತರಾಗಿ ರಾಜ್ಯವಾಳಿದ ಸೇವುಣರನ್ನು ಪರಮೋಚ್ಚ ರಾಜರನ್ನಾಗಿ ಮಾಡಿದ ಕೀರ್ತಿ ಐದನೆಯ ಭಿಲ್ಲಮನಿಗೆ (1173-1182) ಸೇರುತ್ತದೆ. ನಂತರ ಸಿಂಘಣ, ಮಹಾದೇವ, ರಾಮಚಂದ್ರ ಮುಂತಾದ ರಾಜರುಗಳು ಆಳಿ ಈ ರಾಜ್ಯವನ್ನು ಅಭಿವೃದ್ಧಿ ಪಡಿಸಿದರು. ಸೇವುಣರು ಮರಾಠಿಯವರೆಂದು ಹಿಂದಿನ ತಲೆಮಾರಿನ ಇತಿಹಾಸಕಾರರು ಭಾವಿಸಿದ್ದರು. ಆದರೆ ಇತ್ತೀಚಿನ ಸಂಶೋಧನೆಗಳಿಂದ ಇವರು ಕರ್ನಾಟಕದವರೆಂದು ತಿಳಿದುಬಂದಿದೆ. ಇವರ ನಾಣ್ಯಗಳು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಮಧ್ಯಪ್ರದೇಶಗಳಲ್ಲಿ ದೊರಕಿವೆ.

ಕನ್ನಡಿಗರೇ ಆದ ಸೇವುಣರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಹೆಚ್ಚಿನ ಸಂಖ್ಯೆಯ ಶಾಸನಗಳನ್ನು ಹೊರಡಿಸಿದ್ದಾರೆ. ಈ ಶಾಸನಗಳು ಕರ್ನಾಟಕದಲ್ಲಿ ಮಾತ್ರವಲ್ಲದೆ ಅದರ ಹೊರಗಡೆಯೂ ಸಾಕಷ್ಟು ಸಂಖ್ಯೆಯಲ್ಲಿ ದೊರಕಿವೆ. ಇದರಿಂದ ಆಗಿನ ಕಾಲದಲ್ಲಿ ಕರ್ನಾಟಕ ಎಷ್ಟೊಂದು ವಿಶಾಲವಾಗಿತ್ತು ಎಂಬುದು ತಿಳಿಯುತ್ತದೆ. ನಾಣ್ಯಶಾಸ್ತ್ರದ ದೃಷ್ಟಿಯಿಂದಲೂ ಸೇವುಣರ ಶಾಸನಗಳು ಮಹತ್ವವನ್ನು ಪಡೆದಿವೆ. ಏಕೆಂದರೆ ಅವುಗಳಲ್ಲಿ ಅಂದು ಚಲಾವಣೆಯಲ್ಲಿದ್ದ ವಿವಿಧ ನಾಣ್ಯಗಳು ವಿಷಯ ಹೇರಳವಾಗಿ ಕಾಣಬರುತ್ತವೆ. ಇವರ ಶಾಸನಗಳಿಂದ ತಿಳಿದುಬರುವ ನಾಣ್ಯಗಳೆಂದರೆ ನಿಷ್ಕ, ದ್ರಮ್ಮ, ಗದ್ಯಾಣ, ಹೊನ್, ಸುವರ್ಣ, ಪಣ, ಚವುಲ, ಕಾಕಿನೀ, ರೂಕ, ಹಾಗ, ಟಂಕ, ಬೇಳೆ, ವೀಸ, ಅರೆವೀಸ ಮತ್ತು ಅಚ್ಚು.

ಗದ್ಯಾಣವೇ ಈ ಕಾಲದ ಅತ್ಯಂತ ಮುಖ್ಯವಾದ ಹಾಗೂ ವರಿಷ್ಠ ನಾಣ್ಯವಾಗಿತ್ತು. ವರಹ ಇನ್ನೂ ಜನಾನುರಾಗಿಯಾಗಿರಲಿಲ್ಲ. ಗದ್ಯಾಣವನ್ನೇ ನಿಷ್ಕ ಮತ್ತು ಸುವರ್ಣ ಎಂದೂ ಕರೆಯುತ್ತಿದ್ದರು. ಈ ಕಾಲದಲ್ಲಿಯೂ ವಿವಿಧ ರೀತಿಯ ಗದ್ಯಾಣಗಳಿದ್ದವೆಂಬುದನ್ನು ಶಾಸನಗಳು ದೃಢಪಡಿಸುತ್ತವೆ. ಲೊಕ್ಕಿ ಗದ್ಯಾಣವೆಂಬುದು ಆಗಲೇ ಗಮನಿಸಿರುವಂತೆ ಲೊಕ್ಕಿಗುಂಡಿಯ ಟಂಕಶಾಲೆಯಲ್ಲಿ ತಯಾರಾದ ಗದ್ಯಾಣ. ಅಂಬಿಲಿ ಗದ್ಯಾಣವೆಂದರೆ, ಅಂಬಿಲಿ ಎಂಬಲ್ಲಿದ್ದ ಟಂಕಶಾಲೆಯಲ್ಲಿ ಅಚ್ಚಿಸಲಾದ ಗದ್ಯಾಣ. ಗಜಮಲ್ಲ ಗದ್ಯಾಣವೆನ್ನುವುದರ ಸರಿಯಾದ ಅರ್ಥ ತಿಳಿಯದು. ಬಹುಶಃ ಈ ನಾಣ್ಯದ ಮೇಲೆ

ಗಜಮಲ್ಲ ಎಂಬ ಬಿರುದು ಇದ್ದಿರಬಹುದು. ಪ್ರಿಯ ಶ್ರಾಹಿ ಗದ್ಯಾಣವೆನ್ನುವುದು ಉತ್ತಮ ಚಿನ್ನದಿಂದ ತಯಾರಾದ ಮತ್ತು ಚಲಾವಣೆಯಲ್ಲಿದ್ದ ಗದ್ಯಾಣ. ಪಂಗೆ ಗದ್ಯಾಣ ಎನ್ನುವುದರ ಅರ್ಥ ತಿಳಿದಿಲ್ಲ. ಬಹುಶಃ 'ಪಂಗು' ಅಥವಾ 'ಪಂಗ' ಎನ್ನುವ ರಾಜಾದಾಯಕ್ಕೆ ಸಂಬಂಧಪಟ್ಟಿದ್ದಿರಬೇಕು.

ನಿಷ್ಕ ಎನ್ನುವ ನಾಣ್ಯದ ವಿಷಯ ಕೆಲವು ಶಾಸನಗಳಲ್ಲಿ ಕಾಣಬರುತ್ತದೆ. ದೊರೆ ಕೃಷ್ಣನ ಬೆಹಟ್ಟಿ ಶಾಸನದಲ್ಲಿ, ದೊರೆಯು ಅಗ್ರಹಾರಕ್ಕೆ ನಾನೂರು ನಿಷ್ಕಗಳನ್ನು ಕೊಡುಗೆಯಾಗಿ ನೀಡಿದನೆಂದು ಹೇಳಿದೆ. ಬಹುಶಃ ಇದು ಚಿನ್ನದ ಗದ್ಯಾಣವನ್ನು ಸೂಚಿಸುತ್ತದೆ ಎಂದು ಭಾವಿಸಬೇಕು. ಭಾಸ್ಕರಾಚಾರ್ಯನ ಲೀಲಾವತೀ ಎಂಬ ಗ್ರಂಥದಲ್ಲಿ ನಿಷ್ಕವನ್ನು ಚಿನ್ನದ ನಾಣ್ಯವೆಂದು ತಿಳಿಸಿ, ಅದು ಹದಿನಾರು ಬೆಳ್ಳಿಯ ದ್ರಮ್ಮಗಳಿಗೆ ಸಮನಾಗಿದ್ದಿತು ಎಂದು ವಿವರಣೆ ನೀಡಿದೆ. ಸೇವುಣ ಶಾಸನಗಳಲ್ಲಿ ಬೆಳ್ಳಿಯ ದ್ರಮ್ಮಗಳ ಪ್ರಸ್ತಾಪ ಆಗಾಗ್ಗೆ ಬರುತ್ತದೆ. ಇದು ನಿಜವಾಗಿಯೂ ಆಶ್ಚರ್ಯಕರವಾದುದು. ಗ್ರೀಕರ ಪ್ರಭಾವ ಕಡಿಮೆ ಆದ ಮೇಲೆ ಅವರು ಬಳಸುತ್ತಿದ್ದ ಡ್ರಕ್ಮ ಅಥವಾ ದ್ರಮ್ಮದ ಉಪಯೋಗವೂ ಕಡಿಮೆಯಾಗಿ ಈ ಸಮಯಕ್ಕೆ ಅದು ಪೂರ್ಣವಾಗಿ ನಿಂತುಹೋಗಿರುವ ಸಾಧ್ಯತೆಗಳೇ ಹೆಚ್ಚು. ಆದುದರಿಂದ ಬೆಳ್ಳಿಯ ನಾಣ್ಯವನ್ನೇ ದ್ರಮ್ಮ ಎಂದು ಸಮಕಾಲೀನ ಸೇವುಣ ಶಾಸನಗಳು ಉಲ್ಲೇಖಿಸಿವೆ ಎಂದು ಭಾವಿಸಬೇಕು. ಸೇವುಣರ ಸಾಮಂತರಾಗಿದ್ದ ಶಿಲಾಹಾರರ ಶಾಸನ ಒಂದರಲ್ಲಿ ಪೋರುತ್ತ ದ್ರಮ್ಮದ ಉಲ್ಲೇಖವಿದೆ. ಇದರ ಅರ್ಥ ಏನೆಂಬುದು ತಿಳಿದಿಲ್ಲ.

ರೂಕ ಎನ್ನುವುದು ಸೇವುಣರ ಶಾಸನಗಳಲ್ಲಿ ಕಾಣಬರುವ ಇನ್ನೊಂದು ನಾಣ್ಯ. ದೊರೆ ರಾಮಚಂದ್ರನ ಶಾಸನದಲ್ಲಿ ಪಂಡರಾಪುರದ ವಿಠಲನಿಗೆ ರೂಕಗಳನ್ನು ದಾನ ಮಾಡಿದ ವಿಷಯವನ್ನು ಹೇಳಿದೆ. ಸ್ಮೃತಿಸ್ಥಲ ಎನ್ನುನ ಮಹಾನುಭಾವ ಗ್ರಂಥದಲ್ಲಿಯೂ ರೂಕ ಎಂಬ ನಾಣ್ಯದ ಪ್ರಸ್ತಾಪವಿದೆ. ಈ ನಾಣ್ಯ ವಿಶೇಷವಾಗಿ ಆಂಧ್ರದ ಭಾಗಗಳಲ್ಲಿ ಚಲಾವಣೆಯಲ್ಲಿದ್ದಿತು. ಇದೊಂದು ಬೆಳ್ಳಿಯ ನಾಣ್ಯ. ಇದು ರೂಪ್ಯಕ ಅಥವಾ ರೂಪಾಯಿ ಎನ್ನುವ ನಾಣ್ಯಕ್ಕೆ ಸಮವೆಂದು ಕೆಲವರು ಭಾವಿಸುತ್ತಾರೆ. ಉದಾಹರಣೆಗೆ ಕಲಚುರಿ ದೊರೆ ಕೃಷ್ಣರಾಜನ ಕಾಲದ ನಾಣ್ಯಗಳನ್ನು ಕೃಷ್ಣರಾಜ ರೂಪ್ಯಕವೆಂದು ಕರೆಯುತ್ತಿದ್ದರು.

ಈ ಕಾಲದ ಇನ್ನೊಂದು ನಾಣ್ಯವೆಂದರೆ ಪಣ ಅಥವಾ ಹಣ. ಶಾಸನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದು ಚಿನ್ನದ ಹಾಗೂ ತಾಮ್ರದ ನಾಣ್ಯವಾಗಿದ್ದಿತೆಂದು ತಿಳಿಯುತ್ತದೆ. ಸಿಂಘಣನ ಪುಲುಂಜ ಶಾಸನದಿಂದ ಒಂದು ಪಣಕ್ಕೆ ನಾಲ್ಕು ಹಾಗಗಳು ಸಮವಾಗಿದ್ದವು ಎಂದು ಗೊತ್ತಾಗುತ್ತದೆ. ಭಾಸ್ಕರಾಚಾರ್ಯನ ಪ್ರಕಾರ ಒಂದು ದ್ರಮ್ಮಕ್ಕೆ ಹದಿನಾರು ಪಣಗಳು.

ಅನೇಕ ಮಹಾನುಭಾವ ಮರಾಠೀ ಗ್ರಂಥಗಳಲ್ಲಿ ಆಸು ಎಂಬ ನಾಣ್ಯದ ಪ್ರಸ್ತಾಪ ಆಗಾಗ್ಗೆ ಕಾಣಬರುತ್ತದೆ. ಲೀಲಾಚರಿತದ ಪ್ರಕಾರ ದೊರೆ ಕೃಷ್ಣನು ಚಕ್ರಧರಸ್ವಾಮಿಗೆ ಆಸು ಎಂಬ ನಾಣ್ಯಗಳನ್ನು ಕಾಣಿಕೆಯಾಗಿ ಅರ್ಪಿಸಿದನು. ಅಂಬೆ ಮತ್ತು ಪಟಾನ್ ಶಾಸನಗಳೂ ಕೂಡ ಆಸು ಎಂಬ ನಾಣ್ಯವನ್ನು ಉಲ್ಲೇಖಿಸುತ್ತವೆ. ಅಚ್ಚು ಎಂಬ ನಾಣ್ಯದ ಮರಾಠೀ ರೂಪವೇ ಆಸು ಇರಬೇಕೆಂದು ವಿದ್ವಾಂಸರು ಭಾವಿಸುತ್ತಾರೆ. ಟಂಕಾಧಿಕಾರಿಯಾಗಿದ್ದ ಠಕ್ಕೂರ ಫೇರು, ತನ್ನ ಗ್ರಂಥ 'ದ್ರವ್ಯಪರೀಕ್ಷೆ' ಯಲ್ಲಿ ಸೇವುಣರ ಹೇಮಾಚ್ಚು ಎಂಬ ನಾಣ್ಯಗಳನ್ನು ಉಲ್ಲೇಖಿಸಿದ್ದಾನೆ. ಮಹಾನುಭಾವ ಗ್ರಂಥಗಳಲ್ಲಿ ಕಾಸು, ಕವಡಾ, ದಾಮ, ಚಿಂಚೊರಾ, ಪೊಫಲಿ ಮತ್ತು ಅಡ್ಡ ಎಂಬ ನಾಣ್ಯಗಳು ಕಾಣಸಿಗುತ್ತವೆ. ಇವುಗಳ ಸರಿಯಾದ ಮೌಲ್ಯ ತಿಳಿದಿಲ್ಲ. ಜ್ಞಾನೇಶ್ವರೀ ಗ್ರಂಥದಲ್ಲಿ ಚಾಮ ಎಂಬ ಪದವು ಚರ್ಮದ ನಾಣ್ಯ ಎನ್ನುವ ಅರ್ಥದಲ್ಲಿ ಕಂಡುಬರುತ್ತದೆ. ನಿಜವಾಗಿಯೂ ಈ ರೀತಿಯ ನಾಣ್ಯ ಚಲಾವಣೆಯಲ್ಲಿದ್ದಿತೆಂದು ನಂಬುವುದು ಕಷ್ಟ. ರಾಜನ ಅಧಿಕಾರದಿಂದ ಚರ್ಮವೂ ನಾಣ್ಯವಾಗಬಲ್ಲದು ಎಂದು ಹೇಳಲು ಜ್ಞಾನೇಶ್ವರ ಈ ಪದವನ್ನು ಬಳಸಿರಬೇಕೆಂದು ಊಹಿಸಬಹುದು. ಹಿಂದಿನ ಕಾಲದಲ್ಲಿದ್ದಂತೆ ಸೇವುಣರ ಕಾಲದಲ್ಲಿಯೂ ನಾಣ್ಯಗಳನ್ನು ತಯಾರು ಮಾಡುವ ಕೆಲಸವನ್ನು ಖಾಸಗಿ ಜನಗಳಿಗೆ ವಹಿಸಲಾಗುತ್ತಿದ್ದಿತು. ಅಂತಹವರು ಟಂಕೆ, ಮುದ್ರೆ ಎಂಬ ತೆರಿಗೆಯನ್ನು ಸರಕಾರಕ್ಕೆ ಕೊಡಬೇಕಾಗಿದ್ದಿತು.

ಸೇವುಣರ ಕಾಲದ ಶಾಸನಗಳಲ್ಲಿ ಹಾಗೂ ಮಹಾನುಭಾವ ಗ್ರಂಥಗಳಲ್ಲಿ ದೊರಕುವ ಮಾಹಿತಿಗಳ ಆಧಾರದ ಮೇಲೆ ಸೇವುಣರ ನಾಣ್ಯಗಳ ಪಟ್ಟಿಯನ್ನು ಹೀಗೆ ತೋರಿಸಬಹುದು.

1 ಗದ್ಯಾಣ = 1 ನಿಷ್ಕ = 1 ಸುವರ್ಣ = 59 ಗ್ರೇನ್

1 ಗದ್ಯಾಣ = 16 ದ್ರಮ್ಮ

1 ಗದ್ಯಾಣ = 10 ಪಣ

1 ಪಣ = 4 ಹಾಗ

1 ಹಾಗ = 5 ವೀಸ

1 ವೀಸ = 2 ಬೇಳೆ

ಸೇವುಣರ ನಾಣ್ಯಗಳು ತಾಂತ್ರಿಕ ದೃಷ್ಟಿಯಿಂದ ವಿಶಿಷ್ಟವಾದವು. ಏಕೆಂದರೆ ಇವುಗಳು ಪಂಚ್ ಮಾಡಿದ ತಾಂತ್ರಿಕತೆ ಹಾಗೂ ದ್ವಿಮುಖ ಮುದ್ರೆಗಳ ತಾಂತ್ರಿಕತೆ ಎರಡಕ್ಕೂ ಸೇರುತ್ತವೆ. ಅಂದರೆ ಈ ಎರಡೂ ರೀತಿಯ ನಾಣ್ಯಗಳನ್ನು ಅವರು ಬಳಕೆಗೆ ತಂದರು. ಸೇವುಣರ ನಾಣ್ಯಗಳು ವ್ಯಾಪಕವಾಗಿ ವಿವಿಧ ಸ್ಥಳಗಳಲ್ಲಿ ದೊರಕಿರುವುದು ಗಮನಾರ್ಹ ಸಂಗತಿ. ಆಂಧ್ರಪ್ರದೇಶದಲ್ಲಿ ಇವರ ಹೆಚ್ಚಿನ ಸಂಖ್ಯೆಯ ನಾಣ್ಯಗಳು ದೊರಕಿವೆ.

ಕರೀಂನಗರ, ಮೇಡಕ್, ಮಹಬೂಬ್‌ನಗರ, ಕೃಷ್ಣಾ ಮುಂತಾದ ಜಿಲ್ಲೆಗಳಲ್ಲಿ ಈ ನಾಣ್ಯಗಳು ದೊರಕಿವೆ. ಕೃಷ್ಣಾ ಜಿಲ್ಲೆಯ ರಾಚಪಟ್ಟಣಂ ಎಂಬಲ್ಲಿ ದೊರಕಿರುವ ನಾಣ್ಯಗಳು ಇತಿಹಾಸದ ದೃಷ್ಟಿಯಿಂದ ಬಲು ಮುಖ್ಯವಾದವು. ಮಹಾರಾಷ್ಟ್ರ, ಛತ್ತೀಸ್‌ಗಡ, ಒರಿಸ್ಸ, ಮಧ್ಯಪ್ರದೇಶ ಮತ್ತು ಕರ್ನಾಟಕಗಳಲ್ಲಿ ಇವರ ನಾಣ್ಯಗಳು ದೊರೆತಿವೆ. ಈಗ ಈ ನಾಣ್ಯಗಳನ್ನು ವಿವರವಾಗಿ ಗಮನಿಸಬಹುದು.

ಮೂರನೆಯ ಸೇವುಣದೇವನ ನಾಣ್ಯ (ಕ್ರಿ.ಶ. 1123-1142)

ಇತ್ತೀಚಿಗೆ ಮಹಾರಾಷ್ಟ್ರದಲ್ಲಿ ಒಂದು ಬೆಳ್ಳಿಯ ನಾಣ್ಯ ದೊರಕಿತು. ಅದರ ಅಳತೆ 0.4"; ತೂಕ 100 ಗ್ರೇನ್.

ಮು : ಬಾಲವನ್ನು ಮೇಲೆತ್ತಿಕೊಂಡಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ

ಸೇಉ

ಣದೇವ

ಸೇವುಣರು ಸಾಮಂತರಾಗಿ ಆಳಿದ ಸಮಯದಲ್ಲಿ ಈ ಹೆಸರಿನ ಮೂವರು ರಾಜರುಗಳಿದ್ದರು. ಮೊದಲನೆಯವನು ಸೇವುಣಚಂದ್ರ 1 (850-875). ಇವನು ನಾಣ್ಯವನ್ನು ಟಂಕಿಸುವಷ್ಟು ಸಮರ್ಥನಾಗಿರಲಿಲ್ಲ. ಎರಡನೆಯವನು ಸೇವುಣಚಂದ್ರ 2 (1069-1098). ಮೂರನೆಯವನು ಇವನ ಮಗ ಸೇವುಣದೇವ ಹಾಗೂ ಮಲ್ಲುಗಿಯ ತಂದೆ (1123-1142). ಇವನು ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಸಾಮಂತನಾಗಿದ್ದು ಕರ್ಪೂರತಿಲಕ ಎಂಬ ಆನೆಯನ್ನು ತಂದು, ಆರನೆಯ ವಿಕ್ರಮಾದಿತ್ಯನು ಕರ್ಪೂರವ್ರತವನ್ನು ಪೂರೈಸಲು ಸಹಾಯಕನಾದನು. ಆದುದರಿಂದ ಈ ಬೆಳ್ಳಿಯ ನಾಣ್ಯವನ್ನು ಟಂಕಿಸಿದವನು ಮೂರನೆಯ ಸೇವುಣದೇವ ಎಂದು ತರ್ಕಿಸಲಾಗಿದೆ. ಸೇವುಣರು ಸಾಮಂತರಾಗಿದ್ದ ಸಮಯದ ಯಾವ ನಾಣ್ಯವೂ ದೊರೆತಿರಲಿಲ್ಲ. ಈ ನಾಣ್ಯ ದೊರೆತ ಮೇಲೆ, ಸಾಮಂತ ಸೇವುಣರಿಗೆ ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ಚಾಲುಕ್ಯರು ನೀಡಿದ್ದರು ಎಂಬುದು ಖಚಿತವಾಗುತ್ತದೆ. ಆದುದರಿಂದ ಈ ನಾಣ್ಯ ಮುಖ್ಯವಾದದ್ದು.

ಐದನೆಯ ಭಿಲ್ಲಮನ ನಾಣ್ಯಗಳು (ಕ್ರಿ.ಶ. 1173-1192)

ಸೇವುಣರನ್ನು ಸ್ವತಂತ್ರರನ್ನಾಗಿ ಮಾಡಿದ ಈ ದೊರೆಯ ಚಿನ್ನದ, ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳು ದೊರೆತಿವೆ. ಚಿನ್ನದ ನಾಣ್ಯಗಳು ವೃತ್ತಾಕಾರವಾಗಿದ್ದು ಪಂಚ್ ರೀತಿಯ ನಾಣ್ಯಗಳಾಗಿವೆ. ಅವುಗಳ ಅಳತೆ 0.6"; ತೂಕ 58 ಗ್ರೇನ್.



ಮು : ಮಧ್ಯದಲ್ಲಿ ಅಗಲವಾದ ಎಂಟು ದಳಗಳ ಪದ್ಮವಿದೆ; ಅದರ ಎರಡೂ ಕಡೆಗಳಲ್ಲಿ ಶ್ರೀ ಎಂಬ ಕನ್ನಡ ಅಕ್ಷರಗಳು; ಕೆಳಭಾಗದಲ್ಲಿ ಶಂಖವಿದೆ; ಮೇಲ್ಭಾಗದಲ್ಲಿ ಎರಡು ಸಾಲುಗಳ ನಾಗರೀ ಬರಹ

ಶ್ರೀ ಭಿಲ್ಲ

ಮದೇವ

ಈ ನಮೂನೆಯ ನಾಣ್ಯಗಳಲ್ಲಿ ಸ್ವಸ್ತಿಕ, ರಾಜದಂಡ ಮುಂತಾದ ಚಿಹ್ನೆಗಳು ಶಂಖದ ಬದಲು ಇರುವುದೂ ಉಂಟು. ಇವುಗಳ ಜೊತೆಗೆ ಸಣ್ಣ ಚುಕ್ಕೆಗಳು ಕಾಣಬರುತ್ತವೆ. ಬಹುಶಃ ಇವು ಟಂಕಶಾಲೆಯ ಗುರುತುಗಳಿರಬಹುದೆಂದು ಭಾವಿಸಲಾಗಿದೆ. ಇದಕ್ಕೆ ಹಿಮ್ಮುಖವಿಲ್ಲ.

ಈ ರಾಜನ ಇನ್ನೊಂದು ನಮೂನೆಯ ನಾಣ್ಯ ಬೆಳ್ಳಿಯಿಂದ ತಯಾರಾದದ್ದು. ಇದೂ ವೃತ್ತಾಕಾರದಲ್ಲಿದ್ದು, ಇದರ ಅಳತೆ 0.5"; ತೂಕ 135 ಗ್ರೇನ್.

ಮು : ಚುಕ್ಕಿಗಳಿಂದ ವಿನ್ಯಾಸಗೊಳಿಸಿದ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ ಭಿಲ್ಲ

ಮದೇವ

ಈ ನಮೂನೆಯ ನಾಣ್ಯಗಳು ಅನೇಕ ಅಳತೆ ಮತ್ತು ತೂಕಗಳಲ್ಲಿ ದೊರಕಿವೆ. ಈ ನಾಣ್ಯಗಳ ತೂಕದ ಆಧಾರದ ಮೇಲೆ ಇವುಗಳನ್ನು ದ್ವಿಮಾಷಕ, ಮಾಷಕ, ಅರ್ಧಮಾಷಕ, ಪಾದಮಾಷಕ, ಹತ್ತನೆಯ ಒಂದು ಭಾಗದ ಮಾಷಕ ಎಂದು ಗುರುತಿಸಬಹುದು. ಕ್ರಮವಾಗಿ ಇವುಗಳ ತೂಕ 270, 135, 68, 34 ಮತ್ತು 13 ಗ್ರೇನ್‌ಗಳಾಗುತ್ತವೆ. ಈ ಮೇಲಿನ ತೂಕಗಳ ಎಲ್ಲ ನಾಣ್ಯಗಳೂ ದೊರಕಿವೆ.

ಭಿಲ್ಲಮನು ಟಂಕಿಸಿದ ತಾಮ್ರದ ನಾಣ್ಯದ ವಿವರಗಳು ಹೀಗಿವೆ. ಇದು ವೃತ್ತಾಕಾರದಲ್ಲಿದ್ದು, ಇದರ ಅಳತೆ 0.3"; ತೂಕ 18 ಗ್ರೇನ್.

ಮು : ಬಲಕ್ಕಿರುವ ಸಿಂಹ

ಹಿ : ಎರಡು ಸಾಲುಗಳು ನಾಗರೀ ಬರಹ

ಶ್ರೀ ಭಿಲ್ಲ

ಮದೇವ

ಇಮ್ಮಡಿ ಸಿಂಘಣನ ನಾಣ್ಯಗಳು (ಕ್ರಿ.ಶ. 1200-1247)

ಸೇವುಣರಲ್ಲಿ ಅತ್ಯಂತ ಶ್ರೇಷ್ಠ ದೊರೆಯೆನಿಸಿದ ಇಮ್ಮಡಿ ಸಿಂಘಣನು, ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ನಾಣ್ಯಗಳನ್ನು ಟಂಕಿಸಿದನೆಂದು ತಿಳಿದುಬಂದಿದೆ. ಆದರೆ ಇವನ ತಾಮ್ರದ ನಾಣ್ಯಗಳು ದೊರಕಿಲ್ಲ. ಇವನ ನಾಣ್ಯಗಳು ವೈವಿಧ್ಯಮಯವಾಗಿದ್ದು, ಅವುಗಳಲ್ಲಿ ಅನೇಕ ನಮೂನೆಗಳನ್ನು ಗುರುತಿಸಬಹುದು. ಸೋನ್‌ಪುರದ ಕೋಶಾಗಾರದಲ್ಲಿದ್ದ ಇವನ ಚಿನ್ನದ ನಾಣ್ಯಗಳು ಈ ರೀತಿ ಇವೆ. ಇವೆಲ್ಲವೂ ವೃತ್ತಾಕಾರವು; ಇವುಗಳ ಅಳತೆ 0.6"; ತೂಕ 57 ಗ್ರೇನ್. ಇವೆಲ್ಲವೂ ಪಂಚ್ ನಮೂನೆಗೆ ಸೇರಿದ ನಾಣ್ಯಗಳು.

ಮು : ಮಧ್ಯದಲ್ಲಿ ಎಂಟು ದಳಗಳ ಪದ್ಮ; ಕೆಳಗೆ ಶಂಖ; ಪಕ್ಕಗಳಲ್ಲಿ ಶ್ರೀ ಎಂಬ ಅಕ್ಷರ ಮತ್ತು ಚಕ್ರ; ಮೇಲ್ಭಾಗದಲ್ಲಿ ಒಂದು ಸಾಲಿನ ನಾಗರೀ ಬರಹ.

ಸಿಂಘಣ

ಈ ರೀತಿಯ ನಾಣ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿವೆ. ಕೆಲವು ನಾಣ್ಯಗಳಲ್ಲಿ ಸಣ್ಣ ಭಿನ್ನತೆ ಕಂಡುಬರುತ್ತದೆ. ಕೆಲವು ನಾಣ್ಯಗಳಲ್ಲಿ ಖಡ್ಗ ಕಂಡು ಬಂದರೆ, ಮತ್ತೆ ಕೆಲವಲ್ಲಿ ಬಿಲ್ಲು ಕಾಣಬರುತ್ತದೆ.

ಇವನ ಬೆಳ್ಳಿಯ ನಾಣ್ಯಗಳು ಇನ್ನೊಂದು ನಮೂನೆಗೆ ಸೇರುತ್ತವೆ. ಇವುಗಳನ್ನು ತೂಕದಿಂದ ಮಾಷಕ ಮೌಲ್ಯದ ನಾಣ್ಯಗಳೆಂದು ತಿಳಿಯಬಹುದು. ಇವುಗಳ ಅಳತೆ 0.4"; ತೂಕ 120 ರಿಂದ 135 ಗ್ರೇನ್.

ಮು : ನಾಣ್ಯದ ಪೂರ್ತಿ ಬಾಲವನ್ನು ಮೇಲಕ್ಕೆತ್ತಿಕೊಂಡಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ; ಕೆಳಗೆ ಅಂಕುಶ

ಶ್ರೀ ಸಿಂಘ

ಣದೇವ



ಈ ನಮೂನೆಯ ಕೆಲವು ನಾಣ್ಯಗಳ ಮೇಲೆ ಶ್ರೀ ಸಿಂಘಣ ಎಂಬ ಬರಹ ಮಾತ್ರವಿರುವುದೂ ಉಂಟು.

ಇತ್ತೀಚಿಗೆ ನಿತ್ಯಾನಂದ ಪೈ ಅವರು ಸಿಂಘಣನ ಹೆಂಡತಿ ರಾಣಿ ಕಾಂಚಲದೇವಿಯ ಹೆಸರಿರುವ ನಾಣ್ಯಗಳನ್ನು ಪ್ರಕಟಿಸಿದ್ದಾರೆ. ಇದರಿಂದ ಇವನಿಗೆ ಕಾಂಚಲದೇವಿ ಎಂಬ ರಾಣಿಯಿದ್ದಳು ಎಂಬುದು ಈ ನಾಣ್ಯದಿಂದ ಗೊತ್ತಾಗುತ್ತದೆ. ಇದು ಚಿನ್ನದ ನಾಣ್ಯ; ಇದರ ತೂಕ 53 ಗ್ರೇನ್, ಅಗಲ 0.6".

ಮು : ಶಂಖ ಮತ್ತು ಚಕ್ರಗಳ ನಡುವೆ ಖಡ್ಗ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ಸಿಂಘ

ಣ ಕಾಂಚ

ಲದೇವಿ

ಶಾಸನಗಳಿಂದಲೂ ಈ ರಾಣಿಯ ಹೆಸರು ತಿಳಿದುಬಂದಿರಲಿಲ್ಲ.



ಕೃಷ್ಣ ಅಥವಾ ಕನ್ನರದೇವನ ನಾಣ್ಯಗಳು (ಕ್ರಿ.ಶ. 1247-1261)

ಈ ದೊರೆಯ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರೆತಿವೆ. ಇವನ ಚಿನ್ನದ ನಾಣ್ಯಗಳು ಐದನೆಯ ಭಿಲ್ಲಮನ ನಾಣ್ಯಗಳಂತೆಯೇ ಇವೆ. ಇವುಗಳ ಅಳತೆ 0.6"; ತೂಕ 56 ಗ್ರೇನ್.

ಮು : ಮಧ್ಯದಲ್ಲಿ ಎಂಟು ದಳಗಳ ಪದ್ಮ; ಎಡ ಮತ್ತು ಬಲ ಭಾಗಗಳಲ್ಲಿ ಶ್ರೀ ಎಂಬ ಕನ್ನಡ ಅಕ್ಷರ; ಕೆಳಭಾಗದಲ್ಲಿ ಶಂಖ ಮತ್ತು ಮತ್ತು ಕೆಲವು ಚುಕ್ಕೆಗಳು; ಮೇಲ್ಭಾಗದಲ್ಲಿ ನಾಗರೀ ಲಿಪಿಯಲ್ಲಿ ಕನ್ಹಪ ಅಥವಾ ಕನ್ಹ ಅಥವಾ ಕ ಎಂಬ ಬರಹ. ಹಿಂಭಾಗ ಖಾಲಿ

ಈ ದೊರೆಯ ಬೆಳ್ಳಿಯ ನಾಣ್ಯಗಳು ವೃತ್ತಾಕಾರದಲ್ಲಿವೆ; ಅವುಗಳ ಅಳತೆ 0.4"; ತೂಕ 135 ಗ್ರೇನ್.

ಮು : ಮುಂಗಾಲುಗಳನ್ನು ಮೇಲೆತ್ತಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ ಕನ್ಹ
ರದೇವ

ತೂಕವನ್ನು ಗಮನಿಸಿದರೆ, ಇದು ಮಾಷಕ ಮೌಲ್ಯದ ನಾಣ್ಯವೆಂದು ತಿಳಿಯುತ್ತದೆ.



ಕನ್ನರದೇವನ ತಾಮ್ರದ ನಾಣ್ಯವೂ ದೊರಕಿದೆ. ಮುಂಬಯಿಯ ಏಷಿಯಾಟಿಕ್ ಸೊಸೈಟಿ ಸಂಗ್ರಹದಲ್ಲಿರುವ ಈ ನಾಣ್ಯ ಆಯತಾಕಾರವಾಗಿದೆ. ಇದರ ಅಳತೆ 0.7" x 0.6"; ತೂಕ 50 ಗ್ರೇನ್.



ಮು : ಎಡಕ್ಕಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ ಕನ

ರದೇವಸ

ಕೃಷ್ಣನಿಗೆ ಲಕ್ಷ್ಮಿ ಎಂಬ ರಾಣಿಯಿದ್ದಳು. ಆದುದರಿಂದ ಭೋರ್ ರಾಜ್ಯದ ಕೋಶಾಗಾರದಲ್ಲಿದ್ದ ಕೆಲವು ನಾಣ್ಯಗಳ ಮೇಲೆ ಲಕ್ಷುಮಾ ಎನ್ನುವ ಬರಹವಿರುವುದರಿಂದ ಈ ನಾಣ್ಯಗಳನ್ನು ಈ ಸೇವುಣ ರಾಣಿ ಟಂಕಿಸಿದಳೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಈ ನಾಣ್ಯಗಳು ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ರಾಣಿ ಲಕ್ಷ್ಮೀದೇವಿಗೆ ಸೇರಿದ್ದೆಂದೂ ಭಾವಿಸಲಾಗಿದೆ. ಸದ್ಯಕ್ಕೆ ಈ ವಿಷಯದಲ್ಲಿ ಖಚಿತವಾದ ಅಭಿಪ್ರಾಯವನ್ನು ಹೇಳುವುದು ಸಾಧ್ಯವಿಲ್ಲ.

ಮಹಾದೇವನ ನಾಣ್ಯಗಳು (ಕ್ರಿ.ಶ. 1261-1270)

ಕೃಷ್ಣನ ಅನಂತರ ರಾಜನಾದ ಮಹಾದೇವನ ಅನೇಕ ನಮೂನೆಯ ನಾಣ್ಯಗಳು ದೊರಕಿವೆ. ಚಿನ್ನದ ನಾಣ್ಯಗಳ ಅಳತೆ 0.7"; ತೂಕ 50 ಗ್ರೇನ್. ಅಂದರೆ ಇದು ಗದ್ಯಾಣ ಮೌಲ್ಯದ ನಾಣ್ಯ. ಇದು ಪಂಚ್ ರೀತಿಯ ನಾಣ್ಯವಾದುದರಿಂದ ಮುಮ್ಮುಖ ಮಾತ್ರವಿದೆ.

ಮು : ಮಧ್ಯದಲ್ಲಿ ಎಂಟು ದಳಗಳ ಪದ್ಮ; ಎರಡು ಕಡೆಗಳಲ್ಲಿಯೂ ಶ್ರೀ ಎನ್ನುವ ನಾಗರೀ ಅಕ್ಷರ; ಕೆಳಭಾಗದಲ್ಲಿ ಎರಡು ಸಾಲುಗಳ ನಾಗರೀ ಬರಹ

ಶ್ರೀ ಮ

ಹಾದೇವ

ಕೆಲವು ನಾಣ್ಯಗಳಲ್ಲಿ ಬರಹವು ನಾಣ್ಯದ ಮೇಲ್ಭಾಗದಲ್ಲಿರುತ್ತದೆ.

ಇನ್ನೊಂದು ನಮೂನೆಯ ನಾಣ್ಯವನ್ನು ಈಗ ಗಮನಿಸಬಹುದು. ಇದು ಬೆಳ್ಳಿಯ ನಾಣ್ಯ. ಇದು ವೃತ್ತಾಕಾರವಾಗಿದೆ. ಇದರ ಅಳತೆ 0.5"; ತೂಕ 15 ಗ್ರೇನ್.

ಮು : ಮುಂಗಾಲುಗಳನ್ನು ಮೇಲಕ್ಕೆತ್ತಿರುವ ಸಿಂಹ

ಹಿ : ಕೆಳಭಾಗದಲ್ಲಿ ವರಾಹ; ಇದರ ಮೇಲ್ಗಡೆಯಲ್ಲಿ ಎರಡು ಸಾಲುಗಳ ನಾಗರೀ ಬರಹ

ಮಹಾದೇ

ವ



ಸೇವುಣ ಮತ್ತು ಕಾಕತೀಯರ ಇತಿಹಾಸದ ದೃಷ್ಟಿಯಿಂದ ಈ ನಾಣ್ಯ ಮುಖ್ಯವಾದುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅದಕ್ಕೆ ಈ ನಾಣ್ಯದ ಹಿಮ್ಮುಖದಲ್ಲಿರುವ ವರಾಹದ ಚಿತ್ರವೇ ಕಾರಣ. ವರಾಹ ಕಾಕತೀಯ ಲಾಂಛನ. ಅದು ಸೇವುಣ ಮಹಾದೇವನ ನಾಣ್ಯಗಳ ಮೇಲೆ ಏಕೆ ಮತ್ತು ಹೇಗೆ ಬಂದಿತು ಎನ್ನುವುದೇ ಮುಖ್ಯವಾದ ಪ್ರಶ್ನೆ. ಮಹಾದೇವನಿಗೂ ಕಾಕತೀಯ ರಾಣಿ ರುದ್ರಮದೇವಿಗೂ ಘೋರ ಯುದ್ಧ ನಡೆಯಿತು. ಇದರಲ್ಲಿ ರುದ್ರಮದೇವಿಯು ಜಯಶಾಲಿಯಾದಳು. ಆದುದರಿಂದ ಅವಳು ಮಹಾದೇವನು ಟಂಕಿಸುವ ನಾಣ್ಯಗಳ ಮೇಲೆ, ತನ್ನ ರಾಜಲಾಂಛನ ವರಾಹವನ್ನು ವಿನ್ಯಾಸಗೊಳಿಸಬೇಕೆಂದು ಷರತ್ತುಗಳನ್ನು ಹಾಕಿದಳು. ಇದಕ್ಕೆ ಒಪ್ಪಿ ಸೇವುಣ ಮಹಾದೇವನು ಈ ರೀತಿ ಮಾಡಿದನು ಎಂದು ಆಂಧ್ರದ ಇತಿಹಾಸಕಾರರು ಭಾವಿಸುತ್ತಾರೆ. ಪ್ರತಾಪ ಚರಿತ್ರಮು ಮತ್ತು ಸಿದ್ಧೇಶ್ವರಚರಿತ್ರಮು ಎನ್ನುವ ತೆಲುಗು ಗ್ರಂಥಗಳಲ್ಲಿ ಈ ವಿಷಯ ಹೇಳಲ್ಪಟ್ಟಿದೆ. ಆದರೆ ಮಹಾದೇವನು ಪೂರ್ಣವಾಗಿ ಸೋತು ರಾಣಿಗೆ ಶರಣಾಗತನಾದುದಕ್ಕೆ ಶಾಸನಾಧಾರಗಳು ದೊರಕುವುದಿಲ್ಲ. ಆದರೂ ಇದರ ವಿಷಯದಲ್ಲಿ ಖಚಿತವಾದ ಅಭಿಪ್ರಾಯವನ್ನು ಹೇಳುವುದು ಕಷ್ಟ.

ಈ ರೀತಿಯ ನಾಣ್ಯಗಳು ಹಲವಾರು ದೊರಕಿದ್ದು, ಅವುಗಳಲ್ಲಿ ಸಣ್ಣ ಪುಟ್ಟ ಭಿನ್ನತೆಗಳನ್ನು ಗಮನಿಸಬಹುದು. ವೃತ್ತಾಕಾರದ ನಾಣ್ಯದ ಅಳತೆ 1.0"; ತೂಕ 58 ಗ್ರೇನ್.

ಮು : ಎಂಟು ದಳಗಳ ಪದ್ಮ; ಕೆಳಗಡೆ ಮಹಾದೇವ ಎನ್ನುವ ನಾಗರೀ ಬರಹ; ಅದರ ಕೆಳಗೆ ಖಡ್ಗ; ಎಡಭಾಗದಲ್ಲಿ ಶ್ರೀ ಎನ್ನುವ ಅಕ್ಷರ; ಅದರ ಪಕ್ಕದಲ್ಲಿ ಆನೆ; ಬಲಗಡೆ ಶಂಖ

ಹಿ : ಖಾಲಿ

ಅಂದರೆ ಇದರಲ್ಲಿ ವರಾಹದ ಬದಲು ಆನೆಯ ಚಿತ್ರವಿದೆ.

ಆಮಣನ ನಾಣ್ಯ (ಕ್ರಿ.ಶ. 1270-1271)

ಮಹಾದೇವನ ನಂತರ ಕ್ರಿ.ಶ. 1270ರಲ್ಲಿ, ಅವನ ಮಗ ಆಮಣನು ಸೇವುಣ ದೊರೆಯಾದನು. ಆದರೆ ಕೃಷ್ಣನ ಮಗನಾದ ರಾಮಚಂದ್ರನು ಸಿಂಹಾಸನಕ್ಕೆ ನಿಜವಾದ ಹಕ್ಕುದಾರನಾಗಿದ್ದುದರಿಂದ. ಇವರೀರ್ವರಿಗೂ ಯುದ್ಧ ನಡೆದು, ಆಮಣನು ಮಡಿದು, ರಾಮಚಂದ್ರನೇ ದೊರೆಯಾದನು. ಅಂದರೆ ಸುಮಾರು ಆರು ತಿಂಗಳ ಕಾಲ ಆಮಣನು ದೊರೆಯಾಗಿದ್ದನೆಂದು ತಿಳಿದುಬರುತ್ತದೆ. ಈ ಸಮಯದಲ್ಲಿ ಇವನು ಚಿನ್ನದ ಗದ್ಯಾಣದ ನಾಣ್ಯವನ್ನು ಟಂಕಿಸಿದನು. ಆದರೆ ಇವನ ಶಾಸನಗಳು ಇನ್ನೂ ದೊರಕಿಲ್ಲ. ಈ ನಾಣ್ಯ ಪದ್ಮಟಂಕ ನಮೂನೆಗೆ ಸೇರಿದ ಚಿನ್ನದ ನಾಣ್ಯ; ಪಂಚ್ ತಾಂತ್ರಿಕತೆಯ ಈ ನಾಣ್ಯ ವೃತ್ತಾಕಾರದಲ್ಲಿದ್ದು ಇದರ ಅಳತೆ 0.6"; ತೂಕ 59 ಗ್ರೇನ್.

ಮು : ಮಧ್ಯದಲ್ಲಿ ಎಂಟು ದಳಗಳ ಪದ್ಮ; ಎರಡೂ ಕಡೆಗಳಲ್ಲಿ ಶ್ರೀ ಎಂಬ ನಾಗರೀ ಅಕ್ಷರ; ಕೆಳಗಡೆ ಕೆಲವು ಚಿಹ್ನೆಗಳು; ನಾಗರೀ ಬರಹದ ಕೆಳಗೆ ಖಡ್ಗ; ಒಂದು ಸಾಲಿನ ನಾಗರೀ ಬರಹ

ಶ್ರೀ ಆಮಣ

ಹಿ : ಖಾಲಿ



ಈ ದೊರೆಯ ಶಾಸನಗಳು ದೊರಕಿಲ್ಲದೇ ಇದ್ದುದರಿಂದ, ಇತಿಹಾಸಕಾರರು ಈತನು ರಾಜ್ಯಭಾರ ಮಾಡಲಿಲ್ಲವೆಂದು ಅಭಿಪ್ರಾಯಪಟ್ಟಿದ್ದರು. ಆದರೆ ಮಹಾನುಭಾವ ಗ್ರಂಥಗಳಲ್ಲಿ ಆಮಣನು ಸ್ವಲ್ಪ ಕಾಲ ರಾಜ್ಯಭಾರ ಮಾಡಿದನೆಂದೂ ಅನಂತರ ಅವನನ್ನು ರಾಮಚಂದ್ರನು ಪದಚ್ಯುತಿಗೊಳಿಸಿದನೆಂದೂ ಉಲ್ಲೇಖಿಸಲಾಗಿತ್ತು. ಈಗ ಈ ಮುಖ್ಯ ನಾಣ್ಯ ದೊರೆತಿರುವುದರಿಂದ, ಆಮಣನು ಕೆಲವು ತಿಂಗಳವರೆಗೆ ಮಾತ್ರ ರಾಜ್ಯವಾಳಿದನೆಂದು ಗೊತ್ತಾಗುತ್ತದೆ. ಆದುದರಿಂದ ಈ ನಾಣ್ಯ ಮುಖ್ಯವಾದ ಆಕರವಾಗಿದೆ.

ರಾಮಚಂದ್ರನ ನಾಣ್ಯಗಳು (ಕ್ರಿ.ಶ. 1271-1311)

ಇವನೇ ಈ ವಂಶದ ಕೊನೆಯ ಖ್ಯಾತ ದೊರೆ. ಇವನ ನಂತರ ಬಂದ ರಾಜರು ತೀರ ಅಶಕ್ತರಾಗಿದ್ದರು. ಇವನ ಕಾಲದಲ್ಲೇ ಮುಸ್ಲಿಮರು ಇವನ ಮೇಲೆ ದಂಡೆತ್ತಿ ಹೋಗಿ

ಇವನನ್ನು ಸೋಲಿಸಿದರು. ಈ ರಾಜನ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ದೊರಕಿವೆ. ವೃತ್ತಾಕಾರದಲ್ಲಿರುವ ಚಿನ್ನದ ನಾಣ್ಯದ ಅಳತೆ 0.6"; ತೂಕ 58 ಗ್ರೇನ್.

ಮು : ಮಧ್ಯದಲ್ಲಿ ಎಂಟು ದಳಗಳ ಪದ್ಮ; ಎರಡು ಕಡೆಗಳಲ್ಲಿ ಶ್ರೀ ಎಂಬ ಅಕ್ಷರ; ಕೆಳಗಡೆ ಶಂಖ; ಮೇಲ್ಭಾಗದಲ್ಲಿ ನಾಗರೀ ಬರಹ
ಶ್ರೀರಾಮ ಅಥವಾ ರಾಮ



ಈ ದೊರೆಯ ಇನ್ನೊಂದು ನಮೂನೆಯ ನಾಣ್ಯವನ್ನು ಗಮನಿಸಬಹುದು. ಇದು ಚಿನ್ನದಿಂದ ಮಾಡಿದ್ದು, ವೃತ್ತಾಕಾರದಲ್ಲಿದ್ದು ಇದರ ಅಳತೆ 0.6"; ತೂಕ 59 ಗ್ರೇನ್.


ಮು : ನಾಣ್ಯದ ಮಧ್ಯದಲ್ಲಿ ಗರುಡ; ಎರಡು ಕಡೆಗಳಲ್ಲಿ ಶ್ರೀ ಎಂಬ ಅಕ್ಷರ; ಮೇಲ್ಭಾಗದಲ್ಲಿ ಒಂದು ಸಾಲಿನ ನಾಗರೀ ಬರಹ
ರಾಮಚ

ಸೇವುಣರ ಇತರ ಎಲ್ಲ ನಾಣ್ಯಗಳ ಮೇಲೂ ಅಷ್ಟದಳ ಪದ್ಮವಿರುವುದನ್ನು ನಾವು ಮೇಲೆ ಗಮನಿಸಿದ್ದೇವೆ. ಆದರೆ ಈ ನಾಣ್ಯದಲ್ಲಿ ಗರುಡನ ಚಿತ್ರವಿದೆ. ಗರುಡ ಸೇವುಣರ ರಾಜಲಾಂಛನ. ಆದುದರಿಂದ ಗರುಡನ ಚಿತ್ರವಿರುವುದು ಸಮಂಜಸವಾಗಿಯೇ ಇದೆ.

ಈ ದೊರೆಯ ಇನ್ನೊಂದು ನಮೂನೆಯ ನಾಣ್ಯ ದ್ವಿಮುಖ ಮುದ್ರೆಯ ತಾಂತ್ರಿಕತೆಗೆ ಸೇರಿದೆ. ಇದು ವೃತ್ತಾಕಾರವಾಗಿದ್ದು, ಇದರ ಅಳತೆ 0.5"; ತೂಕ 10 ಗ್ರೇನ್.

ಮು : ಬಲಕ್ಕಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ
ಶ್ರೀ ರಾ
ಮದೇವಃ



ಈ ರೀತಿಯ ಬೆಳ್ಳಿಯ ನಾಣ್ಯಗಳು ಹೇರಳವಾಗಿ ದೊರಕಿದ್ದು ಅವುಗಳಲ್ಲಿ ಸಣ್ಣ ಪುಟ್ಟ ಬದಲಾವಣೆಗಳನ್ನು ಗಮನಿಸಬಹುದು.

ಇವನ ಇನ್ನೊಂದು ನಮೂನೆಯ ಬೆಳ್ಳಿಯ ನಾಣ್ಯ ಗಮನಾರ್ಹವಾದುದು. ಇದು ದೀರ್ಘವೃತ್ತಾಕಾರದ ನಾಣ್ಯ. ಇದರ ಅಳತೆ 1.0" X 0.6"; ತೂಕ 3 ಗ್ರೇನ್.

ಮು : ಎಡಕ್ಕಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ ರಾಮ

ಚಂದ್ರ



ಆಗಲೇ ಗಮನಿಸಿರುವಂತೆ ಸೇವುಣ ನಾಣ್ಯಗಳು ವಿವಿಧ ದೂರದ ಸ್ಥಳಗಳಲ್ಲಿ ದೊರಕಿವೆ. ಆಂಧ್ರದ ರಾಜಪಟ್ಟಣಂ ಎಂಬಲ್ಲಿ ದೊರಕಿರುವ ನಾಣ್ಯರಾಶಿಯು, ಮಹಾದೇವನು ಸೋತು, ಕಾಕತೀಯ ರುದ್ರಮದೇವಿಗೆ ಕೊಟ್ಟ ಕಪ್ಪ-ಕಾಣಿಕೆಯೆಂದು ಕೆಲವರು ಭಾವಿಸುತ್ತಾರೆ. ದೂರದ ಛತ್ತೀಸ್‌ಘಡ್‌ಗಡದಲ್ಲಿ ಸೇವುಣ ನಾಣ್ಯಗಳು ದೊರಕಿರುವುದರಿಂದ, ಈ ರಾಜರು ಅಲ್ಲಿಯವರೆಗೂ ದಂಡೆತ್ತಿ ಹೋಗಿ, ಅಲ್ಲಿನ ರಾಜರುಗಳನ್ನು ಸೋಲಿಸಿರಬೇಕು ಎಂದೂ ಭಾವಿಸಲಾಗಿದೆ. ಆದರೆ ಇತ್ತೀಚಿನ ಸಂಶೋಧನೆಗಳಿಂದ, ಕಕ್ಕುಲ ಮತ್ತು ಜಜ್ಜಲ ಎಂಬ ರಾಜರನ್ನು ಇಲ್ಲೇ ಕರ್ನಾಟಕದ ಸಮೀಪದ ರಾಜರುಗಳೆಂದು ನಿರ್ಧರಿಸಲಾಗಿದೆ. ಆದುದರಿಂದ ಈ ಸೇವುಣ ನಾಣ್ಯಗಳು ಈ ದೂರದ ಸ್ಥಳಗಳಿಗೆ ಹೋಗಿರುವುದು, ಅವರ ರಾಜಕೀಯ ಚಟುವಟಿಕೆಗಳಿಂದ

ಅಲ್ಲ; ಅದು ವ್ಯಾಪಾರ ಸಂಬಂಧಗಳಿಂದಾಗಿರಬೇಕು ಎಂಬುದು ಈಗ ಒಪ್ಪಿಗೆಯಾದ ಸಂಗತಿಯಾಗಿದೆ. ನಾಣ್ಯಗಳು ಬಲು ಬೇಗ ಅನೇಕ ಕಾರಣಗಳಿಂದ ದೂರ ದೂರಕ್ಕೆ ಪ್ರಯಾಣಿಸುತ್ತವೆ ಎನ್ನುವ ಸಂಗತಿಯನ್ನು ಮರೆಯುವಂತಿಲ್ಲ.

O

ಅಧ್ಯಾಯ 5

ವಿಜಯನಗರ ಮತ್ತು ಕೆಳದಿ ನಾಣ್ಯಗಳು

ದಕ್ಷಿಣ ಭಾರತದ ಇತಿಹಾಸದಲ್ಲಿ ಸುವರ್ಣಯುಗವೆನಿಸಿರುವ ವಿಜಯನಗರ ಸಾಮ್ರಾಜ್ಯ, ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳಿಂದ ಉನ್ನತ ಸ್ಥಾನವನ್ನು ಪಡೆದಿದೆ. ವಿಜಯನಗರ ಸಾಮ್ರಾಟರು ಟಂಕಿಸಿದ ವೈವಿಧ್ಯಪೂರ್ಣ ಚಿನ್ನದ ನಾಣ್ಯಗಳು ನಾಣ್ಯ ಇತಿಹಾಸಕಾರರನ್ನು ಚಕಿತಗೊಳಿಸಿವೆ. ಹಿಂದೂ ಧರ್ಮವನ್ನು ಪುನಃ ಸ್ಥಾಪಿಸುವುದೇ ವಿಜಯನಗರ ಸ್ಥಾಪನೆಯ ಮುಖ್ಯ ಉದ್ದೇಶವಾಗಿತ್ತೆಂಬುದನ್ನು ನಾಣ್ಯಗಳು ತಮ್ಮದೇ ಆದ ರೀತಿಯಲ್ಲಿ ದೃಢಪಡಿಸುತ್ತವೆ. ಈ ಸುತ್ತಿನ ಜನಗಳು ಮೊದಲಿನಿಂದಲೂ ಪರಂಪರಾಗತ ಮೌಲ್ಯಗಳಿಗೆ ಹೆಚ್ಚು ಒತ್ತು ಕೊಟ್ಟರು. ಆದುದರಿಂದ ಈ ರಾಜಮನೆತನದ ಎಲ್ಲ ಸಾಂಸ್ಕೃತಿಕ ಸಾಧನೆಗಳಲ್ಲಿಯೂ ಧಾರ್ಮಿಕ ಪ್ರಭಾವ ಎದ್ದು ಕಾಣುತ್ತದೆ. ಈ ಮಾತು ಈ ಕಾಲದ ನಾಣ್ಯಗಳಿಗೆ ಪೂರ್ಣವಾಗಿ ಹೊಂದುತ್ತದೆ. ಹಿಂದೂ ಧರ್ಮಕ್ಕೆ ಸಂಬಂಧಿಸದ ಒಂದು ಚಿಹ್ನೆಯೂ ವಿಜಯನಗರ ನಾಣ್ಯಗಳ ಮೇಲೆ ಕಾಣಬರುವುದಿಲ್ಲ. ಅದೇ ರೀತಿ ಧಾರ್ಮಿಕ ಚಿಹ್ನೆಯಿಲ್ಲದ ಒಂದು ನಾಣ್ಯವನ್ನೂ ಅವರು ಟಂಕಿಸಲಿಲ್ಲ. ಈ ರೀತಿ ಧಾರ್ಮಿಕತೆ ಹಾಸುಹೊಕ್ಕಾಗಿ ಅವರ ನಾಣ್ಯಗಳಲ್ಲಿ ಮಿಳಿತವಾಗಿರುವುದು ಗಮನಾರ್ಹ ವಿಷಯ.

ಹರಿಹರ ಮತ್ತು ಬುಕ್ಕ ಎಂಬ ಸಹೋದರರು ವಿದ್ಯಾರಣ್ಯರ ಆಶೀರ್ವಾದದಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು ಎನ್ನುವ ವಿಷಯ ಸರ್ವವಿದಿತ. ಇವರಿಬ್ಬರೂ ಕನ್ನಡ ನಾಡಿನ ವೀರಶ್ರೇಷ್ಠರು ಎಂಬುದನ್ನು ಇವರ ನಾಣ್ಯಗಳು ದೃಢಪಡಿಸುತ್ತವೆ ಎಂಬುದು ಅನೇಕರಿಗೆ ತಿಳಿಯದ ವಿಷಯ. ಇವರಿಬ್ಬರ ನಾಣ್ಯಗಳ ಮೇಲೆ ಕನ್ನಡ ಲಿಪಿಯ ಬರಹಗಳಿವೆ ಎನ್ನುವುದು ಬಲು ಮಹತ್ವದ ಸಂಗತಿ. ಸಂಗಮ ಮನೆತನಕ್ಕೆ ಸೇರಿದ ಮೊದಲನೆಯ ಹರಿಹರನು ಕ್ರಿ.ಶ. 1336 ರಿಂದ 1356ರ ವರೆಗೆ ಆಳಿದನು. ಇವನು ಮಾಡಿದ ಕೆಲವು ಆಡಳಿತಕ್ಕೆ ಸಂಬಂಧಿಸಿದ ಸುಧಾರಣೆಗಳು ನಾಣ್ಯ ಪದ್ಧತಿಯ ಮೇಲೆ ವಿಶೇಷ ಪ್ರಭಾವ ಬೀರಿದವು. ತೆರಿಗೆಗಳನ್ನು ನಾಣ್ಯ ರೂಪದಲ್ಲಿಯೇ ಕೊಡಬೇಕೆಂಬ ಇವನ ಸುಧಾರಣೆ ಆ ಕಾಲದ ನಾಣ್ಯ ಪದ್ಧತಿಗೆ ಹೊಸ ಆಯಾಮವನ್ನೇ ತಂದುಕೊಟ್ಟಿತು.

ಇದಕ್ಕಾಗಿ ಹೊಸ ಮೌಲ್ಯದ ವಿವಿಧ ನಾಣ್ಯಗಳನ್ನು ಟಂಕಿಸಬೇಕಾದ ಆವಶ್ಯಕತೆ ಉಂಟಾಯಿತು. ಟಂಕಶಾಲೆಯನ್ನು ನೋಡಿಕೊಳ್ಳುವುದು ಹಾಗೂ ಅದನ್ನು ನಿಯಂತ್ರಿಸುವುದಕ್ಕಾಗಿ ಒಂದು ಹೊಸ ವಿಭಾಗವನ್ನೇ ತೆರೆದು ಅದರಲ್ಲಿ ವಿವಿಧ ಸ್ತರದ ಅಧಿಕಾರಿಗಳನ್ನು ನಿಯಮಿಸುವ ಆವಶ್ಯಕತೆ ಉದ್ಭವಿಸಿತು. ಇದರಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಟಂಕಶಾಲೆಗಳನ್ನು ಆರಂಭಿಸುವಂತೆ ಆಯಿತು. ನಾಣ್ಯಗಳ ಚಲಾವಣೆ ಏಕಾಏಕಿ ಜಾಸ್ತಿಯಾಯಿತು. ಈ ಎಲ್ಲ ಅಂಶಗಳನ್ನೂ ಗಮನಿಸಿದರೆ ನಾಣ್ಯಶಾಸ್ತ್ರಕ್ಕೆ ಮೊದಲನೆಯ ಹರಿಹರನ ಕೊಡುಗೆ ಮಹತ್ತರವಾದುದು ಎಂದು ಗೊತ್ತಾಗುತ್ತದೆ. ಇವನ ಅನಂತರ ಆಳಿದ ಬುಕ್ಕನ (1356-1377) ರಾಜ್ಯಭಾರ ಕಾಲದಲ್ಲಿ ಇದೇ ನೀತಿಯು ಮುಂದುವರೆಯಿತು. ಅನಂತರ ಆಳಿದ ಎರಡನೆಯ ಹರಿಹರನು (ಕ್ರಿ.ಶ. 1377-1404) ಕೆಲವು ಹೊಸ ನಮೂನೆಯ ನಾಣ್ಯಗಳನ್ನು ಬಳಕೆಗೆ ತಂದನು. ಇವನ ನಾಣ್ಯಗಳಲ್ಲಿಯೂ ಕನ್ನಡ ಲಿಪಿಯ ಬರಹವನ್ನೇ ಕಾಣುತ್ತೇವೆ.

ಕ್ರಿ.ಶ. 1406 ರಿಂದ 1422ರ ವರೆಗೆ ರಾಜ್ಯವಾಳಿದ ಮೊದಲನೆಯ ದೇವರಾಯನು ಪ್ರಭಾವೀ ದೊರೆಯಾಗಿದ್ದು ಅನೇಕ ಯುದ್ಧಗಳಲ್ಲಿ ವಿಜಯವನ್ನು ಕಂಡನು. ಇವನು ಶೃಂಗೇರಿಗೆ ತೆರಳಿ ಅಲ್ಲಿನ ಶಂಕರಾಚಾರ್ಯರಿಗೆ ದತ್ತಿಗಳನ್ನು ಕೊಟ್ಟು ತನ್ನ ಭಕ್ತಿ - ಗೌರವಗಳನ್ನು ಪ್ರದರ್ಶಿಸಿದನು. ಇವನೂ ಅನೇಕ ಹೊಸ ನಾಣ್ಯಗಳನ್ನು ಟಂಕಿಸಿದನು. ಕೇವಲ ಎರಡು ವರ್ಷಗಳ ಕಾಲ ರಾಜ್ಯಭಾರಮಾಡಿದ ವಿಜಯರಾಯನ ಅನಂತರ ಇಮ್ಮಡಿ ದೇವರಾಯನು ಚಕ್ರವರ್ತಿಯಾದನು (ಕ್ರಿ.ಶ. 1424-1446). ಇವನು ಬಹಮನಿ ಸುಲ್ತಾನರ ಮೇಲೆ ಮೂರು ಸಾರಿ ಯುದ್ಧ ಮಾಡಿದನು; ಒರಿಸ್ಸದ ಗಜಪತಿಯನ್ನು ಸೋಲಿಸಿದನು. ಶೂರನಾಗಿದ್ದ ಸೇನಾಧಿಪತಿ ಲಕ್ಕಣ್ಣ ದಂಡೇಶನ ಸಹಾಯದಿಂದ ಸಿಂಹಳದವರೆಗೆ ತನ್ನ ರಾಜ್ಯವನ್ನು ವಿಸ್ತಾರಮಾಡಿದನು. ಇಮ್ಮಡಿ ದೇವರಾಯನ ಆಳ್ವಿಕೆಯ ಸಮಯದಲ್ಲಿ ವಿದೇಶೀ ಯಾತ್ರಿಕ ಅಬ್ದುಲ್ ರಜಾಕ್ ದೇಶಾದ್ಯಂತ ಸಂಚಾರಮಾಡಿ ಈ ಕಾಲದ ವಿಷಯಗಳನ್ನು ವಿವರವಾಗಿ ದಾಖಲಿಸಿದ್ದಾನೆ. ಇದರಲ್ಲಿ ನಾಣ್ಯಪದ್ಧತಿಗೆ ಸಂಬಂಧಿಸಿದ ಅನೇಕ ವಿಷಯಗಳೂ ಸೇರಿವೆ. ದೇವರಾಯನನ್ನು ಕುರಿತು "ಇಡೀ ಹಿಂದೂಸ್ಥಾನವನ್ನು ಹುಡುಕಿದರೂ ಈ ರಾಜನಿಗಿಂತ ಶ್ರೇಷ್ಠನಾದ ಬೇರೆ ರಾಜ ದೊರಕುವುದಿಲ್ಲ. ಇಡೀ ಪ್ರಪಂಚದಲ್ಲಿ ವಿಜಯನಗರದಂತಹ ನಗರವನ್ನು ನನ್ನ ಕಣ್ಣುಗಳು ನೋಡಿಲ್ಲ. ಚಿನಿವಾರರು ಸಾರ್ವಜನಿಕವಾಗಿ ಮಾರುಕಟ್ಟೆಗಳಲ್ಲಿ ಮುತ್ತುಗಳು, ಪದ್ಮರಾಗ, ಪಚ್ಚೆ ಮತ್ತು ವಜ್ರಗಳನ್ನು ಮಾರುತ್ತಾರೆ" ಎಂದು ಅಲ್ಲಿನ ವೈಭವವನ್ನು ವರ್ಣಿಸಿದ್ದಾನೆ. ರಾಜನಿಗೆ ಆನೆಗಳನ್ನು ಕಂಡರೆ ಬಹಳ ಅಕ್ಕರೆ. ಗಜಬೇಂಟೆಕಾರ ಎಂಬ ಬಿರುದನ್ನು ಇವನು ಧರಿಸಿದ್ದನು. ಈ ಬಿರುದು ಇವನ ನಾಣ್ಯಗಳ ಮೇಲೂ ಕಾಣಬರುತ್ತದೆ. ಇಮ್ಮಡಿ ದೇವರಾಯನ ನಂತರ ಅಸಮರ್ಥರಾದ ಮಲ್ಲಿಕಾರ್ಜುನ ಮತ್ತು ವಿರೂಪಾಕ್ಷ ರಾಜ್ಯವಾಳಿದರು. ಮಲ್ಲಿಕಾರ್ಜುನನ ನಾಣ್ಯಗಳು ದೊರಕಿದ್ದರೂ, ವಿರೂಪಾಕ್ಷನ ನಾಣ್ಯಗಳು

ದೊರಕಿಲ್ಲ. ಸಾಳುವ ಮನೆತನದ ನರಸನಾಯಕನು ರಾಜಪ್ರತಿನಿಧಿಯಾಗಿ ರಾಜ್ಯಭಾರವನ್ನು ಆರಂಭಿಸಿದ. ಕೊನೆಗೆ ತುಳುವ ಮನೆತನದ ದೊರೆಗಳು 1505ರಲ್ಲಿ ದೊರೆಗಳಾದರು. ಸಾಳುವ ಮನೆತನದ ಯಾವ ನಾಣ್ಯವೂ ಇದುವರೆಗೆ ದೊರಕಿಲ್ಲ.

ಕೃಷ್ಣದೇವರಾಯನು ಈ ವಂಶದಲ್ಲಿ ಮಾತ್ರವಲ್ಲದೆ, ಇಡೀ ಭಾರತೀಯ ಇತಿಹಾಸದಲ್ಲೇ ಆಳಿದ ಚಕ್ರವರ್ತಿಗಳಲ್ಲಿ ಮುಖ್ಯನಾದವನು. ತನ್ನ ಶಕ್ತಿ - ಸಾಮರ್ಥ್ಯಗಳಿಂದ ಕ್ರಿ.ಶ. 1509 ರಿಂದ 1529ರ ವರೆಗೆ ಆಳಿದ ಇವನು ಅನೇಕ ವಿಜಯಗಳನ್ನು ಸಂಪಾದಿಸಿದನು. ಒರಿಸ್ಸದ ಮೇಲಿನ ದಂಡಯಾತ್ರೆ ಇವನಿಗೆ ವಿಶೇಷ ಖ್ಯಾತಿಯನ್ನು ತಂದುಕೊಟ್ಟಿತು. ಗಜಪತಿಯನ್ನು ಸೋಲಿಸಿ, ಈ ವಿಜಯದ ಜ್ಞಾಪಕಾರ್ಥವಾಗಿ ಅಲ್ಲಿಂದ ಕೃಷ್ಣನ ವಿಗ್ರಹವನ್ನು ತಂದು, ಹಂಪೆಯ ಕೃಷ್ಣಸ್ವಾಮಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿದನು. ಮಾರ್ಗದಲ್ಲಿ ತಿರುಪತಿಗೆ ಭೇಟಿಯಿತ್ತು, ವೆಂಕಟೇಶ್ವರಸ್ವಾಮಿಗೆ ಕನಕಾಭಿಷೇಕವನ್ನು ಮಾಡುವ ಸಲುವಾಗಿ, ದೇವರ ಚಿತ್ರವಿರುವ ಚಿನ್ನದ ನಾಣ್ಯಗಳನ್ನು ಟಂಕಿಸಿದನು. ವಜ್ರ, ವೈಡೂರ್ಯಗಳಿಂದ ಕೂಡಿದ ನವರತ್ನ ಪ್ರಭಾವಳಿ ಮತ್ತು ನವರತ್ನ ಕಿರೀಟಗಳನ್ನು ವೆಂಕಟೇಶ್ವರನಿಗೆ ಅರ್ಪಿಸಿದನು. ಇದರಿಂದ ಕೃಷ್ಣದೇವರಾಯನಿಗೆ ತಿರುಮಲೆಯ ವೆಂಕಟೇಶ್ವರನ ಮೇಲೆ ಎಷ್ಟೊಂದು ಭಕ್ತಿ ಇದ್ದಿತೆಂದು ಗೊತ್ತಾಗುತ್ತದೆ. ಇದು ಅವನ ನಾಣ್ಯಗಳಲ್ಲಿ ಪ್ರತಿಬಿಂಬಿತವಾಗಿದೆ. ಇವನ ಅನಂತರ ಅಚ್ಯುತರಾಯನು ಕ್ರಿ.ಶ. 1529 ರಿಂದ 1542ರ ವರೆಗೆ ರಾಜ್ಯವಾಳಿದನು. ಶಾಂತಿಪ್ರಿಯನಾದ ಇವನ ಅನೇಕ ನಮೂನೆಯ ನಾಣ್ಯಗಳು ದೊರಕಿವೆ. ಇವನ ಅನಂತರ ಸಿಂಹಾಸನಕ್ಕಾಗಿ ಕಲಹಗಳು ನಡೆದು, ಸದಾಶಿವ ರಾಯನು ಜಯಶಾಲಿಯಾಗಿ ಕ್ರಿ.ಶ. 1543 ರಿಂದ 1570ರ ವರೆಗೆ ರಾಜ್ಯವಾಳಿದನು. ನಂತರ ರಕ್ಕಸ ತಂಗಡಿ ಯುದ್ಧದಲ್ಲಿ ವಿಜಯನಗರದ ಅರಸರು ಸೋತುಹೋದರು. ತಿರುಮಲರಾಯನು ಪೆನುಗೊಂಡೆಯಲ್ಲಿ ಕ್ರಿ.ಶ. 1570 ರಿಂದ 1578ರ ವರೆಗೆ ಆಳಿದನು. ಆರವೀಡು ಮನೆತನದ ಆಳ್ವಿಕೆ ಆರಂಭವಾಯಿತು. ಇಮ್ಮಡಿ ಶ್ರೀರಂಗರಾಯನು (ಕ್ರಿ.ಶ. 1578-86) ಅಂತಹ ಸಮರ್ಥ ದೊರೆಯಾಗಿರಲಿಲ್ಲ. ಆರವೀಡು ಮನೆತನದ ಪ್ರಮುಖ ದೊರೆಯಾದ ಮೊದಲನೆಯ ವೆಂಕಟಪತಿರಾಯನು ಕ್ರಿ.ಶ. 1586 ರಿಂದ 1614ರ ವರೆಗೆ ಆಳ್ವಿಕೆ ನಡೆಸಿದನು. ಸ್ವಲ್ಪಮಟ್ಟಿಗೆ ವಿಜಯನಗರದ ವೈಭವ, ಗೌರವಗಳನ್ನು ಪುನಃ ಸ್ಥಾಪಿಸಲು ಪ್ರಯತ್ನಿಸಿದನು. ಇವನ ಅನಂತರ ಇಮ್ಮಡಿ ವೆಂಕಟಪತಿರಾಯ ಮತ್ತು ಮುಮ್ಮಡಿ ಶ್ರೀರಂಗರಾಯರು ಆಳಿದರೂ, ರಾಜ್ಯದ ಪರಿಸ್ಥಿತಿ ತೀರ ಹದಗೆಡುತ್ತಿತ್ತು. ಕ್ರಿ.ಶ. 1672ರ ಸಮಯಕ್ಕೆ ಈ ಸಾಮ್ರಾಜ್ಯದ ಪತನವಾಯಿತು. ಹಂಪೆಯು ಹಾಳಾಯಿತು. ಭವ್ಯತೆಯು ನಾಶವಾಯಿತು. ಆದರೆ ಈ ಶ್ರೇಷ್ಠ ಸಾಮ್ರಾಜ್ಯ ಬಿಟ್ಟುಹೋದ ಕೊಡುಗೆ ಒಂದಲ್ಲ ಒಂದು ರೀತಿಯಲ್ಲಿ ಸಾಂಸ್ಕೃತಿಕವಾಗಿ ಮುಂದುವರಿಯಿತು.

ವಿಜಯನಗರದ ವ್ಯವಸ್ಥಿತವಾದ ಆಡಳಿತ ಪದ್ಧತಿಯು ನಾಣ್ಯಶಾಸ್ತ್ರದ ಮೇಲೆ ಪ್ರಭಾವಗಳನ್ನು ಬೀರಿತು. ಈ ಆರ್ಥಿಕ ಪ್ರಗತಿ ಅವರ ನಾಣ್ಯಗಳಲ್ಲಿ

ಪ್ರತಿಬಿಂಬಿತವಾಗಿರುವುದು ಸುಲಭವಾಗಿ ಗುರುತಿಸಬಹುದಾದ ಸಂಗತಿ. ವೈವಿಧ್ಯಪೂರ್ಣ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು, ಅವುಗಳ ಲಭ್ಯತೆ, ಈ ನಾಣ್ಯಗಳು ವಿದೇಶೀ ಯಾತ್ರಿಕರನ್ನು ಆಕರ್ಷಿಸಿದುದು - ಇವೆಲ್ಲವುಗಳಿಂದ ವಿಜಯನಗರ ನಾಣ್ಯ ಅಧ್ಯಯನ ಆಕರ್ಷಕವೆನಿಸಿದೆ. ಇವರ ಧಾರ್ಮಿಕ ಜೀವನದ ಸಾಮರಸ್ಯವೂ ನಾಣ್ಯಗಳಿಗೆ ಒಂದು ವರವಾಗಿ ಪರಿಣಮಿಸಿತು. ಯಾವ ಕಷ್ಟವೂ ಇಲ್ಲದೆ ನಾಣ್ಯಗಳ ಮೇಲೆ ಶೈವ ಮತ್ತು ವೈಷ್ಣವ ದೇವತೆಗಳನ್ನು ಮತ್ತು ಚಿಹ್ನೆಗಳನ್ನು ಹಾಕಿಸುವುದು ಸುಲಭವಾಯಿತು. ಈ ಕಾಲದಲ್ಲಿ ಪ್ರಚಲಿತವಾಗಿದ್ದ ನಾಗರೀ, ಕನ್ನಡ ಮತ್ತು ತೆಲುಗು ಲಿಪಿಗಳು ಅವರ ನಾಣ್ಯಗಳಲ್ಲಿಯೂ ಕಾಣಬರುತ್ತವೆ. ಈ ಎಲ್ಲ ಅಂಶಗಳಿಂದ ವಿಜಯನಗರ ನಾಣ್ಯಗಳು ತಮ್ಮದೇ ಆದ ಲಕ್ಷಣಗಳನ್ನು ಪ್ರತಿಬಿಂಬಿಸುತ್ತವೆ. ಈಗ ಅವುಗಳನ್ನು ಗಮನಿಸಬಹುದು.

ವಿಜಯನಗರ ನಾಣ್ಯಗಳು ದಕ್ಷಿಣ ಭಾರತದ ನಾಣ್ಯ ಪದ್ಧತಿಯಲ್ಲಿ ಒಂದು ಹೊಸ ಬೆಳವಣಿಗೆಯನ್ನು ಆರಂಭಿಸಿದವು ಎಂದರೆ ಅತಿಶಯೋಕ್ತಿಯಲ್ಲ. ಚಿನ್ನದ ನಾಣ್ಯಗಳ ಶ್ರೀಮಂತಿಕೆ, ಈ ನಾಣ್ಯಗಳ ವೈವಿಧ್ಯ, ವಿವಿಧ ದೇವ-ದೇವತೆಯರ ಚಿತ್ರಣ, ವಿವಿಧ ಲಿಪಿಗಳ ಸುಂದರ ಬರಹ ಹಾಗೂ ಈ ನಾಣ್ಯಗಳ ತಾಂತ್ರಿಕ ಹಿರಿಮೆ, ಯಾವ ನಾಣ್ಯ ಶಾಸ್ತ್ರಜ್ಞನನ್ನೂ ಚಕಿತಗೊಳಿಸುತ್ತವೆ. ವಿಜಯನಗರ ಸ್ಥಾಪಕರಾದ ಹರಿಹರ, ಬುಕ್ಕರಿಗೆ ಹೊಯ್ಸಳ ನಾಣ್ಯಗಳು ಮಾದರಿಯನ್ನು ಒದಗಿಸಿದವು. ಈ ನಾಣ್ಯಗಳ ಧಾರ್ಮಿಕ ಅಂಶವೂ ಹರಿಹರ ಮತ್ತು ಬುಕ್ಕರಿಗೆ ಹೆಚ್ಚಿನ ಒಲವಿನ ಅಂಶವಾಗಿದ್ದಿತೆಂದು ಗೊತ್ತಾಗುತ್ತದೆ. ಅಷ್ಟೇ ಅಲ್ಲದೆ, ಹೊಯ್ಸಳ ಕಾಲದಲ್ಲಿ ಬಳಕೆಯಲ್ಲಿದ್ದ ಗದ್ಯಾಣ, ವರಹ, ಪಣ, ವೀಸ, ಬೇಳೆ ಮುಂತಾದ ನಾಣ್ಯಗಳ ಹೆಸರುಗಳನ್ನೇ ವಿಜಯನಗರ ಅರಸರು ಮುಂದುವರಿಸಿದರು. ಹೊಯ್ಸಳ ವಿಷ್ಣುವರ್ಧನ ಮತ್ತು ನರಸಿಂಹರ ಚಿನ್ನದ ನಾಣ್ಯಗಳಿಗೂ, ಹರಿಹರನ ಚಿನ್ನದ ನಾಣ್ಯಗಳಿಗೂ ವಿಶೇಷ ಹೋಲಿಕೆಯಿರುವುದನ್ನು ಗಮನಿಸಬೇಕು. ದುರ್ಗೆಯ ಚಿತ್ರದ ಬದಲು ಹರಿಹರನು ತನ್ನ ನಾಣ್ಯಗಳ ಮೇಲೆ ಹನುಮಂತನ ಚಿತ್ರವನ್ನು ಹಾಕಿಸಿದನು. ಹನುಮಂತನು ಯಾವ ಪಂಥಕ್ಕೂ ಸೇರದ ದೇವತೆ. ಹಿಂದೂ ಧರ್ಮದಲ್ಲಿ ಹನುಮಂತ ಏಕತೆಯ ಸಂಕೇತ. ದಕ್ಷಿಣ ಭಾರತದ ಅನೇಕ ರಾಜವಂಶಗಳು ಹನುಮಂತನ ಚಿತ್ರವನ್ನು ತಮ್ಮ ಧ್ವಜಗಳಲ್ಲಿಯೂ ಅಳವಡಿಸಿಕೊಂಡಿದ್ದರು. ಆದುದರಿಂದ ಜನರನ್ನು ಹುರಿದುಂಬಿಸಿ ಒಗ್ಗೂಡಿಸುವ ದೃಷ್ಟಿಯಿಂದ ತನ್ನ ಮೊದಲ ನಾಣ್ಯಗಳ ಮೇಲೆ ಹನುಮಂತನ ಚಿತ್ರವನ್ನು ಹಾಕಿಸಿದನು.

ಮೊದಲನೆಯ ಹರಿಹರನು ರಾಜ್ಯದ ಬೊಕ್ಕಸಕ್ಕೆ ಜನಗಳು ಕೊಡಬೇಕಾದ ತೆರಿಗೆಯು ಸುವರ್ಣಾದಾಯದ ರೂಪದಲ್ಲಿ ಅಂದರೆ ಚಿನ್ನದ ನಾಣ್ಯದ ರೂಪದಲ್ಲಿರಬೇಕೆಂದು ಆಜ್ಞೆಮಾಡಿದನು. ದವಸ-ಧಾನ್ಯಗಳ ರೂಪದಲ್ಲಿ ತೆರಿಗೆಯನ್ನು ಸಲ್ಲಿಸುವ ಪದ್ಧತಿ ಹಿಂದೆ ಬಿದ್ದಿತು. ಹೊಸ ಹೊಸ ಮೌಲ್ಯದ ನಾಣ್ಯಗಳನ್ನು ಅಚ್ಚು ಹಾಕಿಸುವ ಆವಶ್ಯಕತೆ

ತಲೆದೋರಿತು. ಪ್ರತಿಯೊಬ್ಬ ವಿಜಯನಗರ ರಾಜನೂ ತನ್ನ ಹಿಂದಿನ ರಾಜರುಗಳಿಂದ ಅಚ್ಚಾದ ನಾಣ್ಯಗಳನ್ನು ಮುಂದುವರಿಸುವುದರ ಜೊತೆಗೆ ತನಗೆ ಇಷ್ಟವಾದ ಹೊಸ ನಾಣ್ಯಗಳನ್ನು ಟಂಕಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡನು. ಹಾಗೆ ಮಾಡುವಾಗ ಹೊಸ ದೇವತೆಗಳ ಚಿತ್ರ ಮತ್ತು ಚಿಹ್ನೆಗಳಿರುವ ನಮೂನೆಯ ನಾಣ್ಯಗಳನ್ನು ಬಳಕೆಗೆ ತಂದನು. ಇದರಿಂದಾಗಿ ನಾಣ್ಯಗಳ ವೈವಿಧ್ಯ ಹೆಚ್ಚಿತು.

ಆಡಳಿತ ಸುಧಾರಣೆಯ ಅಂಗವಾಗಿ, ನಾಣ್ಯಗಳ ವ್ಯವಸ್ಥೆಯನ್ನು ನೋಡಿ ಕೊಳ್ಳುವುದಕ್ಕಾಗಿ ಒಂದು ಹೊಸ ಸರ್ಕಾರಿ ವಿಭಾಗವನ್ನು ಸ್ಥಾಪಿಸಲಾಯಿತು. ರಾಜ್ಯದಲ್ಲಿ ಒಂದು ಕೇಂದ್ರ ಟಂಕಶಾಲೆಯನ್ನು ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಸಣ್ಣ ಟಂಕ ಶಾಲೆಗಳನ್ನು ಸ್ಥಾಪಿಸಲಾಯಿತು. ವಿದೇಶೀ ಯಾತ್ರಿಕರು ತಿಳಿಸಿರುವಂತೆ ಕೇಂದ್ರ ಟಂಕಶಾಲೆಯನ್ನು ಹಂಪೆಯಲ್ಲಿ ವ್ಯವಸ್ಥೆಗೊಳಿಸಲಾಯಿತು. ಇತರ ಟಂಕಶಾಲೆಗಳನ್ನು ಬಾರಕೂರು, ಮಂಗಳೂರು, ಪೆನುಗೊಂಡೆ, ಗಂಡಿಕೋಟೆ, ಗುತ್ತಿ, ತಾಡಪತ್ರಿ, ತಿರುಪತಿ, ಆದೋನಿ, ನೆಲ್ಲೂರು ಮುಂತಾದ ಕಡೆಗಳಲ್ಲಿ ಸ್ಥಾಪಿಸಲಾಯಿತು. ನಾಣ್ಯಗಳ ಬೇಡಿಕೆಯು ಹೆಚ್ಚಿದುದರಿಂದ ಕೆಲವು ಮುಖ್ಯ ಸಾಮಂತರೂ ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ಪಡೆದರು. ಕೆಲವು ಸಾರಿ ಈ ಗುರುತರ ಜವಾಬ್ದಾರಿಯನ್ನು ಸ್ಥಳೀಯ ಸಂಸ್ಥೆಗಳಿಗೂ ವಹಿಸಲಾಯಿತು. ವಿಜಯನಗರ ಸಾಮಂತನಾದ ಲಕ್ಕಣ್ಣದಂಡೇಶನು ತನ್ನದೇ ಆದ ನಾಣ್ಯಗಳನ್ನು ಹೊರಡಿಸುತ್ತಿದ್ದನೆಂಬುದು ಇದಕ್ಕೆ ಉತ್ತಮ ಉದಾಹರಣೆ. ಆದರೆ ಇವರೆಲ್ಲರೂ ವಿಜಯನಗರದ ಕೇಂದ್ರ ಟಂಕಶಾಲೆಯ ಅಧಿಕಾರ ವ್ಯಾಪ್ತಿಯೊಳಗೆ ಬರುತ್ತಿದ್ದು, ಅದರ ನಿಯಂತ್ರಣದಲ್ಲಿ ಟಂಕನ ಕಾರ್ಯ ನಿರ್ವಹಿಸುತ್ತಿದ್ದರು.

ಈ ಕಾರ್ಯವನ್ನು ನೋಡಿಕೊಳ್ಳುವುದಕ್ಕಾಗಿ ಟಂಕಶಾಲೆಯ ಅಧಿಕಾರಿಯನ್ನು ನಿಯಮಿಸುತ್ತಿದ್ದರು. ಇವನ ಮುಖ್ಯ ಕೆಲಸವೆಂದರೆ ನಾಣ್ಯಗಳ ಶುದ್ಧತೆ ಮತ್ತು ತೂಕವನ್ನು ನಿಯಂತ್ರಿಸುವುದು. ಅದಕ್ಕಾಗಿ ಅಧಿಕಾರಿಯು ಅಕ್ಕಸಾಲಿಗಳನ್ನು ನಿಯಮಿಸಿಕೊಳ್ಳುತ್ತಿದ್ದನು. ಅವರು ಈ ಕಾರ್ಯವನ್ನು ಚೆನ್ನಾಗಿ ಬಲ್ಲವರಾಗಿರುತ್ತಿದ್ದರು. ಅವರು ತಮ್ಮ ಬಳಿ ಯಾವಾಗಲೂ ಒಂದು ಒರೆಗಲ್ಲನ್ನು ಮತ್ತು ಮೇಣದಂತಹ ವಸ್ತುವನ್ನು ಇಟ್ಟು ಕೊಂಡಿರುತ್ತಿದ್ದರು. ಚಿನ್ನದ ನಾಣ್ಯಗಳನ್ನು ಒರೆಗಲ್ಲಿನ ಮೇಲೆ ಉಜ್ಜಿ, ಮೇಣದಿಂದ ಅದನ್ನು ತೆಗೆದುಕೊಂಡು, ಪರೀಕ್ಷಿಸಿ ಇಟ್ಟುಕೊಂಡಿರುತ್ತಿದ್ದರು. ಇದು ತುಂಬ ಸೂಕ್ಷ್ಮವಾಗಿದ್ದು, ಒಂದು ಅಂಗಿಯ ಜೇಬಿನಲ್ಲಿ ಇಟ್ಟುಕೊಳ್ಳಬಹುದಾದಷ್ಟು ಸಣ್ಣದಾಗಿರುತ್ತಿತ್ತು. ಈ ತಕ್ಕಡಿಯು ಎಷ್ಟೊಂದು ಸೂಕ್ಷ್ಮವೂ, ನಿಖರವೂ ಆಗಿದ್ದಿತೆಂದರೆ ಒಂದು ಕೂದಲಿನ ತೂಕವನ್ನು ಪತ್ತೆ ಮಾಡುವಂತೆ ಇದ್ದಿತು. ಈ ರೀತಿ ನಾಣ್ಯಗಳ ಮೇಲೆ ನಿಯಂತ್ರಣವನ್ನು ಹೊಂದಿದ್ದರು.

ನಾಣ್ಯಗಳ ಹೆಸರು

ವಿಜಯನಗರ ಅರಸರು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ನಾಣ್ಯಗಳನ್ನು ಟಂಕಿಸಿದರು. ಇದರಲ್ಲಿ ಚಿನ್ನದ ನಾಣ್ಯಗಳೇ ಹೇರಳವಾಗಿದ್ದು, ರಾಜ್ಯದ ಆದಾಯ ಹಾಗೂ ಪ್ರಮುಖ ದಾನಗಳು ಈ ಚಿನ್ನದ ನಾಣ್ಯಗಳ ಮೂಲಕ ನಡೆಯುತ್ತಿದ್ದವು. ಶಾಸನಗಳು ಮತ್ತು ವಿದೇಶೀ ಬರವಣಿಗೆಗಳಿಂದ ಚಿನ್ನದ ನಾಣ್ಯದ ಶುದ್ಧತೆಯನ್ನು ತಿಳಿಯಬಹುದು. ಕೆಲವು ಯಾತ್ರಿಕರ ಪ್ರಕಾರ ಚಿನ್ನದ ಶುದ್ಧತೆಯು ಶೇಕಡ 80 ರಿಂದ 90ರ ವರೆಗೆ ಇದ್ದಿತು. ಆದರೆ ಕೆಲವು ಯಾತ್ರಿಕರು ಇದನ್ನು ಅನುಮೋದಿಸುವುದಿಲ್ಲ. ಗದ್ಯಾಣ, ವರಹ, ಪೊನ್, ಪಗೋಡ, ಪ್ರತಾಪ, ಕಾಟಿ, ಪಣ, ಚಿನ್ನಮು, ಮಾಡ, ಹಾಗ, ವೀಸ ಬೇಳೆ, ರೂಕ, ತಾರ ಮತ್ತು ಕಾಸು ಈ ಕಾಲದಲ್ಲಿ ಟಂಕಿಸಲ್ಪಡುತ್ತಿದ್ದ ನಾಣ್ಯಗಳು. ಅತ್ಯಂತ ಹೆಚ್ಚು ಮೌಲ್ಯದ ಚಿನ್ನದ ನಾಣ್ಯವೇ ಗದ್ಯಾಣ. ಇದನ್ನು ವರಹ, ಪೊನ್ ಮತ್ತು ಪಗೋಡ ಎಂದೂ ಕರೆಯುತ್ತಿದ್ದರು. ಇದರ ತೂಕ 52 ಗ್ರೇನ್‌ಗಳು. ಇದಕ್ಕೆ ಅಪವಾದವೆಂದರೆ ಕೃಷ್ಣದೇವರಾಯನು ತಿರುಪತಿಯ ವೆಂಕಟೇಶ್ವರನ ಕನಕಾಭಿಷೇಕಕ್ಕಾಗಿ ಟಂಕಿಸಿದ ಚಿನ್ನದ ನಾಣ್ಯ. ಇದು ಎರಡು ಗದ್ಯಾಣ ಮೌಲ್ಯದ ಚಿನ್ನದ ನಾಣ್ಯವಾದುದರಿಂದ ಇದರ ತೂಕ 120 ಗ್ರೇನ್. ಆದುದರಿಂದಲೇ ಇದಕ್ಕೆ ದೊಡ್ಡ ಗದ್ಯಾಣ ಅಥವಾ ದೊಡ್ಡ ವರಹ ಎಂದೂ ಹೆಸರು. ಸಾಮಾನ್ಯವಾಗಿ ಗದ್ಯಾಣದ ಅಗಲ ಅರ್ಧ ಅಂಗುಲ. ಇದರ ಮುಮ್ಮುಖದಲ್ಲಿ ದೇವ-ದೇವತೆಗಳ ಚಿತ್ರ, ಹಿಮ್ಮುಖದಲ್ಲಿ ನಾಗರೀ, ಕನ್ನಡ ಅಥವಾ ತೆಲುಗು ಲಿಪಿಯಲ್ಲಿ ರಾಜನ ಹೆಸರಿನ ಬರಹ ಇರುತ್ತದೆ.

ಅರ್ಧ ಗದ್ಯಾಣದ ಹೆಸರು ಪ್ರತಾಪ. ಇದನ್ನು ಪರ್ತಬ್ರ್ ಅಥವಾ ಪರ್ದಾವೊ ಎಂದು ವಿದೇಶೀ ಯಾತ್ರಿಕರು ಕರೆದಿದ್ದಾರೆ. ಇದರ ತೂಕ 26 ಗ್ರೇನ್. ಈ ನಾಣ್ಯಗಳ ಮೇಲೆ ಪ್ರತಾಪ ಎನ್ನುವ ಬರಹವಿರುವುದರಿಂದ, ಈ ನಾಣ್ಯಗಳಿಗೆ ಆ ಹೆಸರು ಬಂದಿರಬೇಕು. ಇಮ್ಮಡಿ ಹರಿಹರನು ಮೊಟ್ಟಮೊದಲನೆಯ ಬಾರಿಗೆ ಪ್ರತಾಪ ಎನ್ನುವ ಬಿರುದನ್ನು ಧರಿಸಿದನು. ವೀರ ಎನ್ನುವ ಬದಲು ಪ್ರತಾಪ ಹರಿಹರ ಎಂಬ ಬರಹವನ್ನು ತನ್ನ ಚಿನ್ನದ ನಾಣ್ಯಗಳ ಮೇಲೆ ಅಚ್ಚು ಹಾಕಿಸಲು ಆರಂಭಿಸಿದನು. ಇವನ ಅನಂತರ ಬಂದ ಎಲ್ಲ ವಿಜಯನಗರ ದೊರೆಗಳೂ ಈ ಬಿರುದನ್ನು ತಮ್ಮ ಹೆಸರಿನ ಜೊತೆ ಸೇರಿಸಿಕೊಂಡರು. ಅವರಲ್ಲಿ ಅನೇಕರು ಈ ಬಿರುದನ್ನು ತಮ್ಮ ನಾಣ್ಯಗಳ ಹಿಮ್ಮುಖದಲ್ಲಿ ಅಚ್ಚು ಹಾಕಿಸಿದರು. ವಿಜಯನಗರ ಬೊಕ್ಕಸದ ಹಣವನ್ನು ವಿವರಿಸುವಾಗ ಹಾಗೂ ತೆರಿಗೆಗಳನ್ನು ಉಲ್ಲೇಖಿಸುವಾಗ ಗದ್ಯಾಣಕ್ಕಿಂತ ಹೆಚ್ಚಿಗೆ ಪ್ರತಾಪ ಎಂಬ ನಾಣ್ಯವನ್ನು ಬಳಸಿರುವುದು ನಮ್ಮ ಗಮನವನ್ನು ಸೆಳೆಯುತ್ತದೆ. ಆದುದರಿಂದ ಇದೊಂದು ಬಹಳ ಬೇಡಿಕೆಯಲ್ಲಿದ್ದ ನಾಣ್ಯವೆಂದು ತಿಳಿಯಬೇಕಾಗುತ್ತದೆ.

ಕಾಲು ಗದ್ಯಾಣ ಮೌಲ್ಯದ ನಾಣ್ಯದ ಹೆಸರು ಕಾಟಿ. ಇದರ ತೂಕ 13 ಗ್ರೇನ್. ಶಾಸನಗಳಲ್ಲಿ ಈ ನಾಣ್ಯದ ಉಲ್ಲೇಖ ಪದೇ ಪದೇ ಕಾಣಿಸಿಕೊಳ್ಳುತ್ತದೆ. ಆದುದರಿಂದ ಇದೂ ಒಂದು ಜನಾನುರಾಗಿಯಾಗಿದ್ದ ನಾಣ್ಯವೆಂದು ತಿಳಿದುಬರುತ್ತದೆ. ವ್ಯಾಪಾರ, ವ್ಯವಹಾರಗಳಲ್ಲಿ ವಿಶೇಷವಾಗಿ ಈ ನಾಣ್ಯದ ಉಪಯೋಗವಾಗುತ್ತಿದ್ದಿತೆಂಬುದು ಶಾಸನಗಳಿಂದ ತಿಳಿದುಬರುತ್ತದೆ.

ಪಣ ಅಥವಾ ಹಣ ಎನ್ನುವುದು ಇನ್ನೊಂದು ಚಿನ್ನದ ನಾಣ್ಯ. ಇದು ಗದ್ಯಾಣದ ಹತ್ತನೆಯ ಒಂದು ಭಾಗ. ಇದರ ತೂಕ 5 ಗ್ರೇನ್. ಶಾಸನಗಳಲ್ಲಿ ಪಣದ ಉಲ್ಲೇಖ ವಿಶೇಷವಾಗಿ ಕಾಣಬರುತ್ತದೆ. ಗದ್ಯಾಣದಂತಹ ದೊಡ್ಡ ಮೌಲ್ಯದ ನಾಣ್ಯ ಸಣ್ಣಪುಟ್ಟ ವ್ಯವಹಾರಗಳಿಗೆ ಉಪಯೋಗವಾಗುತ್ತಿರಲಿಲ್ಲ. ಆದುದರಿಂದ ಸಣ್ಣ ಮೌಲ್ಯದ ಈ ಚಿನ್ನದ ಪಣ ಸಣ್ಣ-ಪುಟ್ಟ ವ್ಯವಹಾರಗಳಲ್ಲಿ ಹೆಚ್ಚಾಗಿ ಬಳಸಲು ಅನುಕೂಲವಾಗುತ್ತಿತ್ತು. ವಿದೇಶೀ ಯಾತ್ರಿಕರು ಕೂಡ ಪಣ ಎಂಬ ನಾಣ್ಯವನ್ನು ಹೆಚ್ಚಾಗಿ ಉಲ್ಲೇಖಿಸಿದ್ದಾರೆ.

ಚಿನ್ನ ಅಥವಾ ಚಿನ್ನಮು ಎಂಬ ಚಿನ್ನದ ನಾಣ್ಯ ಗದ್ಯಾಣದ ಎಂಟನೆಯ ಒಂದು ಭಾಗದ ನಾಣ್ಯ. ಇದರ ತೂಕ 6.5 ಗ್ರೇನ್. ಈ ನಾಣ್ಯ ವಿಶೇಷವಾಗಿ ವಿಜಯನಗರದ ಆಂಧ್ರದ ಜಿಲ್ಲೆಗಳಲ್ಲಿ ಉಪಯೋಗದಲ್ಲಿತ್ತು. ಆದುದರಿಂದ ತೆಲುಗು ಶಾಸನಗಳಲ್ಲಿ ಈ ನಾಣ್ಯದ ಉಲ್ಲೇಖ ಹೆಚ್ಚು ಕಂಡುಬರುತ್ತದೆ. ಕನ್ನಡ ಶಾಸನಗಳಲ್ಲಿ ಈ ನಾಣ್ಯದ ಉಲ್ಲೇಖ ತುಂಬ ಕಡಿಮೆ. ಚಿನ್ನಮು ಎಂಬ ನಾಣ್ಯ ಆಂಧ್ರದಲ್ಲಿ ವಿಜಯನಗರ ಕಾಲಕ್ಕಿಂತ ಮುಂಚೆಯೇ ಚಲಾವಣೆಯಲ್ಲಿದ್ದಿತು. ಆದುದರಿಂದ ಈ ಪ್ರದೇಶಗಳಲ್ಲಿ ಜನಗಳಿಗೆ ಚೆನ್ನಾಗಿ ಪರಿಚಯುವಿದ್ದ, ಚಿನ್ನಮು ಎಂಬ ನಾಣ್ಯವನ್ನು ವಿಜಯುನಗರ ಅರಸರು ಮುಂದುವರಿಸಿದರು.

ಮಾಡ ಅಥವಾ ಮಾಡೈ ಎನ್ನುವುದು ಇನ್ನೊಂದು ಚಿನ್ನದ ನಾಣ್ಯ. ಇದು ವಿಶೇಷವಾಗಿ ತಮಿಳುನಾಡಿನ ಮತ್ತು ಆಂಧ್ರದ ಭಾಗಗಳಲ್ಲಿ ಬಳಕೆಯಲ್ಲಿದ್ದಿತು. ಕನ್ನಡ ಶಾಸನಗಳಲ್ಲಿ ಈ ನಾಣ್ಯದ ಉಲ್ಲೇಖ ತೀರ ಕಡಿಮೆ. ಈ ಹೆಸರಿನ ನಾಣ್ಯವು ಚೋಳ, ಪೂರ್ವೀಚಾಲುಕ್ಯರ ಕಾಲಗಳಲ್ಲಿ ಬಳಕೆಯಲ್ಲಿದ್ದು, ಈ ಭಾಗದ ಜನಗಳಿಗೆ ವಿಶೇಷವಾಗಿ ಪರಿಚಿತವಾಗಿತ್ತು. ಆದುದರಿಂದ ವಿಜಯನಗರದ ಅರಸರು ಈ ಭಾಗಗಳಲ್ಲಿ ಈ ಹೆಸರಿನ ನಾಣ್ಯವನ್ನೇ ಮುಂದುವರಿಸಿದರು. ಮೌಲ್ಯದಲ್ಲಿ ಇದು ಗದ್ಯಾಣಕ್ಕೆ ಸಮಾನವಾಗಿದ್ದು, ಇದರ ತೂಕ 52 ಗ್ರೇನ್. ಗದ್ಯಾಣವು ವಿಜಯನಗರ ಕಾಲದಲ್ಲಿ ಹೆಚ್ಚು ಜನಾನುರಾಗಿಯಾಗಿದ್ದು, ಮಾಡೈ ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತಿದ್ದಿತು.

ಹಾಗ ಅಥವಾ ಪಾಗ ಎನ್ನುವುದು ಇನ್ನೊಂದು ಸಣ್ಣ ಮೌಲ್ಯದ ಚಿನ್ನದ ನಾಣ್ಯ. ಇದು ಮೌಲ್ಯದಲ್ಲಿ ಪಣದ ನಾಲ್ಕನೆಯ ಒಂದು ಭಾಗ. ಇದರ ತೂಕ 1.5 ಗ್ರೇನ್. ಸಣ್ಣ ಪುಟ್ಟ ವ್ಯವಹಾರಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ಬಡ್ಡಿ ವ್ಯವಹಾರಗಳಲ್ಲಿ ಈ ನಾಣ್ಯ

ಹೆಚ್ಚಿನಮಟ್ಟಿಗೆ ಬಳಕೆಯಾಗುತ್ತಿದ್ದಿತು ಎನ್ನುವುದು ಸಮಕಾಲೀನ ಶಾಸನಗಳಿಂದ ತಿಳಿದು ಬರುತ್ತದೆ. ಇದು ಕರ್ನಾಟಕದಲ್ಲಿ ವಿಜಯನಗರ ಕಾಲಕ್ಕೂ ಮುಂಚಿನ ಕಾಲದಲ್ಲಿ ಬಳಕೆಯಲ್ಲಿದ್ದಿತು. ಕನ್ನಡ ಗ್ರಂಥಗಳಲ್ಲಿ ಮುಪ್ಪಾಗ, ಅಂದರೆ ಪಾಗದ ಮುಕ್ಕಾಲು ಭಾಗದ ಮೌಲ್ಯದ ನಾಣ್ಯದ ಉಲ್ಲೇಖ ಕಾಣಬರುತ್ತದೆ. ಆದರೆ ಈ ಮೌಲ್ಯದ ನಾಣ್ಯ ಇದುವರೆಗೂ ದೊರಕಿಲ್ಲವಾದುದರಿಂದ, ಇದು ಕೇವಲ ಲೆಕ್ಕ ಪುಸ್ತಕಗಳಲ್ಲಿ ಮಾತ್ರ ಉಲ್ಲೇಖಿತವಾಗಿದ್ದ ನಾಣ್ಯವಿರಬಹುದು ಎಂಬ ಸಂಶಯವೂ ಉದ್ಭವವಾಗುತ್ತದೆ. 1.1 ಗ್ರೇನ್ ಚಿನ್ನದ ನಾಣ್ಯ ದೊರಕಿದರೆ, ಅದನ್ನು ಮುಪ್ಪಾಗ ಎಂದು ತೀರ್ಮಾನಿಸಬಹುದು.

ಬೇಳೆ ಎನ್ನುವುದು ವಿಜಯನಗರ ಕಾಲದ ಅತ್ಯಂತ ಕನಿಷ್ಠ ಮೌಲ್ಯದ ಚಿನ್ನದ ನಾಣ್ಯ. ಇದರ ತೂಕ 0.75 ಗ್ರೇನ್. ಇದು ಹಾಗ ನಾಣ್ಯದ ಅರ್ಧಭಾಗ. ಇದು ಕೂಡ ಕನ್ನಡನಾಡಿನಲ್ಲಿ ಬಹಳ ಹಿಂದಿನ ಕಾಲದಿಂದ ಬಳಕೆಯಲ್ಲಿದ್ದು, ಬಡ್ಡಿ ವ್ಯವಹಾರಗಳಲ್ಲಿ ವಿಶೇಷವಾಗಿ ಬಳಕೆಯಾಗುತ್ತಿದ್ದಿತು. ರೂಕ ಎನ್ನುವುದು ತೆಲುಗು ಶಾಸನಗಳಲ್ಲಿ ಕಾಣಬರುವ ಇನ್ನೊಂದು ಚಿನ್ನದ ನಾಣ್ಯ. ಇದರ ಮೌಲ್ಯ ಸರಿಯಾಗಿ ತಿಳಿದುಬಂದಿಲ್ಲ. ವೀಸ ಎನ್ನುವುದು ಇನ್ನೊಂದು ಚಿನ್ನದ ನಾಣ್ಯ. ಇದು ಕನ್ನಡ ಶಾಸನಗಳಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ. ಇದು ವಿಜಯನಗರ ಕಾಲಕ್ಕಿಂತ ಮುಂಚೆಯೇ ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ಅದನ್ನೇ ವಿಜಯನಗರದ ಅರಸರು ಮುಂದುವರಿಸಿದರು. ಹೊಯ್ಸಳರ ಕಾಲದಲ್ಲಿ ವೀಸವು, ಹಾಗದ ನಾಲ್ಕನೆಯ ಒಂದು ಭಾಗವಾಗಿದ್ದಿತು. ಆದರೆ ವಿಜಯನಗರ ಕಾಲದಲ್ಲಿ ಅದರ ಮೌಲ್ಯವೇನು ಎಂಬುದು ತಿಳಿದುಬಂದಿಲ್ಲ.

ತಾರ ಎನ್ನುವುದು ವಿಜಯನಗರ ಕಾಲದ ಬೆಳ್ಳಿಯ ನಾಣ್ಯ. ಇದನ್ನು ತಾರ್, ತೌರ್ ಮತ್ತು ತಾರೆ ಎಂದು ವಿದೇಶೀ ಬರಹಗಾರರು ಉಲ್ಲೇಖಿಸಿದ್ದಾರೆ. ವಿದೇಶೀ ಬರಹಗಾರರಲ್ಲಿ ಈ ನಾಣ್ಯದ ಮೌಲ್ಯದ ಬಗೆಗೆ ಒಮ್ಮತವಿಲ್ಲ. ಅಬ್ದುಲ್ ರಜಾಕನ ಪ್ರಕಾರ ಆರು ತಾರಗಳಿಗೆ ಒಂದು ಚಿನ್ನದ ಪಣ ಸಮ. ಆದರೆ ವರ್ತೆಮ ಎಂಬ ಇನ್ನೊಬ್ಬ ಯಾತ್ರಿಕನ ಪ್ರಕಾರ ಹದಿನಾರು ತಾರಗಳಿಗೆ ಒಂದು ಪಣ ಸಮ. ಆದುದರಿಂದ ಈ ಕಾಲದಲ್ಲಿ ಎರಡು ರೀತಿಯ ತಾರಗಳಿದ್ದವು. ದೊಡ್ಡದಾದ ಮೊದಲನೆಯದು ಪಣದ ಆರನೆಯ ಒಂದು ಭಾಗವಾದರೆ, ಎರಡನೆಯ ಸಣ್ಣ ನಾಣ್ಯವು ಅದೇ ಪಣದ ಹದಿನಾರನೆಯ ಒಂದು ಭಾಗಕ್ಕೆ ಸಮನಾಗಿತ್ತು ಎಂದು ಭಾವಿಸಬಹುದು. ಈಗ ದೊರಕಿರುವ ಬೆಳ್ಳಿಯ ನಾಣ್ಯಗಳ ತೂಕ 52 ಗ್ರೇನ್. ಬಹುಶಃ ಇದು ಮೊದಲನೆಯ ಗುಂಪಿಗೆ ಸೇರಿದ್ದು, ಪಣದ ಆರನೆಯ ಒಂದು ಭಾಗವಿದ್ದಿರಬೇಕು.

ಶಾಸನಗಳ ಪ್ರಕಾರ ವಿಜಯನಗರದ ತಾಮ್ರದ ನಾಣ್ಯಗಳ ಹೆಸರು ಕಾಸು, ಜಿತಲ್, ಪಣಂ, ಕಾಣಿ ಮತ್ತು ಕಾಕಿಣಿ. ಅತಿ ಹೆಚ್ಚಿನ ತೂಕದ ತಾಮ್ರದ ನಾಣ್ಯ 250 ಗ್ರೇನ್ ಆದರೆ ತೀರ ಸಣ್ಣ ತಾಮ್ರದ ನಾಣ್ಯ 15 ಗ್ರೇನ್ ತೂಗುತ್ತದೆ. ದೊರಕಿರುವ ಇತರ

ತಾಮ್ರದ ನಾಣ್ಯಗಳ ತೂಕ 160, 125, 50, 40, 30 ಮತ್ತು 25 ಗ್ರೇನ್. ಕಾಣಿ, ದುಗ್ಗಾಣಿ, ಅರೆಕಾಣಿ ಎಂಬ ತಾಮ್ರದ ನಾಣ್ಯಗಳ ಉಲ್ಲೇಖ ಸಾಹಿತ್ಯ ಕೃತಿಗಳಲ್ಲಿ ಕಂಡುಬಂದರೂ ಅವುಗಳ ತೂಕ ಖಚಿತವಾಗಿ ತಿಳಿದುಬಂದಿಲ್ಲ.

ಈ ಮೇಲೆ ವಿವರಿಸಿದ ನಾಣ್ಯಗಳ ಹೆಸರು, ಅವುಗಳ ತೂಕ, ಪರಸ್ಪರ ಸಂಬಂಧ ಇವುಗಳನ್ನು ಕೋಷ್ಟಕದ ರೂಪದಲ್ಲಿ ಈ ಕೆಳಗೆ ಕಂಡಂತೆ ತಿಳಿಸಬಹುದು.

ಚಿನ್ನದ ನಾಣ್ಯಗಳು

ದೊಡ್ಡ ವರಹ = ದೊಡ್ಡ ಗದ್ಯಾಣ = 2 ವರಹ = 120 ಗ್ರೇನ್

1 ವರಹ = 1 ಗದ್ಯಾಣ = 1 ಫೊನ್ = 1 ಪಗೋಡ = 1 ಮಾಡೈ = 52 ಗ್ರೇನ್

1 ವರಹ = 2 ಪ್ರತಾಪ = 52 ಗ್ರೇನ್

1 ಪ್ರತಾಪ = 2 ಕಾಟಿ = ಅರ್ಧವರಹ = 26 ಗ್ರೇನ್

1 ಕಾಟಿ = ಕಾಲುವರಹ = 13 ಗ್ರೇನ್

1 ವರಹ = 10 ಪಣ

1 ಪಣ = 5-6 ಗ್ರೇನ್

1 ಚಿನ್ನಮು = 6.5 ಗ್ರೇನ್ = ಎಂಟನೆಯ ಒಂದು ವರಹ

1 ಪಣ = 4 ಹಾಗ

1 ಹಾಗ = 2 ಬೇಳೆ = 1.5 ಗ್ರೇನ್

1 ಬೇಳೆ = 0.75 ಗ್ರೇನ್

ಬೆಳ್ಳಿಯ ನಾಣ್ಯಗಳು

ತಾರ್ = ತಾರ = ತೌರ್ = ತಾರೆ = ಆರನೆಯ ಒಂದು ಪಣ

ತಾರ (ಮತ್ತೊಂದು ನಮೂನೆ) = ಹದಿನಾರನೆಯ ಒಂದು ಪಣ

ತಾಮ್ರದ ನಾಣ್ಯಗಳು

ದುಗ್ಗಾಣಿ = 2 ಕಾಣಿ ಅಥವಾ ಕಾಕಿಣಿ = 250 ಗ್ರೇನ್

1 ಕಾಣಿ = 125 ಗ್ರೇನ್ = 2 ಅರೆಕಾಣಿ

1 ಜಿತಲ್ = ಮೂರನೆಯ ಒಂದು ತಾರ

1 ಕಾಸು = 30 ಗ್ರೇನ್ = 2 ಅರೆಕಾಸು

1 ಅರೆಕಾಸು = 15 ಗ್ರೇನ್

ನಾಣ್ಯಗಳ ಮೇಲಿನ ದೇವತೆಗಳು ಮತ್ತು ಚಿಹ್ನೆಗಳು

ವಿಜಯನಗರ ನಾಣ್ಯಗಳ ಮುಮ್ಮುಖ ಮತ್ತು ಹಿಮ್ಮುಖಗಳಲ್ಲಿ ದೇವ-ದೇವತೆಗಳ ಚಿತ್ರ, ಇಲ್ಲವೇ ಧಾರ್ಮಿಕ ಚಿಹ್ನೆಗಳು ಹಾಗೂ ಬರಹಗಳು ಕಾಣಬರುತ್ತವೆ. ಮುಮ್ಮುಖದಲ್ಲಿ ಕಾಣಬರುವ ಚಿತ್ರಗಳನ್ನು ಮೂರು ಭಾಗಗಳಾಗಿ ವಿಭಾಗಿಸಬಹುದು. ಮೊದಲನೆಯದು ದೇವತೆಗಳು, ಎರಡನೆಯದು ಚಿಹ್ನೆಗಳು ಮತ್ತು ಮೂರನೆಯದು ಪ್ರಾಣಿಗಳು. ಇವೆಲ್ಲವೂ ಧಾರ್ಮಿಕ ಸಂಬಂಧಗಳನ್ನು ಹೊಂದಿದ್ದು, ನಾಣ್ಯಗಳನ್ನು ಟಂಕಿಸಿದ ರಾಜರ ಒಲವನ್ನು ಸೂಚಿಸುತ್ತವೆ. ಪತ್ನೀ ಸಮೇತರಾದ ಶಿವ, ವಿಷ್ಣು, ಬ್ರಹ್ಮ ನರಸಿಂಹ, ವೆಂಕಟೇಶ್ವರ, ಶ್ರೀರಾಮ, ಬಾಲಕೃಷ್ಣ ಮೊದಲನೆಯ ಗುಂಪಿಗೆ ಸೇರಿದರೆ ಎರಡನೆಯ ಗುಂಪಿನಲ್ಲಿ ಶಂಖ, ಚಕ್ರ, ಅಂಕುಶ, ಖಡ್ಗ, ಡಮರು, ಪರಶುಗಳು ಕಾಣಬರುತ್ತವೆ. ಸಿಂಹ, ಆನೆ, ಗರುಡ, ಗಂಡಭೇರುಂಡ, ವರಾಹ, ನಂದಿ ಪ್ರಾಣಿಗಳ ಗುಂಪಿನಲ್ಲಿ ಸೇರುತ್ತವೆ. ವಿಜಯನಗರದ ಅರಸರು ಸಂಗಮ, ತುಳುವ ಮತ್ತು ಆರವೀಡು ಮನೆತನಗಳಿಗೆ ಸೇರಿದವರು. ಈ ಮನೆತನದವರ ಧಾರ್ಮಿಕ ಒಲವು ಯಾವ ಧರ್ಮದ ಕಡೆಗೆ ಇದ್ದಿತು ಎಂಬುದು ಕೆಳಗಿನ ವಿವರದಿಂದ ಗೊತ್ತಾಗುತ್ತದೆ.

ಹನುಮಾನ್	ಸಂಗಮ	-	ಆರವೀಡು
ಗರುಡ	ಸಂಗಮ	ತುಳುವ	ಆರವೀಡು
ಆನೆ	ಸಂಗಮ	-	ಆರವೀಡು
ನಂದಿ	ಸಂಗಮ	ತುಳುವ	ಆರವೀಡು
ಕುದುರೆ	ಸಂಗಮ	-	-
ಶಂಖ	-	-	ಆರವೀಡು
ಚಕ್ರ	-	-	ಆರವೀಡು
ವರಾಹ	-	-	ಆರವೀಡು
ಗಂಡಭೇರುಂಡ	-	ತುಳುವ	-
ಅಂಕುಶ	ಸಂಗಮ	-	-
ವೆಂಕಟೇಶ್ವರ	-	ತುಳುವ	ಆರವೀಡು
ಶಿವ-ಪಾರ್ವತಿ	ಸಂಗಮ	ತುಳುವ	ಅರವೀಡು
ಲಕ್ಷ್ಮೀನಾರಾಯಣ	ಸಂಗಮ	ತುಳುವ	-
ಲಕ್ಷ್ಮೀನರಸಿಂಹ	ಸಂಗಮ	-	-
ಲಕ್ಷ್ಮೀ	-	ತುಳುವ	-
ಶ್ರೀರಾಮ-ಸೀತೆ	-	-	ಆರವೀಡು
ಬ್ರಹ್ಮ-ಸರಸ್ವತಿ	ಸಂಗಮ	-	-
ಗಣಪತಿ	-	-	ಆರವೀಡು
ಸಿಂಹ	-	ತುಳುವ	-

ಸಂಗಮ ಮನೆತನದ ದೊರೆಗಳು ಮೊದಲು ಒಂದೇ ದೇವತೆಯ ಚಿತ್ರವನ್ನು ಬಳಸಿದರು. ನಂತರ ಪತ್ನೀ ಸಮೇತರಾದ ದೇವತೆಗಳ ಚಿತ್ರಗಳನ್ನು ಬಳಸಲು ಆರಂಭಿಸಿದರು. ತಿರುಪತಿಯ ವೆಂಕಟೇಶ್ವರ ತುಳುವರ ಕಾಲದಿಂದ ಆರಂಭವಾಗಿ ಆರವೀಡು ಮನೆತನದ ಕಾಲದಲ್ಲಿಯೂ ಪ್ರಾಮುಖ್ಯವನ್ನು ಪಡೆದಿದ್ದ ವಿಷಯ ಮೇಲಿನ ಪಟ್ಟಿಯಿಂದ ಗೊತ್ತಾಗುತ್ತದೆ. ಶ್ರೀರಾಮ-ಸೀತೆ ಆರವೀಡು ಕಾಲದ ನಾಣ್ಯಗಳಲ್ಲಿ ಮಾತ್ರ ಕಾಣಸಿಗುತ್ತಾರೆ. ಒಟ್ಟಿನಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳು ಈ ಎಲ್ಲ ಕಾಲದಲ್ಲಿಯೂ ಸಮಾನ ಪ್ರಾಧಾನ್ಯವನ್ನು ಪಡೆದಿದ್ದವು ಎಂದೂ ಗೊತ್ತಾಗುತ್ತದೆ.

ಇದೇ ರೀತಿಯಲ್ಲಿ ವಿಜಯನಗರ ಪ್ರತಿಯೊಬ್ಬ ರಾಜನಿಗೂ ಇದ್ದ ಧಾರ್ಮಿಕ ಒಲವನ್ನು ನಾಣ್ಯಗಳ ಮೂಲಕ ತಿಳಿಯಬಹುದಾಗಿದೆ. ಈ ಕೆಳಗಿನ ಪಟ್ಟಿಯಿಂದ ಈ ವಿಷಯ ಸ್ಪಷ್ಟವಾಗುತ್ತದೆ.

ಒಂದನೆಯ ಹರಿಹರ		ಹನುಮಾನ್
		ಗರುಡ
ಒಂದನೆಯ ಬುಕ್ಕ		ಹನುಮಾನ್
ಇಮ್ಮಡಿ ಹರಿಹರ		ಶಿವ-ಪಾರ್ವತಿ
		ಲಕ್ಷ್ಮೀನಾರಾಯಣ
		ಲಕ್ಷ್ಮೀನರಸಿಂಹ
		ಬ್ರಹ್ಮ-ಸರಸ್ವತಿ
ಇಮ್ಮಡಿ ಬುಕ್ಕ	:	ನಂದಿ
ಒಂದನೆಯ ದೇವರಾಯ	:	ಶಿವ-ಪಾರ್ವತಿ
		ಲಕ್ಷ್ಮೀನಾರಾಯಣ
		ನಂದಿ
ವಿಜಯರಾಯ		ನಂದಿ
ಇಮ್ಮಡಿ ದೇವರಾಯ		ಶಿವ-ಪಾರ್ವತಿ
		ಆನೆ
		ಶಂಖ
		ಚಕ್ರ
		ಖಡ್ಗ
ಮಲ್ಲಿಕಾರ್ಜುನ		ಆನೆ
		ನಂದಿ
ನರಸಿಂಹ	:	ಸಿಂಹ

ಕೃಷ್ಣದೇವರಾಯ	ವೆಂಕಟೇಶ್ವರ
	ಬಾಲಕೃಷ್ಣ
	ಶಿವ-ಪಾರ್ವತಿ
	ಲಕ್ಷ್ಮಿ
	ಗರುಡ
	ನಂದಿ
ಅಚ್ಯುತರಾಯ	ಗಂಡಭೇರುಂಡ
ಸದಾಶಿವರಾಯ	ಶಿವ-ಪಾರ್ವತಿ
	ಲಕ್ಷ್ಮೀನಾರಾಯಣ
	ಗರುಡ
ತಿರುಮಲರಾಯ	ಶ್ರೀರಾಮ-ಸೀತೆ
	ಶಂಖ-ಚಕ್ರ
	ಗರುಡ
	ವರಾಹ
	ಆನೆ
ರಾಮರಾಯ ವೆಂಕಟಾದ್ರಿ	ಗರುಡ
ಒಂದನೆಯ ಶ್ರೀರಂಗರಾಯ	ವೆಂಕಟೇಶ್ವರ
ಇಮ್ಮಡಿ ವೆಂಕಟಪತಿರಾಯ	ವೆಂಕಟೇಶ್ವರ
	ಗರುಡ
	ಹನುಮಾನ್
ಮುಮ್ಮಡಿ ಶ್ರೀರಂಗರಾಯ	ನಂದಿ
ಮುಮ್ಮಡಿ ವೆಂಕಟಪತಿರಾಯ	ವೆಂಕಟೇಶ್ವರ-ಶ್ರೀದೇವಿ-ಭೂದೇವಿ
ನಾಲ್ಕನೆಯ ಶ್ರೀರಂಗರಾಯ	ವೆಂಕಟೇಶ್ವರ
	ಗಣಪತಿ

ವಿಜಯನಗರದ ಎಲ್ಲ ರಾಜರೂ ಶೈವ ಮತ್ತು ವೈಷ್ಣವ ಧರ್ಮಗಳನ್ನು ಸಮಾನವಾಗಿ ಕಾಣುತ್ತಿದ್ದರೆಂಬುದು ಮೇಲಿನ ಪಟ್ಟಿಯಿಂದ ಸುಲಭವಾಗಿ ವ್ಯಕ್ತವಾಗುತ್ತದೆ. ಹೆಚ್ಚಿನ ರಾಜರು ನಂದಿಯನ್ನು ತಮ್ಮ ನಾಣ್ಯಗಳ ಮೇಲೆ ಬಳಸಿದರೆ, ಶಿವ-ಪಾರ್ವತಿಯ ಚಿತ್ರವನ್ನು ಐವರು ದೊರೆಗಳು ಬಳಸಿದರು. ವೆಂಕಟೇಶ್ವರ ಮತ್ತು ಲಕ್ಷ್ಮೀನಾರಾಯಣ ನಾಲ್ಕು ರಾಜರ ನಾಣ್ಯಗಳ ಮೇಲೆ ಕಾಣಬರುತ್ತಾರೆ. ಹನುಮಾನ್ ಇಬ್ಬರು ದೊರೆಗಳ ನಾಣ್ಯಗಳ ಮೇಲೆ ಕಾಣಬರುತ್ತಾನೆ. ಇಲ್ಲಿ ಕಾಣಬರುವ ಇನ್ನೊಂದು ಪ್ರಮುಖ ಅಂಶವೆಂದರೆ ದೇವತೆಗಳ ಪತ್ನಿಯರನ್ನೂ ನಾಣ್ಯಗಳ ಮೇಲೆ ಅಚ್ಚು ಹಾಕಿಸುವ ಪದ್ಧತಿ. ಹಿಂದೂ ಧರ್ಮದ

ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಈಶ್ವರರನ್ನು ಅವರ ಪತ್ನಿಯರ ಜೊತೆ, ಹಾಗೂ ಶ್ರೀರಾಮನನ್ನು ಸೀತೆಯ ಜೊತೆ ಪೂಜಿಸುವ ಪದ್ಧತಿ ವಿಜಯನಗರ ಕಾಲದಲ್ಲಿ ವಿಶೇಷವಾಗಿ ಬೆಳೆದುಬಂದಿತ್ತು ಎಂಬುದು ವಾಸ್ತುಶಿಲ್ಪ ಕೃತಿಗಳಿಂದಲೂ ತಿಳಿದುಬರುತ್ತದೆ. ಆದುದರಿಂದ ಈ ಕಾಲದ ಧಾರ್ಮಿಕ ಒಲವು ನಾಣ್ಯಗಳಲ್ಲಿ ಚೆನ್ನಾಗಿ ಪ್ರತಿಬಿಂಬಿತವಾಗಿದೆ. ಮೊದಲನೆಯ ಹರಿಹರ ಮತ್ತು ಬುಕ್ಕರ ಕಾಲ ಎಲ್ಲ ದೃಷ್ಟಿಗಳಿಂದಲೂ ಪ್ರಯೋಗದ ಕಾಲ. ಯಾವ ಧಾರ್ಮಿಕ ಭಾವನೆಗಳೂ ದೃಢವಾಗದೇ ಇದ್ದ ಕಾಲ. ಆದರೆ ಇಮ್ಮಡಿ ಹರಿಹರನು ತನ್ನ ಸ್ಥಾನವನ್ನು ಬಲಪಡಿಸಿಕೊಂಡ ನಂತರ ಪುರುಷ ಮತ್ತು ಸ್ತ್ರೀ ದೇವತೆಗಳನ್ನು ಒಟ್ಟಿಗೆ ನಾಣ್ಯಗಳ ಮೇಲೆ ಅಚ್ಚು ಹಾಕಿಸಲು ಆರಂಭಿಸಿದನು. ವಿಜಯನಗರ ಕಾಲ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ ಸಿದ್ಧಾಂತಗಳ ಸಂಗಮ ಕಾಲ. ಆದುದರಿಂದ ಇವುಗಳನ್ನು ಪ್ರತಿಬಿಂಬಿಸುವಂತೆ ನಂದಿ, ಗರುಡ ಮತ್ತು ಹನುಮಂತನ ಚಿತ್ರಗಳನ್ನು ನಾಣ್ಯಗಳ ಮೇಲೆ ಅಚ್ಚು ಹಾಕಿಸಲು ಆರಂಭಿಸಲಾಯಿತು.

ಇನ್ನೊಂದು ಮುಖ್ಯ ಅಂಶವೆಂದರೆ ಶ್ರೀರಾಮ-ಸೀತೆಯರನ್ನು ನಾಣ್ಯಗಳ ಮೇಲೆ ಅಚ್ಚು ಮಾಡಿಸಲು ಆರಂಭಿಸಿದ್ದು. ವಿಜಯನಗರ ಪೂರ್ವ ಕಾಲದಲ್ಲಿ ಈ ದೇವತೆಗಳಿಗೋಸ್ಕರ ಪ್ರತ್ಯೇಕವಾಗಿ ಕಟ್ಟಲಾದ ದೇವಾಲಯಗಳು ಕಂಡುಬರದೇ ಇದ್ದರೂ, ರಾಮಾಯಣದ ಶಿಲ್ಪಗಳು ನೂರಾರು ದೊರಕಿವೆ. ವಿಜಯನಗರ ಕಾಲದಲ್ಲಿ ಶ್ರೀರಾಮ - ಸೀತೆಯರನ್ನು ಪ್ರತ್ಯೇಕವಾಗಿ ಪೂಜಿಸುವ ಪ್ರವೃತ್ತಿಯಿಂದಾಗಿ, ಈ ದೇವತೆಗಳಿಗಿದ್ದ ಪ್ರಾಮುಖ್ಯ ವ್ಯಕ್ತವಾಗುತ್ತದೆ. ರಾಮಟಂಕ ನಾಣ್ಯಗಳ ಬೆಳವಣಿಗೆಗೆ ಇದು ಅನುಕೂಲವೂ ಆಯಿತು. ಹಂಪೆಯಿಂದ ಪೆನುಗೊಂಡೆಗೆ ರಾಜಧಾನಿಯನ್ನು ಬದಲಾಯಿಸಿದ ನಂತರ ಈ ಪ್ರವೃತ್ತಿಗೆ ಹೆಚ್ಚು ಮನ್ನಣೆ ಸಿಕ್ಕಿದಂತೆ ತೋರುತ್ತದೆ. ಆದುದರಿಂದ ಆರವೀಡು ಮನೆತನದವರ ನಾಣ್ಯಗಳ ಮೇಲೆ ಶ್ರೀರಾಮ- ಸೀತೆಯರ ಚಿತ್ರಗಳನ್ನು ಅಚ್ಚು ಹಾಕಿಸುವ ಪದ್ಧತಿ ಬೆಳೆದುಬಂದಿತು.

ಈ ಕಾಲದ ಧಾರ್ಮಿಕ ಜೀವನದಲ್ಲಿ ತಿರುಪತಿಯ ವೆಂಕಟೇಶ್ವರನ ಪ್ರಭಾವ ನಾಣ್ಯಗಳ ಮೂಲಕ ಚೆನ್ನಾಗಿ ಕಂಡುಬರುತ್ತದೆ. ಕೃಷ್ಣದೇವರಾಯನು ವೆಂಕಟೇಶ್ವರನ ದರ್ಶನಮಾಡಿ ವಿಶಿಷ್ಟವಾದ ಚಿನ್ನದ ನಾಣ್ಯಗಳನ್ನು ಟಂಕಿಸಿದನು. ನಾಣ್ಯಗಳ ಮೇಲೆ ವೆಂಕಟೇಶ್ವರನ ಚಿತ್ರವಿದ್ದು, ಇದರ ತೂಕ ಸಾಮಾನ್ಯ ಗದ್ಯಾಣಕ್ಕಿಂತ ಎರಡರಷ್ಟು ಎಂಬುದನ್ನು ಗಮನಿಸಬೇಕು. ಈ ಪರಂಪರೆಯನ್ನು ಅನಂತರ ಕಾಲದ ದೊರೆಗಳಾದ ಶ್ರೀರಂಗರಾಯ, ವೆಂಕಟಪತಿರಾಯ ಮುಂದುವರಿಸಿಕೊಂಡು ಹೋದರು. ಅಂದರೆ ಇದುವರೆಗೆ ನಾಣ್ಯದ ಇತಿಹಾಸದಲ್ಲಿ ಕಾಣಬರದೇ ಇದ್ದ ಒಂದು ಹೊಸ ಧಾರ್ಮಿಕ ಪ್ರವೃತ್ತಿ ಈ ಕಾಲದಲ್ಲಿ ಪ್ರಾರಂಭವಾಯಿತು. ಇವೆಲ್ಲವನ್ನೂ ಗಮನಿಸಿದರೆ, ವಿಜಯನಗರ ನಾಣ್ಯಗಳು ಎಷ್ಟರಮಟ್ಟಿಗೆ ಧಾರ್ಮಿಕ ಒಲವನ್ನು ಹೊಂದಿದ್ದವು ಎಂಬುದು ಸುಲಭವಾಗಿ ಅರ್ಥವಾಗುತ್ತದೆ.

ವಿಜಯನಗರ ನಾಣ್ಯಗಳ ಹಿಮ್ಮುಖ ಬರಹಗಳಿಗೆ ಮೀಸಲು. ಈ ಬರಹಗಳು ಕನ್ನಡ, ನಾಗರೀ ಮತ್ತು ತೆಲುಗು ಲಿಪಿಗಳಲ್ಲಿವೆ. ವಿಜಯನಗರದ ಸ್ಥಾಪಕರಾದ ಮೊದಲನೆಯ ಹರಿಹರ ಮತ್ತು ಬುಕ್ಕರ ನಾಣ್ಯಗಳ ಮೇಲೆ ಕನ್ನಡ ಮತ್ತು ನಾಗರೀ ಲಿಪಿಯ ಬರಹಗಳಿರುವುದು ಗಮನಾರ್ಹ. ಇದರಿಂದ ಈ ಸ್ಥಾಪಕರಿಗೆ ಕನ್ನಡದ ಬಗ್ಗೆ ಇದ್ದ ಆಸಕ್ತಿ ವ್ಯಕ್ತವಾಗುತ್ತದೆ. ಈ ವಂಶದ ಕೊನೆಯ ಅರಸುಗಳಲ್ಲಿ ಕೆಲವರು ಮಾತ್ರ ತೆಲುಗು ಲಿಪಿಯನ್ನು ಬಳಸಿದರು. ಮಿಕ್ಕೆಲ್ಲ ದೊರೆಗಳೂ ಕನ್ನಡ ಮತ್ತು ನಾಗರೀ ಬರಹಗಳನ್ನೇ ಬಳಸಿದರು. ಈ ಬರಹಗಳಲ್ಲಿ ರಾಜನ ಹೆಸರು ಹಾಗೂ ಬಿರುದು ಕಾಣಬರುತ್ತವೆ. ಮೊದಲನೆಯ ಇಬ್ಬರು ದೊರೆಗಳು 'ವೀರ' ಎನ್ನುವ ಬಿರುದನ್ನು ಬಳಸಿದರೆ, ಆನಂತರದ ದೊರೆಗಳು 'ಪ್ರತಾಪ' ಎನ್ನುವ ಬಿರುದನ್ನು ಬಳಸಿದರು. ಇಮ್ಮಡಿ ದೇವರಾಯನು ಗಜಬೇಂಟೆಕಾರ, ಗಜಗಂಡಭೇರುಂಡ ಎಂಬ ಬಿರುದುಗಳನ್ನು ನಾಣ್ಯಗಳ ಮೇಲೆ ಅಚ್ಚು ಹಾಕಿಸಿದನು. ಕೆಲವು ರಾಜರು 'ಶ್ರೀ ವೆಂಕಟೇಶ್ವರಾಯ ನಮಃ' ಎನ್ನುವ ಬರಹವನ್ನು ಹಾಕಿಸಿದರು. ಸಾಮಾನ್ಯವಾಗಿ ಈ ಬರಹಗಳು ಎರಡು ಅಥವಾ ಮೂರು ಸಾಲುಗಳಲ್ಲಿರುತ್ತವೆ. ಕೆಲವು ಸಾರಿ ಬರಹಗಳ ಮಧ್ಯೆ ಸರಳ ರೇಖೆಗಳಿರುತ್ತವೆ. ವಿಜಯನಗರದ ಯಾವ ಯಾವ ರಾಜರು ಯಾವ ಲಿಪಿಯ ಬರಹಗಳನ್ನು ನಾಣ್ಯಗಳಲ್ಲಿ ಬಳಸಿದರು ಎನ್ನುವುದು ಈ ಕೆಳಗಿನ ಪಟ್ಟಿಯಿಂದ ತಿಳಿದುಬರುತ್ತದೆ.

ಒಂದನೆಯ ಹರಿಹರ	ಕನ್ನಡ	ನಾಗರೀ	-
ಒಂದನೆಯ ಬುಕ್ಕ	ಕನ್ನಡ	ನಾಗರೀ	-
ಇಮ್ಮಡಿ ಹರಿಹರ	-	ನಾಗರೀ	-
ಇಮ್ಮಡಿ ಬುಕ್ಕ	-	ನಾಗರೀ	-
ಒಂದನೆಯ ದೇವರಾಯ	ಕನ್ನಡ	ನಾಗರೀ	-
ಇಮ್ಮಡಿ ದೇವರಾಯ	ಕನ್ನಡ	ನಾಗರೀ	-
ವಿಜಯರಾಯ	ಕನ್ನಡ	-	-
ಮಲ್ಲಿಕಾರ್ಜುನ	ಕನ್ನಡ	-	-
ಕೃಷ್ಣದೇವರಾಯ	ಕನ್ನಡ	ನಾಗರೀ	-
ಅಚ್ಯುತರಾಯ	-	ನಾಗರೀ	-
ಸದಾಶಿವರಾಯ	-	ನಾಗರೀ	-
ತಿರುಮಲರಾಯ	ಕನ್ನಡ	ನಾಗರೀ	-

ಒಂದನೆಯ ಶ್ರೀರಂಗರಾಯ	-	ನಾಗರೀ	-
ಒಂದನೆಯ ವೆಂಕಟಪತಿರಾಯ	ಕನ್ನಡ	ನಾಗರೀ	-
ಎರಡನೆಯ ಶ್ರೀರಂಗರಾಯ	-	-	ತೆಲುಗು
ಎರಡನೆಯ ವೆಂಕಟಪತಿರಾಯ	-	-	ತೆಲುಗು
ಮೂರನೆಯ ಶ್ರೀರಂಗರಾಯ	-	ನಾಗರೀ	-

ಈ ಬರಹಗಳು ಯಾವ ಲಿಪಿಯಲ್ಲೇ ಇರಲಿ ಸಾಮಾನ್ಯವಾಗಿ ತಪ್ಪಿಲ್ಲದೆ ಸುಂದರವಾಗಿ ಇರುತ್ತವೆ. ಅದರಲ್ಲಿಯೂ ಮೊದಲನೆಯ ಹರಿಹರ ಮತ್ತು ಬುಕ್ಕರ ನಾಣ್ಯಗಳ ಕನ್ನಡ ಲಿಪಿ ಹೊಯ್ಸಳ ಕಾಲದ ಸುಂದರ ಲಿಪಿಯನ್ನು ಹೋಲುತ್ತಿದ್ದು, ಕಲಾತ್ಮಕವಾಗಿ ಕಾಣಬರುತ್ತದೆ.

ತಾಂತ್ರಿಕ ದೃಷ್ಟಿಯಿಂದ ವಿಜಯನಗರ ನಾಣ್ಯಗಳು, ಅವರ ಹಿಂದಿನವರ ನಾಣ್ಯಗಳಿಗಿಂತ ಉತ್ತಮವಾಗಿವೆ. ಚೆನ್ನಾಗಿರುವ ಅಚ್ಚುಗಳನ್ನು ಅಂದರೆ ಆಳವಿರುವ ಅಕ್ಷರ ಮತ್ತು ದೇವತೆಗಳ ಚಿತ್ರಗಳನ್ನು ಅವು ಹೊಂದಿದ್ದರಿಂದ, ವಿನ್ಯಾಸಗಳು ಸ್ಫುಟವಾಗಿ ಮೂಡಿ ಬಂದು ನಾಣ್ಯವನ್ನು ಸುಂದರವನ್ನಾಗಿಸಲು ಸಹಾಯಕವಾಗುತ್ತವೆ. ದೇವತೆಗಳ ಚಿತ್ರಗಳನ್ನು ಗಮನಿಸಿದರೆ, ಅವರು ಹಿಡಿದಿರುವ ಆಯುಧಗಳು, ಅಲಂಕಾರ ಮುಂತಾದ ಸೂಕ್ಷ್ಮ ವಸ್ತುಗಳು ಕೂಡ ಸ್ಫುಟವಾಗಿ ನಾಣ್ಯಗಳ ಮೇಲೆ ಮೂಡಿರುವುದು ನಮ್ಮ ಗಮನ ಸೆಳೆಯುತ್ತದೆ. ಅನೇಕ ಸಾರಿ ತಾಮ್ರದ ನಾಣ್ಯಗಳಿಗೆ ಈ ಮಾತು ಅನ್ವಯಿಸುವುದಿಲ್ಲ. ಒಟ್ಟಿನಲ್ಲಿ ಅನೇಕ ದೃಷ್ಟಿಗಳಿಂದ ವಿಜಯನಗರ ನಾಣ್ಯಗಳು ಗಮನಾರ್ಹವಾದವು.

ವಿಜಯನಗರ ಶಾಸನಗಳು ಅವರ ನಾಣ್ಯ ಪದ್ಧತಿಯ ಮೇಲೆ ಉತ್ತಮವಾದ ಮಾಹಿತಿಯನ್ನು ಒದಗಿಸುತ್ತವೆ. ನಾಣ್ಯಗಳ ಹೆಸರುಗಳು ಹಾಗೂ ಅವುಗಳ ಪರಸ್ಪರ ಸಂಬಂಧ ತಿಳಿದಿರುವುದು ಶಾಸನಗಳಿಂದ ಎನ್ನುವುದು ಮಾತ್ರವಲ್ಲದೆ, ಪ್ರತಿಯೊಂದು ನಾಣ್ಯದ ಪ್ರಭೇದಗಳು ಅವುಗಳ ವಿಷಯದಲ್ಲಿ ಹೆಚ್ಚಿನ ಮಾಹಿತಿಗಳು ಶಾಸನಗಳಿಂದ ದೊರೆಯುತ್ತವೆ ಎನ್ನುವುದು ಪ್ರಮುಖ ಅಂಶ. ಈ ಶಾಸನಗಳಲ್ಲಿ ವಿವಿಧ ರೀತಿಯ ನಾಣ್ಯಗಳ ವರ್ಣನೆಯೂ ಕಾಣಬರುತ್ತದೆ. ಈಗ ನಾಣ್ಯಗಳ ಪ್ರಭೇದಗಳನ್ನು ಶಾಸನಗಳು ತೋರಿಸಿರುವಂತೆ ಗಮನಿಸಬಹುದು. ಮೊದಲು ವರಹ ಎಂಬ ನಾಣ್ಯವನ್ನು ತೆಗೆದುಕೊಳ್ಳಬಹುದು.

ದೊಡ್ಡ ಗದ್ಯಾಣ ಮತ್ತು ಚಿಕ್ಕ ಗದ್ಯಾಣ ಎಂಬ ಪದಗಳು ಶಾಸನಗಳಲ್ಲಿ ದೊರಕುತ್ತವೆ. ಇದರಲ್ಲಿ ದೊಡ್ಡ ಮತ್ತು ಚಿಕ್ಕ ಎಂಬ ಪದಗಳು ತೂಕವನ್ನು ಕುರಿತಾದದ್ದೇ ಅಥವಾ ಗಾತ್ರವನ್ನು ಕುರಿತಾದದ್ದೇ ಎಂಬುದನ್ನು ಹೇಳುವುದು ಕಷ್ಟ. ವಿಜಯನಗರ ವರಹಗಳು

ಸಾಮಾನ್ಯವಾಗಿ 52 ಗ್ರೇನ್ ತೂಗುತ್ತವೆ. ಆದರೆ ಕೃಷ್ಣ ದೇವರಾಯನು ಟಂಕಿಸಿದ ತಿರುಪತಿ ವೆಂಕಟೇಶ್ವರನ ಚಿತ್ರವಿರುವ ನಾಣ್ಯಗಳು ಮಾತ್ರ 120 ಗ್ರೇನ್ ತೂಕದವು. ಆದುದರಿಂದ ಇದು ದೊಡ್ಡ ಗದ್ಯಾಣ. ಈ ವೆಂಕಟೇಶ್ವರ ಚಿತ್ರವಿರುವ ನಾಣ್ಯಗಳು ಗಾತ್ರದಲ್ಲಿಯೂ ದೊಡ್ಡವು. ಆದುದರಿಂದ ಗಾತ್ರ ಮತ್ತು ತೂಕ ಎರಡರಲ್ಲಿಯೂ ಈ ನಾಣ್ಯಗಳು ದೊಡ್ಡವು. ಈ ಭಿನ್ನತೆಯನ್ನು ತೋರ್ಪಡಿಸಲು ದೊಡ್ಡ ಗದ್ಯಾಣ ಅಥವಾ ದೊಡ್ಡ ವರಹ ಮತ್ತು ಚಿಕ್ಕ ಗದ್ಯಾಣ ಅಥವಾ ಚಿಕ್ಕ ವರಹ ಎನ್ನುವ ಪದಗಳನ್ನು ಸಮಕಾಲೀನ ಶಾಸನಗಳು ಬಳಸುತ್ತಿದ್ದವು ಎಂದು ಗೊತ್ತಾಗುತ್ತದೆ. ಅಂದರೆ ದೊಡ್ಡ ಗದ್ಯಾಣದ ತೂಕ 120 ಗ್ರೇನ್ ಮತ್ತು ಅಗಲ 0.7"; ಚಿಕ್ಕ ಗದ್ಯಾಣದ ತೂಕ 52 ಗ್ರೇನ್ ಹಾಗೂ ಅಗಲ 0.6".

ನಾಣ್ಯಗಳನ್ನು ಟಂಕಶಾಲೆಯ ಹೆಸರಿನಿಂದ ಗುರುತಿಸುವುದು ವಿಜಯನಗರ ಕಾಲದಲ್ಲಿಯೂ ಮುಂದುವರಿಯಿತು ಎಂಬುದಕ್ಕೆ ಶಾಸನಗಳು ಉದಾಹರಣೆಗಳನ್ನು ಒದಗಿಸುತ್ತವೆ. ಶಾಸನಗಳಲ್ಲಿ ಮಂಗಳೂರು ಗದ್ಯಾಣ, ಬಾರಕೂರು ಗದ್ಯಾಣ, ಗುತ್ತಿ ಹೊನ್ನು, ತಿರುಪತಿ ಹೊನ್ನು, ಆದೋಣಿ ಹಣ, ತಾಡಪತ್ರಿ ಹಣ, ನೆಲ್ಲೂರು ಗದ್ಯಾಣ, ಮದುರೆ ವರಹಗಳು ಉಲ್ಲೇಖಿತವಾಗಿದೆ. ಅಂದರೆ ಇವು ಆಯಾ ಊರಿನಲ್ಲಿದ್ದ ಟಂಕಶಾಲೆಯಲ್ಲಿ ಅಚ್ಚಾದ ನಾಣ್ಯಗಳು. ಇದರಿಂದ ಈ ಊರುಗಳಲ್ಲಿ ಟಂಕಶಾಲೆ ಗಳಿದ್ದುದೂ ತಿಳಿದುಬರುತ್ತದೆ.

ನಾಣ್ಯಗಳ ಮೇಲಿರುವ ಚಿಹ್ನೆಗಳಿಂದ ನಾಣ್ಯಗಳನ್ನು ಹೆಸರಿಸುವ ಪದ್ಧತಿಯೂ ಪ್ರಚಲಿತವಾಗಿದ್ದಿತು. ಚಕ್ರ ಗದ್ಯಾಣ ಎಂದರೆ ಚಕ್ರದ ಚಿಹ್ನೆಯಿರುವ ಗದ್ಯಾಣ. ತಿರುಮಲರಾಯನ ನಾಣ್ಯಗಳಲ್ಲಿ ಶಂಖದ ಜೊತೆಗೆ ಚಕ್ರದ ಚಿಹ್ನೆಯಿದೆ. ಇದು ತಾಮ್ರದ ನಾಣ್ಯ. ಕೇವಲ ಚಕ್ರದ ಚಿಹ್ನೆಯೇ ಇರುವ ಚಿನ್ನದ ಗದ್ಯಾಣ ಇನ್ನೂ ದೊರಕಿಲ್ಲ. ಕಠಾರಿ ಅಂಕುಶ ಗದ್ಯಾಣದ ಉಲ್ಲೇಖ ಇಮ್ಮಡಿ ಹರಿಹರನ ಪುತ್ತಿಗೆ ಶಾಸನದಲ್ಲಿ ಕಾಣ ಸಿಗುತ್ತದೆ. ಆದರೆ ಇದುವರೆಗೆ ಯಾವ ಗದ್ಯಾಣದಲ್ಲಿಯೂ ಈ ಎರಡೂ ಚಿಹ್ನೆಗಳೂ ಒಟ್ಟಿಗೆ ಕಂಡುಬಂದಿಲ್ಲ. ಕೇವಲ ಕಠಾರಿ ಇರುವ ಇಲ್ಲವೇ ಅಂಕುಶ ಇರುವ ನಾಣ್ಯಗಳು ದೊರಕಿವೆ. ಮಾನೌಮೀ ಚೌಪದವು ಬೆಣ್ಣೆಮುದ್ದೆ ನಾಣ್ಯ ಮತ್ತು ತಿರುಪತಿಯ ಹಣವನ್ನು ಉಲ್ಲೇಖಿಸುತ್ತದೆ. ಕೃಷ್ಣದೇವರಾಯನು ಒರಿಸ್ಸ ರಾಜ್ಯದ ಮೇಲಿನ ವಿಜಯದ ಜ್ಞಾಪಕಾರ್ಥವಾಗಿ, ಕೃಷ್ಣನ ವಿಗ್ರಹವನ್ನು ಅಲ್ಲಿಂದ ತಂದು ಹಂಪೆಯಲ್ಲಿ ಕೃಷ್ಣಸ್ವಾಮಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿದನು. ಈ ಸಂದರ್ಭದಲ್ಲಿ ಬಾಲಕೃಷ್ಣ ಚಿತ್ರವಿರುವ 62, 26 ಮತ್ತು 12 ಗ್ರೇನ್ ತೂಕದ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಇವುಗಳ ಮೇಲೆ ಬೆಣ್ಣೆಮುದ್ದೆಯನ್ನು ಹಿಡಿದಿರುವ ಕೃಷ್ಣನ ಚಿತ್ರವಿದೆ. ಇದೊಂದು ಆಕರ್ಷಕವಾದ ನಾಣ್ಯವಾದುದರಿಂದ ಸಮಕಾಲೀನರು ಇದನ್ನು ಬೆಣ್ಣೆಮುದ್ದೆ ನಾಣ್ಯ ಎಂದು ಕರೆಯಲು ಆರಂಭಿಸಿದರು. ಇದೇ ರೀತಿಯಲ್ಲಿ ತಿರುಪತಿಯ ವೆಂಕಟೇಶ್ವರನ ಚಿತ್ರವಿರುವ ನಾಣ್ಯಗಳನ್ನು ತಿರುಪತಿಯ ಹಣ ಎಂದು ವರ್ಣಿಸಲು ಆರಂಭಿಸಿದರು.

ಪಾಟಿ ಗದ್ಯಾಣ ಎಂದರೆ ಹಳೆಯ ಗದ್ಯಾಣ ಎಂದರ್ಥ. ಬುಕ್ಕರಾಯನ ನಾಣ್ಯಗಳು ಸದಾಶಿವರಾಯನ ಕಾಲದಲ್ಲಿ ಹಳೆಯ ಗದ್ಯಾಣಗಳಾಗುತ್ತವೆ. ಅವು ಚಿನ್ನದ ನಾಣ್ಯಗಳಾದುದರಿಂದ ಅವುಗಳನ್ನು ಎಸೆಯುವಂತೆಯೂ ಇಲ್ಲ. ಅವುಗಳಿಗೂ ಒಂದು ಮೌಲ್ಯವಿರುತ್ತದೆ. ಅಂದರೆ ಹಿಂದಿನ ರಾಜರ ನಾಣ್ಯಗಳನ್ನು ಪಾಟಿ ಗದ್ಯಾಣವೆಂದು ಕರೆಯುತ್ತಿದ್ದರು. ಕನ್ನಡ ಶಾಸನಗಳಲ್ಲಿ ಪಳಂಗಾಸು ಎನ್ನುವ ಪದ ಕಾಣಸಿಗುತ್ತದೆ. ಇದು ಸಾಹಿತ್ಯ ಗ್ರಂಥಗಳಲ್ಲಿಯೂ ಕಾಣಬರುತ್ತದೆ. ಅಂದರೆ ಹಿಂದಿನ ರಾಜರ ನಾಣ್ಯಗಳು ಚಲಾವಣೆಯಲ್ಲಿರುತ್ತಿದ್ದವು. ಅದನ್ನು ಸೂಚಿಸುವುದಕ್ಕೋಸ್ಕರ ಅವುಗಳನ್ನು ಪಾಟಿ ಗದ್ಯಾಣವೆಂದು ಕರೆಯುತ್ತಿದ್ದರು. ಪ್ರಚಲಿತ ನಾಣ್ಯಗಳಿಗೂ ಈ ಹಳೆಯ ನಾಣ್ಯಗಳಿಗೂ, ಮೌಲ್ಯದಲ್ಲಿ ವ್ಯತ್ಯಾಸವಿದ್ದಿತೇ ಎಂಬುದು ತಿಳಿದಿಲ್ಲ. ಬಹುಶಃ ಇದ್ದಿರಲಾರದು. ಏಕೆಂದರೆ ಮೌಲ್ಯ ಚಿನ್ನಕ್ಕೆ. ಆ ನಾಣ್ಯಗಳನ್ನು ಕರಗಿಸಿ ಹೊಸ ನಾಣ್ಯಗಳನ್ನು ತಯಾರಿಸುವವರೆಗೆ ಪಾಟಿ ನಾಣ್ಯಗಳು ಚಲಾವಣೆಯಲ್ಲಿರುತ್ತಿದ್ದವು ಎಂದು ಭಾವಿಸಬಹುದು.

ಪೊನ್ ಗದ್ಯಾಣ ಮತ್ತು ಪ್ರತಾಪ ಗದ್ಯಾಣ ಎಂಬ ಪದಗಳು ಶಾಸನಗಳಲ್ಲಿ ಕಾಣ ಸಿಗುತ್ತವೆ. ಇಲ್ಲಿ ಪೊನ್ ಎನ್ನುವ ಪದವನ್ನು ಚಿನ್ನ ಎಂಬ ಅರ್ಥದಲ್ಲಿ ಬಳಸಿದ್ದರೆ, ಈ ನಾಣ್ಯ ಚಿನ್ನದ ಗದ್ಯಾಣ ಎಂದು ಖಚಿತಪಡಿಸುವುದಕ್ಕಾಗಿ ಈ ಪದ ಬಳಸಿರಬೇಕು. ಪ್ರತಾಪ ಎನ್ನುವ ಬರಹವಿರುವ ಗದ್ಯಾಣವೇ ಪ್ರತಾಪ ಗದ್ಯಾಣ. ಇದು ಅರ್ಧ ಗದ್ಯಾಣದ ಮೌಲ್ಯದ ನಾಣ್ಯ. ಅದರಂತೆಯೇ ಅರ್ಧಕಾಟಿ ಗದ್ಯಾಣವೆಂದರೆ ಗದ್ಯಾಣದ ಎಂಟನೆಯ ಒಂದು ಭಾಗದ ನಾಣ್ಯ ಎಂದು ಭಾವಿಸಬೇಕು. ಇದು ಚಿನ್ನಮು ಎಂಬ ನಾಣ್ಯದ ಮೌಲ್ಯಕ್ಕೆ ಸಮನಾಗುತ್ತದೆ. ಇದರ ತೂಕ 6.5 ಗ್ರೇನ್. ಕುಳಗದ್ಯಾಣ, ಹಿಟ್ಟುವಳಿ ಗದ್ಯಾಣ, ಸಮುದಾಯ ಗದ್ಯಾಣ ಮುಂತಾದ ಪದಗಳು ತೆರಿಗೆಯನ್ನು ಸೂಚಿಸುವ ಪದಗಳು. ಅಂದರೆ ತೆರಿಗೆಯ ಜೊತೆಯಲ್ಲಿ ನಾಣ್ಯದ ಹೆಸರನ್ನು ಸೇರಿಸಿ ಉಲ್ಲೇಖಿಸುವ ವಿಧಾನವಿದು. ಅಂದರೆ ಈ ತೆರಿಗೆಗಳನ್ನು ಗದ್ಯಾಣ ನಾಣ್ಯಗಳಲ್ಲಿ ಕೊಡಬೇಕಾಗಿದ್ದಿತು ಎಂಬುದನ್ನು ಈ ಪದಗಳು ಸೂಚಿಸುತ್ತವೆ.

ತುಳುನಾಡಿನ ಸಮಕಾಲೀನ ಶಾಸನದಲ್ಲಿ ಬಾಹಿರ ಗದ್ಯಾಣವೆಂಬ ನಾಣ್ಯದ ಉಲ್ಲೇಖ ಕಂಡುಬರುತ್ತದೆ. ತುಳುನಾಡಿನ ಹೊರಗಡೆ ಟಂಕಶಾಲೆಯಲ್ಲಿ ಅಚ್ಚಾದ ವಿಜಯನಗರ ನಾಣ್ಯವಿದೆಂದು ತಿಳಿಯಬಹುದು. ರೇಖ ಗದ್ಯಾಣ ಎನ್ನುವ ಪದದ ಅರ್ಥ ಸರಿಯಾಗಿ ತಿಳಿದಿಲ್ಲ. ತಮಿಳಿನಲ್ಲಿ ರೇಖೈ ಪೊನ್ ಎಂಬ ನಾಣ್ಯದ ಉಲ್ಲೇಖ ಕಾಣಬರುತ್ತದೆ. ಇವಿಷ್ಟೂ ಗದ್ಯಾಣ ನಾಣ್ಯದ ಪ್ರಭೇದಗಳು.

ಇದೇ ರೀತಿಯಲ್ಲಿ ಶಾಸನಗಳು ವರಹ ನಾಣ್ಯದ ವಿವಿಧ ರೂಪಗಳನ್ನು ಉಲ್ಲೇಖಿಸುತ್ತವೆ. ಮೊದಲಿಗೆ ದೊಡ್ಡ ವರಹ, ಘಟ್ಟಿ ವರಹ ಮತ್ತು ಶುದ್ಧ ವರಹ ಎಂಬ ಪದಗಳನ್ನು ಗಮನಿಸಬಹುದು ದೊಡ್ಡ ಗದ್ಯಾಣದಂತೆ ದೊಡ್ಡ ವರಹವು 120

ಗ್ರೇನಿನ ಚಿನ್ನದ ನಾಣ್ಯ. ಘಟ್ಟಿ ವರಹ, ನಿಜಘಟ್ಟಿ ವರಹ, ಎನ್ನುವ ಪದಗಳು ವಿಜಯನಗರ ಶಾಸನಗಳಲ್ಲಿ ಕಾಣಸಿಗುತ್ತವೆ. ಇದರ ಸರಿಯಾದ ಅರ್ಥವು ತಿಳಿದಿಲ್ಲದೇ ಇದ್ದರೂ, ಒಂದು ಊಹೆಯನ್ನು ಮಾಡಬಹುದು. ನಾಲ್ಕು ಕಾಲು ವರಹಗಳ ನಾಣ್ಯಗಳ ಮೊತ್ತವು ಒಂದು ವರಹವಾಗುತ್ತದೆ. ಅಂದರೆ ಅದು ಚಿಲ್ಲರೆಯಿಂದಾಗಿ ವರಹದ ಮೌಲ್ಯವಾಗುತ್ತದೆ. ಘಟ್ಟಿ ವರಹವೆಂದರೆ ಒಂದು ವರಹದ ನಾಣ್ಯವೇ ಹೊರತು, ಅದರ ಚಿಲ್ಲರೆ ರೂಪವಲ್ಲ ಎಂಬುದನ್ನು ತೋರಿಸುವುದಕ್ಕಾಗಿ ಈ ಪದವನ್ನು ಬಳಸಿರಬೇಕು. ಅಂದರೆ ಅದು ಇಡೀ ವರಹ ನಾಣ್ಯ ಎಂಬುದೇ ಉದ್ದೇಶ. ಶುದ್ಧ ವರಹ ಎಂಬುದು ಹೆಸರೇ ಸೂಚಿಸುವಂತೆ, ಬೆರಕೆಯಿಲ್ಲದ ಅಪ್ಪಟ ಚಿನ್ನದ ನಾಣ್ಯ. ವಿಜಯನಗರದ ಚಿನ್ನದ ನಾಣ್ಯಗಳಲ್ಲಿ ಶುದ್ಧತೆ ಎಷ್ಟಿದೆ ಎಂಬುದನ್ನು ವೈಜ್ಞಾನಿಕ ರೀತಿಯಿಂದ ಪರೀಕ್ಷೆ ಮಾಡಿಲ್ಲವಾದುದರಿಂದ, ಈ ವಿಷಯದಲ್ಲಿ ಖಚಿತವಾದ ಮಾಹಿತಿಯನ್ನು ಒದಗಿಸುವುದು ಕಷ್ಟ. ಆದರೆ ಶಾಸನಗಳ ಮಾಹಿತಿ ಹಾಗೂ ವಿದೇಶೀ ಯಾತ್ರಿಕರ ಬರವಣಿಗೆಗಳನ್ನು ಗಮನಿಸಿದರೆ, ವಿಜಯನಗರದ ಚಿನ್ನದ ನಾಣ್ಯಗಳು ಶೇಕಡ 80, 85 ಮತ್ತು 90 ರಷ್ಟು ಶುದ್ಧವಾಗಿದ್ದವೆಂದು ತಿಳಿಯಬರುತ್ತದೆ. ಆದುದರಿಂದ ಶುದ್ಧ ವರಹವೆಂಬುದು ಹೆಚ್ಚಿನ ಮಟ್ಟದಲ್ಲಿ ಚಿನ್ನವನ್ನು ಹೊಂದಿದ್ದ ನಾಣ್ಯವೆಂದು ಭಾವಿಸಬೇಕಾಗುತ್ತದೆ. ಚಕ್ರವರಹ ಎಂಬುದು ಚಕ್ರದ ಚಿಹ್ನೆ ಇರುವ ವರಹವೆಂದು ತಿಳಿಯಬೇಕು. ಆದರೆ ಈ ರೀತಿಯ ವರಹ ದೊರಕಿಲ್ಲ. ವೆಂಕಟರಾಯಿ ವರಹ ಎನ್ನುವುದು ವೆಂಕಟಪತಿರಾಯನು ಅಚ್ಚು ಹಾಕಿಸಿದ ನಾಣ್ಯವಿರಬಹುದು ಅಥವಾ ವೆಂಕಟೇಶ್ವರನ ಚಿತ್ರವಿರುವ ನಾಣ್ಯವಾದರೂ ಆಗಬಹುದು. ಹನುಮಂತರಾಯಿ ವರಹವೆಂದರೆ ಹನುಮಂತನ ಚಿತ್ರವಿರುವ ನಾಣ್ಯ. ಮೊದಲನೆಯ ಹರಿಹರ, ಮೊದಲನೆಯ ಬುಕ್ಕರಾಯ ಮತ್ತು ಮೊದಲನೆಯ ವೆಂಕಟಪತಿರಾಯರ ನಾಣ್ಯಗಳ ಮೇಲೆ ಹನುಮಂತನ ಚಿತ್ರವಿದೆ. ಆದುದರಿಂದ ಈ ನಾಣ್ಯಗಳಿಗೆ ಹನುಮಂತರಾಯಿ ವರಹ ಎನ್ನುವ ಹೆಸರು ಬಂದಿರಬೇಕು. ಗಂಡಿಕೋಟೆ ವರಹ ಎನ್ನುವುದು ಗಂಡಿಕೋಟೆಯಲ್ಲಿದ್ದ ಟಂಕಶಾಲೆಯಲ್ಲಿ ಅಚ್ಚಾದ ನಾಣ್ಯ.

ಸಣ್ಣ ಪ್ರತಾಪ ಎನ್ನುವ ನಾಣ್ಯದ ಪ್ರಸ್ತಾಪ 1477ರ ಶಾಸನ ಒಂದರಲ್ಲಿ ಕಾಣಸಿಗುತ್ತದೆ. ಪ್ರತಾಪ ಎನ್ನುವುದು ಅರ್ಧ ವರಹ ಮೌಲ್ಯದ ನಾಣ್ಯವೆಂದು ಆಗಲೇ ಗಮನಿಸಲಾಗಿದೆ. ವರಹಕ್ಕೆ ಹೋಲಿಸಿದರೆ ಇದು ಗಾತ್ರ ಮತ್ತು ತೂಕಗಳಲ್ಲಿ ಇದು ಸಣ್ಣ ನಾಣ್ಯ. ಕಾಟಿ ಹೊನ್ನು ಎನ್ನುವ ನಾಣ್ಯ ಕೃಷ್ಣದೇವರಾಯನ ಶಾಸನದಲ್ಲಿ ಕಾಣಸಿಗುತ್ತದೆ. ಎರಡು ಹಳ್ಳಿಗಳ ಆದಾಯವನ್ನು 362 ಕಾಟಿ ಹೊನ್ನು ಎಂದು ಹೇಳಿದೆ. ಕಾಟಿ ಎಂದರೆ ಕಾಲುಭಾಗ ಎನ್ನುವ ಅರ್ಥವಿರುವುದರಿಂದ, ಈ ಮೊತ್ತ $37^1/_2$ ಹೊನ್ನುಗಳಾಗುತ್ತವೆ. ಆದರೆ ಪೂರ್ಣ ಹೊನ್ನುಗಳಲ್ಲಿ ಹೇಳದೆ, ಕಾಟಿ ಹೊನ್ನುಗಳ ಲೆಕ್ಕದಲ್ಲಿ ಇದನ್ನು ಹೇಳಿರುವುದು ಗಮನಿಸಬೇಕಾದ ಸಂಗತಿ. ಗುತ್ತಿ ಹೊನ್ನು, ಆದವಾನಿ ಹೊನ್ನು, ತಾಡಪತ್ರಿ ಹೊನ್ನುಗಳು ಅನುಕ್ರಮವಾಗಿ ಗುತ್ತಿ, ಆದವಾನಿ ಮತ್ತು ತಾಡಪತ್ರಿಗಳಲ್ಲಿದ್ದ ಟಂಕಶಾಲೆಗಳಲ್ಲಿ ಅಚ್ಚಾದ

ಹೊನ್ನುಗಳು ಎಂದು ಸುಲಭವಾಗಿ ನಿರ್ಧರಿಸಬಹುದು. ಮಾನೌಮೀಚೌಪದ ಎಂಬ ಗ್ರಂಥದಲ್ಲಿ ಗಜಬೇಂಟೆಕಾರ ಹೊನ್ನಿನ ಪ್ರಸ್ತಾಪವಿದೆ. ಇಮ್ಮಡಿ ದೇವರಾಯನ ನಾಣ್ಯಗಳ ಮೇಲೆ ಗಜಬೇಂಟೆಕಾರ ಎಂಬ ಬಿರುದು ಇರುವುದನ್ನು ಜ್ಞಾಪಿಸಿಕೊಂಡರೆ, ಈ ನಾಣ್ಯಗಳನ್ನು ಸಮಕಾಲೀನ ಜನರು, ಅವುಗಳ ಮೇಲಿರುವ ಬಿರುದಿನಿಂದ ಗುರುತಿಸುತ್ತಿದ್ದರು ಎಂದು ಹೇಳಬಹುದು.

ಸಾಮಾನ್ಯವಾಗಿ ಶಾಸನಗಳಲ್ಲಿ 'ವೀರರಾಯ ಪಣಂ' ಎಂಬ ನಾಣ್ಯದ ಉಲ್ಲೇಖ ಕಾಣಬರುತ್ತದೆ. ಆದರೆ ಈ ವೀರರಾಯ ಯಾರು ಎನ್ನುವ ವಿಷಯದಲ್ಲಿ ಖಚಿತತೆಯಿಲ್ಲ. ವಿಜಯನಗರದ ಮೊದಲನೆಯ ಹರಿಹರನೇ ಈ ವೀರರಾಯನಿರಬೇಕೆಂದು ಊಹಿಸಬಹುದು. ಏಕೆಂದರೆ ವಿಜಯನಗರ ಸಾಮ್ರಾಜ್ಯವನ್ನು ತನ್ನ ಶೌರ್ಯದಿಂದ ಸ್ಥಾಪಿಸಿ ತನ್ನ ನಾಣ್ಯಗಳ ಮೇಲೆ ವೀರ ಎನ್ನುವ ಬರಹವನ್ನು ಅಚ್ಚು ಮಾಡಿಸಿದನು. ಆದುದರಿಂದ ಇವನ ಶೌರ್ಯವನ್ನು ಮೆಚ್ಚಿದ ಸಮಕಾಲೀನ ಜನಗಳು ಇವನನ್ನು ವೀರರಾಯ ಎಂದು ಕರೆದಿರಬೇಕು. ಗುಳಿಕೆ ಪಣಂ, ರಾಶಿ ಪಣಂ, ಚಕ್ರ ಪಣಂ, ಆದೂರ ಪಣಂ ಎಂಬ ಪದಗಳು ಪುದುಕೋಟೆಯ ಶಾಸನಗಳಲ್ಲಿ ಕಾಣಸಿಗುತ್ತವೆ. ಆದರೆ ಅವುಗಳ ಅರ್ಥ ತಿಳಿದಿಲ್ಲ. ಮಾಡ ಎನ್ನುವುದು ತಮಿಳುನಾಡು ಮತ್ತು ಆಂಧ್ರಗಳಲ್ಲಿದ್ದ ಚಿನ್ನದ ನಾಣ್ಯವೆಂದು ಮೇಲೆ ಗಮನಿಸಲಾಗಿದೆ. ಇಮ್ಮಡಿ ಹರಿಹರನ ಶಾಸನ ಒಂದರಲ್ಲಿ ಹಾಗೂ ಇಮ್ಮಡಿ ದೇವರಾಯನ ಶಾಸನದಲ್ಲಿ ಸಿಂಗಮಾಡದ ಉಲ್ಲೇಖ ಕಾಣಬರುತ್ತದೆ. ಈ ಮಾಡ ನಾಣ್ಯಗಳ ಮೇಲೆ ಸಿಂಗ ಅಥವಾ ಸಿಂಹದ ಚಿತ್ರವಿದ್ದಿರಬೇಕು ಎಂದು ಊಹಿಸಬಹುದು. ಅಚ್ಯುತರಾಯಿ ಮಾಡವೆಂದರೆ, ಈ ರಾಜನು ಟಂಕಿಸಿದ ನಾಣ್ಯವೆಂಬುದು ಖಚಿತ.

ತಾಮ್ರದ ನಾಣ್ಯಗಳ ಉಲ್ಲೇಖ ಶಾಸನಗಳಲ್ಲಿ ಅಷ್ಟಾಗಿ ಕಾಣಬರುವುದಿಲ್ಲ. ಆದರೆ ಸಮಕಾಲೀನ ಕನ್ನಡ ಗ್ರಂಥಗಳಲ್ಲಿ ಕೆಲವು ತಾಮ್ರದ ನಾಣ್ಯಗಳ ಉಲ್ಲೇಖ ಕಾಣಬರುತ್ತದೆ. ಬಸವಪುರಾಣದಲ್ಲಿ ಅರೆಕಾಣಿ ಅಂದರೆ ಅರ್ಧ ಕಾಣಿಯ ಪ್ರಸ್ತಾಪವಿದೆ. ಬೊಮ್ಮರಸನ ಸೌಂದರ ಪುರಾಣದಲ್ಲಿಯೂ ಅರೆಕಾಣಿಯ ಉಲ್ಲೇಖವಿದೆ. ಮಂಗರಸನ ಸೂಪಶಾಸ್ತ್ರದಲ್ಲಿ ದುಗ್ಗಾಣಿ, ಅಂದರೆ ಎರಡು ಕಾಣಿ ನಾಣ್ಯದ ಉಲ್ಲೇಖವಿದೆ. ಪುರಂದರದಾಸರ ವಚನಗಳಲ್ಲಿಯೂ ದುಗ್ಗಾಣಿ ಎನ್ನುವ ಪದ ಕಾಣಸಿಗುತ್ತದೆ. ಈ ರೀತಿ ಸಮಕಾಲೀನ ಶಾಸನಗಳು ವಿಜಯನಗರ ನಾಣ್ಯ ಪದ್ಧತಿಯ ಮೇಲೆ ಬೆಳಕನ್ನು ಚೆಲ್ಲುತ್ತವೆ.

ಆಗಲೇ ಗಮನಿಸಿರುವಂತೆ ವಿಜಯನಗರವನ್ನು ಅನೇಕ ವಿದೇಶೀ ಯಾತ್ರಿಕರು ಸಂದರ್ಶಿಸಿ, ಉತ್ತಮ ಮಾಹಿತಿಗಳನ್ನು ಸಂಗ್ರಹಿಸಿ ಬರೆದಿಟ್ಟಿದ್ದಾರೆ. ಈ ಮಾಹಿತಿಗಳಲ್ಲಿ ನಾಣ್ಯಗಳಿಗೂ ಸಂಬಂಧಿಸಿದ ಅನೇಕ ಸ್ವಾರಸ್ಯಕರ ಮತ್ತು ಉಪಯುಕ್ತ ವಿಷಯಗಳಿವೆ. ಇವು ವಿಜಯನಗರ ನಾಣ್ಯಗಳ ಮೇಲೆ ವಿಶೇಷ ಬೆಳಕನ್ನು ಬೀರುತ್ತವೆ. ಆದುದರಿಂದ ಇವು ಮಹತ್ವದ ಆಕರಗಳಾಗಿವೆ. ಈ ವಿದೇಶೀ ಯಾತ್ರಿಕರು ಬೇರೆ ಬೇರೆ ನಾಣ್ಯಗಳ

ಪರಿಚಯವಿದ್ದವರಾದುದರಿಂದ, ಅವರು ವಿಜಯನಗರ ನಾಣ್ಯಗಳನ್ನು ತೌಲನಿಕ ದೃಷ್ಟಿಯಿಂದ ಗಮನಿಸಿದ್ದಾರೆ. ಆದುದರಿಂದ ಈ ವಿದೇಶೀ ಬರಹಗಳಿಗೆ ಹೆಚ್ಚಿನ ಮಹತ್ವ. ಅಬ್ದುಲ್ ರಜಾಕ್, ಬಾರ್ಬೋಸ, ವರ್ತೆಮ, ಸೀಸರ್ ಫ್ರೆಡರಿಕ್, ನಿಕೊಲೊ ಕೊಂತಿ ಮುಂತಾದ ಯಾತ್ರಿಕರ ಬರವಣಿಗೆಗಳಿಂದ ವಿಜಯನಗರ ನಾಣ್ಯ ಪದ್ಧತಿಯನ್ನು ಚೆನ್ನಾಗಿ ತಿಳಿಯಬಹುದು. ಅಬ್ದುಲ್ ರಜಾಕನ ಪ್ರಕಾರ ಇಲ್ಲಿನ ಪದ್ಧತಿ ಏನೆಂದರೆ ಯಾವುದೋ ಒಂದು ನಿಯಮಿತ ಸಮಯದಲ್ಲಿ ಸಾಮ್ರಾಜ್ಯದ ಎಲ್ಲ ಜನಗಳೂ ತಾವು ಸರಕಾರಕ್ಕೆ ಕೊಡಬೇಕಾದ ಹಣವನ್ನು ಟಂಕಶಾಲೆಗೆ ಕೊಂಡೊಯ್ದು ಅಲ್ಲಿ ಸಲ್ಲಿಸುತ್ತಿದ್ದುದು. ಅದೇ ರೀತಿಯಲ್ಲಿ ಯಾರಿಗೆ ಸರಕಾರದಿಂದ ಹಣ ಬರಬೇಕಾಗಿದೆಯೋ, ಅಂತಹವರು ಅದೇ ಟಂಕಶಾಲೆಯಿಂದ ಹಣವನ್ನು ಪಡೆಯುತ್ತಿದ್ದರು. ಅಂದರೆ ಟಂಕಶಾಲೆಯಲ್ಲಿ ಹಣವನ್ನು ಟಂಕಿಸುವುದರ ಜೊತೆಗೆ, ಹಣವನ್ನು ಕೊಡುವ ಮತ್ತು ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತಿದ್ದರೆಂದು ಗೊತ್ತಾಗುತ್ತದೆ. ಆದುದರಿಂದ ಟಂಕಶಾಲೆಯು ಈಗಿನ ಟ್ರೆಷರಿಗಳು ಮಾಡುತ್ತಿದ್ದ ಕೆಲಸವನ್ನೂ ನಿರ್ವಹಿಸುತ್ತಿದ್ದವು ಎಂದು ತಿಳಿಯಬೇಕು.

ಬಾರ್ಬೋಸನು ನಾಣ್ಯಗಳ ಶುದ್ಧಾಶುದ್ಧತೆ ಮತ್ತು ತೂಕವನ್ನು ಪರೀಕ್ಷಿಸುವ ವಿಧಾನವನ್ನು ಸುಂದರವಾಗಿ ವರ್ಣಿಸಿದ್ದಾನೆ. ಅದನ್ನು ಮೇಲೆ ಗಮನಿಸಲಾಗಿದೆ. ಪೇಸನ ಪ್ರಕಾರ ಭಾರತದ ಎಲ್ಲೆಡೆಯಲ್ಲಿಯೂ ವಿಜಯನಗರದ ಪರ್ದಾವೊ ಎನ್ನುವ ಚಿನ್ನದ ನಾಣ್ಯ ಚಲಾವಣೆಯಲ್ಲಿದ್ದಿತು. ಆದರೆ ಸೀಸರ್ ಫ್ರೆಡರಿಕನ ಪ್ರಕಾರ ತಾಮ್ರದ ನಾಣ್ಯಗಳು ಪ್ರತಿಯೊಬ್ಬ ರಾಜ್ಯಪಾಲನ ರಾಜ್ಯಕ್ಕೆ ಮಾತ್ರ ಸೀಮಿತವಾಗಿದ್ದವು. ಇದರಿಂದ ಕೆಲವು ಸಾರಿ ವಿದೇಶೀ ಯಾತ್ರಿಕರಿಗೆ ತೊಂದರೆಯೂ ಉಂಟಾಗುತ್ತಿತ್ತು. ವರ್ತೆಮನು ಪರ್‌ದಾಯಿ ಎನ್ನುವ ನಾಣ್ಯವನ್ನು ಹೆಸರಿಸಿ ಅದರ ಒಂದು ಮುಖದಲ್ಲಿ ಎರಡು ಚಿತ್ರಗಳು ಹಾಗೂ ಮತ್ತೊಂದು ಮುಖದಲ್ಲಿ ಕೆಲವು ಅಕ್ಷರಗಳಿದ್ದವು ಎಂದು ಹೇಳಿದ್ದಾನೆ. ಡೊಮಿಂಗ್ ಪೇಸ್ ಇದನ್ನು ಇನ್ನೊಂದು ರೀತಿಯಲ್ಲಿ ವರ್ಣಿಸಿದ್ದಾನೆ "ಪರ್ದಾವೊ ಎನ್ನುವುದು ಯಾವ ರೀತಿಯ ನಾಣ್ಯ ಎಂದು ಗೊತ್ತಿಲ್ಲದೇ ಹೋದರೆ, ಅದನ್ನು ಈ ರೀತಿ ತಿಳಿದುಕೊಳ್ಳಲಿ. ಅದು ಗುಂಡನೆಯ ಚಿನ್ನದ ನಾಣ್ಯ. ಅದು ಈ ರಾಜ್ಯದಲ್ಲಿ ಮಾತ್ರ ಟಂಕಿಸಲಾಗುತ್ತದೆ. ಬೇರೆ ಯಾವ ರಾಜ್ಯಗಳಲ್ಲಿಯೂ ಇಲ್ಲ. ಇವುಗಳ ಮೇಲೆ ಒಂದು ಮುಖದಲ್ಲಿ ಎರಡು ಶಿಲ್ಪಗಳೂ, ಮತ್ತೊಂದು ಮುಖದಲ್ಲಿ ಈ ನಾಣ್ಯವನ್ನು ಅಚ್ಚು ಹಾಕಿಸಿದ ರಾಜರ ಹೆಸರುಗಳೂ ಇವೆ. ಇಂದು ಆಳುತ್ತಿರುವ ರಾಜನ ನಾಣ್ಯದ ಮೇಲೆ ಒಂದೇ ಶಿಲ್ಪವಿದೆ. ಈ ನಾಣ್ಯವು ಭಾರತದ ಎಲ್ಲೆಡೆಯಲ್ಲಿಯೂ ಚಲಾವಣೆಯಲ್ಲಿದೆ". ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವಿಜಯನಗರ ನಾಣ್ಯಗಳಿಗೆ ಇದ್ದ ಸರ್ವಮಾನ್ಯತೆ. ಒಂದು ಚಿತ್ರದ ನಾಣ್ಯಗಳೆಂದರೆ ನಂದಿ, ಹನುಮಾನ್, ಗರುಡ ಮುಂತಾದವುಗಳು ಇರುವ ನಾಣ್ಯಗಳು; ಎರಡು ಶಿಲ್ಪಗಳ ನಾಣ್ಯಗಳೆಂದರೆ ಶಿವ-ಪಾರ್ವತಿ, ಲಕ್ಷ್ಮೀನಾರಾಯಣ, ಲಕ್ಷ್ಮೀನರಸಿಂಹ ಮುಂತಾದ ದೇವತೆಗಳಿದ್ದ ನಾಣ್ಯಗಳು.

ಡೇಮ್ಸ್ ಎಂಬ ವಿದ್ವಾಂಸನು ವಿಜಯನಗರ ನಾಣ್ಯಗಳನ್ನು ಬ್ರಿಟನ್ನಿನ ಪೌಂಡ್‌ಗಳಿಗೆ ಪರಿವರ್ತಿಸಿ ಮೌಲ್ಯಮಾಪನ ಮಾಡಲು ಯತ್ನಿಸಿದ್ದಾನೆ. ಬಾರ್ಬೋಸನ ಪ್ರಕಾರ ವಿಜಯನಗರ ಕಾಲದಲ್ಲಿ ಸೇನೆಯ ಒಬ್ಬ ಯೋಧನ ತಿಂಗಳ ಸಂಬಳ ನಾಲ್ಕು - ಐದು ಪರ್ದಾವೊಗಳು. ಇದು ಒಂದು ಪೌಂಡ್ ಹತ್ತು ಷಿಲ್ಲಿಂಗ್. ಹದಿನಾರನೆಯ ಶತಮಾನದಲ್ಲಿ ಇತರ ಸವಲತ್ತುಗಳನ್ನೂ ಸೇರಿಸಿಕೊಂಡರೆ ಇದು ಖಂಡಿತವಾಗಿಯೂ ಐಶ್ವರ್ಯ. ಪೇಸನ ಪ್ರಕಾರ ಕಾವಲುಗಾರರಿಗೆ ಒಂದು ಸಾವಿರದಿಂದ ಆರು ನೂರು ಪರ್ದಾವೊ ವಾರ್ಷಿಕ ಸಂಬಳ. ಇದು ಸುಮಾರು 47 ಸಾವಿರ ರುಪಾಯಿಗಳಾಗುತ್ತವೆ. ಇದು ಯಾವ ರೀತಿಯಲ್ಲೂ ಕಡಿಮೆಯಲ್ಲ. ಈ ಬೆಲೆಗಳನ್ನು ಗಮನಿಸಿದರೆ ವಿಜಯನಗರ ಕಾಲ ಸುಭಿಕ್ಷವಾಗಿದ್ದಿತೆಂದು ಸುಲಭವಾಗಿ ಹೇಳಬಹುದು.

ಕೊನೆಯದಾಗಿ ಬಾರ್ಬೋಸನು ವಿಜಯನಗರ ನಾಣ್ಯಗಳ ಮೌಲ್ಯವನ್ನು ಕುರಿತು ಹೇಳಿರುವ ಮಾತುಗಳು, ಆ ನಾಣ್ಯಗಳಿಗೆ ಹಾಗೂ ಆ ನಾಣ್ಯಗಳನ್ನು ಟಂಕಿಸಿದ ರಾಜರುಗಳಿಗೆ ಗೌರವವನ್ನು ತಂದುಕೊಡುತ್ತವೆ. 'ವಿಜಯನಗರ ನಾಣ್ಯಗಳು ನಿಸ್ಸಂದೇಹವಾಗಿ ಚೊಕ್ಕವಾದವು. ಒಂದು ನಾಣ್ಯವೂ ಈವರೆಗೆ ಕೃತ್ರಿಮವೆಂದು ಕಂಡು ಬಂದಿಲ್ಲ, ಮತ್ತು ಈಗಲೂ ಕಾಣಬರುವುದಿಲ್ಲ'. ಇದು ವಿಜಯನಗರ ನಾಣ್ಯ ಪದ್ಧತಿಗೆ ವಿದೇಶೀ ಯಾತ್ರಿಕರು ಕೊಟ್ಟಿರುವ ಪ್ರಮಾಣ ಪತ್ರವೆಂದು ಭಾವಿಸಬಹುದು.

ಶಾಸನಗಳ ಮಾಹಿತಿ, ವಿದೇಶೀ ಯಾತ್ರಿಕರ ಮಾಹಿತಿ ಹಾಗೂ ಇದುವರೆಗೆ ದೊರಕಿರುವ ನಾಣ್ಯಗಳು - ಇವುಗಳಿಂದ ವಿಜಯನಗರದ ನಾಣ್ಯಗಳನ್ನು ಪರಿಚಯ ಮಾಡಿಕೊಳ್ಳಬಹುದು. ವಿಜಯನಗರ ನಾಣ್ಯಗಳು ಸಾಮಾನ್ಯವಾಗಿ ನಾಡಿನ ಎಲ್ಲ ವಸ್ತು ಸಂಗ್ರಹಾಲಯಗಳಲ್ಲಿ ಕಾಣಬರುತ್ತವೆ. ಮದರಾಸಿನ ಸರ್ಕಾರಿ ಸಂಗ್ರಹಾಲಯ, ಆಂಧ್ರಪ್ರದೇಶದ ಹೈದರಾಬಾದಿನಲ್ಲಿರುವ ಸರ್ಕಾರಿ ಸಂಗ್ರಹಾಲಯ ಮತ್ತು ದೆಹಲಿಯ ರಾಷ್ಟ್ರೀಯ ಸಂಗ್ರಹಾಲಯಗಳಲ್ಲಿ ಮತ್ತು ಅನೇಕ ನಾಣ್ಯ ಸಂಗ್ರಹಕಾರರ ಬಳಿ ಉತ್ತಮ ವಿಜಯನಗರ ನಾಣ್ಯಗಳಿವೆ. ಈ ಎಲ್ಲ ನಾಣ್ಯಗಳನ್ನು ಪರೀಕ್ಷಿಸಿ, ನಾಣ್ಯಸೂಚಿಯನ್ನು ತಯಾರಿಸಿ ಪ್ರಕಟಿಸಿದರೆ ವಿದ್ವಾಂಸರಿಗೂ, ವಿದ್ಯಾರ್ಥಿಗಳಿಗೂ ಹಾಗೂ ಸಾಮಾನ್ಯ ಜನಗಳಿಗೂ ವಿಜಯನಗರ ನಾಣ್ಯಸಂಪತ್ತಿನ ಪರಿಚಯ ಇನ್ನೂ ಚೆನ್ನಾಗಿ ಆಗುತ್ತದೆ ಎಂದು ಆಶಿಸಬಹುದು. ಈಗ ಉಪಲಬ್ಧ ವಿಜಯನಗರ ನಾಣ್ಯಗಳನ್ನು ಗಮನಿಸಬಹುದು.

ಮೊದಲನೆಯ ಹರಿಹರ (ಕ್ರಿ.ಶ. 1336-1356)

ವಿಜಯನಗರ ರಾಜ್ಯದ ಸ್ಥಾಪಕನಾದ ಮೊದಲನೆಯ ಹರಿಹರನು ತನ್ನ ವಂಶದ ನಾಣ್ಯಗಳಿಗೆ ಭದ್ರ ಬುನಾದಿಯನ್ನು ಹಾಕಿದನು. ಸಾಮಾನ್ಯವಾಗಿ ಎಲ್ಲ ವಿಜಯನಗರ ದೊರೆಗಳೂ ಇವನ ಮಾರ್ಗವನ್ನೇ ಅನುಸರಿಸಿದರು. ಇವನು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ತನ್ನ ನಾಣ್ಯಗಳನ್ನು ಟಂಕಿಸಿದನು. ಹನುಮಾನ್ ಮತ್ತು ಗರುಡರ ಚಿತ್ರಗಳಿರುವ

ನಾಣ್ಯಗಳನ್ನು ಪ್ರಾರಂಭಿಸಿದವನು ಇವನೇ. ಇವನ ನಾಣ್ಯಗಳನ್ನು ಗುರುತಿಸುವಾಗ ಒಂದು ಸಮಸ್ಯೆಯು ಎದುರಾಗುತ್ತದೆ. ಇವನ ಮತ್ತು ಇವನ ಅನಂತರ ಆಳಿದ ಇಮ್ಮಡಿ ಹರಿಹರನ ನಾಣ್ಯಗಳನ್ನು ಬೇರ್ಪಡಿಸುವುದು ಸ್ವಲ್ಪ ಕಷ್ಟದ ಕೆಲಸ. ನಾಣ್ಯಗಳ ಹಿಮ್ಮುಖದಲ್ಲಿ ಒಂದೇ ಹೆಸರಿರುವುದೇ ಇದಕ್ಕೆ ಮುಖ್ಯ ಕಾರಣ. ಮೊದಲನೆಯ ಹರಿಹರನು ವೀರ ಎಂಬ ಬಿರುದನ್ನು ಹೊಂದಿದ್ದನು; ಆದರೆ ಇಮ್ಮಡಿ ಹರಿಹರನಿಗೆ ಪ್ರತಾಪ ಎಂಬ ಬಿರುದಿದ್ದಿತು. ಆದುದರಿಂದ ಯಾವ ನಾಣ್ಯಗಳ ಮೇಲೆ ವೀರ ಹರಿಹರ ಎನ್ನುವ ಬರಹವಿದೆಯೋ ಅವು ಮೊದಲನೆಯ ಹರಿಹರನ ನಾಣ್ಯಗಳೆಂದೂ, ಪ್ರತಾಪ ಹರಿಹರ ಎನ್ನುವ ಬರವಣಿಗೆಯಿರುವ ನಾಣ್ಯಗಳು ಇಮ್ಮಡಿ ಹರಿಹರನಿಗೆ ಸೇರಿದ್ದೆಂದೂ ಭಾವಿಸಲಾಗಿದೆ. ಮೊದಲನೆಯ ಹರಿಹರನ ಚಿನ್ನದ ವರಹ ನಾಣ್ಯದ ತೂಕ 52 ಗ್ರೇನ್; ಅಗಲ 0.6".



ಮು : ಮಂಡಿಯನ್ನು ಬಗ್ಗಿಸಿರುವ ಬಲಭಾಗಕ್ಕಿರುವ ಹನುಮಾನ್; ಎಡಗೈ ಎಡಮಂಡಿಯ ಮೇಲಿದ್ದರೆ ಬಲಗೈ ಮೇಲೆ ಎತ್ತಿದೆ; ಬಾಲವು ತಲೆಯ ಮೇಲೆ ಎತ್ತಿಕೊಂಡಿದೆ; ಮುಖದ ಮುಂಭಾಗದಲ್ಲಿ ಖಡ್ಗವಿದೆ.

ಹಿ : ಮೂರು ಸಾಲುಗಳ ಕನ್ನಡ ಬರಹ; ಮಧ್ಯೆಗೆರೆ

ಶ್ರೀ ವೀ

ರ ಹರಿ

ಹರ

ಇದೇ ದೊರೆಯ ಬೆಳ್ಳಿಯ ನಾಣ್ಯವು ದೊರಕಿದೆ. ಇದು ಎಲ್ಲ ವಿಧಗಳಲ್ಲಿಯೂ ಮೇಲಿನ ಚಿನ್ನದ ನಾಣ್ಯವನ್ನೇ ಹೋಲುತ್ತದೆ. ಇವನು ಟಂಕಿಸಿದ ಮೊದಲನೆಯ ನಮೂನೆಯ ತಾಮ್ರದ ನಾಣ್ಯದ ಅಗಲ 0.6". ಮುಮ್ಮುಖ ಮತ್ತು ಹಿಮ್ಮುಖಗಳೆರಡರಲ್ಲೂ ಇದು ಚಿನ್ನದ ನಾಣ್ಯವನ್ನೇ ಹೋಲುತ್ತದೆ.

ಮು : ಹಿಂದೆ ನೋಡುತ್ತಿರುವಂತೆ ಹನುಮಂತ

ಹಿ : ಕನ್ನಡ ಬರಹ

ಶ್ರೀ ವೀ

ರ ಹರಿ

ಹರ

ಇನ್ನೊಂದು ನಮೂನೆಯ ನಾಣ್ಯದಲ್ಲಿ ಮುಮ್ಮುಖದಲ್ಲಿ ಬಿಂದುಗಳಿಂದ ಮಾಡಿದ ವೃತ್ತವಿದೆ. ಅದರೊಳಗೆ ಹನುಮಂತನ ಚಿತ್ರವಿದೆ. ಹಿಮ್ಮುಖದಲ್ಲಿ ಎರಡು ಸಾಲುಗಳ ಕನ್ನಡ ಬರಹವಿದೆ. ಇಲ್ಲಿ ವೀರ ಎನ್ನುವ ಬಿರುದೂ ಇಲ್ಲ. ಅದು ಕೇವಲ ಹರಿಹರ ಎಂದಿದೆ.

ಮತ್ತೊಂದು ನಮೂನೆಯ ನಾಣ್ಯದಲ್ಲಿ ಗರುಡನ ಚಿತ್ರವಿದೆ.

ಮು : ಉದ್ದವಾದ ಕೊಕ್ಕಿರುವ ಮುಂದಕ್ಕೆ ಮುಖ ಮಾಡಿರುವ ಗರುಡ

ಹಿ : ಕೆಳಗೆ ಗೆರೆಯಿರುವ ಮೂರು ಸಾಲುಗಳ ಕನ್ನಡ ಬರಹ

ಶ್ರೀ ವೀ

ರ ಹರಿ

ಹರ

ಇತ್ತೀಚಿಗೆ ದೊರಕಿದ ಇನ್ನೊಂದು ನಮೂನೆಯ ನಾಣ್ಯದ ಮೇಲೆ ಹುಲಿಯ ಚಿತ್ರವಿದೆ. ಈ ನಾಣ್ಯ ಪೆರಿಯಾರ್ ಜಿಲ್ಲೆಯ ಭವಾನಿ ನದಿ ದಂಡೆಯ ಮೇಲೆ ದೊರಕಿದೆ. ಇದರ ತೂಕ 22 ಗ್ರೇನ್. ಅಗಲ 0.6". ಇದೊಂದು ವಿರಳವಾದ ನಾಣ್ಯ.

ಮು : ಎಡಕ್ಕೆ ಮುಖಮಾಡಿ ನಿಂತಿರುವ ಹುಲಿ

ಹಿ : ಎರಡು ಸಾಲುಗಳ ಕನ್ನಡ ಬರಹ

ಹರಿ

ಹರ

ಮತ್ತೊಂದು ನಮೂನೆಯ ನಾಣ್ಯಗಳಲ್ಲಿ ನಿಂತಿರುವ ಮತ್ತು ಕುಳಿತಿರುವ ಮನುಷ್ಯನ ಆಕೃತಿಯಿದೆ. ಕಿರೀಟ ಮತ್ತು ಮುದ್ರೆಗಳು ಇಲ್ಲದೇ ಇರುವುದರಿಂದ, ಇದು ದೇವತೆಯಲ್ಲವೆಂದು ಭಾವಿಸಲಾಗಿದೆ. ಆದುದರಿಂದ ಇದು ರಾಜನ ಚಿತ್ರವೇ ಇರಬೇಕೆಂದು ಭಾವಿಸಬೇಕು. ಈ ರೀತಿಯ ನಾಣ್ಯಗಳು ವಿರಳ.

ಮು : ನಿಂತಿರುವ / ಕುಳಿತಿರುವ ರಾಜನ ಚಿತ್ರ

ಹಿ : ಎರಡು ಸಾಲುಗಳ ಕನ್ನಡ ಬರಹ

ವೀರ

ಹರಿಹರ



ಮೊದಲನೆಯ ಬುಕ್ಕರಾಯ (ಕ್ರಿ.ಶ. 1356-1377)

ಈ ರಾಜನು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚು ಮಾಡಿಸಿದನು. ಇವನ ನಾಣ್ಯಗಳನ್ನು, ಇಮ್ಮಡಿ ಬುಕ್ಕನ ನಾಣ್ಯಗಳಿಂದ ಬೇರ್ಪಡಿಸುವುದು ಕಷ್ಟದ ಕೆಲಸ. ಆದುದರಿಂದ ನಾಣ್ಯವನ್ನು ಸರಿಯಾಗಿ ಪರೀಕ್ಷಿಸಿ, ಅದು ಯಾರದ್ದೆಂದು ತೀರ್ಮಾನಿಸಬೇಕು. ಇವನ ಚಿನ್ನದ ವರಹ ನಾಣ್ಯದ ತೂಕ 52 ಗ್ರೇನ್; ಅಗಲ 0.6". ಇದರ ಮುಮ್ಮುಖದಲ್ಲಿ ಹನುಮಂತನ ಚಿತ್ರವಿದೆ. ಹಿಮ್ಮುಖದಲ್ಲಿ ಬರಹವಿದೆ.

ಮು : ಬಾಗಿದ ಮಂಡಿಗಳ ಹನುಮಂತ; ಎಡಗೈ ಎಡಮಂಡಿಯ ಮೇಲೆ; ಬಲಗೈ ಹೊಡೆಯುವುದಕ್ಕೆ ಎತ್ತಿರುವ ರೀತಿಯಲ್ಲಿ; ಬಾಲ ಮೇಲಕ್ಕೆ ಎತ್ತಿಕೊಂಡಿದೆ; ಹಿಂಭಾಗ ನೋಡುತ್ತಿರುವ ಮುಖ; ಬಲಗಡೆ ಖಡ್ಗ

ಹಿ : ಮಧ್ಯೆ ಗೆರೆಗಳಿರುವ ಮೂರು ಸಾಲುಗಳ ಕನ್ನಡ ಬರಹ

ಶ್ರೀ ವೀ

ರ ಬುಕ

ರಾಯಃ

ಇವನ ಬೆಳ್ಳಿಯ ನಾಣ್ಯದ ತೂಕ 1.2 ಗ್ರೇನ್.

ಮು : ನಿಂತಿರುವ ವೀರ ಹನುಮಂತ; ಪಕ್ಕದಲ್ಲಿ ಖಡ್ಗ

ಹಿ : ಬು ಎಂಬ ಕನ್ನಡ ಅಕ್ಷರ



ಈ ರೀತಿಯ ನಾಣ್ಯಗಳಲ್ಲಿ ಅನೇಕ ಸಣ್ಣ ಪುಟ್ಟ ಬದಲಾವಣೆಗಳು ಕಾಣಬರುತ್ತವೆ.

ಇವನ ತಾಮ್ರದ ನಾಣ್ಯಗಳು ಮೇಲಿನ ನಾಣ್ಯದಂತೆಯೇ ಕಾಣುತ್ತವೆ.

ಮು : ಬಾಗಿದ ಮಂಡಿಗಳನ್ನುಳ್ಳ ಬಲಕ್ಕೆ ತಿರುಗಿರುವ ಹನುಮಂತ; ಕಮಾನಿನಂತೆ ಬಾಲ ತಲೆಯಮೇಲೆ ಬಾಗಿದೆ

ಹಿ : ಮಧ್ಯೆ ಗೆರೆಗಳಿರುವ ಮೂರು ಸಾಲುಗಳ ಕನ್ನಡ ಬರಹ

ವೀರ ಬು

ಕಪತಿ

ರಾಯ

ಇನ್ನು ಕೆಲವು ತಾಮ್ರದ ನಾಣ್ಯಗಳಲ್ಲಿ ಮುಮ್ಮುಖದಲ್ಲಿ ಹನುಮಂತನ ಚಿತ್ರವಿದ್ದು ಹಿಮ್ಮುಖದ ಬರವಣಿಗೆಯ ವಿನ್ಯಾಸದಲ್ಲಿ ಬದಲಾವಣೆಗಳು ಕಾಣಬರುತ್ತವೆ. ಕೆಲವು ನಾಣ್ಯಗಳಲ್ಲಿ ಶ್ರೀಬುಕರಾಯ ಎನ್ನುವ ಬರಹವಿರುತ್ತದೆ. ಈ ನಾಣ್ಯಗಳ ಮೇಲಿನ ಬು ಎಂಬ ಅಕ್ಷರ ಹಾಗೂ ಬುಕರಾಯ ಎನ್ನುವ ಬರಹದ ಲಿಪಿ ಲಕ್ಷಣಗಳು ಹೊಯ್ಸಳರ ಲಿಪಿಯನ್ನು ಹೆಚ್ಚಾಗಿ ಹೋಲುವುದರಿಂದ, ಇದು ಮೊದಲನೆಯ ಬುಕ್ಕರಾಯನ ನಾಣ್ಯಗಳೆಂದು ಭಾವಿಸಲಾಗಿದೆ.

ಇಮ್ಮಡಿ ಹರಿಹರ (ಕ್ರಿ.ಶ. 1377-1409)

ಇಮ್ಮಡಿ ಹರಿಹರ ವಿಜಯನಗರದ ಮೊದಲ ದೊರೆಗಳಲ್ಲಿ ಪ್ರಮುಖನಾದವನು. ಸಾಮ್ರಾಜ್ಯದ ಬೆಳವಣಿಗೆಗೆ ಭದ್ರ ಬುನಾದಿಯನ್ನು ಹಾಕಿದ ಕೀರ್ತಿಯೂ ಇವನಿಗೆ ಸಲ್ಲುತ್ತದೆ. ಒಟ್ಟಿನಲ್ಲಿ ಇವನ ಕಾಲದಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ವಿಜಯನಗರ ಮುಂದುವರಿಯಿತು. ಇವನ ವೈವಿಧ್ಯಮಯ ನಾಣ್ಯಗಳು ಈ ಪ್ರಗತಿಯನ್ನು ಪ್ರತಿಬಿಂಬಿಸುತ್ತವೆ. ಸಾಧಾರಣವಾದ 'ವೀರ' ಎನ್ನುವ ಬಿರುದಿಗೆ ಬದಲಾಗಿ 'ಪ್ರತಾಪ' ಎನ್ನುವ ಬಿರುದನ್ನು ಇವನು ಧರಿಸಿದನು. ಇವನು ಶೈವ ಮತಾವಲಂಬಿಯಾದರೂ ವೈಷ್ಣವ ಧರ್ಮಕ್ಕೆ ಸಾಕಷ್ಟು ಪ್ರೋತ್ಸಾಹ ಕೊಟ್ಟನು. ಇವನ ನಾಣ್ಯಗಳ ಮೇಲೆ ಪತ್ನಿಯರನ್ನು ಒಡಗೂಡಿದ ಶಿವ, ವಿಷ್ಣು, ನರಸಿಂಹ ಮತ್ತು ಬ್ರಹ್ಮರನ್ನು ಕಾಣುತ್ತೇವೆ. ಈ ನಾಣ್ಯಗಳಲ್ಲಿ ಕೆಲವು ತುಂಬ ಜನಾನುರಾಗಿಯಾದವು. ಈ ರಾಜವಂಶದ ಇತರ ದೊರೆಗಳು ಇವನ್ನು ಅನುಕರಿಸಿದ್ದು ಮಾತ್ರವಲ್ಲದೆ ಆನಂತರ ಆಳಿದ ಅನೇಕ ರಾಜವಂಶಗಳು ಈ ನಾಣ್ಯಗಳನ್ನು ಅನುಕರಿಸಿದವು. ಅದರಲ್ಲಿಯೂ ಶಿವ-ಪಾರ್ವತಿ ನಾಣ್ಯ ನಮೂನೆ ವಿಶೇಷ ಜನಮನ್ನಣೆ ಗಳಿಸಿತು. ತಾಂತ್ರಿಕ ದೃಷ್ಟಿಯಿಂದಲೂ ಇಮ್ಮಡಿ ಹರಿಹರನ ನಾಣ್ಯಗಳು ವಿಶೇಷ ಪ್ರಗತಿಯನ್ನು ತೋರ್ಪಡಿಸುತ್ತವೆ. ಉತ್ತಮವಾದ ಅಚ್ಚುಗಳನ್ನು ತಯಾರು ಮಾಡಿ ಅವುಗಳಿಂದ ಕಲಾತ್ಮಕವಾದ ನಾಣ್ಯಗಳನ್ನು ತಯಾರಿಸುವ ಪರಂಪರೆ ಇವನ ಕಾಲದಲ್ಲಿ ಬಳಕೆಗೆ ಬಂದಿತು. ಈ ಎಲ್ಲ ದೃಷ್ಟಿಗಳಿಂದ ಇಮ್ಮಡಿ ಹರಿಹರನ ನಾಣ್ಯಗಳು ಮಹತ್ವದ್ದೆನಿಸಿವೆ.

ಇಮ್ಮಡಿ ಹರಿಹರನು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ನಾಣ್ಯಗಳನ್ನು ಟಂಕಿಸಿದನು. ಇವನ ಚಿನ್ನದ ನಾಣ್ಯಗಳು ಅನೇಕ ನಮೂನೆಗಳಲ್ಲಿ ದೊರಕಿವೆ. ಇವನ ವರಹ ಮೌಲ್ಯದ ನಾಣ್ಯ (ನಿತ್ಯಾನಂದ ಪೈ ಸಂಗ್ರಹ) ಈಗ ದೊರಕಿದೆ. ಇದರ ತೂಕ 52 ಗ್ರೇನ್, ಅಗಲ 0.6".

ಮು : ಎಡಕ್ಕಿರುವ ಹನುಮಾನ್

ಹಿ : ಮೂರು ಸಾಲುಗಳ ಕನ್ನಡ ಬರಹ

ಶ್ರೀ ವೀರ

ಪ್ರತಾಪ ಹ

ರಿಹರ

ಇವನ ಅರ್ಧ ವರಹ ನಾಣ್ಯದ ತೂಕ 26 ಗ್ರೇನ್; ಅಗಲ 0.6".

ಮು : ಎತ್ತರವಾದ ಪೀಠದ ಮೇಲೆ ಕುಳಿತಿರುವ ಶಿವ-ಪಾರ್ವತಿ; ಇಬ್ಬರೂ ಆಭರಣಗಳು ಮತ್ತು ಕಿರೀಟವನ್ನು ಧರಿಸಿದ್ದಾರೆ; ಶಿವನ ಎಡ ಮತ್ತು ಬಲಗೈಗಳಲ್ಲಿ ಕ್ರಮವಾಗಿ ತ್ರಿಶೂಲ ಮತ್ತು ಡಮರುಗಳಿವೆ; ಮೇಲ್ಭಾಗದಲ್ಲಿ ಸೂರ್ಯ-ಚಂದ್ರರು.

ಹಿ : ಮಧ್ಯದ ಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪ ಹರಿ

ಹರ



ಇದೇ ನಮೂನೆಯ ಮತ್ತೊಂದು ಅರ್ಧ ವರಹದಲ್ಲಿ ಶಿವನ ಕೈಯಲ್ಲಿ ಡಮರುವಿಗೆ ಬದಲಾಗಿ ಪರಶುವಿದೆ. ಇತರ ವಿಷಯಗಳಲ್ಲಿ ಹಾಗೂ ಹಿಮ್ಮುಖದ ಬರಹದಲ್ಲಿ, ಇದು ಮೇಲಿನ ನಾಣ್ಯವನ್ನೇ ಹೋಲುತ್ತದೆ. ಮೇಲೆ ಗಮನಿಸಿದಂತೆ ಈ ನಮೂನೆಯ ಚಿನ್ನದ ನಾಣ್ಯಗಳು ಬಹಳ ಜನಾನುರಾಗಿಯಾದವು. ಮುಂದೆ ಆಳಿದ ಅನೇಕ ರಾಜಮನೆತನಗಳು ಈ ನಮೂನೆಯನ್ನು ಮುಮ್ಮುಖದಲ್ಲಿ ಹಾಕಿಸಿ, ಹಿಮ್ಮುಖದಲ್ಲಿ ತಮ್ಮ ಹೆಸರನ್ನು

ಹಾಕಿಸಿದರು. ಹೈದರ್ ಅಲಿಯೂ ಈ ರೀತಿಯ ನಾಣ್ಯವನ್ನು ಅಚ್ಚು ಹಾಕಿಸಿದನು ಎಂಬುದನ್ನು ಗಮನಿಸಬೇಕು.

ಇವನ ಇನ್ನೊಂದು ನಮೂನೆಯ ನಾಣ್ಯದಲ್ಲಿ ಬ್ರಹ್ಮ-ಸರಸ್ವತಿಯರಿದ್ದಾರೆ. ಇದೂ ಅರ್ಧವರಹ ನಾಣ್ಯ. ಇದರ ತೂಕ 26 ಗ್ರೇನ್; ಅಗಲ 0.6".

ಮು : ಪದ್ಮಾಸನದ ಮೇಲೆ ಕುಳಿತಿರುವ ಬ್ರಹ್ಮ ಮತ್ತು ಸರಸ್ವತಿ; ಬ್ರಹ್ಮನ ಒಂದು ಕೈ ಅಭಯ ಮುದ್ರೆಯಲ್ಲಿದೆ; ಮಿಕ್ಕ ಕೈಗಳಲ್ಲಿ ಕಲಶ, ಪುಸ್ತಕ ಮತ್ತು ದರ್ವಿಗಳಿವೆ; ಸರಸ್ವತಿಯ ಕೈಯಲ್ಲಿ ವೀಣೆಯಿದೆ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪ ಹರಿ

ಹರ

ಇವನ ಇನ್ನೊಂದು ನಮೂನೆಯ ನಾಣ್ಯದಲ್ಲಿ ಲಕ್ಷ್ಮೀನಾರಾಯಣ ಇದ್ದಾರೆ. ಇದು ಕೂಡ ಅರ್ಧವರಹ ನಾಣ್ಯ; ತೂಕ 26 ಗ್ರೇನ್; ಅಗಲ 0.6".

ಮು : ಕುಳಿತಿರುವ ಲಕ್ಷ್ಮೀ ಮತ್ತು ನಾರಾಯಣ, ನಾರಾಯಣನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ; ಮೂರನೆಯ ಕೈ ಲಕ್ಷ್ಮಿಯ ಸುತ್ತ ಇದೆ; ನಾಲ್ಕನೆಯ ಕೈ ಅಭಯ ಮುದ್ರೆಯಲ್ಲಿದೆ

ಹಿ : ಮೇಲಿನ ನಾಣ್ಯದಲ್ಲಿರುವಂತೆ ಮೂರು ಸಾಲುಗಳ ಬರಹ

ಇವನ ನಾಲ್ಕನೆಯ ನಮೂನೆಯ ನಾಣ್ಯದಲ್ಲಿ ಲಕ್ಷ್ಮೀ ಮತ್ತು ನರಸಿಂಹ ಇದ್ದಾರೆ. ಇದು ಅರ್ಧ ವರಹ ನಾಣ್ಯ. ತೂಕ 26 ಗ್ರೇನ್; ಅಗಲ 0.6".

ಮು : ಕುಳಿತಿರುವ ಲಕ್ಷ್ಮೀ ಮತ್ತು ನರಸಿಂಹ; ನರಸಿಂಹನ ಕೈಯಲ್ಲಿ ಶಂಖ ಮತ್ತು ಚಕ್ರ; ಮೇಲ್ಗಡೆ ಸೂರ್ಯ-ಚಂದ್ರರು

ಹಿ : ಮೇಲಿನ ನಾಣ್ಯದಲ್ಲಿರುವಂತೆ ಮೂರು ಸಾಲುಗಳ ಬರಹ

ಹಿಂದೂ ಧರ್ಮದ ತ್ರಿಮೂರ್ತಿಗಳಾದ ಶಿವ, ವಿಷ್ಣು ಮತ್ತು ಬ್ರಹ್ಮರ ನಾಣ್ಯಗಳನ್ನು ಏಕ ಕಾಲದಲ್ಲಿ ಅಚ್ಚು ಹಾಕಿಸಿದ ಕೀರ್ತಿ ಇಮ್ಮಡಿ ಹರಿಹರನಿಗೆ ಸಲ್ಲುತ್ತದೆ.

ಇವನ ಐದನೆಯ ನಮೂನೆಯ ಚಿನ್ನದ ನಾಣ್ಯದ ತೂಕ 52 ಗ್ರೇನ್; ಅಗಲ 0.6".

ಮು : ಚುಕ್ಕೆಗಳಿಂದ ಮಾಡಿದ ವೃತ್ತದಲ್ಲಿ ಕುಳಿತಿರುವ ಲಕ್ಷ್ಮೀ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪ ಹರಿ

ಹರ


ಇತ್ತೀಚಿಗೆ ಈ ದೊರೆಯ ಮುಖ್ಯವಾದ ಬೆಳ್ಳಿಯ ನಾಣ್ಯಗಳು ದೊರಕಿವೆ. ಇವುಗಳಲ್ಲಿ ಮೊದಲನೆಯ ನಮೂನೆಯ ನಾಣ್ಯದ ತೂಕ 4 ಗ್ರೇನ್; ಅಗಲ 0.6".

ಮು : ನಾಗರೀ ಅಕ್ಷರ ಹ; ಅದರ ಮುಂಭಾಗದಲ್ಲಿ ಎರಡೂವರೆ ಎನ್ನುವ ಸಂಖ್ಯೆ (ಎರಡು ಎನ್ನುವ ಸಂಖ್ಯೆಯ ಪಕ್ಕದಲ್ಲಿ ಎರಡು ಲಂಬ ರೇಖೆಗಳು)

ಹಿ : ಎರಡು ಸಾಲುಗಳ ನಾಗರೀ ಬರಹ

ಹರಿ

ಹರ



ಇದೇ ನಮೂನೆಗೆ ಸೇರಬಹುದಾದ ಮತ್ತೊಂದು ಬೆಳ್ಳಿಯ ನಾಣ್ಯವೂ ದೊರಕಿದೆ. ಆದರೆ ಮೇಲಿನ ನಾಣ್ಯಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಇದರ ತೂಕ 2 ಗ್ರೇನ್; ಅಗಲ 0.4".

ಮು : ಚುಕ್ಕೆಗಳಿಂದ ವಿನ್ಯಾಸಗೊಳಿಸಿದ ಗರುಡ

ಹಿ : ನಾಗರೀ ಅಕ್ಷರ ಹ; ಅದರ ಮುಂಭಾಗದಲ್ಲಿ ಒಂದೂ ಕಾಲು ಎನ್ನುವ ಸಂಖ್ಯೆ; ಒಂದು ಎನ್ನುವ ಸಂಖ್ಯೆಯ ಪಕ್ಕದಲ್ಲಿ ಒಂದು ಲಂಬ ರೇಖೆ

ಈ ಮೇಲಿನ ಎರಡು ಬೆಳ್ಳಿಯ ನಾಣ್ಯಗಳು ಅನೇಕ ದೃಷ್ಟಿಗಳಿಂದ ಮಹತ್ವವಾದವು. ಮೊದಲನೆಯ ನಾಣ್ಯದ ಎರಡು ಮುಖಗಳಲ್ಲಿಯೂ ಬರಹಗಳಿವೆ. ಸಾಮಾನ್ಯವಾಗಿ ಮುಮ್ಮುಖದಲ್ಲಿ ದೇವತೆಯ ಚಿಹ್ನೆಯಿರಬೇಕು. ಇದೊಂದು ಅಪವಾದ. ಅದಕ್ಕೂ ಮುಖ್ಯವಾಗಿ ಮುಮ್ಮುಖದಲ್ಲಿ ಹ ಎಂಬ ನಾಗರೀ ಅಕ್ಷರವಿದೆ. ಅದರ ಪಕ್ಕದಲ್ಲಿ

ಎರಡೂವರೆ ಎನ್ನುವ ಸಂಖ್ಯೆಯಿದೆ. ಅಂದರೆ ಇದು ಎರಡೂವರೆ ಹಣ ಎಂದು ಭಾವಿಸಬಹುದು. ಆಳುಪರ ನಾಣ್ಯ ಒಂದನ್ನು ಬಿಟ್ಟರೆ ಯಾವ ಪ್ರಾಚೀನ ಹಿಂದೂ ನಾಣ್ಯಗಳಲ್ಲಿಯೂ ನಾಣ್ಯದ ಹೆಸರು ಕಂಡುಬಂದಿಲ್ಲ. ಆ ದೃಷ್ಟಿಯಿಂದ ಇದು ಮುಖ್ಯವಾದ ಸಂಗತಿ. ಅದೇ ರೀತಿಯಲ್ಲಿ ನಾಣ್ಯದ ಮೇಲೆ ಸಂಖ್ಯೆಯ ಕಂಡುಬಂದಿರುವುದೂ ಇದೇ ಮೊದಲು. ಆದರೆ ಇದು ಮುಸ್ಲಿಂ ನಾಣ್ಯಗಳಲ್ಲಿ ಬಹಳ ಸಾಮಾನ್ಯ. ಆದರೆ ವಿಜಯನಗರ ದೊರೆಗಳು ಈ ಪದ್ಧತಿಯನ್ನು ಅಷ್ಟಾಗಿ ಮುಂದುವರಿಸಲಿಲ್ಲ. ಎರಡನೆಯ ನಾಣ್ಯದಲ್ಲಿ ಹ (ಣ) ಒಂದೂ ಕಾಲು ಎನ್ನುವುದು ಹಿಮ್ಮುಖದಲ್ಲಿ ಕಾಣಬರುತ್ತದೆ. ಶಾಸನಗಳ ಮತ್ತು ವಿದೇಶೀ ಬರವಣಿಗೆಗಳ ಮಾಹಿತಿಗಳ ಆಧಾರದಿಂದ ವಿಜಯನಗರದ ಬೆಳ್ಳಿಯ ನಾಣ್ಯಗಳನ್ನು ತಾರ ಎಂದು ಕರೆಯುತ್ತಿದ್ದುದು ಗೊತ್ತಾಗುತ್ತದೆ. ಆದರೆ ಈ ಎರಡು ಬೆಳ್ಳಿಯ ನಾಣ್ಯಗಳ ಹೆಸರು ಹಣ ಎಂದು ಈಗ ತಿಳಿದುಬರುತ್ತದೆ. ಆದುದರಿಂದ ಹಣ ಎನ್ನುವುದು ಕೇವಲ ಚಿನ್ನದ ನಾಣ್ಯವಾಗಿರದೆ, ಬೆಳ್ಳಿಯ ನಾಣ್ಯವೂ ಆಗಿದ್ದಿತು ಎಂದು ಈಗ ಗೊತ್ತಾಗುತ್ತದೆ.

ಇಮ್ಮಡಿ ಹರಿಹರನ ಒಂದೇ ನಮೂನೆಯ ತಾಮ್ರದ ನಾಣ್ಯ ದೊರಕಿದೆ. ಅದರ ತೂಕ 40 ಗ್ರೇನ್; ಅಗಲ 0.6".

ಮು : ಚುಕ್ಕೆಗಳಿಂದ ಮಾಡಿದ ವೃತ್ತದಲ್ಲಿ ಎಡಕ್ಕೆ ಚಲಿಸುತ್ತಿರುವ ನಂದಿ; ಗಂಟೆಗಳ ಸರ ಅದರ ಕೊರಳಿನಲ್ಲಿ; ಮೇಲೆ ಸೂರ್ಯ-ಚಂದ್ರರು; ಮುಂದೆ ಖಡ್ಗ

ಹಿ : ಚುಕ್ಕೆಗಳಿಂದ ಮಾಡಿದ ವೃತ್ತದಲ್ಲಿ ಎರಡು ಸಾಲುಗಳ ನಾಗರೀ ಬರಹ

ಪ್ರತಾಪ

ಹರಿಹರ

ಮೊಟ್ಟಮೊದಲನೆಯ ಬಾರಿಗೆ ವಿಜಯನಗರ ನಾಣ್ಯದ ಮೇಲೆ ನಂದಿಯನ್ನು ವಿನ್ಯಾಸಗೊಳಿಸಿದ ಕೀರ್ತಿ ಇಮ್ಮಡಿ ಹರಿಹರನಿಗೆ ಸಲ್ಲುತ್ತದೆ. ಮುಂದಿನ ಅನೇಕ ದೊರೆಗಳು ಈ ರೀತಿಯ ನಾಣ್ಯಗಳನ್ನು ಅಚ್ಚು ಹಾಕಿಸಿದರು. ಇವನ ನಂದಿ ನಮೂನೆಯ ನಾಣ್ಯಗಳಲ್ಲಿ ಪುಟ್ಟ ಭಿನ್ನತೆಗಳನ್ನು ಹೊಂದಿದ ಅನೇಕ ನಾಣ್ಯಗಳು ದೊರಕಿವೆ. ಕೆಲವು ನಾಣ್ಯಗಳಲ್ಲಿ ಖಡ್ಗವು ಹಿಮ್ಮುಖದಲ್ಲಿ ಕಂಡುಬಂದರೆ, ಮತ್ತೆ ಕೆಲವು ನಾಣ್ಯಗಳ ಹಿಮ್ಮುಖದ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರ ಚಿಹ್ನೆಗಳು ಕಂಡುಬರುತ್ತವೆ. ಇಮ್ಮಡಿ ಹರಿಹರನ ಎಲ್ಲ ನಾಣ್ಯಗಳನ್ನೂ ಗಮನಿಸಿದರೆ ಅವುಗಳ ಉತ್ತಮ ತಾಂತ್ರಿಕತೆ ಎದ್ದು ಕಾಣುತ್ತದೆ. ದೇವದೇವತೆಗಳ ಎಲ್ಲ ವಿವರಗಳು ಸ್ಫುಟವಾಗಿ ಗೋಚರವಾಗುತ್ತವೆ. ಹಿಮ್ಮುಖದ ನಾಗರೀ ಬರಹವು ಸುಂದರವಾಗಿ ಕಂಡುಬರುತ್ತದೆ. ಈ ಎಲ್ಲ ಕಾರಣಗಳಿಂದ ಇವು ಗಮನಾರ್ಹ ನಾಣ್ಯಗಳು.

ಇಮ್ಮಡಿ ಬುಕ್ಕರಾಯ

ಈ ದೊರೆಯ ತಾಮ್ರದ ನಾಣ್ಯ ಮಾತ್ರ ಈವರೆಗೆ ದೊರಕಿದೆ. ಅದರ ತೂಕ 40 ಗ್ರೇನ್; ಅಗಲ 0.6".

ಮು : ಬಿಂದುಗಳ ವೃತ್ತದೊಳಗೆ ಎಡಕ್ಕೆ ಚಲಿಸುತ್ತಿರುವ ನಂದಿ; ಕೊರಳಿನಲ್ಲಿ ಗಂಟೆ; ಮುಂಭಾಗದಲ್ಲಿ ಖಡ್ಗ; ಮೇಲ್ಗಡೆ ಸೂರ್ಯ-ಚಂದ್ರರು

ಹಿ : ಬಿಂದುಗಳ ವೃತ್ತದೊಳಗೆ, ಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ವಿಜ

ಯ ಬುಕ

ರಾಯ

ಮೊದಲನೆಯ ದೇವರಾಯ (ಕ್ರಿ.ಶ. 1406-1422)

ವಿಜಯನಗರದಲ್ಲಿ ದೇವರಾಯ ಎಂಬ ಇಬ್ಬರು ರಾಜರನ್ನು ಕಾಣುತ್ತೇವೆ. ಇವರನ್ನು ಮೊದಲನೆಯ ಮತ್ತು ಇಮ್ಮಡಿ ದೇವರಾಯ ಎಂದು ಗುರುತಿಸುತ್ತೇವೆ. ಆದರೆ ಮೊದಲನೆಯ ಮತ್ತು ಇಮ್ಮಡಿ ದೇವರಾಯರ ನಾಣ್ಯಗಳನ್ನು ಪ್ರತ್ಯೇಕವಾಗಿ ಗುರುತಿಸುವುದು ಸ್ವಲ್ಪ ಕಷ್ಟದ ಕೆಲಸವೇ ಸರಿ. ಏಕೆಂದರೆ ಈ ಇಬ್ಬರ ನಾಣ್ಯಗಳ ಮೇಲೂ ದೇವರಾಯ ಅಥವಾ ಪ್ರತಾಪ ದೇವರಾಯ ಎಂಬ ಬರಹ ಹಿಮ್ಮುಖದಲ್ಲಿ ಕಾಣಬರುತ್ತದೆ. ಆದುದರಿಂದ ಈ ರೀತಿಯ ನಾಣ್ಯಗಳು ಮೊದಲನೆಯ ದೇವರಾಯನಿಗೆ ಸೇರಿದ್ದೇ ಅಥವಾ ಅದನ್ನು ಅಚ್ಚು ಮಾಡಿಸಿದವನು ಇಮ್ಮಡಿ ದೇವರಾಯನೇ ಎಂದು ತೀರ್ಮಾನಿಸುವುದು ಸಮಸ್ಯೆ. ಕಾಲಮಾನದ ದೃಷ್ಟಿಯಿಂದ ಇವರಿಬ್ಬರ ಆಳ್ವಿಕೆಗೂ ಕೇವಲ ನಾಲ್ಕು ವರ್ಷಗಳ ಅಂತರವಿರುವುದರಿಂದ, ಲಿಪಿಶಾಸ್ತ್ರವು ನಮ್ಮ ಸಹಾಯಕ್ಕೆ ಬರುವುದಿಲ್ಲ. ಆದುದರಿಂದ ಕೆಲವು ಊಹೆಗಳನ್ನು ಮಾಡಬಹುದು. ಇಮ್ಮಡಿ ದೇವರಾಯನಿಗೆ ಆನೆಗಳ ವಿಷಯದಲ್ಲಿ ವಿಶೇಷವಾದ ಆಸಕ್ತಿಯಿದ್ದಿತು. ಅವನು ಆನೆಗಳನ್ನು ಬೇಟೆಯಾಡುವುದರಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದನು. ಅವನಿಗೆ ಗಜಬೇಂಟೆಕಾರ ಎನ್ನುವ ಬಿರುದೂ ಇದ್ದಿತು ಎಂಬುದು ಶಾಸನಗಳಿಂದ ಮತ್ತು ವಿದೇಶೀ ಬರವಣಿಗೆಗಳಿಂದ ತಿಳಿದುಬರುತ್ತದೆ. ಇವನ ಆಸ್ಥಾನವನ್ನು ಸಂದರ್ಶಿಸಿದ ಅಬ್ದುಲ್ ರಜಾಕ್ ಎಂಬ ಯಾತ್ರಿಕನು, ಈ ದೊರೆಯನ್ನು ವರ್ಣಿಸುವಾಗ, ಅವನ ಸೈನ್ಯದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಆನೆಗಳಿದ್ದವು ಮತ್ತು ಅವು ಎತ್ತರವಾಗಿದ್ದು ರಾಕ್ಷಸರಂತೆ ಶತ್ರುಗಳ ಮೇಲೆ ಬೀಳಲು ಸಮರ್ಥವಾಗಿದ್ದವು ಎಂದು ಹೇಳಿದ್ದಾನೆ. ಆದುದರಿಂದ ಆನೆಯ ಚಿತ್ರವಿರುವ ಮತ್ತು ಆನೆಗೆ ಸಂಬಂಧಿಸಿದ ಬಿರುದುಗಳಿರುವ ನಾಣ್ಯಗಳು ಇಮ್ಮಡಿ ದೇವರಾಯನಿಗೆ ಸೇರಿದ್ದೆಂದು ಸಾಧಾರವಾಗಿ ಊಹಿಸಬಹುದು.

ಐದು ನಮೂನೆಯ ಚಿನ್ನದ ನಾಣ್ಯಗಳನ್ನು ಮೊದಲನೆಯ ದೇವರಾಯನು ಅಚ್ಚು ಹಾಕಿಸಿದನು. ಇವು ಶೈವ ಮತ್ತು ವೈಷ್ಣವ ದೇವತೆ ಹಾಗೂ ಚಿಹ್ನೆಗಳನ್ನು ಹೊಂದಿವೆ. ಹಿಮ್ಮುಖದಲ್ಲಿ ಕನ್ನಡ ಅಥವಾ ನಾಗರೀ ಬರಹಗಳಿವೆ.

ಮೊದಲನೆಯ ನಮೂನೆಯ ಚಿನ್ನದ ನಾಣ್ಯ ವರಹ ಮೌಲ್ಯದ ನಾಣ್ಯ. ಇದರ ತೂಕ 52 ಗ್ರೇನ್; ಅಗಲ 0.5".

ಮು : ಕಮಲದ ಮೇಲೆ ಕುಳಿತಿರುವ ಲಕ್ಷ್ಮೀನಾರಾಯಣ; ನಾರಾಯಣನ ಹಸ್ತಗಳಲ್ಲಿ ಶಂಖ ಮತ್ತು ಚಕ್ರಗಳಿವೆ

ಹಿ : ಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪ ದೇವ

ರಾಯ



ಇದೇ ನಮೂನೆಯ ಅರ್ಧ ವರಹ ಮೌಲ್ಯದ ನಾಣ್ಯವೂ ದೊರಕಿದೆ. ಇದರ ತೂಕ 26 ಗ್ರೇನ್; ಅಗಲ 0.4". ಮುಮ್ಮುಖ ಮತ್ತು ಹಿಮ್ಮುಖಗಳಲ್ಲಿ ಮೇಲಿನ ವಿನ್ಯಾಸಗಳೇ ಕಾಣಬರುತ್ತವೆ. ಎರಡನೆಯ ನಮೂನೆಯ ನಾಣ್ಯದಲ್ಲಿ ಶಿವ - ಪಾರ್ವತಿಯರು ಕಾಣಬರುತ್ತಾರೆ. ಇದರ ತೂಕ 52 ಗ್ರೇನ್; ಅಗಲ 0.5".


ಮು : ಪೀಠದ ಮೇಲೆ ಕುಳಿತಿರುವ ಶಿವ-ಪಾರ್ವತಿ; ಇಬ್ಬರೂ ಕಿರೀಟಗಳಿಂದ ಅಲಂಕೃತರಾಗಿದ್ದಾರೆ; ಶಿವನ ಎಡಗೈಯಲ್ಲಿ ತ್ರಿಶೂಲ; ಮತ್ತೊಂದು ಕೈಯಲ್ಲಿ ಡಮರು; ಇನ್ನೊಂದು ಕೈ ಅಭಯಮುದ್ರೆಯಲ್ಲಿ; ಇನ್ನೊಂದು ಕೈ ಪಾರ್ವತಿಯ ಮೇಲೆ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪ ದೇವ

ರಾಯ



ಇನ್ನೊಂದು ನಮೂನೆಯ ಅರ್ಧ ವರಹ ನಾಣ್ಯವೂ ದೊರಕಿದೆ. ಅದರ ತೂಕ 26 ಗ್ರೇನ್, ಅಗಲ 0.4". ಮುಮ್ಮುಖ ಮತ್ತು ಹಿಮ್ಮುಖಗಳಲ್ಲಿ ಮೇಲಿನ ನಾಣ್ಯವನ್ನೇ ಹೋಲುತ್ತದೆ. ಇದೇ ನಮೂನೆಯ ಇನ್ನೊಂದು ವರಹ ನಾಣ್ಯದಲ್ಲಿ ಶಿವನ ಕೈಗಳಲ್ಲಿ ಪರಶು, ಡಮರು ಮತ್ತು ಮೃಗಗಳಿವೆ. ಮಿಕ್ಕ ಎಲ್ಲ ವಿಷಯಗಳಲ್ಲಿ ಇದು ಮೇಲಿನ ನಾಣ್ಯವನ್ನೇ ಹೋಲುತ್ತದೆ.

ಮೊದಲನೆಯ ದೇವರಾಯನ ಬೆಳ್ಳಿಯ ನಾಣ್ಯಗಳು ಎರಡು ನಮೂನೆಗಳಲ್ಲಿ ಕಂಡುಬಂದಿವೆ. ಮೊದಲನೆಯ ನಮೂನೆಯ ಬೆಳ್ಳಿಯ ನಾಣ್ಯದ ತೂಕ 25 ಗ್ರೇನ್; ಅಗಲ 0.4".

ಮು : ಪೀಠದ ಮೇಲೆ ಕುಳಿತಿರುವ ಶಿವ-ಪಾರ್ವತಿ; ಶಿವನ ಕೈಗಳಲ್ಲಿ ತ್ರಿಶೂಲ, ಡಮರು ಮತ್ತು ಪರಶು; ಮತ್ತೊಂದು ಕೈ ಪಾರ್ವತಿಯ ನಡುವಿನ ಮೇಲೆ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ

ಪ್ರತಾಪ ದೇವ

ರಾಯ

ಎರಡನೆಯ ನಮೂನೆಯ ಬೆಳ್ಳಿಯ ನಾಣ್ಯದಲ್ಲಿ ಸಂಖ್ಯೆಯಿದೆ. ಇದರ ತೂಕ 5 ಗ್ರೇನ್; ಅಗಲ 0.3".

ಮು : ಹ ಎಂಬ ನಾಗರೀ ಅಕ್ಷರ; ಅದರ ಮುಂದೆ ಎರಡೂವರೆ ಎನ್ನುವ ಸಂಖ್ಯೆ

ಹಿ : ಎರಡು ಸಾಲುಗಳ ನಾಗರೀ ಬರಹ

ದೇವ

ರಾಯ

ಈ ನಮೂನೆಯ ನಾಣ್ಯದಲ್ಲಿ ಮುಮ್ಮುಖದಲ್ಲಿ ಬರಹವಿದೆ; ಹಿಮ್ಮುಖದಲ್ಲಿಯೂ ಬರಹವಿದೆ. ಇದರ ಮೇಲೆ ಆನೆಯ ಚಿತ್ರವಿಲ್ಲದೆ ಇರುವುದರಿಂದ ಇದು ಮೊದಲನೆಯ ದೇವರಾಯನಿಗೆ ಸೇರಿದ್ದೆಂದು ಭಾವಿಸಲಾಗಿದೆ.

ಇವನ ತಾಮ್ರದ ನಾಣ್ಯದಲ್ಲಿ ನಂದಿಯ ಚಿತ್ರವಿದೆ. ಇದರ ವಿನ್ಯಾಸದಲ್ಲಿ ಅನೇಕ ಸಣ್ಣ ಪುಟ್ಟ ಬದಲಾವಣೆಗಳು ಕಾಣಬರುತ್ತವೆ. ಈ ನಾಣ್ಯಗಳ ತೂಕ 50, 30 ಮತ್ತು 15 ಗ್ರೇನ್‌ಗಳು; ಅಗಲ 0.4" ರಿಂದ 0.5"ರ ವರೆಗೆ.

ಮು : ಡುಬ್ಬವಿರುವ ಎಡಕ್ಕೆ ಚಲಿಸುತ್ತಿರುವ ನಂದಿ; ಮೇಲ್ಗಡೆ ಸೂರ್ಯ - ಚಂದ್ರರು; ನಂದಿಯ ಮುಂಭಾಗದಲ್ಲಿ 'ದೇ' ಎಂಬ ನಾಗರೀ ಅಕ್ಷರ

ಹಿ : ವೃತ್ತದೊಳಗೆ ಎರಡು ಸಾಲುಗಳ ಕನ್ನಡ ಬರಹ; ಮಧ್ಯದಲ್ಲಿ ಶಂಖ, ಚಕ್ರ ಮತ್ತು ಖಡ್ಗ

ಶ್ರೀ ದೇವ

ರಾಯ

ಇವನ ಇನ್ನೊಂದು ನಮೂನೆಯ ನಾಣ್ಯದಲ್ಲಿ ಮುಮ್ಮುಖದಲ್ಲಿ 'ದೇ' ಎನ್ನುವ ಅಕ್ಷರ ಕನ್ನಡ ಲಿಪಿಯಲ್ಲಿದೆ. ಮಿಕ್ಕೆಲ್ಲ ವಿಷಯಗಳಲ್ಲಿ ಇದು ಮೇಲಿನ ನಾಣ್ಯವನ್ನೇ ಹೋಲುತ್ತದೆ.

ಇನ್ನೊಂದು ನಮೂನೆಯ ನಾಣ್ಯ ಸ್ವಲ್ಪ ಭಿನ್ನವಾಗಿ ತೋರುತ್ತದೆ.

ಮು : ಚುಕ್ಕೆಗಳಿಂದ ಮಾಡಿದ ವೃತ್ತದೊಳಗೆ ನಂದಿ; ನಂದಿಯ ಕೊರಳಿನಲ್ಲಿ ಗಂಟೆ; ಮೇಲೆ ಚಂದ್ರ; ಮುಂಭಾಗದಲ್ಲಿ ಖಡ್ಗ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ ದೇವ

ರಾಯ

ಇನ್ನೊಂದು ನಮೂನೆಯ ನಾಣ್ಯದಲ್ಲಿ ಸ್ವಲ್ಪ ಭಿನ್ನತೆ ಕಾಣುತ್ತದೆ.

ಮು : ಚುಕ್ಕೆಗಳಿಂದ ಮಾಡಿದ ವೃತ್ತದೊಳಗೆ ನಂದಿ; ಕೊರಳಿನಲ್ಲಿ ಗಂಟೆ; ಮೇಲೆ ಚಂದ್ರ; ಮುಂಭಾಗದಲ್ಲಿ ಶಂಖ

ಹಿ : ಗೆರೆಗಳಿರುವ ಎರಡು ಸಾಲುಗಳ ನಾಗರೀ ಬರಹ; ಅದರ ಕೆಳಗೆ ಖಡ್ಗ

ಪ್ರತಾಪ ದೇ

ವರಾಯ

ಇನ್ನೊಂದು ನಮೂನೆಯ ನಾಣ್ಯ ಆಸಕ್ತಿಕರವಾದುದು. ಅದರ ಮೇಲೆ ನೀಲಕಂಠ ಎನ್ನುವ ಬರಹವಿದೆ. ಮಿಕ್ಕೆಲ್ಲ ವಿಷಯಗಳಲ್ಲಿ ಇದು ದೇವರಾಯನ ನಾಣ್ಯವನ್ನು ಹೋಲುತ್ತದೆ.

ಮು : ಚುಕ್ಕೆಗಳಿಂದ ಮಾಡಿದ ವೃತ್ತದೊಳಗೆ ಬಲಕ್ಕಿರುವ ನಂದಿ; ಮುಂಭಾಗದಲ್ಲಿ ದೇ ಎನ್ನುವ ಅಕ್ಷರ; ಮೇಲ್ಗಡೆ ಸೂರ್ಯ-ಚಂದ್ರರು

ಹಿ : ಚುಕ್ಕೆಗಳಿಂದ ಮಾಡಿದ ವೃತ್ತದೊಳಗೆ ಮೂರು ಸಾಲುಗಳ ನಾಗರೀ ಬರಹ

ಶ್ರೀ

ನೀಲಕಂ

ಠ

ದೇವರಾಯನು ನಂದಿ ನಮೂನೆಯ ನಾಣ್ಯಗಳ ಜೊತೆಗೆ ಗರುಡ ನಮೂನೆಯ ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಇದರ ತೂಕ 160 ಗ್ರೇನ್; ಅಗಲ 0.8”.

ಮು : ಅಂಜಲಿ ಮುದ್ರೆಯಲ್ಲಿ ನಿಂತಿರುವ ಗರುಡ; ಅಕ್ಕಪಕ್ಕಗಳಲ್ಲಿ ಶಂಖ ಮತ್ತು ಚಕ್ರ; ಕನ್ನಡ ಬರಹ ದೇವ

ಹಿ : ಮೂರು ಸಾಲುಗಳ ನಾಗರೀ ಬರಹ; ಸೂರ್ಯ-ಚಂದ್ರರು

ಶ್ರೀ ಪ್ರತಾ

ಪ ದೇವ

ರಾಯ

ಗರುಡ ನಮೂನೆಯ ನಾಣ್ಯದಲ್ಲಿ ಇನ್ನೊಂದು ಭಿನ್ನತೆಯನ್ನು ಕಾಣಬಹುದು. ಈ ನಾಣ್ಯದ ತೂಕ 260 ಗ್ರೇನ್; ಅಗಲ 0.8”.

ಮು : ನಿಂತಿರುವ ಗರುಡ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ

ಪ್ರತಾಪ ದೇವ

ರಾಯ

ಕೊನೆಯದಾಗಿ ಒಂದು ಹೊಸ ನಮೂನೆಯ ತಾಮ್ರದ ನಾಣ್ಯವನ್ನು ವಿವರಿಸಬೇಕು. ಇದರ ತೂಕ 3.1 ಗ್ರಾಂ, ಅಳತೆ 0.6”.

ಮು : ನಾಗರೀ ಬರಹ

ಶ್ರೀ ಪ್ರತಾಪ

ಹಿ : ನಾಗರೀ ಬರಹ

ದೇವರಾಯ

ಈ ನಾಣ್ಯದ ವೈಶಿಷ್ಟ್ಯವೆಂದರೆ, ಇದರ ಎರಡೂ ಮುಖಗಳಲ್ಲಿ ಬರಹವಿರುವುದು. ಇತರ ಚಿಹ್ನೆಗಳಿಲ್ಲ. ಈ ದೃಷ್ಟಿಯಿಂದ ಇದು ಅಪರೂಪದ ನಾಣ್ಯ.

ವಿಜಯರಾಯ

ವಿಜಯರಾಯನ ಒಂದು ನಮೂನೆಯ ತಾಮ್ರದ ನಾಣ್ಯ ಮಾತ್ರ ದೊರಕಿದೆ. ಇದು ದೇವರಾಯ ನಾಣ್ಯದ ಮಾದರಿಯಲ್ಲಿಯೇ ಇದೆ. ಆದರೆ ಬರಹ ಭಿನ್ನವಾಗಿದೆ. ಇದರ ತೂಕ 40 ಗ್ರೇನ್; ಅಗಲ 0.6".

ಮು : ಎಡಕ್ಕಿರುವ ನಂದಿ; ಮೇಲೆ ಸೂರ್ಯ-ಚಂದ್ರರು

ಹಿ : ಎರಡು ಸಾಲುಗಳ ಕನ್ನಡ ಬರಹ

ಶ್ರೀ ಜಯ

ರಾಯ

ರಾಮಚಂದ್ರ (ಕ್ರಿ.ಶ. 1422-1423)

ಉದಯಗಿರಿ ರಾಜ್ಯದಲ್ಲಿ ರಾಜ್ಯಪಾಲನಾಗಿದ್ದ ರಾಮಚಂದ್ರರಾಯನ ಚಿನ್ನದ ನಾಣ್ಯಗಳನ್ನು ನಿತ್ಯಾನಂದ ಪೈ ಬೆಳಕಿಗೆ ತಂದಿದ್ದಾರೆ. ತೂಕ 52 ಗ್ರೇನ್, ಅಳತೆ 0.5".

ಮು : ಕುಳಿತಿರುವ ಲಕ್ಷ್ಮೀನಾರಾಯಣ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪ ರಾಮ

ಚಂದ್ರ

ಇದೇ ದೊರೆಯ ತಾಮ್ರದ ನಾಣ್ಯದಲ್ಲಿ ಎಡಕ್ಕೆ ಚಲಿಸುತ್ತಿರುವ ಆನೆ; ಹಿಮ್ಮುಖದಲ್ಲಿ ಶ್ರೀ ಪ್ರತಾಪ ರಾಮಚಂದ್ರ ಎಂಬ ನಾಗರೀ ಬರಹವಿದೆ.



ಇಮ್ಮಡಿ ದೇವರಾಯ (ಕ್ರಿ.ಶ. 1424-1446)

ವಿಜಯನಗರದ ದೊರೆಗಳಲ್ಲಿ ಇಮ್ಮಡಿ ದೇವರಾಯನು ಪ್ರಸಿದ್ಧ. ರಾಜರಲ್ಲಿ ಒಬ್ಬನು ಇವನ ಕಾಲದಲ್ಲಿ ಅಬ್ದುಲ್ ರಜಾಕ್ ಎಂಬ ಯಾತ್ರಿಕನು ವಿಜಯನಗರದಲ್ಲಿ ಸಂಚಾರಮಾಡಿ ತಾನು ನೋಡಿದ ವಿಷಯಗಳನ್ನು ಚೆನ್ನಾಗಿ ದಾಖಲಿಸಿದ್ದಾನೆ. ಈ ಕಾಲದ ನಾಣ್ಯ ಪದ್ಧತಿಯ ಬಗೆಗೂ ಅಬ್ದುಲ್ ರಜಾಕ್ ಮಾಹಿತಿ ಒದಗಿಸಿದ್ದಾನೆ. ದೇವರಾಯನು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ನಾಣ್ಯಗಳನ್ನು ಅಚ್ಚು ಹಾಕಿಸಿದರು. ಅವುಗಳ ಹೆಸರು ಮತ್ತು ಪರಸ್ಪರ ಮೌಲ್ಯ ಹೀಗಿದೆ :

1 ವರಹ = 2 ಪರ್ತಬ್ (ಅರ್ಧ ವರಹ)

1 ಪರ್ತಬ್ = 10 ಚಿನ್ನದ ಪಣಗಳು

1 ಪಣ = 6 ಬೆಳ್ಳಿಯ ತಾರ

1 ತಾರ = 3 ತಾಮ್ರದ ಜಿತಲ್

ಅಬ್ದುಲ್ ರಜಾಕ್ ಹೆಸರಿಸಿರುವ ಈ ನಾಣ್ಯಗಳ ಜೊತೆಗೆ ಕಾಲು ವರಹದ ನಾಣ್ಯವೂ ದೊರಕಿದೆ. ದೇವರಾಯನು ತನ್ನ ಹಿಂದಿನವರು ಟಂಕಿಸಿದ್ದ ನಾಣ್ಯಗಳನ್ನು ಮುಂದುವರಿಸಿದ್ದು ಮಾತ್ರವಲ್ಲದೆ, ತಾನೇ ಕೆಲವು ಹೊಸ ನಮೂನೆಯ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಇವನಿಗೆ ಆನೆಗಳ ವಿಷಯದಲ್ಲಿದ್ದ ಆಸಕ್ತಿಯು ಇವನ ನಾಣ್ಯಗಳಲ್ಲಿ ಪ್ರತಿಬಿಂಬಿತವಾಗಿದೆ. ಈ ಸಂಬಂಧವಾದ 'ಗಜಬೇಟೆಕಾರ' ಮತ್ತು 'ಗಜಗಂಡಭೇರುಂಡ' ಎಂಬ ಬಿರುದುಗಳನ್ನು ತನ್ನ ನಾಣ್ಯಗಳ ಮೇಲೆ ಬರಹವಾಗಿ ಹಾಕಿಸಿದ್ದು, ಇವನ ನಾಣ್ಯಗಳ ವೈಶಿಷ್ಟ್ಯ. ಸಾಮಾನ್ಯವಾಗಿ ಹೇಳುವುದಾದರೆ ಈ ರೀತಿಯ ಬಿರುದುಗಳನ್ನು ಇತರ ಯಾವ ವಿಜಯನಗರದ ಅರಸರೂ ತಮ್ಮ ನಾಣ್ಯಗಳ ಮೇಲೆ ಅಳವಡಿಸಲಿಲ್ಲ.

ಇವನ ಚಿನ್ನದ ನಾಣ್ಯದ ತೂಕ 12.2 ಗ್ರೇನ್; ಅಗಲ 0.3". ಇದು ಕಾಲು ವರಹ ನಾಣ್ಯ.

ಮು : ವೃತ್ತದೊಳಗೆ ಎಡಕ್ಕೆ ಚಲಿಸುತ್ತಿರುವ ಆನೆ; ಮೇಲೆ ಸೂರ್ಯ-ಚಂದ್ರರು

ಹಿ : ಎರಡು ಸಾಲುಗಳ ನಾಗರೀ ಬರಹ; ಮಧ್ಯೆ ಗೆರೆಗಳು

ಶ್ರೀ ದೇ

ವರಾಯ





ಈ ನಮೂನೆಯ ನಾಣ್ಯಗಳಲ್ಲಿ ಅನೇಕ ಸಣ್ಣ ಪುಟ್ಟ ಪ್ರಭೇದಗಳನ್ನು ಕಾಣಬಹುದು. ಆನೆಯು ಎಡ ಅಥವಾ ಬಲಕ್ಕೆ ಚಲಿಸುವಂತೆ ತೋರಿಸುವುದು ಸಾಮಾನ್ಯ. ಕೆಲವು ನಾಣ್ಯಗಳಲ್ಲಿ ಆನೆಯ ಮೇಲ್ಭಾಗದಲ್ಲಿ ಇಲ್ಲವೆ ಕೆಳಭಾಗದಲ್ಲಿ ಖಡ್ಗವಿರುತ್ತದೆ. ಸಾಮಾನ್ಯವಾಗಿ ಆನೆಯು ಮೇಲು ಹೊದಿಕೆ ಮತ್ತು ಗಂಟೆಗಳ ಸರದಿಂದ ಅಲಂಕೃತವಾಗಿರುತ್ತದೆ. ಇದರಲ್ಲಿ ವೈವಿಧ್ಯ ಕಾಣಬರುತ್ತದೆ. ಅದೇ ರೀತಿ ಹಿಮ್ಮುಖದ ಬರಹದಲ್ಲಿಯೂ ವೈವಿಧ್ಯ ಕಂಡುಬರುತ್ತದೆ. ಕೆಲವು ನಾಣ್ಯಗಳಲ್ಲಿ ಬರಹದ ಜೊತೆಗೆ ಖಡ್ಗ ಅಥವಾ ಅಂಕುಶವಿರುವುದೂ ಉಂಟು.


ಇವನ ಬೆಳ್ಳಿಯ ನಾಣ್ಯಗಳು ಎರಡು ನಮೂನೆಗಳಲ್ಲಿ ದೊರಕಿವೆ. ಇವುಗಳನ್ನೇ ನಾವು ತಾರ ಎಂದು ಭಾವಿಸಬೇಕು. ಮೊದಲನೆಯ ನಾಣ್ಯದ ತೂಕ 4 ಗ್ರೇನ್; ಅಗಲ 0.4".

ಮು : ವೃತ್ತದೊಳಗೆ ಬಲಕ್ಕೆ ಚಲಿಸುತ್ತಿರುವ ಆನೆ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀದೇವ

ವರಾಯ



ಈ ನಮೂನೆಯ ನಾಣ್ಯಗಳಲ್ಲಿ ಆನೆಯು ಬಲಕ್ಕೆ ಅಥವಾ ಎಡಕ್ಕೆ ಚಲಿಸುವಂತೆ ವಿನ್ಯಾಸಗೊಳಿಸಲಾಗಿರುವುದನ್ನು ಕಾಣಬಹುದು. ಕೆಲವು ನಾಣ್ಯಗಳಲ್ಲಿ ಆನೆಯ ಮೇಲೆ ಖಡ್ಗವಿರುತ್ತದೆ. ಮತ್ತೆ ಕೆಲವು ನಾಣ್ಯಗಳ ಹಿಮ್ಮುಖದಲ್ಲಿ ಬರಹದ ಮುಂದೆ ಖಡ್ಗವಿರುತ್ತದೆ.

ಎರಡನೆಯ ನಮೂನೆಯ ಬೆಳ್ಳಿಯ ನಾಣ್ಯ ಮುಖ್ಯವಾದುದು. ಇದರಲ್ಲಿ ನಾಣ್ಯದ ಹೆಸರು ಮತ್ತು ಮೌಲ್ಯದ ಉಲ್ಲೇಖವಿದೆ. ಇಮ್ಮಡಿ ಹರಿಹರನು ಆರಂಭಿಸಿದ ಈ ನಮೂನೆಯನ್ನು ಇಮ್ಮಡಿ ದೇವರಾಯನು ಮುಂದುವರಿಸಿದನು.

ಮು : ಚುಕ್ಕೆಗಳಿಂದ ವಿನ್ಯಾಸಗೊಳಿಸಿದ ಆನೆ; ಮೇಲ್ಭಾಗದಲ್ಲಿ ಕಮಾನಿನಲ್ಲಿ ಖಡ್ಗ

ಹಿ : 'ಹ' ಎಂಬ ನಾಗರೀ ಅಕ್ಷರ; ಅದರ ಮುಂದೆ ಎರಡೂವರೆ ಎನ್ನುವ ಸಂಖ್ಯೆ (ಎರಡು ಎನ್ನುವ ಸಂಖ್ಯೆ ಬರೆದು ಮುಂದೆ ಎರಡು ಲಂಬ ರೇಖೆಗಳನ್ನು ಬರೆಯಲಾಗಿದೆ).



ಈ ನಾಣ್ಯದ ಮೇಲೆ ದೇವರಾಯ ಎಂಬ ಬರಹವಿಲ್ಲ. ಆದರೆ ಮುಮ್ಮುಖದಲ್ಲಿ ಆನೆಯ ಚಿತ್ರ ಹಾಗೂ ಖಡ್ಗವಿರುವುದರಿಂದ, ನಮೂನೆಯ ಆಧಾರದ ಮೇಲೆ ಈ ನಾಣ್ಯವು ಇಮ್ಮಡಿ ದೇವರಾಯನಿಗೆ ಸೇರಿದ್ದೆಂದು ಭಾವಿಸಲಾಗಿದೆ. ಹಿಮ್ಮುಖದ ಬರಹದ ಆಧಾರದ ಮೇಲೆ ಇದು ಬೆಳ್ಳಿಯ ಎರಡೂವರೆ ಹಣ ಮೌಲ್ಯದ ನಾಣ್ಯವೆಂದು ತೀರ್ಮಾನಿಸಬಹುದು. ಇದೇ ನಮೂನೆಯ 'ಹ ಒಂದೂ ಕಾಲು' ಎನ್ನುವ ಬರಹ - ಸಂಖ್ಯೆಯಿರುವ ನಾಣ್ಯಗಳೂ ದೊರಕಿವೆ. ಇವುಗಳ ಮುಮ್ಮುಖದಲ್ಲಿ ಆನೆಯ ಚಿತ್ರವಿದೆ.

ಇಮ್ಮಡಿ ದೇವರಾಯನ ತಾಮ್ರದ ನಾಣ್ಯಗಳಲ್ಲಿ ವೈವಿಧ್ಯವನ್ನು ಕಾಣಬಹುದು. ಅವುಗಳ ಮೇಲೆ ವಿವಿಧ ವಿನ್ಯಾಸದ ಆನೆ, ಕನ್ನಡ ಅಥವಾ ನಾಗರೀ ಲಿಪಿಯ ಬರಹಗಳು ಮತ್ತು ಕೆಲವು ಚಿಹ್ನೆಗಳು ಕಂಡುಬರುತ್ತವೆ.

ಮು : ಚುಕ್ಕೆಗಳಿಂದ ಮಾಡಿದ ವೃತ್ತದೊಳಗೆ ಗೆರೆಗಳಿಂದ ವಿನ್ಯಾಸಗೊಳಿಸಿದ ಎರಡು ಸಮಾನಾಂತರ ವೃತ್ತಗಳು; ಅದರೊಳಗೆ ಬಲಕ್ಕೆ ಚಲಿಸುತ್ತಿರುವ ಆನೆ; ಮೇಲ್ಭಾಗದಲ್ಲಿ ಕನ್ನಡ ಅಕ್ಷರ 'ಲ'

ಬಿ : ಬಿಂದುಗಳ ವೃತ್ತದೊಳಗೆ ಮೂರು ಸಾಲುಗಳ ಕನ್ನಡ ಬರಹ

ಶ್ರೀ ದೇ

ವರಾ

ಯ

ಇನ್ನೊಂದು ನಮೂನೆಯ ನಾಣ್ಯದಲ್ಲಿ ಮುಮ್ಮುಖವು ಮೇಲಿನ ನಾಣ್ಯದಂತೆಯೇ ಇದೆ. ಆದರೆ ಹಿಮ್ಮುಖದಲ್ಲಿ ವ್ಯತ್ಯಾಸ ಕಾಣಬರುತ್ತದೆ.

ಮು : ಮೇಲಿನ ನಾಣ್ಯದಲ್ಲಿರುವಂತೆ

ಹಿ : ಮಧ್ಯದಲ್ಲಿ ಖಡ್ಗ; ಎಡಕ್ಕೆ ಶಂಖ; ಬಲಕ್ಕೆ ಚಕ್ರ; ಇದರ ಮೇಲೆ ಕನ್ನಡ ಬರಹ

ಶ್ರೀ ದೇವ

ರಾಯ

ಇನ್ನೊಂದು ನಮೂನೆಯ ನಾಣ್ಯದಲ್ಲಿ ಕೆಲವು ಭಿನ್ನತೆಗಳಿವೆ

ಮು : ಬಿಂದುಗಳ ವೃತ್ತದಲ್ಲಿ ಎಡಕ್ಕೆ ಚಲಿಸುತ್ತಿರುವ ಮತ್ತು ಬಾಲವನ್ನು ಮೇಲೆತ್ತಿಕೊಂಡಿರುವ ಅಲಂಕೃತ ಆನೆ

ಹಿ : ಬಿಂದುಗಳ ವೃತ್ತದೊಳಗೆ ಅಡ್ಡ ಗೆರೆಗಳಿರುವ ಮೂರು ಸಾಲುಗಳ ಕನ್ನಡ ಬರಹ

ಪ್ರತಾ

ಪ ದೇವ

ರಾಯ

ಮತ್ತೊಂದು ನಮೂನೆಯ ತಾಮ್ರದ ನಾಣ್ಯದಲ್ಲಿ ಇನ್ನೂ ಕೆಲವು ಹೊಸ ಲಕ್ಷಣಗಳಿವೆ.

ಮು : ಬಿಂದುಗಳ ವೃತ್ತದಲ್ಲಿ ಬಲಕ್ಕೆ ಚಲಿಸುತ್ತಿರುವ ಆನೆ; ಮೇಲೆ ಖಡ್ಗ ಮತ್ತು ನಾಗರೀ ಬರಹ 'ಗಜಂ'

ಹಿ : ಮೂರು ಸಾಲುಗಳ ಅಡ್ಡ ಗೆರೆಯಿರುವ ನಾಗರೀ ಬರಹ

ಶ್ರೀ ಪ್ರ

ತಾಪ ದೇವ

ರಾಯ

ಇನ್ನೊಂದು ನಮೂನೆಯ ನಾಣ್ಯ ಹೆಚ್ಚು ಆಕರ್ಷಕವಾಗಿದೆ.

ಮು : ಕೊರಳಿಗೆ ಸರಪಳಿ ಹಾಕಿರುವ, ಅಲಂಕೃತವಾಗಿರುವ, ಬಲಕ್ಕೆ ಚಲಿಸುತ್ತಿರುವ ಆನೆ; ಅದರ ಸೊಂಡಿಲಿನಲ್ಲಿ ಕತ್ತಿ; ಮೇಲ್ಭಾಗದಲ್ಲಿ ನಾಗರೀ ಅಕ್ಷರ 'ದೇ' ಮತ್ತು ಹತ್ತು ಬಿಂದುಗಳು

ಹಿ : ಅಡ್ಡ ಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ರಾಯ

ಗಜಗಣ್ಡ

ಬೇರುಣ್ಡ

ಈ ನಮೂನೆಯ ನಾಣ್ಯಗಳಲ್ಲಿ ಕೆಲವು ಪ್ರಭೇದಗಳಿವೆ. ಒಂದು ನಾಣ್ಯದಲ್ಲಿ ಮುಮ್ಮುಖದಲ್ಲಿ ಮೇಲಿನ ನಾಣ್ಯದಲ್ಲಿರುವಂತೆ ಆನೆಯಿದೆ. ಜೊತೆಗೆ ಸೂರ್ಯ-ಚಂದ್ರರನ್ನು ಕಾಣಬಹುದು. ಹಿಮ್ಮುಖದಲ್ಲಿ ಬರಹದ ಮೇಲೆ ಖಡ್ಗವಿದೆ. ಇನ್ನೊಂದು ನಾಣ್ಯದಲ್ಲಿ ಮುಮ್ಮುಖದಲ್ಲಿ ಬಲಕ್ಕೆ ಚಲಿಸುತ್ತಿರುವ ಆನೆ ಬಾಲವನ್ನು ಮೇಲೆತ್ತಿಕೊಂಡಿದೆ. ಇತರ ಯಾವ ಚಿಹ್ನೆಗಳೂ ಇಲ್ಲ. ಹಿಮ್ಮುಖದಲ್ಲಿ ರಾಯ ಗಜಗಣ್ಡಬೇರುಣ್ಡ ಎಂಬ ಬರಹ ಮಾತ್ರವಿದೆ; ಖಡ್ಗವಿಲ್ಲ.

ಇನ್ನೊಂದು ನಮೂನೆಯ ನಾಣ್ಯದಲ್ಲಿ ಬರಹದಲ್ಲಿ ಬದಲಾವಣೆಯಿದೆ.

ಮು : ಬಲಕ್ಕೆ ಚಲಿಸುತ್ತಿರುವ ಆನೆ; ಮೇಲೆ ಸೂರ್ಯ

ಹಿ : ಅಡ್ಡ ರೇಖೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ದೇವ

ರಾಯ ಗಜವೇ

ಟೆಕಾರ

ಈ ನಮೂನೆಯ ನಾಣ್ಯಗಳಲ್ಲಿ ಸಣ್ಣ ಪುಟ್ಟ ಭಿನ್ನತೆಗಳನ್ನು ತೋರಿಸುವ ಅನೇಕ ಪ್ರಭೇದಗಳಿವೆ.

ಮು : ಎಡಕ್ಕೆ ಚಲಿಸುತ್ತಿರುವ ಆನೆ; ಮೇಲ್ಭಾಗದಲ್ಲಿ ಶಂಖ-ಚಕ್ರ

ಹಿ : ಸೂರ್ಯ-ಚಂದ್ರರು; ಖಡ್ಗ ಮತ್ತು ಎರಡು ಸಾಲುಗಳ ಕನ್ನಡ ಬರಹ

ಗಜಬೇ

ಟೆಕಾರ

ಇದೇ ನಮೂನೆಯ ಇನ್ನೊಂದು ನಾಣ್ಯದಲ್ಲಿ ಈ ಬದಲಾವಣೆಗಳನ್ನು ಗಮನಿಸಬಹುದು.

ಮು : ಚಲಿಸುತ್ತಿರುವ ಆನೆ; ಶಂಖ-ಚಕ್ರ ಮತ್ತು ಖಡ್ಗ

ಹಿ : ಮೂರು ಸಾಲುಗಳ ನಾಗರೀ ಬರಹ

ಗಜಬೇ

ಟೆಕಾರ ಶ್ರೀ

ದೇವರಾಯ



ಇದೇ ನಮೂನೆಯ ಇನ್ನೊಂದು ನಾಣ್ಯದಲ್ಲಿ ಬರಹದಲ್ಲಿ ಸ್ವಲ್ಪ ಬದಲಾವಣೆಯಿದೆ.

ಮು : ಬಲಕ್ಕೆ ಚಲಿಸುತ್ತಿರುವ ಆನೆ; ಸೂರ್ಯ

ಹಿ : ಅಡ್ಡ ಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ದೇವ

ರಾಯ ಗಜ

ಬೇಟೆಕಾರ

ಇಮ್ಮಡಿ ದೇವರಾಯನು ಆನೆಯ ನಮೂನೆಯ ನಾಣ್ಯವಲ್ಲದೆ ಶಿವ-ಪಾರ್ವತಿ ನಮೂನೆಯ ನಾಣ್ಯಗಳನ್ನೂ ಅಚ್ಚು ಮಾಡಿಸಿದನು; ತನ್ನ ಹಿಂದಿನವರ ನಮೂನೆಯನ್ನೇ ಮುಂದುವರಿಸಿದನು.

ಮು : ಕುಳಿತಿರುವ ಶಿವ ಮತ್ತು ಪಾರ್ವತಿ; ಶಿವನ ಕೈಗಳಲ್ಲಿ ತ್ರಿಶೂಲ, ಪರಶು ಮತ್ತು ಡಮರು

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪ ದೇವ

ರಾಯ

ಇಮ್ಮಡಿ ವಿಜಯರಾಯ

ಈ ದೊರೆಯ ಒಂದೇ ಒಂದು ನಮೂನೆಯ ತಾಮ್ರದ ನಾಣ್ಯ ಮಾತ್ರ ದೊರಕಿದೆ. ಈ ನಾಣ್ಯದ ರೂಪ ಮತ್ತು ತಾಂತ್ರಿಕ ಕೌಶಲವನ್ನು ಗಮನಿಸಿದರೆ, ಇದು ಇಮ್ಮಡಿ ದೇವರಾಯನ ಕಾಲಕ್ಕಿಂತ ಅನಂತರದ್ದೆಂದು ಗೊತ್ತಾಗುವುದರಿಂದ ಈ ನಾಣ್ಯವನ್ನು ಇಮ್ಮಡಿ ವಿಜಯರಾಯನಿಗೆ ಸೇರಿದ್ದೆಂದು ಭಾವಿಸಲಾಗಿದೆ. ಇದರ ತೂಕ 30 ಗ್ರೇನ್; ಅಗಲ 0.6".

ಮು : ಬಿಂದುಗಳ ವೃತ್ತದಲ್ಲಿ ಸೊಂಡಿಲು ಮತ್ತು ಬಾಲವನ್ನು ಮೇಲೆತ್ತಿಕೊಂಡಿರುವ ಹಾಗೂ ಎಡಕ್ಕೆ ಚಲಿಸುತ್ತಿರುವ ಆನೆ; ಮೇಲೆ ಶಂಖ-ಚಕ್ರ

ಹಿ : ಬಿಂದುಗಳ ವೃತ್ತದಲ್ಲಿ ಎರಡು ಸಾಲುಗಳ ಕನ್ನಡ ಬರಹ; ಮೇಲೆ ಸೂರ್ಯ, ಖಡ್ಗ ಮತ್ತು ಚಂದ್ರ

ವಿಜ

ಯರಾಯ

ಮಲ್ಲಿಕಾರ್ಜುನರಾಯ

ಇವನು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದನೆಂದು ತಿಳಿದುಬಂದಿದೆ. ಹೆರಾಸ್ ಅವರು ಕೆಲವು ಚಿನ್ನದ ನಾಣ್ಯಗಳನ್ನು ಪತ್ತೆ ಮಾಡಿದರು. ಇವು ಎರಡು ತೂಕಗಳಲ್ಲಿ ಕಂಡುಬಂದಿವೆ. ಮೊದಲನೆಯದು ಸುಮಾರು 57 ಗ್ರೇನ್ ತೂಗಿದರೆ ಎರಡನೆಯದರ ತೂಕ 5.5 ಗ್ರೇನ್. ವಿಜಯನಗರ ಚಿನ್ನದ ನಾಣ್ಯಗಳ ತೂಕವನ್ನು ಅನುಸರಿಸಿ ಹೇಳುವುದಾದರೆ ಕ್ರಮವಾಗಿ ಇವು ವರಹ ಮತ್ತು ಪಣ ಎಂಬ ಮೌಲ್ಯದ ನಾಣ್ಯಗಳಾಗುತ್ತವೆ. ಈ ರೀತಿಯ ನಾಣ್ಯಗಳು ಬಳ್ಳಾರಿ-ಧಾರವಾಡ ಪ್ರದೇಶದಲ್ಲಿ ವಿಶೇಷವಾಗಿ ದೊರಕಿವೆ. ಸ್ಥಳೀಯವಾಗಿ ಈ ನಾಣ್ಯಗಳನ್ನು ಆನೆಗೊಂದಿ ಅಥವಾ ಗಜಪತಿ ನಾಣ್ಯಗಳೆಂದು ಕರೆಯಲಾಗಿದೆ. ಆದರೆ ಇವು ಗಜಪತಿ ದೊರೆಗಳ ನಾಣ್ಯಗಳಲ್ಲ. ಮಲ್ಲಿಕಾರ್ಜುನನಿಗೂ ಆನೆಯ ಕ್ರೀಡೆಗಳಲ್ಲಿ ವಿಶೇಷ ಆಸಕ್ತಿಯಿದ್ದಿತೆಂದು ಅವನ ಶಾಸನಗಳಿಂದ ತಿಳಿದುಬರುತ್ತದೆ. ಆದುದರಿಂದ ಆನೆಯ ಚಿತ್ರವಿರುವ ಚಿನ್ನದ ನಾಣ್ಯಗಳನ್ನು, ಅಂದರೆ ವರಹ ಮತ್ತು ಪಣ ಮೌಲ್ಯಗಳಲ್ಲಿ ಮಲ್ಲಿಕಾರ್ಜುನನು ಅಚ್ಚುಹಾಕಿಸಿದನೆಂದು ಹೇಳಬೇಕಾಗುತ್ತದೆ.

ಇತ್ತೀಚೆಗೆ ಇವನ ಬೆಳ್ಳಿಯ ನಾಣ್ಯಗಳು ಬೆಳಕಿಗೆ ಬಂದಿವೆ. ಒಂದು ನಮೂನೆಯ ನಾಣ್ಯದ ತೂಕ 4 ಗ್ರೇನ್; ಅಗಲ 0.3".

ಮು : ಬಿಂದುಗಳ ವೃತ್ತದೊಳಗೆ ಗೆರೆಯಿಂದ ವಿನ್ಯಾಸಗೊಳಿಸಿದ ವೃತ್ತ; ಅದರೊಳಗೆ ಎಡಕ್ಕೆ ಚಲಿಸುತ್ತಿರುವ ಮತ್ತು ಬಾಲವನ್ನು ಮೇಲೆತ್ತಿರುವ ಆನೆ; ಮೇಲ್ಭಾಗದಲ್ಲಿ 'ಶ್ರೀ' ಎಂಬ ಕನ್ನಡ ಅಕ್ಷರ


ಹಿ : ಮೇಲಿನ ವಿನ್ಯಾಸದ ವೃತ್ತದೊಳಗೆ ಮೂರು ಸಾಲುಗಳ ಕನ್ನಡ ಬರಹ

ಮಲಿ

ಕಾರ್ಜುನರಾ

ಯರು

ಆನೆ ನಮೂನೆಯ ನಾಣ್ಯದ ಜೊತೆಗೆ ಮಲ್ಲಿಕಾರ್ಜುನರಾಯನು ಬೆಳ್ಳಿಯಲ್ಲಿ ನಂದಿ ನಮೂನೆಯ ನಾಣ್ಯವನ್ನೂ ಅಚ್ಚು ಹಾಕಿಸಿದನು. ಈ ನಾಣ್ಯದ ತೂಕ 4 ಗ್ರೇನ್; ಅಗಲ 0.3".



ಮು : ಎಡಕ್ಕಿರುವ ನಂದಿ; ಮೇಲೆ ಸೂರ್ಯ-ಚಂದ್ರ

ಹಿ : ಖಡ್ಗ; ಅದರ ಮುಂದೆ ಮೂರು ಸಾಲುಗಳ ನಾಗರೀ ಬರಹ

ಮಲಿ

ಕಾರ್ಜುನ

ರಾಯ

ಇವನಿಗೆ ಸೇರಿದ ಇನ್ನೊಂದು ತಾಮ್ರದ ನಾಣ್ಯವನ್ನು ಗಮನಿಸಬೇಕು. ಇದರ ತೂಕ 3.5 ಗ್ರಾಂ; ಅಗಲ 0.7".

ಮು : ಸ್ತ್ರೀ ದೇವತೆಯ ಚಿತ್ರ; ಕೆಳಗೆ ಪಂಪಾ ಎನ್ನುವ ನಾಗರೀ ಬರಹ

ಹಿ : ಮೂರು ಸಾಲುಗಳ ನಾಗರೀ ಬರಹ, ಮಲ್ಲಿಕಾರ್ಜುನ, ಮುಮ್ಮುಖದಲ್ಲಿ ಕಾಣಬರುವ ಸ್ತ್ರೀ ದೇವತೆಯನ್ನು ಬರಹದ ಆಧಾರದ ಮೇಲೆ ಪಂಪಾದೇವಿ ಎಂದು ಭಾವಿಸಲಾಗಿದೆ. ಆದುದರಿಂದ ಇದೊಂದು ಗಮನಾರ್ಹ ನಾಣ್ಯ.

ಇಮ್ಮಡಿ ದೇವರಾಯನು ಖ್ಯಾತ ದೊರೆಯಾಗಿದ್ದುದರಿಂದ, ಅವನ ನಂತರ ಆಳಿದ ಮಲಿಕಾರ್ಜುನನು ಇಮ್ಮಡಿದೇವರಾಯ ಎಂಬ ಬಿರುದನ್ನು ಧರಿಸಿದನು ಎಂದು ಶಾಸನಗಳಿಂದ ಗೊತ್ತಾಗುತ್ತದೆ. ಆದುದರಿಂದ ಈ ಬಿರುದನ್ನು ಬರಹವನ್ನಾಗಿ ಹೊಂದಿದ ತಾಮ್ರದ ನಾಣ್ಯಗಳು ಮಲ್ಲಿಕಾರ್ಜುನನಿಗೆ ಸೇರಿದ್ದೆಂದು ಭಾವಿಸಲಾಗಿದೆ. ಈ ನಾಣ್ಯದ ತೂಕ 20 ಗ್ರೇನ್; ಅಗಲ 0.4".

ಮು : ಬಲಕ್ಕೆ ಚಲಿಸುತ್ತಿರುವ ಹಾಗೂ ಬಾಲವನ್ನು ಮೇಲೆತ್ತಿರುವ ಆನೆ

ಹಿ : ಮೂರು ಸಾಲುಗಳ ಕನ್ನಡ ಬರಹ

ಯಿಮ

ಡಿ ದೇವ

ರಾಯ

ಮಲ್ಲಿಕಾರ್ಜುನ ಈ ತಾಮ್ರದ ನಾಣ್ಯಗಳು ಕಲಾತ್ಮಕವಾಗಿರದೆ ಒರಟಾಗಿದ್ದು, ಇಮ್ಮಡಿ ದೇವರಾಯನ ನಾಣ್ಯಗಳಿಗಿಂತ ತುಂಬ ಭಿನ್ನವಾಗಿ ಕಾಣಿಸುತ್ತವೆ ಎಂಬುದನ್ನು ಗಮನಿಸಬೇಕು.

ವೀರ ನರಸಿಂಹ (ಕ್ರಿ.ಶ. 1505-1509)

ವೀರ ನರಸಿಂಹನ ನಾಣ್ಯಗಳು ಇತ್ತೀಚಿನವರೆಗೆ ದೊರಕಿರಲಿಲ್ಲವಾದುದರಿಂದ ತುಳುವ ಮನೆತನದ ನಾಣ್ಯಗಳನ್ನು ಆರಂಭಿಸಿದವನು ಕೃಷ್ಣದೇವರಾಯನೆಂದು ಭಾವಿಸಲಾಗಿತ್ತು. ಆದರೆ ಇತ್ತೀಚೆಗೆ ಇವನ ನಾಣ್ಯಗಳು ದೊರಕಿವೆ. ತಲಕಾಡಿನ ಉತ್ಖನನದಲ್ಲಿ ವಿಜಯನಗರ ಸಂಸ್ಕೃತಿಯ ಸ್ತರಗಳಲ್ಲಿ ಈ ದೊರೆಯ ತಾಮ್ರದ ನಾಣ್ಯವು ದೊರಕಿದ್ದು ಇದು ಮಹತ್ವದ್ದೆನಿಸಿದೆ. ಈ ನಾಣ್ಯದ ತೂಕ 51 ಗ್ರೇನ್; ಅಗಲ 0.6".

ಮು : ಮೇಲಕ್ಕೆ ಬಾಲವನ್ನು ಎತ್ತಿಕೊಂಡಿರುವ ಸಿಂಹ

ಹಿ : ಮೂರು ಸಾಲುಗಳ ನಾಗರೀ ಬರಹ

ಪ್ರತಾಪ

ನರ

ಸಿಂಹ

ಇದೇ ನಮೂನೆಗೆ ಸೇರಿದ ಇನ್ನೊಂದು ತಾಮ್ರದ ನಾಣ್ಯ ಸ್ವಲ್ಪ ಭಿನ್ನವಾಗಿದೆ. ಇದರ ತೂಕ 40 ಗ್ರೇನ್; ಅಗಲ 0.6".

ಮು : ವೃತ್ತದೊಳಗೆ ನಿಂತಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ

ನರ

ಸಿಂಹ


ಇನ್ನೊಂದು ನಮೂನೆಯ ನಾಣ್ಯದಲ್ಲಿ ಮುಮ್ಮುಖದಲ್ಲಿ ನರಸಿಂಹನ ಚಿತ್ರವಿದೆ. ಇದರ ತೂಕ 50 ಗ್ರೇನ್; ಅಗಲ 0.6".

ಮು : ವೃತ್ತದೊಳಗೆ ಕುಳಿತಿರುವ ನರಸಿಂಹ

ಹಿ : ಅಡ್ಡ ಗೆರೆಯಿರುವ ಎರಡು ಸಾಲುಗಳ ನಾಗರೀ ಬರಹ

ನರ

ಸಿಂಹ



ಈ ಮೇಲಿನ ನಾಣ್ಯಗಳು ಕೃಷ್ಣದೇವರಾಯನ ನಾಣ್ಯ ನಮೂನೆಗೆ ಸಮೀಪವಾಗಿರುವುದರಿಂದ, ಕೃಷ್ಣದೇವರಾಯನಿಗಿಂತ ಮೊದಲು ಆಳಿದ ತುಳುವ ದೊರೆ ವೀರ ನರಸಿಂಹನು ಈ ನಾಣ್ಯಗಳನ್ನು ಅಚ್ಚು ಮಾಡಿದನೆಂದು ಭಾವಿಸಲಾಗಿದೆ. ಇದುವರೆವಿಗೆ ಸಿಂಹದ ಚಿತ್ರವಿರುವ ವಿಜಯನಗರ ನಾಣ್ಯಗಳು ದೊರಕಿರಲಿಲ್ಲ. ಈ ನಾಣ್ಯಗಳು ಈ ಕೊರತೆಯನ್ನು ನಿವಾರಿಸುತ್ತವೆ.

ಕೃಷ್ಣದೇವರಾಯ (ಕ್ರಿ.ಶ. 1509-1529)

ವಿಜಯನಗರ ಸಾಮ್ರಾಜ್ಯದಲ್ಲಿ ಅತ್ಯಂತ ಶ್ರೇಷ್ಠನಾದ ಕೃಷ್ಣದೇವರಾಯನು ತನ್ನ ನಾಣ್ಯಗಳಿಂದಲೂ ಶ್ರೇಷ್ಠನೆನಿಸಿಕೊಂಡಿದ್ದಾನೆ. ಅತ್ಯುತ್ತಮವಾದ ಅಚ್ಚುಗಳಿಂದ ತಯಾರಾದ ಈ ದೊರೆಯ ನಾಣ್ಯಗಳು ತಾಂತ್ರಿಕವಾಗಿ ಶ್ರೇಷ್ಠವೆನಿಸಿರುವುದು ಮಾತ್ರವಲ್ಲದೆ ಕಲಾತ್ಮಕವಾಗಿಯೂ ಇವೆ. ಈ ನಾಣ್ಯಗಳ ವೈವಿಧ್ಯ ಎಲ್ಲರನ್ನೂ ಬೆರಗುಗೊಳಿಸುತ್ತದೆ. ಪ್ರತಿಯೊಂದು ನಾಣ್ಯದ ಹಿಂದೆಯೂ ಒಂದು ಘಟನೆಯೇ ಇದ್ದು, ಕತೆಯನ್ನು ಹೇಳುತ್ತದೆ. ಅನೇಕ ವಿದೇಶೀ ಯಾತ್ರಿಕರು ಇವನ ಕಾಲದ ರಾಜಕೀಯ ಭದ್ರತೆ ಹಾಗೂ ಆರ್ಥಿಕ ಮತ್ತು ಸಾಂಸ್ಕೃತಿಕ ಸಾಧನೆಗಳ ಬಗೆಗೆ ಉತ್ತಮ ಮಾಹಿತಿಯನ್ನು ಒದಗಿಸಿದ್ದಾರೆ. ಒಟ್ಟಿನಲ್ಲಿ ಇದು ಸಂಪದ್ಭರಿತವಾದ ಕಾಲ. ಇದಕ್ಕೆ ಇವನ ಚಿನ್ನದ ನಾಣ್ಯಗಳೇ ಸಾಕ್ಷಿ. ಇವನು ಅನೇಕ ಹೊಸ ನಮೂನೆಯ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಅವುಗಳ ಮೇಲಿನ ದೇವ-ದೇವತೆಗಳು, ಚಿಹ್ನೆಗಳು ಹಾಗೂ ಬರಹಗಳಲ್ಲಿ ವೈವಿಧ್ಯವನ್ನು ಹಾಗೂ ಶ್ರೀಮಂತಿಕೆಯನ್ನು ಕಾಣಬಹುದು. ಶೈವ ಮತ್ತು ವೈಷ್ಣವ ಚಿಹ್ನೆ ಮತ್ತು ದೇವತೆಗಳನ್ನೊಳಗೊಂಡ ನಾಣ್ಯಗಳು ಯಾವ ಭೇದಭಾವವೂ ಇಲ್ಲದೆ ಅಚ್ಚಾದವು. ಇವನ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರಕಿವೆ.

ಕೃಷ್ಣದೇವರಾಯನು ಅಚ್ಚು ಹಾಕಿಸಿದ ಚಿನ್ನದ ನಾಣ್ಯಗಳಲ್ಲಿ ಅತ್ಯಂತ ಮುಖ್ಯವಾದುದು ವೆಂಕಟೇಶ್ವರ ನಮೂನೆಯ ನಾಣ್ಯ. ಇದರ ತೂಕ 117 ಗ್ರೇನ್‌ಗಳಾಗಿದ್ದು, ಇದು ವಿಜಯನಗರದ ಸಾಮಾನ್ಯ ವರಹಕ್ಕಿಂತ ಎರಡು ಪಟ್ಟು ತೂಕದ ನಾಣ್ಯ. ತೂಕದ ದೃಷ್ಟಿಯಿಂದ ಇದೊಂದು ವಿಶಿಷ್ಟ ನಾಣ್ಯವೆನಿಸಿದೆ. ಇವನು ಅಚ್ಚು ಹಾಕಿಸಿದ ಇತರ ಚಿನ್ನದ ನಾಣ್ಯಗಳೆಂದರೆ ವರಹ, ಅರ್ಧ ವರಹ, ಕಾಲು ವರಹ ಮತ್ತು ಪಣ. ಅತ್ಯಂತ

ಹೆಚ್ಚು ತೂಕದ ವೆಂಕಟೇಶ್ವರ ನಮೂನೆಯ ನಾಣ್ಯವನ್ನು ಮೊದಲು ಗಮನಿಸಬೇಕು. ಇದರ ತೂಕ 117 ಗ್ರೇನ್; ಅಗಲ 0.75". ಕೃಷ್ಣದೇವರಾಯನಿಗೆ ತಿರುಪತಿಯ ವೆಂಕಟೇಶ್ವರನ ಮೇಲೆ ಅಪಾರ ಭಕ್ತಿ. ಈ ದೇವರಿಗೆ ವಜ್ರವೈಡೂರ್ಯ ಖಚಿತವಾದ ನವರತ್ನ ಮಾಲಿಕೆ ಮತ್ತು ಇತರ ಆಭರಣಗಳನ್ನು ದಾನವಾಗಿ ಕೊಟ್ಟಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಪ್ರತಿದಿನ ಬೆಳಿಗ್ಗೆ ಈ ದೇವರ ದರ್ಶನ ಮಾಡಿ ಆಶೀರ್ವಾದ ಪಡೆಯಬೇಕೆಂಬ ಆಕಾಂಕ್ಷೆಯಿಂದ ತನ್ನ ಒಂದು ಕಂಚಿನ ಶಿಲ್ಪವನ್ನು ಮಾಡಿಸಿ, ಆ ದೇವಾಲಯದ ಬಾಗಿಲಿನಲ್ಲಿ ಇರಿಸಿದ್ದನು. ಕೈಗಳನ್ನು ಜೋಡಿಸಿಕೊಂಡು ಭಕ್ತಿ ಭಾವವನ್ನು ಸೂಚಿಸುತ್ತಿರುವ, ತನ್ನ ಇಬ್ಬರು ಪತ್ನಿಯರೊಡಗೂಡಿದ ಈ ಶಿಲ್ಪ ಇಂದಿಗೂ ತಿರುಪತಿಯ ದೇವಾಲಯದಲ್ಲಿದೆ. ಒರಿಸ್ಸ ದೇಶದ ಮೇಲೆ ಕೃಷ್ಣದೇವರಾಯನು ವಿಜಯ ಯಾತ್ರೆಯನ್ನು ಕೈಗೊಳ್ಳುವ ಮುಂಚೆ ಗೆಲುವಿಗಾಗಿ ಪ್ರಾರ್ಥನೆ ಮಾಡಿಕೊಂಡು, ಆ ರಾಜ್ಯವನ್ನು ಗೆದ್ದ ಕೂಡಲೆ ತಿರುಪತಿಗೆ ಹಿಂದಿರುಗಿ, ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುವುದಕ್ಕಾಗಿ ಕನಕಾಭಿಷೇಕವನ್ನು ನೆರವೇರಿಸಿದನು. ಈ ಕನಕಾಭಿಷೇಕಕ್ಕಾಗಿ ವೆಂಕಟೇಶ್ವರನ ಚಿತ್ರವಿರುವ ಚಿನ್ನದ 117 ಗ್ರೇನ್ ತೂಕದ ವಿಶಿಷ್ಟ ನಾಣ್ಯಗಳನ್ನು ಅಚ್ಚು ಹಾಕಿಸಿದನು. ತಿರುಪತಿಯ ವರಹ ಎಂದೂ ಈ ನಾಣ್ಯಗಳು ಪ್ರಸಿದ್ಧಿ ಹೊಂದಿದವು.


ಮು : ಎತ್ತರವಾದ ಕಿರೀಟವನ್ನು ಧರಿಸಿರುವ ವೆಂಕಟೇಶ್ವರನು ಕಮಲಾಸನದ ಮೇಲೆ ನಿಂತಿದ್ದಾನೆ; ಬಲಗೈಯಲ್ಲಿ ಚಕ್ರ ಹಾಗೂ ಎಡಗೈಯಲ್ಲಿ ಶಂಖ; ಇನ್ನೊಂದು ಕೈ ಅಭಯ ಮುದ್ರೆಯಲ್ಲಿ; ಹಿಂಭಾಗದಲ್ಲಿ ಎತ್ತರವಾದ ಹಾಗೂ ಅಲಂಕೃತವಾದ ತೋರಣವಿದೆ; ಅದರ ಮಧ್ಯದಲ್ಲಿ ಸಿಂಹಮುಖ

ಹಿ : ಎರಡು ಸಮಾನಾಂತರ ವೃತ್ತಗಳೊಳಗೆ, ಅಡ್ಡಗೆರೆಗಳುಳ್ಳ ಮೂರು ಸಾಲುಗಳ ನಾಗರೀ ಬರಹ

ಶ್ರೀ

ಕೃಷ್ಣರಾ

ಯ



ಈ ನಮೂನೆಯು ನಾಣ್ಯಗಳು ವಿರಳವಾದುದರಿಂದ, ಇವು ಕೇವಲ ಕನಕಾಭಿಷೇಕಕ್ಕಾಗಿ ಟಂಕಿಸಿದ ನಾಣ್ಯಗಳು; ಇವು ಚಲಾವಣೆಯಲ್ಲಿರಲಿಲ್ಲವೆಂದು ಕೆಲವರು ಭಾವಿಸುತ್ತಾರೆ. ಆದರೆ ಇದರ ವಿಷಯದಲ್ಲಿ ಖಚಿತತೆಯಿಲ್ಲ.

ಎರಡನೆಯ ನಮೂನೆಯ ಚಿನ್ನದ ನಾಣ್ಯವೇ ಬಾಲಕೃಷ್ಣನನ್ನು ತೋರಿಸುವ ಸುಂದರ ನಾಣ್ಯ. ಕೃಷ್ಣದೇವರಾಯನು ಉದಯಗಿರಿ ರಾಜ್ಯದ ಮೇಲೆ ದಂಡಯಾತ್ರೆಯನ್ನು ನಡೆಸಿ ವಿಜಯವನ್ನು ಸಂಪಾದಿಸಿದನು. ಈ ಪ್ರಚಂಡ ವಿಜಯದ ಜ್ಞಾಪಕಾರ್ಥವಾಗಿ ಅಲ್ಲಿಂದ ಒಂದು ಕೃಷ್ಣನ ವಿಗ್ರಹವನ್ನು ವಿಜಯದ ಸಂಕೇತವಾಗಿ ತೆಗೆದುಕೊಂಡು ಬಂದು, ತನ್ನ ರಾಜಧಾನಿಯಾದ ಹಂಪೆಯಲ್ಲಿ ದೇವಾಲಯವನ್ನು ನಿರ್ಮಿಸಿ, ಅದರಲ್ಲಿ ಈ ವಿಗ್ರಹವನ್ನು ಪ್ರತಿಷ್ಠೆ ಮಾಡಿದನು. ಈ ದೇವಾಲಯವೇ ಕೃಷ್ಣಸ್ವಾಮಿ ದೇವಾಲಯ ಎಂದು ಪ್ರಖ್ಯಾತಿ ಪಡೆಯಿತು. ಈ ಘಟನೆಗಳ ಜ್ಞಾಪಕಾರ್ಥವಾಗಿ ಕೃಷ್ಣದೇವರಾಯನು ಬಾಲಕೃಷ್ಣನ ಚಿತ್ರವಿರುವ ಚಿನ್ನದ ನಾಣ್ಯಗಳನ್ನು ಮುದ್ರಿಸಿದನು. ಈ ನಾಣ್ಯ ವಿಶೇಷವಾಗಿ ಜನಾನುರಾಗಿಯಾಗಿದ್ದಂತೆ ತೋರುತ್ತದೆ. ಈ ನಮೂನೆಯ ನಾಣ್ಯಗಳು ವರಹ, ಅರ್ಧ ವರಹ ಮತ್ತು ಕಾಲು ವರಹ ಮೌಲ್ಯಗಳಲ್ಲಿ ದೊರಕಿವೆ. ಈ ನಮೂನೆಯ ನಾಣ್ಯಗಳಲ್ಲಿ ಸಣ್ಣ ಪುಟ್ಟ ಬದಲಾವಣೆಗಳನ್ನು ಹೊಂದಿದ ಅನೇಕ ಪ್ರಭೇದಗಳು ಕಾಣಬರುತ್ತವೆ. ಕೆಲವು ಶತಮಾನಗಳಾದ ಮೇಲೂ ಈ ನಾಣ್ಯ ಪ್ರಸಿದ್ಧಿಯನ್ನು ಹೊಂದಿತ್ತು ಎಂಬುದು ಬೆಣ್ಣೆ ಮುದ್ದೆ ನಾಣ್ಯ ಎಂಬ ಪದಗುಚ್ಛದಿಂದ ತಿಳಿದುಬರುತ್ತದೆ. ಈ ಪದ ಹದಿನೇಳನೆಯ ಶತಮಾನದ ಮಾನೌಮೀಚೌಪದದಲ್ಲಿ ಕಾಣಸಿಗುತ್ತದೆ.

ಮು : ಮಂಡಿಯೂರಿ ಕುಳಿತಿರುವ ಬಾಲಕೃಷ್ಣ; ಕೃಷ್ಣನ ಬಲಗೈಯಲ್ಲಿ ಬೆಣ್ಣೆಯ ಮುದ್ದೆಯಿದೆ; ಇನ್ನೊಂದು ಕೈ ಮಂಡಿಯ ಮೇಲಿದೆ; ಕೃಷ್ಣನು ಕುಂಡಲ, ಕೇಯೂರ ಮತ್ತು ಬಳೆಗಳನ್ನು ಧರಿಸಿದ್ದಾನೆ; ಎಡಭಾಗದಲ್ಲಿ ಶಂಖ ಮತ್ತು ಬಲಭಾಗದಲ್ಲಿ ಚಕ್ರಗಳಿವೆ.

ಹಿ : ಅಡ್ಡಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀಪ್ರ

ತಾಪ ಕೃಷ್ಣ

ರಾಯ

ಇದೇ ನಮೂನೆಯ ಇನ್ನೊಂದು ನಾಣ್ಯವಿದೆ. ಮಿಕ್ಕೆಲ್ಲ ವಿಷಯಗಳಲ್ಲಿ ಇದು ಮೇಲಿನ ನಾಣ್ಯವನ್ನು ಹೋಲುತ್ತದೆಯಾದರೂ, ಕೃಷ್ಣನು ಕುಳಿತಿರುವ ರೀತಿಯಲ್ಲಿ ಬದಲಾವಣೆಯಿದೆ. ಇದರಲ್ಲಿ ಬಾಲಕೃಷ್ಣನು ತನ್ನ ಬಲಗಾಲನ್ನು ಪೂರ್ಣವಾಗಿ

ಬಾಗಿಸಿದ್ದಾನೆ. ಇದೇ ನಮೂನೆಯ ಮತ್ತೊಂದು ನಾಣ್ಯದಲ್ಲಿ ಬಾಲಕೃಷ್ಣನು ತನ್ನ ಎರಡೂ ಮಂಡಿಗಳನ್ನು ಬಾಗಿಸಿ ಕುಳಿತುಕೊಂಡಿರುವಂತೆ ತೋರಿಸಲಾಗಿದೆ. ಇನ್ನೊಂದು ನಾಣ್ಯದಲ್ಲಿ ಬಾಲಕೃಷ್ಣನ ಬಲಗಾಲು ಬಾಗಿಕೊಂಡು ಪೀಠದ ಮೇಲೆ ಇರುವಂತೆ ವಿನ್ಯಾಸಗೊಳಿಸಲಾಗಿದೆ. ಹಿಂಭಾಗದಲ್ಲಿ ಪ್ರಭಾವಳಿಯ ರೀತಿಯಲ್ಲಿ ಬಿಂದುಗಳು ಕಾಣಬರುತ್ತವೆ. ಇನ್ನೊಂದು ನಾಣ್ಯದಲ್ಲಿ ಬಾಲಕೃಷ್ಣನು ತಲೆಯಲ್ಲಿ ನವಿಲುಗರಿಗಳನ್ನು ಸಿಕ್ಕಿಸಿಕೊಂಡಿರುವಂತೆ ಅಳವಡಿಸಲಾಗಿದೆ. ಮತ್ತೊಂದು ನಾಣ್ಯದಲ್ಲಿ ಬಾಲಕೃಷ್ಣನು ಭುಜಕೀರ್ತಿ, ಹಾರ ಮತ್ತು ಯಜ್ಞೋಪವೀತಗಳನ್ನು ಧರಿಸಿದ್ದಾನೆ. ಇಷ್ಟೆಲ್ಲ ಪ್ರಭೇದಗಳು ಈ ನಮೂನೆಯ ನಾಣ್ಯದಲ್ಲಿರುವುದರಿಂದ ಇದು ವಿಶೇಷವಾಗಿ ಬಳಕೆಯಲ್ಲಿದ್ದಿತು ಹಾಗೂ ಜನಾನುರಾಗಿಯಾಗಿದ್ದಿತೆಂದು ಖಚಿತವಾಗುತ್ತದೆ. ಈ ನಾಣ್ಯದ ಜನಮನ್ನಣೆಯನ್ನು ಕಂಡು, ಆನಂತರ ಆಳಿದ ಹಾಗೂ ಸಮಕಾಲೀನ ನಾಯಕರು ಮತ್ತು ಇತರ ರಾಜವಂಶಗಳು ಈ ನಾಣ್ಯದ ವಿನ್ಯಾಸವನ್ನು ಅನುಕರಿಸಿದವು. ಮುಮ್ಮಡಿ ಕೃಷ್ಣರಾಜ ಒಡೆಯರ್ ಈ ರೀತಿಯ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದರು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.



ಮೂರನೆಯ ನಮೂನೆಯ ಚಿನ್ನದ ನಾಣ್ಯ ಶಿವ-ಪಾರ್ವತಿ ನಮೂನೆಯ ನಾಣ್ಯ. ಇದು ವಿಜಯನಗರದ ಇತರ ದೊರೆಗಳು ಅಚ್ಚು ಹಾಕಿಸಿದ ನಾಣ್ಯ. ಇದನ್ನು ಕೃಷ್ಣದೇವರಾಯನು ಮುಂದುವರಿಸಿದನು. ವೈಷ್ಣವ ಮತ್ತು ಶೈವ ಧರ್ಮಗಳನ್ನು ಕೃಷ್ಣದೇವರಾಯನು ಸಮಾನವಾಗಿ ಕಾಣುತ್ತಿದ್ದನೆಂಬುದಕ್ಕೆ ಈ ನಾಣ್ಯವೊಂದು ಸಾಕ್ಷಿ. ಇದು ವರಹ ಮೌಲ್ಯದ ನಾಣ್ಯ. ಇದರ ತೂಕ 52 ಗ್ರೇನ್; ಅಗಲ 0.45".

ಮು : ಕುಳಿತಿರುವ ಶಿವ; ಅವನ ಎಡತೊಡೆಯ ಮೇಲೆ ಪಾರ್ವತಿ; ಶಿವನ ಬಲಗೈಯಲ್ಲಿ ತ್ರಿಶೂಲ; ಎಡಗೈ ಪಾರ್ವತಿಯ ಮೇಲೆ; ಮಿಕ್ಕ ಎರಡು ಕೈಗಳಲ್ಲಿ ಇತರ ಆಯುಧಗಳು

ಹಿ : ಅಡ್ಡಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ

ಕೃಷ್ಣರಾ

ಯ

ಇತ್ತೀಚೆಗೆ ದೊರಕಿರುವ ನಾಲ್ಕನೆಯ ನಮೂನೆಯ ಚಿನ್ನದ ನಾಣ್ಯದಲ್ಲಿ ಲಕ್ಷ್ಮಿಯ ಚಿತ್ರವಿದೆ. ಇದು ವರಹ; ತೂಕ 52 ಗ್ರೇನ್; ಅಗಲ 0.5".

ಮು : ಬಿಂದುಗಳ ವೃತ್ತದೊಳಗೆ ನಾಲ್ಕು ಭುಜಗಳ ಕುಳಿತಿರುವ ಲಕ್ಷ್ಮಿ

ಹಿ : ಅಡ್ಡಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪ ಕೃಷ್ಣ

ರಾಯ



ಕೃಷ್ಣದೇವರಾಯನ ಒಂದೇ ಒಂದು ನಮೂನೆಯ ಬೆಳ್ಳಿಯ ನಾಣ್ಯ ದೊರಕಿದೆ. ಇದರ ತೂಕ 4 ಗ್ರೇನ್; ಅಗಲ 0.3". ಇದು ಬಾಲಕೃಷ್ಣ ನಮೂನೆಯ ನಾಣ್ಯ.

ಮು : ಬಾಲಕೃಷ್ಣ (ಚಿನ್ನದ ನಾಣ್ಯದಲ್ಲಿರುವಂತೆ)

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ

ಕೃಷ್ಣರಾ

ಯ

ಕೃಷ್ಣದೇವರಾಯನ ನಾಲ್ಕು ನಮೂನೆಯ ತಾಮ್ರದ ನಾಣ್ಯಗಳು ಈವರೆವಿಗೆ ದೊರಕಿವೆ. ಮೊದಲನೆಯದು ಗರುಡ ನಮೂನೆಯ ನಾಣ್ಯ. ಈ ನಾಣ್ಯದ ತೂಕ 250 ಗ್ರೇನ್; ಅಗಲ 0.8".



ಮು : ಬಿಂದುಗಳ ವೃತ್ತದಲ್ಲಿ ಎಡಕ್ಕಿರುವ ಗರುಡ; ಗರುಡನಿಗೆ ಉದ್ದವಾದ ಕಿರೀಟವಿದೆ; ಎರಡೂ ಕೈಗಳನ್ನು ಜೋಡಿಸಿ ವೀರಾಸನವಲ್ಲಿದ್ದಾನೆ; ರೆಕ್ಕೆಗಳು ಕಾಣುತ್ತವೆ.


ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪ ಕೃಷ್ಣ

ರಾಯ

ಈ ನಮೂನೆಯ ನಾಣ್ಯಗಳಲ್ಲಿ ಸಣ್ಣ ಪುಟ್ಟ ಭಿನ್ನತೆಗಳಿರುವ ಅನೇಕ ಪ್ರಭೇದಗಳಿವೆ. ಇಂತಹ ಒಂದು ನಾಣ್ಯದಲ್ಲಿ ಬಿಂದುಗಳ ವೃತ್ತಕ್ಕೆ ಬದಲಾಗಿ ಗೆರೆಯ ವೃತ್ತವಿದೆ ಮತ್ತು ಇದರ ಅಗಲ 0.6". ಇನ್ನೊಂದು ನಾಣ್ಯದಲ್ಲಿ ಗರುಡನ ತಲೆಯ ಹತ್ತಿರ ಶಂಖ-ಚಕ್ರಗಳಿವೆ. ಮಿಕ್ಕೆಲ್ಲ ವಿಷಯಗಳಲ್ಲಿ ಮೇಲಿನ ನಾಣ್ಯದಂತೆಯೇ ಇದೆ. ಇನ್ನೊಂದು ನಾಣ್ಯದಲ್ಲಿ ಗರುಡನು ಪದ್ಮಾಸನದಲ್ಲಿ ಕುಳಿತಿರುವಂತೆ ಚಿತ್ರಿಸಲಾಗಿದೆ.



ಇವನ ಎರಡನೆಯ ನಮೂನೆಯ ನಾಣ್ಯವೆಂದರೆ ನಂದಿ ನಮೂನೆಯ ತಾಮ್ರದ ನಾಣ್ಯ. ಇವು 50, 30 ಮತ್ತು 20 ಗ್ರೇನ್ ತೂಕಗಳಲ್ಲಿ ಕಂಡುಬಂದಿವೆ. ಇವುಗಳ ಅಗಲ 0.6" ರಿಂದ 0.7".

ಮು : ಬಿಂದುಗಳ ವೃತ್ತದಲ್ಲಿ ಎಡಕ್ಕಿರುವ ಅಲಂಕೃತ ನಂದಿ; ಮೇಲೆ ಸೂರ್ಯ-ಚಂದ್ರರು

ಹಿ : ಖಡ್ಗ; ಅಕ್ಕಪಕ್ಕಗಳಲ್ಲಿ ಶಂಖ ಮತ್ತು ಚಕ್ರ; ಕೆಳಗೆ ಎರಡು ಸಾಲುಗಳ ಕನ್ನಡ ಬರಹ

ಶ್ರೀ ಕೃಷ್ಣ

ರಾಯ

ಈ ನಮೂನೆ ನಾಣ್ಯಗಳಲ್ಲಿಯೂ ಅಲ್ಪಸ್ವಲ್ಪ ಬದಲಾವಣೆ ಇರುವ ಅನೇಕ ಪ್ರಭೇದಗಳಿವೆ. ಕೆಲವು ನಾಣ್ಯಗಳಲ್ಲಿ ಬಲಕ್ಕಿರುವ ನಂದಿ ಕಾಣಬರುತ್ತದೆ. ಮತ್ತೆ ಕೆಲವು ನಾಣ್ಯಗಳಲ್ಲಿ ಹಿಮ್ಮುಖದ ಬರಹದಲ್ಲಿ ವ್ಯತ್ಯಾಸಗಳು ಕಾಣಬರುತ್ತವೆ. ಇಂತಹ ನಾಣ್ಯಗಳಲ್ಲಿ ಹಿಮ್ಮುಖದ ಮಧ್ಯದಲ್ಲಿ ದೊಡ್ಡದಾದ ಖಡ್ಗವಿದೆ, ಜೊತೆಗೆ ಎರಡು ಸಾಲುಗಳ ಕನ್ನಡ ಬರಹವಿದೆ (ಶ್ರೀ ಕೃಷ್ಣರಾಯ). ನಂದಿ ನಮೂನೆಯ ನಾಣ್ಯವನ್ನು ಅನೇಕ ವಿಜಯನಗರ ರಾಜರು ಅಚ್ಚು ಹಾಕಿಸಿದರು. ಅದನ್ನು ಕೃಷ್ಣದೇವರಾಯನು ಮುಂದುವರಿಸಿದನು.

ಮೂರನೆಯ ನಮೂನೆಯ ತಾಮ್ರದ ನಾಣ್ಯವೇ ಬಾಲಕೃಷ್ಣ ನಮೂನೆ. ನಾವು ಆಗಲೇ ಗಮನಿಸಿರುವಂತೆ ಬಾಲಕೃಷ್ಣ ನಮೂನೆಯ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳ ಜೊತೆಗೆ ತಾಮ್ರದಲ್ಲಿಯೂ ಈ ರೀತಿಯ ನಾಣ್ಯವನ್ನು ಕೃಷ್ಣದೇವರಾಯನು ಅಚ್ಚು ಹಾಕಿಸಿದುದು ಒಂದು ವೈಶಿಷ್ಟ್ಯ. ಈ ನಾಣ್ಯದ ತೂಕ 150 ಗ್ರೇನ್; ಅಂಗಲ 0.8".

ಮು : ಚಿನ್ನದ ನಾಣ್ಯದಲ್ಲಿರುವಂತೆ ಬಲಗೈಯಲ್ಲಿ ಬೆಣ್ಣೆಮುದ್ದೆಯನ್ನು ಹಿಡಿದಿರುವ ಬಾಲಕೃಷ್ಣ.

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರತಾಪ

ಕೃಷ್ಣ

ರಾಯ



ನಾಲ್ಕನೆಯ ನಮೂನೆಯ ತಾಮ್ರದ ನಾಣ್ಯದಲ್ಲಿ ಆನೆಯ ಚಿತ್ರವಿದೆ. ಇದರ ತೂಕ 50 ಗ್ರೇನ್; ಅಗಲ 0.6".

ಮು : ಬಿಂದುಗಳಿಂದ ಮಾಡಿದ ವೃತ್ತದೊಳಗೆ ಎಡಕ್ಕೆ ಚಲಿಸುತ್ತಿರುವ ಆನೆ; ಅದರ ಮೇಲೆ ಖಡ್ಗ

ಹಿ : ಅಡ್ಡಗೆರೆಯುಳ್ಳ ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪ ಕೃಷ್ಣ

ರಾಯ

ಇದೇ ನಮೂನೆಯ ಕೆಲವು ನಾಣ್ಯಗಳಲ್ಲಿ ಸ್ವಲ್ಪ ಭಿನ್ನತೆ ಕಂಡುಬರುತ್ತದೆ. ಕೆಲವು ನಾಣ್ಯಗಳಲ್ಲಿ ಬಲಕ್ಕೆ ಚಲಿಸುತ್ತಿರುವ ಆನೆ ಇರುತ್ತದೆ. ಮತ್ತೆ ಕೆಲವು ನಾಣ್ಯಗಳಲ್ಲಿ ಗೆರೆಯ ವೃತ್ತವಿರುತ್ತದೆ. ಆನೆಯ ನಮೂನೆಯ ನಾಣ್ಯವನ್ನು ಮೊದಲಿಗೆ ಅಚ್ಚು ಮಾಡಿಸಿದವನು, ಇಮ್ಮಡಿ ದೇವರಾಯ. ಈ ನಮೂನೆಯನ್ನು ಕೃಷ್ಣದೇವರಾಯನು ಮುಂದುವರಿಸಿದನು.

ಕೊನೆಯಲ್ಲಿ ಇತ್ತೀಚೆಗೆ ಪ್ರಕಟವಾದ ಇನ್ನೊಂದು ತಾಮ್ರದ ನಾಣ್ಯವನ್ನು ಉಲ್ಲೇಖಿಸಬೇಕು. ಇದರ ತೂಕ 70 ಗ್ರೇನ್; ಅಗಲ 0.6". ಇದರ ಮುಮ್ಮುಖದಲ್ಲಿ ಕನ್ನಡ ಲಿಪಿಯ ಕೃಷ್ಣದೇವರಾಯ ಎನ್ನುವ ಎರಡು ಸಾಲುಗಳ ಬರಹವಿದೆ. ಹಿಮ್ಮುಖದಲ್ಲಿಯೂ ಬರಹವಿದ್ದು ಅದನ್ನು ತಿಮ್ಮರಸುಗಾರು ಎಂದು ಓದಲಾಗಿದೆ. ತಿಮ್ಮರಸು ಖ್ಯಾತ ಮಂತ್ರಿಯಾಗಿದ್ದು ಕೃಷ್ಣದೇವರಾಯನು ಅವನನ್ನು ರಾಜಸಭೆಯಲ್ಲಿ ಕನಕಾಭಿಷೇಕ ಮಾಡಿ ಗೌರವಿಸಿದನೆಂದು ಸಾಹಿತ್ಯಿಕ ಕೃತಿಗಳಿಂದ ತಿಳಿದುಬರುತ್ತದೆ. ಆದುದರಿಂದ ಈ ನಾಣ್ಯವನ್ನು ಇಂತಹ ಸಮಯದಲ್ಲಿ ಅಚ್ಚು ಹಾಕಿಸಿರಬೇಕು ಎಂದು ಊಹಿಸಲಾಗಿದೆ. ಕನಕಾಭಿಷೇಕದ ಸಮಯದಲ್ಲಿ ಚಿನ್ನದ ನಾಣ್ಯವನ್ನು ಅಚ್ಚು ಮಾಡಿಸದೆ ತಾಮ್ರದ ನಾಣ್ಯವನ್ನು ಅಚ್ಚು ಹಾಕಿಸಿರುವುದು ಒಂದು ಸಮಸ್ಯೆಯೇ ಸರಿ. ಈ ಬರಹದ ಬಗೆಗೂ ಖಚಿತತೆಯಿಲ್ಲದೇ ಇರುವುದರಿಂದ, ಇನ್ನೂ ಕೆಲವು ರೀತಿಯ ನಾಣ್ಯಗಳು ದೊರಕುವವರೆಗೆ ಇದನ್ನು ದೃಢಪಡಿಸಲಾಗುವುದಿಲ್ಲ.

ಕೊನೆಯದಾಗಿ ಕೇರಳದ ಬೇಕಲ್ ಕೋಟೆಯಲ್ಲಿ ನಡೆದ ಉತ್ಖನನದಲ್ಲಿ ದೊರಕಿರುವ ಕೃಷ್ಣದೇವರಾಯನ ಒಂದು ಸುಟ್ಟ ಮಣ್ಣಿನ ನಾಣ್ಯದ ಮುದ್ರೆಯನ್ನು ಗಮನಿಸಬೇಕು. ಇದರ ಅಗಲ 0.8". ಇದರಲ್ಲಿ ಮೂರು ಸಾಲುಗಳ ನಾಗರೀ ಬರಹವಿದೆ.

ಶ್ರೀ ವೀರ

ಕೃಷ್ಣ ಪ್ರ

ತಾಪರಾಯ

ಇದುವರೆಗೆ ಈ ರೀತಿಯ ಬರಹವಿರುವ ಯಾವ ನಾಣ್ಯವೂ ದೊರಕಿಲ್ಲವೆಂಬುದನ್ನು ಗಮನಿಸಬೇಕು. ಇದರಲ್ಲಿ ವೀರ ಮತ್ತು ಪ್ರತಾಪ ಎನ್ನುವ ಎರಡು ಬಿರುದುಗಳೂ ಕಾಣಬರುತ್ತವೆ.

ಅಚ್ಯುತರಾಯ (ಕ್ರಿ.ಶ. 1529-1542)

ಅಚ್ಯುತರಾಯನ ಚಿನ್ನ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಇವನು ಗಂಡಭೇರುಂಡ ನಮೂನೆಯ ನಾಣ್ಯಗಳನ್ನು ಟಂಕಿಸಲು ಆರಂಭಿಸಿದನು. ಚಿನ್ನದಲ್ಲಿ ಇವನ ವರಹ ಮತ್ತು ಅರ್ಧ ವರಹ ನಾಣ್ಯಗಳು ದೊರಕಿವೆ. ಮೊದಲನೆಯದು ಚಿನ್ನದ ನಾಣ್ಯ ವರಹ. ಇದರ ತೂಕ 52 ಗ್ರೇನ್; ಅಗಲ 0.45".

ಮು : ಮೇಲಕ್ಕೆ ಹಾರುತ್ತಿರುವ ಅಲಂಕೃತ ಗಂಡಭೇರುಂಡ; ಅದರ ಎರಡು ಕೊಕ್ಕುಗಳಲ್ಲಿ ಆನೆ

ಹಿ : ಅಡ್ಡ ಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ
ತಾಪಾಚ್ಯುತ
ರಾಯ

ಅಚ್ಯುತರಾಯನ ತಾಮ್ರದ ನಾಣ್ಯಗಳಲ್ಲಿ ಗಂಡಭೇರುಂಡ ಚಿತ್ರವಿದೆ. ಇದರಲ್ಲಿ ಅನೇಕ ತೂಕಗಳ ನಾಣ್ಯಗಳು ಕಾಣಬರುತ್ತವೆ. ಮೊದಲನೆಯ ನಾಣ್ಯದ ತೂಕ 125 ಗ್ರೇನ್; ಅಗಲ 0.7".

ಮು : ವೃತ್ತದೊಳಗೆ ಗಂಡಭೇರುಂಡ

ಹಿ : ಅಡ್ಡಗೆರೆಗಳಿರುವ ಮೂಲ ಸಾಲುಗಳ ನಾಗರೀ ಬರಹ

ಶ್ರೀ ಪ್ರತಾ
ಪಾಚ್ಯುತ
ರಾಯ



ಈ ನಮೂನೆಯ ನಾಣ್ಯಗಳಲ್ಲಿ ಗಂಡಭೇರುಂಡವನ್ನು ತೋರಿಸುವಲ್ಲಿ ಅನೇಕ ಸಣ್ಣ ಪುಟ್ಟ ಬದಲಾವಣೆಗಳನ್ನು ಕಾಣಬಹುದು. ಕೆಲವು ನಾಣ್ಯಗಳಲ್ಲಿ ಗಂಡಭೇರುಂಡದ ಕೊಕ್ಕಿನಲ್ಲಿ ಆನೆಯಿರುವುದಿಲ್ಲ. ಮತ್ತೆ ಕೆಲವು ನಾಣ್ಯಗಳಲ್ಲಿ ಗಂಡಭೇರುಂಡ ಎದುರಿಗೆ ನೋಡುವಂತೆ ಇದ್ದರೆ ಇನ್ನು ಕೆಲವು ನಾಣ್ಯಗಳಲ್ಲಿ ಅದು ಓರೆಯಾಗಿ ಕಂಡುಬರುತ್ತದೆ.

ಇನ್ನೊಂದು ನಮೂನೆಯ ತಾಮ್ರದ ನಾಣ್ಯದ ತೂಕ 90 ಗ್ರೇನ್; ಅಗಲ 0.6".

ಮು : ಓಡುತ್ತಿರುವ ಕುದುರೆ

ಹಿ : ಮೂರು ಸಾಲುಗಳ ನಾಗರೀ ಬರಹ

ಪ್ರತಾ

ಪಾಚ್ಯುತ

ರಾಯ

ಆನೆ ನಮೂನೆಯ ನಾಣ್ಯವನ್ನು ಈ ದೊರೆ ಮುಂದುವರಿಸಿದನು. ಈ ನಾಣ್ಯದ ತೂಕ 50 ಗ್ರೇನ್; ಅಗಲ 0.6".

ಮು : ಬಲಕ್ಕಿರುವ ಅಲಂಕೃತ ಆನೆ; ಮೇಲೆ ಖಡ್ಗ; ಅದರ ಪಕ್ಕದಲ್ಲಿ ಸೂರ್ಯ-ಚಂದ್ರರು

ಹಿ : ಅಡ್ಡಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರ

ತಾಪಾಚ್ಯುತ

ರಾಯ

ವರಾಹದ ಚಿತ್ರವಿರುವ ಅಚ್ಯುತರಾಯನ ತಾಮ್ರದ ನಾಣ್ಯವು ದೊರಕಿದೆ. ಇದರ ತೂಕ 35 ಗ್ರೇನ್; ಅಗಲ 0.5".

ಮು : ಬಿಂದುಗಳಿಂದ ಮಾಡಿದ ವೃತ್ತದೊಳಗೆ ಬಲಕ್ಕೆ ಚಲಿಸುತ್ತಿರುವ ವರಾಹ

ಹಿ : ಅಡ್ಡಗೆರೆಯಿರುವ ಎರಡು ಸಾಲುಗಳ ಕನ್ನಡ ಬರಹ

ತರಯ

ಅಚು





ಈ ನಾಣ್ಯದ ಹಿಮ್ಮುಖ ಸ್ವಾರಸ್ಯಕರವಾದುದು. ಮೇಲಿಂದ ಓದಿದರೆ 'ತರಯ ಅಚು' ಎಂದಾಗುತ್ತದೆ. ಆದರೆ ಕೆಳಗಿನ ಸಾಲನ್ನು ಮೊದಲು ಓದಿದರೆ ಮಾತ್ರ ಅಚುತರಯ ಎಂಬ ಸರಿಯಾದ ಬರಹ ಕಾಣಬರುತ್ತದೆ. ಬಹುಶಃ ಇದು ವಿನ್ಯಾಸದಲ್ಲಿ ತಪ್ಪಾಗಿರಬೇಕು. ಆದುದರಿಂದ ಈ ರೀತಿಯ ನಾಣ್ಯಗಳನ್ನು ಅಚ್ಚು ಮಾಡಿಸದೇ ಇದ್ದು, ಈ ನಾಣ್ಯ ವಿರಳವಾಗಿದೆ.

ಸದಾಶಿವರಾಯ (ಕ್ರಿ.ಶ. 1542-1570)

ಸದಾಶಿವರಾಯನ ಚಿನ್ನ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಚಿನ್ನದ ನಾಣ್ಯಗಳು ವರಹ ಮತ್ತು ಅರ್ಧ ವರಹ ಮೌಲ್ಯಗಳಲ್ಲಿ ಕಂಡುಬಂದಿವೆ. ಈ ರಾಜನ ನಾಣ್ಯಗಳಿಗೂ ಇಕ್ಕೇರಿಯ ಸದಾಶಿವನಾಯಕನ ನಾಣ್ಯಗಳಿಗೂ ಬಹಳ ಸಾಮ್ಯ ಇರುವುದನ್ನು ಗಮನಿಸಬೇಕು. ವಿಜಯನಗರದ ಸದಾಶಿವರಾಯನು ಶೈವ ಮತ್ತು ವೈಷ್ಣವ ಧರ್ಮಗಳಿಗೆ ಸಮಾನ ಪ್ರೋತ್ಸಾಹ ಕೊಟ್ಟನು. ಆದರೆ ಇಕ್ಕೇರಿಯ ನಾಯಕನ ಒಲವು ವಿಶೇಷವಾಗಿ ಶೈವ ಧರ್ಮದ ಕಡೆಗೆ ಇದ್ದಿತು. ವಿಜಯನಗರ ದೊರೆ ಸದಾಶಿವರಾಯನ ನಾಣ್ಯಗಳ ಮೇಲೆ ಪ್ರತಾಪ ಎನ್ನುವ ಪದವು ಕಾಣಬರುವುದರಿಂದ ಅವು ಖಚಿತವಾಗಿ ಈ ದೊರೆಗೆ ಸೇರಿದ್ದೆಂದು ಗೊತ್ತಾಗುತ್ತದೆ. ಆದರೆ ಕೆಲವು ನಾಣ್ಯಗಳಲ್ಲಿ ಪ್ರತಾಪ ಎನ್ನುವ ಪದವಿಲ್ಲದೇ ಇರುವುದರಿಂದ ಅವುಗಳನ್ನು ಸರಿಯಾಗಿ ಪರೀಕ್ಷಿಸಿ, ಅದು ಯಾರ ನಾಣ್ಯ ಎಂಬುದನ್ನು ತಿಳಿಯಬೇಕಾಗುತ್ತದೆ.

ಸದಾಶಿವರಾಯನ ಚಿನ್ನದ ವರಹದ ತೂಕ 52 ಗ್ರೇನ್; ಅಗಲ 0.5".

ಮು : ಎತ್ತರದ ಪೀಠದ ಮೇಲೆ ಕುಳಿತಿರುವ ವಿಷ್ಣು ಮತ್ತು ಲಕ್ಷ್ಮೀ; ಇಬ್ಬರೂ ಕಿರೀಟಧಾರಿಗಳು; ವಿಷ್ಣುವಿನ ಕೈಗಳಲ್ಲಿ ಶಂಖ-ಚಕ್ರಗಳಿವೆ

ಹಿ : ಅಡ್ಡಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರತಾ

ಪ ಸದಾಶಿ

ವರಾಯ





ಇದೇ ನಮೂನೆಯ ಇನ್ನೊಂದು ನಾಣ್ಯದಲ್ಲಿ ಮುಮ್ಮುಖ ಮೇಲಿನಂತೆ ಇದೆ. ಆದರೆ ಹಿಮ್ಮುಖದ ಬರಹ 'ಶ್ರೀ ಸದಾಶಿವರಾಯರು' ಎಂದಿದೆ. ಪ್ರತಾಪ ಎನ್ನುವ ಪದವಿಲ್ಲ; ಆದರೆ ಗೌರವ ಸೂಚಕವಾದ 'ರು' ಎನ್ನುವ ಅಕ್ಷರವನ್ನು ಕೊನೆಯಲ್ಲಿ ಸೇರಿಸಲಾಗಿದೆ. ಈ ರೀತಿಯ ಬರಹ ಬಹಳ ವಿರಳ. ಇದರಲ್ಲಿ ಪ್ರತಾಪ ಎನ್ನುವ ಪದವಿಲ್ಲದಿದ್ದರೂ, ವೈಷ್ಣವ ದೇವತೆ ಇರುವುದರಿಂದ, ಇದನ್ನು ವಿಜಯನಗರ ರಾಜನಿಗೆ ಸೇರಿದ್ದೆಂದು ಭಾವಿಸಬಹುದು.

ಇದೇ ನಮೂನೆಯ ಅರ್ಧವರಹ ನಾಣ್ಯ ತೂಕ 25 ಗ್ರೇನ್; ಅಗಲ 0.4".

ಮು : ಮೇಲಿನ ನಾಣ್ಯದಲ್ಲಿರುವಂತೆ ವಿಷ್ಣು-ಲಕ್ಷ್ಮೀ

ಹಿ : ಅಡ್ಡ ಗೆರೆಗಳಿರುವ ಕನ್ನಡ ಬರಹ

ಶ್ರೀ ಪ್ರತಾ

ಪ ಸದಾಶಿ

ವರಾಯ

ಇನ್ನೊಂದು ನಮೂನೆಯ ನಾಣ್ಯದಲ್ಲಿ ಶಿವ-ಪಾರ್ವತಿಯರ ಚಿತ್ರವಿದೆ. ಇದರ ತೂಕ 52 ಗ್ರೇನ್; ಅಗಲ 0.5".

ಮು : ಎತ್ತರದ ಪೀಠದ ಮೇಲೆ ಕುಳಿತಿರುವ ಶಿವ-ಪಾರ್ವತಿ; ಇಬ್ಬರೂ ಕಿರೀಟ ಧಾರಿಗಳು; ಶಿವನ ಕೈಯಲ್ಲಿ ಡಮರು

ಹಿ : ಅಡ್ಡಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರತಾ

ಪ ಸದಾಶಿ

ವರಾಯ

ಈ ನಾಣ್ಯದ ಮೇಲೆ ಪ್ರತಾಪ ಎನ್ನುವ ಬರಹವಿರುವುದರಿಂದ, ಇದು ವಿಜಯನಗರದ ದೊರೆಗೆ ಸೇರಿದ್ದೆಂದು ಸುಲಭವಾಗಿ ತೀರ್ಮಾನಿಸಬಹುದು. ಇದೇ ನಮೂನೆಯ ಮತ್ತೊಂದು ನಾಣ್ಯದ ಹಿಮ್ಮುಖದಲ್ಲಿ ಸದಾಶಿವರಾಯ ಎಂಬ ಬರಹವಿದೆ. ಪ್ರತಾಪ ಎನ್ನುವ ಬಿರುದು ಇಲ್ಲ. ಆದರೆ ಈ ನಾಣ್ಯವು ಎಲ್ಲ ರೀತಿಯಿಂದ ಮೇಲಿನ ನಾಣ್ಯವನ್ನೇ ಹೋಲುವುದರಿಂದ ಇದನ್ನು ವಿಜಯನಗರ ದೊರೆ ಸದಾಶಿವರಾಯನಿಗೆ ಸೇರಿದ್ದೆಂದು ಭಾವಿಸಲಾಗಿದೆ.

ಸದಾಶಿವರಾಯನ ಐದು ನಮೂನೆಯ ತಾಮ್ರದ ನಾಣ್ಯಗಳು ಬೆಳಕಿಗೆ ಬಂದಿವೆ. ಮೊದಲನೆಯದು ಗರುಡ ನಮೂನೆ. ಈ ನಾಣ್ಯದ ತೂಕ 250 ಗ್ರೇನ್; ಅಗಲ 0.4".

ಮು : ಎಡದ ಮೊಣಕಾಲೂರಿರುವ ಗರುಡ; ಬಲಗಾಲು ನೆಲದ ಮೇಲೆ; ಎತ್ತರದ ಕಿರೀಟ; ಇವೆಲ್ಲವೂ ಬಿಂದುಗಳ ವೃತ್ತದೊಳಗೆ

ಹಿ : ಅಡ್ಡ ಗೆರೆಗಳುಳ್ಳ ಮೂರು ಸಾಲುಗಳ ನಾಗರೀ ಬರಹ

ಶ್ರೀ ಪ್ರತಾ

ಪ ಸದಾಶಿ

ವರಾಯ

ಈ ನಾಣ್ಯದ ಮೇಲೆ ಪ್ರತಾಪ ಎನ್ನುವ ಬರಹವಿರುವುದರಿಂದ, ಇದು ವಿಜಯನಗರದ ದೊರೆಗೆ ಸೇರಿದ್ದೆಂದು ಸುಲಭವಾಗಿ ತೀರ್ಮಾನಿಸಬಹುದು. ಇದೇ ನಮೂನೆಯ ಮತ್ತೊಂದು ನಾಣ್ಯದ ಹಿಮ್ಮುಖದಲ್ಲಿ ಸದಾಶಿವರಾಯ ಎಂಬ ಬರಹವಿದೆ. ಪ್ರತಾಪ ಎನ್ನುವ ಬಿರುದು ಇಲ್ಲ. ಆದರೆ ಈ ನಾಣ್ಯವು ಎಲ್ಲ ರೀತಿಯಿಂದ ಮೇಲಿನ ನಾಣ್ಯವನ್ನೇ ಹೋಲುವುದರಿಂದ ಇದನ್ನು ವಿಜಯನಗರ ದೊರೆ ಸದಾಶಿವರಾಯನಿಗೆ ಸೇರಿದ್ದೆಂದು ಭಾವಿಸಲಾಗಿದೆ.

ಈ ನಮೂನೆಯ ನಾಣ್ಯಗಳಲ್ಲಿ ಅನೇಕ ಪ್ರಭೇದಗಳಿವೆ. ಒಂದು ರೀತಿಯ ನಾಣ್ಯಗಳಲ್ಲಿ ಮುಮ್ಮುಖದ ಗರುಡನು ನಿಂತಿರುವ ಭಂಗಿಯಲ್ಲಿ ವ್ಯತ್ಯಾಸವಿದೆ. ಮತ್ತೆ ಕೆಲವು ನಾಣ್ಯಗಳಲ್ಲಿ ಗರುಡನ ಅಕ್ಕ ಪಕ್ಕದಲ್ಲಿ ಶಂಖ ಮತ್ತು ಚಕ್ರಗಳಿವೆ. ಇನ್ನು ಕೆಲವು ನಾಣ್ಯಗಳಲ್ಲಿ ಗರುಡನು ನೆಟ್ಟಗೆ ಮುಖ ಮಾಡಿದ್ದರೆ, ಮತ್ತೆ ಕೆಲವು ಅವನನ್ನು ಓರೆಯಾಗಿ ತೋರಿಸುತ್ತವೆ. ಈ ಎಲ್ಲ ನಾಣ್ಯಗಳ ಹಿಮ್ಮುಖದಲ್ಲಿ ಪ್ರತಾಪ ಎನ್ನುವ ಪದವಿಲ್ಲದೆ, ಕೇವಲ ಶ್ರೀ ಸದಾಶಿವರಾಯ ಎಂಬ ಬರಹ ಕಾಣಬರುತ್ತದೆ. ಕೆಳದಿ ಸದಾಶಿವನು ಶೈವ ಧರ್ಮೀಯನಾಗಿದ್ದುದರಿಂದ, ಈ ನಾಣ್ಯಗಳ ಮೇಲೆ ಗರುಡನ ಚಿತ್ರವಿರುವುದರಿಂದ, ಇವು ವಿಜಯನಗರ ದೊರೆ ಸದಾಶಿವರಾಯನಿಗೆ ಸೇರಿದ್ದೆಂದು ನಂಬಲಾಗಿದೆ. ಈ ಮೇಲಿನ ನಮೂನೆಯ ನಾಣ್ಯಗಳು 50 ಮತ್ತು 25 ಗ್ರೇನ್; ತೂಕಗಳಲ್ಲೂ ದೊರಕಿವೆ.

ಇವನ ಎರಡನೆಯ ನಮೂನೆಯ ತಾಮ್ರದ ನಾಣ್ಯದಲ್ಲಿ ಕುದುರೆಯಿದೆ. ಈ ನಾಣ್ಯದ ತೂಕ 45 ಗ್ರೇನ್; ಅಗಲ 0.5".

ಮು : ಅಲಂಕಾರದ ಜೀನು ಹಾಕಿರುವ, ನಾಗಾಲೋಟದಲ್ಲಿರುವ ಕುದುರೆ; ಬಾಲ ಮೇಲೆ ಎತ್ತಿಕೊಂಡಿದೆ; ಆಭರಣಗಳು ಚೆನ್ನಾಗಿ ಕಾಣುತ್ತವೆ

ಹಿ : ಅಡ್ಡಗೆರೆಯಿರುವ ಎರಡು ಸಾಲುಗಳ ನಾಗರೀ ಬರಹ

ಸದಾ

ಶಿವ



ಇವನ ಮೂರನೆಯ ನಮೂನೆಯ ನಾಣ್ಯದಲ್ಲಿ ನಂದಿ ಇದೆ. ಇದರ ತೂಕ 48 ಗ್ರೇನ್; ಅಗಲ 0.6".

ಮು : ಅಲಂಕೃತ, ಎಡಕ್ಕೆ ಚಲಿಸುತ್ತಿರುವ ನಂದಿ

ಹಿ : ಮೂರು ಸಾಲುಗಳ ನಾಗರೀ ಬರಹ

ಪ್ರತಾಪ

ಸದಾಶಿವ

ರಾಯ

ಇವನ ನಾಲ್ಕನೆಯ ನಮೂನೆಯ ನಾಣ್ಯದಲ್ಲಿ ಆನೆಯ ಚಿತ್ರವಿದೆ. ಇದರ ತೂಕ 40 ಗ್ರೇನ್, ಅಗಲ 0.7".

ಮು : ಎಡಕ್ಕೆ ಚಲಿಸುತ್ತಿರುವ ಆನೆ; ಸೂರ್ಯ-ಚಂದ್ರರು; ಮೇಲ್ಭಾಗದಲ್ಲಿ ಖಡ್ಗ

ಹಿ : ಅಡ್ಡ ಗೆರೆಗಳುಳ್ಳ ಮೂರು ಸಾಲುಗಳ ನಾಗರೀ ಬರಹ

ಶ್ರೀ ಸ

ದಾಶಿವ

ರಾಯ

ಈ ದೊರೆಯ ಇನ್ನೊಂದು ನಮೂನೆಯ ನಾಣ್ಯದಲ್ಲಿ ಕುಳಿತಿರುವ ದೇವತೆಯ ಚಿತ್ರವಿದೆ. ಇದರ ತೂಕ 100 ಗ್ರೇನ್; ಅಗಲ 0.8".

ಮು : ಪ್ರಭಾವಳಿಯನ್ನು ಹೊಂದಿರುವ ಕುಳಿತಿರುವ ದೇವತೆ; ಕೈಗಳಲ್ಲಿರುವ ಆಯುಧಗಳು ಸ್ಪಷ್ಟವಾಗಿಲ್ಲ

ಹಿ : ಅಡ್ಡಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಸದಾ

ಶಿವರಾ

ಯರು

ರಾಮರಾಯ

ಇತ್ತೀಚಿನವರೆಗೆ ರಾಮರಾಯನ ನಾಣ್ಯಗಳು ದೊರಕಿರಲಿಲ್ಲ. ಆದರೆ ಇತ್ತೀಚೆಗೆ ಈ ದೊರೆಯ ನಾಲ್ಕು ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ನಾಣ್ಯದ ತೂಕ 50 ಗ್ರೇನ್; ಅಗಲ 0.6".

ಮು : ಕಮಾನಿನ ಕೆಳಗೆ ಕುಳಿತಿರುವ ನಂದಿ

ಹಿ : ಎರಡು ಸಾಲುಗಳ ಕನ್ನಡ ಬರಹ

ರಾಮ

ರಾಜ

ಎರಡನೆಯ ನಮೂನೆಯ ನಾಣ್ಯದ ತೂಕ 30 ಗ್ರೇನ್; ಅಗಲ 0.6".

ಮು : ಇಬ್ಬರು ದೇವತೆಗಳು (ಸ್ಪಷ್ಟವಾಗಿ ಯಾರೆಂದು ಗುರುತಿಸಲು ಆಗಿಲ್ಲ)

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ

ರಾಮ

ರಾಜ

ಮೂರನೆಯ ನಮೂನೆಯ ನಾಣ್ಯದ ತೂಕ 6 ಗ್ರೇನ್; ಅಗಲ 0.4".

ಮು : ಒಬ್ಬ ದೇವತೆಯ ಚಿತ್ರ; ಬಹುಶಃ ರಾಮ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ

ರಾಮ

ರಾಯ

ನಾಲ್ಕನೆಯ ನಮೂನೆಯ ನಾಣ್ಯದ ತೂಕ 40 ಗ್ರೇನ್; ಅಗಲ 0.6".


ಮು : ಬಿಂದುಗಳ ವೃತ್ತದಲ್ಲಿ ನಿಂತಿರುವ ವೆಂಕಟೇಶ್ವರ

ಹಿ : ಅಡ್ಡ ಗೆರೆಗಳಿರುವ ಮೂರು ಸಾಲುಗಳ ಕನ್ನಡ ಬರಹ

ಶ್ರೀ

ರಾಮ

ರಾಜ



ಕೃಷ್ಣದೇವರಾಯನು ಆರಂಭಿಸಿದ ವೆಂಕಟೇಶ್ವರ ನಮೂನೆಯ ನಾಣ್ಯವನ್ನು ಇವನು ಮುಂದುವರಿಸಿದನು. ಆದರೆ ಅದರ ವಿನ್ಯಾಸದಲ್ಲಿ ಬದಲಾವಣೆಯಿರುವುದನ್ನು ಗಮನಿಸಬೇಕು.

ಒಂದನೆಯ ತಿರುಮಲರಾಯ (ಕ್ರಿ.ಶ. 1570-1578)

ಆರವೀಡು ಮನೆತನದ ಒಂದನೆಯ ತಿರುಮಲರಾಯನು ರಾಜಕೀಯ ಕಾರಣಗಳಿಂದಾಗಿ ತನ್ನ ರಾಜಧಾನಿಯನ್ನು ಪೆನುಗೊಂಡೆಗೆ ಬದಲಾಯಿಸಿದನು. ಇದು ನಾಣ್ಯಗಳ ಮೇಲೆ ಸ್ವಲ್ಪ ಮಟ್ಟಿಗೆ ಪ್ರಭಾವ ಬೀರಿತು. ಪೆನುಗೊಂಡೆಯಲ್ಲಿದ್ದ ಟಂಕಶಾಲೆಗೆ ಹೆಚ್ಚಿನ ಪ್ರಾಮುಖ್ಯ ಲಭಿಸಿತು. ಸ್ಥಳೀಯ ಪ್ರಭಾವಗಳಿಗನುಗುಣವಾಗಿ ಶೈವ ಧರ್ಮದ ಪ್ರಭಾವ ನಾಣ್ಯಗಳಲ್ಲಿ ಕಡಿಮೆಯಾಯಿತು. ಶ್ರೀರಾಮ ಮತ್ತು ವೆಂಕಟೇಶ್ವರ ದೇವತೆಗಳ ಪ್ರಭಾವ ಹೆಚ್ಚಾಗತೊಡಗಿತು. ಇದುವರೆಗೆ ಶ್ರೀರಾಮ - ಸೀತೆಯರ ಚಿತ್ರವನ್ನು ಯಾವ ವಿಜಯನಗರದ ರಾಜರೂ ಅಚ್ಚು ಹಾಕಿಸಿರಲಿಲ್ಲ. ಈಗ ಈ ನಮೂನೆಯ ನಾಣ್ಯ ಪ್ರಾಮುಖ್ಯ ಪಡೆಯಿತು ಹಾಗೂ ಜನಾನುರಾಗಿಯಾಯಿತು. ದಕ್ಷಿಣ ಭಾರತದಲ್ಲಿ ರಾಮಟಂಕಿ ನಾಣ್ಯ ಬಹಳಷ್ಟು ಮಟ್ಟಿಗೆ ಜನಮನ್ನಣೆ ಗಳಿಸಲು ಆರಂಭವಾಯಿತು.

ತಿರುಮಲರಾಯನ ಶ್ರೀರಾಮ-ಸೀತೆ ನಮೂನೆಯ ಚಿನ್ನದ ನಾಣ್ಯಗಳು ವರಹ ಮತ್ತು ಅರ್ಧ ವರಹ ತೂಕಗಳಲ್ಲಿ ದೊರಕಿವೆ. ವರಹದ ತೂಕ 52 ಗ್ರೇನ್; ಅಗಲ 0.5".

ಮು : ಎತ್ತರವಾದ ಆಸನದಲ್ಲಿ, ಕಿರೀಟಧಾರಿಯಾದ ಶ್ರೀರಾಮ; ಅವನ ಎಡ ಭಾಗದಲ್ಲಿ ಸೀತೆ; ಹಿಂಭಾಗದಲ್ಲಿ ಬಿಲ್ಲನ್ನು ಬಲಭುಜಕ್ಕೆ ಏರಿಸಿಕೊಂಡಿರುವ ಮತ್ತು ಕೈ ಮುಗಿದುಕೊಂಡಿರುವ ಲಕ್ಷ್ಮಣ; ಶ್ರೀರಾಮನ ಕೈ ಅಭಯಮುದ್ರೆಯಲ್ಲಿ.

ಹಿ : ಅಡ್ಡಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ತಿ

ರುಮಲರಾ

ಯಲು



ಇದೇ ನಮೂನೆಯ ಚಿನ್ನದ ಅರ್ಧ ವರಹದ ತೂಕ 26 ಗ್ರೇನ್; ಅಗಲ 0.4". ಮುಮ್ಮುಖ ಮತ್ತು ಹಿಮ್ಮುಖಗಳೆರಡರಲ್ಲೂ ಇದು ಮೇಲಿನ ನಾಣ್ಯವನ್ನೇ ಹೋಲುತ್ತದೆ.

ಈ ದೊರೆಯ ತಾಮ್ರದ ನಾಣ್ಯಗಳು ಐದು ನಮೂನೆಗಳಲ್ಲಿ ದೊರಕಿವೆ. ಮೊದಲನೆಯದು ಗರುಡ ನಮೂನೆಯ ನಾಣ್ಯ. ಇದರ ತೂಕ 45 ಗ್ರೇನ್; ಅಗಲ 0.7".

ಮು : ಬಿಂದುಗಳ ವೃತ್ತದೊಳಗೆ ಮೊಣಕಾಲೂರಿರುವ ಗರುಡ; ಮುಂದೆ ಖಡ್ಗ; ಅದರ ಅಕ್ಕಪಕ್ಕಗಳಲ್ಲಿ ಶಂಖ ಮತ್ತು ಚಕ್ರ

ಹಿ : ಎರಡು ಸಮಾನಾಂತರ ವೃತ್ತದೊಳಗೆ ಮೂರು ಸಾಲುಗಳ ನಾಗರೀ ಬರಹ

ಶ್ರೀ ತಿ

ರುಮಲ

ರಾಯ

ಎರಡನೆಯ ನಮೂನೆಯ ನಾಣ್ಯದಲ್ಲಿ ವರಾಹವಿದೆ. ಇದರಲ್ಲಿ ಅನೇಕ ಪ್ರಭೇದಗಳು ಕಾಣಸಿಗುತ್ತವೆ. ಒಂದು ರೀತಿಯ ನಾಣ್ಯದ ತೂಕ 50 ಗ್ರೇನ್; ಅಗಲ 0.7".

ಮು : ಬಿಂದುಗಳ ಸಮಾನಾಂತರ ಎರಡು ವೃತ್ತಗಳಲ್ಲಿ ಎಡಕ್ಕೆ ಚಲಿಸುತ್ತಿರುವ ಅಲಂಕೃತ ವರಾಹ; ಮೇಲೆ ಖಡ್ಗ ಮತ್ತು ಸೂರ್ಯ

ಹಿ : ಅಡ್ಡಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ತಿ

ರುಮಲ

ರಾಯ

ಈ ನಮೂನೆಯ ನಾಣ್ಯಗಳಲ್ಲಿ ಸಣ್ಣ ಪುಟ್ಟ ಭಿನ್ನತೆಗಳನ್ನು ಹೊಂದಿರುವ ಪ್ರಭೇದಗಳನ್ನು ಕಾಣಬಹುದು. ಒಂದು ನಾಣ್ಯದ ತೂಕ 50 ಗ್ರೇನ್; ಅಗಲ 0.6".

ಮು : ಬಲಕ್ಕೆ ಚಲಿಸುತ್ತಿರುವ ವರಾಹ; ಮೇಲೆ ಖಡ್ಗ ಮತ್ತು ಸೂರ್ಯ

ಹಿ : ಮೂರು ಸಾಲುಗಳ ಅಡ್ಡ ಗೆರೆಗಳಿರುವ ನಾಗರೀ ಬರಹ

ಚಲಮ

ತಿರುಮ

ಲರಾಯ

ಇದೇ ನಮೂನೆಯ ಇನ್ನೊಂದು ನಾಣ್ಯದ ತೂಕ 48 ಗ್ರೇನ್; ಅಗಲ 0.6".

ಮು : ವೃತ್ತದೊಳಗೆ ಎಡಕ್ಕೆ ನಿಂತಿರುವ ವರಾಹ; ವರಾಹದ ಬಾಯಿಯ ಹತ್ತಿರ ಖಡ್ಗ; ಮೇಲೆ ಚಂದ್ರ

ಹಿ : ಬಿಂದುಗಳ ವೃತ್ತದೊಳಗೆ ಅಡ್ಡ ಗೆರೆಯಿರುವ ಕನ್ನಡ ಬರಹ

ತಿರುಮ

ಲರಾಯ

ಮೂರನೆಯ ನಮೂನೆಯ ನಾಣ್ಯದಲ್ಲಿ ನಂದಿಯ ಚಿತ್ರವಿದೆ. ಇದರ ತೂಕ 46 ಗ್ರೇನ್; ಅಗಲ 0.6".

ಮು : ಬಿಂದುಗಳ ವೃತ್ತದೊಳಗೆ ಎಡಕ್ಕೆ ನಂದಿ; ಮುಂದೆ ಖಡ್ಗ; ಅಕ್ಕಪಕ್ಕಗಳಲ್ಲಿ ಸೂರ್ಯ-ಚಂದ್ರರು

ಹಿ : ಮೂರು ಸಾಲುಗಳ ಮತ್ತು ಅಡ್ಡ ಗೆರೆಗಳಿರುವ ನಾಗರೀ ಬರಹ

ಶ್ರೀ ತಿ

ರುಮಲ

ರಾಯ

ನಾಲ್ಕನೆಯ ನಮೂನೆಯ ನಾಣ್ಯದಲ್ಲಿ ಖಡ್ಗದ ಚಿತ್ರವಿದೆ. ಇದರ ತೂಕ 52 ಗ್ರೇನ್; ಅಗಲ 0.7".


ಮು : ಬಿಂದುಗಳ ಮತ್ತು ಗೆರೆಯ ವೃತ್ತದೊಳಗೆ ದೊಡ್ಡ ಪ್ರಮಾಣದ ಖಡ್ಗ; ಖಡ್ಗದ ಸುತ್ತ ಪ್ರಭಾವಳಿ; ಕೆಳಗೆ ಎರಡು ಕಡೆಗಳಲ್ಲಿ ಶಂಖ-ಚಕ್ರ

ಹಿ : ಬಿಂದುಗಳ ಮತ್ತು ಗೆರೆಯ ವೃತ್ತದೊಳಗೆ ಅಡ್ಡ ಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ತಿ

ರುಮಲ

ರಾಯ



ಮುಮ್ಮುಖದಲ್ಲಿರುವ ಖಡ್ಗಕ್ಕೆ ಪ್ರಭಾವಳಿ ಇರುವುದನ್ನು ಗಮನಿಸಿದರೆ, ಇದು ಪೂಜನೀಯವಾದ ಪಟ್ಟದ ಕತ್ತಿಯಿರಬಹುದೆಂದು ತಿಳಿಯಬಹುದು.

ಐದನೆಯ ನಮೂನೆಯ ನಾಣ್ಯದಲ್ಲಿ ಆನೆಯ ಚಿತ್ರವಿದೆ. ಇದರ ತೂಕ 54 ಗ್ರೇನ್; ಅಗಲ 0.7".

ಮು : ಬಿಂದುಗಳ ಮತ್ತು ಗೆರೆಯ ವೃತ್ತದೊಳಗೆ ಎಡಕ್ಕೆ ಚಲಿಸುತ್ತಿರುವ ಆನೆ; ಸೊಂಡಿಲ ಮುಂಭಾಗದಲ್ಲಿ ಆನೆ; ಮೇಲೆ ಸೂರ್ಯ-ಚಂದ್ರರು

ಹಿ : ವೃತ್ತದೊಳಗೆ ಮೂರು ಸಾಲುಗಳ ನಾಗರೀ ಬರಹ

ಶ್ರೀ ಚ

ಲಮ

ರಾಯ

ಇವನ ವರಾಹ ನಮೂನೆಯ ನಾಣ್ಯದಲ್ಲಿ ಚಲಮತಿರುಮಲರಾಯ ಎನ್ನುವ ಬರಹವಿರುವುದರಿಂದ ಚಲಮ ಎನ್ನುವ ಬರಹ ಇವನಿಗೆ ಸೇರಿದ್ದೆಂದು ಭಾವಿಸಲಾಗಿದೆ. ಆದುದರಿಂದ ಇವನ ಹೆಸರು ಇಲ್ಲದೆ ಕೇವಲ ಚಲಮರಾಯ ಎನ್ನುವ ಹೆಸರಿನ ಬರಹವಿರುವ ನಾಣ್ಯಗಳೆಲ್ಲವೂ ಮೊದಲನೆಯ ತಿರುಮಲರಾಯನಿಗೆ ಸೇರಿದ್ದೆಂದು ಭಾವಿಸಲಾಗಿದೆ. ಚಲಮರಾಯ ಎನ್ನುವ ಹಿಮ್ಮುಖದ ಬರಹವಿರುವ ನಾಣ್ಯಗಳಲ್ಲಿ ಅನೇಕ ಪ್ರಭೇದಗಳು ಕಾಣಬರುತ್ತವೆ. ಕೆಲವು ತಾಮ್ರದ ನಾಣ್ಯಗಳಂತೂ ತುಂಬ ಕಲಾತ್ಮಕವಾಗಿ ಕಾಣಬರುತ್ತವೆ.

ರಾಮರಾಯ ವೆಂಕಟಾದ್ರಿ

ರಾಮರಾಯ ವೆಂಕಟಾದ್ರಿ ಎನ್ನುವ ಕನ್ನಡ ಬರಹವಿರುವ ತಾಮ್ರದ ನಾಣ್ಯವೊಂದು ಇತ್ತೀಚೆಗೆ ದೊರಕಿದ್ದು ಕುತೂಹಲವನ್ನುಂಟುಮಾಡಿದೆ. ರಾಮರಾಯನು ನಾಣ್ಯಗಳನ್ನು ಟಂಕಿಸಲಿಲ್ಲವೆಂದು ಸಾಮಾನ್ಯವಾಗಿ ಭಾವಿಸಲಾಗಿತ್ತು. ಆದರೆ ಈಗ ದೊರಕಿರುವ ನಾಣ್ಯವು ಈ ವಿಷಯದಲ್ಲಿ ಸಂದೇಹವನ್ನು ಉಂಟುಮಾಡುತ್ತದೆ. ಇದರಲ್ಲಿ ರಾಮರಾಯ ಮತ್ತು ವೆಂಕಟಾದ್ರಿ ಎನ್ನುವ ಎರಡು ಹೆಸರುಗಳೂ ಒಟ್ಟಿಗೆ ಸೇರಿರುವುದು ಕುತೂಹಲದ ಸಂಗತಿ.

ಸದಾಶಿವರಾಯನು ಆಳುತ್ತಿದ್ದಾಗ ರಾಜ್ಯಪಾಲನಾಗಿದ್ದ ವೆಂಕಟಾದ್ರಿಯು, ರಾಮರಾಯನ ಅನುಮತಿಯನ್ನು ಪಡೆದುಕೊಂಡು ಈ ನಾಣ್ಯವನ್ನು ಟಂಕಿಸಿರಬಹುದು ಎಂದು ಊಹಿಸಬೇಕಾಗುತ್ತದೆ. ಈ ಸಂಯುಕ್ತ ಹೆಸರು ಶಾಸನಗಳಲ್ಲಿಯೂ ಕಾಣಸಿಗುತ್ತದೆ. ಸದಾಶಿವರಾಯನ ಕೋಟೇಶ್ವರ ಶಾಸನದಲ್ಲಿ ಬಾರಕೂರು ರಾಜ್ಯವನ್ನು ಯೇಕದಲಕನ ಒಡೆಯನು, ರಾಮರಾಜವೆಂಕಟ್ರಾದಿಯ ಅಪ್ಪಣೆಯ ಮೇರೆಗೆ ಆಳುತ್ತಿದ್ದನೆಂದು ಉಲ್ಲೇಖಿತವಾಗಿದೆ. ಮತ್ತೊಂದು ಶಾಸನದಲ್ಲಿ ಸದಾಶಿವರಾಯನು ತುಳುರಾಜ್ಯವನ್ನು ರಾಮರಾಜವೆಂಕಟಾದ್ರಿರಾಜನ ಆಜ್ಞೆಯ ಮೇರೆಗೆ ಆಳುತ್ತಿದ್ದನೆಂದು ಹೇಳಿದೆ. ಈ ಉಲ್ಲೇಖಗಳಿಂದ ಈ ಸಂಯುಕ್ತ ಹೆಸರಿನ ದೊರೆಯು ವೆಂಕಟಾದ್ರಿಯೆಂದು ಗೊತ್ತಾಗುತ್ತದೆ. ಈ ಮಾಹಿತಿಯ ಆಧಾರದ ಮೇಲೆ ಈ ತಾಮ್ರದ ನಾಣ್ಯವನ್ನು ಟಂಕಿಸಿದವನು ವೆಂಕಟಾದ್ರಿ ಎಂದು ಖಚಿತವಾಗಿ ಹೇಳಬಹುದು.

ಈ ತಾಮ್ರದ ನಾಣ್ಯದ ತೂಕ 203 ಗ್ರೇನ್; ಇದರ ಅಗಲ 0.7". ಇದು ಗರುಡ ನಮೂನೆಯ ನಾಣ್ಯ.

ಮು : ಮೊಣಕಾಲೂರಿರುವ ಉದ್ದನೆಯ ಕೊಕ್ಕಿನ ಗರುಡ; ಗರುಡನಿಗೆ ಕಿರೀಟವಿಲ್ಲ; ಎಡಭಾಗದಲ್ಲಿ ಖಡ್ಗ

ಹಿ : ಅಡ್ಡಗೆರೆಯಿರುವ ಎರಡು ಸಾಲುಗಳ ಕನ್ನಡ ಬರಹ

ರಾಮರಾಯ

ವೆಂಕಟಾದ್ರಿ

ಮೊದಲನೆಯ ಶ್ರೀರಂಗರಾಯ (ಕ್ರಿ.ಶ. 1578-1586)

ಈ ದೊರೆಯ ಚಿನ್ನದ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಚಿನ್ನದ ನಾಣ್ಯ ವರಹ ಮೌಲ್ಯದ್ದು. ಅದರ ತೂಕ 52 ಗ್ರೇನ್; ಅಗಲ 0.5". ಇದು ತಿರುಪತಿಯ ವೆಂಕಟೇಶ್ವರ ನಮೂನೆಯ ನಾಣ್ಯ.

ಮು : ಕಿರೀಟಧಾರಿಯಾದ ವೆಂಕಟೇಶ್ವರ; ಹಿಂಭಾಗದ ಬಲಗೈಯಲ್ಲಿ ಚಕ್ರ; ಎಡಗೈಯಲ್ಲಿ ಶಂಖ; ಮುಂಭಾಗದ ಬಲಗೈ ದಾನಮುದ್ರೆಯಲ್ಲಿ; ಎಡಗೈ ಕಟಿ ಭಾಗದ ಮೇಲೆ; ಹಿಂಭಾಗದಲ್ಲಿ ಅಲಂಕೃತ ಪ್ರಭಾವಳಿ ಮತ್ತು ಕಂಬಗಳು

ಹಿ : ಅಡ್ಡ ಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ ರಂ

ಗರಾ

ಯ

ಈ ಹಿಂದೆ ಈ ನಮೂನೆಯ ಚಿನ್ನದ ನಾಣ್ಯವನ್ನು ಕೃಷ್ಣದೇವರಾಯನ ಅಚ್ಚು ಮಾಡಿಸಿದ್ದು ಇದನ್ನೇ ಶ್ರೀರಂಗರಾಯನು ಮುಂದುವರಿಸಿದನು. ಆದರೆ ಈ ಪ್ರಸ್ತುತ ನಾಣ್ಯ ವರಹ ಮೌಲ್ಯದ್ದಾಗಿದ್ದು ಇದರ ತೂಕ 52 ಗ್ರೇನ್; ಕೃಷ್ಣದೇವರಾಯನ ನಾಣ್ಯವಾದರೋ ಇದರ ಎರಡರಷ್ಟು ತೂಕ ಉಳ್ಳದ್ದಾಗಿದ್ದು, 120 ಗ್ರೇನ್ ತೂಗುತ್ತಿತ್ತು. ಇದೇ ನಮೂನೆಯ ಇನ್ನೊಂದು ನಾಣ್ಯವು ಅರ್ಧ ವರಹ ಮೌಲ್ಯದ್ದಾಗಿದೆ. ಇದರ ತೂಕ 26 ಗ್ರೇನ್; ಅಗಲ 0.5".

ಇದೇ ದೊರೆಯ ತಾಮ್ರದ ನಾಣ್ಯಗಳು ಆರು ನಮೂನೆಗಳಲ್ಲಿ ಕಂಡುಬಂದಿವೆ. ಮೊದಲನೆಯ ನಮೂನೆಯ ನಾಣ್ಯದ ತೂಕ 35 ಗ್ರೇನ್; ಅಗಲ 0.6". ಇದು ವಿಷ್ಣು ನಮೂನೆಯ ನಾಣ್ಯ.

ಮು : ನಿಂತಿರುವ ವಿಷ್ಣು; ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರ; ಮಿಕ್ಕ ಕೈಗಳು ಅಭಯ ಮುದ್ರೆ ಮತ್ತು ಕಟಿಹಸ್ತ

ಹಿ : ತೆಲುಗು ಲಿಪಿಯ ಎರಡು ಸಾಲುಗಳ ಬರಹ

ರಂಗ

ರಾಯ

ಎರಡನೆಯದು ಕೃಷ್ಣ ನಮೂನೆಯ ನಾಣ್ಯ. ಇದರ ತೂಕ 35 ಗ್ರೇನ್; ಅಗಲ 0.6".

ಮು : ನರ್ತನ ಮಾಡುತ್ತಿರುವ ಕೃಷ್ಣ; ಪಕ್ಕದಲ್ಲಿ ಶಂಖ-ಚಕ್ರ

ಹಿ : ಎರಡು ಸಾಲುಗಳ ತೆಲುಗು ಬರಹ

ರಂಗ

ರಾಯ

ಇದು ಕೃಷ್ಣದೇವರಾಯನ ಬಾಲಕೃಷ್ಣ ನಮೂನೆಯ ನಾಣ್ಯಕ್ಕಿಂತ ಭಿನ್ನವಾಗಿದೆ. ಆದರೆ ಅದೇ ಪರಂಪರೆಯನ್ನು ಮುಂದುವರಿಸುತ್ತದೆ.

ಮೂರನೆಯದು ಹನುಮಾನ್ ನಮೂನೆಯ ತಾಮ್ರದ ನಾಣ್ಯ. ಇದರ ತೂಕ 40 ಗ್ರೇನ್; ಅಗಲ 0.5".

ಮು : ಎಡಕ್ಕಿರುವ ಹನುಮಾನ್; ಬಾಲವನ್ನು ಮೇಲೆತ್ತಿಕೊಂಡಿದ್ದಾನೆ

ಹಿ : ಬಿಂದುಗಳ ವೃತ್ತದೊಳಗೆ ಎರಡು ಸಾಲುಗಳ ಕನ್ನಡ ಬರಹ

ಶ್ರೀ

ರಂಗರಾ

ಯ

ನಾಲ್ಕನೆಯದು ಗರುಡ ನಮೂನೆಯ ನಾಣ್ಯ. ಇದರ ತೂಕ 150 ಗ್ರೇನ್; ಅಗಲ 0.9"

ಮು : ವೃತ್ತದೊಳಗೆ ಪದ್ಮಾಸನದಲ್ಲಿರುವ ಗರುಡ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ

ರಂಗರಾ

ಯ

ಐದನೆಯದು ನಂದಿ ನಮೂನೆಯ ನಾಣ್ಯ. ಇದರ ತೂಕ 35 ಗ್ರೇನ್; ಅಗಲ 0.6".

ಮು : ಬಲಕ್ಕಿರುವ ನಂದಿ

ಹಿ : ವೃತ್ತಾಕಾರದಲ್ಲಿ ಕನ್ನಡ ಬರಹ

ಶ್ರೀ ರಂಗರಾಯ



ಆರನೆಯದು ಗಂಡಭೇರುಂಡ ನಮೂನೆಯ ನಾಣ್ಯ. ಇದರ ತೂಕ 30 ಗ್ರೇನ್; ಅಗಲ 0.6".

ಮು : ಬಿಂದುಗಳ ವೃತ್ತದಲ್ಲಿ ಬಲಕ್ಕಿರುವ ಗಂಡಭೇರುಂಡ; ಕೊಕ್ಕುಗಳಲ್ಲಿ ಆನೆಗಳು

ಹಿ : ಬಿಂದುಗಳ ವೃತ್ತದಲ್ಲಿ ಎರಡು ಸಾಲುಗಳ ಕನ್ನಡ ಬರಹ

ಶ್ರೀ

ರಂಗರಾಯ

ಈ ಮೇಲಿನ ನಮೂನೆಗಳನ್ನು ಗಮನಿಸಿದರೆ, ಶ್ರೀರಂಗರಾಯನು ವಿಶೇಷವಾಗಿ ಕೃಷ್ಣದೇವರಾಯನ ನಾಣ್ಯಗಳನ್ನು ಅನುಕರಿಸಿದನು; ಹಾಗೆಯೇ ಅಚ್ಯುತರಾಯನ ಗಂಡಭೇರುಂಡ ನಮೂನೆಯ ನಾಣ್ಯವನ್ನು ಅನುಕರಿಸಿದನು ಎಂದು ಗೊತ್ತಾಗುತ್ತದೆ.

ಇಮ್ಮಡಿ ವೆಂಕಟಪತಿರಾಯ (ಕ್ರಿ.ಶ. 1632-1642)

ಆರವೀಡು ಮನೆತನದ ಈ ರಾಜನು ಚಿನ್ನ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಇವನ ನಾಣ್ಯಗಳ ಮೇಲೆ ಇವನನ್ನು ವೆಂಕಟರಾಯ ಎಂದು ಹೆಸರಿಸಲಾಗಿದೆ. ಇವನೂ ತಿರುಪತಿಯ ಅಧಿದೇವತೆಯ ಭಕ್ತನಾದುದರಿಂದ, ವೆಂಕಟೇಶ್ವರ ನಮೂನೆಯ ನಾಣ್ಯಗಳನ್ನು ಮುಂದುವರಿಸಿದನು. ಶಾಸನಗಳಲ್ಲಿ ಇವನ ಚಿನ್ನದ ನಾಣ್ಯಗಳನ್ನು ವೆಂಕಟರಾಯ ವರಹ ಎಂದು ಕರೆಯಲಾಗಿದೆ. ಇವನ ಚಿನ್ನದ ವರಹ ನಾಣ್ಯದ ತೂಕ 52 ಗ್ರೇನ್; ಅಗಲ 0.5". ಇದು ವೆಂಕಟೇಶ್ವರ ನಮೂನೆಯ ನಾಣ್ಯ.

ಮು : ಅಲಂಕೃತ ಮಂಟಪದ ಕೆಳಗೆ ನಿಂತಿರುವ ವೆಂಕಟೇಶ್ವರ; ಅಕ್ಕಪಕ್ಕದಲ್ಲಿ ಕಂಬಗಳು; ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರ; ಇನ್ನೊಂದು ಅಭಯ ಮುದ್ರೆಯಲ್ಲಿ

ಹಿ : ಮೂರು ಸಾಲುಗಳ ನಾಗರೀ ಬರಹ; ಅಡ್ಡಗೆರೆಗಳು;

ವೀರ

ವೆಂಕಟ

ರಾಯ



ಇದೇ ನಮೂನೆಯ ಅರ್ಧ ವರಹ ನಾಣ್ಯ ದೊರಕಿದೆ. ಇದರ ತೂಕ 27 ಗ್ರೇನ್; ಅಗಲ 0.45". ಹಿಮ್ಮುಖ ಮತ್ತು ಮುಮ್ಮುಖಗಳೆರಡಲ್ಲೂ, ಮೇಲಿನ ನಾಣ್ಯವನ್ನೇ ಸಂಪೂರ್ಣವಾಗಿ ಹೋಲುತ್ತದೆ. ಇದೇ ನಮೂನೆಯ ಇನ್ನೊಂದು ನಾಣ್ಯದಲ್ಲಿ ಮುಮ್ಮುಖದಲ್ಲಿ ಮೇಲಿನಂತೆ ಇರುವ ದೇವತೆ ಇದ್ದರೆ, ಹಿಮ್ಮುಖದಲ್ಲಿ ಚಲಮ ವೆಂಕಟರಾಯ ಎನ್ನುವ ಬರಹವಿದೆ.

ವೆಂಕಟಪತಿರಾಯನ ತಾಮ್ರದ ನಾಣ್ಯಗಳು ಏಳು ನಮೂನೆಗಳಲ್ಲಿ ದೊರಕಿವೆ. ಒಂದು ನಮೂನೆಯ ನಾಣ್ಯದ ತೂಕ 158 ಗ್ರೇನ್; ಅಗಲ 0.8". ಇದು ಗರುಡ ನಮೂನೆಯ ನಾಣ್ಯ.

ಮು : ಬಿಂದುಗಳ ವೃತ್ತದೊಳಗೆ ಎಡಕ್ಕೆ ನಿಂತಿರುವ ಗರುಡ; ಉದ್ದನೆಯ ಕಿರೀಟ; ವೀರಾಸನದಲ್ಲಿ ಕುಳಿತಿರುವ ಆಕರ್ಷಕ ಮುದ್ರೆ.


ಹಿ : ಮೂರು ಸಾಲುಗಳ ಕನ್ನಡ ಬರಹ

ಶ್ರೀ

ವೆಂಕಟ

ರಾಯ

ಇದೇ ನಮೂನೆಯ ಇನ್ನೊಂದು ನಾಣ್ಯದ ತೂಕ 165 ಗ್ರೇನ್; ಅಗಲ 0.7".



ಇದರಲ್ಲಿ ಗರುಡನಿಗೆ ಕಿರೀಟವಿಲ್ಲ; ಹಿಮ್ಮುಖದ ಕನ್ನಡ ಬರವಣಿಗೆ 'ಶ್ರೀ ವೆಂಕಟ' ಎಂದಿದೆ.

ಎರಡನೆಯ ನಮೂನೆಯ ನಾಣ್ಯದಲ್ಲಿ ಹನುಮಂತನ ಚಿತ್ರವಿದೆ. ಇದರ ತೂಕ 160 ಗ್ರೇನ್; ಅಗಲ 0.7".

ಮು : ಮೊಣಕಾಲೂರಿರುವ ಮತ್ತು ಎಡಕ್ಕಿರುವ ಹನುಮಾನ್; ಬಲಗೈ ಮೇಲೆತ್ತಿದ್ದಾನೆ; ಬಾಲವನ್ನು ಮೇಲೆತ್ತಿದ್ದಾನೆ.

ಹಿ : ಚೌಕ ವಿನ್ಯಾಸದಲ್ಲಿ ಎರಡು ಸಾಲುಗಳ ನಾಗರೀ ಬರಹ

ಶ್ರೀ ವೆಂಕ

ಟರಾಯ

ಮೂರನೆಯ ನಮೂನೆಯ ನಾಣ್ಯ ಲಕ್ಷ್ಮೀನಾರಾಯಣ ನಮೂನೆ (ಗಣೇಶ್ - ಗಿರಿಜಾಪತಿ ಶೋಧ). ಇದರ ತೂಕ 180 ಗ್ರೇನ್; ಅಗಲ 0.7".

ಮು : ಕುಳಿತಿರುವ ಲಕ್ಷ್ಮೀನಾರಾಯಣ; ಬಲಗೈಯಲ್ಲಿ ಚಕ್ರ; ಎಡಗೈಯಲ್ಲಿ ಶಂಖ; ಇನ್ನೊಂದು ಬಲಗೈ ಅಭಯ ಮುದ್ರೆಯಲ್ಲಿ; ಮತ್ತೊಂದು ಎಡಗೈ ಲಕ್ಷ್ಮಿಯ ಮೇಲೆ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ

ವೆಂಕಟ

ರಾಯ

ನಾಲ್ಕನೆಯ ನಮೂನೆಯ ನಾಣ್ಯದಲ್ಲಿ ನಂದಿಯ ಚಿತ್ರವಿದೆ. ಇದರ ತೂಕ 200 ಗ್ರೇನ್; ಅಗಲ 0.8" (ಗಣೇಶ್ - ಗಿರಿಜಾಪತಿ ಶೋಧ).

ಮು : ಎಡಕ್ಕಿರುವ ನಂದಿ; ಮೇಲೆ ಸೂರ್ಯ-ಚಂದ್ರರು

ಹಿ : ಮೂರು ಸಾಲುಗಳ ಕನ್ನಡ ಬರಹ

ಶ್ರೀ

ವೆಂಕಟ

ರಾಯ



ಐದನೆಯ ನಮೂನೆಯಲ್ಲಿ ಹನುಮಂತನ ಚಿತ್ರವಿದೆ. ಇದರ ತೂಕ 120 ಗ್ರೇನ್; ಅಗಲ 0.6". ಇದು ಮೇಲೆ ಉಲ್ಲೇಖಿಸಿದ ಹನುಮಂತನ ನಮೂನೆಯ ನಾಣ್ಯಕ್ಕಿಂತ ಭಿನ್ನವಾಗಿದೆ (ಪಿ.ವಿ. ರಾಧಾಕೃಷ್ಣ ಅವರ ಶೋಧ).

ಮು : ಎರಡು ಗುಡ್ಡಗಳ ತುದಿ ಮತ್ತು ಹನುಮಾನ್

ಹಿ : ಎರಡು ಸಾಲುಗಳ ಕನ್ನಡ ಬರಹ

ವೆಂಕ

ಟಪ

ಆರನೆಯ ನಮೂನೆಯ ನಾಣ್ಯದಲ್ಲಿ ನಂದಿಯ ಚಿತ್ರವಿದೆ. ಇದರ ತೂಕ 130 ಗ್ರೇನ್; ಅಗಲ 0.6" (ಪಿ.ವಿ. ರಾಧಾಕೃಷ್ಣ ಅವರ ಶೋಧ).

ಮು : ಎರಡು ಗುಡ್ಡಗಳ ತುದಿ ಮತ್ತು ಕುಳಿತಿರುವ ನಂದಿ

ಹಿ : ಎರಡು ಸಾಲುಗಳ ಕನ್ನಡ ಬರಹ

ಅರು

ಣಾದ್ರಿ

ಈ ನಾಣ್ಯದ ಮೇಲೆ ರಾಜನ ಹೆಸರು ಇಲ್ಲದೇ ಇದ್ದರೂ ಮೇಲಿನ ಹನುಮಾನ್ ನಮೂನೆಯ ನಾಣ್ಯದಲ್ಲಿರುವ ಎರಡು ಗುಡ್ಡಗಳಿಂದ ಇದನ್ನು ಈ ರಾಜನಿಗೆ ಸೇರಿದ್ದೆಂದು ಭಾವಿಸಬಹುದು. ತಿರುವಣ್ಣಾಮಲೈನಲ್ಲಿ ವಿಜಯನಗರ ಕಾಲದ ಖ್ಯಾತ ದೇವಾಲಯವಿದ್ದಿತು. ಅದೊಂದು ಶಿವ ದೇವಾಲಯ. ಅದನ್ನು ಅರುಣಾದ್ರಿ ಎಂದು ಕರೆಯಲಾಗುತ್ತಿದ್ದಿತು. ಬಹುಶಃ ವೆಂಕಟಪತಿರಾಯನು ಈ ದೇವರ ಗೌರವಾರ್ಥವಾಗಿ ಈ ನಾಣ್ಯವನ್ನು ಅಚ್ಚು ಮಾಡಿಸಿರಬೇಕು.

ಏಳನೆಯ ನಮೂನೆಯಲ್ಲಿ ಗಂಡಭೇರುಂಡ ಚಿತ್ರವಿದೆ. ಇದರ ತೂಕ 190 ಗ್ರೇನ್; ಅಗಲ 0.4" (ಗಣೇಶ್ - ಗಿರಿಜಾಪತಿ ಶೋಧ).

ಮು : ತನ್ನ ಕೊಕ್ಕುಗಳಲ್ಲಿ ಆನೆಯನ್ನು ಹಿಡಿದಿರುವ ಗಂಡಭೇರುಂಡ

ಹಿ : ಅಡ್ಡ ಗೆರೆಗಳಿರುವ ನಾಗರೀ ಮತ್ತು ಕನ್ನಡ ಅಕ್ಷರಗಳ ಮಿಶ್ರ ಬರಹ

...

ವೆಂಕಟ

ರಾಯ

ಈ ನಮೂನೆಯಲ್ಲಿ ಅನೇಕ ಪ್ರಭೇದಗಳಿದ್ದು, ಕೆಲವಲ್ಲಿ ನಾಗರೀ ಬರಹ ಕಾಣಬರುತ್ತದೆ. ವೆಂಕಟಪತಿರಾಯನೂ ಹಿಂದಿನವರು ಟಂಕಿಸಿದ್ದ ನಾಣ್ಯ ನಮೂನೆಗಳನ್ನೇ ಮುಂದುವರಿಸಿದರು.

ಇಮ್ಮಡಿ ಶ್ರೀರಂಗರಾಯ (ಕ್ರಿ.ಶ. 1614)

ಇಮ್ಮಡಿ ಶ್ರೀರಂಗರಾಯನು ಸಹ ರಾಜಪ್ರತಿನಿಧಿಯಾಗಿದ್ದು ತೆಲಂಗಾಣ ಪ್ರದೇಶವನ್ನು ಆಳುತ್ತಿದ್ದನು. ಆದುದರಿಂದ ಇವನನ್ನು ಚಿಕ್ಕರಾಯ ಎಂದು ಕರೆಯುತ್ತಿದ್ದರು. ಈ ಹೆಸರೇ ಇವನ ನಾಣ್ಯಗಳಲ್ಲಿ ಕಾಣಬರುತ್ತದೆ. ತೆಲುಗು ಪ್ರದೇಶದಲ್ಲಿ ಆಳುತ್ತಿದ್ದುದರಿಂದ ಇವನು ಬರಹವನ್ನು ತೆಲುಗು ಭಾಷೆಯಲ್ಲಿ ಅಚ್ಚು ಮಾಡಿಸಿದನು. ಇವನ ಒಂದೇ ಒಂದು ನಮೂನೆಯ ತಾಮ್ರದ ನಾಣ್ಯ ಮಾತ್ರ ದೊರಕಿದೆ. ಇದರ ತೂಕ 20 ಗ್ರೇನ್; ಅಗಲ 0.5".

ಮು : ಬಲಕ್ಕಿರುವ ಅಲಂಕೃತ ನಂದಿ; ಮೇಲೆ ಸೂರ್ಯ-ಚಂದ್ರರು

ಹಿ : ಎರಡು ಸಾಲುಗಳ ತೆಲುಗು ಬರಹ

ಚಿಕರಾ

ಯಲು

ಇದೇ ನಮೂನೆಯ ಇನ್ನೊಂದು ನಾಣ್ಯದಲ್ಲಿ ಹಿಮ್ಮುಖದ ಬರಹದ ಮಧ್ಯದಲ್ಲಿ ಅಡ್ಡಗೆರೆಗಳಿವೆ.

ಮುಮ್ಮಡಿ ವೆಂಕಟಪತಿರಾಯ :

ಈ ದೊರೆಯ ಒಂದು ನಮೂನೆಯ ಚಿನ್ನದ ನಾಣ್ಯ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಇವನ ಚಿನ್ನದ ನಾಣ್ಯ ವರಹ ಮೌಲ್ಯದಲ್ಲಿದ್ದು, ಇದರ ತೂಕ 52 ಗ್ರೇನ್; ಅಗಲ 0.4".

ಮು : ಬಿಂದುಗಳಿಂದ ಅಲಂಕೃತವಾದ ವೃತ್ತದೊಳಗೆ ನಿಂತಿರುವ ವೆಂಕಟೇಶ್ವರ; ಕೈಗಳಲ್ಲಿ ಶಂಖ - ಚಕ್ರ; ಅಕ್ಕ ಪಕ್ಕದಲ್ಲಿ ಶ್ರೀದೇವಿ - ಭೂದೇವಿಯರು

ಹಿ : ಎರಡು ಸಾಲುಗಳ ನಾಗರೀ ಬರಹ

ವೆಂಕಟ

ಪತಿರಾಯ



ಇದು ವೆಂಕಟೇಶ್ವರ ನಮೂನೆಯ ನಾಣ್ಯವಾದರೂ, ಇದರಲ್ಲಿ ಶ್ರೀದೇವಿ - ಭೂದೇವಿಯನ್ನು ಅಳವಡಿಸಿರುವುದು ಈ ನಮೂನೆಯ ವೈಶಿಷ್ಟ್ಯ. ಕೃಷ್ಣದೇವರಾಯನಿಂದ ಆರಂಭಗೊಂಡು ಇತರ ಕೆಲವು ರಾಜರು ಮುಂದುವರಿಸಿದ ನಾಣ್ಯಗಳಲ್ಲಿ ವೆಂಕಟೇಶ್ವರನ ಚಿತ್ರ ಮಾತ್ರ ಇರುತ್ತಿದ್ದಿತು. ಈ ದೃಷ್ಟಿಯಿಂದ ವೆಂಕಟಪತಿರಾಯನ ನಾಣ್ಯ ಗಮನಾರ್ಹ.


ಇತ್ತೀಚೆಗೆ ದೊರಕಿರುವ ಇವನ ತಾಮ್ರದ ನಾಣ್ಯದ ಮೇಲೆ ವೈಷ್ಣವ ಚಿಹ್ನೆಗಳಿವೆ. ಇದರ ತೂಕ 10 ಗ್ರೇನ್; ಅಗಲ 0.3".

ಮು : ವೈಷ್ಣವ ಚಿಹ್ನೆ ಮೂರು ನಾಮ; ಬಲಗಡೆ ಶಂಖ, ಎಡಗಡೆ ಚಕ್ರ

ಹಿ : ಎರಡು ಸಾಲುಗಳ ತೆಲುಗು ಬರಹ

ಪತಿ

ರಾಜು



ಮುಮ್ಮಡಿ ಶ್ರೀರಂಗರಾಯ (ಕ್ರಿ.ಶ. 1642-1646)

ಇವನ ಕಾಲ ರಾಜಕೀಯ ದೃಷ್ಟಿಯಿಂದ ತೊಂದರೆಗಳ ಸಮಯ. ವಿಜಯನಗರದ ವೈಭವ ಇಳಿಮುಖವಾಗುತ್ತಿತ್ತು. ಇದು ಇವನ ನಾಣ್ಯಗಳಲ್ಲೂ ಬಿಂಬಿತವಾಗಿದೆ. ಇವನ ಚಿನ್ನದ ನಾಣ್ಯಗಳಲ್ಲಿ ಚಿನ್ನದ ಭಾಗ ತೀರ ಕಡಿಮೆ. ಈ ನಾಣ್ಯಗಳು ಗಂಡಿಕೋಟೆಯಲ್ಲಿದ್ದ ಟಂಕಶಾಲೆಯಲ್ಲಿ ಅಚ್ಚಾಗುತ್ತಿದ್ದವು. ಆದುದರಿಂದ ಈ ನಾಣ್ಯಗಳನ್ನು ಗಂಡಿಕೋಟೆ ವರಹ ಎಂದು ಕರೆಯುತ್ತಿದ್ದರು. ಈ ವರಹದ ತೂಕ 52 ಗ್ರೇನ್; ಅಗಲ 0.5".

ಮು : ಅಲಂಕೃತ ಮಂಟಪದಲ್ಲಿ ನಿಂತಿರುವ ವೆಂಕಟೇಶ್ವರ; ಕೈಗಳಲ್ಲಿ ಶಂಖ - ಚಕ್ರ; ಇನ್ನೊಂದು ಕೈ ಅಭಯ ಮುದ್ರೆ; ಮತ್ತೊಂದು ಕೈ ಕಟಿಹಸ್ತದಲ್ಲಿ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ವೆಂಕ

ಟೇಶ್ವರಾ

ಯ ನಮಃ



ಇದೂ ವೆಂಕಟೇಶ್ವರ ನಮೂನೆಯ ನಾಣ್ಯವೇ ಆದರೂ, ಈ ನಾಣ್ಯದ ಹಿಮ್ಮುಖದ ಬರಹದಿಂದ ಇದು ಭಿನ್ನವೆನಿಸಿದೆ. ಇದೇ ನಮೂನೆಯ ತಾಮ್ರದ ನಾಣ್ಯವೂ ದೊರಕಿದೆ.

ಅನಿಶ್ಚಿತ ನಾಣ್ಯಗಳು

ವಿಜಯನಗರಕ್ಕೆ ಸೇರಿದ ಕೆಲವು ನಾಣ್ಯಗಳು ಬೆಳಕಿಗೆ ಬಂದಿವೆ. ಇವುಗಳ ಹಿಮ್ಮುಖದ ಬರಹಗಳು ಸ್ಪಷ್ಟವಾಗಿಲ್ಲದ ಕಾರಣ, ಇವು ಯಾವ ದೊರೆಗೆ ಸೇರಿದವು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲವಾಗಿದೆ. ಕೆಲವು ಮುಖ್ಯ ನಾಣ್ಯಗಳನ್ನು ಇಲ್ಲಿ ಗಮನಿಸಲಾಗಿದೆ. ಇತ್ತೀಚಿಗೆ ಹಂಪೆಯಲ್ಲಿ ದೊರೆತ ಒಂದು ಚಿನ್ನದ ವರಹದ ತೂಕ 52 ಗ್ರೇನ್; ಅಗಲ 0.5". ವೃತ್ತದೊಳಗೆ ಕುಳಿತಿರುವ ಗಣೇಶ; ನಾಲ್ಕು ಕೈಗಳು; ಕಿರೀಟ ಧಾರಿ; ಈ ವಿವರಗಳು ಮುಮ್ಮುಖದಲ್ಲಿ ಕಾಣಬಂದವು. ಆದರೆ ಹಿಮ್ಮುಖದ ಬರಹ ತೀರ ಅಸ್ಪಷ್ಟ. ಆದುದರಿಂದ ಇದು ಯಾವ ವಿಜಯನಗರ ದೊರೆಗೆ ಸೇರಿದ್ದೆಂದು ಹೇಳಲಾಗುವುದಿಲ್ಲ. ಆದರೆ ವಿಜಯನಗರ ಧಾರ್ಮಿಕ ಇತಿಹಾಸದಲ್ಲಿ ಗಣೇಶನಿಗೆ ಪ್ರಮುಖ ಸ್ಥಾನವಿದೆ. ಅನೇಕ ಶಾಸನಗಳು 'ಶ್ರೀ ಗಣಾಧಿಪತಯೇ ನಮಃ' ಎಂದು ಆರಂಭವಾಗುತ್ತವೆ. ಹಂಪೆಯಲ್ಲಿ ಬೃಹದಾಕಾರದ ಗಣಪತಿಯ ಶಿಲ್ಪಗಳೂ ಇವೆ. ಇಷ್ಟಾದರೂ ಗಣಪತಿಯ ಚಿತ್ರವಿರುವ ನಾಣ್ಯ ದೊರಕದೇ ಇದ್ದುದ್ದು ಒಂದು ಕೊರತೆಯೇ ಆಗಿದ್ದು. ಈ ಪ್ರಸ್ತುತ ನಾಣ್ಯ ಅದನ್ನು ನಿವಾರಿಸಿದೆ. ರಾಜನ ಹೆಸರು ಅಸ್ಪಷ್ಟವಾಗಿರುವುದರಿಂದ, ಸ್ಫುಟವಾದ ಬರಹದ ನಾಣ್ಯ ಸಿಗುವವರೆಗೆ ಈ ಮುಖ್ಯ ನಾಣ್ಯವನ್ನು ಅನಿಶ್ಚಿತ ಗುಂಪಿಗೇ ಸೇರಿಸಬೇಕು (ಆರ್. ಗೋಪಾಲ್ ಅವರ ಶೋಧ).



ಇತ್ತೀಚಿಗೆ ಮುಕುಂದ ಪ್ರಭು ಅವರು ಗಂಡಭೇರುಂಡ ನಮೂನೆಯ ತಾಮ್ರದ ನಾಣ್ಯಗಳನ್ನು ಶೋಧನೆ ಮಾಡಿದ್ದಾರೆ. ಅವುಗಳ ತೂಕ 150 ಗ್ರೇನ್; ಅಗಲ 0.8".

ಮು : ಸಮಾನಾಂತರ ವೃತ್ತಗಳೊಳಗೆ ಗಂಡಭೇರುಂಡ; ಕೊಕ್ಕುಗಳಲ್ಲಿ ಆನೆಯನ್ನು ಹಿಡಿದಿದೆ

ಹಿ : ಅಮ್ಮೀರ ಎನ್ನುವ ಕನ್ನಡ ಬರಹ; ಕೆಳಭಾಗದಲ್ಲಿ ವೈಷ್ಣವ ನಾಮ; ಸೂರ್ಯ-ಚಂದ್ರರು

ಅಮ್ಮೀರ ಅಥವಾ ಹಮ್ಮೀರ ಎನ್ನುವ ಬಿರುದು ಯಾವ ವಿಜಯನಗರ ದೊರೆಗೆ ಇದ್ದಿತೆಂದು ತಿಳಿದುಬಂದಿಲ್ಲ. ಆದರೆ ಇದು ವಿಜಯನಗರ ನಾಣ್ಯಗಳ ನಮೂನೆಗೆ ಸೇರಿದ ನಾಣ್ಯವಾದುದರಿಂದ, ಇದು ಯಾವ ದೊರೆಗೆ ಸೇರಿದ್ದೆಂದು ಹೇಳಲು ಸಾಧ್ಯವಿಲ್ಲ.

ಹರಿಹರಯ್ಯನವರು ಮೂರು ವಿಜಯನಗರ ನಾಣ್ಯಗಳನ್ನು ಪ್ರಕಟಿಸಿದ್ದಾರೆ. ಒಂದು ನಾಣ್ಯದ ಮುಮ್ಮುಖದಲ್ಲಿ ಪ್ರಭಾವಳಿಯಲ್ಲಿ ನಿಂತಿರುವ ದೇವತೆ; ಕೈಯಲ್ಲಿ ಬಾಣ ಮತ್ತು ಗುರಾಣಿ; ನಾಗರಿ ಬರಹ 'ಮಸ'. ಹಿಮ್ಮುಖದಲ್ಲಿ 'ಶ್ರೀವೀರ' ಎನ್ನುವ ಕನ್ನಡ ಬರಹವಿದೆ. ಇವರು ಈ ದೇವತೆಯನ್ನು ವೀರಭದ್ರ ಎಂದು ಗುರುತಿಸಿ, ಈ ನಾಣ್ಯವನ್ನು ಮೊದಲನೆಯ ಹರಿಹರನಿಗೆ ಸೇರಿದ್ದೆಂದು ಭಾವಿಸಿದ್ದಾರೆ. ಕೊಟ್ಟಿರುವ ವಿವರಗಳು ಸಾಲದು. ಆದುದರಿಂದ ಇದನ್ನು ಹೊಸ ನಾಣ್ಯಗಳಿಂದ ದೃಢಪಡಿಸಬೇಕು.

ಮತ್ತೊಂದು ತಾಮ್ರದ ನಾಣ್ಯದಲ್ಲಿ ನಿಂತಿರುವ ಮನುಷ್ಯನ ಚಿತ್ರವಿದೆ; ಮುಮ್ಮುಖದಲ್ಲಿ ವರಾಹ, ಖಡ್ಗ, ಸೂರ್ಯ-ಚಂದ್ರರಿದ್ದಾರೆ. ಈ ನಾಣ್ಯ ಮೊದಲನೆಯ ಶ್ರೀರಂಗರಾಯನಿಗೆ ಸೇರಿದ್ದೆಂದು ಇವರು ಭಾವಿಸಿದ್ದಾರೆ. ಆದರೆ ಮಾಹಿತಿಗಳು ಸಾಲದು. ಮತ್ತೊಂದು ತಾಮ್ರದ ನಾಣ್ಯದಲ್ಲಿ 'ತಿಮ್ಮರಸುಗಾರು' ಎಂಬ ಬರಹವಿದೆಯೆಂದು ಭಾವಿಸಿ. ಇದು ಕೃಷ್ಣದೇವರಾಯನ ನಾಣ್ಯವೆಂದು ಅಭಿಪ್ರಾಯಪಟ್ಟಿದ್ದಾರೆ. ಇದು ಕೂಡ ಪುನಃ ಪರಿಶೀಲಿಸಬೇಕಾದ ನಾಣ್ಯ.

ಇತ್ತೀಚಿಗೆ ಇನ್ನೊಂದು ತಾಮ್ರದ ನಾಣ್ಯ ಪ್ರಕಟಗೊಂಡಿದೆ. ಇದರ ತೂಕ 40 ಗ್ರೇನ್; ಅಗಲ 0.4".

ಮು : ಬಿಂದುಗಳ ವೃತ್ತದಲ್ಲಿ ಕುಳಿತಿರುವ ನಂದಿ; ಮೇಲ್ಭಾಗದಲ್ಲಿ ಸೂರ್ಯ-ಚಂದ್ರರು

ಹಿ : ಅಡ್ಡಗೆರೆಗಳಿರುವ ಎರಡು ಸಾಲುಗಳ ಕನ್ನಡ ಬರಹ

ಆವರ


ಗಂಡ

ಆವರಗಂಡ ಎನ್ನುವ ಬಿರುದು ಯಾವ ವಿಜಯನಗರ ದೊರೆಗೆ ಇದ್ದಿತು ಎಂಬುದು ತಿಳಿದಿಲ್ಲವಾದ ಕಾರಣ, ಈ ನಾಣ್ಯವನ್ನು ಅಚ್ಚು ಮಾಡಿಸಿದ ವಿಜಯನಗರ ದೊರೆ ಯಾರು ಎಂದು ಸ್ಪಷ್ಟವಾಗಿಲ್ಲ.

ಇತ್ತೀಚಿಗೆ ಸರಸ್ವತಿ ನಮೂನೆಯ ನಾಲ್ಕು ತಾಮ್ರದ ನಾಣ್ಯಗಳು ಶೋಧಿತವಾದವು. ಇವುಗಳ ತೂಕ 45 ರಿಂದ 50 ಗ್ರೇನ್; ಅಗಲ 0.4".

ಮು : ಸರಸ್ವತಿ ವೀಣೆಯುನ್ನು ಹಿಡಿದು ಕುಳಿತಿರುವಳು; ಆಕೆ ಕಿರೀಟಧಾರಿಯಾಗಿದ್ದಾಳೆ; ಪಕ್ಕದಲ್ಲಿ ಶಂಖವಿದೆ (ಒಂದು ನಾಣ್ಯದಲ್ಲಿ ಹಂಸವಿದೆ).

ಹಿ : ಎರಡು ಸಾಲುಗಳ ನಾಗರೀ ಬರಹ; ಅಡ್ಡ ಗೆರೆಗಳು



ಇದುವರೆಗೆ ಸರಸ್ವತಿಯಿರುವ ನಾಣ್ಯಗಳು ಪತ್ತೆಯಾಗಿರಲಿಲ್ಲ. ಈ ಹಿಂದೆ ಇಮ್ಮಡಿ ಹರಿಹರನಿಗೆ ಸೇರಿದ್ದ ಬ್ರಹ್ಮ-ಸರಸ್ವತಿಯ ನಾಣ್ಯಗಳು ಪತ್ತೆಯಾಗಿದ್ದವು. ಆದರೆ ಈ ನಾಣ್ಯದಲ್ಲಿ ಸರಸ್ವತಿಯು ಮಾತ್ರ ವೀಣಾಧಾರಿಯಾಗಿದ್ದಾಳೆ. ಈ ನಾಣ್ಯಗಳಲ್ಲಿ ಚಿತ್ರಿತವಾಗಿರುವ ವೀಣೆಯೂ ಗಮನಾರ್ಹವಾದುದು. ವಿಜಯನಗರ ಕಾಲದಲ್ಲಿ ವೀಣೆಯ ಸ್ವರೂಪ ಯಾವ ರೀತಿ ಇದ್ದಿತು ಎಂಬುದಕ್ಕೆ ಈ ನಾಣ್ಯಗಳು ಉತ್ತಮ ಉದಾಹರಣೆಗಳು. ವಿಜಯನಗರ ಕಾಲದಲ್ಲಿ ಎರಡು ಬುರುಡೆಗಳಿದ್ದ ವೆಂಕಟಮುಖಿ ವೀಣೆಗಳು ಬಳಕೆಯಲ್ಲಿದ್ದವು ಎಂದು ತಿಳಿದುಬಂದಿದೆ. ಈ ನಾಣ್ಯಗಳು ವೀಣೆಯ ಚಿತ್ರವನ್ನು ಒದಗಿಸಿ, ಸಂಗೀತಶಾಸ್ತ್ರಜ್ಞರಿಗೆ ಹೊಸ ಮಾಹಿತಿಯನ್ನು ನೀಡಿವೆ. ಆದರೆ ಈ ನಾಣ್ಯಗಳ ಹಿಮ್ಮುಖದ ಬರಹ ತೀರ ಅಸ್ಪಷ್ಟವಾಗಿರುವುದರಿಂದ, ಈ ಮುಖ್ಯ ಮತ್ತು ಆಸಕ್ತಿಕರ ನಾಣ್ಯಗಳನ್ನು ಅಚ್ಚು ಮಾಡಿಸಿದ ವಿಜಯನಗರ ದೊರೆ ಯಾರೆಂದು ತಿಳಿದುಬರುವುದಿಲ್ಲ. ಒಳ್ಳೆಯ ನಾಣ್ಯಗಳು ದೊರಕಿದರೆ ಈ ಪ್ರಶ್ನೆಯನ್ನು ಬಗೆಹರಿಸಬಹುದು. ಇನ್ನೊಂದು ಬೆಳ್ಳಿಯ ನಾಣ್ಯದ ಮುಮ್ಮುಖದಲ್ಲಿ ಮಿಥುನ ಶಿಲ್ಪವಿದೆ; ಜೊತೆಗೆ ಒಂದೂ ಕಾಲು ಎನ್ನುವ ಸಂಖ್ಯೆಯಿದೆ. ಇದೂ ಸೇರಿದರೆ ಮಕರ, ಸಿಂಹ, ಮಿಥುನ, ವೃಷಭ ಚಿಹ್ನೆಗಳ ನಾಣ್ಯಗಳು ದೊರಕಿದಂತಾಗಿವೆ. ಮಿಕ್ಕ ಚಿಹ್ನೆಗಳು ದೊರಕಿದರೆ, ವಿಜಯನಗರದ ಅರಸರು ನವಗ್ರಹ ಚಿಹ್ನೆಯ ನಾಣ್ಯಗಳನ್ನು ಟಂಕಿಸಿದರು ಎನ್ನುವುದು ಖಚಿತವಾಗುತ್ತದೆ. ಈ ರೀತಿ ಹೊಸ ಹೊಸ ನಮೂನೆಯ ವಿಜಯನಗರ ನಾಣ್ಯಗಳು ಪತ್ತೆಯಾಗುತ್ತಿವೆ.

ವಿಜಯನಗರ ಸಾಮ್ರಾಜ್ಯದ ನಾಣ್ಯಗಳು ಅವುಗಳ ವೈವಿಧ್ಯದಿಂದ, ದೇವದೇವತೆಗಳ ಚಿತ್ರಗಳಿಂದ, ಧಾರ್ಮಿಕ ಚಿಹ್ನೆಗಳಿಂದ, ಸುಂದರ ಬರಹಗಳಿಂದ ಮತ್ತು ಕಲಾತ್ಮಕತೆ ಹಾಗೂ ತಾಂತ್ರಿಕ ಮೇಲ್ಮೆಯಿಂದ ಜನಮನ್ನಣೆ ಗಳಿಸಿದ್ದವು. ವಿದೇಶೀಯರು ಕೂಡ ಈ ನಾಣ್ಯಗಳ ಶ್ರೀಮಂತಿಕೆಗೆ ಮಾರುಹೋಗಿ ಇವುಗಳನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಇಂತಹ ಶ್ರೀಮಂತ ನಾಣ್ಯಗಳನ್ನು ಅನುಕರಿಸಬೇಕೆಂಬ ಅಪೇಕ್ಷೆ ಆನಂತರ ಆಳಿದ ನಾಯಕರು

ಮತ್ತು ಪಾಳೆಯಗಾರರಿಗೆ ಉಂಟಾದದ್ದು ಸಮಂಜಸವಾಗಿಯೇ ಇದೆ. ಆದುದರಿಂದ ವಿಜಯನಗರ ನಾಣ್ಯಗಳ ಪ್ರಭಾವ ದಕ್ಷಿಣ ಭಾರತ ನಾಣ್ಯ ಪದ್ಧತಿಯ ಮೇಲೆ ವಿಶೇಷವಾಗಿ ಉಂಟಾಯಿತು. ಕೆಳದಿಯ ನಾಯಕರು, ಮದುರೆಯ ನಾಯಕರು, ಮರಾಠರು, ಮೈಸೂರು ಒಡೆಯರು ಟಂಕಿಸಿದ ನಾಣ್ಯಗಳು ಕೆಲವು ನಮೂನೆಗಳಲ್ಲಿ ತೀರ ವಿಜಯನಗರ ನಾಣ್ಯಗಳಂತೆ ಕಂಡರೆ ಆಶ್ಚರ್ಯವೇನಿಲ್ಲ. ಕೆಳದಿಯ ನಾಯಕರಂತೂ ವಿಜಯನಗರ ನಾಣ್ಯಗಳನ್ನೇ ಸಂಪೂರ್ಣವಾಗಿ ಅನುಕರಿಸಿದರು. ಇಕ್ಕೇರಿ ಸದಾಶಿವರಾಯನ ಚಿನ್ನದ ಶಿವ-ಪಾರ್ವತಿ ನಮೂನೆಯ ನಾಣ್ಯವನ್ನು ಅನೇಕರು ವಿಜಯನಗರದ ಸದಾಶಿವರಾಯನ ನಾಣ್ಯಗಳೆಂದು ಭಾವಿಸುವಷ್ಟರ ಮಟ್ಟಿಗೆ, ಅವೆರಡೂ ಹೋಲಿಕೆಯನ್ನು ತೋರ್ಪಡಿಸುತ್ತವೆ. ಈ ನಮೂನೆಯ ನಾಣ್ಯವು ವಿಶೇಷವಾಗಿ ಜನಾನುರಾಗಿಯಾಯಿತು. ಹೈದರ್ ಆಲಿ ಕೂಡ ಈ ರೀತಿಯ ನಾಣ್ಯಗಳನ್ನು ಟಂಕಿಸಿದನು. ಮೈಸೂರು ಅರಸರು ವಿಜಯನಗರ ನಾಣ್ಯದ ಪರಂಪರೆಯನ್ನೇ ಮುಂದುವರಿಸಿಕೊಂಡು ಬಂದರು. ಮುಮ್ಮಡಿ ಕೃಷ್ಣರಾಜ ಒಡೆಯರ ಚಿನ್ನದ ಶಿವ-ಪಾರ್ವತಿ ನಾಣ್ಯ, ವಿಜಯನಗರದ ಕೃಷ್ಣದೇವರಾಯನ ಇದೇ ನಮೂನೆಯ ನಾಣ್ಯಕ್ಕೆ ತುಂಬ ಹತ್ತಿರವಾಗಿದೆ. ಲಕ್ಷ್ಮೀನರಸಿಂಹ, ಗಂಡಭೇರುಂಡ, ಬಾಲಕೃಷ್ಣ ಮುಂತಾದ ಮೈಸೂರು ಒಡೆಯರ ನಾಣ್ಯಗಳಲ್ಲಿ, ವಿಜಯನಗರದ ಪ್ರಭಾವ ವಿಶೇಷವಾಗಿ ಕಾಣಬರುತ್ತದೆ. ಮದುರೆ ನಾಯಕರ ನಾಣ್ಯಗಳು ಕೂಡ ವಿಜಯನಗರ ನಾಣ್ಯಗಳ ಅನುಕರಣೆ ಎಂದೇ ಭಾವಿಸಬಹುದು. ನಂದಿ, ಶಂಖ, ಚಕ್ರ, ಖಡ್ಗ ಮುಂತಾದ ಚಿಹ್ನೆಗಳುಳ್ಳ ವಿಶ್ವನಾಥನಾಯಕ, ವೀರಪ್ಪನಾಯಕ ಮುಂತಾದವರ ನಾಣ್ಯಗಳು ವಿಜಯನಗರ ನಾಣ್ಯಗಳಿಗೆ ತೀರ ಸಮೀಪವಾಗಿ ಕಂಡುಬರುತ್ತವೆ. ರಾಮನಾಡು ಮತ್ತು ಕೊಂಗು ಪ್ರದೇಶಗಳಲ್ಲಿ ಆಳಿದ ರಾಜರೂ ಕೂಡ ಗರುಡ, ಶಂಖ, ಚಕ್ರ ಮುಂತಾದ ಚಿಹ್ನೆಗಳನ್ನು ತಮ್ಮ ನಾಣ್ಯಗಳಲ್ಲಿ ಅಳವಡಿಸಿದರು. ಈಸ್ಟ್ ಇಂಡಿಯ ಕಂಪೆನಿಯವರು ದಕ್ಷಿಣ ಭಾರತದಲ್ಲಿ ನಾಣ್ಯಗಳನ್ನು ಟಂಕಿಸಲು ಆರಂಭಿಸಿದಾಗ, ಅವರಿಗೆ ಮಾದರಿಯಾಗಿ ಕಂಡುಬಂದಿದ್ದು ವಿಜಯನಗರ ಪರಂಪರೆಯ ವಿಷ್ಣು ಮತ್ತು ವೆಂಕಟೇಶ್ವರ ನಮೂನೆಯ ನಾಣ್ಯಗಳು. ಜನಗಳ ಮನಸ್ಸನ್ನು ಒಲಿಸಿಕೊಳ್ಳಲು ಈ ನಮೂನೆಯ ನಾಣ್ಯಗಳೇ ಉಪಯುಕ್ತವೆಂದು ಭಾವಿಸಿ ಈಸ್ಟ್ ಇಂಡಿಯ ಕಂಪೆನಿಯವರು ಕೂಡ ವಿಜಯನಗರ ಪರಂಪರೆಯ ನಾಣ್ಯಗಳನ್ನು ಬಳಸಿದರೆಂಬುದು ಗಮನಿಸಬೇಕಾದ ಅಂಶ. ಬಹುಶಃ ಒಂದು ವಂಶದ ನಾಣ್ಯಗಳು ಇಷ್ಟೊಂದು ಪ್ರಭಾವ ಬೀರಿದ ಸಂಗತಿ ಭಾರತೀಯ ನಾಣ್ಯ ಇತಿಹಾಸದಲ್ಲಿ ದೊರೆಯಲಾರದು. ಇದೇ ವಿಜಯನಗರ ನಾಣ್ಯ ಪದ್ಧತಿಗೆ ದಕ್ಷಿಣ ಭಾರತ ಕೊಟ್ಟ ಮನ್ನಣೆ ಮತ್ತು ಗೌರವ.

ಕೆಳದಿ ನಾಯಕರು

ಮೇಲೆ ಗಮನಿಸಿರುವಂತೆ ಕೆಳದಿ ನಾಯಕರು ವಿಜಯನಗರ ನಾಣ್ಯ ಪದ್ಧತಿಯನ್ನೇ ನಾಣ್ಯಗಳ ನಮೂನೆ, ಪೆಸರು, ಚಿಹ್ನೆಗಳು ಮತ್ತು ತೂಕಗಳಲ್ಲಿ ಅನುಕರಿಸಿದರು.

52 ಗ್ರೇನಿನ ವರಹ, 26 ಗ್ರೇನಿನ ಅರ್ಧವರಹ ಮತ್ತು 13 ಗ್ರೇನಿನ ಕಾಲು ವರಹದ ಚಿನ್ನದ ನಾಣ್ಯಗಳು ಕೆಳದಿ ನಾಯಕರ ಮುಖ್ಯ ಚಿನ್ನದ ನಾಣ್ಯಗಳು. ಕೆಳದಿ ನಾಯಕರ ಶಾಸನಗಳಿಂದ ಅವರ ನಾಣ್ಯ ಪದ್ಧತಿಯ ಕೆಲವು ಮುಖ್ಯ ಮಾಹಿತಿಗಳು ಲಭ್ಯವಾಗುತ್ತವೆ. ವರಹ ನಾಣ್ಯವು ಹೆಚ್ಚು ಜನಾನುರಾಗಿಯಾಗಿ, ಗದ್ಯಾಣದ ಉಲ್ಲೇಖ ಕಡಿಮೆಯಾಗುತ್ತದೆ. ಇವರ ವರಹಗಳು ಇಕ್ಕೇರಿ ವರಹ ಎಂದು ಹೆಸರು ವಾಸಿಯಾಗಿರುವುದನ್ನು ಗಮನಿಸಬಹುದು. ಹೊನ್ನು ಅಥವಾ ಹೊನ್ ಎನ್ನುವುದು ಅರ್ಧ ವರಹದ ಚಿನ್ನದ ನಾಣ್ಯ. ಇದರ ತೂಕ 26 ಗ್ರೇನ್. ಇದರ ಅಗಲ 0.4". ವಿಜಯನಗರ ಕಾಲದ ಪ್ರತಾಪ ಎನ್ನುವ ನಾಣ್ಯದ ಬದಲು ಇವರು ಹೊನ್ನು ಎಂಬ ಪದವನ್ನು ಉಪಯೋಗಿಸುತ್ತಿದ್ದರು. ಧರಣ ಎನ್ನುವುದು ವರಹದ ಕಾಲು ಭಾಗ. ವಿಜಯನಗರ ಕಾಲದಲ್ಲಿ ಈ ನಾಣ್ಯದ ಉಲ್ಲೇಖ ಕಾಣಬರುವುದಿಲ್ಲ. ಆದರೆ ಕಾಲು ವರಹದ ನಾಣ್ಯವನ್ನು ಕಾಟಿ ಎಂದು ಕರೆಯುತ್ತಿದ್ದರು. ಧರಣ ನಾಣ್ಯದ ತೂಕ 13 ಗ್ರೇನ್, ಅಗಲ 0.4". ಹಣ ಎನ್ನುವುದು ಇನೊಂದು ಚಿನ್ನದ ನಾಣ್ಯ. ಇದು ವರಹದ ಹತ್ತನೆಯ ಒಂದು ಭಾಗ. ಇದರ ತೂಕ 5 ಗ್ರೇನ್. ಶಾಸನಗಳಲ್ಲಿ ಈ ನಾಣ್ಯದ ಉಲ್ಲೇಖ ವಿಶೇಷವಾಗಿ ಕಂಡುಬರುವುದರಿಂದ, ಈ ನಾಣ್ಯ ತುಂಬ ಜನಾನುರಾಗಿಯಾಗಿದ್ದು, ವಿವಿಧ ರೀತಿಯ ವಹಿವಾಟುಗಳಲ್ಲಿ ಇದನ್ನು ಬಳಸಲಾಗಿತ್ತಿದ್ದಿತು ಎಂದು ಗೊತ್ತಾಗುತ್ತದೆ.

ಅಡ್ಡ ಎನ್ನುವುದು ಇನ್ನೊಂದು ನಾಣ್ಯ. ಇದು ಹಣದ ಅರ್ಧಭಾಗದ ನಾಣ್ಯ. ಕ್ರಿ.ಶ. 1615ರ ವೆಂಕಟಪ್ಪನಾಯಕನ ಶಾಸನದಲ್ಲಿ ಕಲ್ಲಕೊಪ್ಪ ಎನ್ನುವ ಗ್ರಾಮದ ಕಂದಾಯ 49 ವರಹ, 1 ಹಣ ಮತ್ತು 1 ಅಡ್ಡ ಎಂದು ಹೇಳಿದೆ. ಅಂದರೆ ಇದು ಹಣದ ಅನಂತರದ ಸಣ್ಣ ನಾಣ್ಯವೆಂಬುದು ಖಚಿತವಾಗುತ್ತದೆ. ಮುಕ್ಕಾಲು ಹಣದ ನಾಣ್ಯವನ್ನು ಮುಪ್ಪಾಗ ಎಂದು ಕರೆಯುತ್ತಿದ್ದರು. ಇದೂ ಚಿನ್ನದ ನಾಣ್ಯ. ಹಾಗ ಎನ್ನುವುದು ಮುಂದಿನ ಸಣ್ಣ ನಾಣ್ಯ. ಇದು ಅಡ್ಡದ ಅರ್ಧಭಾಗದ ನಾಣ್ಯ. ಅಂದರೆ ಒಂದು ಹಣಕ್ಕೆ ನಾಲ್ಕು ಹಾಗಗಳು. ಕೆಳದಿಯ ಶಾಸನಗಳಲ್ಲಿ ಹಾಗ ಎಂಬ ನಾಣ್ಯದ ಉಲ್ಲೇಖವೂ ವಿಶೇಷವಾಗಿ ಕಂಡು ಬರುತ್ತದೆ. ಹಾಗ ಎಂಬ ನಾಣ್ಯದ ಅರ್ಧಭಾಗವೇ ಬೇಳೆ ಎಂಬ ನಾಣ್ಯ. ಇದೂ ಚಿನ್ನದ ನಾಣ್ಯ. ಬೇಳೆಯ ನಂತರದ ಸಣ್ಣ ನಾಣ್ಯವೇ ವೀಸ. ಇದು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದ ಚಿನ್ನದ ನಾಣ್ಯ. ಇದರ ಅರ್ಧಭಾಗವೇ ಅರೆವೀಸ. ಇವಿಷ್ಟೂ ಕೆಳದಿ ನಾಯಕರ ಚಿನ್ನದ ನಾಣ್ಯಗಳು.

ಕೆಳದಿ ನಾಯಕರ ಬೆಳ್ಳಿಯ ನಾಣ್ಯಗಳು ದೊರಕಿಲ್ಲ. ಆದರೆ ಅವರ ಕಾಲದಲ್ಲಿ ಬೆಳ್ಳಿಯ ನಾಣ್ಯಗಳು ಚಲಾವಣೆಯಲ್ಲಿದ್ದವು ಎಂದು ವಿದೇಶೀ ಬರಹಗಾರರ ಮಾಹಿತಿಗಳಿಂದ ಗೊತ್ತಾಗುತ್ತದೆ. ಕೆಳದಿ ವೀರಭದ್ರ ನಾಯಕನ ಕಾಲದಲ್ಲಿ ಸಂಚಾರವನ್ನು ಕೈಗೊಂಡಿದ್ದ ಪೀಟರ್ ಮಂಡಿ ಎಂಬ ವಿದೇಶೀ ಯಾತ್ರಿಕನು ತಾನು ಬೆಳ್ಳಿಯ ತಾರ್ ಎಂಬ ನಾಣ್ಯಗಳನ್ನು ನೋಡಿದ್ದುದಾಗಿ ತಿಳಿಸಿದ್ದಾನೆ. ಅಷ್ಟೇ ಅಲ್ಲದೆ ಒಂದು ತಾರ ನಾಣ್ಯಕ್ಕೆ

ನಾಲ್ಕು ತಾಮ್ರದ ನಾಣ್ಯಗಳು ಸಮ ಎಂದೂ ಹೇಳಿದ್ದಾನೆ. ವಿಜಯನಗರ ಕಾಲದಲ್ಲಿಯೂ ತಾರ ಎಂಬುದು ಬೆಳ್ಳಿಯ ನಾಣ್ಯವಾಗಿತ್ತು. ಅದನ್ನೇ ಕೆಳದಿಯ ನಾಯಕರು ಅನುಸರಿಸಿದ್ದರು. ಇವರ ಕಾಲದ ತಾಮ್ರದ ನಾಣ್ಯವೇ ಕಾಸು. ಒಂದು ಅರೆ ವೀಸ ನಾಣ್ಯಕ್ಕೆ ಎರಡು ಕಾಸುಗಳು ಸಮ ಎಂಬುದಾಗಿ ಪೀಟರ್ ಮಂಡಿ ತಿಳಿಸಿದ್ದಾನೆ. ಈ ಎಲ್ಲ ಶಾಸನಗಳ ಮತ್ತು ವಿದೇಶೀ ಬರಹಗಾರರ ಮಾಹಿತಿಗಳನ್ನು ಆಧರಿಸಿ ಕೆಳದಿಯ ನಾಯಕರ ಕಾಲದ ನಾಣ್ಯಗಳ ಕೋಷ್ಟಕವನ್ನು ಈ ರೀತಿ ರಚಿಸಿಬಹುದು.

ವರಹ = ಗದ್ಯಾಣ = 52 ಗ್ರೇನ್ = 2 ಹೊನ್ನು

1 ಹೊನ್ = 2 ಧರಣ = 26 ಗ್ರೇನ್ = 5 ಹಣ

3/4 ಹಣ = ಮುಪ್ಪಾಗ = 3.5 ಗ್ರೇನ್

1 ಹಣ = 2 ಅಡ್ಡ = 5 ಗ್ರೇನ್

1 ಅಡ್ಡ = 2 ಹಾಗ = 2.5 ಗ್ರೇನ್

1 ಹಾಗ = 2 ಬೇಳೆ = 1.25 ಗ್ರೇನ್

1 ಹಾಗ = 4 ವೀಸ = 1.25 ಗ್ರೇನ್

1 ವೀಸ = 2 ಅರೆವೀಸ = 0.6 ಗ್ರೇನ್

1 ಹಾಗ = 16 ಕಾಸು = 1.25 ಗ್ರೇನ್

1 ತಾರ = 4 ಕಾಸು

1 ಅರೆವೀಸ = 2 ಕಾಸು

ಕೆಳದಿ ರಾಜ್ಯದ ಟಂಕಶಾಲೆಗಳ ವಿಚಾರ ಅಷ್ಟಾಗಿ ತಿಳಿದಿಲ್ಲ. ನಗರ ಅಥವಾ ಬಿದನೂರಿನಲ್ಲಿ ಕೇಂದ್ರ ಟಂಕಶಾಲೆಯಿದ್ದಿತು. ಅದರ ಮೇಲ್ವಿಚಾರಣೆಯನ್ನು ಟಂಕಶಾಲೆ ಅಧಿಕಾರಿಯು ನೋಡಿಕೊಳ್ಳುತ್ತಿದ್ದನು. ಅಲ್ಲಿ ನಾಣ್ಯಗಳನ್ನು ಅಚ್ಚು ಮಾಡುವ ಒಂದು ಯಂತ್ರವಿದ್ದಿತು. ಅದನ್ನು ಟಂಕಶಾಲೆ ಕಲ್ಲು ಎಂದು ಕರೆಯುತ್ತಿದ್ದರು. ಇದರ ಮೇಲೆ ಒಂದು ಶಾಸನವಿದೆ. ಈ ಯಂತ್ರಕ್ಕೆ ಆರು ಪಾರ್ಶ್ವಗಳಿದ್ದು, ಅವುಗಳ ಅಳತೆ 20" × 20" × 8" × 8" × 9" × 1". ಕೆಳಗೆ ಚಪ್ಪಟೆಯಾಗಿದೆ. ಅದರಲ್ಲಿ ಆರು ವಿವಿಧ ಅಳತೆಗಳ ರಂಧ್ರಗಳಿವೆ. ಆ ಯಂತ್ರಕ್ಕೆ ಒಂದು ಕೈದಂಡವಿದೆ. ಅದರಿಂದ ಇದನ್ನು ತಿರುಗಿಸಬಹುದು. ಇದರಿಂದ ರುಪಾಯಿಗಳನ್ನು ತಯಾರು ಮಾಡುತ್ತಿದ್ದರೆಂದು ಸ್ಥಳೀಯರು ಭಾವಿಸುತ್ತಾರೆ. ಇದರ ಮೇಲಿರುವ ಶಾಸನದಿಂದ ಇದರ ಕಾಲ 30 ಆಗಸ್ಟ್, 1726 ಎಂದು ಗೊತ್ತಾಗುತ್ತದೆ. ಇದನ್ನು ಸುಬ್ಬಾಚಾರಿಯು ಪಂಚಲೋಹದಿಂದ ತಯಾರಿಸಿ, ರುಪಾಯಿಗಳನ್ನು ಅಚ್ಚು ಮಾಡಲು ಅನುಕೂಲವಾಗುವಂತೆ ಮಾಡಿದನು. ಈ ತೇದಿ ಕೆಳದಿಯ ದೊರೆ ಇಮ್ಮಡಿ ಸೋಮಶೇಖರ ನಾಯಕನ ಕಾಲಕ್ಕೆ ಸರಿಹೊಂದುತ್ತದೆ. ಒಟ್ಟಿನಲ್ಲಿ ಇದೊಂದು ವಿಶಿಷ್ಟವಾದ ನಾಣ್ಯ ತಯಾರಿಕೆಯ ಯಂತ್ರ.

ಕೆಳದಿ ನಾಯಕರ ಚಿನ್ನದ ನಾಣ್ಯಗಳು ಅಷ್ಟಾಗಿ ದೊರಕಿಲ್ಲ. ಬಹಳ ಪ್ರಸಿದ್ಧವಾದ ಇಕ್ಕೇರಿ ವರಹವನ್ನು ಸದಾಶಿವನಾಯಕನು ಅಚ್ಚು ಮಾಡಿಸಿದನು. ಒಂದು ನಮೂನೆಯ ನಾಣ್ಯದ ತೂಕ 52 ಗ್ರೇನ್; ಅಗಲ 0.5".


ಮು : ಕುಳಿತಿರುವ ಶಿವ-ಪಾರ್ವತಿ; ಶಿವನ ಒಂದು ಕೈಯಲ್ಲಿ ತ್ರಿಶೂಲ; ಮತ್ತೊಂದು ಕೈಯಲ್ಲಿ ಮೃಗವಿದೆ

ಹಿ : ಅಡ್ಡಗೆರೆಗಳಿರುವ ಮೂರು ಸಾಲುಗಳ ನಾಗರೀ ಬರಹ

ಶ್ರೀ

ಸದಾ

ಶಿವ



ಈ ನಾಣ್ಯವು ಇದೇ ನಮೂನೆಯ ವಿಜಯನಗರ ನಾಣ್ಯವನ್ನು ಹೋಲುತ್ತದೆ. ಆದರೆ ಹಿಮ್ಮುಖದ ಬರಹದಲ್ಲಿ ಪ್ರತಾಪ ಎನ್ನುವ ಬಿರುದು ಇಲ್ಲದೇ ಇರುವುದರಿಂದ, ಇದು ಕೆಳದಿ ಸದಾಶಿವನ ನಾಣ್ಯವೆಂದು ನಂಬಲಾಗಿದೆ.

ಇದೇ ನಮೂನೆಯ ಇನ್ನೊಂದು ನಾಣ್ಯದಲ್ಲಿ ಮುಮ್ಮುಖದಲ್ಲಿ ಮೇಲಿನಂತಿರುವ ಶಿವ-ಪಾರ್ವತಿಯ ಚಿತ್ರವಿದೆ. ಆದರೆ ಹಿಮ್ಮುಖದಲ್ಲಿ ಶ್ರೀ ಎನ್ನುವ ನಾಗರೀ ಅಕ್ಷರ ಮಾತ್ರವಿದೆ.

ಇದೇ ದೊರೆಯ ಇನ್ನೊಂದು ನಮೂನೆಯ ನಾಣ್ಯವನ್ನು ಈಗ ಗಮನಿಸಬಹುದು.

ಮು : ಕೊಕ್ಕುಗಳಲ್ಲಿ ಆನೆಯಿರುವ ಗಂಡಭೇರುಂಡ

ಹಿ : ನಾಗರೀ ಬರಹ ಸದಾಶಿವ

ಶಿವಪ್ಪನಾಯಕನಿಗೆ ಸೇರಿದ ಒಂದು ತಾಮ್ರದ ನಾಣ್ಯ ದೊರಕಿದೆ. ಇದರ ತೂಕ 100 ಗ್ರೇನ್; ಅಗಲ 0.5".

ಮು : ಎಡಕ್ಕಿರುವ ನಂದಿ; ಮೇಲೆ ಶಿವ ಎನ್ನುವ ಕನ್ನಡ ಬರಹ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ

ಶಿವ

ವೆಂಕಟಪ್ಪನಾಯಕನ ತಾಮ್ರದ ನಾಣ್ಯದ ತೂಕ 120 ಗ್ರೇನ್; ಅಗಲ 0.4".

ಮು : ಕುಳಿತಿರುವ ಶಿವ-ಪಾರ್ವತಿ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ ವೆಂ

ಕಟ

ಅಧ್ಯಾಯ 6

ಸಾಮಂತ ರಾಜರ ನಾಣ್ಯಗಳು

ಪ್ರಾಚೀನ ಕರ್ನಾಟಕದಲ್ಲಿ ಅನೇಕ ಸಾಮಂತ ಮನೆತನಗಳು ಸಣ್ಣ ಪುಟ್ಟ ಪ್ರದೇಶಗಳಲ್ಲಿ ರಾಜ್ಯವಾಳಿದವು. ಬಾದಾಮಿ ಚಲುಕ್ಯ, ಕಲ್ಯಾಣ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮತ್ತು ಸೇವುಣ ರಾಜವಂಶಗಳ ಸಾಮಂತರಾಗಿ ಆಳಿದ ಈ ರಾಜವಂಶಗಳು ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಸಾಕಷ್ಟು ಪಾತ್ರವಹಿಸಿದ್ದವೆಂಬುದನ್ನು ಮರೆಯುವಂತಿಲ್ಲ. ಆಳುವ ರಾಜವಂಶದ ನಿಷ್ಠೆಯನ್ನು ಸಮಯಕ್ಕೆ ತಕ್ಕಂತೆ ಬದಲಾಯಿಸುತ್ತ, ತಮ್ಮ ಮೇಲ್ಮೆಯನ್ನೇ ಮುಖ್ಯ ಗುರಿಯನ್ನಾಗಿಟ್ಟುಕೊಂಡಿದ್ದ ಈ ರಾಜವಂಶಗಳ ಅರಸರು ಪ್ರಾಚೀನ ಕರ್ನಾಟಕ ಇತಿಹಾಸದಲ್ಲಿ ತಮ್ಮ ಕೊಡುಗೆಗಳಿಂದ ಪ್ರಮುಖರೆನಿಸಿದ್ದಾರೆ. ಮಹಾಮಂಡಲೇಶ್ವರ, ಮಹಾಸಾಮಂತ, ಸಾಮಂತ, ಪಾದಪದ್ಮೋಪಜೀವಿ ಮುಂತಾದ ಪದಗಳಿಂದ ತಮ್ಮನ್ನು ಗುರುತಿಸಿಕೊಂಡಿರುವ ಈ ರಾಜವಂಶಗಳ ರಾಜರು (ಸಾಮಂತರು), ಶಾಸನಗಳನ್ನು ತಮ್ಮ ದೊರೆಯ ಹೆಸರಿನಲ್ಲಿ ಹೊರಡಿಸುತ್ತಿದ್ದರು. ತಾವು ಅವರಿಗೆ ಅಧೀನರೆಂದು ಹೇಳಿಕೊಳ್ಳುತ್ತಿದ್ದರು. ಸಮಯ ಸಿಕ್ಕಿದಾಗ ದೊರೆಯ ಹೆಸರಿಲ್ಲದೇ ಶಾಸನಗಳನ್ನೂ ಹಾಕಿಸುತ್ತಿದ್ದರು. ಇದಕ್ಕಾಗಿ ದೊರೆಗಳು ಇವರನ್ನು ಶಿಕ್ಷಿಸುತ್ತಿದ್ದುದೂ ಸಾಮಾನ್ಯವಾಗಿದ್ದಿತು. ಆದರೂ ಕೂಡ ಅನೇಕ ಸಾಮಂತರು ತಮ್ಮ ದೊರೆಗಳ ಯುದ್ಧಗಳಲ್ಲಿ ಪಾಲ್ಗೊಂಡು, ರಾಜ್ಯ ವಿಸ್ತರಣೆಗೆ ಕಾರಣರಾಗಿ, ರಾಜಕೀಯ ಇತಿಹಾಸದಲ್ಲಿ ಖ್ಯಾತರಾಗಿದ್ದಾರೆ. ಈ ಸಾಮಂತರ ನೂರಾರು ಶಾಸನಗಳು ದೊರಕಿದ್ದರೂ, ಇವರ ನಾಣ್ಯಗಳು ದೊರಕಿಲ್ಲದೇ ಇದ್ದುದರಿಂದ, ಸಾಮಂತರಾಜರಿಗೆ ನಾಣ್ಯಗಳನ್ನು ಟಂಕಿಸುವ ಹಕ್ಕನ್ನು ದೊರೆಗಳು ನೀಡಿರಲಿಲ್ಲವೆಂಬ ಅಭಿಪ್ರಾಯವನ್ನು ಹಿಂದಿನ ನಾಣ್ಯಶಾಸ್ತ್ರಜ್ಞರು ತಳೆದಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ಸಾಮಂತರಾಜರ ನಾಣ್ಯಗಳು ಹೇರಳವಾಗಿ ದೊರಕಿರುವುದರಿಂದ ಈ ಅಭಿಪ್ರಾಯವನ್ನು ಬದಲಿಸಬೇಕಾದ ಆವಶ್ಯಕತೆ ಉಂಟಾಗಿದೆ. ಅದರಲ್ಲಿಯೂ ಮುಕುಂದ ಪ್ರಭುಗಳು ಅನೇಕ ಸಾಮಂತರಾಜರ ನಾಣ್ಯಗಳನ್ನು ಬೆಳಕಿಗೆ ತಂದು, ಸಾಮಂತರಾಜರ ನಾಣ್ಯಗಳ ಒಂದು ಹೊಸ ಅಧ್ಯಯನಕ್ಕೆ ಭದ್ರ ಬುನಾದಿಯನ್ನು ಹಾಕಿದ್ದಾರೆ. ಆದುದರಿಂದ ಖಚಿತತೆಯಿಂದ ಕರ್ನಾಟಕದ ಪ್ರಾಚೀನ

ಸಾಮಂತ ಮನೆತನಗಳ ನಾಣ್ಯಗಳ ಇತಿಹಾಸವನ್ನು ರಚಿಸಬಹುದಾಗಿದೆ. ಈ ನಾಣ್ಯಗಳಿಗೆ ತಮ್ಮದೇ ಆದ ಪ್ರತ್ಯೇಕ ಲಕ್ಷಣಗಳೇನೂ ಇಲ್ಲ. ಸಮಕಾಲೀನ ನಾಣ್ಯಗಳ ವಿನ್ಯಾಸ, ತೂಕಗಳನ್ನು ಆಧರಿಸಿ ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ಇವರು ನಾಣ್ಯಗಳನ್ನು ಟಂಕಿಸಿದರು. ಶಾಸನಗಳಲ್ಲಿ ಕಾಣಬರುವಂತೆ, ಈ ನಾಣ್ಯಗಳ ಮೇಲೆ ಆಳುವ ದೊರೆಗಳ ಹೆಸರುಗಳು ಕಾಣಬರುವುದಿಲ್ಲ. ಈ ದೃಷ್ಟಿಯಿಂದ ಅವು ಸ್ವತಂತ್ರ ನಾಣ್ಯಗಳ ಗುಂಪಿಗೆ ಸೇರುತ್ತವೆ. ಈ ನಾಣ್ಯಗಳನ್ನು ಕಾಲಕ್ರಮದ ದೃಷ್ಟಿಯಲ್ಲಿ ಈಗ ಗಮನಿಸಬಹುದು.

1. ನೊಳಂಬರ ನಾಣ್ಯಗಳು

ನೊಳಂಬವಾಡಿಯನ್ನು ತಮ್ಮ ಕೇಂದ್ರವಾಗಿರಿಸಿಕೊಂಡಿದ್ದ ನೊಳಂಬರು ಕ್ರಿ.ಶ. ಎಂಟನೆಯ ಶತಮಾನದಿಂದ ಹನ್ನೊಂದನೆಯ ಶತಮಾನದವರೆಗೆ ಬಾದಾಮಿ ಚಲುಕ್ಯ, ರಾಷ್ಟ್ರಕೂಟ, ಗಂಗ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಆಳಿದರು. ಇವರ ಶಾಸನಗಳಲ್ಲಿ ಗದ್ಯಾಣ, ಪೊನ್ ಮತ್ತು ಪಣ ಎಂಬ ನಾಣ್ಯಗಳ ಪ್ರಸ್ತಾಪವಿದೆ. ಒಂದು ಶಾಸನದಲ್ಲಿ ನಂದಿ ಗದ್ಯಾಣದ ಪ್ರಸ್ತಾಪವಿದೆ. ಅಂದರೆ ಈ ನಾಣ್ಯದ ಮೇಲೆ ನಂದಿಯ ಚಿತ್ರವಿದ್ದಿತೆಂದು ಗೊತ್ತಾಗುತ್ತದೆ. ಇವರ ಚಿನ್ನದ ಮತ್ತು ತಾಮ್ರದ ನಾಣ್ಯಗಳು ದೊರೆತಿವೆ. ಒಂದು ನಮೂನೆಯ ಚಿನ್ನದ ನಾಣ್ಯದ ತೂಕ 52 ಗ್ರೇನ್; ಅಳತೆ 0.7".

ಮು : ಪೀಠದ ಮೇಲಿರುವ ಅಲಂಕೃತ ನಂದಿ; ಸೂರ್ಯ-ಚಂದ್ರರು ಮೇಲ್ಭಾಗದಲ್ಲಿ; ಎರಡು ಕಡೆಗಳಲ್ಲಿ ದೀಪ ಮತ್ತು ಖಡ್ಗ ಮತ್ತು ಶಂಖ; ಬಹಳ ಸುಂದರವಾದ ವಿನ್ಯಾಸ

ಹಿ : ಕೆಳಭಾಗದಲ್ಲಿ ಗೆರೆಗಳುಳ್ಳ ನಾಲ್ಕು ಸಾಲುಗಳ ಕನ್ನಡ ಬರಹ

ಶ್ರೀ ಶ್ರೀ
ಇಮ್ಮಡಿ ನೊ
ಳಂಬ ನಾರಾಯ
ಣ





ಈ ನಾಣ್ಯದ ಮೇಲೆ ರಾಜನ ಹೆಸರಿಲ್ಲ. ನೊಳಂಬ ನಾರಾಯಣ ಎನ್ನುವ ಬಿರುದು ಮಾತ್ರ ಇದೆ. ಈ ವಂಶದಲ್ಲಿ ಈ ಬಿರುದನ್ನು ದಿಲೀಪ (940-968) ಮತ್ತು ಇಮ್ಮಡಿ ಮಹೇಂದ್ರ (977-981) ಧರಿಸಿದ್ದರು. ಆದುದರಿಂದ ಈ ನಾಣ್ಯವನ್ನು ಇವರಿಬ್ಬರಲ್ಲಿ ಯಾರಾದರೂ ಒಬ್ಬರು ಟಂಕಿಸಿರಬಹುದು ಎಂದು ಮಾತ್ರ ಹೇಳಲು ಸಾಧ್ಯ. ಇದರ ಮುಮ್ಮುಖದಲ್ಲಿ ನಂದಿಯ ಚಿತ್ರವಿರುವುದರಿಂದ, ಇದು ನಂದಿ ಗದ್ಯಾಣವೆನ್ನುವುದು ಮಾತ್ರ ಖಚಿತ.

ಇನ್ನೊಂದು ನಮೂನೆಯ ಚಿನ್ನದ ನಾಣ್ಯ ದೊರಕಿದೆ. ಅದರ ತೂಕ 52 ಗ್ರೇನ್; ಅಳತೆ 0.6".

ಮು : ಅಲಂಕೃತ ಆನೆ

ಹಿ : ಮೂರು ಸಾಲುಗಳ ಕನ್ನಡ ಬರಹ

ಶ್ರೀ ದಿಲಿ

ಪಯನ

ಯ

ಈ ನಾಣ್ಯದ ಮೇಲೆ ಹೆಸರಿರುವುದರಿಂದ ಇದು ನೊಳಂಬ ದಿಲೀಪಯ್ಯನ ನಾಣ್ಯವೆನ್ನುವುದು ಖಚಿತ. ಆದರೆ ಮುಮ್ಮುಖದಲ್ಲಿ ನಂದಿಯಿಲ್ಲದೆ ಆನೆಯ ಚಿತ್ರವಿದೆ. ದಿಲೀಪನು ಗಂಗರ ಸಾಮಂತನಾಗಿದ್ದುದರಿಂದ, ಅವರ ರಾಜಲಾಂಛನವನ್ನು ತನ್ನ ನಾಣ್ಯದ ಮೇಲೆ ಮುದ್ರಿಸಿದನೆಂದು ಭಾವಿಸಬಹುದು.

ಇದೇ ವಂಶಕ್ಕೆ ಸೇರಿದ ತಾಮ್ರದ ನಾಣ್ಯವೊಂದು ದೊರಕಿದೆ. ಇದರ ಮುಮ್ಮುಖದಲ್ಲಿ ನಂದಿಯಿದೆ; ಹಿಮ್ಮುಖದಲ್ಲಿ ನೊಳಂಬ ನಾರಾಯಣ ಎನ್ನುವ ಕನ್ನಡ ಲಿಪಿಯ ಬರಹವಿದೆ. ಅಂದರೆ ಇದು ಎಲ್ಲ ರೀತಿಗಳಿಂದಲೂ, ನಂದಿ ಗದ್ಯಾಣವನ್ನು ಹೋಲುತ್ತದೆ; ಆದರೆ ಚಿನ್ನದ ನಾಣ್ಯವಲ್ಲ, ತಾಮ್ರದ ನಾಣ್ಯ. ಬಿರುದಿನ ಆಧಾರದ ಮೇಲೆ ಇದು ದಿಲೀಪ ಅಥವಾ ಇಮ್ಮಡಿ ಮಹೇಂದ್ರ ಅವರಿಗೆ ಸೇರಿದ್ದೆಂದು ತೀರ್ಮಾನಿಸಬಹುದು.

2. ಬಾಣ ಸಾಮಂತರ ನಾಣ್ಯಗಳು

ಬಾಣ ಸಾಮಂತರಿಗೆ ಸೇರಿದ ಎರಡು ಚಿನ್ನದ ನಾಣ್ಯಗಳು ಬೆಳಕಿಗೆ ಬಂದಿವೆ. ಮೊದಲನೆಯ ನಾಣ್ಯದ ತೂಕ 62 ಗ್ರೇನ್; ಅಳತೆ 0.7".

ಮು : ಅಲಂಕೃತ ಆನೆ; ಅದರ ಮೇಲೆ ಸಿಂಹ

ಹಿ : ಗೆರೆಗಳಿರುವ ಎರಡು ಸಾಲುಗಳ ಕನ್ನಡ ಬರಹ

ಶ್ರೀ ವೈರಿಗ

ಜಕೇಸರಿ

ಕೆಳ ಭಾಗದಲ್ಲಿ ಅಂಕುಶ



ಈ ನಾಣ್ಯದಲ್ಲಿ ಸಾಮಂತನ ಹೆಸರಿಲ್ಲ. ಆದರೆ ವೈರಿಗಜಕೇಸರಿ ಎನ್ನುವ ಬಿರುದು ಮಾತ್ರ ಇದೆ. ಬಾಣ ರಾಜ ದುದ್ದರಸನಿಗೆ ಈ ಬಿರುದು ಇದ್ದಿತು. ಇವನು ಹಿಟ್ಟೆಯರಸ ಮತ್ತು ಜುಂಗಲದೇವಿಯವರ ಮಗ. ಇವನು ಸಂಹತನಾಡಿನಲ್ಲಿ ಬಾಣಸಾಮಂತನಾಗಿ ರಾಜ್ಯವಾಳುತ್ತಿದ್ದನು. ಆದುದರಿಂದ ಈ ನಾಣ್ಯವನ್ನು ಇವನು ಟಂಕಿಸಿದನೆಂದು ತೀರ್ಮಾನಿಸಬಹುದು. ಮುಮ್ಮುಖದಲ್ಲಿರುವ ಚಿತ್ರವು ಬಹಳ ಆಸಕ್ತಿಕರವಾದುದು. ಇದರಲ್ಲಿ ಇವನ ಬಿರುದಿಗೆ ಸರಿಹೊಂದುವಂತೆ ಸಿಂಹವು ವೈರಿಗಜದ ಮೇಲೆ ಆಕ್ರಮಣ ಮಾಡುತ್ತಿದೆ. ಇದೊಂದು ವೈಶಿಷ್ಟ್ಯಪೂರ್ಣ ನಾಣ್ಯ.

ಇದೇ ಸಾಮಂತ ವಂಶದ ಇನ್ನೊಂದು ಚಿನ್ನದ ನಾಣ್ಯವನ್ನು ಈಗ ಗಮನಿಸಬಹುದು ಇದರ ತೂಕ 52 ಗ್ರೇನ್; ಅಳತೆ 0.7".

ಮು : ಮುಂದಿನ ಕಾಲುಗಳನ್ನು ಮೇಲಕ್ಕೆತ್ತಿಕೊಂಡಿರುವ ಸಿಂಹ; ಸುರುಳಿಯಾಕಾರದಲ್ಲಿ ಮೇಲಿರುವ ಬಾಲ, ಕೆಳಗಡೆ 'ಕ' ಎಂಬ ಅಕ್ಷರ

ಹಿ : ಮೇಲ್ಭಾಗದಲ್ಲಿ ಸೂರ್ಯ-ಚಂದ್ರರು

ಗೆರೆಗಳಿರುವ ಎರಡು ಸಾಲುಗಳ ಕನ್ನಡ ಬರಹ

ಶ್ರೀ ಸಾಮ

ನ್ತ ಕೇಸರಿ



ಈ ನಾಣ್ಯದಲ್ಲಿಯೂ ರಾಜನ ಹೆಸರಿಲ್ಲ; ಅವನ ಬಿರುದು ಮಾತ್ರ ಇದೆ. ಸಾಮನ್ತಕೇಸರಿ ಎನ್ನುವ ಬಿರುದನ್ನು ಬಾಣ ಅರಸ ವಿಕ್ರಮಾದಿತ್ಯ ಧರಿಸಿದ್ದನು. ಇವನು

ತುರಮರೆ ವಿಷಯ ಎಂಬ ಪ್ರದೇಶದಲ್ಲಿ ಸಾಮಂತನಾಗಿ ಆಳುತ್ತಿದ್ದನು. ಚಲುಕ್ಯ ವಿಜಯಾದಿತ್ಯನ ಶಾಸನದಲ್ಲಿ ಇವನ ವಿವರಗಳು ದೊರಕುತ್ತವೆ. ಆದುದರಿಂದ ಇವನು ಬಾಣ ಅರಸ ವಿಕ್ರಮಾದಿತ್ಯ ಎಂದು ಸುಲಭವಾಗಿ ತೀರ್ಮಾನಿಸಬಹುದು.

3. ಗುತ್ತವೊಳಲಿನ ಗುತ್ತರ ನಾಣ್ಯ

ಗುತ್ತವೊಳಲಿನ ಗುತ್ತರು ಚಾಲುಕ್ಯ, ಹೊಯ್ಸಳ ಮತ್ತು ಸೇವುಣ ಕಾಲದಲ್ಲಿ ಸಾಮಂತರಾಗಿ ಆಳಿ ಸಮಕಾಲೀನ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ಇತ್ತೀಚಿಗೆ ಅವರ ಮೊದಲನೆಯ ನಾಣ್ಯ ದೊರಕಿತು. ಇದು ಚಿನ್ನದ ನಾಣ್ಯ; ತೂಕ 56 ಗ್ರೇನ್; ಅಗಲ 0.75".

ಮು : ಬಲಕ್ಕಿರುವ ಸಿಂಹ; ಮೇಲ್ಭಾಗದಲ್ಲಿ ಸೂರ್ಯ-ಚಂದ್ರರು

ಹಿ : ಕೆಳಭಾಗದಲ್ಲಿ ಸೂರ್ಯ-ಚಂದ್ರರು; ಮೇಲೆ ಎರಡು ಸಾಲುಗಳ ಕನ್ನಡ ಬರಹ

ಶ್ರೀ ಗುತ್ತರ

ಭೀಮ



ಈ ನಾಣ್ಯದ ಮೇಲೆ ರಾಜನ ಹೆಸರಿಲ್ಲ; ಅವನ ಬಿರುದು ಮಾತ್ರ ಇದೆ. ಗುತ್ತರ ವಂಶದಲ್ಲಿ ಗುತ್ತರ ಭೀಮ ಎನ್ನುವ ಬಿರುದನ್ನು ಹೊಂದಿದ್ದವನು ಚಟ್ಟರಸ. ಇವನ ಮೊರಿಗೇರಿಯ ಕ್ರಿ.ಶ. 1045ರ ಶಾಸನದಲ್ಲಿ ಇವನಿಗೆ ಗುತ್ತರಭೀಮ ಎನ್ನುವ ಬಿರುದು ಇದೆ. ಇವನು ಬಲ್ಲವಾಡಿ - 70 ಎಂಬ ರಾಜ್ಯವನ್ನು ನನ್ನಿನೊಳಂಬ ಪೆರ್ಮಾಡಿಯ ಆಶ್ರಯದಲ್ಲಿ ಆಳುತ್ತಿದ್ದನೆಂದು ಈ ಶಾಸನ ತಿಳಿಸುತ್ತದೆ. ಈ ಎಲ್ಲ ಮಾಹಿತಿಗಳನ್ನೂ ಗಮನಿಸಿ, ಈ ನಾಣ್ಯವನ್ನು ಗುತ್ತ ಸಾಮಂತ ಚಟ್ಟರಸನಿಗೆ ಸೇರಿದ್ದೆಂದು ತೀರ್ಮಾನಿಸಬಹುದು.

4. ನಿಡುಗಲ್ ಸಾಮಂತರ ನಾಣ್ಯ

ಕ್ರಿ.ಶ. ಹನ್ನೆರಡು - ಹದಿಮೂರನೆಯ ಶತಮಾನಗಳಲ್ಲಿ ತುಮಕೂರು, ಚಿತ್ರದುರ್ಗ, ಸುತ್ತಮುತ್ತಲಿನ ಪ್ರದೇಶಗಳನ್ನು ನಿಡುಗಲ್ ಸಾಮಂತರು ಮಹಾಮಂಡಳೇಶ್ವರರಾಗಿ

ಆಳಿದರು. ಇವರನ್ನು ನಿಡುಗಲ್ ಚೋಳರು ಎಂದೂ ಕರೆಯುವುದುಂಟು. ಒಂದನೆಯ ಇರುಂಗೋಳನು ಮೊದಲನೆಯ ಮಹಾಮಂಡಳೇಶ್ವರನಾಗಿ ಚಾಲುಕ್ಯ ತ್ರೈಲೋಕ್ಯಮಲ್ಲನ ಆಶ್ರಯದಲ್ಲಿ ಆಳುತ್ತಿದ್ದನು. ಆನಂತರ ಆಳಿದ ಇಮ್ಮಡಿ ಇರುಂಗೋಳನು ಸೇವುಣರ ಪಕ್ಷವನ್ನು ಸೇರಿಕೊಂಡು ಹೊಯ್ಸಳರ ವಿರುದ್ಧ ಯುದ್ಧಮಾಡಿದ್ದನು. ಇವನು ಶೂರನಾಗಿದ್ದನು. ಅನೇಕ ಶಾಸನಗಳನ್ನು ಹೊರಡಿಸಿದ್ದನು. ಇವನಿಗೆ ದಾನವಮುರಾರಿ ಎಂಬ ಬಿರುದು ಇದ್ದಿತು. ಇವನ ಇನ್ನೊಂದು ಬಿರುದು ಸಾಮಂತ ಗರುಡ. ಇತ್ತೀಚೆಗೆ ಈ ಸಾಮಂತನ ಒಂದು ಚಿನ್ನದ ನಾಣ್ಯವು ದೊರಕಿದೆ. ಇದರ ತೂಕ 50 ಗ್ರೇನ್; ಅಳತೆ 0.7".

ಮು : ಮಾನವರೂಪದ ಗರುಡ; ಬಲಗೈ ಮೇಲೆತ್ತಿ ಎಡಗೈ ಮಂಡಿಯನ್ನು ಹಿಡಿದಿರುವಂತಿದೆ

ಹಿ : ಮೂರು ಸಾಲುಗಳ ಕನ್ನಡ ಬರಹ

ದಾನವ

ಮುರಾರಿ

ಇರುಂಗೋಳ

ಈ ನಾಣ್ಯದ ಮೇಲೆ ಅವನ ಹೆಸರು ಮತ್ತು ಅವನ ಬಿರುದು ಎರಡೂ ಇವೆ. ಇವನಿಗೆ ಸಾಮಂತ ಗರುಡ ಎನ್ನುವ ಬಿರುದೂ ಇದ್ದಿತು. ಆದುದರಿಂದ ಮುಮ್ಮುಖದಲ್ಲಿ ಗರುಡನ ಚಿತ್ರವನ್ನು ವಿನ್ಯಾಸಗೊಳಿಸಿರುವುದು ಸಮಂಜಸವಾಗಿಯೇ ಇದೆ. ದಾನವ ಮುರಾರಿ ಬಂಟ ಎಂಬ ಕನ್ನಡ ಬರಹವಿರುವ ನಾಣ್ಯಗಳು ಈ ಸಾಮಂತರಿಗೆ ಸೇರಿದ್ದೆಂದು ಭಾವಿಸಲಾಗಿದೆ (ಗಣೇಶ್-ಗಿರಿಜಾಪತಿ).

5. ದಂಡಿನಗೋವನ ನಾಣ್ಯ

ರಾಮದುರ್ಗಕ್ಕೆ ಆರು ಮೈಲಿ ದೂರದಲ್ಲಿರುವ ಮುದಕವಿ ಎಂಬ ಗ್ರಾಮದಲ್ಲಿ ಹತ್ತು ಚಿನ್ನದ ನಾಣ್ಯಗಳು ದೊರಕಿದವು. ಅವುಗಳ ತೂಕ ಸುಮಾರು 59 ಗ್ರೇನ್; ಅಳತೆ 0.6". ಅವುಗಳ ಮೇಲೆ ಹನ್ನೆರಡನೆಯ ಶತಮಾನದ ಕನ್ನಡ ಬರಹವಿದ್ದುದರಿಂದ ಅವುಗಳ ಮಹತ್ವ ತಿಳಿಯುವುದು ಸುಲಭವಾಯಿತು. ಅವುಗಳ ಬರಹದಲ್ಲಿ ಸ್ವಲ್ಪ ಬದಲಾವಣೆ ಕಂಡುಬಂದರೂ, ಈ ನಾಣ್ಯಗಳು ಒಬ್ಬನೇ ಸಾಮಂತನಿಗೆ ಸೇರಿದವು ಎಂಬುದರಲ್ಲಿ ಸಂದೇಹವಿಲ್ಲ.

ಮು : ಚುಕ್ಕೆಯ ವೃತ್ತಾಕಾರದ ಒಳಗೆ ಗೆರೆಯ ವೃತ್ತಾಕಾರ, ಅದರ ಒಳಗೆ ಕಠಾರಿಯನ್ನು ತಿವಿಯುತ್ತಿರುವಂತಿರುವ ವೀರ; ಮೇಲ್ಭಾಗದಲ್ಲಿ ಸೂರ್ಯ-ಚಂದ್ರರು.

ಹಿ : ಮುಮ್ಮುಖದಲ್ಲಿರುವಂಥ ವೃತ್ತಾಕಾರಗಳ ನಡುವೆ ಕ್ರಿ.ಶ. ಹನ್ನೆರಡನೆಯ ಶತಮಾನದ ಕನ್ನಡ ಲಿಪಿಯ ಮೂರು ಸಾಲುಗಳ ಬರಹ

ಶ್ರೀ ನಿಗ

ಳಂಕಮಲ್ಲ ದಂ

ಡಿನಗೋವ



ಈ ನಾಣ್ಯದ ಮೇಲೆ ನಿಗಳಂಕಮಲ್ಲ ಮತ್ತು ದಂಡಿನಗೋವ ಎಂಬ ಎರಡು ಬಿರುದುಗಳಿವೆ. ಕ್ರಿ.ಶ. ಹನ್ನೆರಡನೆಯ ಶತಮಾನದ ಬಿಜಾಪುರ, ಧಾರವಾಡ ಪ್ರದೇಶಗಳಲ್ಲಿ ಬರ್ಮ ಭೂಪಾಲನೆಂಬ ಸಾಮಂತನು ಆಳುತ್ತಿದ್ದನು. ಅವನಿಗೆ ಈ ಎರಡು ಬಿರುದುಗಳೂ ಇದ್ದವು. ಆದುದರಿಂದ ನಾಣ್ಯಗಳು ದೊರಕಿರುವ ಸ್ಥಳ ಹಾಗೂ ಲಿಪಿಯ ಕಾಲದ ಆಧಾರದ ಮೇಲೆ, ಈ ನಾಣ್ಯಗಳನ್ನು ಬರ್ಮ ಭೂಪಾಲನು ಟಂಕಿಸಿರಬೇಕೆಂದು ಹೇಳಬಹುದು. ಬಹುಶಃ ಇವನು ಕಲ್ಯಾಣ ಚಾಲುಕ್ಯರ ಅಥವಾ ಸೇವುಣರ ಸಾಮಂತನಾಗಿದ್ದಿರಬೇಕು. ಅದರ ಬಗೆಗೆ ಮಾಹಿತಿಗಳು ದೊರಕಿಲ್ಲ. ಆದರೆ ಈ ನಾಣ್ಯಗಳು ನೋಡಲು ತುಂಬ ಕಲಾತ್ಮಕವಾಗಿದ್ದು ನಮ್ಮ ಗಮನವನ್ನು ಸೆಳೆಯುತ್ತವೆ.

6. ಗೋವ ಕದಂಬರ ನಾಣ್ಯಗಳು

ಕರ್ನಾಟಕದಲ್ಲಿ ಆಳಿದ ಸಾಮಂತ ಮನೆತನಗಳಲ್ಲಿ ಗೋವ ಕದಂಬರಿಗೆ ವಿಶಿಷ್ಟವಾದ ಸ್ಥಾನವಿದೆ. ಸಾಮಂತರಾದರೂ ಕೂಡ ಸ್ವತಂತ್ರರೋ ಎನ್ನುವ ರೀತಿಯಲ್ಲಿ ರಾಜ್ಯವಾಳಿದ ಕೀರ್ತಿಗೆ ಇವರು ಪಾತ್ರರಾಗಿದ್ದರು. ಕ್ರಿ.ಶ. ಹತ್ತನೆಯ ಶತಮಾನದ ಕೊನೆಯ ಭಾಗದಿಂದ ಆರಂಭಿಸಿ ಹದಿಮೂರನೆಯ ಶತಮಾನದ ಕೊನೆಯವರೆಗೆ ಗೋವ ಪ್ರದೇಶವನ್ನು ಸಮರ್ಪಕ ರೀತಿಯಲ್ಲಿ ಆಳಿದರು. ಕೊಂಕಣ - 900 ಮತ್ತು ಪಲಸಿಗೆ - 12000 ರಾಜ್ಯಗಳನ್ನು ಇವರು ಆಳುತ್ತಿದ್ದರೆಂದು ಇವರ ಶಾಸನಗಳಲ್ಲಿ ಉಕ್ತವಾಗಿದೆ. ಬನವಾಸಿಪುರವರಾಧೀಶ್ವರ, ಶ್ರೀಮಲೆಗೆ ಭೈರವ, ಮಲವರ ಮಾರಿ ಮುಂತಾದ

ಬಿರುದುಗಳನ್ನು ಹೊದಿದ್ದರು, ಅವರ ಮನೆದೇವರು ಸಪ್ತಕೋಟೀಶ್ವರ. ಅವರ ಅನೇಕ ನಾಣ್ಯಗಳ ಮೇಲೆ 'ಸಪ್ತಕೋಟೀಶ ಲಬ್ಧ ವರ' ಎನ್ನುವ ಬರಹವನ್ನು ಕಾಣುತ್ತೇವೆ. ಅವರ ಲಾಂಛನ ಸಿಂಹ. ಆದುದರಿಂದ ಅವರ ಎಲ್ಲ ನಾಣ್ಯಗಳ ಮೇಲೂ ಸಿಂಹವನ್ನು ಕಾಣಬಹುದು. ಒಂದು ನಾಣ್ಯದ ಮೇಲೆ ದೇವಾಲಯದ ಗೋಪುರದ ಚಿತ್ರವಿದೆ. ಬಹುಶಃ ಇದು ಸಪ್ತಕೋಟೀಶ್ವರನ ದೇವಾಲಯವಿರಬೇಕೆಂದು ಭಾವಿಸಲಾಗಿದೆ.

ಗೋವ ಕದಂಬರಾಜರು ವಿಶೇಷವಾಗಿ ಚಿನ್ನದ ನಾಣ್ಯಗಳನ್ನು ಟಂಕಿಸಿದರು. ಈ ನಾಣ್ಯಗಳಲ್ಲಿ ವೈವಿಧ್ಯವಿರುವುದು ನಮ್ಮ ಗಮನವನ್ನು ಸೆಳೆಯುತ್ತದೆ. ಕನ್ನಡ ಮತ್ತು ನಾಗರೀ ಲಿಪಿಯ ಬರಹಗಳನ್ನು ಇವರ ನಾಣ್ಯಗಳ ಮೇಲೆ ಕಾಣುತ್ತೇವೆ. ಮುಮ್ಮುಖದಲ್ಲಿ ಯಾವಾಗಲೂ ಸಿಂಹದ ಚಿತ್ರವಿರುತ್ತದೆ. ಇವರ ನಾಣ್ಯಗಳ ಇನ್ನೊಂದು ವೈಶಿಷ್ಟ್ಯವೆಂದರೆ ಮುಮ್ಮುಖದಲ್ಲಿ ಪ್ರಭವಾದಿ ಸಂವತ್ಸರದ ಹೆಸರನ್ನು ಟಂಕಿಸಿರುವುದು. ನಾವು ಇದುವರೆಗೆ ಗಮನಿಸಿದ ಯಾವ ಪ್ರಾಚೀನ ನಾಣ್ಯಗಳ ಮೇಲೂ, ಸಂವತ್ಸರವನ್ನು ಮುದ್ರಿಸಿದ ಉದಾಹರಣೆ ಕಂಡುಬಂದಿರಲಿಲ್ಲ. ಆದುದರಿಂದ ಕರ್ನಾಟಕದಲ್ಲಿ ಈ ಪದ್ಧತಿಯನ್ನು ಇವರು ಮೊಟ್ಟಮೊದಲನೆಯ ಬಾರಿಗೆ ಬಳಕೆಗೆ ತಂದರು ಎನ್ನುವ ಕೀರ್ತಿಗೂ ಭಾಜನರಾಗಿದ್ದಾರೆ. ಇದ್ದರಿಂದ ನಾಣ್ಯಶಾಸ್ತ್ರಜ್ಞರಿಗೂ ಉಪಯೋಗವಿದೆ. ಜಯಕೇಶಿ ಎಂಬ ಹೆಸರಿರುವ ನಾಣ್ಯವನ್ನು ತೆಗೆದುಕೊಳ್ಳೋಣ. ಈ ವಂಶದಲ್ಲಿ ಮೂರು ಜನ ಅದೇ ಹೆಸರಿನ ರಾಜರಿದ್ದರು. ಈ ನಾಣ್ಯ ಯಾವ ಜಯಕೇಶಿಗೆ ಸೇರಿದ್ದೆಂದು ತಿಳಿಯಬೇಕಾದರೆ, ಆ ನಾಣ್ಯದ ಮೇಲಿರುವ ಸಂವತ್ಸರದ ಹೆಸರು ಸಹಕಾರಿಯಾಗುತ್ತದೆ. ದೊರಕಿರುವ ಇವರ ನಾಣ್ಯಗಳನ್ನು ಈಗ ಗಮನಿಸಬಹುದು.

ಒಂದನೆಯ ಜಯಕೇಶಿ (1050-78)

ಈ ವಂಶದಲ್ಲಿ ಮೊಟ್ಟಮೊದಲಿಗೆ ನಾಣ್ಯಗಳನ್ನು ಟಂಕಿಸಿದವನು ಒಂದನೆಯ ಜಯಕೇಶಿ. ಇವನು ಮಲವರನ್ನು ಸೋಲಿಸಿ 'ಶ್ರೀ ಮಲೆಗೆ ಭೈರವ' ಮತ್ತು 'ಮಲವರ ಮಾರಿ' ಎಂಬ ಬಿರುದುಗಳನ್ನು ಧರಿಸಿದನು. ಇದು ಎಷ್ಟೊಂದು ಮುಖ್ಯವಾಗಿತ್ತೆಂದರೆ, ಮುಂದಿನ ಎಲ್ಲ ದೊರೆಗಳೂ ಇವುಗಳನ್ನು ತಮ್ಮ ಪ್ರಶಸ್ತಿಯಲ್ಲಿ ಸೇರಿಸಿಕೊಂಡರು. ಅಷ್ಟೇ ಅಲ್ಲದೆ ಈ ಪ್ರಶಸ್ತಿಗಳನ್ನು ಹೊಂದಿದ ನಾಣ್ಯಗಳು 'ಮಲೆಗೆ ಭೈರವ ಗದ್ಯಾಣ' ಮತ್ತು 'ಮಲವರಮಾರಿ ನಿಷ್ಕ' ಎಂಬ ಹೆಸರಿನಿಂದ ಪ್ರಸಿದ್ಧಿಯನ್ನೂ ಪಡೆದು ಶಾಸನಗಳಲ್ಲಿ ಉಲ್ಲೇಖಕ್ಕೆ ಯೋಗ್ಯವಾದವು. ಒಂದನೆಯ ಜಯಕೇಶಿಯ ಕೆಲವು ನಮೂನೆಯ ನಾಣ್ಯಗಳು ಬೆಳಕಿಗೆ ಬಂದಿವೆ. ಮೊದಲನೆಯ ನಮೂನೆಯ ಚಿನ್ನದ ನಾಣ್ಯದ ತೂಕ 76 ಗ್ರೇನ್; ಅಗಲ 0.6".

ಮು : ಮುಂಭಾಗವನ್ನು ನೋಡುತ್ತಿರುವ ಸಿಂಹ; ಅದರ ಮುಂದೆ ವಿಜಯ ಎನ್ನುವ ನಾಗರೀ ಬರಹ

ಹಿ : ಚುಕ್ಕೆಯ ವೃತ್ತದೊಳಗೆ ಐದು ಸಾಲುಗಳ ನಾಗರೀ ಬರಹ

ಶ್ರೀ ಸಪ್ತಕೋ

ಟೀಶ ಲಬ್ಧ ವರ

ವೀರ ಜಯಕೇಶಿ

ದೇವ ಮಲವ

ರ ಮಾರಿ





ಈ ನಾಣ್ಯದ ಮೇಲೆ ಜಯಕೇಶಿದೇವನ ಹೆಸರಿದೆ. ವಿಜಯ ಸಂವತ್ಸರವು ಒಂದನೆಯ ಜಯಕೇಶಿಯ ರಾಜ್ಯಭಾರದ ಸಮಯದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ. ಆದುದರಿಂದ ಈ ನಾಣ್ಯವು ಒಂದನೆಯ ಜಯಕೇಶಿಗೆ ಸೇರಿದ್ದೆಂದು ಖಚಿತವಾಗಿ ಹೇಳಬಹುದು. ಈ ನಾಣ್ಯವು ಮುಂಬಯಿಯ ಇಂಡಿಯನ್ ಹಿಸ್ಟಾರಿಕಲ್ ರಿಸರ್ಚ್ ಸಂಸ್ಥೆಯ ಸಂಗ್ರಹಾಲಯದಲ್ಲಿದೆ.

ಇವನ ಇನ್ನೊಂದು ನಮೂನೆಯ ಚಿನ್ನದ ನಾಣ್ಯದ ತೂಕ 76.5 ಗ್ರೇನ್; ಅಗಲ 0.6".

ಮು : ಚುಕ್ಕೆಗಳು ಮತ್ತು ರೇಖೆಯಿಂದ ವಿನ್ಯಾಸಗೊಳಿಸಿದ ವೃತ್ತಾಕಾರದ ಒಳಗೆ ಗಜಸಿಂಹ

ಹಿ : ಅದೇ ರೀತಿಯ ವಿನ್ಯಾಸದೊಳಗೆ ಮೇಲ್ಭಾಗದಲ್ಲಿ ತ್ರಿಶೂಲ; ಅದರ ಕೆಳಗೆ ಎರಡು ಸಾಲುಗಳ ಕನ್ನಡ ಬರಹ

ಶ್ರೀ ಮಲೆಗೆ

ಭೈರವ

ಒಂದನೆಯ ಜಯಕೇಶಿಯ ಪಂಜಿಂ ತಾಮ್ರಶಾಸನದಲ್ಲಿ, ಇವನು ಭೈರವ ಎಂಬ ಚಿನ್ನದ ನಾಣ್ಯಗಳನ್ನು ದಾನಕೊಟ್ಟನೆಂದು ಹೇಳಿದೆ. 'ಭೈರವ' ಎಂಬ ಬರಹವಿರುವ ಈ ನಾಣ್ಯಗಳೇ ಆ ದಾನಕೊಟ್ಟ ನಾಣ್ಯಗಳು ಎಂಬುದೂ ಖಚಿತವಾಗುತ್ತದೆ ಮತ್ತು ಈ ನಾಣ್ಯಗಳು ಒಂದನೆಯ ಜಯಕೇಶಿಗೆ ಸೇರಿದವು ಎಂಬುದೂ ತಿಳಿಯುತ್ತದೆ.

ಈ ಮೇಲಿನ ನಾಣ್ಯಗಳಿಗಿಂತ ಭಿನ್ನವಾದ ಕೆಲವು ಸಣ್ಣ ಚಿನ್ನದ ನಾಣ್ಯಗಳು ದೊರಕಿವೆ. ಅವುಗಳ ತೂಕ 45 ಗ್ರೇನ್; ಅಳತೆ 0.45". ಇವುಗಳಲ್ಲಿ ನಾಲ್ಕು ವಿಧದ ನಾಣ್ಯಗಳಿವೆ.

1. ಮು : ಎಡಕ್ಕಿರುವ ಸಿಂಹ; ಮುಂದೆ ರಾಜದಂಡ ಮತ್ತು ಬಾವುಟ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ ಮಲಹ

ರ ಮಾರಿ

2. ಮು : ಎಡಕ್ಕಿರುವ ಸಿಂಹ; ಮುಂದೆ ರಾಜದಂಡ ಮತ್ತು ಛತ್ರಿ

ಹಿ : ಮೇಲಿನಂತೆ ಬರಹ

3. ಮು : ದೇವಾಲಯದ ಗೋಪುರದ ಮುಂದಿರುವ ಸಿಂಹ

ಹಿ : ಮೇಲಿನಂತಿರುವ ಬರಹ

4. ಮು : ಎಡಕ್ಕಿರುವ ಸಿಂಹ; ಮುಂದೆ ಅಂಕುಶ

ಹಿ : ಮೇಲಿನಂತಿರುವ ಬರಹ

ಈ ಮೇಲಿನ ಎಲ್ಲ ನಾಣ್ಯಗಳಲ್ಲಿಯೂ ಶ್ರೀ ಮಲಹರಮಾರಿ ಎನ್ನುವ ಬಿರುದು ಮಾತ್ರವಿದೆ. ಈ ಬಿರುದನ್ನು ಮೊಟ್ಟಮೊದಲಿಗೆ ಧರಿಸಿದವನು ಒಂದನೆಯ ಜಯಕೇಶಿ ಅವನ ಶಾಸನಗಳಲ್ಲಿ ಮಲಹರಮಾರಿ ನಿಷ್ಕವನ್ನು ದಾನ ಮಾಡಿದ್ದಾಗಿ ಹೇಳಿರುವುದರಿಂದ, ಈ ಬರಹವಿರುವ ನಾಣ್ಯಗಳನ್ನು ಅವನೇ ಅಚ್ಚುಹಾಕಿಸಿದನು ಎನ್ನುವುದು ಖಚಿತವಾಗುತ್ತದೆ. ಆದುದರಿಂದ ಈ ನಾಣ್ಯಗಳನ್ನು ಅವನಿಗೆ ಸೇರಿದ್ದೆಂದು ಭಾವಿಸಲಾಗಿದೆ. ಮೇಲಿನ ಮೂರನೆಯ ನಾಣ್ಯದಲ್ಲಿ ದೇವಾಲಯದ ಗೋಪುರವಿರುವುದು ವಿಶೇಷ ಸಂಗತಿ. ಅದು ಅವರ ಮನೆ ದೇವರಾದ ಸಪ್ತಕೋಟೀಶನ ದೇವಾಲಯವಿರಬೇಕು ಎಂದು ಭಾವಿಸಬಹುದು.

ಎರಡನೆಯ ಜಯಕೇಶಿ (1126-1147)

ಈ ದೊರೆಗೆ ಸೇರಿದ ಚಿನ್ನದ ನಾಣ್ಯವು ದೊರಕಿದೆ. ಇದರ ತೂಕ 71 ಗ್ರೇನ್; ಅಗಲ 0.75".

ಮು : ಸಮಾನಾಂತರ ಮೂರು ವೃತ್ತಗಳು; ಸಣ್ಣ ವೃತ್ತದೊಳಗೆ ಎಡಕ್ಕಿರುವ ಸಿಂಹ; ಅದರ ಮುಂಭಾಗದಲ್ಲಿ ದುರ್ಮತಿ ಎಂಬ ನಾಗರೀ ಬರಹ

ಹಿ : ಐದು ಸಾಲುಗಳ ನಾಗರೀ ಬರಹ

ಶ್ರೀ ಸಪ್ತಕೋ

ಟೀಶ ಲಬ್ಧವರ

ವೀರ ಜಯಕೇಶಿ

ದೇವ ಮಲವ

ರ ಮಾರಿ

ಈ ನಾಣ್ಯದಲ್ಲಿ ದುರ್ಮತಿ ಸಂವತ್ಸರದ ಉಲ್ಲೇಖವಿದೆ. ಈ ಸಂವತ್ಸರವು ಎರಡನೆಯ ಮತ್ತು ಮೂರನೆಯ ಜಯಕೇಶಿ ದೊರೆಗಳ ರಾಜ್ಯಭಾರ ಸಮಯದಲ್ಲಿ ಕಾಣಬರುವುದರಿಂದ ಈ ನಾಣ್ಯವನ್ನು ಇವರಿಬ್ಬರಲ್ಲಿ ಯಾರಾದರೂ ಟಂಕಿಸುವ ಸಾಧ್ಯತೆಯಿದೆ ಎಂಬುದನ್ನು ಗಮನಿಸಬೇಕು.

ಶಿವಚಿತ್ತ ಪೆರ್ಮಾಡಿ (1147-87) :

ಈ ರಾಜನ ಅನೇಕ ನಮೂನೆಯ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ನಾಣ್ಯದ ತೂಕ 76.5 ಗ್ರೇನ್; ಅಗಲ 0.7".

ಮು : ವೃತ್ತದೊಳಗಿರುವ ಸಿಂಹ; ಮುಂಗಾಲುಗಳನ್ನು ಮೇಲೆತ್ತಿಕೊಂಡಿದೆ; ಮುಂಭಾಗದಲ್ಲಿ ನಾಗರೀ ಬರಹ ಜಯ

ಹಿ : ವೃತ್ತದೊಳಗೆ ಐದು ಸಾಲುಗಳ ನಾಗರೀ ಬರಹ

ಶ್ರೀ ಸಪ್ತಕೋ

ಟೀಶ ಲಬ್ಧವರ

ವೀರ ಹೆಮ್ಮಾ

ಡಿದೇವ ಮಲ

ವರ ಮಾರಿ

ಮುಮ್ಮುಖದಲ್ಲಿರುವ ಜಯಸಂವತ್ಸರವು ಶಿವಚಿತ್ತನ ರಾಜ್ಯಭಾರದ ಸಮಯಕ್ಕೆ ಸರಿಯಾಗಿ ಹೊಂದುತ್ತದೆ.

ಎರಡನೆಯ ನಮೂನೆಯ ನಾಣ್ಯದಲ್ಲಿ ಸಂವತ್ಸರವೂ ಬೇರೆಯಾಗಿದೆ ಮತ್ತು ಹಿಮ್ಮುಖದ ಬರಹದಲ್ಲಿಯೂ ಭಿನ್ನತೆಯಿದೆ.

ಮು : ವೃತ್ತದೊಳಗೆ ಎಡಕ್ಕಿರುವ ಸಿಂಹ; ಮುಂಭಾಗದಲ್ಲಿ ನಾಗರೀ ಬರಹ ವಿಷು.

ಹಿ : ವೃತ್ತದೊಳಗೆ ಐದು ಸಾಲುಗಳ ನಾಗರೀ ಬರಹ

ಶ್ರೀ ಸಪ್ತಕೋ

ಟೀಶ ಲಬ್ಧವರ ಶಿ

ವಚಿತ್ತ ವೀರ ಹೆಮಾ

ಡಿದೇವ ಮಲ

ವರ ಮಾರಿ

ಮುಮ್ಮುಖದಲ್ಲಿರುವ ವಿಷು ಸಂವತ್ಸರವು ಕ್ರಿ.ಶ. 1161ಕ್ಕೆ ಸಮನಾಗಿದ್ದು, ಶಿವಚಿತ್ತನ ಆಳ್ವಿಕೆಯ ಸಮಯಕ್ಕೆ ಸರಿಹೊಂದಿಕೊಳ್ಳುತ್ತದೆ.

ಮತ್ತೆ ಕೆಲವು ನಾಣ್ಯಗಳಲ್ಲಿ ಕೀಲಕ, ಈಶ್ವರ ಮತ್ತು ಬಹುಧಾನ್ಯ ಸಂವತ್ಸರಗಳ ಹೆಸರುಗಳು ಕಾಣಬರುತ್ತವೆ. ಅವೆಲ್ಲವೂ ಶಿವಚಿತ್ತನ ಆಳ್ವಿಕೆಯ ಸಮಯಕ್ಕೆ ಸರಿಹೊಂದುತ್ತವೆ. ಮತ್ತೆ ಕೆಲವು ನಾಣ್ಯಗಳಲ್ಲಿ ಹಿಮ್ಮುಖದಲ್ಲಿ ಕಂಡುಬರುವ ಬರಹವು ನಾಲ್ಕು ಸಾಲುಗಳಲ್ಲಿ ಬರೆಯಲ್ಪಟ್ಟಿರುವುದು ನಮ್ಮ ಗಮನ ಸೆಳೆಯುತ್ತದೆ. ಅದನ್ನು ಬಿಟ್ಟರೆ, ಈ ನಾಣ್ಯಗಳು ಇತರ ವಿಷಯಗಳಲ್ಲಿ ಮೇಲಿನ ನಾಣ್ಯಗಳನ್ನೇ ಹೋಲುತ್ತವೆ.

ಈ ರಾಜನ ಇನ್ನೊಂದು ನಮೂನೆಯ ನಾಣ್ಯ ವಿಶಿಷ್ಟವಾದುದು. ಇದರ ಹಿಮ್ಮುಖದಲ್ಲಿ ಶಿವಚಿತ್ತ ಎನ್ನುವ ಹೆಸರು ನಾಗರೀ ಲಿಪಿಯಲ್ಲಿ ಮೂರು ಸಾರಿ ಮತ್ತು ಕನ್ನಡ ಲಿಪಿಯಲ್ಲಿ ಎರಡು ಸಾರಿ ಕಾಣಬರುತ್ತದೆ. ಇದರ ತೂಕ 70 ಗ್ರೇನ್; ಅಗಲ 0.7".

ಮು : ಚುಕ್ಕೆಗಳಿಂದ ಮಾಡಿದ ಹೊರವೃತ್ತದೊಳಗೆ ರೇಖಾ ವೃತ್ತ; ಅದರೊಳಗೆ ನಿಂತಿರುವ ಸಿಂಹ; ಅದರ ಮುಂಭಾಗದಲ್ಲಿ ಸ್ವಸ್ತಿಕ ಚಿಹ್ನೆ, ಅದರ ಕೆಳಗೆ ನಾಗರೀ ಲಿಪಿಯಲ್ಲಿ ಪ್ಲವ ಎನ್ನುವ ಬರಹ

ಹಿ : ಮೇಲಿರುವಂತೆ ಎರಡು ವೃತ್ತಗಳು; ಅದರಲ್ಲಿ ಐದು ಸಾರಿ ಶಿವಚಿತ್ತನ ಹೆಸರು

ಶಿವಚಿತ್ತ (ನಾಗರೀ)

ಶಿವಚಿತ್ತ (ಕನ್ನಡ)

ಶಿವಚಿತ್ತ (ನಾಗರೀ)

ಶಿವಚಿತ್ತ (ಕನ್ನಡ)

ಶಿವಚಿತ್ತ (ನಾಗರೀ)



ಮುಮ್ಮುಖದಲ್ಲಿ ಕಾಣಬರುವ ಪ್ಲವ ಸಂವತ್ಸರವು ಶಿವಚಿತ್ತನ ಆಳ್ವಿಕೆಯ ಅವಧಿಯಲ್ಲೇ ಕಾಣಬರುತ್ತದೆ. ಇದೊಂದು ಸುಂದರ ವಿನ್ಯಾಸದ ಚಿನ್ನದ ನಾಣ್ಯ.

ಮೂರನೆಯ ಜಯಕೇಶಿ (1187-1225)

ಈ ದೊರೆಯ ಚಿನ್ನದ ನಾಣ್ಯಗಳು, ಒಂದನೆಯ ಮತ್ತು ಎರಡನೆಯ ಜಯಕೇಶಿ ರಾಜರ ನಾಣ್ಯಗಳಂತೆಯೇ ಇವೆ. ಆದರೆ ಸಂವತ್ಸರಗಳಲ್ಲಿ ಮಾತ್ರ ಬದಲಾವಣೆ ಕಾಣಬರುತ್ತದೆ. ಒಂದು ನಮೂನೆಯ ನಾಣ್ಯದ ತೂಕ 79 ಗ್ರೇನ್; ಅಳತೆ 0.8".

ಮು : ವೃತ್ತಗಳೊಗೆ ಎಡಕ್ಕಿರುವ ಸಿಂಹ; ಮುಂದೆ ಅಂಗಿರ ಎನ್ನುವ ನಾಗರೀ ಬರಹ

ಹಿ : ವೃತ್ತದೊಳಗೆ ನಾಗರೀ ಬರಹ

ಶ್ರೀ ಸಪ್ತ ಕೋ

ಟೀಶ ಲಬ್ಧವರ

ವೀರ ಜಯಕೇಶಿ

ದೇವ ಮಲವ

ಹರಮಾರಿ

ಆಂಗಿರ ಸಂವತ್ಸರವು ಕ್ರಿ.ಶ. 1212ಕ್ಕೆ ಸರಿಹೊಂದುತ್ತದೆ. ಈ ಸಮಯದಲ್ಲಿ ಆಳುತ್ತಿದ್ದವನು ಮೂರನೆಯ ಜಯಕೇಶಿ. ಇದೇ ರೀತಿ ಪ್ರಮೋದ ಎಂಬ ಸಂವತ್ಸರದ ಹೆಸರಿನ ಚಿನ್ನದ ನಾಣ್ಯವೂ ದೊರಕಿದೆ. ಇದು ಕ್ರಿ.ಶ. 1210ಕ್ಕೆ ಸರಿಹೊಂದುತ್ತದೆ. ಆದುದರಿಂದ ಈ ಎರಡೂ ನಾಣ್ಯಗಳು ಮೂರನೆಯ ಜಯಕೇಶಿಗೆ ಸೇರಿದ್ದೆಂದು ಸುಲಭವಾಗಿ ತೀರ್ಮಾನಿಸಬಹುದು.

ಸೋಯಿದೇವ (1226-1246)

ಇವನ ಎರಡು ನಮೂನೆಯ ಚಿನ್ನದ ನಾಣ್ಯಗಳು ದೊರಕಿವೆ. ಮೊದಲನೆಯದು ಈ ವಂಶದ ಇತರ ರಾಜರುಗಳ ಚಿನ್ನದ ನಾಣ್ಯಗಳನ್ನೇ ಹೋಲುತ್ತದೆ. ಇದರ ತೂಕ 62 ಗ್ರೇನ್; ಅಗಲ 0.8".

ಮು : ಚುಕ್ಕೆಗಳಿಂದ ವಿನ್ಯಾಸಗೊಳಿಸಿದ ವೃತ್ತದಲ್ಲಿ ಎಡಕ್ಕಿರುವ ಸಿಂಹ; ಎಡಭಾಗದಲ್ಲಿ ಪ್ಲವ ಎನ್ನುವ ನಾಗರೀ ಬರಹ

ಹಿ : ಮೇಲಿನ ರೀತಿಯ ವೃತ್ತದೊಳಗೆ ನಾಲ್ಕು ಸಾಲುಗಳ ನಾಗರೀ ಬರಹ

ಶ್ರೀ ಸಪ್ತಕೋ

ಟೀಶ್ವರ ಚರಣ

ಲಬ್ಧ ವರ ವೀರ

ಸೋಯಿದೇವ

ಈ ನಾಣ್ಯದ ಹಿಮ್ಮುಖದಲ್ಲಿ ರಾಜನ ಹೆಸರೇ ಇರುವುದರಿಂದ, ಇದು ಸೋಯಿದೇವನಿಗೆ ಸೇರಿದ ನಾಣ್ಯವೆಂಬುದು ಖಚಿತವಾಗುತ್ತದೆ. ಪ್ಲವ ಸಂವತ್ಸರವು ಕ್ರಿ.ಶ. 1241ಕ್ಕೆ ಸರಿಹೊಂದುವುದರಿಂದ ಅದರ ಖಚಿತತೆಯು ಹೆಚ್ಚುತ್ತದೆ. ಇದೇ ರಾಜನ ವಿಶ್ವಾವಸು ಸಂವತ್ಸರಕ್ಕೆ ಸೇರಿದ ನಾಣ್ಯವೂ ದೊರಕಿದೆ. ಇನ್ನು ಕೆಲವು ನಾಣ್ಯಗಳಲ್ಲಿ ಸೋಯಿದೇವನ ಹೆಸರಿದೆ. ಆದರೆ ಸಂವತ್ಸರಗಳ ಹೆಸರು ಅಸ್ಪಷ್ಟವಾಗಿದೆ. ಆದರೆ ಹೆಸರಿನ ಆಧಾರದ ಮೇಲೆ ಈ ಎಲ್ಲ ನಾಣ್ಯಗಳೂ ಇವನಿಗೆ ಸೇರಿದ್ದೆಂದು ಹೇಳಬೇಕು.

ಇವನ ಎರಡನೆಯ ನಮೂನೆಯ ಚಿನ್ನದ ನಾಣ್ಯ ಗಮನಾರ್ಹವಾದುದು. ಇದರ ತೂಕ 63 ಗ್ರೇನ್; ಅಳತೆ 0.75".

ಮು : ವೃತ್ತದೊಳಗೆ ಕಾಲುಗಳನ್ನು ಮೇಲೆತ್ತಿರುವ ಸಿಂಹ; ಮುಂದುಗಡೆ ಶ್ರೀ ಸೋಇ ಎಂಬ ನಾಗರೀ ಬರಹ ಮತ್ತು ಶಂಖ

ಹಿ : ವೃತ್ತದೊಳಗೆ ಮೇಲ್ಭಾಗದಲ್ಲಿ ತ್ರಿಶೂಲ; ಕೆಳಗಡೆ ಎರಡು ಸಾಲುಗಳ ನಾಗರೀ ಬರಹ

ಶ್ರೀ ಮಲಹ

ರ ಮಾರಿ



ಈ ನಾಣ್ಯದಲ್ಲಿ ಕಾಣಬರುವ ಭಿನ್ನತೆಯನ್ನು ಗಮನಿಸಬೇಕು. ಮೊದಲನೆಯದಾಗಿ, ಈ ನಾಣ್ಯದ ಮುಮ್ಮುಖದಲ್ಲಿ ರಾಜನ ಹೆಸರಿದೆ. ಅದು ಇತರ ನಾಣ್ಯಗಳಲ್ಲಿರುವಂತೆ 'ಸೋಯಿ' ಎಂದಿರದೆ 'ಸೋಇ' ಎಂದಿದೆ. ಸಂವತ್ಸರದ ಹೆಸರು ಇಲ್ಲಿ ಕಾಣಬರುವುದಿಲ್ಲ. ನಾವು ಆಗಲೇ ಗಮನಿಸಿರುವಂತೆ 'ಶ್ರೀ ಮಲಹರಮಾರಿ' ಎನ್ನುವ ಬಿರುದು ಹಿಮ್ಮುಖದಲ್ಲಿ ಕಾಣುತ್ತದೆ. ಇವುಗಳನ್ನು 'ಮಲಹರಮಾರಿ ನಿಷ್ಕ' ಎನ್ನುವ ಹೆಸರಿನಿಂದ ಜನರು ಕರೆಯುತ್ತಿದ್ದರು ಎಂಬುದನ್ನೂ ಗಮನಿಸಲಾಗಿದೆ.

ಈ ಮೇಲಿನ ಕೆಲವು ಸಾಮಾನ್ಯ ಲಕ್ಷಣಗಳನ್ನು ಹೊಂದಿರುವ ಮತ್ತು ಅಸ್ಪಷ್ಟ ಬರಹವಿರುವ ಅನೇಕ ನಾಣ್ಯಗಳು ದೊರಕಿವೆ. ಈ ರೀತಿಯ ಒಂದು ಚಿನ್ನದ ನಾಣ್ಯದ ಮೇಲೆ ದೇವಷಷ್ಠ ಎನ್ನುವ ನಾಗರೀ ಬರಹವಿದೆ. ಆದುದರಿಂದ ಇದು ಇದೇ ವಂಶದ ಷಷ್ಠದೇವ ಎನ್ನು ರಾಜನಿಗೆ ಸೇರಿದ್ದೆಂದು ಭಾವಿಸಲಾಗಿದೆ. ಇದೇ ರೀತಿಯ ಮತ್ತೊಂದು ನಾಣ್ಯದ ಮೇಲೆ ಕಾಮದೇವ ಎನ್ನುವ ಬರಹವಿದೆಯೆಂದು ಭಾವಿಸಿ, ಈ ನಾಣ್ಯವನ್ನು ಕದಂಬ ಕಾಮದೇವನಿಗೆ ಸೇರಿದ್ದೆಂದು ತರ್ಕಿಸಲಾಗಿದೆ.

ಕೆಲವು ತಾಮ್ರದ ನಾಣ್ಯಗಳು ದೊರಕಿದ್ದು, ಅವು ಈ ರಾಜವಂಶಕ್ಕೆ ಸೇರಿದವೆಂದು ಭಾವಿಸಲಾಗಿದೆ. ಈ ರೀತಿಯ ಒಂದು ನಾಣ್ಯದ ತೂಕ 25 ಗ್ರೇನ್; ಅಳತೆ 0.65".

ಮು : ವೃತ್ತದೊಳಗೆ ಸಿಂಹ; ಮೇಲೆ ಸೂರ್ಯ-ಚಂದ್ರರು; ಪ್ರಮೋದ ಎನ್ನುವ ನಾಗರೀ ಬರಹ

ಹಿ : ವೃತ್ತದೊಳಗೆ ಮೂರು ಸಾಲುಗಳ ನಾಗರೀ ಬರಹ

ಶ್ರೀ

ಕೋಟೀ

ಶ್ವರ

ಮತ್ತೆ ಕೆಲವು ನಾಣ್ಯಗಳು ಇದಕ್ಕಿಂತ ಭಿನ್ನವಾಗಿವೆ. ಒಂದು ನಾಣ್ಯದ ಮುಮ್ಮುಖದಲ್ಲಿ ಸಿಂಹವಿದೆ; ಹಿಮ್ಮುಖದಲ್ಲಿ ಶ್ರೀ ಎಂಬ ಅಕ್ಷರ ಮತ್ತು ಸ್ವಸ್ತಿಕ ಚಿಹ್ನೆಯಿದೆ. ಇನ್ನೊಂದು ನಾಣ್ಯದ ಮುಮ್ಮುಖದಲ್ಲಿ ಸಿಂಹ ಮತ್ತು ತ್ರಿಶೂಲಗಳಿವೆ; ಹಿಮ್ಮುಖದಲ್ಲಿ ತ್ರಿಶೂಲವಿದೆ. ಸ್ವಸ್ತಿಕ, ಸಿಂಹ, ತ್ರಿಶೂಲ ಮುಂತಾದವು ಸಾಮಾನ್ಯವಾಗಿ ಗೋವ ಕದಂಬರ ನಾಣ್ಯಗಳ


ಮೇಲೆ ಕಾಣಬರುವುದರಿಂದ, ಇವು ಕೂಡ ಅವರಿಗೆ ಸೇರಿದ್ದೆಂದು ಭಾವಿಸಲಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಗೋವ ಕದಂಬರು ಸಾಮಂತರೆನಿಸಿದರೂ ಕೂಡ, ಅವರ ನಾಣ್ಯಗಳಲ್ಲಿ ಶ್ರೀಮಂತಿಕೆಯನ್ನು ಮತ್ತು ವೈವಿಧ್ಯವನ್ನು ಕಾಣಬಹುದು. ನಾಣ್ಯಗಳ ಮೇಲೆ ರಾಜರುಗಳ ಹೆಸರುಗಳನ್ನು ಹಾಕಿಸುವ ಪದ್ಧತಿಯನ್ನು ಅನುಸರಿಸಿದ್ದರಿಂದ, ಆ ನಾಣ್ಯಗಳ ಖಚಿತತೆಯೂ ಹೆಚ್ಚುತ್ತದೆ. ಈ ಎಲ್ಲ ದೃಷ್ಟಿಗಳಿಂದ ಇವು ಗಮನಾರ್ಹ ನಾಣ್ಯಗಳು.

7. ಹಾನಗಲ್ ಕದಂಬರ ನಾಣ್ಯಗಳು

ಹಾನಗಲ್ಲನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡು ಸಾಮಂತರಾಗಿ ಆಳಿದ ಕದಂಬರ ಶಾಖೆಯ ದೊರೆಗಳು ಗೋವ ಕದಂಬರ ಸಮಕಾಲೀನರೇ ಆಗಿದ್ದರೂ, ಅವರಷ್ಟು ಶ್ರೀಮಂತವಾದ ನಾಣ್ಯಗಳನ್ನು ಟಂಕಿಸಲಿಲ್ಲ. ಜೊತೆಗೆ ಸಿಕ್ಕಿರುವ ನಾಣ್ಯಗಳೂ ತೀರ ಕಡಿಮೆ. ಹಾನಗಲ್ ಕದಂಬರ ರಾಜಲಾಂಛನ ಹನುಮಾನ್. ಆದುದರಿಂದ ಹನುಮಂತನ ಚಿತ್ರವಿರುವ ಕೆಲವು ಸಮಕಾಲೀನವೆನಿಸಬಹುದಾದ ನಾಣ್ಯಗಳು ಇವರಿಗೆ ಸೇರಿದ್ದೆಂದು ಭಾವಿಸಲಾಗಿದೆ. ಆದರೆ ಯಾವ ನಾಣ್ಯದ ಮೇಲೂ ರಾಜನ ಹೆಸರು ಅಥವಾ ಬಿರುದು ಕಾಣದೇ ಇರುವುದರಿಂದ ಅದರ ವಿಷಯದಲ್ಲಿ ಖಚಿತತೆಯು ಕಡಿಮೆ. ಇವರ ಚಿನ್ನದ ನಾಣ್ಯದ ತೂಕ 63 ಗ್ರೇನ್; ಅಗಲ 0.7".

ಮು : ಸುಂದರವಾದ ಪುಷ್ಪ ವಿನ್ಯಾಸ; ಅದರ ಸುತ್ತಲೂ ಒಂದೇ ರೀತಿಯ ಅಲಂಕಾರ

ಹಿ : ಕುಳಿತಿರುವ ಹನುಮಾನ್; ಎರಡು ಕಡೆಗಳಲ್ಲಿ ಚಾಮರ; ಕೆಳಭಾಗದಲ್ಲಿ ಕನ್ನಡ ಲಿಪಿಯ 'ನಕರ' ಎನ್ನುವ ಬರಹ



ನಕರ ಎನ್ನುವುದು ಬಂಕಾಪುರದಲ್ಲಿರುವ ಇವರು ನಿರ್ಮಿಸಿದ ನಕರೇಶ್ವರ ದೇವಾಲಯವನ್ನು ಸೂಚಿಸುತ್ತದೆಯೆಂದು ಊಹಿಸಲಾಗಿದೆ. ನಕರ ಎನ್ನುವುದು ಒಂದು ಸ್ಥಳೀಯ ಸಂಸ್ಥೆಯಾದುದರಿಂದ, ಆ ಸಂಸ್ಥೆಯು ಈ ನಾಣ್ಯವನ್ನು ಟಂಕಿಸಿರಬಹುದೆಂಬ ವಾದವನ್ನು ತಳ್ಳಿಹಾಕುವಂತಿಲ್ಲ.

ಇತ್ತೀಚಿಗೆ ಮುಕುಂದ ಪ್ರಭು ಅವರು ಇದೇ ವಂಶದ ಕೀರ್ತಿವರ್ಮನಿಗೆ ಸೇರಿದ ಚಿನ್ನದ ನಾಣ್ಯವನ್ನು ಬೆಳಕಿಗೆ ತಂದಿದ್ದಾರೆ.

ಮು : ಕಾಲುಗಳನ್ನು ಮೇಲೆತ್ತಿಕೊಂಡಿರುವ ಸಿಂಹ

ಹಿ : ಮೂರು ಸಾಲುಗಳ ಕನ್ನಡ ಬರಹ

ಶ್ರೀ ಮಲೆಗಳ ಕೇಸರಿ

ಹಾನಗಲ್ಲಿನ ಮಹಾಮಂಡಳೇಶ್ವರ ಕೀರ್ತಿವರ್ಮದೇವನಿಗೆ ಈ ಬಿರುದು ಇದ್ದಿತು. ಇವನು ಚಾಲುಕ್ಯ ಇಮ್ಮಡಿ ಸೋಮೇಶ್ವರನ ಸಾಮಂತನಾಗಿದ್ದನು. ಆದುದರಿಂದ ಈ ಬಿರುದಿನ ಆಧಾರದ ಮೇಲೆ ಈ ನಾಣ್ಯ ಕೀರ್ತಿವರ್ಮನಿಗೆ ಸೇರುತ್ತದೆ.





ಇನ್ನೊಂದು ನಮೂನೆಯ ನಾಣ್ಯವೂ ದೊರಕಿದೆ. ಇದರ ತೂಕ 2 ಗ್ರೇನ್. ಇದರ ಮುಮ್ಮುಖದಲ್ಲಿ ಒಂದು ಅಸ್ಪಷ್ಟ ಪ್ರಾಣಿಯ ಚಿತ್ರವಿದೆ. ಹಿಮ್ಮುಖದಲ್ಲಿ ಹನ್ನೆರಡನೆಯ ಶತಮಾನದ ಕನ್ನಡ ಲಿಪಿಯಲ್ಲಿ 'ಶ್ರೀ ತೋ' ಎನ್ನುವ ಬರಹವಿದೆ. ಇದು ಸಾಮಂತ ತೋಯಿಮದೇವನಿಗೆ ಸೇರಿದ್ದೆಂದು ಭಾವಿಸಲಾಗಿದೆ. ಹನುಮಂತನ ಚಿತ್ರವಿರುವ 7 ಗ್ರೇನ್ ತೂಕವಿರುವ ಚಿನ್ನದ ನಾಣ್ಯಗಳೂ ದೊರಕಿವೆ. ನಮೂನೆಯ ಆಧಾರದ ಮೇಲೆ ಇವು ಕೂಡ ಈ ಸಾಮಂತವಂಶಕ್ಕೆ ಸೇರಿದ್ದೆಂದು ಭಾವಿಸಲಾಗಿದೆ. ಇವೆಲ್ಲವನ್ನೂ ಗಮನಿಸಿದರೆ, ಹಾನಗಲ್ಲಿನ ಸುತ್ತಮುತ್ತ ಹೆಚ್ಚಿನ ಸಂಶೋಧನೆ ನಡೆಸಿದರೆ ಇವರಿಗೆ ಸೇರಿದ ನಾಣ್ಯಗಳು ಸಿಕ್ಕಬಹುದೆಂದು ಊಹಿಸಬಹುದು.

8. ತುಳುನಾಡಿನ ಆಳುಪರ ನಾಣ್ಯಗಳು

ಪ್ರಾಚೀನ ರಾಜವಂಶಗಳಲ್ಲಿ ಒಂದಾದ ಆಳುಪರು ಒಂದು ಸಾವಿರಕ್ಕೂ ಹೆಚ್ಚು ವರ್ಷಗಳ ಕಾಲ ತುಳುನಾಡು ಅಂದರೆ ವಿಶೇಷವಾಗಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಆಳಿದರು. ಟಾಲೆಮಿಯ ಬರವಣಿಗೆಯಲ್ಲಿ ಹಾಗೂ ಪ್ರಾಚೀನತಮವೆನಿಸಿದ ಹಲ್ಮಿಡಿ ಶಾಸನದಲ್ಲಿಯೂ ಇವರ ಉಲ್ಲೇಖವನ್ನು ಕಾಣುತ್ತೇವೆ. ಇವರು ಚಂದ್ರವಂಶಕ್ಕೆ ಸೇರಿದ್ದು ಮೀನಲಾಂಛನವನ್ನು ಹೊಂದಿದ್ದರು. ಇವರು ಪಾಂಡ್ಯವಂಶದವರೆಂದು ತಮ್ಮನ್ನು ಕರೆದುಕೊಂಡಿದ್ದಾರೆ. ಆದುದರಿಂದ ಈ ವಂಶದ

ಕೆಲವು ದೊರೆಗಳು ಪಂಡಿತ ಪಾಂಡ್ಯ, ಪಾಂಡ್ಯ ಧನಂಜಯ ಮುಂತಾದ ಬಿರುದುಗಳನ್ನು ಧರಿಸಿದರು. ಈ ಬಿರುದುಗಳಿರುವ ಹತ್ತಾರು ನಾಣ್ಯಗಳು ಬಹಳ ಹಿಂದೆಯೇ ದೊರಕಿದ್ದವು. ಆದರೆ ಪಾಂಡ್ಯ ಎನ್ನುವ ಪದರಿಂದ ಪ್ರಭಾವಿತರಾಗಿ, ಹಿಂದಿನ ತಲೆಮಾರಿನ ನಾಣ್ಯಶಾಸ್ತ್ರಜ್ಞರು, ಈ ನಾಣ್ಯಗಳು ತಮಿಳುನಾಡಿನ ಮದುರೆಯ ಪಾಂಡ್ಯರಿಗೆ ಸೇರಿದ್ದೆಂದು ಭಾವಿಸಿದರು. ಇದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಂಡರು. ಆದರೆ ನಾಣ್ಯಶಾಸ್ತ್ರಜ್ಞರಾದ ಮುಕುಂದ ಪ್ರಭು ಅವರು ಈ ಪ್ರಶ್ನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ನಾಣ್ಯಗಳಿಗೂ ಮದುರೆಯ ಪಾಂಡ್ಯರಿಗೂ ಯಾವ ಸಂಬಂಧವೂ ಇಲ್ಲ; ಇವು ತುಳುನಾಡಿನಲ್ಲಿ ಆಳಿದ ಆಳುಪರ ನಾಣ್ಯಗಳು ಎಂಬುದನ್ನು ಖಚಿತವಾಗಿ ತೋರಿಸಿಕೊಟ್ಟು, ಆಳುಪರ ನಾಣ್ಯಗಳಿಗೆ ಹೊಸ ಜೀವವನ್ನು ಕೊಟ್ಟರು. ಈ ನಾಣ್ಯಗಳು ವಿಶೇಷವಾಗಿ ತುಳುನಾಡಿನಲ್ಲಿ ದೊರಕುತ್ತವೆ. ಮಂಗಳೂರು, ಬಾರಕೂರು, ಉದ್ಯಾವರ ಮುಂತಾದ ಪ್ರಾಚೀನ ಸ್ಥಳಗಳಲ್ಲಿ ಈ ನಾಣ್ಯಗಳು ಸಿಗುವುದು ಒಂದು ಸಾಮಾನ್ಯ ಸಂಗತಿ. ಇದೇ ಆಳುಪರು ಆಳುತ್ತಿದ್ದ ಸ್ಥಳಗಳು. ಆಗಲೇ ಗಮನಿಸಿರುವಂತೆ ಆಳುಪರು ಮೀನಲಾಂಛನವನ್ನು ಹೊಂದಿದವರು. ಅವರ ಅನೇಕ ಶಾಸನಗಳ ಮೇಲ್ಭಾಗದಲ್ಲಿ ಮೀನಿನ ಚಿತ್ರವನ್ನು ಕಾಣುತ್ತೇವೆ.

ಇನ್ನು ಪಂಡಿತ ಪಾಂಡ್ಯ, ಪಾಂಡ್ಯ ಧನಂಜಯ, ಮುಂತಾದ ಬಿರುದುಗಳ ವಿಷಯ. ಇದನ್ನು ತಿಳಿಯಲು ಸ್ವಲ್ಪ ಇತಿಹಾಸವನ್ನು ಗಮನಿಸಬೇಕಾಗುತ್ತದೆ. ಆಳುಪ ದೊರೆ ಮೊದಲನೆಯ ಚಿತ್ರವಾಹನನು ಪಾಂಡ್ಯ ಕೋಚ್ಚಡಯನ್ ಅನ್ನು ಮಂಗಳಾಪುರದಲ್ಲಿ ಸೋಲಿಸಿದನು. ಇದೊಂದು ಮುಖ್ಯ ವಿಜಯವಾದುದರಿಂದ ಅವನೂ ಸೇರಿದಂತೆ ಮುಂದೆ ಆಳಿದ ರಾಜರು ಪಾಂಡ್ಯ ಎಂಬ ಪದವನ್ನು ತಮ್ಮ ಪ್ರಶಸ್ತಿಯಲ್ಲಿ ಸೇರಿಸಿಕೊಂಡರೆಂದು ತುಳುನಾಡಿನ ಇತಿಹಾಸಕಾರ ಕೆ.ವಿ. ರಮೇಶ್ ಅವರು ಸಮಂಜಸವಾಗಿ ವಾದಿಸಿದ್ದಾರೆ. ಇದನ್ನು ಆಳುಪರ ಶಾಸನಗಳು ಸ್ಪಷ್ಟಗೊಳಿಸುತ್ತವೆ. ವರಾಂಗದ ಶಾಸನದಲ್ಲಿ ಕುಂದನ ಎಂಬ ದೊರೆಯನ್ನು ಪಂಡಿತ ಪಾಂಡ್ಯ ಮತ್ತು ಪಾಂಡ್ಯ ಧನಂಜಯ ಎಂದು ಕರೆಯಲಾಗಿದೆ. ಸೋಯಿದೇವ ಎಂಬ ಇನ್ನೊಬ್ಬ ರಾಜನಿಗೂ ಇದೇ ಬಿರುದುಗಳಿದ್ದುವೆಂದು ಅವನ ಕ್ರಿ.ಶ. 1122ರ ಶಾಸನದಿಂದ ಗೊತ್ತಾಗುತ್ತದೆ. ಇದಕ್ಕೆ ವಿರುದ್ಧವಾಗಿ ಮದುರೆಯ ಯಾವ ಪಾಂಡ್ಯ ದೊರೆಗೂ ಪಂಡಿತ ಪಾಂಡ್ಯ, ಪಾಂಡ್ಯ ಧನಂಜಯ ಎಂಬ ಬಿರುದು ಇದ್ದದ್ದನ್ನು ಯಾವ ಶಾಸನವೂ ಉಲ್ಲೇಖಿಸುವುದಿಲ್ಲ. ಅಷ್ಟೇ ಅಲ್ಲದೆ ಆಳುಪರ ಶಾಸನಗಳಲ್ಲಿ ಪಾಂಡ್ಯ ಗದ್ಯಾಣಗಳನ್ನು ದೇವಾಲಯಗಳಿಗೆ ದಾನವಾಗಿ ಕೊಟ್ಟ ಉದಾಹರಣೆಗಳೂ ಕಾಣಬರುತ್ತವೆ. ಕವಿ ಆಳುಪೇಂದ್ರನು ಮೂವತ್ತು ಪಾಂಡ್ಯ ಗದ್ಯಾಣಗಳನ್ನು ಮಾರ್ಕಂಡೇಶ್ವರ ದೇವಾಲಯಕ್ಕೆ ದಾನ ಕೊಟ್ಟನೆಂದು ಕೊಟಕೇರಿಯ ಕ್ರಿ.ಶ. 1139ರ ಶಾಸನ ತಿಳಿಸುತ್ತದೆ.

ಈ ನಾಣ್ಯಗಳ ಮೇಲೆ ಕನ್ನಡ ಲಿಪಿಯ ಬರವಣಿಗೆಯಿರುವುದು ಇನ್ನೊಂದು ವಿಶೇಷ. ಮದುರೆಯ ಪಾಂಡ್ಯರು ಕನ್ನಡ ಲಿಪಿಯನ್ನುಳ್ಳ ನಾಣ್ಯಗಳನ್ನು ಟಂಕಿಸಲಿಲ್ಲವೆಂಬುದು

ಎಲ್ಲರಿಗೂ ತಿಳಿದ ವಿಷಯ. ಆಳುಪರು ಕನ್ನಡ ನಾಡಿನಲ್ಲಿ ರಾಜ್ಯಭಾರ ಮಾಡುತ್ತಿದ್ದುದರಿಂದ ನಾಗರೀ ಮತ್ತು ಕನ್ನಡ ಲಿಪಿಯ ಬರಹವನ್ನುಳ್ಳ ಶಾಸನಗಳನ್ನು ಟಂಕಿಸಿರುವುದು ಸಮಂಜಸವಾಗಿಯೇ ಇದೆ. ಈ ಎಲ್ಲ ಅಂಶಗಳನ್ನೂ ಗಮನಿಸಿದರೆ ಪ್ರಸ್ತುತ ನಾಣ್ಯಗಳು ಆಳುಪರಿಗೆ ಸಂಬಂಧಿಸಿದ್ದು ಎನ್ನುವ ವಿಷಯದಲ್ಲಿ ಯಾವ ಸಂದೇಹವೂ ಉಳಿಯುವುದಿಲ್ಲ.

ಆಳುಪರ ಶಾಸನಗಳಲ್ಲಿಯೂ ಅವರ ನಾಣ್ಯಗಳಿಗೆ ಸಂಬಂಧಿಸಿದ ಮಾಹಿತಿಗಳು ದೊರೆಯುತ್ತವೆ. ಗದ್ಯಾಣ, ವರಹ, ಹೊನ್ನು, ಹಣ ಮುಂತಾದ ನಾಣ್ಯಗಳ ಹೆಸರುಗಳು ಆಳುಪರ ಶಾಸನಗಳಲ್ಲಿ ಕಾಣಸಿಗುತ್ತವೆ. ಅವರ ಶಾಸನಗಳಲ್ಲಿ ಕಾಣಬರುವ ಪಾಂಡ್ಯ ಗದ್ಯಾಣವೆಂದರೆ, ಪಾಂಡ್ಯ ಎಂಬ ಬರಹವಿರುವ ಗದ್ಯಾಣವೆಂದು ಸುಲಭವಾಗಿ ತೀರ್ಮಾನಿಸಬಹುದು. ಮಂಗಳೂರು ಗದ್ಯಾಣ ಮತ್ತು ಬಾರಕೂರು ಗದ್ಯಾಣಗಳು, ಆಳುಪರ ರಾಜಧಾನಿಗಳಾಗಿದ್ದ ಮಂಗಳೂರು ಮತ್ತು ಬಾರಕೂರಿನಲ್ಲಿದ್ದ ಟಂಕಶಾಲೆಗಳಲ್ಲಿ ಅಚ್ಚಾದ ಗದ್ಯಾಣಗಳು. ಕಾಟಿಗದ್ಯಾಣ ಮತ್ತು ಅರ್ಧಕಾಟಿ ಗದ್ಯಾಣ ಎನ್ನುವ ಪದಗಳೂ ಇವರ ಶಾಸನಗಳಲ್ಲಿ ಕಾಣಬರುತ್ತವೆ. ಇವು ಕಾಲು ಮತ್ತು ಎಂಟನೆಯ ಒಂದು ಭಾಗ ಮೌಲ್ಯದ ಗದ್ಯಾಣಗಳು. ಘಟ್ಟಿ ವರಹವೆಂದರೆ ನಿಜವಾದ ಚಿನ್ನದ ವರಹ ನಾಣ್ಯ ಎಂದು ಅರ್ಥೈಸಬಹುದು. ದೊಡ್ಡ ವರಹವೆಂದರೆ, ಎರಡು ವರಹಗಳ ದೊಡ್ಡ ನಾಣ್ಯವಿರಬೇಕು. ಹೀಗೆ ಆಳುಪರ ನಾಣ್ಯಗಳು ನಾಣ್ಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ನೀಡುತ್ತವೆ.

ಪಾಂಡ್ಯ ಧನಂಜಯ ನಮೂನೆಯ ನಾಣ್ಯ

ಈ ನಾಣ್ಯಗಳಲ್ಲಿ ನಾಲ್ಕು ವಿವಿಧ ನಮೂನೆಗಳನ್ನು ಕಾಣುತ್ತೇವೆ. ಮೊದಲನೆಯ ನಮೂನೆಯ ನಾಣ್ಯ ಹೀಗಿದೆ.

ಮು : ಒಂದು ಮೀನು; ಎಡಕ್ಕೆ ಶಂಖ; ಬಲಕ್ಕೆ ಚೌರಿ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ಪಾ

ಣ್ಡ್ಯ ಧನಂ

ಜಯ

ಎರಡನೆಯ ನಮೂನೆಯ ನಾಣ್ಯದಲ್ಲಿ ಎರಡು ಮೀನುಗಳು ಕಾಣಬರುತ್ತವೆ.

ಮು : ಎರಡು ಮೀನುಗಳು; ಎಡಕ್ಕೆ ಶಂಖ; ಬಲಕ್ಕೆ ಚೌರಿ

ಹಿ : ಮೇಲಿನ ನಾಣ್ಯದಂತೆ ಬರಹ



ಮೂರನೆಯ ನಮೂನೆಯ ನಾಣ್ಯದಲ್ಲಿ ಭಿನ್ನತೆಯಿದೆ.

ಮು : ಎರಡು ಮೀನುಗಳು; ಪೂರ್ಣಕುಂಭ ಬಲಕ್ಕೆ; ದೀಪಸ್ತಂಭ ಎಡಕ್ಕೆ

ಹಿ : ಮೂರು ಸಾಲುಗಳ ಕನ್ನಡ ಬರಹ

ಪಾಣ್ಡ್ಯ

ಧನಂ

ಜಯ



ನಾಲ್ಕನೆಯ ನಮೂನೆಯ ನಾಣ್ಯದಲ್ಲಿ ಹೆಚ್ಚು ಬದಲಾವಣೆ ಕಾಣಬರುತ್ತದೆ.

ಮು : ಅಡ್ಡಲಾಗಿರುವ ಒಂದರ ಮೇಲೆ ಒಂದರಂತೆ ಎರಡು ಮೀನುಗಳು; ಮೇಲ್ಭಾಗದಲ್ಲಿ ಎರಡು ಸಣ್ಣ ಮೀನುಗಳು; ಕೆಳಗಡೆ ಚೇಳು(?)

ಹಿ : ಗೆರೆಗಳಿರುವ ಕನ್ನಡ ಬರಹ

ಶ್ರೀ ಪಾ

ಣ್ಡ್ಯ ಧನಂ

ಜಯ



ಈ ನಾಣ್ಯಗಳ ಮೇಲೆ ರಾಜನ ಹೆಸರಿಲ್ಲ. ಪಾಂಡ್ಯ ಧನಂಜಯ ಎಂಬ ಬಿರುದು ಮಾತ್ರ ಇದೆ. ಕೊನೆಯ ಪಕ್ಷ ಇಬ್ಬರು ಆಳುಪ ದೊರೆಗಳಾದ ಕುಂದನ (1220-30) ಮತ್ತು ಸೋಯಿದೇವ ಆಳುಪೇಂದ್ರ (1315-35) ಅವರಿಗೆ ಈ ಬಿರುದು ಇದ್ದಿತು. ಆದುದರಿಂದ ಈ ಇಬ್ಬರಲ್ಲಿ ಯಾರಾದರೂ ಈ ನಾಣ್ಯಗಳನ್ನು ಟಂಕಿಸಿರಬಹುದೆಂದು ಮಾತ್ರ ಹೇಳಬಹುದು.

ಇತರ ನಾಣ್ಯಗಳು

ಐದು ಗ್ರೇನ್ ತೂಕದ ಕೆಲವು ನಾಣ್ಯಗಳು ದೊರಕಿದ್ದು, ಅವು ಹಣ ಮೌಲ್ಯದ ನಾಣ್ಯಗಳೆಂಬುದು ಖಚಿತ.

ಮು : ಎರಡು ಮೀನುಗಳು; ಬಲಕ್ಕೆ ಶಂಖ; ಎಡಕ್ಕೆ ಪೂರ್ಣಕುಂಭ

ಹಿ : ಶ್ರೀ ಎಂಬ ಕನ್ನಡ ಅಕ್ಷರ

ಇದೇ ತೂಕದ ಮತ್ತೊಂದು ನಮೂನೆಯ ನಾಣ್ಯ ದೊರಕಿದೆ.


ಮು : ಎರಡು ಮೀನುಗಳು; ಬಲಕ್ಕೆ ಶಂಖ; ಎಡಕ್ಕೆ ರಾಜದಂಡ

ಹಿ : ವೀ ಎನ್ನುವ ಕನ್ನಡ ಅಕ್ಷರ

'ವೀ' ಎನ್ನುವ ಅಕ್ಷರದ ಆಧಾರದ ಮೇಲೆ ಈ ನಾಣ್ಯವು ವೀರ ಕುಲಶೇಖರನಿಗೆ ಸೇರಿದ್ದೆಂದು ಭಾವಿಸಲಾಗಿದೆ.



ಮುಕುಂದ ಪ್ರಭು ಅವರು ಪತ್ತೆ ಮಾಡಿದ ಇನ್ನೊಂದು ಚಿನ್ನದ ನಾಣ್ಯ ಆಳುಪರ ಇತಿಹಾಸದಲ್ಲಿ ಮಾತ್ರವಲ್ಲದೆ, ಇಡೀ ಭಾರತೀಯ ನಾಣ್ಯ ಇತಿಹಾಸದಲ್ಲೇ ಪ್ರಮುಖವಾದ ನಾಣ್ಯ. ಇದುವರೆಗೂ ನಮಗೆ ತಿಳಿದಿರುವಂತೆ (ಮುಸ್ಲಿಂ ನಾಣ್ಯಗಳನ್ನು ಬಿಟ್ಟು) ಯಾವ ಭಾರತೀಯ ನಾಣ್ಯದ ಮೇಲೂ ಆ ನಾಣ್ಯದ ಹೆಸರು ಮುದ್ರಿತವಾಗಿರುವುದಿಲ್ಲ. ಆದರೆ ಈ ಆಳುಪ ನಾಣ್ಯದ ಮೇಲೆ ಗದ್ಯಾಣ ಎಂಬ ಬರಹವಿದ್ದು, ಈ ರೀತಿ ನಾಣ್ಯದ ಹೆಸರಿರುವ ಮೊಟ್ಟಮೊದಲನೆಯ ನಾಣ್ಯ ಎಂಬ ಕೀರ್ತಿಗೆ ಪಾತ್ರವಾಗಿದೆ. ಆದುದರಿಂದ ಈ ನಾಣ್ಯಕ್ಕೆ ಬಹಳ ಪ್ರಾಮುಖ್ಯವಿದೆ. ಈ ನಾಣ್ಯ ವೃತ್ತಾಕಾರವಾಗಿದ್ದು ಇದರ ತೂಕ 52 ಗ್ರೇನ್; ಅಳತೆ 0.7". ಇದರ ಮುಮ್ಮುಖದಲ್ಲಿ ಎರಡು ದೊಡ್ಡ ಮೀನುಗಳು, ಪಕ್ಕದಲ್ಲಿ ಒಂದು ಸಣ್ಣ ಮೀನು, ಅದರ ಪಕ್ಕ ಚುಕ್ಕೆಗಳಿದ್ದು, ಅವುಗಳೂ ಮೀನಿನ ವಿನ್ಯಾಸವನ್ನೇ ಹೋಲುತ್ತವೆ. ಕೆಳಭಾಗದಲ್ಲಿ ಅಂಕುಶವಿದೆ. ಮೇಲ್ಭಾಗದಲ್ಲಿ ಎರಡು ಗೆರೆಗಳ ಮೇಲೆ ನಾಗರೀ ಲಿಪಿಯಲ್ಲಿ ಗದ್ಯಾಣ ಎಂಬ ಬರಹವಿದೆ. ಈ ನಾಣ್ಯವೂ ಯಾವ ದೊರೆಗೆ ಸೇರಿದ್ದೆಂದು ತಿಳಿಯಲು ಮಾಹಿತಿಗಳು ಸಾಲದು. ಆದರೆ ಇದು ಆಳುಪರ ನಾಣ್ಯವೆಂಬುದು ಮಾತ್ರ ಖಚಿತ. ಒಟ್ಟಿನಲ್ಲಿ ಇದರ ಮೇಲಿರುವ ಗದ್ಯಾಣ ಎನ್ನುವ ಬರಹದಿಂದ ಈ ನಾಣ್ಯ ಬಹಳ ಮುಖ್ಯವಾದ ನಾಣ್ಯವೆಂದೆನಿಸಿದೆ.



9. ಚಿತ್ರದುರ್ಗ ಪಾಳೆಯಗಾರರ ನಾಣ್ಯಗಳು

ಕರ್ನಾಟಕದಲ್ಲಿ ಆಳಿದ ಮಧ್ಯಕಾಲೀನ ಪಾಳೆಯಗಾರರಲ್ಲಿ, ಚಿತ್ರದುರ್ಗದಲ್ಲಿ ಆಳಿದವರು ಪ್ರಮುಖರು. ಮದಕರಿ ನಾಯಕನಂತಹ ಶೂರನನ್ನು ಕರ್ನಾಟಕಕ್ಕೆ ನೀಡಿದ ಶ್ರೇಯಸ್ಸು ಈ ವಂಶಕ್ಕೆ ಸೇರುತ್ತದೆ. ಇವರಿಗೆ ಸೇರಿದ ಹೆಚ್ಚಿನ ನಾಣ್ಯಗಳು ಸಿಕ್ಕಿಲ್ಲವಾದರೂ, ಎಂ.ಎಸ್. ಪುಟ್ಟಣ್ಣನವರ ಚಿತ್ರದುರ್ಗದ ಪಾಳೆಯಗಾರರು ಎನ್ನುವ ಗ್ರಂಥದಿಂದ ಅನೇಕ ಮಾಹಿತಿಗಳು ದೊರೆಯುತ್ತವೆ. ಇದು ಸಮಕಾಲೀನ ಗ್ರಂಥವಲ್ಲದಿದ್ದರೂ, ಇದರಲ್ಲಿ ಪಾಳೆಯಗಾರರ ಕಾಲದ ಮಾಹಿತಿಗಳನ್ನು ಸೂಕ್ಷ್ಮವಾಗಿ ಸಂಗ್ರಹಿಸಲಾಗಿದೆ. ರೈತರು ತೆರಿಗೆಗಳನ್ನು ದುರ್ಗಿ ಎಂಬ ನಾಣ್ಯದ ರೂಪದಲ್ಲಿ ಕೊಡುತ್ತಿದ್ದರು. ಇವುಗಳು ಆಗಿನ ಕಾಲದಲ್ಲಿ ದುರ್ಗಿ ವರಹ ಅಥವಾ ದುರ್ಗಿ ಪಗೋಡ ಎನ್ನುವ ಹೆಸರುಗಳಿಂದ ಜನಜನಿತವಾಗಿದ್ದಿತು. ದುರ್ಗಿ ಪಗೋಡವು ಒಂದೂವರೆ ವರಹಕ್ಕೆ ಸಮನಾಗಿದ್ದಿತು.

ಈ ಕಾಲದಲ್ಲಿ ಚಲಾವಣೆಯಲ್ಲಿದ್ದ ಇತರ ನಾಣ್ಯಗಳೆಂದರೆ ಹಾಗ, ಕಾಸು ಮತ್ತು ದುಗ್ಗಾಣಿ. ಚಿತ್ರದುರ್ಗದಲ್ಲಿ ಒಂದು ಟಂಕ ಶಾಲೆಯಿದ್ದಿತು. ಇದು ಅರಮನೆಯ ಆವರಣದಲ್ಲೇ ಮಹಡಿಯ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಿತು. ಚಿನ್ನದ ತಾಂತ್ರಿಕತೆಯಲ್ಲಿ ನಿಪುಣರಾಗಿದ್ದ ಎಂಟು ಜನಗಳನ್ನು ಇಲ್ಲಿ ಕಾರ್ಯನಿರ್ವಹಿಸಲು ನಿಯಮಿಸಲಾಗಿತ್ತು. ಚಿನ್ನದ ಮನೆ ಎಂದು ಈ ಕಟ್ಟಡ ಖ್ಯಾತವಾಗಿತ್ತು. ಹೇಮಣ್ಣನೆಂಬುವನು ಇಲ್ಲಿ ಟಂಕಾಧಿಕಾರಿಯ ಕಾರ್ಯ ನಿರ್ವಹಿಸುತ್ತಿದ್ದನು. ಇವನ ನೇತೃತ್ವದಲ್ಲಿ ರಾಜಕೋಶದಿಂದ ಚಿನ್ನ-ಬೆಳ್ಳಿಗಳನ್ನು ತೆಗೆದುಕೊಂಡು ಬಂದು, ಅವುಗಳಿಂದ ನಾಣ್ಯಗಳನ್ನು ಟಂಕಿಸುತ್ತಿದ್ದರು. ಚಿತ್ರದುರ್ಗದ ಪಾಳೆಯಗಾರರು ಟಂಕಿಸುತ್ತಿದ್ದ ಈ ನಾಣ್ಯಗಳ ಜೊತೆಗೆ ಪುಟ್ಟಣ್ಣನವರು ಚಿತ್ರದುರ್ಗದ ರಾಜ್ಯಕೋಶದಲ್ಲಿದ್ದ ವಿವಿಧ ನಾಣ್ಯಗಳ ಹೆಸರುಗಳನ್ನೂ ಕೊಟ್ಟಿದ್ದಾರೆ. ಅವು ಯಾವುವೆಂದರೆ ಅಶ್ರಫಿ, ದಬೋಲಿ, ಕಡಲಿ, ಚವುರಿ, ಗಬರು, ಪ್ರಿಯಕಾವೇರಿ, ಮೊಹರು, ಪುತ್ತಳಿ, ಶಿವರಾಯಿ ಹೊನ್ನು, ಬಾದಶಾಹಿ ಹೊನ್ನು, ಸಣ್ಣಗಿರಿ, ದೇವರಾಯಿ, ಅಚ್ಯುತರಾಯಿ, ರಾಮರಾಯಿ, ಜಟಾಮಹಿ, ಧಾರವಾಡಿ, ಪ್ರಳಯಗಲುರು, ಪಾಪನಾಯಕಿ ಹೊನ್ನು, ಆದವಾನಿ ಹೊನ್ನು, ತಾಡಪತ್ರಿ ಹೊನ್ನು, ಹಿಂದು ಹೊನ್ನು, ನಿಷಾನಿಖಲು, ಕಲ್ಲುಕುಂಟೆ, ದುರ್ಗಿ ಮತ್ತು ಇಕ್ಕೇರಿ. ಇವುಗಳಲ್ಲಿ ದೇವರಾಯಿ, ರಾಮರಾಯಿ ಮತ್ತು ಅಚ್ಚುತರಾಯಿಗಳು ವಿಜಯನಗರ ನಾಣ್ಯಗಳು; ಶಿವರಾಯಿ ಹೊನ್ನು ಶಿವಾಜಿಯ ಚಿನ್ನದ ನಾಣ್ಯ; ಆದವಾನಿ ಹೊನ್ನು ಮತ್ತು ತಾಡಪತ್ರಿ ಹೊನ್ನುಗಳು, ಕ್ರಮವಾಗಿ ಆದೋಣಿ ಮತ್ತು ತಾಡಪತ್ರಿಯಲ್ಲಿದ್ದ ಟಂಕಶಾಲೆಯಲ್ಲಿ ಟಂಕಿಸಲ್ಪಟ್ಟ ನಾಣ್ಯಗಳು; ದುರ್ಗಿ ಮತ್ತು ಇಕ್ಕೇರಿಗಳು ದುರ್ಗಿ ಪಗೋಡ ಮತ್ತು ಇಕ್ಕೇರಿ ವರಹವೆಂಬ ಚಿನ್ನದ ನಾಣ್ಯಗಳು; ಇತರ ನಾಣ್ಯಗಳನ್ನು ಗುರುತಿಸುವುದು ಸುಲಭವಲ್ಲ.

ಈಗ ಈ ಪಾಳೆಯಗಾರರ ದೊರಕಿರುವ ನಾಣ್ಯಗಳನ್ನು ಗಮನಿಸಬಹುದು. ಇವು ವಿಜಯನಗರ ನಾಣ್ಯಗಳ ಮೇಲೆ ಆಧಾರಿತವಾಗಿವೆ. ದುರ್ಗಿ ಪಗೋಡದ ತೂಕ 52 ಗ್ರೇನ್; ಅಗಲ 0.6".

ಮು : ಕುಳಿತಿರುವ ನಾಲ್ಕು ಭುಜಗಳ ದುರ್ಗಿ; ಕಿರೀಟ ಮತ್ತು ಇತರ ಆಭರಣಗಳು ಚೆನ್ನಾಗಿ ಕಾಣಬರುತ್ತವೆ.

ಹಿ : ಎರಡು ಸಾಲುಗಳ ನಾಗರೀ ಬರಹ

ನಾಯಕ

ರಾಯ

ಈ ಪಾಳೆಯಗಾರರ ತಾಮ್ರದ ನಾಣ್ಯವು ದೊರಕಿದೆ. ಇದರ ತೂಕ 55 ಗ್ರೇನ್; ಅಗಲ 0.7"; ದಪ್ಪ 0.1".

ಮು : ನಾಲ್ಕು ಭುಜಗಳ ದುರ್ಗಿ

ಹಿ : ಮೇಲ್ಭಾಗದಲ್ಲಿ ಸೂರ್ಯ-ಚಂದ್ರರು; ಕೆಳಭಾಗದಲ್ಲಿ ಮೂರು ಸಾಲುಗಳ ಕನ್ನಡ ಬರಹ

ಮದ

ಕರಿನಾ


(ಯಕ)

10. ಹಾಗಲವಾಡಿ ಪಾಳೆಯಗಾರರ ನಾಣ್ಯ

ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಹದಿನಾರು ಮತ್ತು ಹದಿನೇಳನೆಯ ಶತಮಾನಗಳಲ್ಲಿ ಹಾಗಲವಾಡಿ ಪಾಳೆಯಗಾರರು ಆಳಿದರು. ಇದರಲ್ಲಿ ಒಂದನೆಯ ಮತ್ತು ಎರಡನೆಯ ಮುಡಿಯಪ್ಪನಾಯಕ ಮತ್ತು ಮುದ್ದುವೀರಪ್ಪನಾಯಕ ಮುಖ್ಯರಾದವರು. ಇವರಲ್ಲಿ ಕೊನೆಯ ಮುದ್ದುವೀರಪ್ಪನಾಯಕನು ಬಹಳ ಶೂರನಾಗಿದ್ದನು. ಮುಘಲರು ಇವನ ಶೌರ್ಯಕ್ಕೆ ಮೆಚ್ಚಿ ಇವನಿಗೆ 'ಜಂಗ್ ಬಹದುರ್' ಎನ್ನುವ ಬಿರುದನ್ನು ಕೊಟ್ಟಿದ್ದರು. ಈ ಪಾಳೆಯಗಾರನಿಗೆ ಸಂಬಂಧಿಸಿದ ತಾಮ್ರದ ನಾಣ್ಯವು ಬೆಳಕಿಗೆ ಬಂದಿದೆ. ಇದರ ತೂಕ 50 ಗ್ರೇನ್; ಅಗಲ 0.7". ದಪ್ಪ 0.1".

ಮು : ವೃತ್ತದೊಳಗೆ ನಿಂತಿರುವ ಆನೆ

ಹಿ : ವೃತ್ತದೊಳಗೆ 'ಮು' ಎಂಬ ಕನ್ನಡ ಅಕ್ಷರ



'ಮು' ಎಂಬ ಅಕ್ಷರದ ಆಧಾರದ ಮೇಲೆ ಈ ನಾಣ್ಯವು ಮುದ್ದುವೀರಪ್ಪನಿಗೆ ಸೇರಿದ್ದೆಂದು ಭಾವಿಸಲಾಗಿದೆ. 'ಜಂಗ್ ಬಹದುರ್' ಎಂಬ ಬಿರುದನ್ನು ಪಡೆದಾಗ ಈ ನಾಣ್ಯವನ್ನು ಅಚ್ಚು ಹಾಕಿಸಿರಬಹುದು. ಇತರ ನಾಯಕರ ನಾಣ್ಯಗಳು ಬೆಳಕಿಗೆ ಬಂದಿಲ್ಲ.

11. ನಗಿರೆ ನಾಯಕರ ನಾಣ್ಯಗಳು

ನಗಿರೆಯ ನಾಯಕರು ಉತ್ತರ ಕನ್ನಡ ಜಿಲ್ಲೆಯ ಗೇರುಸೊಪ್ಪೆಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು, ವಿಜಯನಗರದ ಅರಸರ ಸಾಮಂತರಾಗಿ ರಾಜ್ಯವಾಳಿದರು. ಸಾಳುವ ಮಲ್ಲ ಅಥವಾ ಮಲ್ಲಿರಾಜ ಈ ಪಾಳೆಯಪಟ್ಟನ್ನು ಕ್ರಿ.ಶ. 1471ರಲ್ಲಿ ಆಳುತ್ತಿದ್ದನೆಂದು ತಿಳಿದುಬಂದಿದೆ. ಈ ಪಾಳೆಯಗಾರನಿಗೆ ಸೇರಿದ ಒಂದು ಬೆಳ್ಳಿಯ ನಾಣ್ಯವು ಭಟ್ಕಳದಲ್ಲಿ ದೊರೆತಿದೆ. ಇದರ ಅಗಲ 0.6".

ಮು : ಎಡಕ್ಕಿರುವ ಸಿಂಹ

ಹಿ : ಮೇಲ್ಭಾಗದಲ್ಲಿ, ಸೂರ್ಯ-ಚಂದ್ರ ಮತ್ತು ನಕ್ಷತ್ರ; ಕೆಳಗಡೆ ಎರಡು ಸಾಲುಗಳ ಕನ್ನಡ ಬರಹ

ಸಾಳುವ

ಮಲ್ಲ

ಈ ನಾಣ್ಯದ ಮೇಲೆ ಮಲ್ಲ ಎನ್ನುವ ಹೆಸರಿರುವುದರಿಂದ ಈ ನಾಣ್ಯವನ್ನು ಸಾಳುವ ಮಲ್ಲನಿಗೆ ಸೇರಿದ್ದೆಂದು ಸುಲಭವಾಗಿ ತೀರ್ಮಾನಿಸಬಹುದು. ಇವರ ಇನ್ನೊಂದು ನಮೂನೆಯ ನಾಣ್ಯದಲ್ಲಿ ಮುಮ್ಮುಖದಲ್ಲಿ ಸಿಂಹಕ್ಕೆ ಬದಲಾಗಿ ಗಂಡಭೇರುಂಡ ಚಿತ್ರವಿದೆ (ಗಣೇಶ್-ಗಿರಿಜಾಪತಿ).

12. ಸ್ವಾದಿ ನಾಯಕರ ನಾಣ್ಯ

ಸ್ವಾದಿ ಮನೆತನಕ್ಕೆ ಸೇರಿದ ನಾಯಕರು ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು ಮೂರು ಶತಮಾನಗಳ ಕಾಲ ರಾಜ್ಯವಾಳಿದರು. ಈ ವಂಶದಲ್ಲಿ ಆಳಿದ ನಾಲ್ಕನೆಯ ರಾಜ ಮಧುಲಿಂಗನಾಯಕನಿಗೆ ಸೇರಿದ ಒಂದು ತಾಮ್ರದ ನಾಣ್ಯವು ಬೆಳಕಿಗೆ ಬಂದಿದೆ. ಇದರ ಅಗಲ 0.8"; ದಪ್ಪ 0.2".

ಮು : ವೃತ್ತದೊಳಗೆ ಕುಳಿತಿರುವ ನಂದಿ; ಮೇಲೆ ಸೂರ್ಯ-ಚಂದ್ರರು

ಹಿ : ಗೆರೆಗಳಿರುವ ಮೂರು ಸಾಲುಗಳ ಕನ್ನಡ ಬರಹ

ಶ್ರೀ

ಮಧುಲಿಂಗ

ನಾಯಕ



ಈ ನಾಣ್ಯವು ಬನವಾಸಿಯಲ್ಲಿ ದೊರಕಿದೆ. ಬನವಾಸಿಯಲ್ಲಿ ಸ್ವಾದಿ ಮನೆತನದ ಅರಸರ ಟಂಕಶಾಲೆಯಿದ್ದಿತೆಂದು ಈಗಲೂ ಪ್ರತೀತಿಯಿದೆ. ಬನವಾಸಿಯ ಮಧುಕೇಶ್ವರ ದೇವಾಲಯದ ಸಮೀಪದಲ್ಲಿ ಟಂಕಶಾಲೆಯ ಜಾಗ ಎಂದು ಈಗಲೂ ಜನ ಗುರುತಿಸುತ್ತಾರೆ. ಆದುದರಿಂದ ಈ ನಾಣ್ಯ ಬನವಾಸಿಯ ಟಂಕಶಾಲೆಯಲ್ಲಿ ಅಚ್ಚಾಗಿದ್ದಿರಬಹುದು. ಬಹುಶಃ ಈ ಸ್ಥಳದಲ್ಲಿ ಉತ್ಖನನ ನಡೆದರೆ ಹೆಚ್ಚಿನ ಮಾಹಿತಿಗಳು ಹೊರಬೀಳಬಹುದು.

13. ಕೋಡಿಕೊಂಡ ಪಾಳೆಯಗಾರರ ನಾಣ್ಯ

ಬಳ್ಳಾರಿ ಜಿಲ್ಲೆಯ ಕೋಡಿಕೊಂಡ ಎಂಬಲ್ಲಿ ಪಾಳೆಯಗಾರರ ಒಂದು ವಂಶವು ರಾಜ್ಯವನ್ನಾಳುತ್ತಿದ್ದಿತು. ಇವರ ಚಿನ್ನದ ನಾಣ್ಯಗಳ ಮೇಲೆ ಮೂರು ಹೆಡೆಗಳ ಸರ್ಪವಿದ್ದುದರಿಂದ, ಈ ನಾಣ್ಯಗಳು ಸುಬ್ಬರಾಯ ಪಣ ಎನ್ನುವ ಹೆಸರಿನಿಂದ ಪ್ರಸಿದ್ಧಿ ಹೊಂದಿದ್ದವು. ಇವರ ವಾಣ್ಯಗಳು ಈ ರೀತಿ ಇವೆ.

ಮು : ಮೂರು ಹೆಡೆಗಳ ಸರ್ಪ

ಹಿ : ಚುಕ್ಕೆಗಳ ವಿನ್ಯಾಸದ ವೃತ್ತದಲ್ಲಿ 'ಶ್ರೀ' ಎಂಬ ನಾಗರೀ ಅಕ್ಷರ

ಸ್ಥಳೀಯವಾಗಿ ಈ ನಾಣ್ಯಗಳು ಅಲ್ಲಿ ದೊರೆಯುವುದರಿಂದ ಮತ್ತು ಅಲ್ಲಿ ಪ್ರಖ್ಯಾತವಾಗಿರುವುದರಿಂದ ಈ ನಾಣ್ಯಗಳು ಇವರಿಗೆ ಸೇರಿದ್ದೆಂದು ಭಾವಿಸಲಾಗಿದೆ.

14. ಚನ್ನಪಟ್ಟಣದ ಪಾಳೆಯಗಾರರ ನಾಣ್ಯಗಳು

ಚನ್ನಪಟ್ಟಣದ ಪಾಳೆಯಗಾರರ ವಂಶದಲ್ಲಿ ಜಗದೇವರಾಯ ಎಂಬ ದೊರೆಯಿದ್ದನು. ಇವನಿಗೆ ಅಂಕುಶರಾಯ ಎನ್ನುವ ಸಹೋದರನಿದ್ದನು. ಇವನು ರಾಜ್ಯದ ಮುಖ್ಯಮಂತ್ರಿಯೂ ಆಗಿದ್ದನು. ಈ ಅಂಕುಶರಾಯನು ವೀರನಾಗಿದ್ದು, ನಾಗಮಂಗಲದಲ್ಲಿ ನಡೆದ ಯುದ್ಧದಲ್ಲಿ ಮೈಸೂರು ದೊರೆ ಬೆಟ್ಟದ ಅರಸನನ್ನು ಸೋಲಿಸಿದನು. ಇಂತಹ ಅಮೋಘವಾದ ಜಯವನ್ನು ಪಡೆದ ಸುಸಂದರ್ಭದಲ್ಲಿ ಅಂಕುಶರಾಯನು ನಾಣ್ಯಗಳನ್ನು ಟಂಕಿಸಿ, ತನ್ನ ವಿಜಯದ ಘನತೆಯನ್ನು ಮೆರೆದನು. ಆದರೆ ಈ ಸಂತೋಷ ಹೆಚ್ಚಿನ

ಕಾಲ ಉಳಿಯಲಿಲ್ಲ. ಮೈಸೂರು ದೊರೆ ಚಾಮರಾಜನು ಜಗದೇವರಾಯನ ಮೇಲೆ ಒಂದು ದೊಡ್ಡ ಸೈನ್ಯವನ್ನು ಕಳುಹಿಸಿದನು. ವೀರಾವೇಶದಿಂದ ಹೋರಾಡಿದ ಅಂಕುಶರಾಯನು ಈ ಯುದ್ಧದಲ್ಲಿ ಮರಣ ಹೊಂದಿದನು. ಇದು ಅಂಕುಶರಾಯನ ವೀರತ್ವಕ್ಕೆ ಹಿನ್ನೆಲೆ. ಈ ಹಿನ್ನೆಲೆಯಲ್ಲಿ ಅಂಕುಶರಾಯನ ನಾಣ್ಯವನ್ನು ಗಮನಿಸಬಹುದು. ಇದು ತಾಮ್ರದ ನಾಣ್ಯ; ಅಗಲ 0.6"; ದಪ್ಪ 0.15".

ಮು : ಬಲಕ್ಕಿರುವ ಎರಡು ಅಂಕುಶಗಳು; ಸೂರ್ಯ-ಚಂದ್ರರು, ಪಕ್ಕದಲ್ಲಿ ಎರಡು ರಾಜದಂಡಗಳು

ಹಿ : ಗೆರೆಗಳ ನಡುವೆ ಇರುವ ಎರಡು ಸಾಲುಗಳ ಕನ್ನಡ ಬರಹ

ಅಂಕುಶ

ರಾಯರು (ಲು)



ಈ ಹಿಮ್ಮುಖದಲ್ಲಿರುವ ಬರಹ ಹದಿನೆಂಟನೆಯ ಶತಮಾನದ ಲಿಪಿಯಲ್ಲಿರುವುದರಿಂದ; ಇದು ಈ ಪಾಳೆಯಗಾರನಿಗೆ ಸೇರಿದ್ದೆಂದು ತಿಳಿದುಬರುತ್ತದೆ. ಆದುದರಿಂದ ಈ ನಾಣ್ಯ ವಿಜಯನಗರ ಕಾಲದ ಯಾವ ರಾಜನಿಗೂ ಸೇರುವುದಿಲ್ಲವೆಂಬುದೂ ಖಚಿತ.

ಇದೇ ಪಾಳೆಯಪಟ್ಟಿಗೆ ಸೇರಿದ ಜಗದೇವರಾಯನ ನಾಣ್ಯಗಳೂ ಇತ್ತೀಚೆಗೆ ದೊರಕಿವೆ (ಗಣೇಶ್ - ಗಿರಿಜಾಪತಿ). ಇವು ತಾಮ್ರದ ನಾಣ್ಯಗಳು; ತೂಕ 40 ಗ್ರೇನ್, ಅಳತೆ 0.7".

ಮು : ಗಂಡಭೇರುಂಡ

ಹಿ : ಚೌಕಾಕಾರದ ವಿನ್ಯಾಸದಲ್ಲಿ ಎರಡು ಸಾಲುಗಳ ಕನ್ನಡ ಬರವಣಿಗೆ

ಜಗ / ದೇವ ಅಥವಾ ಜಗದೇ / ವರಾಯ

ಈ ಕನ್ನಡ ಲಿಪಿಯ ಲಕ್ಷಣಗಳು ಇತ್ತೀಚಿನ ಕಾಲಕ್ಕೆ ಸೇರುವುದರಿಂದ, ಈ ನಾಣ್ಯವನ್ನು ಪ್ರಾಚೀನ ಕಾಲದ ಜಗದೇವರಾಯನಿಗೆ ಸಂಬಂಧಿಸಿದುದೆಂದು ಭಾವಿಸುವುದು ಸಾಧ್ಯವಿಲ್ಲ.

15. ಚಿಕ್ಕಬಳ್ಳಾಪುರದ ಪಾಳೆಯಗಾರರ ನಾಣ್ಯ

ಸ್ಥಳೀಯವಾಗಿ ದೊರಕುವ ಸಣ್ಣ ಚಿನ್ನದ ನಾಣ್ಯಗಳು ಚಿಕ್ಕಬಳ್ಳಾಪುರ ಮತ್ತು ದೊಡ್ಡಬಳ್ಳಾಪುರದ ಪಾಳೆಯಗಾರರಿಗೆ ಸೇರಿದ್ದೆಂದು ನಂಬಲಾಗಿದೆ. ಇವು ಪಣಂ ನಾಣ್ಯಗಳು. ಇವುಗಳ ತೂಕ 6 ಗ್ರೇನ್; ಅಗಲ 0.3".

ಮು : ನಾಲ್ಕು ಭುಜಗಳ ಕುಳಿತಿರುವ ಶಿವ

ಹಿ : ಉದ್ದ-ಅಡ್ಡ ಗೆರೆಗಳು


ಇವುಗಳಲ್ಲಿ ಯಾವ ರಾಜನ ಹೆಸರೂ ಇಲ್ಲದೇ ಇರುವುದರಿಂದ, ಸ್ಥಳೀಯ ಮಾಹಿತಿಗಳ ಪ್ರಕಾರ ಈ ನಾಣ್ಯಗಳು ಈ ಪಾಳೆಯಗಾರರಿಗೆ ಸೇರಿದ್ದೆಂದು ಭಾವಿಸಲಾಗಿದೆ.

16. ಸುರಪುರದ ನಾಯಕರ ನಾಣ್ಯಗಳು

ಗುಲ್ಬರ್ಗ ಜಿಲ್ಲೆಯ ಸುರಪುರದ ನಾಯಕರು ಕರ್ನಾಟಕ ಇತಿಹಾಸದಲ್ಲಿ ಶೌರ್ಯಕ್ಕೆ ಹೆಸರಾಗಿದ್ದಾರೆ. ಇವರು ಬೇಡರ ಗುಂಪಿಗೆ ಸೇರಿದ್ದು ಕಂಪಿಲಿಯ ರಾಮನಾಥನ ಆಶ್ರಯದಲ್ಲಿದ್ದರು. ವಿಜಯನಗರದ ಪತನಾನಂತರ ಇವರು ಬಿಜಾಪುರದ ಸುಲ್ತಾನರ ಆಶ್ರಯದಲ್ಲಿ ಆಳುತ್ತಿದ್ದರು. ಔರಂಗಜೇಬನು ವಾಗಣಗೇರಿಯನ್ನು ಮುತ್ತಿದಾಗ, ಇವರು ಸುರಪುರ ಕೋಟೆಯನ್ನು ಭದ್ರಪಡಿಸಿದರು. ಇದರಿಂದ ಪ್ರಭಾವಿತನಾದ ಔರಂಗಜೇಬನು ಇವರ ರಾಜ್ಯವನ್ನು ಇವರಿಗೇ ಹಿಂದಿರುಗಿಸಿದನು. ಕೃಷ್ಣನಾಯಕನ ಮಗನಾದ ವೆಂಕಟಪ್ಪನಾಯಕನು ಇನ್ನೂ ಕೇವಲ ಬಾಲಕನಾಗಿದ್ದುದರಿಂದ, ಮೆಡೋಸ್ ಟೇಲರ್‌ನನ್ನು ಏಜಂಟನನ್ನಾಗಿ ನಿಯಮಿಸಲಾಯಿತು. ದೊರೆಯು ಪ್ರಾಪ್ತ ವಯಸ್ಕನಾದ ಮೇಲೆ ಬ್ರಿಟಿಷರ ವಿರುದ್ಧದ ಚಟುವಟಿಕೆಗಳಲ್ಲಿ ತೊಡಗಿದನು. ಕ್ಯಾಪ್ಟನ್ ವೈಡ್‌ಹ್ಯಾಂನ ನೇತೃತ್ವದಲ್ಲಿ ನಡೆದ ಯುದ್ಧದಲ್ಲಿ ವೆಂಕಟಪ್ಪನಾಯಕನು ಸೋತುಹೋಗಿ ಸೆರೆಸಿಕ್ಕಿದನು. ಜೈಲಿಗೆ ಹೋಗುವ ಮಾರ್ಗಮಧ್ಯದಲ್ಲಿ ರಿವಾಲ್ವರ್‌ನಿಂದ ಆತ್ಮಹತ್ಯೆ ಮಾಡಿಕೊಂಡನು. ಸುರಪುರವನ್ನು ನಿಜಾಮನ ರಾಜ್ಯಕ್ಕೆ ಸೇರಿಸಲಾಯಿತು.

ವೆಂಕಟಪ್ಪನಾಯಕನು ಟಂಕಿಸಿದ್ದ ತಾಮ್ರದ ನಾಣ್ಯಗಳು ದೊರಕಿವೆ. ಸುರಪುರದಲ್ಲಿ ಒಂದು ಟಂಕಶಾಲೆಯಿದ್ದಿತು. ಇವನ ನಾಣ್ಯಗಳ ಮೇಲೆ ಬಹಿರೀ ಎಂಬ ನಾಗರೀ ಬರಹ ಹಾಗೂ ಹಿಮ್ಮುಖದಲ್ಲಿ ವೈಷ್ಣವ ಚಿಹ್ನೆಗಳಿರುತ್ತವೆ. ಈ ನಾಣ್ಯಗಳು ವನಪರ್ತಿಯ ರಾಜರಿಗೆ ಸೇರಿದ್ದೆಂದು ಕೆಲವರು ಭಾವಿಸಿದ್ದರೆ, ಇತ್ತೀಚಿನ ಸಂಶೋಧನೆಗಳಿಂದ ಇವು ಸುರಪುರದ

ವೆಂಕಟಪ್ಪನಾಯಕನಿಗೆ ಸೇರಿದ್ದೆಂದು ತಿಳಿದುಬಂದಿದೆ. ಈ ತಾಮ್ರದ ನಾಣ್ಯಗಳ ತೂಕ 157 ಗ್ರೇನ್; ಅಳತೆ 0.8".



ಮು : ಎರಡು ಸಮಾನಾಂತರ ವೃತ್ತದೊಳಗೆ ಮೇಲ್ಭಾಗದಲ್ಲಿ ಚುಕ್ಕೆಗಳು; ಮಧ್ಯದಲ್ಲಿ ಬಹಿರೀ ಎಂಬ ನಾಗರೀ ಬರಹ; ಅದರ ಕೆಳಗೆ ಸಂಖ್ಯೆ 1262

ಹಿ : ಎರಡು ಸಮಾನಾಂತರ ವೃತ್ತದೊಳಗೆ ಮೇಲ್ಭಾಗದಲ್ಲಿ ಮೂರು ನಾಮದ ಚಿಹ್ನೆ; ಬಲಗಡೆ ಶಂಖ; ಎಡಗಡೆ ಚಕ್ರ

ಮುಮ್ಮುಖದಲ್ಲಿರುವ ಸಂಖ್ಯೆಯು ಹಿಜಿರಾ ಶಕೆಯನ್ನು ಸೂಚಿಸುತ್ತದೆ. ಇದು ವೆಂಕಟಪ್ಪನಾಯಕನ ಆಳ್ವಿಕೆಯ ಸಮಯಕ್ಕೆ ಸರಿಹೊಂದುತ್ತದೆ.

ಎರಡನೆಯ ನಮೂನೆಯ ನಾಣ್ಯದಲ್ಲಿ ಹಿಜಿರಾ ಸಂಖ್ಯೆ ಕಾಣಬರುವುದಿಲ್ಲ; ಮಿಕ್ಕೆಲ್ಲ ಚಿಹ್ನೆಗಳೂ ಕಾಣಬರುತ್ತವೆ. ಮೂರನೆಯ ನಮೂನೆಯ ನಾಣ್ಯದಲ್ಲಿ ಬಹಿರೀ ಎಂಬ ನಾಗರೀ ಬರಹವಾಗಲೀ ಅಥವಾ ಸಂಖ್ಯೆಯಾಗಲೀ ಕಾಣಬರುವುದಿಲ್ಲ. ಹಿಮ್ಮುಖದ ವೈಷ್ಣವ ಚಿಹ್ನೆಗಳು ಮಾತ್ರ ಹಾಗೆಯೇ ಕಾಣಬರುತ್ತವೆ. ಆದುದರಿಂದ ಈ ಎರಡೂ ನಮೂನೆಯ ನಾಣ್ಯಗಳು ಸುರಪುರದ ನಾಯಕರಿಗೆ ಸೇರಿದ್ದೆಂದು ಭಾವಿಸಲಾಗಿದೆ.

17. ಹರತಿ ನಾಯಕರ ನಾಣ್ಯಗಳು

ಇತ್ತೀಚಿನವರೆಗೆ ಹರತಿಕೋಟೆಯಲ್ಲಿ ಆಳಿದ ನಾಯಕರ ಅಥವಾ ಪಾಳೆಯಗಾರರ ನಾಣ್ಯಗಳು ವಿದ್ವಾಂಸರಿಗೆ ತಿಳಿದೇ ಇರಲಿಲ್ಲ. ಗಣೇಶ್ ಮತ್ತು ಗಿರಿಜಾಪತಿಯವರ ಪರಿಶ್ರಮದಿಂದಾಗಿ ಈ ಪಾಳೆಯಗಾರರು ನಾಣ್ಯಗಳನ್ನು ಟಂಕಿಸಿದರು ಎನ್ನುವ ಮಹತ್ವದ ಸಂಗತಿ ತಿಳಿದುಬಂದಿದೆ. ಕ್ರಿ.ಶ. ಹದಿನೇಳನೆಯ ಶತಮಾನದಲ್ಲಿ ಹರತಿಕೋಟೆಯಲ್ಲಿ ಆಳಿದ ಈ ಪಾಳೆಯಗಾರರು ವಿಜಯನಗರದ ದೊರೆ ವೆಂಕಟಪತಿರಾಯನ ಕಾಲದಲ್ಲಿ ಪ್ರಾಮುಖ್ಯ ಪಡೆದರು. ಅರ್ಧಶತಮಾನದ ನಂತರ ಮರಾಠರಿಂದ ಸೋಲಿಸಲ್ಪಟ್ಟರು. ಅಲ್ಲಿಗೆ ಅವರ ಪತನವಾಯಿತು. ಈ ವಂಶದಲ್ಲಿ ಆಳಿದ ಕೊನೆಯ ಕೆಲವು ಪಾಳೆಯಗಾರರಾದ ಕೃಷ್ಣಪ್ಪನಾಯಕ, ರಂಗಪ್ಪರಾಜ, ಕಸ್ತೂರಿ ರಂಗಪ್ಪರಾಜ ಮತ್ತು ಮುಮ್ಮಡಿ ರಂಗಪ್ಪರಾಜ, ಸರಜ ಎಂಬ ಬಿರುದನ್ನು ಧರಿಸಿದ್ದರು. ಈ ಬಿರುದಿನ ಸರಿಯಾದ

ಅರ್ಥ ತಿಳಿಯದಿದ್ದರೂ, ಒಂದು ವಿಷಯವನ್ನು ಇಲ್ಲಿ ಹೇಳಬಹುದು. ಸರಜ ಎಂಬುದು ಸರ್ಜ ಎಂಬುದರ ಅಪಲಿಖಿತ. ಈ ಶಬ್ದದ ಅರ್ಥ ತೆರಿಗೆಯವನ್ನು ವಸೂಲಿ ಮಾಡುವ ಹಕ್ಕನ್ನು ಪಡೆದಿರುವ ಜಕಾತಿದಾರ ಎಂದು. ಆದುದರಿಂದ ಹರತಿಕೋಟೆಯ ಪಾಳೆಯಗಾರರಿಗೆ ಈ ಹಕ್ಕನ್ನು ವಿಜಯನಗರ ಅರಸರು ಕೊಟ್ಟಿದ್ದರೆಂದೂ, ಅದರಿಂದ ಅವರಲ್ಲಿ ಕೆಲವರು ಸರಜ ಎಂಬ ಬಿರುದನ್ನು ಧರಿಸಿದ್ದರೆಂದು ಭಾವಿಸಲು ಅವಕಾಶವಿದೆ. ಈ ಬಿರುದನ್ನು ಇವರು ತಮ್ಮ ನಾಣ್ಯಗಳಲ್ಲಿ ಅಳವಡಿಸಿದ್ದುದರಿಂದ, ಈ ನಾಣ್ಯಗಳನ್ನು ಗುರುತಿಸಲು ಸಾಧ್ಯವಾಗಿದೆ. ಸರಜ ಎನ್ನುವ ಬಿರುದನ್ನು ಹೊಂದಿರುವ ಇನ್ನೂ ಕೆಲವು ಪಾಳೆಯಗಾರರೂ ಇದ್ದರು. ಅವರಲ್ಲಿ ಮುಖ್ಯರಾದವರು ಸಂತೆಬೆನ್ನೂರಿನಲ್ಲಿ ಆಳಿದ ಮತ್ತು ತರೀಕೆರೆಯಲ್ಲಿ ಆಳಿದ ಪಾಳೆಯಗಾರರು.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಸಂಗೇನಹಳ್ಳಿ ಎಂಬ ಗ್ರಾಮದಲ್ಲಿ ಒಂದು ನಾಣ್ಯರಾಶಿಯು ಸಿಕ್ಕಿತು. ಅದರಲ್ಲಿ 115 ಚಿನ್ನದ ನಾಣ್ಯಗಳು ದೊರಕಿದವು. ಅವುಗಳ ತೂಕ 5 ಗ್ರೇನ್; ಅಗಲ 0.3".

ಮು : ಮುಂದಿನ ಕಾಲುಗಳನ್ನು ಮೇಲೆತ್ತಿರುವ ಬಲಕ್ಕಿರುವ ಸಿಂಹ

ಹಿ : ಎರಡು ಸಾಲುಗಳ ನಾಗರೀ ಬರಹ

ಶ್ರೀ ಸ

ರಜ

ಇದೇ ನಮೂನೆಯ ಇನ್ನೊಂದು ನಾಣ್ಯದಲ್ಲಿ, ಹಿಮ್ಮುಖದ ಬರಹದ ವಿನ್ಯಾಸದಲ್ಲಿ ಸ್ವಲ್ಪ ಬದಲಾವಣೆಯಿದೆ. ಪ್ರತಿಯೊಂದು ಅಕ್ಷರವೂ ಒಂದು ಚೌಕಾಕೃತಿಯಲ್ಲಿದೆ. ಮಿಕ್ಕೆಲ್ಲ ವಿಷಯಗಳಲ್ಲಿ ಇದು ಮೇಲಿನ ನಾಣ್ಯವನ್ನೇ ಹೋಲುತ್ತದೆ. ಈ ನಾಣ್ಯಗಳ ತೂಕ, ವರಹದ ಹತ್ತನೆಯ ಒಂದು ಭಾಗವಾದುದರಿಂದ, ಇವು ಹಣ ಮೌಲ್ಯದ ನಾಣ್ಯಗಳೆಂದು ನಿರ್ಧರಿಸಬಹುದು. ಈ ನಾಣ್ಯಗಳು ಹರತಿಕೋಟೆಯ ಸಮೀಪದಲ್ಲಿ, ಅಂದರೆ ಅವರ ರಾಜ್ಯದಲ್ಲಿ ದೊರಕಿರುವುದರಿಂದ, ಇವು ಹರತಿಕೋಟೆಯ ಪಾಳೆಯಗಾರರಿಗೆ ಸೇರಿದ್ದೆಂದು ಭಾವಿಸಬೇಕು.

ಅಧ್ಯಾಯ 7

ಸುಲ್ತಾನರ ನಾಣ್ಯಗಳು

ಮಧ್ಯಕಾಲೀನ ಕರ್ನಾಟಕದಲ್ಲಿ ಒಂದು ಕಡೆ ವಿಜಯನಗರದ ಅರಸರು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡು ಇಡೀ ದಕ್ಷಿಣ ಭಾರತದ ಅಧಿಪತಿಗಳಾಗಿ ವಿಜೃಂಭಿಸಿದರೆ, ಅವರಿಗೆ ಸಮಕಾಲೀನರೇ ಆದ ಕೆಲವು ಮುಸ್ಲಿಂ ಸುಲ್ತಾನರು ದಖನ್ನಿನ ವಿವಿಧ ಭಾಗಗಳಲ್ಲಿ ರಾಜ್ಯವಾಳುತ್ತಿದ್ದರು. ಇವರಲ್ಲಿ ಮುಖ್ಯರಾದವರು ಬಹಮನಿ ಸುಲ್ತಾನರು, ಆದಿಲ್ ಶಾಹಿ ಸುಲ್ತಾನರು ಮತ್ತು ಬರೀದ್‌ಶಾಹಿ ಸುಲ್ತಾನರು. ಇತ್ತ ಕಡೆ ಕೆಲವು ಭಾಗಗಳಲ್ಲಿ ಮುಘಲರು ತಮ್ಮ ಆಧಿಪತ್ಯವನ್ನು ಸ್ಥಾಪಿಸಿಕೊಂಡಿದ್ದರು. ಇದಲ್ಲದೆ ಕೆಲವು ಸಣ್ಣ ಪುಟ್ಟ ಸಾಮಂತರೂ ಇದ್ದರು. ಈ ಎಲ್ಲ ದೊರೆಗಳ ನಾಣ್ಯಗಳು ದೊರಕಿದ್ದು ಕರ್ನಾಟಕ ನಾಣ್ಯ ಇತಿಹಾಸದಲ್ಲಿ ಮುಖ್ಯವೆನಿಸಿವೆ. ಈಗ ಈ ನಾಣ್ಯಗಳನ್ನು ವಿವರವಾಗಿ ಗಮನಿಸಬಹುದು.

1. ಬಹಮನಿ ಸುಲ್ತಾನರ ನಾಣ್ಯಗಳು

ಬಹಮನಿ ಸುಲ್ತಾನರು ಮಧ್ಯಕಾಲೀನ ಕರ್ನಾಟಕದಲ್ಲಿ ಪ್ರಮುಖ ಪಾತ್ರ ವಹಿಸಿದರು. ಕ್ರಿ.ಶ. 1347 ರಿಂದ 1527ರ ವರೆಗೆ ಗುಲ್ಬರ್ಗವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಈ ಸುಲ್ತಾನರು ಆಳಿದರು. ಇವರ ಇತಿಹಾಸವನ್ನು ತಿಳಿಯಲು ಎಚ್.ಕೆ. ಶೆರ್‌ವಾನಿಯವರು ಈ ಸುಲ್ತಾನರ ನಾಣ್ಯಗಳನ್ನು ವಿಶೇಷವಾಗಿ ಬಳಸಿದ್ದಾರೆ. ಇತರ ವಿದ್ವಾಂಸರಾದ ಬ್ರೌನ್, ವಿಟ್ವೆಲ್, ಅಬ್ದುಲ್ ವಲಿ ಖಾನ್, ಸಿದ್ದಿಕಿ, ಸಿಂಘಲ್ ಮುಂತಾದವರು ಇವರ ನಾಣ್ಯಗಳನ್ನು ಪತ್ತೆ ಮಾಡಿ, ಇವರ ನಾಣ್ಯಗಳ ಮೇಲೆ ಹೊಸ ಬೆಳಕನ್ನು ಬೀರಿದ್ದಾರೆ. ಕರ್ನಾಟಕ ರಾಜ್ಯ ಸ್ಥಾಪನೆಯಾಗುವುದಕ್ಕೆ ಮುಂಚೆ ಗುಲ್ಬರ್ಗ ಪ್ರದೇಶವು ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದಿತು. ಆದುದರಿಂದ ಈ ವಂಶದ ನಾಣ್ಯಗಳು ವಿಶೇಷವಾಗಿ ಆಂಧ್ರಪ್ರದೇಶದ ಪುರಾತತ್ವ ವಸ್ತು ಸಂಗ್ರಹಾಲಯಗಳಲ್ಲಿ ಉಳಿದುಬಂದಿವೆ. ಅಬ್ದುಲ್ ವಲಿ ಖಾನರು ಈ ವಸ್ತು ಸಂಗ್ರಹಾಲಯದಲ್ಲಿರುವ ಬಹಮನಿ ನಾಣ್ಯಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಉಪಯುಕ್ತವಾದ ನಾಣ್ಯಯಾದಿಯನ್ನು ತಯಾರಿಸಿದ್ದಾರೆ. ಇಂದಿಗೂ ಇದು ಇವರ ನಾಣ್ಯದ ವಿಷಯದಲ್ಲಿ ಉತ್ತಮ ಮಾಹಿತಿಯನ್ನು ನೀಡುತ್ತದೆ.

ಬಹಮನಿ ಸುಲ್ತಾನರ ನಾಣ್ಯಗಳಿಗೆ, ದೆಹಲಿ ಸುಲ್ತಾನರ ನಾಣ್ಯಗಳೇ ಮಾದರಿಗಳು. ಅವುಗಳನ್ನೇ ಅನುಕರಿಸಿ ಬಹಮನಿ ದೊರೆಗಳು ಮೊದಮೊದಲು ನಾಣ್ಯಗಳನ್ನು ಟಂಕಿಸಲು ಆರಂಭಿಸಿದರು. ಹೊರನೋಟ, ಆಕಾರ, ಬರಹ, ತೂಕ, ಮೊದಲಾದ ಎಲ್ಲ ವಿಷಯಗಳಲ್ಲಿಯೂ, ಈ ನಾಣ್ಯಗಳು ಖಿಲ್ಜಿ ಮತ್ತು ತುಘಲಕ್ ವಂಶದ ಸುಲ್ತಾನರ ನಾಣ್ಯಗಳನ್ನು ಹೋಲುತ್ತವೆ. ಬಹಮನಿ ಸುಲ್ತಾನರು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ತಮ್ಮ ನಾಣ್ಯಗಳನ್ನು ಟಂಕಿಸಿದರು. ದೆಹಲಿ ಸುಲ್ತಾನರ ನಾಣ್ಯಗಳಲ್ಲಿ ಎರಡು ವಿಧವಾದ ತೂಕಗಳನ್ನು ಕಾಣುತ್ತೇವೆ. ಒಂದನೆಯದು ಟಂಕ. ಇದರ ತೂಕ 170 ಗ್ರೇನ್. ಎರಡನೆಯದು ಮುಹಮದ್ ತುಘಲಕನ ದಿನಾರ. ಇದರ ತೂಕ 200 ಗ್ರೇನ್. ಬಹಮನಿ ಸುಲ್ತಾನರು ಈ ಎರಡೂ ತೂಕಗಳನ್ನು ತಮ್ಮ ನಾಣ್ಯಗಳಲ್ಲಿ ಅಳವಡಿಸಿಕೊಂಡರು. ಇವರ ಬೆಳ್ಳಿಯ ನಾಣ್ಯಗಳ ತೂಕ 70 ಗ್ರೇನ್. ಇತರ ನಾಣ್ಯಗಳ ತೂಕ 110, 55, 27 ಮತ್ತು 15 ಗ್ರೇನ್‌ಗಳು. ಇವರ ತಾಮ್ರದ ನಾಣ್ಯಗಳಲ್ಲಿಯೂ ವೈವಿಧ್ಯ ಕಾಣಬರುತ್ತದೆ. ಅತ್ಯಂತ ಹೆಚ್ಚಿನ ತೂಕದ ತಾಮ್ರದ ನಾಣ್ಯ 270 ಗ್ರೇನ್ ಇದ್ದರೆ, ತೀರ ಸಣ್ಣ ನಾಣ್ಯ 25 ಗ್ರೇನ್ ಇರುತ್ತದೆ. ಇವುಗಳ ಮಧ್ಯದಲ್ಲಿ 250, 170, 120, 90 80, 50, 40 ಗ್ರೇನ್ ತೂಕದ ತಾಮ್ರದ ನಾಣ್ಯಗಳು ದೊರಕಿವೆ. ಬಹಮನಿ ದೊರೆಗಳ ನಾಣ್ಯಗಳು ಸಾಮಾನ್ಯವಾಗಿ ವೃತ್ತಾಕಾರದಲ್ಲಿವೆ. ಆದರೆ ಕೆಲವು ನಾಣ್ಯಗಳು ಚೌಕಾಕಾರದಲ್ಲಿವೆ. ಇಂತಹ ನಾಣ್ಯಗಳು ಬಲು ಕಡಿಮೆ. ಇವರ ನಾಣ್ಯಗಳ ಮೇಲೆ ಕುರಾನಿನ ವಾಕ್ಯಗಳು, ಸುಲ್ತಾನರ ಬಿರುದುಗಳು, ನಾಣ್ಯವನ್ನು ಟಂಕಿಸಿದ ರಾಜನ ಹೆಸರು, ಕೆಲವು ಸಂದರ್ಭಗಳಲ್ಲಿ ಅವನ ತಂದೆಯ ಹೆಸರು, ಟಂಕಶಾಲೆಯ ಹೆಸರು ಮತ್ತು ಕಾಲಮಾನ ಕಂಡುಬರುತ್ತವೆ. ನಮಗೆ ತಿಳಿದಿರುವಂತೆ ಇವರ ನಾಣ್ಯಗಳು ಅಹ್‌ಸನಾಬಾದ್ (ಗುಲ್ಬರ್ಗ), ಮುಹಮ್ಮದಾಬಾದ್ (ಬೀದರ್) ಮತ್ತು ಫತಾಬಾದ್ (ದೌಲತಾಬಾದ್)ಗಳಲ್ಲಿದ್ದ ಟಂಕಶಾಲೆಗಳಲ್ಲಿ ಅಚ್ಚಾಗುತ್ತಿದ್ದವು.

ಅಲಾ ಉದೀನ್ ಬಹಮನ್ ಶಾಹ್ (ಕ್ರಿ.ಶ. 1347-58)

ಈ ದೊರೆಯ ಚಿನ್ನದ ನಾಣ್ಯಗಳು ದೊರೆತಿಲ್ಲ. ಕೇವಲ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಮಾತ್ರ ದೊರಕಿವೆ. ಬೆಳ್ಳಿಯ ನಾಣ್ಯಗಳಲ್ಲಿ 170, 25 ಮತ್ತು 15 ಗ್ರೇನ್ ತೂಕದವು ದೊರಕಿವೆ.

ಮು : ಚೌಕನೆಯ ವಿನ್ಯಾಸದಲ್ಲಿ ಮೂರು ಸಾಲುಗಳ ಪರ್ಷಿಯನ್ ಬರಹ

ಸಿಕಂದರ್ ಉತ್ ತನಿ

ಯಮಿನುಲ್ ಖಿಲಾಫತ್

ನಸಿರ್ ಅಮ್ರಿಲ್ ಮುಮಿನಿನ್ 758


ಹಿ : ವೃತ್ತಾಕಾರದೊಳಗೆ ನಾಲ್ಕು ಸಾಲುಗಳ ಬರಹ

ಅಸ್ ಸುಲ್ತಾನಿಲ್ ಅಜಂ

ಅಲ್ ಉದ್ದುನಿಯ ವದ್ ದಿನ್

ಅಬುಲ್ ಮುಜಫರ್ ಬಹ್

ಮನ್ ಶಾಹ್ ಅಸ್ ಸುಲ್ತಾನ್



ಈ ಸುಲ್ತಾನನ ತಾಮ್ರದ ನಾಣ್ಯಗಳು 52 ಮತ್ತು 26 ಗ್ರೇನ್ ತೂಕಗಳಲ್ಲಿ ದೊರಕಿವೆ. ಇವುಗಳ ಮೇಲೆ ಟಂಕಶಾಲೆಯ ಹೆಸರು ಮತ್ತು ವರ್ಷ ಕಾಣಬರುವುದಿಲ್ಲ.

ಮು : ಎರಡು ಸಾಲುಗಳ ಪರ್ಷಿಯನ್ ಬರಹ

ಅಲ್ ಉದ್ ದುನ್ಯ

ವದ್ ದಿನ್

ಹಿ : ಎರಡು ಸಾಲುಗಳ ಬರಹ

ಬಹಮನ್ ಶಾಹ್

ಅಸ್ ಸುಲ್ತಾನ್



ಒಂದನೆಯ ಮುಹಮ್ಮದ್ ಶಾಹ್ (ಕ್ರಿ.ಶ. 1358-75)

ಈ ಸುಲ್ತಾನನ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ಚಿನ್ನದ ನಾಣ್ಯದ ತೂಕ 196 ಗ್ರೇನ್. ಇದು ಅಹ್‌ಸನಾಬಾದ್

ಟಂಕಶಾಲೆಯಲ್ಲಿ ಅಚ್ಚಾದ ನಾಣ್ಯ. ಇದರ ಮೇಲೆ ಕಾಲವೂ ನಮೂದಿತವಾಗಿದೆ. ಆದರೆ ಇವನ ಬಿರುದುಗಳು ಇದರಲ್ಲಿ ಕಾಣಬರುವುದಿಲ್ಲ.

ಮು : ಮೂರು ಸಾಲುಗಳ ಬರಹ

ಸುಲ್ತಾನಿಲ್ ಅಹ್ದ್-ಇ ವಜ್ ಜಮನ್

ಹಮಿಲು ಮಿಲ್ಲಿತಿ ರಸುಲ್ ತಿರ್

ರಹಮಾನ್

ಹಿ : ಮುಹಮ್ಮದ್ ಹಸನ್

ಬಹ್ಮನಿ

ಎರಡನೆಯ ನಮೂನೆಯ ಚಿನ್ನದ ನಾಣ್ಯದ ತೂಕ 170 ಗ್ರೇನ್; ಅಗಲ 0.8". ಇದರಲ್ಲಿ ಟಂಕಶಾಲೆಯ ಹೆಸರು ಕಾಣಬರುವುದಿಲ್ಲ.

ಮು : ಸುಲ್ತಾನಿಲ್ - ಅಹ್ದ್ - ಇ - ವಜ್

ಜಮನ್ ಅಬುಲ್ ಮುಜಫರ್

ಹಿ : ಮುಹಮ್ಮದ್ ಶಾಹ್ ಅಸ್

ಸುಲ್ತಾನ್ ಇಬ್ನಿಸ್ ಸುಲ್ತಾನ್

ಈ ಸುಲ್ತಾನನ ನಾಲ್ಕು ನಮೂನೆಯ ಬೆಳ್ಳಿಯ ನಾಣ್ಯಗಳು ದೊರಕಿವೆ. ಸಾಮಾನ್ಯವಾಗಿ ಅವುಗಳಲ್ಲಿ ಹಿಜಿರ 761 ರಿಂದ 777ರ ವರೆಗಿನ ವರ್ಷಗಳಿರುತ್ತವೆ. ಆದುದರಿಂದ ಇವನು ಹಿಜಿರ 777ರ ವರೆಗೆ ಜೀವಿಸಿದ್ದನೆಂದು ಗೊತ್ತಾಗುತ್ತದೆ. ಈ ಬೆಳ್ಳಿಯ ನಾಣ್ಯಗಳ ತೂಕ 170, 110, 24 ಮತ್ತು 16 ಗ್ರೇನ್‌ಗಳು. ಮೊದಲನೆಯ ನಮೂನೆಯ ನಾಣ್ಯದ ತೂಕ 170 ಗ್ರೇನ್, ಅಳತೆ 1.3".


ಮು : ಮೇಲಿನ ಚಿನ್ನದ ನಾಣ್ಯದಲ್ಲಿರುವಂತೆ

ಹಿ : ಚೌಕ ವಿನ್ಯಾಸದೊಳಗೆ

ಅಬುಲ್ ಮುಜಾಫರ್

ಮುಹಮ್ಮದ್ ಶಾಹ್ ಬಿನ್

ಬಹ್ಮನ್ ಶಾಹ್ ಅಸ್ ಸುಲ್ತಾನ್ 761



ಎರಡನೆಯ ನಮೂನೆಯ ಬೆಳ್ಳಿ ನಾಣ್ಯದ ತೂಕ 110 ಗ್ರೇನ್; ಅಗಲ 0.9". ಮುಮ್ಮುಖ ಮತ್ತು ಹಿಮ್ಮುಖಗಳಲ್ಲಿ ಎರಡನೆಯ ನಮೂನೆಯ ಚಿನ್ನದ ನಾಣ್ಯವನ್ನೇ ಹೋಲುತ್ತದೆ. ಮೂರು ಮತ್ತು ನಾಲ್ಕನೆಯ ನಮೂನೆಯ ಬೆಳ್ಳಿಯ ನಾಣ್ಯಗಳಲ್ಲಿ ತೂಕ 24 ಮತ್ತು 16 ಗ್ರೇನ್; ಅಳತೆ 0.55" ಮತ್ತು 0.45".

ಈ ಸುಲ್ತಾನನ ನಾಲ್ಕು ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಇವುಗಳ ತೂಕ 52, 40 ಮತ್ತು 26 ಗ್ರೇನ್‌ಗಳು. ಮೊದಲನೆಯ ನಮೂನೆಯ ತಾಮ್ರದ ನಾಣ್ಯದ ತೂಕ 52 ಗ್ರೇನ್; ಅಗಲ 0.52".

ಮು : ಅಲ್ ಮುವಯ್ಯಿದ್
ಬಿ ನಸ್ರಿಲ್ಲಾಹದ್

ಹಿ : ಅಬ್ದುಲ್ ಮುಜಾಫರ್
ಮುಹಮ್ಮದ್ ಶಾಹ್

ಎರಡನೆಯ ನಮೂನೆಯ ತಾಮ್ರದ ನಾಣ್ಯದಲ್ಲಿ ಮುಮ್ಮುಖದ ಬರಹ ಮೇಲಿನ ನಾಣ್ಯದಂತೆಯೇ ಇದೆ. ಹಿಮ್ಮುಖದಲ್ಲಿ ಇಬ್ನೆ ಬಹಮನ್ / ಶಾಹ್ ಅಸ್ ಸುಲ್ತಾನ್ ಎಂಬ ಬರಹವಿದೆ. ಮೂರನೆಯ ನಮೂನೆಯ ತಾಮ್ರದ ನಾಣ್ಯದ ಮುಮ್ಮುಖದಲ್ಲಿ ಮೇಲಿನ ನಾಣ್ಯದಲ್ಲಿರುವ ಬರಹವೇ ಕಾಣಬರುತ್ತದೆ. ಆದರೆ ಹಿಮ್ಮುಖದಲ್ಲಿ ಬಿನ್ ಅಲ್ ಸುಲ್ತಾನ್ / ಬಹ್ಮನ್ ಶಾಹ್ ಎಂಬ ಬರಹವಿದೆ.

ಈ ಸುಲ್ತಾನನ ನಾಲ್ಕನೆಯ ನಮೂನೆಯ ತಾಮ್ರದ ನಾಣ್ಯ ಸ್ವಲ್ಪ ಭಿನ್ನತೆಯನ್ನು ಪ್ರದರ್ಶಿಸುತ್ತದೆ. ಇತರ ತೂಕ 40 ಗ್ರೇನ್; ಅಳತೆ 0.5". ಇದರ ಹಿಮ್ಮುಖದಲ್ಲಿ ಅಬ್ದೆ ಇಲ್ಲಿಲ್ಲಾಹ್ ಎಂಬ ಬರಹವನ್ನು ಕಾಣಬಹುದು.

ಮುಜಾಹಿದ್ ಶಾಹ್ (ಕ್ರಿ.ಶ. 1375-78)

ಈ ದೊರೆಯ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಇವನ ಚಿನ್ನದ ನಾಣ್ಯದ ತೂಕ 192 ಗ್ರೇನ್.

ಮು : ಅಸ್ ಸುಲ್ತಾನಿಲ್ ಅಜಂ
ಜಿಲ್ಲಾಲಹಿ ಫಿಲ್ ಅಲಂ

ಹಿ : ಅಲ್ಲದ್ದುನಿಯ ವದಿನ್
ಮುಜಾಹಿದ್ ಶಾಹ್
ಅಸ್ ಸುಲ್ತಾನ್ 777

ಈ ಸುಲ್ತಾನನ ಬೆಳ್ಳಿಯ ನಾಣ್ಯದ ತೂಕ 170 ಗ್ರೇನ್; ಅಗಲ 1.05". ಇದು ಅಹ್‌ಸನಾಬಾದ್ ಟಂಕಶಾಲೆಯಲ್ಲಿ ಅಚ್ಚಾಯಿತು. ಇದೊಂದು ಕಲಾತ್ಮಕವಾದ ನಾಣ್ಯ.

ಮು : ಚೌಕ ವಿನ್ಯಾಸದಲ್ಲಿ ನಾಲ್ಕು ಸಾಲುಗಳ ಬರಹ
ಅಲ್ ಮುವಯ್ಯಿದ್ ಬಿ
ನಸ್ರಿಲ್ಲಾ ಯಮಿನುಲ್
ಖಿಲಾಫತ್ ನಸಿರು
ಅಮಿರಿಲ್ ಮುಮಿನಿನ್

ಹಿ : ಅಸ್ ಸುಲ್ತಾನಲ್ ಅಜಂ
ಅಲ್ಲಾವುದುನ್ಯ ವದ್ದಿನ್
ಅಬುಲ್ ಮುಘಾಜಿ ಮುಜಾಹಿದ್
ಶಾಹ್ ಅಸ್ ಸುಲ್ತಾನ್
(ಅಂಚಿನಲ್ಲಿ) ಅಹ್‌ಸನಾಬಾದ್ 779





ಇವನ ತಾಮ್ರದ ನಾಣ್ಯದ ತೂಕ 52 ಗ್ರೇನ್; ಅಳತೆ 0.5". ಇದರಲ್ಲಿ ವರ್ಷ, ಬಿರುದು, ಟಂಕಶಾಲೆಯ ಹೆಸರು ಕಾಣಬರುವುದಿಲ್ಲ.

ಮು : ಅಬುಲ್ ಮುಘಾಜಿ

ಹಿ : ಮುಜಾಹಿದ್ ಶಾಹ್

ಎರಡನೆಯ ಮುಹಮ್ಮದ್ ಶಾಹ್ (ಕ್ರಿ.ಶ. 1378-97)

ಇವನು ಶಾಂತಿಪ್ರಿಯ ದೊರೆಯಾಗಿದ್ದು, ಸಾಹಿತ್ಯ ಮತ್ತು ಕಲೆಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟನು. ಇವನ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಇವನ ಚಿನ್ನದ ನಾಣ್ಯದ ತೂಕ 167 ಗ್ರೇನ್; ಅಳತೆ 0.9".

ಮು : ಅಲ್ ಮುಕ್ತಫಿ ಬಿ ಅವಮಿರ್
ಆರ್ ರಹಮಾನ್
ಅಲ್ ಮುಸ್ತರ್ಷಿದ್
ಬಿಲಾಹಿಲ್ ಮನ್ನನ್

ಹಿ : ಅನ್ ನಸಿರ್ ಲೆ
ಅಲ್ವಿಲ್ ಯತುಲ್ ಅಹ್‌ಸನ್
ಮುಹಮ್ಮದ್ ಶಾಹ್ ಅಸ್ ಸುಲ್ತಾನ್ 797

ಇವನ ಬೆಳ್ಳಿಯು ನಾಣ್ಯಗಳು ಮೂರು ನಮೂನೆಗಳಲ್ಲಿ ದೊರಕಿವೆ. ಮೊದಲನೆಯದರ ತೂಕ 170 ಗ್ರೇನ್; ಅಳತೆ 1.02". ಇದು ಚಿನ್ನದ ನಾಣ್ಯದಲ್ಲಿರುವ ಬರಹವನ್ನೇ ಹೊಂದಿದೆ. ಎರಡನೆಯ ನಮೂನೆಯ ನಾಣ್ಯದ ತೂಕ ಮೇಲಿನ ನಾಣ್ಯದಂತೆ ಇದೆ. ಆದರೆ ಬರಹದಲ್ಲಿ ಭಿನ್ನತೆಯಿದೆ.

ಮು : ಅನ್ ನಸಿರ್ ಲಿಗಿನಿದ್
ದೇಯನ್ ಅಲ ಹಮಿ
ಲೆ ಅಹ್ಲಿಲ್ ಇಮಾನ್

ಹಿ : ಅಲ್ ವತೀಕ್ ಬತೈದಿರ್
ರಹಮಾನ್ ಅಬುಲ್ ಮುಜಾಫರ್
ಮುಹಮ್ಮದ್ ಶಾಹ್ ಅಸ್ ಸುಲ್ತಾನ್
(ಅಂಚಿನಲ್ಲಿ) ಅಹ್‌ಸನಾಬಾದ್ 781

ಮೂರನೆಯ ನಮೂನೆಯ ಬೆಳ್ಳಿಯ ನಾಣ್ಯದ ತೂಕ 55 ಗ್ರೇನ್; ಅಳತೆ 0.6".

ಮು : ಜುಲ್ ಅಮನಿ
ವಲ್ ಅಮನ್
ಅಬುಲ್ ಮುಜಾಫರ್

ಹಿ : ಮುಹಮ್ಮದ್ ಶಾಹ್

ಅಸ್ ಸುಲ್ತಾನ್

ಇವನ ತಾಮ್ರದ ನಾಣ್ಯದ ತೂಕ 76 ರಿಂದ 86 ಗ್ರೇನ್; ಅಳತೆ 0.7".

ಮು : ವೃತ್ತದೊಳಗೆ

ಅಬ್ದ್ ಮಬುದ್

ಹಿ : ಮುಹಮ್ಮದ್ ಮಹ್ಮೂದ್

ಘಿಯಾಸುದ್ದೀನ್ (ಕ್ರಿ.ಶ. 1397)

ಎರಡನೆಯ ಮುಹಮ್ಮದ್ ಶಾಹನ ನಂತರ ಇವನ ಮಕ್ಕಳಾದ ಘಿಯಾಸುದ್ದೀನ್ ಮತ್ತು ಷಂಷುದ್ದೀನ್ ರಾಜ್ಯವಾಳಿದರು. ಆದರೆ ಕೇವಲ ಎರಡು ತಿಂಗಳುಗಳಲ್ಲೇ ಘಿಯಾಸುದ್ದೀನನ ಕಣ್ಣುಗಳನ್ನು ಕೀಳಿಸಲಾಯಿತು. ಅವನು ತನ್ನ ಜೀವಿತ ಕಾಲವನ್ನು ಮೆಕ್ಕಾದಲ್ಲಿ ಕಳೆದನು. ಈ ಎರಡು ತಿಂಗಳು ಅವಧಿಯಲ್ಲಿ ಅಂದರೆ ಕ್ರಿ.ಶ. 1397ರಲ್ಲಿ ಇವನು ಬೆಳ್ಳಿಯ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚುಹಾಕಿಸಿದನು. ಇವನ ನಾಣ್ಯದ ವಿಶೇಷತೆಯೆಂದರೆ ಅವುಗಳ ಮೇಲೆ ಕಾಣಬರುವ ತಹಮತನ್ ಶಾಹ್ ಎಂಬ ಬಿರುದು. ಇವನ ಬೆಳ್ಳಿಯ ನಾಣ್ಯದಲ್ಲಿ ಇವನ ಬಿರುದುಗಳು ಮತ್ತು ಅಹ್‌ಸನಾಬಾದ್ 799 ಎಂಬುದು ಕಾಣಬರುತ್ತದೆ.

ಇವನ ತಾಮ್ರದ ನಾಣ್ಯದ ತೂಕ 80 ಗ್ರೇನ್; ಅಗಲ 0.65".

ಮು : ಅಲ್ ಮುವಯ್ಯದ್ ಬಿ

ನಸ್ರುಲ್ಲಾ

ಅಬುಲ್ ಮುಜಾಫರ್

ಹಿ : ವೃತ್ತದೊಳಗೆ

ತಹಮತನ್ ಶಾಹ್ ಬಿನ್

ಮುಹಮ್ಮದ್ ಶಾಹ್

ಇವನ ಇನ್ನೊಂದು ನಮೂನೆಯ ತಾಮ್ರದ ನಾಣ್ಯದಲ್ಲಿ ಬರವಣಿಗೆಯಲ್ಲಿ ಭಿನ್ನತೆಯಿದೆ. ಅದರ ಮೇಲೆ ಅಬುಲ್ ಮುಜಾಫರ್ ಸುಲ್ತಾನ್ ಘಿಯಾಸ್ ಉದ್ ದುನ್ಯ ವಮ್ರುದ್ದೀನ್ ತಹಮತನ್ ಶಾಹ್ ಎಂಬ ಬರಹವಿದೆ.

ಷಂಷುದ್ದೀನ್ ದಾವುದ್ ಶಾಹ್ (ಕ್ರಿ.ಶ. 1397)

ಅನಂತರ ಷಂಷುದ್ದೀನನು ಸುಲ್ತಾನನಾದನು. ಇವನು ಕೇವಲ ಐದು ತಿಂಗಳು ಮಾತ್ರ ರಾಜ್ಯವಾಳಿದನು. ಫಿರೋಜ್‌ಶಾಹ್ ಎಂಬುವನು ಇವನನ್ನು ಪದಚ್ಯುತಗೊಳಿಸಿದುದಲ್ಲದೆ, ಇವನ ಕಣ್ಣುಗಳನ್ನು ಕೀಳಿಸಿದನು. ಈ ಐದು ತಿಂಗಳು ರಾಜ್ಯವಾಳಿದ ಇವನ ತಾಮ್ರದ ನಾಣ್ಯಗಳು ದೊರಕಿವೆ. ಇವುಗಳ ತೂಕ 80 ಗ್ರೇನ್, ಅಗಲ 0.6".

ಮು : ಅಲ್ ಮುವಯ್ಯದ್ ಬಿ ನಸ್ರುಲ್ಲಾ
ಅಬುಲ್ ಮುಜಾಫರ್

ಹಿ : ವೃತ್ತದೊಳಗೆ
ದಾವುದ್ ಶಾಹ್

ಫಿರೋಜ್ ಶಾಹ್ (ಕ್ರಿ.ಶ. 1397-1422)

ದೀರ್ಘ ಕಾಲ ರಾಜ್ಯವಾಳಿದ ಫಿರೋಜ್ ಶಾಹ್ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಟಂಕಿಸಿದನು. ಇವನ ಚಿನ್ನದ ನಾಣ್ಯದ ತೂಕ 195 ಗ್ರೇನ್; ಅಗಲ 0.9". ಇದರ ಮೇಲೆ ಅಲ್ ವತಿಕ್ ಬಿ ತೈದರ್ ರಹ್ಮಾನ್ ಅಬುಲ್ ಮುಜಾಫರ್ ಫಿರೋಜ್ ಶಾಹ್ ಅಸ್ ಸುಲ್ತಾನ್ ಎಂಬ ಬರಹವಿದೆ. ಅಂಚಿನಲ್ಲಿ ಜುರಿಬ ಹಜದ್ ದಿನಾರ್ ದರುಲ್ ಮುಲ್ಕ್ ಅಹ್‌ಸನಾಬಾದ್ 800 ಎಂಬ ಬರಹವಿದೆ.

ಇವನ ಬೆಳ್ಳಿಯ ನಾಣ್ಯದ ತೂಕ 169 ಗ್ರೇನ್; ಅಗಲ 1.02".

ಮು : ಸುಲ್ತಾನ್ ಅಹ್‌ದಿ ವಜ್ ಜಮನ್
ಅಲ್ ವತಿಕ್ ಬಿತ್ತೈದಿರ್ ರಹ್ಮಾನ್
ಅಬುಲ್ ಮುಜಾಫರ್

ಹಿ : ತಜುದ್ ದುನ್ಯ ವದ್ ದಿನ್
ಫಿರೋಜ್ ಶಾಹ್ ಅಸ್ ಸುಲ್ತಾನ್
ಅಂಚಿನಲ್ಲಿ ಅಹ್‌ಸನಾಬಾದ್ (800 ರಿಂದ 824)





ಈ ದೊರೆಯ ಮೂರು ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಮೊದಲನೆಯದರ ತೂಕ 58 ಗ್ರೇನ್; ಅಗಲ 0.5".

ಮು : ಅಲ್ ಹಕೀಂ ಬಿ ಅಮ್ರಿಲ್ಲಾ

ಹಿ : ಫಿರೋಜ್ ಶಾಹ್

ಎರಡನೆಯ ನಮೂನೆಯ ತಾಮ್ರದ ನಾಣ್ಯದ ತೂಕ 80 ಗ್ರೇನ್; ಅಳತೆ 0.6".

ಮು : ರಾಜಿ ರಿದ್ವಾನ್

ಮುಹೆಯಮನಿ

ಹಿ : ಫಿರೋಜ್ ಶಾಹ್

ಬಹ್ಮನಿ

ಅಂಚಿನಲ್ಲಿ ಅಹ್‌ಸನಾಬಾದ್ ಮತ್ತು ವರ್ಷ





ಮೂರನೆಯ ನಮೂನೆಯ ತಾಮ್ರದ ನಾಣ್ಯದ ತೂಕ 25 ಗ್ರೇನ್; ಅಗಲ 0.4". ಇದರಲ್ಲಿ ತುಗ್ರ ರೀತಿಯ ಬರಹ ಕಾಣಬರುತ್ತದೆ.

ಮು : ಬರ್ಗುಜಿದ ಇ - ಇಲಾಹ್

ಹಿ : ಫಿರೋಜ್ ಶಾಹ್

ಒಂದನೆಯ ಅಹಮದ್ ಶಾಹ್ (ಕ್ರಿ.ಶ. 1422-36)

ಈ ಸುಲ್ತಾನನ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಬೆಳ್ಳಿ ನಾಣ್ಯದ ತೂಕ 170 ಗ್ರೇನ್; ಅಗಲ 1.2". ಈ ರೀತಿಯ ನಾಣ್ಯಗಳು ಅಹ್‌ಸನಾಬಾದ್ ಮತ್ತು ಮುಹಮ್ಮದಾಬಾದ್ ಟಂಕಶಾಲೆಗಳಲ್ಲಿ ಅಚ್ಚಾದವು.

ಮು : ಅಸ್ ಸುಲ್ತಾನಿಲ್ ಅದಿಲ್
ಅಲ್ ಬದಿಲ್ ಅನ್ ನಸಿರ್ ಲಿದಿನಿದ್

ಹಿ : ಷಿಹಾಬುದ್ದುನ್ಯ
ವದ್ದಿನ್ ಅಹಮದ್ ಶಾಹ್
ಅಸ್ ಸುಲ್ತಾನ್

ಇವನ ತಾಮ್ರದ ನಾಣ್ಯಗಳಲ್ಲಿ ಐದು ನಮೂನೆಗಳನ್ನು ಗುರುತಿಸಬಹುದು. ಮೊದಲನೆಯದರ ತೂಕ 250 ಗ್ರೇನ್; ಅಗಲ 0.9". ಇದರ ಮೇಲಿನ ವರ್ಷ 833 ರಿಂದ 838ರ ವರೆಗೆ.

ಮು : ಅಲ್ ಮುಸ್ ತಾತಿಕ್
ಬಿಲ್ಲ ಹಿಲ್ ಹನ್ನನಿಲ್
ಮನ್ನನಿಲ್ ಘನಿ

ಹಿ : ಸುಲ್ತಾನ್ ಅಹಮದ್ ಶಾಹ್
ಬಿನ್ ಅಹಮದ್ ಹಸನ್
ಅಲ್ ಬಹ್ಮನಿ 833

ಎರಡನೆಯ ನಮೂನೆಯ ತೂಕ 125 ಗ್ರೇನ್; ಅಗಲ 0.7". ಈ ನಾಣ್ಯಗಳ ಮೇಲಿನ ವರ್ಷಗಳು 826 ರಿಂದ 838ರ ವರೆಗೆ

ಮು : ಅಲ್ ಮುವಯ್ಯಿದ್ ಬಿ
ನಸ್ರಿಲ್ಲಹಿಲ್
ಮಲಿಕಿಲ್ ಹನ್ನನ್

ಹಿ : ಅಬುಲ್ ಮುಘಾಜಿ
ಅಹಮದ್ ಶಾಹ್
ಅಸ್ ಸುಲ್ತಾನ್ 826
(ಅಂಚಿನಲ್ಲಿ) ಜುರಿಬ ಬೆಹಜ್ರತ್ ಮುಹಮ್ಮದಾಬಾದ್ 826

ಮೂರನೆಯ ನಮೂನೆಯ ನಾಣ್ಯದ ತೂಕ 85 ಗ್ರೇನ್; ಅಗಲ 0.6". ಇದರ ಮೇಲಿನ ವರ್ಷಗಳು 826 ರಿಂದ 829.



ಮು : ಅಲ್ ಮನ್ಸುರ್ ಬಿ

ನಸ್ರಿಲ್ಲಹಿಲ್ ಮನ್ನನ್

ಹಿ : ಮೇಲಿನ ನಾಣ್ಯದಂತೆ ಬರಹ

ನಾಲ್ಕನೆಯ ನಮೂನೆಯ ನಾಣ್ಯದ ತೂಕ 60 ಗ್ರೇನ್; ಅಗಲ 0.6".

ಮು : ಅಲ್ ಮನ್ಸುರ್

ಬಿ ನಸ್ರಿಲ್ಲಹಿ

ನಲನ್ನ ಲನಜಿಲ್ಲಹು

ವಲಿ ಉನ್‌ನಸ್

ಹಿ : ಮೇಲಿನ ನಾಣ್ಯದಂತೆ, ಆದರೆ ವರ್ಷ 827

ಐದನೆಯ ನಮೂನೆಯ ನಾಣ್ಯದ ತೂಕ 40 ಗ್ರೇನ್; ಅಗಲ 0.6".

ಮು : ಅಹಮದ್ ಶಾಹ್ ದಿನ್ ದರ್

ಹಿ : ಕುಲೆ - ಒ - ಬಜರಿನ್ ಕುಫ್ಫರ

ಎರಡನೆಯ ಅಲಾ ಉದೀನ್ ಅಹಮದ್ ಶಾಹ್ (ಕ್ರಿ.ಶ. 1436-58)

ಹೆಚ್ಚಿನ ನಮೂನೆಯ ನಾಣ್ಯಗಳನ್ನು ಈ ಸುಲ್ತಾನನು ಅಚ್ಚು ಹಾಕಿಸಿದನೆಂದು ತಿಳಿದುಬರುತ್ತದೆ. ಎರಡು ನಮೂನೆಯ ಚಿನ್ನ, ಒಂದು ನಮೂನೆಯ ಬೆಳ್ಳಿ ಮತ್ತು ಏಳು ನಮೂನೆಯ ತಾಮ್ರದ ನಾಣ್ಯಗಳು ಉಪಲಬ್ಧವಾಗಿವೆ. ಇವನ ಚಿನ್ನದ ನಾಣ್ಯಗಳು ಬಲು ಕಲಾತ್ಮಕವಾಗಿವೆ.

ಮೊದಲನೆಯ ನಮೂನೆಯ ಚಿನ್ನದ ನಾಣ್ಯದ ತೂಕ 190 ಗ್ರೇನ್; ಅಗಲ 1.0".

ಮು : ಸುಲ್ತನಲ್ ಅವಿಯಿಲ್
ಇಸ್ಲಾಂ ಮ ಅಲ್ ಫಜ್ಲೆ ವಲ್
ಅದ್ಲೆ ವಲ್ ಅಹಿಸನ್


ಹಿ : ಅಬುಲ್ ಮುಜಾಫರ್ ಅಲಾವು
ದ್ದುನ್ಯ ವದಿನ್ ಅಹಮದ್
ಶಾಹ್ ಬಿನ್ ಅಹಮದ್ ಶಾಹ್ ಸುಲ್ತಾನ್

ಎರಡನೆಯ ನಮೂನೆಯ ನಾಣ್ಯದ ಬರಹದಲ್ಲಿ ಸ್ವಲ್ಪ ಭಿನ್ನತೆ ಕಾಣಬರುತ್ತದೆ. ತೂಕ ಮತ್ತು ಅಗಲಗಳಲ್ಲಿ ಮೇಲಿನ ನಾಣ್ಯವನ್ನೇ ಹೋಲುತ್ತದೆ.

ಮು : ಅಸ್ ಸಲ್ತನುಲ್ ಹಲಿಮುಲ್
ಕರಿಮುರ್ ರೌಫ್ ಅಲ
ಇಬದಿ ಉಅಹಿಲ್ ಘನಿಯಿಲ್

ಹಿ : ಮೇಲಿನ ನಾಣ್ಯದಂತೆ; ಆದರೆ ಕೊನೆಯ ಸಾಲಿನಲ್ಲಿ
ಅಲ್ ವಲಿಯಿಲ್ ಬಹ್ಮನಿ

ಇವನ ಬೆಳ್ಳಿ ನಾಣ್ಯದ ತೂಕ 170 ಗ್ರೇನ್; ಅಗಲ 1.02''. ಇದು ಮುಹಮ್ಮದಾಬಾದ್ ಟಂಕಶಾಲೆಯಲ್ಲಿ ಹಿಜಿರ 838 ರಲ್ಲಿ ಅಚ್ಚಾಯಿತು. ಮುಮ್ಮುಖ ಮತ್ತು ಹಿಮ್ಮುಖಗಳೆರಡಲ್ಲಿಯೂ ಇದು ಮೇಲಿನ ಚಿನ್ನದ ನಾಣ್ಯವನ್ನು ಹೋಲುತ್ತದೆ.



ಈ ದೊರೆಯ ಏಳು ನಮೂನೆಯ ತಾಮ್ರದ ನಾಣ್ಯಗಳು ಬೆಳಕಿಗೆ ಬಂದಿವೆ. ಹೆಚ್ಚು ತೂಕದ ಮತ್ತು ಅಗಲವಾದ ನಾಣ್ಯಗಳ ಮೇಲೆ ಉದ್ದನೆಯ ಬರಹ ಕಂಡು ಬಂದರೆ, ಸಣ್ಣ ನಾಣ್ಯಗಳ ಮೇಲೆ ಸಣ್ಣ ಬರಹ ಕಾಣಬರುತ್ತದೆ. ಮೊದಲನೆಯ ನಮೂನೆಯ ನಾಣ್ಯಗಳ ತೂಕ 225 ರಿಂದ 250 ಗ್ರೇನ್‌ವರೆಗೆ ಕಾಣಬರುತ್ತದೆ. ಇವುಗಳಲ್ಲಿ ಟಂಕಶಾಲೆ ಹೆಸರು ಕಾಣಬರುವುದಿಲ್ಲ; ಆದರೆ ಹಿಜಿರ ವರ್ಷ 839 ರಿಂದ 857ರ ವರೆಗೆ ಕಾಣಿಸುತ್ತದೆ. ಸಾಮಾನ್ಯವಾಗಿ ಈ ನಾಣ್ಯಗಳ ಅಗಲ ಒಂದು ಅಂಗುಲ.

ಮು : ಅಲ್ ಮುತಸಿಂ ಬುಲ್ಲಹಿಲ್ ಮನ್ನನ್
ಸುಮ್ಮಿಯ ಖಲಿಯುರ್ ರಹಮಾನ್
ಅಬುಲ್ ಮುಜಾಫರ್

ಹಿ : ಅಲ್ಲವುದುನ್ಯ ವದ್ ದಿನ್
ಅಹಮದ್ ಶಾಹ್ ಬಿನ್ ಅಹಮದ್
ಶಾಹ್ ಅಸ್ ಸುಲ್ತಾನ್ 839





ಎರಡನೆಯ ನಮೂನೆಯ ತಾಮ್ರದ ನಾಣ್ಯಗಳ ತೂಕ 170 ಗ್ರೇನ್; ಅಗಲ 0.8". ಇವುಗಳು ಮುಹಮ್ಮದಾಬಾದ್ ಟಂಕಶಾಲೆಯಲ್ಲಿ ಅಚ್ಚಾದವು. ಇವುಗಳ ಮೇಲೆ ಹಿಜಿರ ವರ್ಷ 840 ರಿಂದ 858ರ ವರೆಗೆ ಕಾಣಬರುತ್ತದೆ.

ಮು : ಅಲ್ ಮುತವಕ್ಕಿಲ್ ಅಲೈಲಹಿಲ್ ಘನಿ

ಹಿ : ಅಹಮದ್ ಶಾಹ್ ಬಿನ್
ಅಹಮದ್ ಶಾಹ್ ಅಲ್ ವಲಿ
ಅಲ್ ಬಹ್ಮನಿ 840

ಮೂರನೆಯ ನಮೂನೆಯ ನಾಣ್ಯದ ತೂಕ 125 ಗ್ರೇನ್; ಅಗಲ 0.75". ಇದರ ಮೇಲೆ ಟಂಕಶಾಲೆಯ ಹೆಸರಿಲ್ಲ; ಆದರೆ ವರ್ಷದ ಉಲ್ಲೇಖವಿದೆ (838 ರಿಂದ 851ರ ವರೆಗೆ).

ಮು : ಅಲ್ ವತಿಕ್ ಬಿ ತೈದಿಲ್
ಮಲಿಕಿಲ್ ಇಲಾಹ್ ಅಬುದ್ ಮುಜಫರ್

ಹಿ : ಅಹಮದ್ ಶಾಹ್ ಬಿನ್ ಅಹಮದ್ ಶಾಹ್
ಬಹ್ಮನ್ ಶಾಹ್ 838

ನಾಲ್ಕನೆಯ ನಮೂನೆಯ ನಾಣ್ಯದ ತೂಕ 80 ಗ್ರೇನ್; ಅಗಲ 0.62". ಇದರಲ್ಲಿಯೂ ಟಂಕಶಾಲೆಯ ಹೆಸರಿಲ್ಲ; ವರ್ಷದ ಉಲ್ಲೇಖ 838 ರಿಂದ 854ರ ವರೆಗೆ ಕಾಣಬರುತ್ತದೆ.

ಮು : ಅಲ ಮುಸ್ತನ್ಸಿರ್ ಬಿಲಹಿಲ್
ಘನಿ ಅಬುಲ್ ಮುಜಫರ್

ಹಿ : ಅಹಮದ್ ಶಾಹ್ ಬಿನ್
ಅಹಮದ್ ಶಾಹ್ ಅಲ್ ಬಹ್ಮನಿ 839

ಈ ಮೇಲಿನ ತೂಕದ ನಾಣ್ಯಗಳು ವಿವಿಧ ರೀತಿಯ ಬರಹಗಳನ್ನು ತೋರಿಸುತ್ತವೆ. ಅವುಗಳಲ್ಲಿ ಮೂರು ವಿಧಗಳನ್ನು ಗಮನಿಸಬಹುದು.

ಮು : ಅಹಮದ್ ಶಾಹ್

ಹಿ : ಜಿಲ್ಲಿ ಇಲಹ್

ಮು : ಅಹಮದ್ ಶಾಹ್

ಹಿ : ಜಹಾನ್ ಸನಾಹ್

ಮು : ಬರ್ಗುಜಿದ
ಅಹಮದ್ ಶಾಹ್

ಹಿ : ಬಿನ್ ಅಹಮದ್ ಶಾಹ್
ಅಲ್ ಸುಲ್ತಾನ್

ಹುಮಾಯೂನ್ ಶಾಹ್ (ಕ್ರಿ.ಶ. 1458-61)

ಈ ಸುಲ್ತಾನನ ಎರಡು ನಮೂನೆಯ ಚಿನ್ನದ, ಒಂದು ನಮೂನೆಯ ಬೆಳ್ಳಿ ಮತ್ತು ಮೂರು ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಇವನ ಒಂದು ನಾಣ್ಯದ ಮೇಲೆ ಹಿಜರ 866 ಎಂಬ ವರ್ಷವಿರುವುದರಿಂದ, ಇವನು ಅಲ್ಲಿಯವರೆಗೆ ಆಳಿದನೆಂಬುದು ಖಚಿತವಾಗುತ್ತದೆ.

ಮೊದಲನೆಯ ನಮೂನೆಯ ಚಿನ್ನದ ನಾಣ್ಯದ ತೂಕ 170 ಗ್ರೇನ್; ಅಗಲ 0.8". ಇದರ ಮೇಲೆ ಟಂಕಶಾಲೆಯ ಹೆಸರು ಹಾಗೂ ಆಳಿದ ವರ್ಷದ ಉಲ್ಲೇಖ ಕಾಣಬರುವುದಿಲ್ಲ. ಬರಹವು ಅವನ ಬಿರುದುಗಳಿಗೆ ಸೀಮಿತವಾಗಿದೆ.

ಮು : ಅಲ್ ಮುತಾವಕ್ಕಿಲ್ ಅಲ್ವೆ ಇಲಾಹಿಲ್
ಕವಿ ಯಿಲ್ ಘನಿ ಅಬ್ದುಲ್ ಮುಘಜಿ

ಹಿ : ಅಲವುದ್ದುನ್ಯ ವದ್ದಿನ್
ಹುಮಾಯುನ್ ಶಾಹ್ ಬಿನ್ ಅಹಮದ್
ಶಾಹ್ ಬಿನ್ ಅಹಮದ್ ಶಾಹ್
ಅಲ್ ವಲಿಯಿಲ್ ಬಹ್ಮನಿ

ಎರಡನೆಯ ನಮೂನೆಯ ನಾಣ್ಯದ ತೂಕ 160 ಗ್ರೇನ್; ಅಗಲ 1.05". ಇದರ ಬರಹ ಅಸ್ಪಷ್ಟವಾಗಿದೆ. ಇವನ ಬೆಳ್ಳಿಯ ನಾಣ್ಯದಲ್ಲಿ ಚಿನ್ನದ ನಾಣ್ಯದ ಮೇಲೆ ಕಂಡು ಬರುವ ಬರವಣಿಗೆಯೇ ಕಾಣಬರುತ್ತದೆ. ಆದರೆ ಇದರಲ್ಲಿ ಟಂಕಶಾಲೆಯ ಹೆಸರು ಮತ್ತು ವರ್ಷಗಳ ಉಲ್ಲೇಖವಿದೆ.

ಮೊದಲನೆಯ ನಮೂನೆಯ ತಾಮ್ರದ ನಾಣ್ಯದ ತೂಕ 255 ಗ್ರೇನ್; ಅಗಲ 0.9". ಇದು ಎಲ್ಲ ರೀತಿಯಿಂದಲೂ ಮೇಲಿನ ಬೆಳ್ಳಿಯ ನಾಣ್ಯವನ್ನೇ ಹೋಲುತ್ತದೆ. ಇವುಗಳ ಮೇಲೆ ವರ್ಷ 862 ರಿಂದ 866ರ ವರೆಗೆ ಕಾಣಬರುತ್ತದೆ. ಎರಡನೆಯ ನಮೂನೆಯ ತಾಮ್ರದ ನಾಣ್ಯದ ತೂಕ 120 ಗ್ರೇನ್; ಅಗಲ 0.7".

ಮು : ಅಲ್ ಮುತವಕ್ಕಿಲ್ - ಅಲ್ - ಕರಮಿಲ್
ಇಲಹಿಲ್ ಹನ್ನನ್ ಅಲ್ ಘನಿ

ಹಿ : ಹುಮ್ಮಾಯುನ್ ಶಾಹ್ ಲಿನ್
ಅಹ್ಮದ್ ಶಾಹ್ ಅಲ್ ವಲ್ಲಿಯಿಲ್ ಬಹ್ಮನಿ

ಮೂರನೆಯ ನಮೂನೆಯ ತಾಮ್ರದ ನಾಣ್ಯದ ತೂಕ 80 ಗ್ರೇನ್; ಅಗಲ 0.6".

ಮು : ದರ್ರೈ ಜಕ ಹುಯನ್

ಹಿ : ಹುಮಾಯುನ್ ಶಾಹ್ ಬಿನ್
ಅಹಮದ್ ಶಾಹ್ ಅಸ್ ಸುಲ್ತಾನ್ 856

ಮೂರನೆಯ ನಿಜಾಮುದ್ದೀನ್ ಅಹಮದ್ ಶಾಹ್ (ಕ್ರಿ.ಶ. 1461-63)

ಈ ಸುಲ್ತಾನನ ಚಿನ್ನ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಚಿನ್ನದ ನಾಣ್ಯದ ತೂಕ 170 ಗ್ರೇನ್; ಅಗಲ 0.7".

ಮು : ಅಲ್ ವತಿಕ್ ಬಿಲಹಿ ಅಲ್ ಘಾಜಿ
ಅಬುಲ್ ಮುಜಫರ್ ನಿಜಾಮ್ ಅಲ್ ದುನ್ಯ
ವ ಅಲ್ ದಿನ್

ಹಿ : ಅಹಮದ್ ಶಾಹ್ ಬಿನ್ ಹುಮಾಯೂನ್ ಶಾಹ್
ಅಲ್ ಸುಲ್ತಾನ್ ಅಲ್ ಬಹ್ಮನಿ
ಖಿಲ್ಲದಲ್ಲಹು ಮುಲ್ಕುಹು (ಮುಹಮ್ಮದಾಬಾದ್ 867)

ಈ ಸುಲ್ತಾನನ ಅನೇಕ ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ತಾಮ್ರದ ನಾಣ್ಯದ ತೂಕ 256 ಗ್ರೇನ್; ಅಗಲ 0.85". ಇವುಗಳ ಮೇಲೆ 866 ಮತ್ತು 867 ಎಂಬ ವರ್ಷಗಳು ಕಾಣಬರುತ್ತವೆ.

ಮು : ಅಲ್ ಮುಸ್ತನ್ಸೀರ್ ಬಿ ನಸ್ರಿ
ಲ್ಲಾಹಿಲ್ ಕವಿಯಿಲ್ ಘನಿ

ಹಿ : ಅಹಮದ್ ಶಾಹ್ ಬಿನ್
ಹುಮಾಯೂನ್ ಶಾಹ್
ಅಲ್ ಬಹ್ಮನಿ 866



ಎರಡನೆಯ ನಮೂನೆಯ ನಾಣ್ಯದ ತೂಕ 170 ಗ್ರೇನ್; ಅಗಲ 0.75". ಈ ನಾಣ್ಯಗಳಲ್ಲಿ ವರ್ಷವು ಮುಮ್ಮುಖದಲ್ಲಿರುತ್ತದೆ.

ಮು : ಅರ್ ರಜಿ ಬಿ ತೈದಿರ್
ರಹಮಾನ್ 866

ಹಿ : ಅಬ್ದುಲ್ ಮುಜಫರ್
ಅಹಮದ್ ಶಾಹ್ ಅಸ್ ಸುಲ್ತಾನ್

ಮೂರನೆಯ ನಮೂನೆಯ ತಾಮ್ರದ ನಾಣ್ಯದ ತೂಕ 80 ಗ್ರೇನ್; ಅಳತೆ 0.62". ಇದರಲ್ಲಿಯೂ ಮುಮ್ಮುಖದಲ್ಲಿ ವರ್ಷ ಕಾಣಬರುತ್ತದೆ.

ಮು : ಅಲ್ ವತಿಕ್ ಬಿಲ್ಲ ಹಿರ್
ರಹಮಾನ್ 866

ಹಿ : ಮೇಲಿನ ನಾಣ್ಯದಲ್ಲಿರುವಂತೆ

ನಾಲ್ಕನೆಯ ನಮೂನೆಯ ನಾಣ್ಯದ ಬರಹದಲ್ಲಿ ಬದಲಾವಣೆಯಿದೆ.

ಮು : ಅಲ್ ಮುತಿ ಬಿ ಅಮ್ರಿಲ್ಲಾಹಿಲ್
ಮನ್ನನ್

ಹಿ : ಮೇಲಿನ ನಾಣ್ಯದಲ್ಲಿರುವಂತೆ

ಐದನೆಯ ನಮೂನೆಯ ನಾಣ್ಯದ ತೂಕ 80 ಗ್ರೇನ್; ಅಳತೆ 0.7".

ಮು : ಅಹಮದ್ ಶಾಹ್ ಬಿನ್
ಹುಮಾಯೂನ್ ಶಾಹ್
ಅಸ್ ಸುಲ್ತಾನ್

ಹಿ : ಅಬುಲ್ ಮುಜಫರ್
ಅಹಮದ್ ಶಾಹ್
ಅಸ್ ಸುಲ್ತಾನ್

ಮೂರನೆಯ ಮುಹಮ್ಮದ್ ಶಾಹ್ (ಕ್ರಿ.ಶ. 1463-82)

ಮೂರನೆಯ ಅಹಮದ್ ಶಾಹನ ನಂತರ ಅವನ ತಮ್ಮ ಮೂರನೆಯ ಮುಹಮ್ಮದ್ ಶಾಹ್ ಸುಲ್ತಾನನಾದನು. ಇವನ ಆಳ್ವಿಕೆಯಲ್ಲಿ ಖ್ಯಾತ ಮಹ್ಮೂದ್ ಗವಾನ್ ರಾಜನ ಆಸ್ಥಾನದಲ್ಲಿದ್ದನು. ಇವನ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಬೆಳಕಿಗೆ ಬಂದಿವೆ. ಈ ದೊರೆಯ ಚಿನ್ನದ ನಾಣ್ಯಗಳು ಎರಡು ನಮೂನೆಯಲ್ಲಿ ದೊರಕಿವೆ. ಮೊದಲನೆಯದರ ತೂಕ 170 ಗ್ರೇನ್; ಅಳತೆ 0.75". ಇದು ಮುಹಮ್ಮದಾಬಾದ್ ಟಂಕಶಾಲೆಯಲ್ಲಿ ಅಚ್ಚಾದುದು.

ಮು : ಅಲ್ ಮುತಸಿಮ್ ಬಿಲ್ಲಹ್
ಅಬುಲ್ ಮುಜಫರ್
ಷಂಸುದ್ ದುನ್ಯ ವದ್ದಿನ್

ಹಿ : ಮುಹಮ್ಮದ್ ಶಾಹ್ ಬಿನ್
ಹುಮಾಯೂನ್ ಶಾಹ್ ಅಸ್ ಸುಲ್ತಾನ್
ಖಲ್ಲದ ಮುಲ್ಕುಹು 868
ಅಂಚಿನಲ್ಲಿ ಮುಹಮ್ಮದಾಬಾದ್

ಎರಡನೆಯ ನಮೂನೆಯ ಚಿನ್ನದ ನಾಣ್ಯದ ಬರಹದಲ್ಲಿ ಭಿನ್ನತೆಯಿದೆ.

ಮು : ಬಿ ಅಲ್ಲಾ
ಅಲ್ ಮುತೆಸಿಮ್ ಷಂಸುದ್
ದುನ್ಯ ವ ವದ್ದಿನ್

ಹಿ : ಮುಹಮ್ಮದ್ ಶಾಹ್
ಬಿನ್ ಹುಮಾಯೂನ್ ಶಾಹ್
ಅಸ್ ಸುಲ್ತಾನ್



ಇವನ ಬೆಳ್ಳಿಯ ನಾಣ್ಯದ ತೂಕ 170 ಗ್ರೇನ್; ಅಳತೆ 0.85". ಇದು ಮೊದಲನೆಯ ನಮೂನೆಯ ಚಿನ್ನದ ನಾಣ್ಯದಲ್ಲಿರುವ ಬರಹವನ್ನೇ ಹೊಂದಿದೆ. ಆದರೆ ವರ್ಷ 871 ರಿಂದ 886ರ ವರೆಗೆ ಕಾಣಬರುತ್ತದೆ.

ಐದು ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ನಾಣ್ಯದ ತೂಕ 256 ಗ್ರೇನ್; ಅಗಲ 0.85".

ಮು : ಅಲ್ ಮುತಸಿಮ್ ಬಿಲ್ಲಹ್
ಷಂಸುದ್ ದುನ್ಯ ವದ್ದಿನ್

ಹಿ : ಮೇಲಿನ ಚಿನ್ನದ ನಾಣ್ಯದಲ್ಲಿರುವಂತೆ

ಎರಡನೆಯ ನಮೂನೆಯ ನಾಣ್ಯದ ತೂಕ ಅಳತೆ ಮತ್ತು ಮುಮ್ಮುಖ ಮೇಲಿನ ನಾಣ್ಯದಂತೆಯೇ ಇದೆ. ಆದರೆ ಹಿಮ್ಮುಖದಲ್ಲಿ ಮುಹಮ್ಮದ್ ಶಾಹ್ ಬಿನ್ ಹುಮಾಯೂನ್ ಶಾಹ್ ಅಸ್ ಸುಲ್ತಾನ್ ಎಂಬ ಬರಹವಿದೆ.

ಮೂರನೆಯ ನಮೂನೆಯ ತಾಮ್ರದ ನಾಣ್ಯದ ತೂಕ 85 ಗ್ರೇನ್; ಅಳತೆ 0.62".

ಮು : ಅಲ್ ಮುತಸಿಮ್ ಬಿಲ್ಲಹ್
ಅಬುಲ್ ಮುಜಫರ್

ಹಿ : ಮೇಲಿನ ನಾಣ್ಯದಲ್ಲಿರುವಂತೆ

ನಾಲ್ಕನೆಯ ನಮೂನೆಯ ತಾಮ್ರದ ನಾಣ್ಯದ ತೂಕ 45 ಗ್ರೇನ್; ಅಳತೆ 0.5".

ಮು : ಮುಹಮ್ಮದ್ ಶಾಹ್

ಹಿ : ಬಿನ್ ಹುಮಾಯೂನ್ ಶಾಹ್

ಐದನೆಯ ನಮೂನೆಯ ನಾಣ್ಯದ ತೂಕ 55 ಗ್ರೇನ್; ಅಳತೆ 0.5".

ಮು : ಜಿಲ್ಲುಲ್ಲಾಹ್

ಹಿ : ಮುಹಮ್ಮದ್ ಶಾಹ್

ಮಹಮೂದ್ ಶಾಹ್ (ಕ್ರಿ.ಶ. 1482-1518)

ಈ ಸುಲ್ತಾನನು ಅಶಕ್ತನಾಗಿದ್ದು, ರಾಜ್ಯಭಾರದ ಹೊಣೆಯೆಲ್ಲವನ್ನೂ ಕಾಸಿಂ ಬರೀದ್ ನೋಡಿಕೊಳ್ಳುತ್ತಿದ್ದನು. ಆದರೂ ಈ ಸುಲ್ತಾನನ ಅನೇಕ ನಮೂನೆಯ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಚಿನ್ನದ ನಾಣ್ಯದ ತೂಕ 170 ಗ್ರೇನ್; ಅಳತೆ 1.0". ಇದು ಮುಹಮ್ಮದಾಬಾದಿನ ಟಂಕಶಾಲೆಯಲ್ಲಿ ಅಚ್ಚಾದದ್ದು.

ಮು : ಅಲ್ ಮುತವಕ್ಕಿಲ್ ಅಲ ಲ್ಲಹಿಲ್
ಕವಿಯಿಲ್ ಘನಿ ಅಸ್

ಹಿ : ಅಬುಲ್ ಮುಘಜಿ ಮಹಮೂದ್
ಶಾಹ್ ಬಿನ್ ಮುಹಮ್ಮದ್ ಶಾಹ್
ಅಲ್ ವಲಿಯಿಲ್ ಬಹ್ಮನಿ
ಅಂಚಿನಲ್ಲಿ ಮುಹಮ್ಮದಾಬಾದ್

ಇವನ ಬೆಳ್ಳಿಯ ನಾಣ್ಯದ ತೂಕ 170 ಗ್ರೇನ್; ಅಳತೆ 0.92". ಇದೂ ಮುಹಮ್ಮದಾಬಾದ್‌ನಲ್ಲಿ ಅಚ್ಚಾದುದು. ಇದರ ಮೇಲೆ 887 ರಿಂದ 897ರ ವರೆಗಿನ ವರ್ಷಗಳು ಕಾಣಬರುತ್ತವೆ. ಹಿಮ್ಮುಖ ಮತ್ತು ಮುಮ್ಮುಖಗಳೆರಡರಲ್ಲೂ, ಚಿನ್ನದ ನಾಣ್ಯದ ಮೇಲಿರುವ ಬರಹಗಳೇ ಇವರಲ್ಲಿಯೂ ಕಾಣಬರುತ್ತವೆ.

ಇವನ ತಾಮ್ರದ ನಾಣ್ಯಗಳು ಐದು ನಮೂನೆಯಲ್ಲಿ ದೊರಕಿವೆ. ಮೊದಲನೆಯ ನಮೂನೆಯ ನಾಣ್ಯದ ತೂಕ 256 ಗ್ರೇನ್; ಅಳತೆ 0.9".

ಮು : ಅಲ್ ಮುತವಕ್ಕಿಲ್ ಅಲಲ್ಲಹಿಲ್
ಹನ್ನನಿಲ್ ಮನ್ನನ್
ಅಬುಲ್ ಮುಘಾಜಿ

ಹಿ : ಮಹಮೂದ್ ಶಾಹ್ ಬಿನ್
ಮುಹಮ್ಮದ್ ಶಾಹ್ ಅಸ್
ಸುಲ್ತಾನ್ 888

ಎರಡನೆಯ ನಮೂನೆಯ ತಾಮ್ರದ ನಾಣ್ಯ ತೂಕ ಮತ್ತು ಅಳತೆಯಲ್ಲಿ ಮೇಲಿನ ನಾಣ್ಯವನ್ನೇ ಹೋಲುತ್ತದೆ. ಆದರೆ ಬರಹದಲ್ಲಿ ಭಿನ್ನತೆಯಿದೆ.

ಮು : ಅಲ್ ಮುತವಕ್ಕಿಲ್ ಅಲ್ ಅಲ್ಲಹಿಲ್
ಕವಿಯಿಲ್ ಘನಿ

ಹಿ : ಮಹಮೂದ್ ಶಾಹ್ ಬಿನ್
ಮುಹಮ್ಮದ್ ಶಾಹ್
ಅಲ್ ಬಹ್ಮನಿ

ಮೂರನೆಯ ನಮೂನೆಯ ತಾಮ್ರದ ನಾಣ್ಯದ ತೂಕ 156 ಗ್ರೇನ್; ಅಳತೆ 0.75".

ಮು : ಅಲ್ ಮುವಯ್ಯಿದ್ ಬಿ
ನಸ್ರಿಲ್ಲಹಿಲ್ ಘನಿ

ಹಿ : ಅಸ್ ಸುಲ್ತಾನ್ ಮಹಮೂದ್
ಅಲ್ ಬಹ್ಮನಿ

ನಾಲ್ಕನೆಯ ನಮೂನೆಯ ತಾಮ್ರದ ನಾಣ್ಯದ ತೂಕ 87 ಗ್ರೇನ್; ಅಳತೆ 0.6".

ಮು : ಅಲ್ ಮುತವಕ್ಕಿಲ್ ಅಲ್ ಅಲ್ಲಹಿಲ್

ಹಿ : ಮಹಮೂದ್ ಶಾಹ್ ಬಿನ್ ಮುಹಮ್ಮದ್ ಶಾಹ್

ಐದನೆಯ ನಮೂನೆಯ ನಾಣ್ಯದ ತೂಕ 43 ಗ್ರೇನ್; ಅಳತೆ 0.5".

ಮು : ಮಹಮೂದ್ ಶಾಹ್ ಬಿನ್

ಹಿ : ಮುಹಮ್ಮದ್ ಶಾಹ್

ವಲಿಯುಲ್ಲ ಶಾಹ್ (ಕ್ರಿ.ಶ. 1522-25)

ಈ ಸುಲ್ತಾನನ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಈವರೆಗೆ ದೊರಕಿಲ್ಲ. ಕೇವಲ ತಾಮ್ರದ ನಾಣ್ಯಗಳು ದೊರಕಿವೆ. ಬಹುಶಃ ಇದು ಈ ವಂಶದ ಅವನತಿಯನ್ನು ಸೂಚಿಸುತ್ತದೆಯೆಂದು ಭಾವಿಸಬಹುದು.

ಇವನ ತಾಮ್ರದ ನಾಣ್ಯಗಳು ಮೂರು ನಮೂನೆಗಳಲ್ಲಿ ದೊರಕಿವೆ. ಮೊದಲನೆಯ ನಮೂನೆಯ ನಾಣ್ಯದ ತೂಕ 260 ಗ್ರೇನ್; ಅಳತೆ 0.9".

ಮು : ಅಲ್ ಮುವಯ್ಯಿದ್ ಬಿ ನಸ್ರಿ
ಲ್ಲಹಿಲ್ ಮಾಲಿಕಿಲ್
ಕವಿಯಿಲ್ ಘನಿ

ಹಿ : ಅಸ್ ಸುಲ್ತಾನ್ ವಲಿಯುಲ್ಲ
ಶಾಹ್ ಬಿನ್ ಮಹಮೂದ್
ಅಲ್ ಬಹ್ಮನಿ

ಎರಡನೆಯ ನಮೂನೆಯ ತಾಮ್ರದ ನಾಣ್ಯದ ತೂಕ 170 ಗ್ರೇನ್; ಅಳತೆ 0.8".

ಮು : ಅಲ್ ಮುವಯ್ಯಿದ್ ಬಿ
ನಸ್ರಿಲ್ಲ್

ಹಿ : ಅಸ್ ಸುಲ್ತಾನ್ ವಲಿಯುಲ್ಲ
930

ಕಲಿಮುಲ್ಲ ಶಾಹ್ (ಕ್ರಿ.ಶ. 1525-27)

ಇವನು ಈ ರಾಜವಂಶದ ಕೊನೆಯ ದೊರೆ. ಹೆಸರಿಗೆ ಮಾತ್ರ ಇವನು ಸುಲ್ತಾನನಾಗಿದ್ದನು. ನಿಜವಾದ ಅಧಿಕಾರವೆಲ್ಲವೂ ಪ್ರಾಂತೀಯ ಗವರ್ನರುಗಳಲ್ಲಿಯೇ ಇದ್ದಿತು. ಆದರೆ ಇವರು ನಾಣ್ಯಗಳನ್ನು ಮಾತ್ರ ಸುಲ್ತಾನನ ಹೆಸರಿನಲ್ಲಿ ಟಂಕಿಸುತ್ತಿದ್ದರು. ಇವನ ಆರು ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ನಾಣ್ಯದ ತೂಕ 270 ಗ್ರೇನ್; ಅಳತೆ 0.9".

ಮು : ಅಲ್ ಮುವಯ್ಯಿದ್ ಬಿ
ನಸ್ರಿಲ್ಲಹಿಲ್ ಮಾಲಿಕಿಲ್
ಕವಿಯಿಲ್ ಘನಿ

ಹಿ : ಅಸ್ ಸುಲ್ತಾನ್ ಕಲಿಮುಲ್ಲ
ಬಿನ್ ಮಹಮೂದ್ ಶಾಹ್
ಅಲ್ ಬಹ್ಮನಿ 950

ಎರಡನೆಯ ನಮೂನೆಯ ತಾಮ್ರದ ನಾಣ್ಯದ ತೂಕ 180 ಗ್ರೇನ್; ಅಳತೆ 0.8".

ಮು : ಅಲ್ ಮುವಯ್ಯಿದ್ ಬಿ
ನಸ್ರಿಲ್ಲಹಿಲ್ ಘನಿ

ಹಿ : ಅಸ್ ಸುಲ್ತಾನ್ ಕಲಿಮುಲ್ಲ
ಅಲ್ ಬಹ್ಮನಿ 952



ಮೂರನೆಯ ನಮೂನೆಯ ತಾಮ್ರದ ನಾಣ್ಯದ ತೂಕ 180 ಗ್ರೇನ್; ಅಳತೆ 0.8".

ಮು : ಅಲ್ ಮುವಯ್ಯಿದ್ ಬಿ
ನಸ್ರಿಲ್ಲಹಿಲ್ ಘನಿ

ಹಿ : ಅಸ್ ಸುಲ್ತಾನ್ ಕಲಿಮುಲ್ಲ
ಅಲ್ ಬಹ್ಮನಿ 952

ನಾಲ್ಕನೆಯ ನಮೂನೆಯ ತಾಮ್ರದ ನಾಣ್ಯದ ತೂಕ 90 ಗ್ರೇನ್; ಅಳತೆ 0.6".

ಮು : ಅಲ್ ಮುವಯ್ಯಿದ್
ಬಿ ನಸ್ರಿಲ್ಲಹ್

ಹಿ : ಅಸ್ ಸುಲ್ತಾನ್
ಕಲಿಮುಲ್ಲ 930

ಐದನೆಯ ನಮೂನೆಯ ತಾಮ್ರದ ನಾಣ್ಯದ ತೂಕ 86 ಗ್ರೇನ್; ಅಳತೆ 0.6".

ಮು : ಅಲ್ ಮುತವಕ್ಕಿಲ್
ಅಲ್ ಅಲ್ಲಹಿಲ್ ಅದಿಲಿಲ್ ಘನಿ

ಹಿ : ಆಸ್ ಸುಲ್ತಾನ್ ಕಲಿಮುಲ್ಲ
ಅಲ್ ಬಹ್ಮನಿ

ಆರನೆಯ ನಮೂನೆಯ ತಾಮ್ರದ ನಾಣ್ಯದ ತೂಕ 46 ಗ್ರೇನ್; ಅಳತೆ 0.5".

ಮು : ಅಸ್ ಸುಲ್ತಾನ್

ಹಿ : ಕಲಿಮುಲ್ಲ

ಈ ಸುಲ್ತಾನನ ಪತನದೊಂದಿಗೆ ಬಹಮನಿ ಸುಲ್ತಾನ್ ರಾಜ್ಯವು ನಾಶವಾಯಿತು. ಬಹಮನಿ ನಾಣ್ಯಗಳು ಅಚ್ಚಾಗುವುದು ನಿಂತುಹೋಯಿತು.

2. ಆದಿಲ್ ಶಾಹಿ ಸುಲ್ತಾನರ ನಾಣ್ಯಗಳು

ಯೂಸುಫ್ ಆದಿಲ್ ಖಾನನು ಬಹಮನಿ ಸುಲ್ತಾನರ ಆಶ್ರಯದಲ್ಲಿ ಪ್ರಾಂತೀಯ ಗವರ್ನರ್ ಆಗಿದ್ದನು. ಬಹಮನಿ ಸುಲ್ತಾನ ಕಲಿಮುಲ್ಲ ಅಶಕ್ತನಾದ ಕೂಡಲೆ ಅವನನ್ನು ಸೋಲಿಸಿ ಕ್ರಿ.ಶ. 1489ರಲ್ಲಿ ಆದಿಲ್ ಶಾಹಿ ಸುಲ್ತಾನರ ರಾಜ್ಯವನ್ನು ಸ್ಥಾಪಿಸಿದನು. ಈ ವಂಶದ ಸುಲ್ತಾನರು ಕ್ರಿ.ಶ. 1686ರ ವರೆಗೆ ರಾಜ್ಯವಾಳಿದರು. ಇವರ ರಾಜಧಾನಿ ಬಿಜಾಪುರ. ಈ ವಂಶದ ಸುಲ್ತಾನರು ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ವಿಶೇಷ ಪ್ರೋತ್ಸಾಹ ಕೊಟ್ಟರು. ಅದರಲ್ಲಿಯೂ ವಾಸ್ತುಶಾಸ್ತ್ರಕ್ಕೆ ಇವರ ಕೊಡುಗೆ ಅಮೂಲ್ಯವಾದುದು. ಗೋಲ್ ಗುಂಬಜ್ ಇಬ್ರಾಹಿಂ ರೋಜಾ ಮುಂತಾದ ವಾಸ್ತು ಕೃತಿಗಳು ಇವರನ್ನು ಇತಿಹಾಸದಲ್ಲಿ ಚಿರಸ್ಥಾಯಿಯನ್ನಾಗಿ ಮಾಡಿವೆ. ಇಬ್ರಾಹಿಂ ಆದಿಲ್ ಶಾಹ್ ಸ್ವತಃ ಸಂಗೀತಗಾರನಾಗಿದ್ದನು. ಇವನು ರಚಿಸಿದ ಉರ್ದುಕೃತಿ 'ಕಿತಾಬ್ - ಇ - ನವರಸ್' ಸಂಗೀತವನ್ನು ಕುರಿತಾದ ಉತ್ತಮ ಗ್ರಂಥ. ಇದರ ನಾಂದಿ ಶ್ಲೋಕದಲ್ಲಿ ಸರಸ್ವತಿಯ ನಮನವಿದೆ.

1910ರ ವರೆಗೆ ಇವರ ಒಂದು ನಾಣ್ಯವೂ ದೊರಕಿರಲಿಲ್ಲ. ಆ ವರ್ಷ ಜಿ.ಪಿ. ಟೇಲರ್ ಅವರು ಬಿಜಾಪುರದಲ್ಲಿ ದೊರಕಿದ ಕೆಲವು ನಾಣ್ಯಗಳನ್ನು ಗುರುತಿಸಿ, ಅವು ಈ ಸುಲ್ತಾನರಿಗೆ ಸೇರಿದ್ದೆಂದು ಖಚಿತಪಡಿಸಿದರು. ಆನಂತರ ಲಾರಿನ್ ಎಂಬ ಬೆಳ್ಳಿಯ ನಾಣ್ಯಗಳು ಪತ್ತೆಯಾದವು. 1912ರಲ್ಲಿ ಮುಹಮ್ಮದ್ ಆದಿಲ್ ಶಾಹನಿಗೆ ಸೇರಿದ ಚಿನ್ನದ ನಾಣ್ಯಗಳು ಪತ್ತೆಯಾದವು. ಹೆನ್ರಿ ಕಜಿನ್ಸ್ ಅವರು ಈ ವಂಶದ ನಾಣ್ಯಗಳನ್ನು ಕುರಿತು ಬರೆದರು. ಆನಂತರ ಇಸ್ಮಾಯಿಲ್, ಖರೆ ಮುಂತಾದ ವಿದ್ವಾಂಸರು ಈ ಸುಲ್ತಾನರ

ಹೊಸ ನಾಣ್ಯಗಳನ್ನು ಪತ್ತೆ ಮಾಡಿದರು. ಇವೆಲ್ಲ ಸಂಶೋಧನೆಗಳಿಂದಾಗಿ ಆದಿಲ್ ಶಾಹಿ ಸುಲ್ತಾನರ ನಾಣ್ಯದ ವಿಷಯದಲ್ಲಿ ಈಗ ಸಾಕಷ್ಟು ಮಾಹಿತಿಗಳು ತಿಳಿದಿವೆ.

ಆದಿಲ್ ಶಾಹಿ ಸುಲ್ತಾನರು ಆರಂಭದಲ್ಲಿ ಬಹಮನಿ ಸುಲ್ತಾನರ ನಾಣ್ಯಗಳನ್ನೇ ಅನುಕರಿಸಿದರು. ಮೊದಲ ನಾಲ್ಕು ಆದಿಲ್ ಶಾಹಿ ಸುಲ್ತಾನರಾದ ಯೂಸುಫ್ ಆದಿಲ್ ಶಾಹ್, ಇಸ್ಮಾಯಿಲ್ ಆದಿಲ್ ಶಾಹ್, ಮಲ್ಲು ಆದಿಲ್ ಶಾಹ್ ಮತ್ತು ಇಬ್ರಾಹಿಂ ಆದಿಲ್ ಶಾಹ್ ಅವರ ನಾಣ್ಯಗಳು ಈವರೆಗೆ ದೊರಕಿಲ್ಲ. ಆದುದರಿಂದ ಇವರು ಬಹಮನಿ ನಾಣ್ಯಗಳನ್ನೇ ಈ ಕಾಲದಲ್ಲಿ ಉಪಯೋಗಿಸುತ್ತಿದ್ದರೆಂದು ನಂಬಲಾಗಿದೆ. ಐದನೆಯ ಸುಲ್ತಾನನಾದ ಒಂದನೆಯ ಅಲಿ ಆದಿಲ್ ಈ ವಂಶದ ನಾಣ್ಯಗಳನ್ನು ಮೊಟ್ಟಮೊದಲನೆಯ ಬಾರಿಗೆ ಟಂಕಿಸಿದನು. ಅಲ್ಲಿಂದ ಮುಂದೆ ಎಲ್ಲ ಸುಲ್ತಾನರೂ ತಮ್ಮ ನಾಣ್ಯಗಳನ್ನು ಟಂಕಿಸುವುದನ್ನು ಮುಂದುವರೆಸಿದರು. ಬಸಾತೀನ್ ಸಲಾತೀನ್ ಎನ್ನುವ ಗ್ರಂಥದಲ್ಲಿ ಪ್ರಾಸಂಗಿಕವಾಗಿ ನಾಣ್ಯಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳು ಕಾಣಬರುತ್ತವೆ. ಇವರ ಕಾಲದ ನಾಣ್ಯಗಳ ಹೆಸರುಗಳು ಮುಹರ್, ಹೊನ್, ಧರಣ್ ಮತ್ತು ಪರ್ತಬ್. ಇಬ್ರಾಹಿಂ ನೌರಸ್ ಎನ್ನುವ ನಾಣ್ಯವನ್ನು, ನವರಸಪುರ ಎನ್ನುವ ಪಟ್ಟಣವನ್ನು ಕಟ್ಟಿದಾಗ ಟಂಕಿಸಲಾಯಿತು. ಈ ಮಾಹಿತಿಗಳ ಪ್ರಕಾರ ಇವರ ಕಾಲದ ನಾಣ್ಯಗಳ ಯಾದಿಯನ್ನು ಹೀಗೆ ರಚಿಸಬಹುದು.

1 ಹೊನ್ = 2 ಧರಣ್


1 ಧರಣ್ = 2 ಪರ್ತಬ್

1 ಹೊನ್ = 4 ಪರ್ತಬ್

ಆದಿಲ್ ಶಾಹಿ ನಾಣ್ಯಗಳನ್ನು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ಕಾಣಬಹುದು. ಸಾಮಾನ್ಯವಾಗಿ ಇವರ ನಾಣ್ಯಗಳು ವೃತ್ತಾಕಾರ ಇಲ್ಲವೇ ಚೌಕಾಕಾರದಲ್ಲಿರುತ್ತವೆ. ಆದರೆ ಲಾರಿನ್ ಎನ್ನುವ ನಾಣ್ಯ ಮಾತ್ರ ಬಹಳ ವಿಶಿಷ್ಟವಾಗಿದ್ದು ಕೂದಲಿನ ಪಿನ್ನಿನಂತಿರುತ್ತದೆ. "ಇದೊಂದು ನಾಣ್ಯ: ಆದರೆ ಇದರ ರೂಪ ಅತಿರೇಕ; ಇದೊಂದು ಉದ್ದವಾದ ತಂತಿ; ಎಲ್ಲೋ ಒಂದು ಕಡೆ ಮಡಿಚಿರುತ್ತದೆ. ಅದರ ಮೇಲೆ ಬರಹವಿರುತ್ತದೆ. ಪರ್ಷಿಯ ದೇಶದ ಲಾರರು ಇದನ್ನು ಉಪಯೋಗಿಸುತ್ತಿದ್ದುದರಿಂದ ಇದಕ್ಕೆ ಲಾರಿನ್ ಎಂದು ಹೆಸರಾಯಿತು. ಇದನ್ನು ನೋಡಿದರೆ ನಾಣ್ಯವೆಂದು ನಂಬುವುದು ತುಂಬ ಕಷ್ಟ. ಸಾಮಾನ್ಯವಾಗಿ ಹಡಗಿನಲ್ಲಿ ಸಂಚರಿಸುತ್ತಿದ್ದ ವ್ಯಾಪಾರಿಗಳು ಈ ನಾಣ್ಯಗಳನ್ನು ವಿಶೇಷವಾಗಿ ಬಳಸುತ್ತಿದ್ದರು". ಇವರ ಚಿನ್ನದ ನಾಣ್ಯಗಳ ತೂಕ 52 ಗ್ರೇನ್. ಬೆಳ್ಳಿಯ ಲಾರಿನ್‌ಗಳ ತೂಕ 70 ಗ್ರೇನ್. ತಾಮ್ರದ ನಾಣ್ಯಗಳು 270, 180, 120 ಮತ್ತು 60 ಗ್ರೇನ್‌ಗಳಲ್ಲಿ ದೊರಕಿವೆ. ಸಾಮಾನ್ಯವಾಗಿ ಆದಿಲ್ ಶಾಹಿ ನಾಣ್ಯಗಳ ಮೇಲೆ ಪರ್ಷಿಯನ್ ಚುಟುಕಗಳು, ರಾಜನ ಹೆಸರು, ಬಿರುದುಗಳು, ಕೆಲವು ಕಡೆ ಹಿಜಿರ ವರ್ಷ ಕಾಣಬರುತ್ತವೆ. ಕೆಲವು ನಾಣ್ಯಗಳು ತುಂಬ ಸುಂದರವಾಗಿದ್ದು ನಮ್ಮ ಗಮನವನ್ನು ಸೆಳೆಯುತ್ತವೆ.

ಒಂದನೆಯ ಅಲಿ ಆದಿಲ್ ಶಾಹ್ (ಕ್ರಿ.ಶ. 1557-80)

ಈ ಸುಲ್ತಾನನ ಎರಡು ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ನಾಣ್ಯ ವೃತ್ತಾಕಾರವಾಗಿದ್ದು, ಇದರ ತೂಕದಲ್ಲಿ ಭಿನ್ನತೆ ಕಂಡುಬರುತ್ತದೆ. ಇವುಗಳ ತೂಕ 186, 174, 157 ಮತ್ತು 117 ಗ್ರೇನ್‌ಗಳು. ಇವುಗಳ ಅಗಲ 0.6" ರಿಂದ 0.8". ಈ ಎಲ್ಲ ನಾಣ್ಯಗಳ ಮೇಲೆ ಈ ರೀತಿಯ ಬರಹ ಕಾಣಬರುತ್ತದೆ.



ಮು : ಅಲಿ ಇಬ್ನ್ ಅಬಿ ತಲಿಬ್

ಹಿ : ಅಸದುಲ್ಲಹಿಲ್ ಘಲಿಬ್

ಎರಡನೆಯ ನಮೂನೆಯ ತಾಮ್ರದ ನಾಣ್ಯ ಚೌಕಾಕಾರದಲ್ಲಿರುವ ಪ್ರತಿಯೊಂದು ಬಾಹುವೂ 0.5" ಉದ್ದವಾಗಿದ್ದು, ಇವುಗಳು 180, 120 ಮತ್ತು 60 ಗ್ರೇನ್ ತೂಕಗಳಲ್ಲಿ ಕಾಣಬರುತ್ತವೆ. ಮೇಲಿನ ನಾಣ್ಯದಲ್ಲಿ ಕಾಣಬರುವ ಬರಹಗಳೇ ಈ ಚೌಕಾಕಾರದ ನಾಣ್ಯಗಳಲ್ಲಿಯೂ ಕಂಡುಬರುತ್ತವೆ.

ಎರಡನೆಯ ಇಬ್ರಾಹಿಂ ಆದಿಲ್ ಶಾಹ್ (ಕ್ರಿ.ಶ. 1580-1626) :

ಈ ಸುಲ್ತಾನನ ನಾಣ್ಯಗಳೂ ಎರಡು ನಮೂನೆಗಳಲ್ಲಿ ಕಂಡುಬಂದಿವೆ. ಮೊದಲನೆಯದು ವೃತ್ತಾಕಾರದಲ್ಲಿದ್ದು ಇದರ ಅಗಲ 0.6" ರಿಂದ 0.75" ವರೆಗೆ ಕಾಣಬರುತ್ತದೆ. ಈ ನಮೂನೆಯ ನಾಣ್ಯಗಳು 180, 120 ಮತ್ತು 60 ಗ್ರೇನ್ ತೂಕದಲ್ಲಿ ಕಂಡುಬರುತ್ತವೆ.




ಮು : ಇಬ್ರಾಹಿಂ ಅಬ್ಲಾ ಬಲಿ

ಹಿ : ಗುಲ್ ಶನ್ ಆಲಿ ಮುರ್ತಜ

ಅಬ್ಲಾ ಬಲಿ ಎನ್ನುವ ಶಬ್ದ ಇಬ್ರಾಹಿಮನಿಗೆ ಅಶಕ್ತರ ಬಗ್ಗೆ ಇದ್ದ ಸಹಾನುಭೂತಿಯನ್ನು ಸೂಚಿಸುತ್ತದೆ ಎಂದು ಭಾವಿಸಲಾಗಿದೆ.





ಎರಡನೆಯ ನಮೂನೆಯ ತಾಮ್ರದ ನಾಣ್ಯ ಚೌಕಾಕಾರವಾಗಿದ್ದು, ಪ್ರತಿಯೊಂದು ಬಾಹುವೂ 0.65" ಉದ್ದವಿದೆ. ಇವು 180 ಮತ್ತು 120 ಗ್ರೇನ್ ತೂಕಗಳಲ್ಲಿ ಕಂಡು ಬಂದಿವೆ. ಮೇಲಿನ ನಾಣ್ಯದಲ್ಲಿ ಕಾಣಬರುವ ಬರಹವೇ ಈ ನಾಣ್ಯದ ಮೇಲೂ ಇದೆ. ಈ ನಾಣ್ಯ ತುಂಬ ಕಲಾತ್ಮಕವಾಗಿದ್ದು ನಮ್ಮ ಗಮನವನ್ನು ಸೆಳೆಯುತ್ತದೆ. ಎರಡು ಚೌಕಾಕಾರದ ವಿನ್ಯಾಸ, ಅದರಲ್ಲಿ ಚುಕ್ಕೆಗಳು, ಸುಂದರವಾದ ಅಕ್ಷರಗಳು ಈ ನಾಣ್ಯದ ಮುಖ್ಯ ಲಕ್ಷಣಗಳು. ಇದರಲ್ಲಿ ನಸ್ತಲಿಕ್ ರೀತಿಯ ಬರವಣಿಗೆಯಿದೆ. ವೃತ್ತಾಕಾರದ ನಾಣ್ಯದಲ್ಲಿ ತುಘ್ರ ರೀತಿಯ ಬರವಣಿಗೆ ಕಾಣಬರುತ್ತದೆ. ಸಾಮಾನ್ಯವಾಗಿ ಅತ್ಯುತ್ತಮವಾದ ನಸ್ತಲಿಕ್ ಬರವಣಿಗೆಯ ನಾಣ್ಯಗಳನ್ನು ಅಕ್ಬರ್ ಮತ್ತು ಜಹಾಂಗೀರ್ ಟಂಕಿಸಿದರು. ಆದುದರಿಂದ ಇಬ್ರಾಹಿಂ ಅಕ್ಬರನ ನಾಣ್ಯಗಳನ್ನು ಅನುಕರಿಸಿ ಅವನ ಕೃಪೆಗೆ ಪಾತ್ರನಾಗಲು ಯೋಚಿಸಿರಬೇಕು ಎಂದು ಇತಿಹಾಸಕಾರರು ಭಾವಿಸುತ್ತಾರೆ. ಒಟ್ಟಿನಲ್ಲಿ ಅಕ್ಬರನ ಇಲಾಹಿ ನಮೂನೆಯ ನಾಣ್ಯದ ಪ್ರಭಾವವನ್ನು, ಇಬ್ರಾಹಿಮನ ಈ ನಾಣ್ಯದಲ್ಲಿ ಕಾಣಬಹುದು.

ಮುಹಮ್ಮದ್ ಆದಿಲ್ ಶಾಹ್ (ಕ್ರಿ.ಶ. 1626-56)


ಈ ದೊರೆಗೆ ಸೇರಿದ ಚಿನ್ನ ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಚಿನ್ನದ ನಾಣ್ಯಗಳು ವೃತ್ತಾಕಾರದಲ್ಲಿದ್ದು ಅವುಗಳ ಅಗಲ 0.4". ಅವುಗಳ ತೂಕ 52 ಗ್ರೇನ್.

ಮು : ಜಹಾಂ ಜಿ ಇನ್ ದೊ ಮುಹಮ್ಮದ್ ಗಿರಿಫ್ತ್ ಜಿನತ್ ಬಜಹ್

ಹಿ : ಯಕಿ ಮುಹಮ್ಮದಿ ಇ ಮುರ್ಸಲ್ ದುವಂ ಮುಹಮ್ಮದ್ ಶಾಹ್

ಈ ಮುಮ್ಮುಖ ಮತ್ತು ಹಿಮ್ಮುಖಗಳ ಬರಹವನ್ನು ಒಟ್ಟುಗೂಡಿಸಿ ಓದಿದರೆ ಒಂದು ಸುಂದರ ಪದ್ಯವಾಗುತ್ತದೆ; ಇದರಿಂದ ಎರಡು ಅರ್ಥಗಳು ಹೊರಹೊಮ್ಮುತ್ತವೆ. ಮೊದಲನೆಯದು ಪ್ರವಾದಿ ಮುಹಮ್ಮದ್‌ಗೆ ಸಂಬಂಧಿಸಿದ್ದು ಈ ಪ್ರಪಂಚಕ್ಕೆ ಸೌಂದರ್ಯ

ಮತ್ತು ಘನತೆಯನ್ನು ಕೊಟ್ಟವರು ಇಬ್ಬರು - ಮೊದಲನೆಯವರು ಪ್ರವಾದಿ ಮುಹಮ್ಮದ್". ಎರಡನೆಯ ಅರ್ಥದಲ್ಲಿ ಇದು ಅವನ ರಾಣಿಯನ್ನು ಹೊಗಳುತ್ತದೆ." ಈ ಪ್ರಪಂಚಕ್ಕೆ ಸೌಂದರ್ಯ ಮತ್ತು ಘನತೆಯನ್ನು ಕೊಟ್ಟವರು ಇಬ್ಬರು. ಮೊದಲನೆಯವರು ಪ್ರವಾದಿ ಮುಹಮ್ಮದ್; ಎರಡನೆಯವರು ದೊರೆ ಮುಹಮ್ಮದನ ರಾಣಿ ಜಹಾನ್. ಈ ರೀತಿಯ ಪದ್ಯಗಳು ಮುಘಲ್ ನಾಣ್ಯಗಳಲ್ಲಿ ವಿಶೇಷವಾಗಿ ಕಂಡುಬರುತ್ತವೆ.



ಈ ಸುಲ್ತಾನನು ಹೊರಡಿಸಿದ ಒಂದು ಫರ್ಮಾನ್, ಆಗಿನ ಕಾಲದ ನಾಣ್ಯ ಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತದೆ. ಈ ಸುತ್ತೋಲೆಯ ಕಾಲ ಕ್ರಿ.ಶ. 1654. ಶೋಲಾಪುರದ ಆಡಳಿತಾಧಿಕಾರಿ ಹಸನ್ ರೂಮಿಖಾನ್ ಎನ್ನುವವನಿಗೆ ಕಳುಹಿಸಿದ ಸುತ್ತೋಲೆ ಇದು. ಇದರಲ್ಲಿ ಈ ಸುಲ್ತಾನ್ ಹೀಗೆ ಹೇಳಿದ್ದಾನೆ. "ಲೇವಾದೇವಿ ಮಾಡುವವರು ವ್ಯಾಪಾರಿಗಳು ಮತ್ತು ಇತರ ಪ್ರಜೆಗಳು, ಅದರಲ್ಲಿಯೂ ವಿಶೇಷವಾಗಿ ಸಂದಲಾಪುರದ ವಿಭಾಗಕ್ಕೆ ಸೇರಿದವರು ನಮ್ಮ (ಮುಹಮ್ಮದ್ ಶಾಹ್) ಮುದ್ರೆಯಿರುವ ಹೊನ್ನುಗಳನ್ನು ಸ್ವೀಕರಿಸುತ್ತಿಲ್ಲವಂತೆ; ಆದರ ಬದಲಿಗೆ ಸಣ್ಣ ಮೌಲ್ಯದ ನಾಣ್ಯಗಳನ್ನು ಕೊಡುತ್ತಿಲ್ಲವಂತೆ ಮತ್ತು ವ್ಯಾಪಾರ ವಹಿವಾಟಿನಲ್ಲಿ ಅದನ್ನು ಉಪಯೋಗಿಸುತ್ತಿಲ್ಲವಂತೆ. ನಮ್ಮ ಮುದ್ರೆಯಿರುವ ನಾಣ್ಯಗಳನ್ನು ತಿರಸ್ಕರಿಸುವುದಕ್ಕೆ, ಅದೆಷ್ಟು ಧೈರ್ಯ? ದಖ್ಖಿನ್ ಪರಿಭಾಷೆಯಲ್ಲಿ 43.1 ಆಯರ್ ಅಥವಾ ಕಾಸ್ ಶುದ್ಧತೆಯ ಚಿನ್ನದ ಹೊನ್ನುಗಳನ್ನು (ಶೇ. 82.69 ಶುದ್ಧತೆ) ಯಾರು ಖೋಟ ಎಂದು ಹೇಳುತ್ತಾರೋ, ಅವುಗಳನ್ನು ತಿರಸ್ಕರಿಸುತ್ತಾರೋ, ಅವುಗಳಿಗೆ ಬದಲಾಗಿ ಸಣ್ಣ ಪ್ರಮಾಣದ ನಾಣ್ಯಗಳನ್ನು ಕೊಡಲು ನಿರಾಕರಿಸುತ್ತಾರೋ, ಅಂತಹವರನ್ನು ಸರಿಯಾಗಿ ಶಿಕ್ಷಿಸಬೇಕು. ಅವರ ಸ್ಥಿರ ಮತ್ತು ಚರಾಸ್ತಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬೇಕು. ಕಡಿಮೆ ಶುದ್ಧತೆಯ ಚಿನ್ನದ ಹೊನ್ನುಗಳು ಕಂಡುಬಂದರೆ, ಅವುಗಳನ್ನು ರಾಜ್ಯದ ಟಂಕಶಾಲೆಗೆ ಕಳುಹಿಸಬೇಕು; ಅಲ್ಲಿ ಅವುಗಳನ್ನು ಕರಗಿಸಿ ಸರಿಯಾದ ಶುದ್ಧತೆಯ ನಾಣ್ಯಗಳನ್ನು ತಯಾರಿಸುತ್ತಾರೆ."

ನಾಣ್ಯದ ಮೇಲೆ ಯಾವ ರೀತಿ ನಿಯಂತ್ರಣವನ್ನು ಸರ್ಕಾರ ಹೊಂದಿತ್ತು ಎಂಬುದು ಇದರಿಂದ ಗೊತ್ತಾಗುತ್ತದೆ.


ಈ ಸುಲ್ತಾನನ ತಾಮ್ರದ ನಾಣ್ಯಗಳು ಚಿನ್ನದ ನಾಣ್ಯಗಳಲ್ಲಿ ಕಂಡುಬರುವ ಬರಹವನ್ನೇ ಹೊಂದಿವೆ. ಆದರೆ ಬರಹವನ್ನು ವಿನ್ಯಾಸಗೊಳಿಸುವುದರಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಈ ತಾಮ್ರದ ನಾಣ್ಯಗಳು 270, 180 120 ಮತ್ತು 60 ಗ್ರೇನ್ ತೂಕಗಳಲ್ಲಿ ಕಾಣಬರುತ್ತವೆ. ಇವು ವೃತ್ತಾಕಾರದಲ್ಲಿದ್ದು ಇವುಗಳ ಅಗಲ 0.5" ರಿಂದ 0.85".

ಇವನ ನಾಣ್ಯಗಳ ಮೇಲೆ ತನ್ನನ್ನು ಪ್ರವಾದಿ ಮುಹಮ್ಮದನಿಗೆ ಹೋಲಿಸಿಕೊಂಡಿದ್ದು ಇಸ್ಲಾಮಿನ ಧಾರ್ಮಿಕ ಮುಖಂಡರಿಗೆ ಸರಿತೋರಲಿಲ್ಲವೆಂದು ಕಾಣುತ್ತದೆ. ಆದುದರಿಂದ ಮುಹಮ್ಮದ್ ಶಾಹ್ ತನ್ನ ಕೊನೆಯ ವರ್ಷಗಳಲ್ಲಿ ತನ್ನ ನಾಣ್ಯದ ಮೇಲಿದ್ದ ಪದ್ಯವನ್ನು ಬದಲಾಯಿಸಿದನು. ಇದರ ಪ್ರಕಾರ ತನ್ನ ಹೆಸರನ್ನು ಮಾತ್ರ ನಾಣ್ಯಗಳ ಮೇಲೆ ಬರೆಯಿಸಿದನು. ಈ ರೀತಿಯ ನಾಣ್ಯಗಳು ಬಹಳ ವಿರಳ.

ಎರಡನೆಯ ಅಲಿ ಆದಿಲ್ ಶಾಹ್ (ಕ್ರಿ.ಶ. 1656-72)

ಈ ಸುಲ್ತಾನನ ಬೆಳ್ಳಿಯ ಲಾರಿನ್‌ಗಳು ಮತ್ತು ತಾಮ್ರದ ನಾಣ್ಯಗಳು ದೊರಕಿವೆ. ಇವನು ಬೆಳ್ಳಿಯ ವಿಶಿಷ್ಟ ರೀತಿಯ, ಅದರಲ್ಲಿಯೂ ವಿದೇಶೀ ಮಾದರಿಯ ಲಾರಿನ್‌ಗಳನ್ನು ಟಂಕಿಸಿದ್ದು ಊಹೆಗೂ ನಿಲುಕದ ಸಂಗತಿ. ಬಹುಶಃ ಇದು ವಿದೇಶೀ ವರ್ತಕರ ಅನುಕೂಲಕ್ಕಾಗಿ ತಯಾರಿಸಿದ ನಾಣ್ಯಗಳಿರಬೇಕು. ರಾಜ್ಯದ ಇತರ ಕಡೆಗಳಲ್ಲಿ ಇದು ಉಪಯೋಗದಲ್ಲಿತ್ತು ಎಂದು ಹೇಳುವುದು ಕಷ್ಟ. ಇವನು ಎರಡು ನಮೂನೆಯ ಬೆಳ್ಳಿಯ ಲಾರಿನ್‌ಗಳನ್ನು ಟಂಕಿಸಿದನು. ಮೊದನೆಯದರ ಉದ್ದ 3.75". ಇದರ ತೂಕ 74 ಗ್ರೇನ್. ಈ ಲಾರಿನ್‌ಗಳ ಒಳಮುಖದಲ್ಲಿ ಮಾತ್ರ ಬರಹವಿರುತ್ತದೆ. ಇದರಲ್ಲಿ ಕಾಣಬರುವ ಬರಹವೆಂದರೆ ಸುಲ್ತಾನ್ ಅಲಿ ಆದಿಲ್ ಶಾಹ್ ದರ್ಬ್ ಇ ಲಾರಿ ಡಾಂಗೆ 1077. ಇಲ್ಲಿ ಕಾಣಬರುವ ವರ್ಷದ ಸಹಾಯದಿಂದ ಈ ಲಾರಿನ್ ನಾಣ್ಯವನ್ನು ಈ ಸುಲ್ತಾನನಿಗೆ ಸಂಬಂಧಿಸಿದ್ದೆಂದು ತೀರ್ಮಾನಿಸಬಹುದು.





ಎರಡನೆಯ ನಮೂನೆಯ ಲಾರಿನ್ ಉದ್ದ 1.75". ಇದರ ತೂಕ 70 ಗ್ರೇನ್. ಇದರ ಒಳಮುಖದಲ್ಲಿ ಮೇಲೆ ಕಾಣಿಸಿರುವ ಬರಹವೇ ಕಂಡುಬರುತ್ತದೆ.

ಮು : ಅಲಿ ಆದಿಲ್ ಶಾಹ್ 1067


ಹಿ : ಗುಲಾಂ ಇ ಹೈದರ್ ಇ ಸಫ ದರ್

ಸಿಕಂದರ್ ಆದಿಲ್ ಶಾಹ್ (ಕ್ರಿ. ಶ. 1672-86)

ಈ ಸುಲ್ತಾನನ ತಾಮ್ರದ ನಾಣ್ಯಗಳು 180, 120 ಮತ್ತು 60 ಗ್ರೇನ್ ತೂಕದಲ್ಲಿ ಕಂಡುಬಂದಿವೆ. ಇವು ವೃತ್ತಾಕಾರದ ನಾಣ್ಯಗಳು.

ಮು : ಸುಲ್ತಾನ್ ಸಿಕಂದರ್ ಕಾದಿರಿ 1086

ಹಿ : ಖುಸ್ರು ಇ ಗಿತಿ ಸಿತನ್



3. ಬರೀದ್ ಶಾಹಿ ನಾಣ್ಯಗಳು

ಬಹಮನಿ ಸುಲ್ತಾನರು ಅಶಕ್ತರಾದುದನ್ನು ಗಮನಿಸಿದ ಬರೀದ್ ಶಾಹಿ ವಂಶದ ಅಧಿಕಾರಿಗಳು ಸ್ವತಂತ್ರರಾದರು. ಬಹಮನಿ ಸುಲ್ತಾನನಾದ ವಲಿಯುಲ್ಲ ರಾಜಧಾನಿಯಿಂದ ಓಡಿಹೋದ ಕೂಡಲೆ ಅಮೀರ್ ಬರೀದನು ಶಾಹ್ ಎಂಬ ಬಿರುದನ್ನು ಧರಿಸಿ ತಾನೇ ಸುಲ್ತಾನನಾದನು. ಬೀದರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಅಲಿ ಬರೀದ್, ಇಬ್ರಾಹಿಂ ಬರೀದ್, ಕಾಸಿಂ ಬರೀದ್ ಮುಂತಾದ ಸುಲ್ತಾನರು ರಾಜ್ಯವಾಳಿದರು. ಕೊನೆಗೆ ಇಬ್ರಾಹಿಂ ಆದಿಲ್ ಶಾಹ್ ಬೀದರಿಗೆ ಮುತ್ತಿಗೆ ಹಾಕಿದನು. ಅಮೀರ್ ಬರೀದನು ಸೆರೆಸಿಕ್ಕಿದನು. ಇದರಿಂದಾಗಿ ಬರೀದ್ ಶಾಹಿ ರಾಜ್ಯ ಕೊನೆಗೊಂಡಿತು.

ಬರೀದ್ ಶಾಹಿ ನಾಣ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿಲ್ಲ. ಇವರು ಆರಂಭದಲ್ಲಿ ನಾಣ್ಯಗಳನ್ನು ಟಂಕಿಸಿದಂತೆ ಕಾಣುವುದಿಲ್ಲ. ಬಹಮನಿಯ ನಾಣ್ಯಗಳನ್ನೇ ಉಪಯೋಗಿಸುತ್ತಿದ್ದರು. ತಮ್ಮ ಸಾಮರ್ಥ್ಯವನ್ನು ಬಲಪಡಿಸಿಕೊಂಡ ನಂತರ ತಮ್ಮದೇ ಆದ ನಾಣ್ಯಗಳನ್ನು ಟಂಕಿಸಲು ಆರಂಭಿಸಿದರು. ನಾಲ್ಕನೆಯ ಬರೀದ್ ಶಾಹಿ ಸುಲ್ತಾನನಾದ ಇಬ್ರಾಹಿಂ ಬರೀದನ ಕಾಲದಿಂದ ಈ ರಾಜವಂಶದ ನಾಣ್ಯಗಳು ದೊರಕುತ್ತವೆ.

ಆದುದರಿಂದ ಇವನೇ ಬರೀದ್ ಶಾಹಿ ನಾಣ್ಯಗಳನ್ನು ಟಂಕಿಸಲು ಆರಂಭಿಸಿದ ಮೊದಲನೆಯ ದೊರೆ ಎಂದು ಹೇಳಬಹುದು. ಇದುವರೆಗೆ ಬರೀದ್ ಶಾಹಿ ಸುಲ್ತಾನರ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ದೊರಕಿಲ್ಲ. ದೊರಕಿರುವ ನಾಣ್ಯಗಳೆಲ್ಲ ತಾಮ್ರದಿಂದ ತಯಾರು ಮಾಡಿದವು. ಇವರ ನಾಣ್ಯಗಳ ಮೇಲೆ ಸುಲ್ತಾನರ ಹೆಸರುಗಳು ಕಾಣಬರುವುದಿಲ್ಲ; ಆದರೆ ಅವರ ಬಿರುದುಗಳು ಮಾತ್ರ ಕಾಣಸಿಗುತ್ತವೆ. ಆದುದರಿಂದ ಈ ನಾಣ್ಯಗಳ ಮೇಲೆ ಕಂಡುಬರುವ ವರ್ಷಗಳಿಂದಾಗಿ ಈ ನಾಣ್ಯಗಳನ್ನು ಟಂಕಿಸಿದ ಸುಲ್ತಾನರ ಹೆಸರನ್ನು ಗುರುತಿಸಬಹುದು. ಇವರ ನಾಣ್ಯಗಳ ಮೇಲೆ ಇವನ ವಾಂಶಿಕ ಬಿರುದು 'ಅಸ್ ಸುಲ್ತಾನ್ ಅಮೀರ್ ಬರೀದ್ ಶಾಹ್' ಕಾಣಬರುತ್ತದೆ. ಕೆಲವು ನಾಣ್ಯಗಳ ಮೇಲೆ 'ಬರೀದ್ ಬಾರಕ್' (ಬರೀದ್ ವಂಶದ ವಾಹಕ) ಎನ್ನುವ ಬಿರುದೂ ಕಾಣಬರುತ್ತದೆ. ಶಾಸನಗಳಲ್ಲಿ ಇವನಿಗೆ 'ಬರೀದ್ - ಉಲ್ - ಮಮಾಲಿಕ್' (ಸಾಮ್ರಾಜ್ಯದ ವಾಹಕ) ಎನ್ನುವ ಬಿರುದು ಕಾಣಸಿಗುತ್ತದೆ. ಬರೀದ್ ಶಾಹಿ ನಾಣ್ಯಗಳು ವೃತ್ತಾಕಾರದಲ್ಲಿದ್ದು ಇವುಗಳ ಅಗಲ 0.6" ರಿಂದ 0.9". ಇವರ ತಾಮ್ರದ ನಾಣ್ಯಗಳು 290, 260, 180,160, 120 90 ಮತ್ತು 60 ಗ್ರೇನ್ ತೂಕದಲ್ಲಿ ಕಂಡುಬಂದಿವೆ. ಈಗ ದೊರಕಿರುವ ನಾಣ್ಯಗಳನ್ನು ಗಮನಿಸಬಹುದು.

ಇಬ್ರಾಹಿಂ ಬರೀದ್

ಇವನು ಈ ರಾಜವಂಶದ ನಾಲ್ಕನೆಯ ಸುಲ್ತಾನ. ಬಹುಶಃ ನಾಣ್ಯಗಳನ್ನು ಮೊಟ್ಟಮೊದಲ ಬಾರಿಗೆ ಬರೀದ್ ಶಾಹಿ ಹೆಸರಿನಲ್ಲಿ ಟಂಕಿಸಿದ ಕೀರ್ತಿ ಇವನಿಗೆ ಸೇರುತ್ತದೆ. ಇವನ ಅನೇಕ ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ನಾಣ್ಯದ ತೂಕ 125 ಗ್ರೇನ್; ಅಗಲ 0.65".

ಮು : ಅಲ್ ಮುವಯ್ಯಿದ್ ಬಿ
ನಸ್ರಿಲ್ಲಾಹಿಲ್ 993

ಹಿ : ಅಲ್ ಸುಲ್ತಾನ್
ಅಮಿರ್ ಬರೀದ್ ಶಾಹ್






ಎರಡನೆಯ ನಮೂನೆಯ ನಾಣ್ಯದ ತೂಕ 160 ಗ್ರೇನ್; ಅಗಲ 0.75".

ಮು : ಅಲ್ ಮುವಯ್ಯಿದ್ ಬಿ

ನಸ್ರಿಲ್ಲಾಹಿಲ್ ಘನಿ

ಹಿ : ಮೇಲಿನ ನಾಣ್ಯದಂತೆ

ಮೂರನೆಯ ನಮೂನೆಯ ನಾಣ್ಯ ಮೇಲಿನ ನಾಣ್ಯವನ್ನು ಎಲ್ಲ ರೀತಿಯಲ್ಲೂ ಹೋಲುತ್ತದೆ. ಆದರೆ ಹಿಮ್ಮುಖದಲ್ಲಿ 'ಬಾನಿ' ಅಂದರೆ 'ನಿರ್ಮಾಪಕ' ಎನ್ನುವ ಬಿರುದು ಹೊಸದಾಗಿ ಸೇರಿಸಲ್ಪಟ್ಟಿದೆ. ನಿಜವಾಗಿಯೂ ಇವನೇ ಈ ವಂಶದ ಬೆಳವಣಿಗೆಗೆ ಕಾರಣೀಭೂತನಾದವನು. ಆದುದರಿಂದ ಈ ಹೊಸ ಬಿರುದು ಇವನಿಗೆ ಸಮಂಜಸವೆನಿಸುತ್ತದೆ.



ನಾಲ್ಕನೆಯ ನಮೂನೆಯ ನಾಣ್ಯ ಆಸಕ್ತಿಕರವಾದುದು. ಇದರ ಮುಮ್ಮುಖದಲ್ಲಿ ಕಲಿಮುಲ್ಲನ ಹೆಸರು ಮತ್ತು 993 ಎಂಬ ವರ್ಷ ಕಂಡುಬಂದರೆ, ಹಿಮ್ಮುಖದಲ್ಲಿ ಅಮೀರ್ ಬರೀದ್ ಶಾಹ್ ಎಂಬ ಹೆಸರು ಕಾಣಬರುತ್ತದೆ. ಬಹುಶಃ ಪರಿಸ್ಥಿತಿಗೆ ಹೆದರಿ ಈ ನಾಣ್ಯವನ್ನು ಬಿಡುಗಡೆ ಮಾಡಿರಬೇಕು. ಯಾರಿಂದಲೂ ವಿರೋಧ ವ್ಯಕ್ತಪಡದೇ ಇದ್ದುದರಿಂದ ಮುಂದಿನ ನಾಣ್ಯಗಳಲ್ಲಿ ಕಲಿಮುಲ್ಲ ಹೆಸರನ್ನು ಪೂರ್ಣವಾಗಿ ಕೈಬಿಟ್ಟಿರಬೇಕು ಎಂದು ಭಾವಿಸಬಹುದು.

ಮು : ಕಲಿಮುಲ್ಲ 993

ಹಿ : ಸುಲ್ತಾನ್ ಅಮೀರ್ ಬರೀದ್ ಶಾಹ್

ಎರಡನೆಯ ಕಾಸಿಂ ಬರೀದ್ ಶಾಹ್

ಈ ದೊರೆಯ ತಾಮ್ರದ ನಾಣ್ಯದ ತೂಕ 180 ಗ್ರೇನ್; ಅಗಲ 0.65". ಇದರ ಮೇಲೆ 987 ಎನ್ನುವ ವರ್ಷವಿರುವುದರಿಂದ ಈ ನಾಣ್ಯವು ಕಾಸಿಂ ಬರೀದನಿಗೆ ಸೇರಿದ್ದೆಂದು ತೀರ್ಮಾನಿಸಲಾಗಿದೆ.

ಮು : ಅಲ್ ಮುವಯ್ಯಿದ್ ಬಿ
ನಸ್ರಿಲ್ಲಾಹಿಲ್ ಸುಲ್ತಾನ್


ಹಿ : ಅಲ್ ಸುಲ್ತಾನ್
ಅಮೀರ್ ಬರೀದ್ ಶಾಹ್ 987

ಮಿರ್ಜ ಅಲಿ ಬರೀದ್ ಶಾಹ್

ಇವನು ಈ ರಾಜವಂಶದ ಎಂಟನೆಯ ಸುಲ್ತಾನ್. ಇವನ ಎರಡು ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ನಾಣ್ಯದ ತೂಕ 290 ಗ್ರೇನ್; ಅಗಲ 0.8".

ಮು : ಅಲ್ ಮುವಯ್ಯಿದ್ ಬಿ ನಸ್ರಿಲ್ಲಾ
ಮಲಿಕಿಲ್ ಕವಿಯಿಲ್ ಘನಿ

ಹಿ : ಅಲ್ ಸುಲ್ತಾನ್ ಅದಿಲ್ ಅಮೀರ್
ಬರೀದ್ ಶಾಹ್ ಬಾರಕ್ 1018



ಈ ನಾಣ್ಯದ ಮೇಲೆ 'ಬಾರಕ್' ಮತ್ತು 'ಅದಿಲ್' (ನ್ಯಾಯಯುತ ದೊರೆ) ಎಂಬ ಬಿರುದುಗಳಿರುವುದು ಗಮನಾರ್ಹ. ಇದರ ಮೇಲಿರುವ ವರ್ಷದಿಂದಾಗಿ ಈ ನಾಣ್ಯವು ಮಿರ್ಜ ಅಲಿಗೆ ಸೇರಿದ್ದೆಂದು ತೀರ್ಮಾನಿಸಬಹುದು.

ಇವನ ಎರಡನೆ ನಮೂನೆಯ ತಾಮ್ರದ ನಾಣ್ಯದ ತೂಕ 105 ಗ್ರೇನ್; ಅಗಲ 0.6".

ಮು : ಅಲ್ ಸುಲ್ತಾನಲ್ ಅದಿಲ್

ಹಿ : ಅಮೀರ್ ಬರೀದ್ ಶಾಹ್

ಮುಮ್ಮುಖದಲ್ಲಿರುವ 'ಅದಿಲ್' ಎನ್ನುವ ಬಿರುದಿನ ಆಧಾರದ ಮೇಲೆ ಈ ನಾಣ್ಯವು ಮಿರ್ಜ ಅಲಿಗೆ ಸೇರಿದ್ದೆಂದು ತೀರ್ಮಾನಿಸಲಾಗಿದೆ. ಏಕೆಂದರೆ ಮೇಲಿನ ನಾಣ್ಯದಲ್ಲಿಯೂ ಆ ಬಿರುದನ್ನು ಕಾಣುತ್ತೇವೆ.

4. ಕಲ್ಯಾಣದ ನವಾಬರ ನಾಣ್ಯಗಳು

ಪ್ರಾಚೀನ ಕರ್ನಾಟಕದಲ್ಲಿ ವಿಜೃಂಭಿಸಿದ ಕಲ್ಯಾಣನಗರಿಯು ಮಧ್ಯಕಾಲೀನ ಇತಿಹಾಸದಲ್ಲಿ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡು, ಸಾಮಾನ್ಯ ನಗರವಾಗಿದ್ದಿತು. ಅನಂತರ ಅದು ಅಸಫ್ ಜಾಹಿ ಸುಲ್ತಾನರ ರಾಜ್ಯದಲ್ಲಿ ಸೇರಿಹೋಯಿತು. ಮೊದಲನೆಯ ಅಸಫ್ ಜಾ ಸುಲ್ತಾನನು ತನ್ನ ಮಗಳ ಮದುವೆಯ ಸಮಯದಲ್ಲಿ, ಕ್ರಿ.ಶ. 1772ರಲ್ಲಿ, ಈ ನಗರವನ್ನು ಜಹಗೀರಾಗಿ, ನವಾಬ್ ಸೈಯದ್ ಇಬ್ರಾಹಿಂ ಹುಸೇನ್ ಮೀರ್ ಖಾನ್ (2) ಗೆ ಕೊಟ್ಟನು. ಅಂದಿನಿಂದ ಅದು ಒಂದು ರೀತಿಯ ಸ್ವತಂತ್ರ ಜಹಗೀರ್ ಆಗಿ 1950ರ ವರೆಗೆ ಮುಂದುವರಿಯಿತು. ಇಲ್ಲಿನ ಆಳ್ವಿಕೆಯನ್ನು ಕಲ್ಯಾಣದ ನವಾಬರು ನೋಡಿಕೊಳ್ಳುತ್ತಿದ್ದರು. ಅವರು ಕಲ್ಯಾಣನಗರದಲ್ಲಿ ಒಂದು ಟಂಕಶಾಲೆಯನ್ನು ಸ್ಥಾಪಿಸಿದರು. ಈ ಟಂಕಶಾಲೆಯಿದ್ದ ರಸ್ತೆಯನ್ನು ಟಂಕಶಾಲೆ ಗಲ್ಲಿ ಎಂದು ಕರೆಯಲಾಗುತ್ತಿದ್ದಿತು. ಕ್ರಿ.ಶ. 1787ರಲ್ಲಿ ಈ ಟಂಕಶಾಲೆಯು ಕಾರ್ಯ ನಿರ್ವಹಿಸುತ್ತಿದ್ದಿತೆಂಬುದು ಎರಡನೆಯ ಅಸಫ್ ಜಾ ಸುಲ್ತಾನನ ಒಂದು ಫರ್ಮಾನಿನಿಂದ ತಿಳಿದುಬರುತ್ತದೆ. ಇದು ಎಲ್ಲಿಯವರೆಗೆ ಕಾರ್ಯನಿರತವಾಗಿದ್ದು ನಾಣ್ಯಗಳನ್ನು ಅಚ್ಚು ಮಾಡುತ್ತಿದ್ದಿತು ಎನ್ನುವುದು ಮಾತ್ರ ತಿಳಿದುಬಂದಿಲ್ಲ. ಈಗ ನಮಗೆ ಈ ಟಂಕಶಾಲೆಯಲ್ಲಿ ಅಚ್ಚು ಮಾಡಿದ ನವಾಬ್ ಸೈಯದ್ ಮೊಹಮ್ಮದ್ ಶಾಹ್ ಖೈರುದ್ದೀನನಿಗೆ ಸೇರಿದ ನಾಣ್ಯಗಳು ಮಾತ್ರ ದೊರಕಿವೆ. ಇತರ ನವಾಬರ ನಾಣ್ಯಗಳು ದೊರಕಿಲ್ಲ. ಆದುದರಿಂದ ಈ ನವಾಬನ ಕಾಲದಲ್ಲಿ ಮಾತ್ರ ಈ ಟಂಕಶಾಲೆಯು ಕಾರ್ಯನಿರತವಾಗಿದ್ದಿತು ಎಂದು ಭಾವಿಸಬಹುದು. ಒಟ್ಟಿನಲ್ಲಿ ಇತರ ನವಾಬರ ನಾಣ್ಯಗಳು ದೊರಕಿಲ್ಲವೆಂಬುದು ಗಮನಿಸಬೇಕಾದ ಅಂಶ.

ಈ ನಾಣ್ಯಗಳು ಬೆಳ್ಳಿಯ ರುಪಾಯಿಗಳು. ಇವು ವೃತ್ತಾಕಾರದಲ್ಲಿದ್ದು ಇವುಗಳ ತೂಕ 180 ಗ್ರೇನ್; ಅಗಲ 0.8". ಇವುಗಳ ಮುಮ್ಮುಖದಲ್ಲಿ ಕಲಿಮದ ಬರಹವಿರುತ್ತದೆ. ಹಿಮ್ಮುಖದಲ್ಲಿ 'ಖೆ' ಎಂಬ ಅಕ್ಷರವಿದೆ. ಇದು ಖೈರುದ್ದೀನನನ್ನು ಸೂಚಿಸುತ್ತದೆ. ಕೆಳಗಡೆ ಹಿಜಿರ ವರ್ಷವಿರುತ್ತದೆ. ಅದರ ಕೆಳಗೆ ಹುಲಿಯ ಚಿತ್ರ ಮತ್ತು ಟಂಕಶಾಲೆಯ ಹೆಸರು ಕಾಣಬರುತ್ತದೆ. ಇದುವರೆಗೆ ದೊರಕಿರುವ ನಾಣ್ಯಗಳ ಮೇಲೆ ಹಿಜಿರ ಸಂಖ್ಯೆ 1212, 1221 ಮತ್ತು 1226 ಕಂಡುಬಂದಿವೆ. ಇಲ್ಲಿ ಕಾಣಬರುವ ಹುಲಿಯ ಚಿತ್ರಕ್ಕೆ ಒಂದು ಐತಿಹ್ಯವಿದೆ. ಈ ನಗರದಲ್ಲಿ ಹಜರತ್ ರಾಜಾ ಬಾಘ್ಸವಾರ್ ಎಂಬ ಸೂಫಿ ಸಂತನಿದ್ದನು. ಅವನನ್ನು ಕಂಡರೆ ನವಾಬ ಖೈರುದ್ದೀನನಿಗೆ ವಿಶೇಷವಾಗಿ ಗೌರವ. ಆದುದರಿಂದ ಈ ಸಂತನ ಗೌರವಾರ್ಥವಾಗಿ (ಬಾಘ್) ಹುಲಿಯ ಚಿತ್ರವನ್ನು ಈ ನಾಣ್ಯಗಳ ಮೇಲೆ ಹಾಕಿಸಿದನು.

ಈ ಮೇಲಿನ ನಾಣ್ಯ ಒಂದು ರೂಪಾಯಿ ಮೌಲ್ಯದ್ದಾದರೆ, ಇದರ ಎಂಟನೆಯ ಒಂದು ಭಾಗದ ರೂಪಾಯಿಯ ಬೆಳ್ಳಿಯ ನಾಣ್ಯ ಇತ್ತೀಚೆಗೆ ದೊರಕಿದೆ. ಇದರ ತೂಕ 25 ಗ್ರೇನ್; ಅಗಲ 0.8". ಮುಮ್ಮುಖದಲ್ಲಿ ಕಲಿಮದ ಬರಹವಿದೆ. ಹಿಮ್ಮುಖದಲ್ಲಿ ಬರಹ ಮತ್ತು ವರ್ಷವಿದೆ.

5. ಬಾಗಲಕೋಟೆಯ ಮಲ್ಹಾರ್ ಶಾಹೀ ರುಪಾಯಿಗಳು

ಆದಿಲ್ ಶಾಹಿಯುವರ ಕಾಲದಿಂದ ಬಾಗಲಕೋಟೆಯುಲ್ಲಿ ಒಂದು ಟಂಕಶಾಲೆಯಿದ್ದಿತು. ಆನಂತರದ ರಾಜಕೀಯ ಕಾರಣಗಳಿಂದಾಗಿ ಮುಘಲರು ಮತ್ತು ಮರಾಠರ ನಡುವಿನ ಯುದ್ಧಗಳಿಂದ ಈ ನಗರ ಕ್ಷೋಭೆಗೆ ಬಲಿಯಾಗಿತ್ತು. ಕೊನೆಗೆ ಕ್ರಿ.ಶ. 1757ರಲ್ಲಿ ಇದು ಮಲ್ಹಾರ್ ರಾವ್‌ನ ವಶಕ್ಕೆ ಬಂದಿತು. ಇವನು ಇಲ್ಲಿನ ಟಂಕಶಾಲೆಯಿಂದ ತನ್ನದೇ ಆದ ರೂಪಾಯಿಗಳನ್ನು ಅಚ್ಚುಮಾಡಿಸಲು ಆರಂಭಿಸಿದನು. ಇವು ಮಲ್ಹಾರ್ ಶಾಹೀ ರುಪಾಯಿ ಎನ್ನುವ ಹೆಸರಿನಿಂದ ಪ್ರಸಿದ್ಧಿ ಪಡೆದವು. ವಾಸ್ತವವಾಗಿ ಈ ಟಂಕಶಾಲೆಯನ್ನು ಗುತ್ತಿಗೆದಾರರು ನಡೆಸುತ್ತಿದ್ದರು. ಸರ್ಕಾರ ಇದರ ಮೇಲೆ ಪೂರ್ಣ ನಿಯಂತ್ರಣವನ್ನು ಹೊಂದಿತ್ತು.

ಮಲ್ಹಾರ್ ಶಾಹೀ ರುಪಾಯಿಗಳನ್ನು ಜೇಮ್ಸ್ ಪ್ರಿನ್ಸೆಪ್ ಬೆಳಕಿಗೆ ತಂದನು. ಆದರೆ ಇದನ್ನು ಸರಿಯಾಗಿ ಗುರುತಿಸುವಲ್ಲಿ ವಿಫಲನಾಗಿ, ಇವು ಇಂದೂರಿನ ಹೋಳ್ಕರ್‌ನ ನಾಣ್ಯಗಳೆಂದು ಅಭಿಪ್ರಾಯಪಟ್ಟನು. ಆನಂತರ ಸಿ.ಕೆ. ಪಾನಿಷ್ ಅವರು ಈ ನಾಣ್ಯಗಳನ್ನು ಸಮಗ್ರವಾಗಿ ಪರೀಕ್ಷಿಸಿ, ಇವು ಬಾಗಲಕೋಟೆಯಲ್ಲಿ ಟಂಕಿಸಲಾದ ನಾಣ್ಯಗಳೆಂದು ತೀರ್ಮಾನಿಸಿದರು. ವಾಸ್ತವವಾಗಿ ಮಲ್ಹಾರ್ ಶಾಹೀ ರುಪಾಯಿಗಳು ಖೋಟಾ ನಾಣ್ಯಗಳು. ಏಕೆಂದರೆ ಎರಡನೆಯ ಅಲಂಗೀರನ ಷಹಜಹಾನಾಬಾದ್‌ನ ರುಪಾಯಿಗಳ ನಕಲುಗಳೇ ಇವು. ಇವನ್ನು ಟಂಕಿಸಲು ಅಧಿಕೃತವಾದ ಪರವಾನಗಿಯನ್ನೂ ಪಡೆದಿರಲಿಲ್ಲ. ಆದರೂ ಕೂಡ ನಾಣ್ಯಗಳು ಚಲಾವಣೆಯಲ್ಲಿದ್ದವು.

ಸ್ವಲ್ಪ ಕಾಲಾನಂತರ ಈ ಪ್ರಾಂತ್ಯವು ಬ್ರಿಟಿಷರ ಆಡಳಿತಕ್ಕೆ ಸೇರಿತು. ಆಗ ಧಾರ್ವಾಡದ ಕಲೆಕ್ಟರ್ ಆಗಿದ್ದ ನಿಸ್‌ಬತ್ ಎಂಬಾತನು ಈ ಪ್ರಾಂತದ ಎಲ್ಲ ಟಂಕಶಾಲೆಗಳನ್ನೂ ತನ್ನ ಅಧೀನಕ್ಕೆ ತೆಗೆದುಕೊಂಡನು. ಸತಾರದ ರಾಜನು ಈಸ್ಟ್ ಇಂಡಿಯ ಕಂಪೆನಿಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದರ ಗುರುತಾಗಿ ಈ ರುಪಾಯಿಗಳ ಮೇಲೆ 1819 ಎನ್ನುವ ವರ್ಷವನ್ನು ಮುದ್ರಿಸಬೇಕೆಂದು ಆಜ್ಞೆ ಮಾಡಿದನು. ಮುಧೋಳದ

ಘೋರ್ಪಡೆಗಳು 1819 ರಿಂದ ಈ ರೀತಿಯ ರುಪಾಯಿಗಳನ್ನು ಟಂಕಿಸಲು ಆರಂಭಿಸಿದರು. ಆದರೆ ಇವುಗಳ ಬೆಳ್ಳಿಯು ಶೇಕಡ 16ರಷ್ಟು ಅಶುದ್ಧವಾಗಿದ್ದಿತು. ಕೊನೆಗೆ 1833ರಲ್ಲಿ ಬಾಗಲಕೋಟೆಯ ಟಂಕಶಾಲೆಯನ್ನು ಮುಚ್ಚಲಾಯಿತು. ಸ್ವಲ್ಪ ಕಾಲ ಮಲ್ಹಾರ್ ಶಾಹೀ ರುಪಾಯಿಗಳು ಅನಧಿಕೃತವಾಗಿ ಶೋಲಾಪುರದಿಂದ ಮುದ್ರಿತವಾಗುತ್ತಿದ್ದವು.

ಮಲ್ಹಾರ್ ಶಾಹೀ ರುಪಾಯಿಗಳು ಬೆಳ್ಳಿಯ ನಾಣ್ಯಗಳಾಗಿದ್ದು, ಅವುಗಳ ತೂಕ 172 ಗ್ರೇನ್; ಅಗಲ 0.8". ಈ ಕಾಲದ ಇತರ ನಾಣ್ಯಗಳೆಂದರೆ ಮಾಷ, ಗುಂಜಿ ಮತ್ತು ಆಣೆ; ಒಂದು ರುಪಾಯಿಗೆ 11 ಮಾಷ; 1 ಮಾಷಕ್ಕೆ 8 ಗುಂಜಿಗಳು; 1 ಗುಂಜಿಗೆ 16 ಆಣೆಗಳು. ರುಪಾಯಿ ನಾಣ್ಯಗಳ ಮೇಲೆ ಬಾಗಲಕೋಟೆಯ ಹೆಸರು ಮತ್ತು ಹಿಜಿರ ವರ್ಷ ಇರುತ್ತವೆ. ಈಗ ದೊರಕಿರುವ ರುಪಾಯಿಗಳು ಮೇಲೆ ಹಿಜಿರ ವರ್ಷ 1171, 1173 1179 ಮತ್ತು 1181 ಕಾಣಬರುತ್ತವೆ.

6. ಮುದ್ಗಲ್ ನಗರದ ತಾಮ್ರದ ನಾಣ್ಯಗಳು

ರಾಯಚೂರು ಜಿಲ್ಲೆಯ ಮುದ್ಗಲ್ ಪ್ರಾಚೀನ ಕಾಲದಿಂದ ಇತಿಹಾಸ ಪ್ರಸಿದ್ಧ ಸ್ಥಳ. ಸೇವುಣರ ಕಾಲದಲ್ಲಿ ಇದೊಂದು ಭದ್ರಕೋಟೆಯ ನಗರವಾಗಿತ್ತು. ಮಲಿಕ್ ನಾಯಬ್ ಸೇವುಣರನ್ನು ಸೋಲಿಸಿ, ಈ ನಗರವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಆನಂತರ ವಿಜಯನಗರದ ಅರಸರಿಗೂ ಬಹಮನಿ ಸುಲ್ತಾನರಿಗೂ ಇಲ್ಲಿ ಅನೇಕ ಯುದ್ಧಗಳು ನಡೆದವು. ಕೊನೆಗೆ ಕ್ರಿ.ಶ. 1685ರಲ್ಲಿ ಔರಂಗಜೇಬನ ನೇತೃತ್ವದಲ್ಲಿ ಈ ಕೋಟೆಯ ನಗರವು ಮುಘಲ್ ಸಾಮ್ರಾಜ್ಯದಲ್ಲಿ ವಿಲೀನವಾಯಿತು.

ಮುದ್ಗಲ್ ಟಂಕಶಾಲೆಯಲ್ಲಿ ಅಚ್ಚಾದ ಕೆಲವು ತಾಮ್ರದ ನಾಣ್ಯಗಳು ದೊರಕಿದ್ದು, ಇಲ್ಲಿ ಒಂದು ಪ್ರಖ್ಯಾತ ಟಂಕಶಾಲೆಯಿದ್ದಿತೆಂಬುದನ್ನು ಖಚಿತಪಡಿಸುತ್ತವೆ. ಇವುಗಳು 100, 120 140 ಮತ್ತು 180 ಗ್ರೇನ್ ತೂಕಗಳಲ್ಲಿ ದೊರಕಿವೆ. ಇವು ವೃತ್ತಾಕಾರದಲ್ಲಿದ್ದು ಇವುಗಳ ಅಗಲ ಸುಮಾರು 1.0". ಈ ನಾಣ್ಯಗಳ ಹಿಮ್ಮುಖದಲ್ಲಿ ಎಲೆಯಾಕಾರದ ವಿನ್ಯಾಸವಿದೆ. ಇದು ಮೆಹ್ರಬಿ ಎಂದು ಕೆಲವರು ಭಾವಿಸುತ್ತಾರೆ. ಇದರ ಒಳಗೆ 9 ರಿಂದ 13 ಚುಕ್ಕೆಗಳಿವೆ. ಇದರ ಅರ್ಥ ತಿಳಿದಿಲ್ಲ. ಮುಮ್ಮುಖದಲ್ಲಿ ಜರ್ಬ್ ಮುದ್ಕಲ್ ಅಸ್ತ್ ಎಂಬ ಬರಹವಿದ್ದರೆ ಹಿಮ್ಮುಖದಲ್ಲಿ ಎಲೆಯಾಕಾರದ ವಿನ್ಯಾಸ, ಹಿಜಿರ ವರ್ಷಗಳಿವೆ. ಕೆಲವು ನಾಣ್ಯಗಳ ಮೇಲೆ ಬಾದ್‌ಶಾಹ್, ಜುಲುಸ್ ಎಂಬ ಪದಗಳೂ ಕಾಣಬರುತ್ತವೆ. ಈ ನಾಣ್ಯಗಳನ್ನು ಟಂಕಿಸಿದವರು ಯಾರು ಎನ್ನುವ ವಿಷಯ ಖಚಿತವಾಗಿ ತಿಳಿದಿಲ್ಲ.


ಎರಡು ಊಹೆಗಳನ್ನು ಮಾಡಬಹುದು. ಕೆಲವು ದೃಷ್ಟಿಗಳಿಂದ ಇವು ಮುಘಲ್ ನಾಣ್ಯಗಳನ್ನು ಹೋಲುವುದರಿಂದ, ಇವು ಔರಂಗಜೇಬನ ಕಾಲದ ತಾಮ್ರದ ನಾಣ್ಯಗಳು ಎಂದು ಭಾವಿಸಬಹುದು. ಔರಂಗಜೇಬನು ಬಿಜಾಪುರ, ಗುಲ್ಬರ್ಗ, ಶೋಲಾಪುರ ಮುಂತಾದ ಟಂಕಶಾಲೆಗಳಿಂದ ನಾಣ್ಯಗಳನ್ನು ಅಚ್ಚು ಹಾಕಿಸಿದ್ದು ತಿಳಿದೇ ಇದೆ. ಅದೇ ರೀತಿಯಲ್ಲಿ ಇದು ಅವನ ಮುದ್ಗಲ್ ಟಂಕಶಾಲೆಯ ನಾಣ್ಯ ಎಂದು ಭಾವಿಸಬಹುದು. ಆದರೆ ಈ ನಾಣ್ಯಗಳು ಸುಂದರವಾಗಿಲ್ಲ ಹಾಗೂ ಅವುಗಳ ಮೇಲೆ ಮುಘಲ್ ನಾಣ್ಯಗಳಲ್ಲಿ ಕಾಣಬರುವ ಅಚ್ಚುಕಟ್ಟುತನವೂ ಕಾಣಬರುವುದಿಲ್ಲ. ಆದುದರಿಂದ ಸ್ಥಳೀಯ ವಜೀರರು ಅಥವಾ ಸರಾಫರು ಈ ನಾಣ್ಯಗಳನ್ನು ಅಚ್ಚು ಹಾಕಿಸಿದ್ದಿರಬೇಕು ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಉತ್ತಮ ನಮೂನೆಯ ನಾಣ್ಯಗಳು ದೊರಕಿ ಅವುಗಳ ಮೇಲಿರುವ ಬರಹವನ್ನು ಓದುವಂತಾದರೆ, ಆಗ ಇವುಗಳ ವಿಷಯದಲ್ಲಿ ಖಚಿತವಾದ ಅಭಿಪ್ರಾಯವನ್ನು ತಳೆಯವುದು ಸಾಧ್ಯವಾಗುತ್ತದೆ. ಅಲ್ಲಿಯವರೆಗೆ ಇವನ್ನು ಮುದ್ಗಲ್ ಟಂಕಶಾಲೆಯ ನಾಣ್ಯಗಳು ಎಂದು ಹೇಳಬೇಕಾಗಿದೆ.

7. ಕರ್ನಾಟಕದಲ್ಲಿ ಮುಘಲ್ ನಾಣ್ಯಗಳು

ಮುಘಲರು ಕ್ರಿ.ಶ. 1526ರಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರೂ, ಕರ್ನಾಟಕದ ರಾಜಕೀಯದಲ್ಲಿ ಅವರು ಅಷ್ಟೊಂದು ಆಸಕ್ತಿಯನ್ನು ತೋರಿಸಲಿಲ್ಲ. 1621ರಲ್ಲಿ ಬಿಜಾಪುರದ ಆದಿಲ್ ಶಾಹಿ ಸುಲ್ತಾನರು ಜಹಾಂಗೀರನಿಗೆ ಕಪ್ಪ ಕಾಣಿಕೆಗಳನ್ನು ಕೊಡಲು ಒಪ್ಪಿಕೊಂಡರು. ಆದರೆ ಇದನ್ನು ಸರಿಯಾಗಿ ಕೊಡಲಿಲ್ಲವಾದ ಕಾರಣದಿಂದ ಜಹಾಂಗೀರನು ಬಿಜಾಪುರದ ಮೇಲೆ 1636ರಲ್ಲಿ ದಂಡೆತ್ತಿ ಹೋಗಿ ಅವರನ್ನು ಸೋಲಿಸಿದನು. ವರ್ಷಕ್ಕೆ ಇಪ್ಪತ್ತು ಲಕ್ಷ ರುಪಾಯಿಗಳನ್ನು ಕೊಡುವುದಾಗಿ ಒಪ್ಪಿಕೊಂಡು ಬಿಜಾಪುರದ ಸುಲ್ತಾನನು ಒಪ್ಪಂದವನ್ನು ಮಾಡಿಕೊಂಡನು. ಈ ಮಧ್ಯದಲ್ಲಿ ಗೋಲ್ಕೊಂಡ ರಾಜ್ಯವನ್ನು ಮೀರ್ ಜುಮ್ಲನೆಂಬುವನಿಗೆ ಇದನ್ನು ಜಹಗೀರಿಯಾಗಿ ಕೊಡಲಾಯಿತು. 1657ರಲ್ಲಿ ಔರಂಗಜೇಬನು ಮೀರ್ ಜುಮ್ಲನ ಜೊತೆಗೂಡಿ ಬಿಜಾಪುರದ ಮೇಲೆ ದಂಡಯಾತ್ರೆ ನಡೆಸಿದನು. ಬಿಜಾಪುರದ ಸುಲ್ತಾನನು ಔರಂಗಜೇಬನನ್ನು ಚಕ್ರವರ್ತಿಯೆಂದು ಒಪ್ಪಿಕೊಂಡು ಬೀದರ್, ಕಲ್ಯಾಣ, ಕೊಂಕಣ ಮತ್ತಿತರ ಕೋಟೆಗಳನ್ನು ಮುಘಲರಿಗೆ ಒಪ್ಪಿಸಿದನು. ಈ ಮಧ್ಯೆ ತನ್ನ ಇತರ ಕೆಲಸಗಳ ಸಲುವಾಗಿ ಔರಂಗಜೇಬನು ದೆಹಲಿಗೆ ತೆರಳಿದನು. ಆದರೆ ಕ್ರಿ.ಶ. 1686ರ ಸಮಯಕ್ಕೆ ಉತ್ತರ ಕರ್ನಾಟಕದ ಅನೇಕ ಭಾಗಗಳು ಮುಘಲರ ವಶದಲ್ಲಿದ್ದವು. ಇತ್ತ ಕಡೆ ಮೈಸೂರಿನ ಒಡೆಯರ್ ಅವರು ಮುಘಲರನ್ನು ಎದುರಿಸುವಷ್ಟು ಸಮರ್ಥರಾಗಿಲ್ಲದೇ ಇದ್ದುದರಿಂದ

ಬೆಂಗಳೂರು, ಕೋಲಾರ, ತುಮಕೂರು ಮುಂತಾದ ಜಿಲ್ಲೆಗಳ ಭಾಗಗಳು ಔರಂಗಜೇಬನ ವಶಕ್ಕೆ ಸೇರಿದವು. ಆದರೆ ಮರಾಠರು ಮುಘಲರಿಗೆ ವಿರುದ್ಧವಾಗಿದ್ದುದರಿಂದ, ಮುಘಲರು ಪೂರ್ಣವಾಗಿ ತಮ್ಮ ಪ್ರಾಬಲ್ಯವನ್ನು ಕರ್ನಾಟಕದಲ್ಲಿ ಸ್ಥಾಪಿಸಿಲು ವಿಫಲರಾದರು. ಮೈಸೂರಿನ ಚಿಕ್ಕದೇವರಾಜ ಒಡೆಯರ್ ಅವರು ಔರಂಗಜೇಬನೊಡನೆ ಮೈತ್ರಿಭಾವದಿಂದ ಇದ್ದರು. ಅವನಿಂದ ರಾಜ ಜಗದೇವ ಎಂಬ ಬಿರುದನ್ನೂ ಪಡೆದರು. ತನ್ನ ಕೈಕೆಳಗಿದ್ದ ಕರ್ನಾಟಕದ ಪ್ರದೇಶಗಳ ಸರಿಯಾದ ಆಡಳಿತಕ್ಕೋಸ್ಕರ ಒಬ್ಬ ಮುಘಲ್ ಫೌಜುದಾರನನ್ನು ನಿಯಮಿಸಲಾಯಿತು. ಇವನು ಆರ್ಕಾಟಿನ ನವಾಬನ ಆಶ್ರಯದಲ್ಲಿ ಬಿಜಾಪುರ, ಸಿರಾ ಸವಣೂರುಗಳಲ್ಲಿ ವಿಭಾಗಗಳನ್ನು ಹೊಂದಿದ್ದನು. ಮೊದಲನೆಯ ಫೌಜುದಾರ ಕಾಸಿಂ ಖಾನನ ಆಶ್ರಯದಲ್ಲಿ ಸಿರಾ ಪ್ರಾಂತವನ್ನು ಏಳು ಪರಗಣಗಳಾಗಿ ವಿಭಾಗಿಸಲಾಯಿತು. ಅವುಗಳೇ ಸಿರಾ, ಹೊಸಕೋಟೆ, ಬಸವಾಪಟ್ಟಣ, ಬೂಧಿಹಾಳು, ಪೆನುಗೊಂಡ, ದೊಡ್ಡಬಳ್ಳಾಪುರ ಮತ್ತು ಕೋಲಾರ. ಬಿಜಾಪುರ ಪತನವಾದ ನಂತರ ಗವರ್ನರ್ ಆಗಿದ್ದ ಅಬ್ದುಲ್ ರಹುಷನಿಗೆ ಬಂಕಾಪುರ, ಅಜಂನಗರ ಮತ್ತು ಬೆಳಗಾಂಗಳನ್ನು ಜಹಗೀರಿಯಾಗಿ ಕೊಡಲಾಯಿತು. ಅವನು ಸವಣೂರಿನಿಂದ ಆಳಲು ಆರಂಭಿಸಿದನು. ಕಂದಾಯವನ್ನು ವಸೂಲು ಮಾಡುವುದಕ್ಕಾಗಿ ಅವನು ಅಧಿಕಾರಿಗಳನ್ನು ನರಗುಂದ, ಶಿರಹಟ್ಟಿ, ಹಾವನೂರು, ಡಂಬಳ ಮುಂತಾದ ಕಡೆಗಳಲ್ಲಿ ನಿಯಮಿಸಿದನು. ಔರಂಗಜೇಬನ ಮರಣಾನಂತರ, ಉತ್ತರ ಕರ್ನಾಟಕದ ಅನೇಕ ಭಾಗಗಳು ಮರಾಠರ ಕೈವಶವಾದವು. ಮುಘಲ್ ಗವರ್ನರುಗಳು ಸ್ವತಂತ್ರರಾಗುವ ಪ್ರವೃತ್ತಿಯನ್ನು ರೂಢಿಸಿಕೊಂಡರು. ಈ ಎಲ್ಲ ಕಾರಣಗಳಿಂದಾಗಿ ಕರ್ನಾಟಕದಲ್ಲಿ ಮುಘಲರ ಪ್ರಾಬಲ್ಯ ಅವನತಿಯನ್ನು ಹೊಂದಿತು.

ಕರ್ನಾಟಕದಲ್ಲಿ ಮುಘಲರು ಪ್ರಬಲರಾಗಿದ್ದಾಗ ಅನೇಕ ಟಂಕಶಾಲೆಗಳನ್ನು ಸ್ಥಾಪಿಸಿ, ಸ್ಥಳೀಯ ಆವಶ್ಯಕತೆಗೆ ತಕ್ಕಂತೆ ವಿವಿಧ ರೀತಿಯ ನಾಣ್ಯಗಳನ್ನು ಟಂಕಿಸಲು ಆರಂಭಿಸಿದರು. ಇದರ ಕುರುಹಾಗಿ ಕರ್ನಾಟಕದಲ್ಲಿ ಅನೇಕ ಮುಘಲ್ ನಾಣ್ಯರಾಶಿಗಳು ಭೂಮಿಯಲ್ಲಿ ದೊರಕಿವೆ. ವೈಟ್‌ಹೆಡ್ ಅವರು ಮೊಟ್ಟಮೊದಲಿಗೆ ಮುಘಲ್ ಟಂಕಶಾಲೆಗಳನ್ನು ಗುರುತಿಸಲು ಆರಂಭಿಸಿದರು. ನಂತರ ಟೇಲರ್ ಅವರು ಈ ಯಾದಿಗೆ ಹೊಸ ಟಂಕಶಾಲೆಗಳ ಹೆಸರುಗಳನ್ನು ಸೇರಿಸಿದರು. ಇತ್ತೀಚಿಗೆ ಸಿಂಘಲ್ ಅವರು ಇದುವರೆಗೆ ತಿಳಿದುಬಂದಿರುವ ಮುಘಲ್ ಟಂಕಶಾಲೆಗಳನ್ನು ಹಾಗೂ ಅವುಗಳಲ್ಲಿ ಅಚ್ಚಾಗುತ್ತಿದ್ದ ನಾಣ್ಯಗಳನ್ನು ಗುರುತಿಸಿದ್ದಾರೆ. ಇದರಲ್ಲಿ ಕರ್ನಾಟಕದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮುಘಲ್ ಟಂಕಶಾಲೆಗಳನ್ನು ವಿಶ್ಲೇಷಿಸಿದ್ದಾರೆ.



ಕರ್ನಾಟಕದಲ್ಲಿ ಮುಘಲರ ಟಂಕಶಾಲೆಗಳು

ಮೇಲೆ ಗಮನಿಸಿರುವಂತೆ ತುಮಕೂರು ಜಿಲ್ಲೆಯ ಸಿರಾ, ಮುಘಲ್ ಪ್ರಾಂತ್ಯದ ರಾಜಧಾನಿಯಾಗಿತ್ತು. ಕ್ರಿ.ಶ. 1686 ರಿಂದ 1757ರವರೆಗೆ ಸುಬೇದಾರರು ಇದರ ಆಡಳಿತವನ್ನು ನಡೆಸುತ್ತಿದ್ದರು. ಮುಘಲರು ಸಿರಾದಲ್ಲಿ ಒಂದು ಟಂಕಶಾಲೆಯನ್ನು ಸ್ಥಾಪಿಸಿದರು. ಇಲ್ಲಿ ಅಚ್ಚಾದ ನಾಣ್ಯಗಳು ಸಿರಾಹಿ ಫಣಂ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿದ್ದವು. ಈ ನಾಣ್ಯಗಳ ಮುಮ್ಮುಖದಲ್ಲಿ ಅಲಂಗೀರ್ ಬಾದ್‌ಶಾಹ್ ಎಂಬ ಬರಹ ಹಿಮ್ಮುಖದಲ್ಲಿ ಜರ್ಬ್‌ಸಿರಾ ಮತ್ತು ವರ್ಷದ ಬರಹ ಕಾಣಬರುತ್ತದೆ. ಇದು ಔರಂಗಜೇಬನ ನಾಣ್ಯ. ಈ ಟಂಕಶಾಲೆಯಲ್ಲಿ ಅಚ್ಚಾದ ನಾಣ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿರುವುದರಿಂದ ಇದು ಮುಘಲರ ಮುಖ್ಯ ಟಂಕಶಾಲೆಗಳಲ್ಲಿ ಒಂದಾಗಿತ್ತು ಎಂದು ಗೊತ್ತಾಗುತ್ತದೆ.

ಕೋಲಾರವು ಸಿರಾ ಸುಬೇದಾರನ ಕೈಕೆಳಗೆ ಇತ್ತು. ಇಲ್ಲಿಯೂ ಒಂದು ಟಂಕಶಾಲೆಯಿತ್ತು. ಈ ಟಂಕಶಾಲೆಯಲ್ಲಿ ಷಾ ಆಲಂ, ಫರುಕ್ ಶಿಯಾರ್, ಷಾಜಹಾನ್, ಮುಹಮ್ಮದ್ ಶಾಹ್, ಎರಡನೆಯ ಅಲಂಗೀರ್, ಮುಹಮ್ಮದ್ ಶಾಹ್ ಹೆಸರಿನಲ್ಲಿ ಮಾಧವರಾವ್ ಟಂಕಿಸಿದ ನಾಣ್ಯಗಳು ಅಚ್ಚಾದವು. ಈ ರಾಜರುಗಳ ಹೆಸರು ಮುಮ್ಮುಖದಲ್ಲಿ ಕಂಡುಬಂದರೆ ಹಿಮ್ಮುಖದಲ್ಲಿ ಜರ್ಬ್-ಇ-ಕೊಲಾರ್ ಎನ್ನುವ ಬರಹ ಮತ್ತು ವರ್ಷಗಳು ಕಾಣಬರುತ್ತವೆ. ಕೆಲವು ನಾಣ್ಯಗಳ ಮೇಲೆ ವರ್ಷವಿಲ್ಲ. ಆದರೆ ಕೋಲಾರದ ಹೆಸರಿರುವುದರಿಂದ, ಇವು ಇಲ್ಲಿನ ಟಂಕಶಾಲೆಯಲ್ಲಿ ಅಚ್ಚಾದವು ಎಂಬುದು ಖಚಿತವಾಗುತ್ತದೆ.

ಮುಘಲ್ ನಾಣ್ಯಗಳು ದೊಡ್ಡಬಳ್ಳಾಪುರ ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಅಚ್ಚಾಗುತ್ತಿದ್ದವು. ಆದರೆ ಇವುಗಳನ್ನು ಪ್ರತ್ಯೇಕವಾಗಿ ಬೇರ್ಪಡಿಸುವುದು ಕಷ್ಟ. ಕೆಲವು ನಾಣ್ಯಗಳ ಮೇಲೆ 'ಬಲಾಪುರ್' ಎಂದಿರುವುದರಿಂದ, ಇವು ದೊಡ್ಡಬಳ್ಳಾಪುರದ ಟಂಕಶಾಲೆಯಲ್ಲಿ ಅಚ್ಚಾದ ನಾಣ್ಯಗಳೆಂದು ಭಾವಿಸಲಾಗಿದೆ. ಇದೇ ರೀತಿ ಕೆಲವು ನಾಣ್ಯಗಳ ಮೇಲೆ 'ಬಲಾ' ಎಂದಿದೆ. ಇವು ಚಿಕ್ಕಬಳ್ಳಾಪುರದಲ್ಲಿ ಅಚ್ಚಾದ ನಾಣ್ಯಗಳು. ಇಲ್ಲಿ ದೊರಕಿರುವ ನಾಣ್ಯಗಳನ್ನು ನೋಡಿದರೆ, ಇದು ಅಂತಹ ಉತ್ತಮ ದರ್ಜೆಯ ಟಂಕಶಾಲೆಯಾಗಿರಲಿಲ್ಲವೆಂದು ತಿಳಿದುಬರುತ್ತದೆ.

ಬೆಂಗಳೂರಿಗೆ ಸಮೀಪದ ಹೊಸಕೋಟೆಯಲ್ಲಿ ಇನ್ನೊಂದು ಮುಘಲ್ ಟಂಕಶಾಲೆಯಿತ್ತು. ಇಲ್ಲಿ ಅಚ್ಚಾಗುತ್ತಿದ್ದ ಫಣಂಗಳನ್ನು ಹೊಸಕೋಟೆ ಫಣಂ ಎಂದು

ಕರೆಯಲಾಗುತ್ತಿತ್ತು. ಈ ಟಂಕಶಾಲೆಯಲ್ಲಿ ಅಚ್ಚಾದ ಷಾ ಆಲಂ ಮತ್ತು ಮುಹಮ್ಮದ್ ಶಾಹ್ ರಾಜರಿಗೆ ಸೇರಿದ ನಾಣ್ಯಗಳು ದೊರಕಿವೆ. ಇವುಗಳ ಹಿಮ್ಮುಖದಲ್ಲಿ ಜರ್ಬ್ - ಇ - ಹೊಸಕೋಟ್ ಎನ್ನುವ ಬರಹವಿದೆ.

ಕೋಲಾರ ಜಿಲ್ಲೆಯ ಮುಳಬಾಗಿಲು ಖ್ಯಾತ ಮುಘಲ್ ಟಂಕಶಾಲೆಯಾಗಿತ್ತು. ಮುಹಮ್ಮದ್ ಶಾಹ್ ಹೆಸರಿರುವ ಚಿನ್ನದ ಫಣಂಗಳು ಇಲ್ಲಿ ಅಚ್ಚಾಗುತ್ತಿದ್ದವು. ಅವುಗಳ ತೂಕ 5 ಗ್ರೇನ್ ಮತ್ತು ಅಗಲ ೧.2". ಈ ನಾಣ್ಯಗಳು ಹಿಮ್ಮುಖದಲ್ಲಿ ಮುಳಬಾಗಲ್ ಎಂಬ ಬರಹವಿದೆ. ಈ ಫಣಂಗಳೆಲ್ಲವೂ ಪಗೋಡ ನಾಣ್ಯದ ಹತ್ತನೆಯ ಒಂದು ಭಾಗದ ಮೌಲ್ಯದ್ದಾಗಿದ್ದು, ಬಹಳ ಜನಾನುರಾಗಿಯಾಗಿದ್ದ ಚಿನ್ನದ ನಾಣ್ಯಗಳು.

ಚಿತ್ರದುರ್ಗ ಜಿಲ್ಲೆಯ ಹೊಸೂರಿನಲ್ಲಿದ್ದ ಮುಘಲ್ ಟಂಕಶಾಲೆಯಲ್ಲಿ ಅಹಮದ್ ಶಾಹನಿಗೆ ಸೇರಿದ ನಾಣ್ಯಗಳು ಅಚ್ಚಾಗುತ್ತಿದ್ದವು. ಇವುಗಳ ಮುಮ್ಮುಖದಲ್ಲಿ ಅಹಮದ್ ಶಾಹ್ ಮತ್ತು ಹಿಮ್ಮುಖದಲ್ಲಿ ಹೊಸೂರ್ ಮತ್ತು ವರ್ಷದ ಬರಹಗಳಿವೆ.

ಧಾರವಾಡದಲ್ಲಿ ಇನ್ನೊಂದು ಮುಘಲ್ ಟಂಕಶಾಲೆಯಿದ್ದಿತು. ಇದು ಮೊದಲು ಆದಿಲ್ ಶಾಹಿ ಸುಲ್ತಾನರಿಗೆ ಸೇರಿದ್ದು ನಂತರ ಮುಘಲರ ಕೈವಶವಾಯಿತು. ಕ್ರಿ.ಶ. 1686 ರಿಂದ 1720ರ ವರೆಗೆ ಇದು ಮುಘಲರ ಕೈ ಕೆಳಗೆ ಇತ್ತು. ಇದನ್ನು ಅಬ್ದುಲ್ ರಹುಫ್ ಆಳುತ್ತಿದ್ದನು. ನಂತರ ರಾಜಧಾನಿಯನ್ನು ಸವಣೂರಿಗೆ ಬದಲಾಯಿಸಲಾಯಿತು. ಔರಂಗಜೇಬನ ಮರಣಾನಂತರ, ಇದು ಮರಾಠರ ಆಳ್ವಿಕೆಗೆ ಒಳಪಟ್ಟಿತು. ಇಲ್ಲಿ ದೇಸಾಯಿ ಮನೆತನದ ಅರಸರು ಆಳುತ್ತಿದ್ದರು. ಇವರ ಸಮಯದಲ್ಲಿ ಇದು ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡು ಬಲಿಷ್ಠವಾಗಿದ್ದಿತು. ಕೊನೆಗೆ ಇದು ಮರಾಠರ ಕೈಸೇರಿತು.ಧಾರವಾಡದ ಟಂಕಶಾಲೆಯ ಹೆಸರು ನುಸ್ರತಾಬಾದ್. ಈ ಟಂಕಶಾಲೆಯಲ್ಲಿ ಅಚ್ಚಾದ ಹಿಜಿರ 1119 ನೆ ವರ್ಷದ ಚಿನ್ನದ ಮುಹರ್ ಮತ್ತು ಔರಂಗಜೇಬನ ಹಿಜಿರ 1114ರ ಪಗೋಡ ಚಿನ್ನದ ನಾಣ್ಯಗಳು ದೊರಕಿವೆ. ಔರಂಗಜೇಬನಿಗೆ ಸೇರಿದ ಬೆಳ್ಳಿಯ ನಾಣ್ಯಗಳೂ ಇಲ್ಲಿ ಅಚ್ಚಾಗುತ್ತಿದ್ದವು. ಅವನ ಮಗ ಮುಅಜ್ಜಂ ಕಾಲದಲ್ಲಿಯೂ ಈ ಟಂಕಶಾಲೆಯು ಕಾರ್ಯನಿರ್ವಹಿಸುತ್ತಿತ್ತು.

ಬಿಜಾಪುರದ ಟಂಕಶಾಲೆಯಲ್ಲಿ ಮುಘಲರ ನಾಣ್ಯಗಳು ಅಚ್ಚಾಗುತ್ತಿದ್ದವು. ಇಲ್ಲಿ ಅಚ್ಚಾದ ಫರುಕ್‌ಶಿಯಾರ್‌ನ ಮೊದಲನೆಯ ವರ್ಷದ ಬೆಳ್ಳಿಯ ರುಪಾಯಿ ದೊರಕಿದೆ.

ಇವನ ಹಿಂದಿನವರ ಚಿನ್ನದ ಮತ್ತು ಬೆಳ್ಳಿ ನಾಣ್ಯಗಳು ಇಲ್ಲಿ ಅಚ್ಚಾಗುತ್ತಿದ್ದುದಕ್ಕೆ ಮಾಹಿತಿಗಳು ದೊರಕಿವೆ. ಫರುಕ್‌ಶಿಯಾರನ ನಂತರ, ಕಾಂ ಬಕ್ಷ್‌ನ ಮರಣಾನಂತರ ಇಲ್ಲಿನ ಟಂಕಶಾಲೆಯನ್ನು ಮುಚ್ಚಲಾಯಿತು. ಏಕೆಂದರೆ ಈ ಭಾಗಗಳು ಹೈದರಾಬಾದಿನ ಗವರ್ನರನ ವಶವಾದವು. ಜೊತೆಗೆ ಇಲ್ಲಿ ತಲೆದೋರಿದ ಎರಡು ಕ್ಷಾಮಗಳೂ ಈ ಭಾಗದಲ್ಲಿ ಸಾಕಷ್ಟು ತೊಂದರೆಯನ್ನುಂಟುಮಾಡಿದವು. ಔರಂಗಜೇಬ್, ಷಾ ಆಲಂ (ಬೆಳ್ಳಿ ಮತ್ತು ತಾಮ್ರ) ಮೊದಲಾದವರ ನಾಣ್ಯಗಳು ಈ ಟಂಕಶಾಲೆಯಲ್ಲಿ ಅಚ್ಚಾಗುತ್ತಿದ್ದವು.

ಧಾರವಾಡ ಜಿಲ್ಲೆಯ ಬಂಕಾಪುರದಲ್ಲಿ ಮುಘಲರ ಟಂಕಶಾಲೆಯಿದ್ದಿತು. ರಾಷ್ಟ್ರಕೂಟ ಸಾಮಂತ ಬಂಕೆಯನಿಂದ ಈ ಊರಿಗೆ ಆ ಹೆಸರು ಬಂದಿತು. ಇಲ್ಲಿ ವಿಜಯನಗರದ ಅರಸರು ಮತ್ತು ಬಹಮನಿಯುವರಿಗೆ ಯುದ್ಧಗಳು ನಡೆದವು. ಇದನ್ನು ಮುಸ್ತಫಖಾನನೆಂಬುವನು ವಶಪಡಿಸಿಕೊಂಡಿದ್ದನು. ನಂತರ ಇದು ಮುಘಲರ ಕೈಸೇರಿತು. ಸ್ವಲ್ಪ ಕಾಲಾನಂತರ ಇದು ಸವಣೂರು ನವಾಬರ ವಶವಾಯಿತು. ಮುಹಮ್ಮದ್‌ಶಾಹ್, ಔರಂಗಜೇಬ್, ಷಾ ಆಲಂ (1), ಫರುಕ್‌ಶಿಯಾರ್ ಮತ್ತು ರಫಿಯುದ್ ದರ್ಜತ್ ಮೊದಲಾದವರಿಗೆ ಸೇರಿದ ನಾಣ್ಯಗಳು ಇಲ್ಲಿ ಅಚ್ಚಾಗುತ್ತಿದ್ದವು.

ಗುಲ್ಬರ್ಗದಲ್ಲಿ ಮುಘಲರ ಟಂಕಶಾಲೆಯಿದ್ದಿತು. ಔರಂಗಜೇಬನ ದಂಡಯಾತ್ರೆಯಿಂದ ಇದು ಸುಬೇದಾರನಾದ ಒಂದನೆಯ ಅಸಫ್‌ಜಾ ಎಂಬುವನ ಆಳ್ವಿಕೆಗೆ ಒಳಪಟ್ಟಿತ್ತು. ಔರಂಗಜೇಬನ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಈ ಟಂಕಶಾಲೆಯಲ್ಲಿ ಅಚ್ಚಾಗುತ್ತಿದ್ದವು. ಇವುಗಳ ಜೊತೆಗೆ ಇಲ್ಲಿ ಟಂಕಿಸಲಾದ ಜಹಂದರ್ ಶಾಹನ ಚಿನ್ನದ ನಾಣ್ಯಗಳೂ ದೊರಕಿವೆ.

ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡವು ಸುಲ್ತಾನರ ಕಾಲದಲ್ಲಿ ಮುಖ್ಯ ಕೇಂದ್ರವಾಗಿತ್ತು. ಇಲ್ಲಿ ಮುಜಫರ್ ಕಿಲಾ ಎಂಬ ಕೋಟೆಯನ್ನು ಆ ಸಮಯದಲ್ಲಿ ನಿರ್ಮಿಸಲಾಯಿತು. ಮುಘಲರ ದಾಖಲೆಗಳಲ್ಲಿ ಈ ಸ್ಥಳವನ್ನು ಕಾನ್ ಕುರ್ತೀ ಮತ್ತು ಮುಜಫರ್‌ನಗರ್ ಎಂದು ಕರೆಯಲಾಗಿದೆ. ಇಲ್ಲಿ ಟಂಕಿಸಲಾದ ಫರುಕ್‌ಶಿಯಾರನ ಬೆಳ್ಳಿಯ ರೂಪಾಯಿಗಳು ದೊರಕಿವೆ.

ಬೀದರ್ ಅಥವಾ ಮುಹಮ್ಮದಾಬಾದ್ ಮಧ್ಯಕಾಲೀನ ಸಮಯದಲ್ಲಿ ಬಹಳ ಖ್ಯಾತಿಯನ್ನು ಪಡೆದಿದ್ದಿತು. ಬಹಮನಿ, ಆದಿಲ್ ಶಾಹಿ ಮತ್ತು ಬರೀದ್ ಶಾಹಿ ಸುಲ್ತಾನರ

ನಾಣ್ಯಗಳು ಇಲ್ಲಿ ಅಚ್ಚಾಗುತ್ತಿದ್ದವು. ಕ್ರಿ. ಶ. 1656 ರಲ್ಲಿ ಔರಂಗಜೇಬನು ಮುತ್ತಿಗೆ ಹಾಕಿ ಈ ನಗರವನ್ನು ತನ್ನ ವಶಮಾಡಿಕೊಂಡನು. ಆಗಿನ ಕಾಲದಲ್ಲಿ ಇದು ಜಫರಾಬಾದ್ ಎನ್ನುವ ಹೆಸರಿನಿಂದ ಪ್ರಸಿದ್ಧವಾಗಿತ್ತು. ನಂತರ ಇದು ನಿಜಾಮ್ ಶಾಹಿ ಆಳ್ವಿಕೆಗೆ ಒಳಪಟ್ಟಿತು. ಔರಂಗಜೇಬ್ ಮತ್ತು ಷಾ ಆಲಂಗೆ ಸೇರಿದ ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳು ಇಲ್ಲಿ ಅಚ್ಚಾಗುತ್ತಿದ್ದವು. ಅಹ್ದ್ ಎಂಬ ತಾರೀಕಿರುವ ಒಂದು ಚಿನ್ನದ ಮುಹರ್ ಇಲ್ಲಿ ಅಚ್ಚಾದುದು ದೊರಕಿದೆ. ಔರಂಗಜೇಬನಿಗೆ ಸೇರಿದ ಎರಡು ನಮೂನೆಯ ತಾಮ್ರದ ನಾಣ್ಯಗಳು ಇಲ್ಲಿ ಅಚ್ಚಾಗುತ್ತಿದ್ದವು. ಮೊದಲನೆಯದರ ತೂಕ 320 ಗ್ರೇನ್ ಆದರೆ ಎರಡನೆಯ ನಮೂನೆಯ ನಾಣ್ಯದ ತೂಕ 125 ಗ್ರೇನ್. ಇಲ್ಲಿ ಅಚ್ಚಾದ ಮುಘಲ್ ನಾಣ್ಯಗಳ ಮೇಲೆ ಜಫರಾಬಾದ್ ಎಂಬ ಬರಹವಿದೆ; ಆದುದರಿಂದ ಇವುಗಳನ್ನು ಸುಲಭವಾಗಿ ಗುರುತಿಸಬಹುದು.

ಬೆಳಗಾಂನಲ್ಲಿ ಮುಘಲರ ಕಾಲದ ಟಂಕಶಾಲೆಯಿದ್ದಿತು. ಇದಕ್ಕೆ ಇವರು ಕೊಟ್ಟ ಹೊಸ ಹೆಸರು ಮುಸ್ತಫಾಬಾದ್. ಇಲ್ಲಿ ಆಳುತ್ತಿದ್ದ ಕಿಲ್ಲೆದಾರ ಮುಸ್ತಫ ಎಂಬುವನಿಂದ ಈ ಹೆಸರು ಬಂದಿತು. ಅಬ್ದುಲ್ ರಉಫ್ ಖಾನನು ಮುಘಲರ ಆಶ್ರಯದಲ್ಲಿ ದಿಲಾವರ್ ಖಾನ್ ಬಹಾದುರ್ ಎನ್ನುವ ಬಿರುದಿನಿಂದ ಮನ್ ಸುಬೇದಾರನಾಗಿ ಇಲ್ಲಿ ಆಳುತ್ತಿದ್ದನು. ಇಲ್ಲಿ ಟಂಕಿಸಲಾದ ಔರಂಗಜೇಬನ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ದೊರಕಿವೆ. ಅವುಗಳ ಮೇಲೆ ಮುಸ್ತಫಾಬಾದ್ ಎನ್ನುವ ಬರಹವಿದೆ.

ಗೋಕಾಕ್‌ನಲ್ಲಿ ಮುಘಲರ ಕಾಲದ ಟಂಕಶಾಲೆಯಿದ್ದಿತು. ಸವಣೂರು ನವಾಬರ ಆಧಿಪತ್ಯಕ್ಕೆ ಸೇರುವ ಮೊದಲು, ಇದು ಮುಘಲರ ಅಧೀನದಲ್ಲಿತ್ತು. ಇದಕ್ಕೆ ಆಜಂನಗರ ಎನ್ನುವ ಹೆಸರೂ ಇದ್ದಿತು. ಇಲ್ಲಿ ಟಂಕಿಸಲಾದ ಕೆಲವು ನಾಣ್ಯಗಳ ಮೇಲೆ ಈ ಹೆಸರು ಕಾಣಬರುತ್ತದೆ. ಈ ಟಂಕಶಾಲೆಯಲ್ಲಿ ಅಚ್ಚಾದ ಔರಂಗಜೇಬ್, ಕಾಂ ಬಕ್ಷ್, ಷಾ ಆಲಂ (1) ಫರುಕ್‌ಶಿಯಾರ್ ಮತ್ತು ಮುಹಮ್ಮದ್ ಶಾಹ್ ಅವರಿಗೆ ಸೇರಿದ ಬೆಳ್ಳಿಯ ನಾಣ್ಯಗಳು ದೊರಕಿವೆ. ಕೆಲವು ಬೆಳ್ಳಿ ನಾಣ್ಯಗಳ ಮೇಲೆ ಟಂಕಶಾಲೆಯ ಹೆಸರು ಗೋಕುಲ್‌ಗರ್ ಎಂದಿರುವುದು ಗಮನಾರ್ಹ.

ಮೇಲೆ ಹೆಸರಿಸಿದ ಸ್ಥಳಗಳಲ್ಲಿ ಮಾತ್ರವಲ್ಲದೆ, ಇನ್ನೂ ಕೆಲವು ಸ್ಥಳಗಳಲ್ಲಿ ಮುಘಲರ ಕಾಲದ ಟಂಕಶಾಲೆಯಿದ್ದವು ಎಂದು ತಿಳಿದುಬರುತ್ತದೆ. ನಾಣ್ಯಗಳ ಮೇಲೆ ಕಂಡುಬರುವ

ಟಂಕಶಾಲೆಗಳ ಹೆಸರುಗಳನ್ನು ಸರಿಯಾಗಿ ಗುರುತಿಸಲು ಆಗಿಲ್ಲ. ಹೊಸ ನಾಣ್ಯಗಳು ಬೆಳಕಿಗೆ ಬಂದ ನಂತರ ಇನ್ನೂ ಅನೇಕ ಮುಘಲರ ಟಂಕಶಾಲೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

○

ಅಧ್ಯಾಯ 8

ಹೈದರ್, ಟೀಪು ಮತ್ತು ಒಡೆಯರ ನಾಣ್ಯಗಳು

ಕರ್ನಾಟಕ ಇತಿಹಾಸದಲ್ಲಿ ಹೈದರ್ ಮತ್ತು ಟೀಪು ಆಳ್ವಿಕೆ ಪ್ರಮುಖವಾಗಿದೆ. ಅದರಲ್ಲಿಯೂ ನಾಣ್ಯಶಾಸ್ತ್ರದ ದೃಷ್ಟಿಯಿಂದ ಟೀಪುವಿನ ಕಾಲ ಸಂಪದ್ಭರಿತವಾದ ಕಾಲ. ಟೀಪು ಅಚ್ಚು ಹಾಕಿಸಿದ ನಾಣ್ಯಗಳ ವೈವಿಧ್ಯ ಹಾಗೂ ತಾಂತ್ರಿಕ ಕೌಶಲ್ಯ ಆಧುನಿಕ ನಾಣ್ಯಶಾಸ್ತ್ರಜ್ಞರನ್ನೂ ಬೆರಗುಗೊಳಿಸುತ್ತದೆ. ಬಹುಶಃ ಟೀಪು ನಾಣ್ಯ ಟಂಕನದ ಬಗೆಗೆ ವಹಿಸಿದ್ದಷ್ಟು ಆಸಕ್ತಿಯನ್ನು ಕರ್ನಾಟಕದ ಇತರ ಯಾವ ದೊರೆಯೂ ತೋರಿಸಲಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಈ ನಾಣ್ಯಗಳು ಕಲಾತ್ಮಕವಾಗಿದ್ದು, ಅವುಗಳ ಮೇಲಿನ ಬರವಣಿಗೆಯೂ ಸುಂದರವಾಗಿದೆ. ಈ ಲಕ್ಷಣಗಳಿಂದ ಅನೇಕ ನಾಣ್ಯಶಾಸ್ತ್ರಜ್ಞರು ಟೀಪುವಿನ ನಾಣ್ಯಗಳನ್ನು ಮೆಚ್ಚಿಕೊಂಡು, ಅವುಗಳ ವಿಷಯದಲ್ಲಿ ಸಾಕಷ್ಟು ಸಂಶೋಧನೆ ಮಾಡಿದ್ದಾರೆ ಮತ್ತು ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳು ಟೀಪುವಿನ ನಾಣ್ಯಗಳನ್ನು ತಿಳಿದುಕೊಳ್ಳಲು ಬಲು ಉಪಯುಕ್ತವಾಗಿವೆ.

1794 ರಲ್ಲಿ ಎಡ್ವರ್ಡ್ ಮೂರ್‌ನಿಂದ ರಚಿತವಾದ 'ನರೇಟೀವ್ಸ್' ಗ್ರಂಥದಲ್ಲಿ ಟೀಪುವಿನ ನಾಣ್ಯಗಳನ್ನು ಕುರಿತಾದ ಒಂದು ಸಣ್ಣ ಭಾಗವೇ ಇದೆ. ಕಿರ್ಕ್‌ಪ್ಯಾಟ್ರಿಕ್‌ನಿಂದ ರಚಿತವಾದ 'ಸೆಲೆಕ್ಟ್ ಲೆಟರ್ಸ್ ಆಫ್ ಟೀಪು ಸುಲ್ತಾನ್' ಎಂಬ ಗ್ರಂಥದಲ್ಲಿ ಅವನ ನಾಣ್ಯಗಳನ್ನು ಕುರಿತು ಚರ್ಚಿಸಲಾಗಿದೆ. ಮಾರ್ಸ್‌ಡೆನ್ ಮತ್ತು ಹಾಕ್ಸ್ ಅವರ ಗ್ರಂಥಗಳಲ್ಲಿ ಹೈದರ್ ಮತ್ತು ಟೀಪು ಅವರ ಕೆಲವು ಮುಖ್ಯ ಮತ್ತು ವಿರಳವಾದ ನಾಣ್ಯಗಳನ್ನು ಕುರಿತು ಬರೆಯಲಾಗಿದೆ. ಮದ್ರಾಸಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿದ್ದ ಟೀಪುವಿನ ನಾಣ್ಯಗಳನ್ನು ಕುರಿತು ಥರ್ಸ್ಟನ್ ಬರೆದಿದ್ದಾರೆ. ಇದರಲ್ಲಿ ಸಾಕಷ್ಟು ವಿವರಗಳನ್ನು ನೀಡಿದ್ದಾರೆ. ಇದರಲ್ಲಿ ಅನೇಕ ವಿರಳವಾದ ನಾಣ್ಯಗಳನ್ನು ಸೇರಿಸಿರುವುದರಿಂದ, ಇದು ಬಲು ಉಪಯುಕ್ತವೆನಿಸಿದೆ. ಇದೇ ರೀತಿಯಲ್ಲಿ ಟಫ್‌ನೆಲ್ ಎಂಬ ನಾಣ್ಯಶಾಸ್ತ್ರಜ್ಞ, ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿದ್ದ ಹೈದರ್ ಮತ್ತು ಟೀಪು ನಾಣ್ಯಗಳನ್ನು ಕುರಿತು ವಿವೇಚಿಸಿದ್ದಾರೆ. 'ಕಾಯಿನ್ ಕಲೆಕ್ಟಿಂಗ್ ಇನ್ ಮೈಸೂರ್' ಎನ್ನುವ ಗ್ರಂಥದಲ್ಲಿ ಜಾಕ್‌ಸನ್ ತಮ್ಮ ಗಮನಕ್ಕೆ ಬಂದ ಹೈದರ್ ಮತ್ತು ಟೀಪು ನಾಣ್ಯಗಳನ್ನು ಕುರಿತು ವಿವೇಚಿಸಿದ್ದಾರೆ.

ಟೈಲರ್ ಅವರ 'ಕಾಯಿನ್ಸ್ ಆಫ್ ಟೀಪು ಸುಲ್ತಾನ್' ಎಂಬ ಪುಟ್ಟ ಪುಸ್ತಕವು ಟೀಪುವಿನ ನಾಣ್ಯಗಳ ಮೇಲೆ ಕಾಣಬರುವ ವರ್ಷಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಬಲು ಉಪಯುಕ್ತವಾಗಿದೆ. ಈ ಎಲ್ಲ ಗ್ರಂಥಗಳಿಗಿಂತಲೂ ಅನೇಕ ರೀತಿಗಳಲ್ಲಿ ಹೆಚ್ಚು ಉಪಯುಕ್ತವಾದ ಪುಸ್ತಕವೆಂದರೆ ಹೆಂಡರ್‌ಸನ್ ಅವರ 'ಕಾಯಿನ್ಸ್ ಆಫ್ ಟೀಪು ಸುಲ್ತಾನ್'. ಇದುವರೆಗೆ ಈ ವಿಷಯದಲ್ಲಿ ನಡೆದಿರುವ ಸಂಶೋಧನೆಗಳೆಲ್ಲವನ್ನೂ ಒಂದೆಡೆ ಕ್ರೋಡೀಕರಿಸಿದ್ದಾರೆ. ಟೀಪು ಸುಲ್ತಾನನ ಟಂಕಶಾಲೆಗಳಿಗನುಗುಣವಾಗಿ ಅವನ ನಾಣ್ಯಗಳನ್ನು ಅಳವಡಿಸಿ, ಯಾವ ಟಂಕಶಾಲೆಯಿಂದ, ಯಾವ ನಾಣ್ಯ, ಯಾವ ವರ್ಷ ಅಚ್ಚಾಯಿತು ಎನ್ನುವ ವಿವರಗಳನ್ನು ಒದಗಿಸಿದ್ದಾರೆ. ಇವುಗಳ ಜೊತೆಗೆ ಬಿಡಿ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಅಲ್ಲಲ್ಲಿ, ಈ ನಾಣ್ಯಗಳ ಬಗೆಗೆ ಪ್ರಸ್ತಾಪಗಳನ್ನು ಕಾಣಬಹುದು.

1. ಹೈದರ್ ಅಲಿಯ ನಾಣ್ಯಗಳು

ಹೈದರನು ಕ್ರಿ.ಶ. 1761 ರಲ್ಲಿ ರಾಜ್ಯವಾಳಲು ಆರಂಭಿಸಿದನಾದರೂ, ಅವನು 1763 ರಲ್ಲಿ ನಗರದಲ್ಲಿ ಒಂದು ಟಂಕಶಾಲೆಯನ್ನು ಸ್ಥಾಪಿಸಿದನು. ಅಷ್ಟು ಹೊತ್ತಿಗೆ ನಗರ ಅವನ ರಾಜ್ಯದಲ್ಲಿ ವಿಲೀನಗೊಂಡಿತ್ತು. ಅಂದರೆ ತನ್ನ ಪ್ರಾಬಲ್ಯವನ್ನು ನಿಜವಾಗಿಯೂ ಸ್ಥಿರಪಡಿಸಿಕೊಂಡ ನಂತರವೇ ನಾಣ್ಯಗಳನ್ನು ತನ್ನ ಹೆಸರಿನಲ್ಲಿ ಟಂಕಿಸಲು ಆರಂಭಿಸಿದನು. ಅಷ್ಟೇ ಅಲ್ಲದೆ ಜಾಗರೂಕತೆಯಿಂದ, ಹಿಂದಿನ ಕಾಲದಲ್ಲಿ ಚಲಾವಣೆಯಲ್ಲಿದ್ದ ಹಿಂದೂ ದೇವತೆಗಳನ್ನು ಹೊಂದಿದ್ದ ನಾಣ್ಯಗಳನ್ನೇ ತಾನೂ ಮುಂದುವರಿಸಿದನು. ಅವನ ಚಿನ್ನದ ನಾಣ್ಯಗಳಿಗೆ ಕೆಳದಿ ಸದಾಶಿವನಾಯಕನ ನಾಣ್ಯಗಳೇ ಮಾದರಿಯಾಗಿದ್ದವು. ಹೈದರನ ನಾಣ್ಯಗಳು ಚಿನ್ನ ಮತ್ತು ತಾಮ್ರಗಳಲ್ಲಿ ದೊರಕಿವೆ. ಚಿನ್ನದಲ್ಲಿ ಹೈದರನು ಪಗೋಡ, ಅರ್ಧ ಪಗೋಡ, ಪಣಂ ಮತ್ತು ಅರ್ಧ ಪಣಂ ನಾಣ್ಯಗಳನ್ನು ಟಂಕಿಸಿದನು. ಅವುಗಳ ತೂಕ ಕ್ರಮವಾಗಿ 52, 26, 5.5 ಮತ್ತು 2.7 ಗ್ರೇನ್‌ಗಳು.

ಹೈದರನ ಪಗೋಡ ಮೌಲ್ಯದ ಚಿನ್ನದ ನಾಣ್ಯದ ತೂಕ 52 ಗ್ರೇನ್; ಅಗಲ 0.5". ಇದನ್ನು ಬಹಾದುರಿ ಪಗೋಡ ಎಂದು ಕರೆಯುತ್ತಿದ್ದರು.

ಮು : ಕಣಯುಕ್ತ ಮೇಲ್ಮೈಯಲ್ಲಿ 'ಹೆ' ಎಂಬ ಪರ್ಷಿಯನ್ ಅಕ್ಷರ

ಹಿ : ಕುಳಿತಿರುವ ಶಿವ ಮತ್ತು ಪಾರ್ವತಿ : ಶಿವನ ಕೈಗಳಲ್ಲಿ ತ್ರಿಶೂಲ ಮತ್ತು ಜಿಂಕೆ

ಈ ರೀತಿಯ ಶಿವ-ಪಾರ್ವತಿ ನಾಣ್ಯಗಳು ವಿಜಯನಗರ ಕಾಲದಿಂದ ಆರಂಭವಾಗಿ, ಆನಂತರ ಅನೇಕ ನಾಯಕರು ಮತ್ತು ಪಾಳೆಯಗಾರರು, ಈ ನಮೂನೆಯನ್ನು ಬಳಸುತ್ತಿದ್ದರು. ಹೀಗಾಗಿ ಇದೊಂದು ಬಲು ಜನಾನುರಾಗಿಯಾಗಿದ್ದ ಚಿನ್ನದ

ನಾಣ್ಯವಾಗಿದ್ದಿತು. ಕೆಳದಿಯ ನಾಯಕರು, ಚಿತ್ರದುರ್ಗದ ಪಾಳೆಯಗಾರರು ಈ ನಾಣ್ಯಗಳನ್ನು ಜನಾನುರಾಗಿಯಾಗಿ ಮಾಡಿದವರಲ್ಲಿ ಮುಖ್ಯರು. ಈ ರೀತಿ ಜನಾನುರಾಗಿಯಾಗಿದ್ದ ಈ ನಾಣ್ಯವನ್ನು ಟಂಕಿಸುವುದರಿಂದ, ಜನಗಳ ಪ್ರೀತಿ ಮತ್ತು ವಿಶ್ವಾಸಗಳನ್ನು ಸಂಪಾದಿಸುವ ಸಲುವಾಗಿ ಹೈದರನು ಈ ರೀತಿಯ ನಾಣ್ಯಗಳನ್ನು ಟಂಕಿಸಿದನು ಎನ್ನುವುದನ್ನು ಗಮನಿಸಬೇಕು.

ಹೈದರನ ಅರ್ಧ ಪಗೋಡ ನಾಣ್ಯದ ತೂಕ 26.5 ಗ್ರೇನ್ : ಅಗಲ 0.35".


ಮು : ಕಣಯುಕ್ತ ಮೇಲ್ಮೈಯಲ್ಲಿ 'ಹೆ' ಎಂಬ ಪರ್ಷಿಯನ್ ಅಕ್ಷರ

ಹಿ : ಕುಳಿತಿರುವ ವಿಷ್ಣು : ಅವನ ಕೈಗಳಲ್ಲಿ ಶಂಖ-ಚಕ್ರಗಳಿವೆ

ಈ ನಮೂನೆಯು ನಾಣ್ಯವೂ ಕೂಡ ವಿಜಯನಗರ ಕಾಲದಲ್ಲಿ ಬಹಳ ಜನಾನುರಾಗಿಯಾಗಿದ್ದಿತು. ಅದನ್ನೇ ಹೈದರ್ ಅನುಕರಿಸಿದನು.

ಹೈದರನ ಪಣಂ ಮೌಲ್ಯದ ಚಿನ್ನದ ನಾಣ್ಯದ ತೂಕ 5.5 ಗ್ರೇನ್; ಅದರ ಅಗಲ 0.2". ಇದು ಮುಮ್ಮುಖ ಮತ್ತು ಹಿಮ್ಮುಖಗಳೆರಡಲ್ಲೂ, ಪಗೋಡ ಮೌಲ್ಯದ ನಾಣ್ಯಗಳನ್ನೇ ಹೋಲುತ್ತದೆ.





ಮು : 'ಹೆ' ಎಂಬ ಅಕ್ಷರ (ಪರ್ಷಿಯನ್)

ಹಿ : ಕುಳಿತಿರುವ ಶಿವ ಮತ್ತು ಪಾರ್ವತಿ

ಹೈದರನ ಅರ್ಧ ಪಣಂ ಮೌಲ್ಯದ ಚಿನ್ನದ ನಾಣ್ಯದ ತೂಕ 2.7 ಗ್ರೇನ್; ಅಗಲ 0.2".

ಮು : ಚುಕ್ಕೆಗಳ ವೃತ್ತದಲ್ಲಿ 'ಹೆ' ಎನ್ನುವ ಪರ್ಷಿಯನ್ ಅಕ್ಷರ

ಹಿ : ಚುಕ್ಕೆಗಳ ವೃತ್ತದಲ್ಲಿ ಸಂಖ್ಯೆ 1166

ನಾವು ಆಗಲೇ ಗಮನಿಸಿರುವಂತೆ ಹೈದರನ ಬೆಳ್ಳಿಯ ನಾಣ್ಯಗಳು ದೊರಕಿಲ್ಲ. ಇವನ ತಾಮ್ರದ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ತಾಮ್ರದ ನಾಣ್ಯದ ತೂಕ 180 ಗ್ರೇನ್, ಇದರ ಅಗಲ 0.6".

ಮು : ಬಲಕ್ಕೆ ಸರಿಯುತ್ತಿರುವ ಬಾಲವನ್ನು ಮೇಲೆತ್ತಿಕೊಂಡಿರುವ ಆನೆ

ಹಿ : ಬರಹ (ಪರ್ಷಿಯನ್)

ಜರ್ಬ್-ಇ-ಬಲ್ಹಾರಿ



ಇದೇ ರೀತಿಯ ಮತ್ತೊಂದು ನಮೂನೆಯ ನಾಣ್ಯದ ತೂಕ 150 ಗ್ರೇನ್.


ಮು : ಬಲಕ್ಕೆ ಸರಿಯುತ್ತಿರುವ ಆನೆ

ಹಿ : ಬರಹ (ಪರ್ಷಿಯನ್)

ಜರ್ಬ್-ಇ-ಪಟನ್

ಕೆಲವು ತಾಮ್ರದ ನಾಣ್ಯಗಳ ಮೇಲೆ ಮುಮ್ಮುಖದಲ್ಲಿ ಹುಲಿಯ ಚಿತ್ರವಿದ್ದು, ಹಿಮ್ಮುಖದಲ್ಲಿ ಪರಶುವಿನ ಚಿತ್ರವಿರುತ್ತದೆ. ಸಾಮಾನ್ಯವಾಗಿ ಇಂತಹ ನಾಣ್ಯಗಳನ್ನು ಟೀಪು ಅಚ್ಚುಹಾಕಿಸಿದನು. ಆದರೆ ಈ ಪ್ರಸ್ತುತ ನಾಣ್ಯಗಳು ತಾಂತ್ರಿಕ ಮತ್ತು ಕಲೆಯ ದೃಷ್ಟಿಗಳಿಂದ ಅಸಮರ್ಪಕವಾಗಿರುವುದರಿಂದ ಇವು ಟೀಪುವಿನ ನಾಣ್ಯಗಳಲ್ಲವೆಂದೂ, ಆದುದರಿಂದ ಇವು ಆರಂಭದ ದೆಸೆಯ ಹೈದರನ ನಾಣ್ಯಗಳೆಂದೂ ಹೆಂಡರ್‌ಸನ್ ವಾದಿಸುತ್ತಾರೆ. ಇದರಲ್ಲಿ ಸತ್ಯಾಂಶವಿದೆ.

ಕೆಲವು ತಾಮ್ರದ ನಾಣ್ಯಗಳ ಮೇಲೆ ಕನ್ನಡ ಮತ್ತು ಅರಾಬಿಕ್ ಸಂಖ್ಯೆಗಳಿವೆ. ಇವುಗಳ ಹಿಮ್ಮುಖದಲ್ಲಿ ಅಡ್ಡ ಮತ್ತು ಉದ್ದ ಗೆರೆಗಳಿವೆ. 9 ರಿಂದ 14 ರವರೆಗಿನ ಸಂಖ್ಯೆಗಳಿರುವ ಈ ನಾಣ್ಯಗಳು ಹೈದರನಿಗೆ ಸೇರಿದ್ದೆಂದು ಭಾವಿಸಲಾಗಿದೆ.



ಮತ್ತೆ ಕೆಲವು ತಾಮ್ರದ ನಾಣ್ಯಗಳ ಮುಮ್ಮುಖದಲ್ಲಿ ಚುಕ್ಕೆಗಳ ವೃತ್ತದಲ್ಲಿ ಅರಾಬಿಕ್ 222 ಎಂಬ ಸಂಖ್ಯೆಯಿದೆ. ಹಿಮ್ಮುಖದಲ್ಲಿ 'ಹೆ' ಎಂಬ ಅಕ್ಷರವಿದೆ. ಇದು ಅಬ್ಜದ್

ರೀತಿಯ ಸಂಖ್ಯೆಗಳು. ಇದು ಕಷ್ಟಕರವಾದುದರಿಂದ ಹೈದರನಿಗೆ ಇದರ ವಿಷಯದಲ್ಲಿ ತಿಳಿವಳಿಕೆ ಇರಲಿಲ್ಲ. ಆದುದರಿಂದ ಈ ನಾಣ್ಯಗಳು ಟೀಪುವಿಗೆ ಸೇರಿದ್ದೆಂದು ಕೆಲವರು ಭಾವಿಸುತ್ತಾರೆ. ಮತ್ತೆ ಕೆಲವರು 222 ಎನ್ನುವ ಸಂಖ್ಯೆಯು ಹೈದರ್ ಎಂಬುದನ್ನು ಸೂಚಿಸುತ್ತದೆಯಾದ್ದರಿಂದ ಇದು ಹೈದರನ ನಾಣ್ಯವೆಂದೇ ವಾದಿಸುತ್ತಾರೆ.

2. ಟೀಪುವಿನ ನಾಣ್ಯಗಳು

ಟೀಪುವಿನ ನಾಣ್ಯಗಳು ಹೈದರನ ನಾಣ್ಯಗಳಿಗಿಂತ ಹತ್ತಾರು ಪಟ್ಟು ಹೊಸ ನಮೂನೆಗಳಲ್ಲಿ ದೊರಕಿವೆ. ಕಲೆಯ ದೃಷ್ಟಿಯಿಂದಲೂ ಈ ನಾಣ್ಯಗಳು ಬಲು ಮಹತ್ತರವೆನಿಸಿವೆ. ಟೀಪು ಸುಲ್ತಾನನು ಹೊಸ ಟಂಕಶಾಲೆಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿಸಿ, ನಾಣ್ಯ ಚಲಾವಣೆಗೆ ಅನುಕೂಲವಾಗುವಂತೆ ಸುಧಾರಣೆ ಮಾಡಿದನು. ಪ್ರತಿಯೊಂದು ಟಂಕಶಾಲೆಗೂ ಒಂದು ಕಲ್ಪನಾಮಯ ಹೆಸರುಗಳನ್ನು ಕೊಟ್ಟನು. ಹದಿನಾರಕ್ಕೂ ಮಿಕ್ಕ ವಿವಿಧ ಮೌಲ್ಯದ ನಾಣ್ಯಗಳನ್ನು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ಟಂಕಿಸಿದನು. ನಾಣ್ಯಗಳ ಮೇಲೆ ಹೊಸ ರೀತಿಯ ಕಾಲಮಾನವನ್ನು ಹಾಕಿಸಿದನು. ಅವನು ಕೇವಲ ಹದಿನೇಳು ವರ್ಷಗಳ ಕಾಲ ರಾಜ್ಯಭಾರ ಮಾಡಿದನು. ಅಷ್ಟೇ ಸಂಖ್ಯೆಯಲ್ಲಿ ಟಂಕಶಾಲೆಗಳನ್ನು ಸ್ಥಾಪಿಸಿದನು. ಈ ಟಂಕಶಾಲೆಗಳನ್ನು ಸ್ಥಾಪಿಸುವಾಗ ಅವುಗಳ ಮಿಲಿಟರಿ ಮತ್ತು ರಾಜಕೀಯ ಮಹತ್ವಕ್ಕೇ ಹೆಚ್ಚು ಪ್ರಾಮುಖ್ಯ ಕೊಟ್ಟನು. ಸಾಮಾನ್ಯವಾಗಿ ಟೀಪುವಿನ ನಾಣ್ಯಗಳ ಮೇಲೆ ಈ ಟಂಕಶಾಲೆಗಳ ಹೆಸರು ಕಾಣಬರುತ್ತದೆ.

ಟಂಕಶಾಲೆಗಳು

ಟೀಪು ಸುಲ್ತಾನನು ಸ್ಥಾಪಿಸಿದ ಟಂಕಶಾಲೆಗಳನ್ನು ಈಗ ಗಮನಿಸಬಹುದು. ಮೊದಲನೆಯದಾಗಿ ಪಟನ್ ಅಥವಾ ಶ್ರೀರಂಗಪಟ್ಟಣ. ಇದು ರಾಜಧಾನಿಯಾದುದರಿಂದ ಸುಸಜ್ಜಿತವಾದ ಕೇಂದ್ರ ಟಂಕಶಾಲೆಯು ಇಲ್ಲಿದ್ದಿತು. ನಾಣ್ಯಗಳ ಮೇಲೆ ಇದನ್ನು ಪಟನ್ ಎಂದು ಗುರುತಿಸಲಾಗಿದೆ. ಇಲ್ಲಿ ಅವನ ಆಳ್ವಿಕೆಯ ಮೊದಲ ವರ್ಷದಿಂದ ಆರಂಭವಾಗಿ, ಅವನ ಅಂತ್ಯದವರೆಗಿನ ನಾಣ್ಯಗಳು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ಅಚ್ಚಾದವು (ಕೊನೆಯ ವರ್ಷವನ್ನು ಬಿಟ್ಟು). ಎಲ್ಲ ಮೌಲ್ಯದ ನಾಣ್ಯಗಳು ಈ ಟಂಕಶಾಲೆಯಲ್ಲಿ ಅಚ್ಚಾದವು. ತಾಂತ್ರಿಕತೆ ಮತ್ತು ಕಲಾತ್ಮಕತೆಯ ದೃಷ್ಟಿಯಿಂದ ಶ್ರೀರಂಗಪಟ್ಟಣದಲ್ಲಿ ಅಚ್ಚಾದ ನಾಣ್ಯಗಳು ಉನ್ನತ ಮಟ್ಟದವಾಗಿದ್ದವು.

ನಗರ ಅಥವಾ ಬಿದನೂರಿನಲ್ಲಿ ಹೈದರನ ಕಾಲದಿಂದಲೂ ಟಂಕಶಾಲೆಯು ಕಾರ್ಯ ನಿರ್ವಹಿಸುತ್ತಿದ್ದಿತು. 1787ರಲ್ಲಿ ಟೀಪು ಇಲ್ಲಿನ ಹಳೆಯ ಕೋಟೆಯನ್ನು ಕೆಡವಿಸಿ, ಹೊಸ ಕೋಟೆಯನ್ನು ನಿರ್ಮಾಣ ಮಾಡಿ ಟಂಕಶಾಲೆಯನ್ನು ಹೊಸದಾಗಿ ಸ್ಥಾಪಿಸಿದನು. ಇದಕ್ಕೆ ಅವನು 'ನಜರ್‌ಬಾರ್' ಎಂಬ ಹೆಸರನ್ನು ಕೊಟ್ಟನು. ಅಂದರೆ 'ಕೃಪೆಯನ್ನು ತೋರುವವನು'

ಎಂದು ಇದರ ಅರ್ಥ. ಇಲ್ಲಿ ಅಚ್ಚಾದ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ದೊರಕಿಲ್ಲ. ಇಲ್ಲಿ ಟಂಕಿಸಲಾದ ತಾಮ್ರದ ಪೈಸ, ಅರ್ಧ ಪೈಸ, ಕಾಲು ಪೈಸ ನಾಣ್ಯಗಳು ದೊರಕಿವೆ. ಇಲ್ಲಿ ಅಚ್ಚಾದ ನಾಣ್ಯಗಳ ಮೇಲೆ 1216 ಎಂಬ ಮೌಲೂದೀ ವರ್ಷ ಕಾಣಬರುತ್ತದೆ. ಈ ನಾಣ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿಲ್ಲ.

ಬೆಂಗಳೂರಿನಲ್ಲಿ ಟೀಪು ಸುಲ್ತಾನನ ಮತ್ತೊಂದು ಟಂಕಶಾಲೆಯಿದ್ದಿತು. ಇಲ್ಲಿ ತಾಮ್ರದ ಪೈಸ ನಾಣ್ಯ, ಅರ್ಧ ಪೈಸ, ಕಾಲು ಪೈಸ ಮತ್ತು ಎಂಟನೆಯ ಒಂದು ಪೈಸ ನಾಣ್ಯಗಳು ಅಚ್ಚಾಗುತ್ತಿದ್ದವು. ಈ ನಾಣ್ಯಗಳು ಅವನ ಆಳ್ವಿಕೆಯ ನಾಲ್ಕನೆಯ ವರ್ಷದಿಂದ ಆರಂಭವಾಗಿ ಒಂಬತ್ತನೆಯ ವರ್ಷದವರೆಗಿನ ಕಾಲಮಾನವನ್ನು ಹೊಂದಿವೆ. ಸುಮಾರು 1219ರಲ್ಲಿ ಈ ಟಂಕಶಾಲೆಯು ಕಾರ್ಯ ನಿರ್ವಹಿಸುವುದನ್ನು ನಿಲ್ಲಿಸಿತು. ಈ ಟಂಕಶಾಲೆಯಲ್ಲಿ ಅಚ್ಚಾದ ನಾಣ್ಯಗಳಲ್ಲಿ ಸುಂದರವಾದ ಬರಹವು ಕಾಣಬರುತ್ತದೆ. ಆ ದೃಷ್ಟಿಯಿಂದ ಈ ನಾಣ್ಯಗಳು ಗಮನಾರ್ಹವಾದವು.

ಚಿತ್ರದುರ್ಗದಲ್ಲಿದ್ದ ಟಂಕಶಾಲೆಗೆ, ಟೀಪು ಫರುಕ್ ಯಾಬ್ ಹಿಸಾರ್ ಎಂಬ ಹೆಸರನ್ನು ಕೊಟ್ಟನು. ಸಮಯಪ್ರಜ್ಞೆಯಿಂದ ಗೆದ್ದುಕೊಂಡ ಕೋಟೆ ಎಂದು ಇದರ ಅರ್ಥ. ಇಲ್ಲಿ ಅಚ್ಚಾದ ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳು ದೊರಕಿಲ್ಲ. ಎರಡು ಪೈಸ ನಾಣ್ಯದಿಂದ ಆರಂಭವಾಗಿ ಎಂಟನೆಯ ಒಂದು ಭಾಗದ ಪೈಸದವರೆಗಿನ ತಾಮ್ರದ ನಾಣ್ಯಗಳು ಇಲ್ಲಿ ಅಚ್ಚಾಗುತ್ತಿದ್ದವು. ಇಲ್ಲಿ ಅಚ್ಚಾದ ನಾಣ್ಯಗಳಲ್ಲಿ 1215ರಿಂದ 1219ರವರೆಗಿನ ವರ್ಷಗಳು ಕಾಣಬರುತ್ತವೆ.

ಧಾರವಾಡದಲ್ಲಿ ಟೀಪುವಿನ ಇನ್ನೊಂದು ಟಂಕಶಾಲೆಯಿದ್ದಿತು. ಇದಕ್ಕೆ ಖುರ್ಷದ್ ಸವಾರ್ ಎಂಬ ಹೆಸರನ್ನು ಕೊಟ್ಟನು. ಇಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಅಚ್ಚಾಗುತ್ತಿದ್ದವು. ಕೆಲವು ನಾಣ್ಯಗಳ ಮೇಲೆ ಧಾರವಾಡ ಎನ್ನುವ ಹೆಸರು ಕಂಡುಬಂದರೆ, ಮತ್ತೆ ಕೆಲವು ನಾಣ್ಯಗಳಲ್ಲಿ ಖುರ್ಷದ್ ಸವಾರ್ ಎನ್ನುವ ಬರಹವಿರುತ್ತದೆ. ಇಲ್ಲಿ ಅಚ್ಚಾದ ಚಿನ್ನದ ಪಣ; ಪಗೋಡ, ಬೆಳ್ಳಿಯ ರೂಪಾಯಿ, ತಾಮ್ರದ ಪೈಸ ಮತ್ತು ಅರ್ಧ ಪೈಸ ನಾಣ್ಯಗಳು ದೊರಕಿವೆ.

ಈಗ ಆಂಧ್ರಪ್ರದೇಶಕ್ಕೆ ಸೇರಿರುವ ಅನಂತಪುರ ಜಿಲ್ಲೆಯ ಗುತ್ತಿಯಲ್ಲಿ ಇನ್ನೊಂದು ಟಂಕಶಾಲೆಯಿದ್ದಿತು. ಇದಕ್ಕೆ ಫೈಸ್ ಹಿಸಾರ್ ಎನ್ನುವ ಹೆಸರನ್ನು ಟೀಪು ಕೊಟ್ಟನು. 'ಸಮೃದ್ಧಿಯ ಕೋಟೆ' ಎಂದು ಇದರ ಅರ್ಥ. ಇಲ್ಲಿ ತಾಮ್ರದ ಪೈಸ, ಅರ್ಧ ಪೈಸ ಮತ್ತು ಕಾಲು ಪೈಸ ನಾಣ್ಯಗಳು ಅಚ್ಚಾಗುತ್ತಿದ್ದವು. ಈ ನಾಣ್ಯಗಳು ನೋಡಲು ಅಂದವಾಗಿ ಕಾಣುವುದಿಲ್ಲ. ಮಾತ್ರವಲ್ಲದೆ ಅವುಗಳಲ್ಲಿ ತಪ್ಪುಗಳೂ ಕಂಡುಬರುತ್ತವೆ. ಅದರಲ್ಲಿಯೂ ವರ್ಷವನ್ನು ನಮೂದಿಸುವಲ್ಲಿ ಈ ನಾಣ್ಯಗಳಲ್ಲಿ ತುಂಬ ತಪ್ಪುಗಳು ಕಾಣಬರುತ್ತವೆ.

ಆಂಧ್ರಪ್ರದೇಶದ ಕಡಪ ಜಿಲ್ಲೆಯ ಗುರ್ರಂಕೊಂಡದಲ್ಲಿ ಜಫಾರಾಬಾದ್ ಎಂಬ ಹೆಸರಿನ ಟಂಕಶಾಲೆಯಿದ್ದಿತು. ಜಫಾರಾಬಾದ್ ಅಂದರೆ ವಿಜಯದ ನಗರ ಎಂದರ್ಥ. ಮೊದಲು ಈ ಹೆಸರನ್ನು ಮಡಿಕೇರಿಗೆ ನೀಡಲಾಗಿತ್ತು. ನಂತರ ಇದನ್ನು ಗುರ್ರಂಕೊಂಡಕ್ಕೆ ಕೊಡಲಾಯಿತು. ತಾಮ್ರದ ಪೈಸ, ಅರ್ಧ ಪೈಸ ಮತ್ತು ಕಾಲು ಪೈಸ ನಾಣ್ಯಗಳು ಮಾತ್ರ ಈ ಟಂಕಶಾಲೆಯಲ್ಲಿ ಅಚ್ಚಾಗುತ್ತಿದ್ದವು.


ತಮಿಳುನಾಡಿನ ದಿಂಡಿಗಲ್‌ನಲ್ಲಿ ಟೀಪು ಒಂದು ಟಂಕಶಾಲೆಯನ್ನು ಸ್ಥಾಪಿಸಿದನು. ಇದನ್ನು ಕಾಲಿಕಾಬಾದ್ ಎಂದು ಕರೆಯಲಾಯಿತು. ಇದರ ಅರ್ಥ ದೇವರನಗರ. ಚಿನ್ನದ ಪಣ, ತಾಮ್ರದ ಪೈಸ ಮತ್ತು ಕಾಲು ಪೈಸ ನಾಣ್ಯಗಳು ಇಲ್ಲಿ ಅಚ್ಚಾಗುತ್ತಿದ್ದವು. ಈ ನಾಣ್ಯಗಳ ಮೇಲೆ 1215ರಿಂದ 1218ರವರೆಗಿನ ವರ್ಷಗಳು ಕಾಣಬರುತ್ತವೆ. ಈ ನಾಣ್ಯಗಳಲ್ಲಿರುವ ಬರಹಗಳಲ್ಲಿ ಅನೇಕ ತಪ್ಪುಗಳು ಕಂಡುಬರುತ್ತವೆ.

ತಮಿಳುನಾಡಿನ ಸತ್ಯಮಂಗಲದಲ್ಲಿ ಸಲಾಮಾಬಾದ್ ಎಂಬ ಟಂಕಶಾಲೆಯಿದ್ದಿತು. ಶಾಂತಿಯ ನಗರ ಎಂದು ಇದರ ಅರ್ಥ. ಇದು ಮಿಲಿಟರಿ ದೃಷ್ಟಿಯಿಂದ ಬಲು ಮುಖ್ಯ ನಗರವಾಗಿದ್ದಿತು. ಇಲ್ಲಿ ತಾಮ್ರದ ಪೈಸ, ಅರ್ಧ ಪೈಸ, ಕಾಲು ಪೈಸ ಮತ್ತು ಎಂಟನೆಯ ಒಂದು ಪೈಸ ನಾಣ್ಯಗಳು ಅಚ್ಚಾಗುತ್ತಿದ್ದವು. ಈ ನಾಣ್ಯಗಳು ವಿರಳ.

ಕೇರಳದ ಕಲ್ಲಿಕೋಟೆಯಲ್ಲಿ ಒಂದು ಟಂಕಶಾಲೆಯಿದ್ದಿತು. ಈ ಟಂಕಶಾಲೆಯಲ್ಲಿ ಚಿನ್ನದ ಪಣ, ಬೆಳ್ಳಿಯ ಎರಡು ರೂಪಾಯಿ, ತಾಮ್ರದ ಪೈಸ ಮತ್ತು ಕಾಲು ಪೈಸಗಳು ಅಚ್ಚಾಗುತ್ತಿದ್ದವು. ಇಲ್ಲಿನ ಅನೇಕ ನಾಣ್ಯಗಳಲ್ಲಿ ವರ್ಷದ ಉಲ್ಲೇಖವಿಲ್ಲ.

ಕಲ್ಲಿಕೋಟೆಗೆ ಏಳು ಮೈಲಿ ದೂರದಲ್ಲಿರುವ ಫಿರೋಕ್‌ನಲ್ಲಿ ಒಂದು ಟಂಕಶಾಲೆಯನ್ನು ಸ್ಥಾಪಿಸಲಾಗಿತ್ತು. ಇದಕ್ಕೆ ಫರೂಕಿ ಎಂದು ಹೆಸರು. 'ಏಳಿಗೆಯ ನಗರ' ಎಂದು ಇದರ ಅರ್ಥ. ಚಿನ್ನದ ಪಣ, ತಾಮ್ರದ ಎರಡು ಪೈಸ, ಪೈಸ, ಅರ್ಧ ಪೈಸ, ಕಾಲು ಪೈಸ ನಾಣ್ಯಗಳು ಇಲ್ಲಿ ಅಚ್ಚಾಗುತ್ತಿದ್ದವು. ಇವುಗಳ ಮೇಲೆ 1216ರಿಂದ 1218ರವರೆಗಿನ ವರ್ಷಗಳು ಕಾಣಬರುತ್ತವೆ.

ಮೂರ್ ಎಂಬ ಇತಿಹಾಸಕಾರನ ಪ್ರಕಾರ ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರಿನಲ್ಲಿ ಒಂದು ಟಂಕಶಾಲೆಯಿದ್ದಿತು. ಇದಕ್ಕೆ ಬೇನಜೀರ್ ಎಂದು ಹೆಸರು ಕೊಡಲಾಯಿತು. ಬೇನಜೀರ್ ಎಂದರೆ 'ಸಾಟಿಯಿಲ್ಲದ' ಎಂದು ಅರ್ಥ. ಇಲ್ಲಿನ 1217 ಎಂಬ ವರ್ಷವನ್ನು ಹೊಂದಿರುವ ಚಿನ್ನದ ನಾಣ್ಯವನ್ನು ಮೂರ್ ವಿವರಿಸಿದ್ದಾನೆ. ಆದರೆ ಆನಂತರದ ಇತಿಹಾಸಕಾರರಿಗೆ ಈ ಟಂಕಶಾಲೆಯಲ್ಲಿ ಅಚ್ಚಾದ ನಾಣ್ಯವು ದೊರಕಿಲ್ಲ. ಆದುದರಿಂದ ಈ ಟಂಕಶಾಲೆಯನ್ನು ಹೆಂಡರ್‌ಸನ್ ಮುಂತಾದ ನಾಣ್ಯಶಾಸ್ತ್ರಜ್ಞರು ಟೀಪುವಿನ ಟಂಕಶಾಲೆಯ ಪಟ್ಟಿಯಲ್ಲಿ ಸೇರಿಸುವುದಿಲ್ಲ.



ಟೀಪು ಸುಲ್ತಾನನ ಟಂಕಶಾಲೆಗಳು

ಚಿಕ್ಕಮಗಳೂರು ಜಿಲ್ಲೆಯ ಸಕ್ಕರೆಪಟ್ಟಣದಲ್ಲಿ ಒಂದು ಟಂಕಶಾಲೆಯಿತ್ತು. ಇದನ್ನು ಸಕ್ಕರ್‌ಕೋಟ್ ಎಂದು ಕರೆಯಲಾಗಿದೆ. ಇಲ್ಲಿ ಅಚ್ಚಾದ ತಾಮ್ರದ ಪೈಸ ದೊರಕಿದೆ. ಅದರ ಮೇಲೆ 1218 ಎಂಬ ವರ್ಷವಿದೆ.

ಅಬರ್‌ಘರ್ ಎನ್ನುವುದು ಇನ್ನೊಂದು ಟಂಕಶಾಲೆಯ ಸ್ಥಳ. ಇದನ್ನು ಚಿತ್ರದುರ್ಗ ಜಿಲ್ಲೆಯ ಅಬ್ಬೂರು ಎಂದು ಗುರುತಿಸಲಾಗಿದೆ. ಇಲ್ಲಿ ಅಚ್ಚಾದ ಕಾಲು ಪೈಸ ನಾಣ್ಯ ದೊರಕಿದೆ.

ಆಂಧ್ರಪ್ರದೇಶದ ಗಂಡಿಕೋಟೆಯಲ್ಲಿ ಟೀಪು ಒಂದು ಟಂಕಶಾಲೆಯನ್ನು ಸ್ಥಾಪಿಸಿದನು. ಇಲ್ಲಿ ಉತ್ತಮವಾದ ಕೋಟೆಯೊಂದು ಇದ್ದಿತು. ಅದನ್ನು ಟೀಪು ತನ್ನ ವಶಪಡಿಸಿಕೊಂಡು ತನ್ನ ಅಧಿಕಾರಿಗಳಾದ ಮೀರ್ ಜಮಾಲುದ್ದೀನ್ ಮತ್ತು ಸೈಯದ್ ಮುರ್ತುಜ ಅವರನ್ನು ಈ ಕೋಟೆಯನ್ನು ನೋಡಿಕೊಳ್ಳಲು ನೇಮಿಸಿಕೊಂಡಿದ್ದನು. ಇಲ್ಲಿ ಟಂಕಿಸಲಾದ 1198ನೆಯ ವರ್ಷದ ತಾಮ್ರದ ಪೈಸ ನಾಣ್ಯವು ದೊರಕಿದೆ. ಈ ನಾಣ್ಯದ ಮೇಲೆ ಟಂಕಶಾಲೆಯ ಹೆಸರು ಕಂಜಿಕೋಟೆ ಎಂದು ನಮೂದಿಸಲಾಗಿದೆ.

ಕಾಸರಗೋಡು ಜಿಲ್ಲೆಗೆ ಸೇರಿದ ಬೇಕಲ್ ಕೋಟೆ ವಿಶೇಷವಾಗಿ ಪ್ರಸಿದ್ಧಿಯನ್ನು ಪಡೆದ ಕೋಟೆ. ಇಲ್ಲಿ ಸುಭದ್ರವಾದ ಕೋಟೆಯಿದ್ದಿತು. 1763ರಲ್ಲಿ ಹೈದರನು ಈ ಕೋಟೆಯನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ನಂತರ ಇದು ಟೀಪುವಿನ ರಾಜ್ಯಕ್ಕೆ ಸೇರಿತ್ತು. ಇಲ್ಲಿ ನಡೆದ ಉತ್ಖನನದಲ್ಲಿ ಅನೇಕ ಟೀಪು ನಾಣ್ಯಗಳು ಮತ್ತು ನಾಣ್ಯದ ಮುದ್ರೆಗಳು ದೊರಕಿವೆ. ಆದುದರಿಂದ ಇಲ್ಲಿ ಟೀಪುವಿನ ಕಾಲದ ಟಂಕಶಾಲೆಯಿದ್ದಿತೆಂದು ಗೊತ್ತಾಗುತ್ತದೆ. ಇಲ್ಲಿ ಟೀಪುವಿನ ತಾಮ್ರದ ಪೈಸ, ಅರ್ಧ ಪೈಸ, ಕಾಲು ಪೈಸ ಮತ್ತು ಎಂಟನೆಯ ಒಂದು ಪೈಸ ನಾಣ್ಯಗಳು, ಒಂದು ನಾಣ್ಯದ ಮುದ್ರೆ ದೊರಕಿವೆ.

ಮಹಾರಾಷ್ಟ್ರದ ಸತಾರದಲ್ಲಿ ಟೀಪುವಿಗೆ ಸೇರಿದ ಒಂದು ಟಂಕಶಾಲೆಯಿದ್ದಿತೆಂದು ಕೆಲವರು ಭಾವಿಸಿದ್ದಾರೆ. ಆದರೆ ಈ ಸ್ಥಳವನ್ನು ಟೀಪು ವಶಪಡಿಸಿಕೊಂಡಿದ್ದಕ್ಕೆ ಯಾವ ಮಾಹಿತಿಯೂ ದೊರಕಿಲ್ಲದೇ ಇರುವುದರಿಂದ, ಅನೇಕರು ಈ ಟಂಕಶಾಲೆಯನ್ನು ಟೀಪುವಿಗೆ ಸೇರಿದ್ದೆಂದು ಪರಿಗಣಿಸುವುದಿಲ್ಲ. ಆದರೆ ಕೆಲವು ನಾಣ್ಯಗಳ ಮೇಲೆ ಜರ್ಬ್-ಇ-ಸತಾರ್ ಎನ್ನುವ ಬರವಣಿಗೆಯ ಆಧಾರದ ಮೇಲೆ ಇಲ್ಲಿ ಟೀಪುವಿನ ಟಂಕಶಾಲೆಯಿದ್ದಿತೆಂದು ಕೆಲವರು ವಾದಿಸುತ್ತಾರೆ. ಒಟ್ಟಿನಲ್ಲಿ ಈವರೆಗೆ ಟೀಪುವಿನ ಹದಿನೇಳು ಟಂಕಶಾಲೆಗಳು ಗುರುತಿಸಲ್ಪಟ್ಟಿವೆ. ಹೊಸ ನಾಣ್ಯಗಳು ದೊರಕಿದರೆ ಈ ಪಟ್ಟಿ ಇನ್ನೂ ದೊಡ್ಡದಾಗುವುದರಲ್ಲಿ ಸಂಶಯವಿಲ್ಲ.

ಈ ಮೇಲಿನ ಟಂಕಶಾಲೆಗಳಲ್ಲಿ ಯಾವ ನಾಣ್ಯಗಳು ಅಚ್ಚಾಗುತ್ತಿದ್ದವು ಎಂಬುದನ್ನು ಈ ಪಟ್ಟಿಯಿಂದ ತಿಳಿಯಬಹುದು.

ಶ್ರೀರಂಗಪಟ್ಟಣ	:	ಅಹ್ಮದೀ, ಸದೀಕೀ, ಪಗೋಡ, ಪಣಂ, ಎರಡು ರೂಪಾಯಿ, ರೂಪಾಯಿ, ಅರ್ಧ ರೂಪಾಯಿ, ಕಾಲು ರೂಪಾಯಿ, ಎಂಟನೆಯ ಒಂದು ರೂಪಾಯಿ, ಹದಿನಾರನೆಯ ಒಂದು ರೂಪಾಯಿ, ಮೂವತ್ತೆರಡನೆಯ ಒಂದು ರೂಪಾಯಿ, ಎರಡು ಪೈಸ, ಪೈಸ, ಅರ್ಧ ಪೈಸ, ಕಾಲು ಪೈಸ, ಎಂಟನೆಯ ಒಂದು ಪೈಸ.
ನಗರ	:	ಅಹ್ಮದೀ, ಪಗೋಡ, ಪಣಂ, ಎರಡು ರೂಪಾಯಿ, ರೂಪಾಯಿ, ಅರ್ಧ ರೂಪಾಯಿ, ಪೈಸ, ಅರ್ಧ ಪೈಸ, ಕಾಲು ಪೈಸ, ಎಂಟನೆಯ ಒಂದು ಪೈಸ.
ಧಾರವಾಡ	:	ಪಗೋಡ, ಪಣಂ, ರೂಪಾಯಿ, ಪೈಸ, ಅರ್ಧ ಪೈಸ.
ಕಲ್ಲಿಕೋಟೆ	:	ಪಣಂ, ಎರಡು ರೂಪಾಯಿ, ಪೈಸ, ಅರ್ಧ ಪೈಸ.
ಫಿರೋಕ್	:	ಪಣಂ, ಎರಡು ಪೈಸ, ಪೈಸ, ಅರ್ಧ ಪೈಸ, ಕಾಲು ಪೈಸ, ಎಂಟನೆಯ ಒಂದು ಪೈಸ.
ದಿಂಡಿಗಲ್	:	ಪಣಂ, ಪೈಸ, ಅರ್ಧ ಪೈಸ, ಕಾಲು ಪೈಸ.
ಚಿತ್ರದುರ್ಗ	:	ಎರಡು ಪೈಸ, ಪೈಸ, ಅರ್ಧ ಪೈಸ, ಕಾಲು ಪೈಸ, ಎಂಟನೆಯ ಒಂದು ಪೈಸ.
ಸತ್ಯಮಂಗಲ	:	ಪೈಸ, ಅರ್ಧ ಪೈಸ, ಕಾಲು ಪೈಸ, ಎಂಟನೆಯ ಒಂದು ಪೈಸ.
ಸಕ್ಕರೆಪಟ್ಟಣ	:	ಪೈಸ
ಅಬರ್‌ಫರ್	:	ಕಾಲು ಪೈಸ
ಬೆಂಗಳೂರು	:	ಪೈಸ, ಅರ್ಧ ಪೈಸ, ಕಾಲು ಪೈಸ, ಎಂಟನೆಯ ಒಂದು ಪೈಸ
ಗುರ್ರಂಕೊಂಡ	:	ಪೈಸ, ಅರ್ಧ ಪೈಸ, ಕಾಲು ಪೈಸ.
ಗುತ್ತಿ	:	ಪೈಸ, ಅರ್ಧ ಪೈಸ, ಕಾಲು ಪೈಸ.
ಹೊಳಹೊನ್ನೂರು	:	ಅಹ್ಮದೀ
ಗಂಡಿಕೋಟೆ	:	ಪೈಸ
ಬೇಕಲ್	:	ಪೈಸ, ಅರ್ಧ ಪೈಸ, ಕಾಲು ಪೈಸ, ಎಂಟನೆಯ ಒಂದು ಪೈಸ
ಪತಾರ (?)	:	ಅರ್ಧ ಪೈಸ

ನಾಣ್ಯದ ಹೆಸರುಗಳು : ಚಿನ್ನದ ನಾಣ್ಯಗಳು

ಟೀಪು ನಾಲ್ಕು ಮೌಲ್ಯದ ಚಿನ್ನದ ನಾಣ್ಯಗಳನ್ನು ಟಂಕಿಸಿದನು. ಪ್ರತಿಯೊಂದು ನಾಣ್ಯಕ್ಕೂ ಒಂದು ಹೆಸರನ್ನು ಕೊಟ್ಟನು.

ಅಹ್ಮದೀ : ನಾಲ್ಕು ಪಗೋಡ ಮೌಲ್ಯದ ಚಿನ್ನದ ನಾಣ್ಯ; ಪ್ರವಾದಿಯ ಹೆಸರಿನಲ್ಲಿ ಈ ನಾಣ್ಯವನ್ನು ಅಹ್ಮದೀ ಎಂದು ಕರೆಯಲಾಯಿತು.

ಸದೀಕೀ : ಎರಡು ಪಗೋಡ ಮೌಲ್ಯದ ಚಿನ್ನದ ನಾಣ್ಯ : ಮೊದಲನೆಯ ಖಲೀಫ ಅಬುಬಕರ್ ಸದೀಕಿಯ ಗೌರವಾರ್ಥ ಈ ನಾಣ್ಯಕ್ಕೆ ಹೆಸರು ಕೊಡಲ್ಪಟ್ಟಿದೆ.

ಫಾರೂಕೀ : ಎರಡನೆಯ ಖಲೀಫನ ಹೆಸರಿನ ಇದು ಒಂದು ಪಗೋಡದ ನಾಣ್ಯ.

ಪಣಂ : ಇದಕ್ಕೆ ಯಾವ ಹೆಸರನ್ನೂ ಕೊಡಲಿಲ್ಲ.

ಬೆಳ್ಳಿಯ ನಾಣ್ಯಗಳು (ಏಳು ನಮೂನೆ)

ಹೈದರೀ : ಎರಡು ರೂಪಾಯಿನ ನಾಣ್ಯ : ನಾಲ್ಕನೆಯ ಖಲೀಫ ಹೈದರ್ ಅವರ ಹೆಸರನ್ನು ಹೊಂದಿದೆ.

ಇಮಾಮೀ : ಇಮಾಮ್‌ಗಳ ಗೌರವಾರ್ಥದ ಒಂದು ರೂಪಾಯಿ ನಾಣ್ಯ.

ಆಬಿದೀ : ನಾಲ್ಕನೆಯ ಮಾಮ್ ಅಲಿ ಜೈನ್ ಅಲ್ ಅಬಿದಿನ್ ಅವರ ಗೌರವಾರ್ಥದ ಅರ್ಧ ರೂಪಾಯಿ ನಾಣ್ಯ.

ಬಾಕಿರೀ : ಐದನೆಯ ಇಮಾಮ್ ಮುಹಮ್ಮದ್ ಅಲ್ ಬಾಕಿರ್ ಅವರ ಹೆಸರಿನ ಕಾಲು ರೂಪಾಯಿ.

ಜಫರೀ : ಆರನೆಯ ಇಮಾಮ್ ಜಫರ್ ಅಲ್ ಸದೀಕ್ ಅವರ ಹೆಸರಿನ ಎಂಟನೆಯ ಒಂದು ರೂಪಾಯಿ.

ಕಾಜಿಮೀ : ಏಳನೆಯ ಇಮಾಮ್ ಮುಸ ಅಲ್ ಕಾಜಿಂ ಅವರ ಹೆಸರನ್ನು ಹೊಂದಿರುವ ಹದಿನಾರನೆಯ ಒಂದು ರೂಪಾಯಿ.

ಖಿಜ್ರೀ : ಅಲ್ ಖಿಜ್ ಎಂಬ ಸಂತರ ಜ್ಞಾಪಕಾರ್ಥದ ಮೂವತ್ತೆರಡನೆಯ ಒಂದು ರೂಪಾಯಿ.

ತಾಮ್ರದ ನಾಣ್ಯಗಳು (ಐದು ನಮೂನೆ)

ಓತ್ಮಾನೀ ಅಥವಾ ಮುಷ್ಟರೀ : ಇದು ಎರಡು ಪೈಸ ಮೌಲ್ಯದ ತಾಮ್ರದ ನಾಣ್ಯ. ಮೂರನೆಯ ಖಲೀಫರ ಹೆಸರು ಓತ್ಮಾನ್; ಬೃಹಸ್ಪತಿ ಗ್ರಹದ ಹೆಸರು ಅಲ್ ಮುಷ್ಟರಿ.

ಜೋಹ್ರಾ : ಶುಕ್ರಗ್ರಹದ ಹೆಸರಿನ ಒಂದು ಪೈಸ ನಾಣ್ಯ.

ಬಹ್ರಾಂ : ಅಂಗಾರಕ ಗ್ರಹದ ಹೆಸರಿನ ಅರ್ಧ ಪೈಸ ನಾಣ್ಯ.

ಅಖ್ತರ್ : ನಕ್ಷತ್ರದ ಹೆಸರಿನ ಕಾಲು ಪೈಸ ನಾಣ್ಯ.

ಕುತ್ಬ್ : ಧ್ರುವ ನಕ್ಷತ್ರದ ಹೆಸರಿನ ಎಂಟನೆಯ ಒಂದು ಪೈಸ.

ಈ ಎಲ್ಲ ನಾಣ್ಯಗಳ ಪರಸ್ಪರ ಮೌಲ್ಯಗಳನ್ನು ಈ ರೀತಿ ತೋರಿಸಬಹುದು.

1 ಅಹ್ಮದೀ	=	2 ಸದೀಕೀ
1 ಸದೀಕೀ	=	2 ಫಾರೂಕೀ
1 ಫಾರೂಕೀ	=	10 ಪಣಂ
1 ಹೈದರೀ	=	2 ಇಮಾಮೀ
1 ಇಮಾಮೀ	=	2 ಆಬಿದೀ
1 ಆಬಿದೀ	=	2 ಬಾಕಿರೀ
1 ಬಾಕಿರೀ	=	2 ಜಫ್ರೀ
1 ಜಫ್ರೀ	=	2 ಕಾಜಿಮೀ
1 ಕಾಜಿಮೀ	=	2 ಖಿಜ್ರೀ
1 ಓತ್ಮಾನೀ	=	2 ಜೋಹ್ರಾ
1 ಜೋಹ್ರಾ	=	2 ಬಹ್ರಾಂ
1 ಬಹ್ರಾಂ	=	2 ಅಖ್ತರ್
1 ಅಖ್ತರ್	=	2 ಕುತ್ಬ್

ನಾಣ್ಯಗಳ ಕಾಲಮಾನ

ಟೀಪು ನಾಣ್ಯಗಳ ಮೇಲೆ ಅಚ್ಚು ಮಾಡುವ ಕಾಲಮಾನದಲ್ಲೂ ಕೆಲವು ಬದಲಾವಣೆಗಳನ್ನು ಮಾಡಿದನು. ಇವನ ಆಳ್ವಿಕೆಯ ಮೊದಲ ನಾಲ್ಕು ವರ್ಷಗಳಲ್ಲಿ ಟಂಕಿಸಲಾದ ನಾಣ್ಯಗಳಲ್ಲಿ ಹಿಜಿರ ಕಾಲವಿದೆ. ಇವು 1197ರಿಂದ 1200ರವರೆಗೆ ಕಾಣಬರುತ್ತವೆ. ಐದನೆಯ ವರ್ಷದಲ್ಲಿ ಹಿಜಿರ ಶಕೆಯ ಬದಲು ಮೌಲೂದಿ ಶಕೆಯನ್ನು ಬಳಕೆಗೆ ತಂದನು. ಅಂದರೆ ಆಳ್ವಿಕೆಯ ಐದನೆಯ ವರ್ಷದ ನಾಣ್ಯಗಳಲ್ಲಿ 1215 ಮೌಲೂದೀ ಎಂಬ ಬರಹವಿದ್ದು, ಇದು ಅವನ ಆಳ್ವಿಕೆಯ ಕೊನೆಯವರೆಗೆ ಕಾಣಬರುತ್ತದೆ. ಕೊನೆಯ ವರ್ಷದ ನಾಣ್ಯದ ಮೇಲೆ 1277 ಎಂಬ ಮೌಲೂದಿ ವರ್ಷ ಕಾಣಬರುತ್ತದೆ. ಮೌಲೂದಿ ಕಾಲಮಾನವು ಪ್ರವಾದಿ ಮಹಮ್ಮದರ ಜನ್ಮದಿನದಿಂದ ಆರಂಭವಾಗುತ್ತದೆ. ಇದರಲ್ಲಿ ಹನ್ನೆರಡು ತಿಂಗಳುಗಳಿದ್ದು, ಅಧಿಕ ಮಾಸಕ್ಕೂ ಅವಕಾಶವುಂಟು. ಈ ವರ್ಷವನ್ನು ತನ್ನ ನಾಣ್ಯಗಳ ಮೇಲೆ ಹಾಕಿಸುವುದರ ಮೂಲಕ ಟೀಪು ಹಿಂದೂ ಕಾಲಮಾನವನ್ನು ಅನುಸರಿಸಿದನು. ಈ ವರ್ಷಗಳಿಗೆ ಹೊಸ ಹೆಸರುಗಳನ್ನು ಕೊಟ್ಟನು. ಇದರಲ್ಲಿ ಟೀಪು ಅಬ್ಜದ್ ಮತ್ತು ಅಬ್ತತ್ ಎಂಬ ಎರಡು ಬಗೆಯನ್ನು ಅನುಸರಿಸಿದನು. ತನ್ನ ಆಳ್ವಿಕೆಯ ಮೊದಲ ನಾಲ್ಕು ವರ್ಷಗಳಲ್ಲಿ ಟೀಪು ಅಬ್ಜದ್ ರೀತಿಯನ್ನು ಅನುಸರಿಸಿದನು. ಐದನೆಯ ವರ್ಷದಿಂದ ತನ್ನ ಆಳ್ವಿಕೆಯ ಕೊನೆಯವರೆಗೆ ಅಬ್ತತ್ ರೀತಿಯನ್ನು ಅನುಸರಿಸಿದನು. ಟೀಪು ಈ ವರ್ಷಗಳಿಗೆ ಕೊಟ್ಟ ಹೆಸರು, ಅವುಗಳ ಅರ್ಥ ಮತ್ತು ಅವು ಎಷ್ಟನೆಯ ವರ್ಷವನ್ನು ಸೂಚಿಸುತ್ತವೆ ಎಂಬುದನ್ನು ಕೆಳಗೆ ತೋರಿಸಲಾಗಿದೆ.

ಆಳ್ವಿಕೆಯ ವರ್ಷ	ಹೆಸರು	ಅರ್ಥ	ವರ್ಷದ ಸಂಖ್ಯೆ
1	ಜಕಿ	ಶುದ್ಧ	37
2	ಅಜಲ್	ಶಾಶ್ವತ	38
3	ಜಲನ್	ಉಜ್ವಲ	39
4	ದಲ್ವ್	ಕುಂಭರಾಶಿ	40
5	ಷಾ	ದೊರೆ	41
6	ಸಾರಾ	ಸುವಾಸನೆ	42
7	ಸರಾಬ್	ಮರೀಚಿಕೆ	43
8	ಶಿತಾ	ಶಿಶಿರ	44
9	ಜಬರ್‌ಜದ್	ಗೋಮೇಧಿಕ	45

10	ಸಹರ್	ಉದಯ	46
11	ಸಾಹರ್	ಮಂತ್ರವಾದಿ	47
12	ರಾಸಿಖ್	ಸ್ಥಿರ	48
13	ಷಾದ್	ಸಂತೋಷ	49
14	ಹಿರಾಸತ್	ರಕ್ಷಣೆ	50
15	ಸಾಜ್	ಹೊಂದಾಣಿಕೆ	51
16	ಷಾದಾಬ್	ತೇವ	52
17	ಬಾರಿಷ್	ಮಳೆ	53

ಸಂವತ್ಸರಗಳಿಗೆ ಕೊಟ್ಟಂತೆ ಟೀಪು ತಿಂಗಳುಗಳಿಗೂ ಹೆಸರನ್ನು ಕೊಟ್ಟನು. ಮೊದಲ ನಾಲ್ಕು ವರ್ಷಗಳ ತನ್ನ ಆಳ್ವಿಕೆಯ ತಿಂಗಳುಗಳಲ್ಲಿ ಅಬ್ಜದ್ ರೀತಿಯನ್ನು ಉಪಯೋಗಿಸಿ, ಮಿಕ್ಕ ವರ್ಷಗಳಲ್ಲಿ ಅಬ್ತತ್ ರೀತಿಯನ್ನು ಅನುಸರಿಸಿದನು.

ತಾಂತ್ರಿಕ ದೃಷ್ಟಿಯಿಂದ ಟೀಪು ನಾಣ್ಯಗಳು ಉತ್ತಮವಾಗಿವೆ. ಇವನಿಗೆ ಫ್ರೆಂಚರ ಸಂಪರ್ಕ ವಿಶೇಷವಾಗಿದ್ದುದರಿಂದ, ಅದರ ಪ್ರಭಾವಗಳನ್ನು ನಾಣ್ಯಗಳ ಮೇಲೂ ಕಾಣಬಹುದು. ನಾಣ್ಯಗಳ ಸುತ್ತಲೂ ಯಂತ್ರದಿಂದ ನಯಮಾಡಿ ಕೆಲವು ಗುರುತುಗಳನ್ನು ಮಾಡುವ 'ಮಿಲ್ಲಿಂಗ್' ಟೀಪುವಿನ ನಾಣ್ಯಗಳಲ್ಲಿ ಕಾಣಬರುತ್ತದೆ. ಒಂದು ಅಥವಾ ಎರಡು ಗೆರೆಗಳು ನಾಣ್ಯದ ಸುತ್ತಲೂ ಕಂಡುಬಂದು ಮಧ್ಯದಲ್ಲಿ ಕೆಲವು ಚಿಹ್ನೆಗಳು ಇರುವಂತೆ ಕಾಣುತ್ತವೆ. ಇದು ಅಷ್ಟೊಂದು ನಯವಾಗಿಲ್ಲವೆಂಬುದು ನಿಜವಾದರೂ, 'ಮಿಲ್ಲಿಂಗಿನ' ಆರಂಭದ ದೆಸೆಯನ್ನು ಸೂಚಿಸುತ್ತದೆ ಎನ್ನುವುದು ಗಮನಾರ್ಹ ವಿಷಯ. ಇದು ಕರ್ನಾಟಕ ನಾಣ್ಯಗಳಲ್ಲಿ ಮೊಟ್ಟಮೊದಲನೆಯ ಬಾರಿಗೆ ಕಾಣುತ್ತದೆ ಎನ್ನುವುದೂ ಗಮನಿಸಬೇಕಾದ ಅಂಶ. ಸಾಮಾನ್ಯವಾಗಿ 'ಮಿಲ್ಲಿಂಗ್' ಟೀಪುವಿನ ಅಹ್ಮದೀ, ಸದೀಕೀ, ಪಗೋಡ, ಎರಡು ರೂಪಾಯಿ, ಒಂದು ರೂಪಾಯಿ, ಅರ್ಧ ರೂಪಾಯಿ ಮತ್ತು ಕಾಲು ರೂಪಾಯಿ ನಾಣ್ಯಗಳ ಮೇಲೆ ಕಂಡುಬರುತ್ತವೆ.

ಈ ಹಿನ್ನೆಲೆಯಲ್ಲಿ ಇದುವರೆವಿಗೆ ದೊರಕಿರುವ ಟೀಪುವಿನ ನಾಣ್ಯಗಳನ್ನು ಗಮನಿಸಬಹುದು.

ಚಿನ್ನದ ನಾಣ್ಯಗಳು

ಟೀಪುವಿನ ಅತಿ ಹೆಚ್ಚು ಮೌಲ್ಯದ ಚಿನ್ನದ ನಾಣ್ಯವೆಂದರೆ ನಾಲ್ಕು ಪಗೋಡಗಳ ಅಹ್ಮದೀ. ಇದರ ತೂಕ 210-215 ಗ್ರೇನ್. ಅಂದರೆ, 52 ಗ್ರೇನ್ ತೂಕದ ನಾಲ್ಕು

ಪಗೋಡಗಳ ಮೌಲ್ಯದ ನಾಣ್ಯವಿದು. ಇದರ ಅಗಲ 0-9". ಇದು ತುಂಬ ಕಲಾತ್ಮಕವಾದ ನಾಣ್ಯವಾಗಿದ್ದು, ವಿಶೇಷವಾಗಿ ಶ್ರೀರಂಗಪಟ್ಟಣದ ಮುಖ್ಯ ಟಂಕಶಾಲೆಯಲ್ಲಿ ಅಚ್ಚಾಗುತ್ತಿತ್ತು. ವೃತ್ತಾಕಾದ ಈ ನಾಣ್ಯದ ಸುತ್ತಲೂ ಚುಕ್ಕೆಗಳ ವೃತ್ತವಿದ್ದು, ಅದರೊಳಗೆ ರೇಖಾವೃತ್ತವಿದೆ. ಎರಡು ಮುಖಗಳಲ್ಲಿಯೂ ಪರ್ಷಿಯನ್ ಬರವಣಿಗೆಯಿದೆ. ಮುಮ್ಮುಖದ ಬರವಣಿಗೆಯ ಅರ್ಥ : "ಅಹಮದನ ಧರ್ಮವು ಹೈದರನ ವಿಜಯಗಳಿಂದ ವಿಶ್ವದಲ್ಲಿ ಪ್ರಕಾಶಿತವಾಗುತ್ತದೆ; ಪಟನ್‌ನಲ್ಲಿ ಅಚ್ಚಾದುದು; ವರ್ಷ ಅಜಲ್ 38, 1192". ಹಿಮ್ಮುಖದ ಬರಹದ ಅರ್ಥ ಹೀಗಿದೆ : "ಅವನೇ ಸುಲ್ತಾನ, ವಿಶಿಷ್ಟನಾದವನು, ನ್ಯಾಯವಾದಿ, ಬಹಾರಿಯ ಮೂರು ವರ್ಷ ಅಜಲ್, ಆಳ್ವಿಕೆಯ ವರ್ಷ 2".

ಮು : ದಿನ್ ಇ ಅಹಮದ್ ದರ್
ಜಹಾನ್ ರೋಷನ್
ಜಿ ಫತ್-ಇ ಹೈದರ್ ಅಸ್ತ್
ಜರ್ಬ್-ಇ-ಪಟನ್
1198 ಹಿಜ್ರಿ ಅಜಲ್ ಸನ್

ಹಿ : ಹವಸ್ ಸುಲ್ತಾನ್
ಹೈದರ್
ಅಲ್ ರಲಿಯ್ಯುಲ್ ಅದಿಲ್
ಅಜಲ್ ಸನ್ ಜುಲುಸ್ 2

ಈ ಮೌಲ್ಯದ ನಾಣ್ಯಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಕಾಣಬಹುದು. ಇನ್ನೊಂದು ನಮೂನೆಯಲ್ಲಿ ಮುಹಮ್ಮದ್ ಎಂಬ ಪದ ಮುಮ್ಮುಖದ ಬರಹದ ಆರಂಭದಲ್ಲಿ ಕಾಣಬಂದರೆ, ಕೆಲವು ನಾಣ್ಯಗಳಲ್ಲಿ ಬರಹದ ಕೊನೆಯಲ್ಲಿ ಕಾಣಬರುತ್ತದೆ. ಕೆಲವು ನಾಣ್ಯಗಳ ಮೇಲೆ ನಾಣ್ಯದ ಹೆಸರು, ಅಹ್ಮದೀ ಕೂಡ ಮುಮ್ಮುಖದಲ್ಲಿ ಕಾಣಬರುತ್ತದೆ.

ಸದೀಕೀ ಎನ್ನುವ ನಾಣ್ಯ ಎರಡು ಪಗೋಡ ಮೌಲ್ಯದ ಚಿನ್ನದ ನಾಣ್ಯ. ಇದರ ತೂಕ 105 ಗ್ರೇನ್; ಅಗಲ 0.75". ಈ ನಾಣ್ಯ ಅಹ್ಮದೀ ನಾಣ್ಯದಲ್ಲಿ ಕಂಡುಬರುವ ಬರಹಗಳನ್ನೇ ಎರಡು ಮುಖಗಳಲ್ಲಿಯೂ ಹೊಂದಿರುತ್ತದೆ. ಆದರೆ ತೇದಿಗಳಲ್ಲಿ ಮಾತ್ರ ಭಿನ್ನತೆ ಕಂಡುಬರುತ್ತದೆ.

ಫಾರೂಕೀ ಎನ್ನುವುದು ಒಂದು ಪಗೋಡ ಮೌಲ್ಯದ ಚಿನ್ನದ ನಾಣ್ಯ. ಇದರ ತೂಕ 52 ಗ್ರೇನ್; ಅಗಲ 0.6". ಇದರ ಮುಮ್ಮುಖದಲ್ಲಿ 'ಹೆ' ಎಂಬ ಅಕ್ಷರ,

ಟಂಕಶಾಲೆಯ ಹೆಸರು, ಆಳ್ವಿಕೆಯ ವರ್ಷ ಮಾತ್ರ ಕಂಡುಬರುತ್ತದೆ. ಹಿಮ್ಮುಖದಲ್ಲಿ, 'ಅವನೇ ಸುಲ್ತಾನ, ನ್ಯಾಯವಾದಿ' ಎಂಬ ಬರಹ ಮತ್ತು ಹಿಜಿರಾ ತೇದಿ ಮಾತ್ರ ಕಂಡುಬರುತ್ತವೆ. ಈ ರೀತಿಯ ಕೆಲವು ನಾಣ್ಯಗಳ ಹಿಮ್ಮುಖದಲ್ಲಿ ಮುಹಮ್ಮದ್ ಎಂಬ ಪದ ಬರಹದ ಮೊದಲಿನಲ್ಲಿರುತ್ತದೆ. ಇನ್ನೊಂದು ನಮೂನೆಯ ನಾಣ್ಯದ ಮುಮ್ಮುಖದಲ್ಲಿ ಫಾರೂಕೀ ಎಂಬ ನಾಣ್ಯದ ಹೆಸರು ಹಾಗೂ ಹಿಮ್ಮುಖದಲ್ಲಿ ಮುಹಮ್ಮದ್ ಎಂಬ ಪದ ಆರಂಭದಲ್ಲಿಯೂ ಕಾಣಬರುತ್ತದೆ.

ಟೀಪು ಸುಲ್ತಾನನ ಅತ್ಯಂತ ಕನಿಷ್ಠ ಚಿನ್ನದ ನಾಣ್ಯವೆಂದರೆ ಪಣಂ. ಇದರ ತೂಕ 5.2 ಗ್ರೇನ್. ಅಗಲ 0.3". ಈ ನಾಣ್ಯಕ್ಕೆ ಯಾವ ಹೊಸ ಹೆಸರನ್ನೂ ಟೀಪು ಕೊಡಲಿಲ್ಲ. ಈ ನಾಣ್ಯದ ಮುಮ್ಮುಖದಲ್ಲಿ 'ಹೆ' ಎಂಬ ಅಕ್ಷರ ಮತ್ತು ಹಿಮ್ಮುಖದಲ್ಲಿ ಟಂಕಶಾಲೆಯ ಹೆಸರು, ವರ್ಷವಿರುತ್ತದೆ. ಉದಾಹರಣೆಗೆ ಶ್ರೀರಂಗಪಟ್ಟಣದಲ್ಲಿ ಟಂಕಿಸಲಾದ ಪಣಂಗಳ ಹಿಮ್ಮುಖದಲ್ಲಿ 'ಜರ್ಬ್ ಇ ಪಟನ್ 1198' ಎಂದಿರುತ್ತದೆ. ಕೆಲವು ನಾಣ್ಯಗಳಲ್ಲಿ ಮೊದಲು ವರ್ಷದ ಉಲ್ಲೇಖವಿದ್ದು, ನಂತರ ಟಂಕಶಾಲೆಯ ಹೆಸರಿರುತ್ತದೆ. ನಗರದಲ್ಲಿ ಅಚ್ಚಾದ ಪಣಂಗಳು ಈ ಗುಂಪಿಗೆ ಸೇರುತ್ತವೆ.




ಬೆಳ್ಳಿಯ ನಾಣ್ಯಗಳು

ಟೀಪು ಸುಲ್ತಾನ್ ಏಳು ನಮೂನೆಯ ಬೆಳ್ಳಿಯ ನಾಣ್ಯಗಳನ್ನು ಟಂಕಿಸಿದನು. ಅತ್ಯಂತ ಹೆಚ್ಚಿನ ಮೌಲ್ಯದ ಬೆಳ್ಳಿ ನಾಣ್ಯವೆಂದರೆ ಎರಡು ರೂಪಾಯಿ ಮೌಲ್ಯದ ಹೈದರೀ. ಇದರ ತೂಕ 355 ಗ್ರೇನ್; ಅಗಲ 1.4".

ಮು : ಗೆರೆಗಳು ಮತ್ತು ಚುಕ್ಕೆಗಳಿಂದ ಮಾಡಿದ ವೃತ್ತದೊಳಗೆ ಏಳು ಸಾಲುಗಳ ಪರ್ಷಿಯನ್ ಬರಹ.

ಚಿನ್ನದ ಅಹಮದೀ ನಾಣ್ಯದಲ್ಲಿರುವಂತೆ ಮತ್ತು ಟಂಕಶಾಲೆಯ ಹೆಸರು, ಸಂವತ್ಸರ ಹಾಗೂ ಹಿಜಿರ ವರ್ಷ.

ಹಿ : ಗೆರೆಗಳು ಮತ್ತು ಚುಕ್ಕೆಗಳಿಂದ ಮಾಡಿದ ವೃತ್ತದೊಳಗೆ ಚಿನ್ನದ ಅಹ್ಮದೀ ನಾಣ್ಯದಲ್ಲಿರುವಂತೆ.



ಈ ಮೌಲ್ಯದ ಕೆಲವು ನಾಣ್ಯಗಳಲ್ಲಿ ಮುಮ್ಮುಖದಲ್ಲಿ ಮಹಮ್ಮದ್ ಎನ್ನುವ ಪದವನ್ನು ಬರಹದ ಆರಂಭದಲ್ಲಿ ಬರೆಯಲಾಗಿದೆ.

ಒಂದು ರೂಪಾಯಿನ ನಾಣ್ಯದ ಹೆಸರು ಇಮಾಮೀ. ಇದರ ತೂಕ 175 ಗ್ರೇನ್; ಅಗಲ 1.1". ಇದರ ಮುಮ್ಮುಖ ಮತ್ತು ಹಿಮ್ಮುಖಗಳಲ್ಲಿ ಎರಡು ರೂಪಾಯಿ ನಾಣ್ಯದಲ್ಲಿ ಕಂಡುಬರುವ ಬರಹಗಳೇ ಕಾಣಬರುತ್ತವೆ. ಕೆಲವು ನಾಣ್ಯಗಳಲ್ಲಿ ಹಿಜಿರ ವರ್ಷದ ಬದಲು ಮೌಲೂದೀ ವರ್ಷದ ಉಲ್ಲೇಖವಿರುತ್ತದೆ. ಉದಾಹರಣೆಗೆ ಈ ಕೆಳಗಿನ ನಾಣ್ಯವನ್ನು ಗಮನಿಸಬಹುದು.

ಮು : ಮುಹಮ್ಮದ್ ದಿನ್ 2 ಅಹಮದ್ ದರ್
ಜಹಾನ್ ರೋಷನ್ ಜಿ
ಫತ್ ಇ ಹೈದರ್ ಅಸ್ತ್
ಇಮಾಮಿ
ಜರ್ಬ್ ಇ ನಗರ್
ಸನ್ ಸಾರಾ 1216

ಹಿ : ಹವಾಸ್ ಸುಲ್ತನತ್
ವಲಿಯ್ಯುಲ್ ಆದಿಲ್ ಹೈದರ್
ಸನ್ ಸಖ್ ಬಹಾರ್
ಜುಲೂಸ್ 6

ಆಬಿದೀ ಎನ್ನುವುದು ಅರ್ಧ ರೂಪಾಯಿ ನಾಣ್ಯ. ಇದರ ತೂಕ 87 ಗ್ರೇನ್; ಅಗಲ 0.8". ಎರಡು ಕಡೆಯೂ ಬರವಣಿಗೆಗಳಿವೆ. ಇದರ ಬರವಣಿಗೆ ಇಮಾಮೀ ನಾಣ್ಯದಂತಿದೆ.

ಕಾಲು ರೂಪಾಯಿ ನಾಣ್ಯದ ಹೆಸರು ಬಾಕಿರೀ. ಇದರ ತೂಕ 43 ಗ್ರೇನ್; ಅಗಲ 0.6".

ಮು : ಹವಸ್ ಸುಲ್ತಾನ್

ಹೈದರ್

ಅಲ್ ವಲಿಯ್ಯುಲ್ ಆದಿಲ್

ಸನ್ 1216 ಮುಹಮ್ಮದ್

ಹಿ : ಸನ್ 6

ಬಾಕಿರೀ

'ಹೆ' ಪಟನ್

ಎಂಟನೆಯ ಒಂದು ರೂಪಾಯಿ ನಾಣ್ಯದ ಹೆಸರು ಜಫರೀ. ಇದರ ತೂಕ 20 ಗ್ರೇನ್; ಅಗಲ 0.4". ನಾಣ್ಯವು ಸಣ್ಣದಾದುದರಿಂದ ಹೆಚ್ಚಿನ ಸಂಖ್ಯೆಯ ಅಕ್ಷರಗಳಿಗೆ ಅವಕಾಶವಿಲ್ಲ. ಆದುದರಿಂದ ಬರಹ ಸಣ್ಣದಾಗಿರುತ್ತದೆ.

ಮು : ಸನ್ 1218 ಮುಹಮ್ಮದ್

ಜರ್ಬ್ ಇ ಪಟನ್

ಹಿ : ಜಫರೀ

ಜುಲೂಸ್ 8

ಹದಿನಾರನೆಯ ಒಂದು ರೂಪಾಯಿ ನಾಣ್ಯದ ಹೆಸರು ಕಾಜಿಮೀ. ಇದರ ತೂಕ 10 ಗ್ರೇನ್; ಅಗಲ 0.3".

ಮು : ಮೇಲಿನ ನಾಣ್ಯದಲ್ಲಿರುವಂತೆ

ಹಿ : ಕಾಜಿಮೀ

ಜುಲೂಸ್ 10

ಅತ್ಯಂತ ಕನಿಷ್ಠ ಮೌಲ್ಯದ ಬೆಳ್ಳಿಯ ನಾಣ್ಯವೆಂದರೆ ಮೂವತ್ತೆರಡನೆಯ ಒಂದು ಭಾಗದ ಖಿಜ್ರಿ ಎನ್ನುವ ನಾಣ್ಯ. ಇದರ ತೂಕ 5 ಗ್ರೇನ್; ಅಗಲ 0.2".

ಮು : ಜರ್ಬ್ ಇ ದರುಸ್

ಸುಲ್ತನತ್

ಹಿ : ಖಿಜ್ರಿ

12


ತಾಮ್ರದ ನಾಣ್ಯಗಳು

ಟೀಪು ಸುಲ್ತಾನ್ ಐದು ಮೌಲ್ಯದ ತಾಮ್ರದ ನಾಣ್ಯಗಳನ್ನು ಟಂಕಿಸಿದನು. ಸಾಮಾನ್ಯವಾಗಿ ತಾಮ್ರದ ನಾಣ್ಯಗಳ ಮೇಲೆ ಬಲ ಅಥವಾ ಎಡಕ್ಕೆ ಚಲಿಸುತ್ತಿರುವ ಆನೆಯಿರುತ್ತದೆ. ಕೆಲವು ಸಾರಿ ಆನೆ ಅಲಂಕೃತವಾಗಿದ್ದು, ಮೇಲಿನ ಹೊದಿಕೆಯನ್ನು ಹೊಂದಿರುತ್ತದೆ. ಆನೆಯ ಮೇಲ್ಭಾಗದಲ್ಲಿ ಮೌಲೂದಿ / ಹಿಜಿರ ವರ್ಷದ ಬರಹವಿರುತ್ತದೆ.

ಟೀಪು ಟಂಕಿಸಿದ ಅತ್ಯಂತ ಗರಿಷ್ಠ ಮೌಲ್ಯದ ತಾಮ್ರದ ನಾಣ್ಯವೆಂದರೆ ಎರಡು ಪೈಸೆ ನಾಣ್ಯ. ಇದರ ತೂಕ 331ರಿಂದ 352 ಗ್ರೇನ್ ಇರುತ್ತದೆ. ಇದರ ಅಗಲ 1.2". ಈ ನಾಣ್ಯ ತುಂಬ ಕಲಾತ್ಮಕವಾಗಿರುತ್ತದೆ. ಈ ನಾಣ್ಯದ ಹೆಸರು ಓಠ್ಮಾನೀ ಅಥವಾ ಮುಷ್ತರೀ.

ಮು : ಬಾಲವನ್ನು ಮೇಲೆತ್ತಿಕೊಂಡಿರುವ ಆನೆ; ಅದರ ಮೇಲೆ ಧ್ವಜ;
ಬಾಲದ ಮೇಲ್ಭಾಗದಲ್ಲಿ ತೇದಿ

ಹಿ : ಓಠ್ಮಾನೀ
ಜರ್ಬ್ ಇ ದರುಸ್
ಸುಲ್ತನತ್ ಇ ಪಟನ್




ಇದೇ ನಮೂನೆಯ ಇನ್ನೊಂದು ನಾಣ್ಯದಲ್ಲಿ ಮುಮ್ಮುಖವು ಮೇಲಿನಂತೆ ಇದೆ. ಆದರೆ ಹಿಮ್ಮುಖದಲ್ಲಿ ಕೊನೆಯ ಸಾಲಿನಲ್ಲಿ ಮೌಲೂದಿ ಎನ್ನುವ ಬರಹವಿದೆ. ಇನ್ನೊಂದು ನಮೂನೆಯ ನಾಣ್ಯದಲ್ಲಿ ಮುಮ್ಮುಖವು ಮೇಲಿನ ನಾಣ್ಯದಂತೆಯೇ ಇದೆ. ಆದರೆ ಹಿಮ್ಮುಖದಲ್ಲಿ ಬರಹದ ಆರಂಭದಲ್ಲಿ ಮುಷ್ತರೀ ಎಂಬ ಪದವಿದೆ.

ಒಂದು ಪೈಸ ನಾಣ್ಯದ ಹೆಸರು ಜೋಹ್ರ, ಇದರ ತೂಕ 174 ಗ್ರೇನ್; ಅಗಲ 0.9". ಈ ನಾಣ್ಯ ಎಲ್ಲ ಟಂಕಶಾಲೆಗಳಲ್ಲೂ ಅಚ್ಚಾಗುತ್ತಿತ್ತು.


ಮು : ಸೊಂಡಿಲನ್ನು ಮೇಲೆತ್ತಿರುವ, ಎಡಕ್ಕೆ ಚಲಿಸುತ್ತಿರುವ ಆನೆ;
ಬಾಲದ ಮೇಲ್ಭಾಗದಲ್ಲಿ 1221

ಹಿ : ದರ್ಬ್ ಇ
ಪಟನ್



ಈ ನಮೂನೆಯ ಕೆಲವು ನಾಣ್ಯಗಳ ಮೇಲೆ ಆನೆಯ ಜೊತೆಗೆ ಮೌಲೂದಿ ಎಂಬ ಬರಹ ಮುಮ್ಮುಖದಲ್ಲಿದ್ದರೆ, ಹಿಮ್ಮುಖದಲ್ಲಿ ಜೋಹ್ರ ಎಂಬ ಪದವೂ ಕಾಣಬರುತ್ತದೆ. ಇನ್ನೊಂದು ನಮೂನೆಯ ನಾಣ್ಯದಲ್ಲಿ ಮುಮ್ಮುಖದಲ್ಲಿ ಬರಹವಿರುವುದಿಲ್ಲ. ಹಿಮ್ಮುಖದಲ್ಲಿ ಜರ್ಬ್ ಇ ಪಟನ್ ಜೋಹ್ರ 1224 ಮೌಲೂದೀ ಎನ್ನುವ ಬರಹವಿದೆ.

ಅರ್ಧ ಪೈಸೆ ನಾಣ್ಯದ ಹೆಸರು ಬಹ್ರಾಂ. ಇದರ ತೂಕ 87 ಗ್ರೇನ್, ಅಗಲ 0.8". ಇದು ಪೈಸ ನಾಣ್ಯದಂತೆಯೇ ಇದೆ. ತೇದಿಗಳು ಭಿನ್ನವಾಗಿರುತ್ತವೆ. ಕೆಲವು ನಾಣ್ಯಗಳಲ್ಲಿ ಮೌಲೂದೀ ಎನ್ನುವ ಬರಹವಿರುತ್ತದೆ.




ಅಖ್ತರ್ ಎನ್ನುವುದು ಕಾಲು ಪೈಸದ ತಾಮ್ರದ ನಾಣ್ಯ. ಇದರ ತೂಕ 42 ಗ್ರೇನ್; ಅಗಲ 0.5". ಧಾರವಾಡವನ್ನು ಬಿಟ್ಟು ಮಿಕ್ಕೆಲ್ಲ ಟಂಕಶಾಲೆಗಳಲ್ಲಿ ಈ ನಾಣ್ಯ ಅಚ್ಚಾಗುತ್ತಿತ್ತು. ಈ ನಾಣ್ಯದಲ್ಲಿ ಅನೇಕ ತಪ್ಪುಗಳು ಕಾಣಬರುತ್ತವೆ. ಅದರಲ್ಲಿಯೂ ನಗರ, ಗುತ್ತಿ ಮತ್ತು ದಿಂಡಿಗಲ್ ಟಂಕಶಾಲೆಗಳಲ್ಲಿ ಅಚ್ಚಾದ ನಾಣ್ಯಗಳಲ್ಲಿ ತಪ್ಪುಗಳು ವಿಶೇಷವಾಗಿ ಕಾಣಬರುತ್ತವೆ. ತೇದಿಯ ನಿರೂಪಣೆಯಲ್ಲಿ ತಪ್ಪುಗಳು ಹೆಚ್ಚು. ಕೆಲವು ನಾಣ್ಯಗಳಲ್ಲಿ ತೇದಿಯು ಉಲ್ಲೇಖಿತವಾಗದಿರುವುದೂ ಉಂಟು.

ಮು : ವೃತ್ತದೊಳಗೆ ಬಲಕ್ಕೆ ಚಲಿಸುತ್ತಿರುವ ಆನೆ

ಹಿ : 1198

ಜರ್ಬ್ ಇ ಪಟನ್



ಇನ್ನೊಂದು ನಮೂನೆಯ ಈ ನಾಣ್ಯದ ಮುಮ್ಮುಖದಲ್ಲಿ ಆನೆಯ ಮೇಲೆ ತೇದಿ ಕಾಣಬರುತ್ತದೆ.

ಅತ್ಯಂತ ಕನಿಷ್ಠ ಮೌಲ್ಯದ ತಾಮ್ರದ ನಾಣ್ಯವೆಂದರೆ ಕುತ್ಬ್. ಇದರ ತೂಕ 21 ಗ್ರೇನ್. ಅಗಲ 0.4". ಮುಮ್ಮುಖದಲ್ಲಿ ಆನೆಯ ಚಿತ್ರವಿದ್ದರೆ ಹಿಮ್ಮುಖದಲ್ಲಿ ನಾಣ್ಯದ ಹೆಸರು ಮತ್ತು ಟಂಕಶಾಲೆಯ ಹೆಸರು ಇರುತ್ತದೆ. ಅನೇಕ ನಾಣ್ಯಗಳ ಮೇಲೆ ತೇದಿ ಕಾಣಬರುವುದಿಲ್ಲ.

ಮು : ಎಡಕ್ಕೆ ಚಲಿಸುತ್ತಿರುವ ಆನೆ; ಬಾಲದ ಮೇಲ್ಭಾಗದಲ್ಲಿ 1216

ಹಿ : ಜರ್ಬ್ ಇ ಪಟನ್

ಇನ್ನೊಂದು ನಮೂನೆಯ ನಾಣ್ಯದಲ್ಲಿ ಮುಮ್ಮುಖದಲ್ಲಿ ಮೇಲಿನ ನಾಣ್ಯದ ವಿನ್ಯಾಸವಿದ್ದರೆ, ಹಿಮ್ಮುಖದಲ್ಲಿ ಕುತ್ಬ್ ಮತ್ತು ಟಂಕಶಾಲೆಯ ಹೆಸರು ಕಾಣಬರುತ್ತದೆ. ಕೆಲವು ನಾಣ್ಯಗಳಲ್ಲಿ ಆನೆಯ ಬಾಲ ಮುದುರಿಕೊಂಡು ಇರುವುದೂ ಉಂಟು. ಮತ್ತೆ ಕೆಲವು ನಾಣ್ಯಗಳಲ್ಲಿ ಹಿಮ್ಮುಖದಲ್ಲಿ ತೇದಿ ಇರುತ್ತದೆ.





ಟೀಪು ಸುಲ್ತಾನನ ನಾಣ್ಯಗಳ ವಿವರಣೆಯನ್ನು ಮುಗಿಸುವುದಕ್ಕೆ ಮುಂಚೆ ಇತ್ತೀಚೆಗೆ ಸೋಹನ್‌ಲಾಲ್ ಸಿಸೋಡಿಯ ಅವರ ಸಂಗ್ರಹದಲ್ಲಿರುವ ಒಂದು ಚಿನ್ನದ ನಾಣ್ಯವನ್ನು ಉಲ್ಲೇಖಿಸಬೇಕು. ಈ ನಾಣ್ಯದ ಮುಮ್ಮುಖದಲ್ಲಿ ಶೃಂಗೇರಿಯ ದೇವತೆಯಾದ ಶಾರದಾಂಬೆಯ ಚಿತ್ರವಿದೆ. ಹಿಮ್ಮುಖದಲ್ಲಿ ಹವಸ್ ಸುಲ್ತಾನ್ ಅಲ್‌ವಯ್ಯಿದ್ ಅಲ್ ಅದಲ್ 1215 ಎಂಬ ಬರಹವಿದೆ. ಟೀಪು ಸುಲ್ತಾನನು ಶೃಂಗೇರಿಯ ಶಂಕರಾಚಾರ್ಯರನ್ನು ವಿಶೇಷ ಗೌರವದಿಂದ ಕಾಣುತ್ತಿದ್ದು, ಅವರಿಗೆ ಅನೇಕ ಪತ್ರಗಳನ್ನು ಕೂಡ ಬರೆದಿದ್ದು, ಯಾವಾಗಲೂ ಅವರ ಆಶೀರ್ವಾದವನ್ನು ಬಯಸುತ್ತಿದ್ದನು. ಮರಾಠರು ಶೃಂಗೇರಿಯನ್ನು ಹಾಳುಮಾಡಿದಾಗ ದೇವಾಲಯಗಳ ಪುನರ್‌ನಿರ್ಮಾಣಕ್ಕಾಗಿ ಟೀಪು ಧನ-ಧಾನ್ಯಗಳನ್ನು ಕಳುಹಿಸಿಕೊಟ್ಟನೆಂಬುದು ಅವನ ಪತ್ರಗಳಿಂದ ತಿಳಿದುಬರುತ್ತದೆ. ಅಂತಹ ಒಂದು ಪತ್ರದಲ್ಲಿ ಟೀಪು ಶೃಂಗೇರಿಯ ಸ್ವಾಮಿಗಳಿಗೆ ಇನ್ನೂರು ರಹತಿಗಳನ್ನು ದಾನವಾಗಿ ಕೊಟ್ಟನೆಂದು ಗೊತ್ತಾಗುತ್ತದೆ. ರಹತಿ ಎಂದರೆ ಪರಿಹಾರ. ಈ ಪರಿಹಾರಕ್ಕಾಗಿ ಟೀಪು ಸುಲ್ತಾನನು ಶೃಂಗೇರಿಯ ಶಾರದಾಂಬೆಯ ಚಿತ್ರವಿರುವ ಚಿನ್ನದ ನಾಣ್ಯಗಳನ್ನು ವಿಶೇಷವಾಗಿ ಟಂಕಿಸಿ,

ಸ್ವಾಮಿಗಳಿಗೆ ಕಳುಹಿಸಿಕೊಟ್ಟನೆಂದು ತೋರುತ್ತದೆ. ಈ ನಾಣ್ಯ ಸಾರ್ವತ್ರಿಕ ಚಲಾವಣೆಯಲ್ಲಿರಲಿಲ್ಲ. ಇದರ ಮೇಲೆ ಟಂಕಶಾಲೆಯ ಹೆಸರೂ ಇಲ್ಲದೇ ಇರುವುದರಿಂದ, ಇದು ಎಲ್ಲಿ ಅಚ್ಚಾಯಿತು ಎನ್ನುವುದೂ ತಿಳಿದಿಲ್ಲ. ಈ ನಾಣ್ಯದ ಬಗೆಗೆ ಇನ್ನೂ ಹೆಚ್ಚಿನ ಸಂಶೋಧನೆ ನಡೆದರೆ, ಹೊಸ ವಿಷಯಗಳು ತಿಳಿದುಬರುತ್ತವೆ.

3. ಮೈಸೂರು ಒಡೆಯರ ನಾಣ್ಯಗಳು

ಪ್ರಾಚೀನ ಮೈಸೂರು ರಾಜ್ಯದ ಸ್ಥಾಪಕರು ಒಡೆಯರ್ ಮನೆತನದ ಅಣ್ಣ-ತಮ್ಮಂದಿರಾದ ವಿಜಯ ಮತ್ತು ಕೃಷ್ಣ. ಇವರು ಯದುವಂಶಕ್ಕೆ ಸೇರಿದ ಕ್ಷತ್ರಿಯರು. ತುಂಬ ತೊಂದರೆಯನ್ನು ಕೊಡುತ್ತಿದ್ದ ಒಬ್ಬ ರಾಜನನ್ನು ಕೊಂದು ಜನಾನುರಾಗಿಗಳಾದ ಇವರು ಮೈಸೂರಿಗೆ ಸಮೀಪದ ಹದಿನಾಡು ಎಂಬಲ್ಲಿ ಬೀಡುಬಿಟ್ಟರು. ವಿಜಯ ಅಥವಾ ಯದುರಾಯನು ಕ್ರಿ.ಶ. 1399ರಿಂದ 1423ರವರೆಗೆ ರಾಜ್ಯವಾಳಿದನು. ಒಂದು ಶತಮಾನದ ತರುವಾಯ ರಾಜ ಒಡೆಯರ್ ತಮ್ಮ ಶಕ್ತಿ-ಸಾಮರ್ಥ್ಯಗಳಿಂದ ಮೈಸೂರು ರಾಜ್ಯವನ್ನು ವಿಸ್ತಾರಗೊಳಿಸಿ ಶ್ರೀರಂಗಪಟ್ಟಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. 1578ರಿಂದ 1617ರವರೆಗೆ ರಾಜ್ಯವಾಳಿದರು. ಇವರ ಮೊಮ್ಮಗ ಆರನೆಯ ಚಾಮರಾಜ ಒಡೆಯರ್ (ಕ್ರಿ.ಶ. 1717-37) ಸ್ವತಃ ಸಾಹಿತಿಗಳಾಗಿದ್ದು ಚಾಮರಾಜೋಕ್ತಿವಿಲಾಸ ಎಂಬ ಗ್ರಂಥದ ಕರ್ತೃಗಳಾಗಿ ಖ್ಯಾತರಾಗಿದ್ದಾರೆ. ಮೈಸೂರು ರಾಜ್ಯವು ಕಂಠೀರವ ನರಸರಾಜ ಒಡೆಯರ್ (ಕ್ರಿ.ಶ. 1638-59) ಅವರ ಕಾಲದಲ್ಲಿ ಇನ್ನೂ ಪ್ರವರ್ಧಮಾನಕ್ಕೆ ಬಂದಿತು. ರಾಜ್ಯವು ಸ್ವತಂತ್ರವಾಯಿತು. ನರಸರಾಜ ಒಡೆಯರ್ ಅವರು ಬಿಜಾಪುರದ ರಣದುಲ್ಲಾಖಾನ್ ಮತ್ತು ಮದುರೆಯ ನಾಯಕರನ್ನು ಸೋಲಿಸಿ, ರಾಜ್ಯದ ಎಲ್ಲೆಯನ್ನು ವಿಸ್ತರಿಸಿದರು. ಸ್ವಲ್ಪ ಕಾಲಾನಂತರ ಪಟ್ಟಕ್ಕೆ ಬಂದ ಚಿಕ್ಕದೇವರಾಜ ಒಡೆಯರ್ (ಕ್ರಿ.ಶ. 1673-1704) ಮರಾಠರನ್ನು ಮತ್ತು ಮದುರೆಯ ನಾಯಕರನ್ನು ಸೋಲಿಸಿ ಪ್ರಸಿದ್ಧರಾದರು. ಇವರು ಅನೇಕ ಆಡಳಿತ ಸುಧಾರಣೆಗಳನ್ನು ಮಾಡಿ, ರಾಜ್ಯದ ಬೊಕ್ಕಸವನ್ನು ತುಂಬಿಸಿದರು. ಇದರಿಂದ ಇವರಿಗೆ 'ನವಕೋಟಿ ನಾರಾಯಣ' ಎನ್ನುವ ಬಿರುದು ಪ್ರಾಪ್ತವಾಯಿತು. ಇವರು ಸ್ವತಃ ಸಾಹಿತಿಗಳಾಗಿದ್ದು ಚಿಕ್ಕದೇವರಾಜ ಬಿನ್ನಪ ಎನ್ನುವ ಗ್ರಂಥವನ್ನು ರಚಿಸಿದರು. ಇವರ ಆಸ್ಥಾನದಲ್ಲಿ ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಸಿಂಗರಾರ್ಯ, ಹೊನ್ನಮ್ಮ ಮುಂತಾದ ಖ್ಯಾತ ಸಾಹಿತಿಗಳಿದ್ದರು. ಅನೇಕ ವೈಷ್ಣವ ದೇವಾಲಯಗಳನ್ನು ಕಟ್ಟಿಸಿ ಇವರು ಪ್ರಸಿದ್ಧಿ ಪಡೆದರು.

ಇವರ ಅನಂತರ ಆಳಿದ ಅನೇಕ ರಾಜರು ತುಂಬ ಅಶಕ್ತರಾಗಿದ್ದರು. ಇದನ್ನು ಗಮನಿಸಿದ ದಳವಾಯಿಗಳು ತಾವೇ ಸ್ವತಂತ್ರರಾಗಿ ಆಳಲು ಪ್ರಾರಂಭಿಸಿದರು. ಸ್ವಲ್ಪ ಕಾಲಾನಂತರ ಮೈಸೂರು ರಾಜ್ಯವನ್ನು ಹೈದರ್ ಮತ್ತು ಟೀಪು ಆಕ್ರಮಿಸಿಕೊಂಡು ಆಳಿದರು. (ಕ್ರಿ.ಶ.1761ರಿಂದ 1799ರವರೆಗೆ). ಬ್ರಿಟಿಷರು ಟೀಪುವನ್ನು ಸೋಲಿಸಿದ ನಂತರ ಮೈಸೂರು

ರಾಜ್ಯವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ಒಪ್ಪಿಸಿದರು. ಇವರು ಇನ್ನೂ ಬಾಲಕರಾಗಿದ್ದುದರಿಂದ ದಿವಾನರಾಗಿದ್ದ ಪೂರ್ಣಯ್ಯನವರು ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕಾಲ ಸಾಹಿತ್ಯ ಮತ್ತು ಸಂಸ್ಕೃತಿಯ ದೃಷ್ಟಿಗಳಿಂದ ಉತ್ತಮ ಕಾಲ. ಉತ್ತಮವಾದ ಸಾಹಿತ್ಯ ಕೃತಿಗಳು ರಚಿತವಾದುದು ಮಾತ್ರವಲ್ಲದೆ, ಸಂಗೀತದಲ್ಲಿ ಈ ಕಾಲ ವಿಶೇಷವಾದ ಕೊಡುಗೆಯನ್ನು ನೀಡಿತು. ಆನಂತರ ನಾಲ್ಕನೆಯ ಕೃಷ್ಣರಾಜ ಒಡೆಯರ್ ದೊರೆಯಾದರು. ರಾಜರ್ಷಿ ಎಂದು ಖ್ಯಾತಿ ಗಳಿಸಿದ ಇವರ ನಂತರ ಜಯಚಾಮರಾಜ ಒಡೆಯರ್ ರಾಜರಾದರು. ಇವರ ಕಾಲದಲ್ಲಿ ರಾಜತ್ವವು ಹೋಗಿ ಮೈಸೂರು ಸ್ವತಂತ್ರವಾಗಿ ಕರ್ನಾಟಕವಾಯಿತು.

ಮೈಸೂರು ಒಡೆಯರ್ ಅವರು ನಾಣ್ಯಗಳನ್ನು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ಟಂಕಿಸಿದರು. ಇವರ ನಾಣ್ಯಗಳು ಪ್ರಾಚೀನ ಮತ್ತು ಆಧುನಿಕ ಕಾಲಗಳಿಗೆ ಕೊಂಡಿಯಂತಿವೆ. ಇವರು ವಿಜಯನಗರ ಸಾಮ್ರಾಟರ ಆಶ್ರಿತರಾಗಿದ್ದುದರಿಂದ, ತಮ್ಮ ನಾಣ್ಯಗಳಿಗೆ ಖ್ಯಾತ ವಿಜಯನಗರದ ಅರಸರ ನಾಣ್ಯಗಳನ್ನೇ ಮಾದರಿಯನ್ನಾಗಿ ಮಾಡಿಕೊಂಡರು. ಮುಮ್ಮುಖದಲ್ಲಿರುವ ದೇವ-ದೇವತೆಗಳ ಚಿತ್ರ, ಹಿಮ್ಮುಖದಲ್ಲಿರುವ ಬರವಣಿಗೆ, ತೂಕ, ಅಗಲ, ಈ ಎಲ್ಲ ವಿಷಯಗಳಲ್ಲೂ, ಒಡೆಯರ್ ನಾಣ್ಯಗಳು ವಿಜಯನಗರ ನಾಣ್ಯಗಳನ್ನೇ ಹೋಲುತ್ತವೆ. ಕಂಠೀರವ ನರಸರಾಜ ಒಡೆಯರ್, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ನಾಣ್ಯಗಳನ್ನು ವಿಜಯನಗರದ ಕೃಷ್ಣದೇವರಾಯನ ನಾಣ್ಯಗಳೆಂದು ತಪ್ಪಾಗಿ ಭಾವಿಸುವಷ್ಟರ ಮಟ್ಟಿಗೆ, ಎರಡೂ ನಾಣ್ಯಗಳು ಸಮೀಪವಾಗಿವೆ. ಶಿವ-ಪಾರ್ವತಿ, ವಿಷ್ಣು-ಲಕ್ಷ್ಮಿ, ಲಕ್ಷ್ಮಿ-ನರಸಿಂಹ, ಕೃಷ್ಣ ಮುಂತಾದ ದೇವ-ದೇವತೆಗಳನ್ನು ಒಡೆಯರ್ ತಮ್ಮ ನಾಣ್ಯಗಳ ಮೇಲೆ ಅಳವಡಿಸಿದರಲ್ಲದೆ, ತಮ್ಮ ಮನೆದೇವತೆಯಾದ ಚಾಮುಂಡಿಯ ವಾಹನವನ್ನು ಹಾಗೂ ಬರಹವನ್ನು ತಮ್ಮ ನಾಣ್ಯಗಳ ಮೇಲೆ ಟಂಕಿಸಿದರು. ಇವರ ನಾಣ್ಯಗಳಲ್ಲಿ ಕಂಡುಬರುವ ಇನ್ನೊಂದು ವಿಶೇಷವೆಂದರೆ ಆನೆಯ ಚಿತ್ರ. ಒಡೆಯರ್ ಅವರ ನಾಣ್ಯಗಳಲ್ಲಿ ನಾಗರೀ, ಕನ್ನಡ, ಪರ್ಷಿಯನ್ ಮತ್ತು ರೋಮನ್ ಲಿಪಿಯ ಬರಹಗಳನ್ನು ಕಾಣುತ್ತೇವೆ. ಕೆಲವು ನಾಣ್ಯಗಳ ಮೇಲೆ, ನಾಣ್ಯದ ಮೌಲ್ಯವೂ ನಮೂದಿತವಾಗಿರುವುದು ಗಮನಿಸಬೇಕಾದ ಅಂಶ. ಅನೇಕ ತಾಮ್ರದ ನಾಣ್ಯಗಳ ಮೇಲೆ ಕನ್ನಡ ಸಂಖ್ಯೆಯನ್ನೂ ಕಾಣುತ್ತೇವೆ. ಇವರ ನಾಣ್ಯಗಳು ಶ್ರೀರಂಗಪಟ್ಟಣ ಮತ್ತು ಮೈಸೂರಿನ ಟಂಕಶಾಲೆಗಳಲ್ಲಿ ಅಚ್ಚಾಗುತ್ತಿದ್ದವು. ಕೆಲವು ನಾಣ್ಯಗಳು ತುಂಬ ಕಲಾತ್ಮಕವಾಗಿದ್ದರೆ, ಅನೇಕ ನಾಣ್ಯಗಳಲ್ಲಿ ತಪ್ಪುಗಳು ಕಂಡುಬರುತ್ತವೆ.

ಒಡೆಯರ್ ಮನೆತನದಲ್ಲಿ, ಟಂಕಶಾಲೆಯನ್ನು ಮೊಟ್ಟಮೊದಲ ಬಾರಿಗೆ ಸ್ಥಾಪಿಸಿದವರು ಕಂಠೀರವ ನರಸರಾಜ ಒಡೆಯರ್. ಅವರಿಗಿಂತ ಹಿಂದಿನ ರಾಜರು ವಿಜಯನಗರ ನಾಣ್ಯಗಳನ್ನೇ ಬಳಸುತ್ತಿದ್ದರು. ಕಂಠೀರವ ನರಸರಾಜರು

ಶ್ರೀರಂಗಪಟ್ಟಣದಲ್ಲಿ ಮೊದಲ ಬಾರಿಗೆ ಟಂಕಶಾಲೆಯನ್ನು ಸ್ಥಾಪಿಸಿ, ಅಲ್ಲಿಂದ ತಮ್ಮ ನಾಣ್ಯಗಳನ್ನು ರಾಜತ್ವದ ಕುರುಹಾಗಿ ಟಂಕಿಸಲು ಆರಂಭಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಮೈಸೂರಿನಲ್ಲಿ ಟಂಕಶಾಲೆಯನ್ನು ಸ್ಥಾಪಿಸುವವರೆಗೆ ಶ್ರೀರಂಗಪಟ್ಟಣದ ಟಂಕಶಾಲೆ ಕಾರ್ಯ ನಿರ್ವಹಿಸುತ್ತಿದ್ದಿತು. ಮೈಸೂರಿನ ಟಂಕಶಾಲೆಯು 1833ರವರೆಗೆ ಕಾರ್ಯ ನಿರ್ವಹಿಸುತ್ತಿತ್ತು. ಆ ವರ್ಷ ಮೈಸೂರಿನಿಂದ ಟಂಕಶಾಲೆಯನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. 1843ರಲ್ಲಿ ಬ್ರಿಟಿಷ್ ನಾಣ್ಯಗಳು ಮೈಸೂರು ಸಂಸ್ಥಾನದಲ್ಲಿ ಚಲಾವಣೆಗೆ ಬಂದಿದ್ದುದರಿಂದ, ಆ ವರ್ಷ ಬೆಂಗಳೂರಿನ ಟಂಕಶಾಲೆಯನ್ನು ಮುಚ್ಚಲಾಯಿತು. ಅಲ್ಲಿಂದ ಮುಂದೆ ಮೈಸೂರು ಒಡೆಯರ್ ನಾಣ್ಯಗಳು ಅಚ್ಚಾಗಲಿಲ್ಲ.

ಒಡೆಯರ ಕಾಲದ ಸಾಹಿತ್ಯ ಗ್ರಂಥ ಮತ್ತು ಶಾಸನಗಳಿಂದ ಆ ಕಾಲದ ನಾಣ್ಯ ಪದ್ಧತಿಯ ಬಗೆಗೆ ಕೆಲವು ವಿಷಯಗಳು ತಿಳಿದುಬರುತ್ತವೆ. ಕಂಠೀರವ ನರಸರಾಜರು ಟಂಕಿಸಿದ ಚಿನ್ನದ ನಾಣ್ಯಗಳನ್ನು ಕಂಠೀರವ ಗುಳಿಗೆ ಎಂದು ಕರೆಯಲಾಗುತ್ತಿದ್ದಿತು. ಇದು ವರಹ ನಾಣ್ಯಕ್ಕೆ ಸಮನಾಗಿತ್ತು. ಆದುದರಿಂದ ವರಹ ಮತ್ತು ಗುಳಿಗೆ ಒಂದೇ ರೀತಿಯ ಚಿನ್ನದ ನಾಣ್ಯವನ್ನು ಸೂಚಿಸುತ್ತಿದ್ದವು. ಗದ್ಯಾಣ ಎನ್ನುವ ಪದ ಬಹಳ ವಿರಳವಾಗಿ ಕಾಣಬರುತ್ತದೆ. ಅದರ ಜಾಗವನ್ನು ವರಹ ಆಕ್ರಮಿಸಿಕೊಂಡಿರುವುದು ನಮ್ಮ ಗಮನವನ್ನು ಸೆಳೆಯುತ್ತದೆ. ಕಂಠೀರಾಯ ಗುಳಿಗೆಯನ್ನು ಶಾಸನಗಳಲ್ಲಿ ಕಂಗು ಎಂದು ಸೂಚಿಸಲಾಗುತ್ತಿತ್ತು.

ಇದರ ನಂತರದ ಚಿನ್ನದ ನಾಣ್ಯವೆಂದರೆ ಹಣ ಅಥವಾ ಪಣ. ಎರಡು ರೀತಿಯ ಹಣಗಳ ಉಲ್ಲೇಖ ಶಾಸನಗಳಲ್ಲಿ ಕಾಣಬರುತ್ತದೆ. ಮೊದಲನೆಯದು ಎರಡು ಹಣ ಮೌಲ್ಯದ ನಾಣ್ಯ; ಎರಡನೆಯದು ಒಂದು ಹಣ ಮೌಲ್ಯದ ನಾಣ್ಯ. ಒಂದು ವರಹಕ್ಕೆ ಈ ರೀತಿಯ ಹತ್ತು ಹಣಗಳು ಸಮನಾಗಿದ್ದವು. ಅರ್ಧ ವರಹದ ಚಿನ್ನದ ನಾಣ್ಯಗಳನ್ನು ಇವರು ಟಂಕಿಸುತ್ತಿದ್ದರು. ಮುಂದಿನ ಚಿನ್ನದ ನಾಣ್ಯ ಬೇಳೆ. ಇದು ಒಂದು ಹಣದ ನಾಲ್ಕನೆಯ ಒಂದು ಭಾಗ. ಒಂದು ಬೇಳೆಗೆ ಎರಡೂವರೆ ಅಡ್ಡಗಳು ಸಮನಾಗಿದ್ದವು. ಅಡ್ಡವೇ ಕನಿಷ್ಠ ಚಿನ್ನದ ನಾಣ್ಯ. ಬೆಳ್ಳಿಯ ನಾಣ್ಯಗಳಲ್ಲಿ ಮುಖ್ಯವಾದುದು ರುಪಾಯಿ, ಅರ್ಧ ರುಪಾಯಿ ಮತ್ತು ಕಾಲು ರುಪಾಯಿ. ತಾರ ಎನ್ನುವ ನಾಣ್ಯದ ಉಲ್ಲೇಖ ಶಾಸನಗಳಲ್ಲಿ ಕಾಣಬರುತ್ತದೆ. ವಿಜಯನಗರ ಕಾಲದಲ್ಲಿ ಇದು ಬೆಳ್ಳಿಯ ನಾಣ್ಯವಾಗಿದ್ದುದರಿಂದ, ಈ ಕಾಲದಲ್ಲಿಯೂ ಅದು ಬೆಳ್ಳಿಯ ನಾಣ್ಯವೆಂದು ಭಾವಿಸಬಹುದು. ಒಂದು ಶಾಸನದಲ್ಲಿ ದೀನಾರ ಎಂಬ ನಾಣ್ಯದ ಉಲ್ಲೇಖವಿದೆ. ಇದು ಬೆಳ್ಳಿಯ ನಾಣ್ಯ. ಕಾಸು ಸಾಮಾನ್ಯವಾಗಿ ತಾಮ್ರದ ನಾಣ್ಯವಾಗಿತ್ತು. ವಿವಿಧ ಮೌಲ್ಯದ ತಾಮ್ರದ ಕಾಸುಗಳು ದೊರಕಿವೆ. ಈ ಮೇಲಿನ ಎಲ್ಲ ಮಾಹಿತಿಗಳನ್ನೂ ಕ್ರೋಡೀಕರಿಸಿದರೆ ಈ ಕಾಲದ ನಾಣ್ಯಪದ್ಧತಿಯನ್ನು ಹೀಗೆ ರಚಿಸಬಹುದು.

1 ವರಹ = 1 ಗುಳಿಗೆ = 52 ಗ್ರೇನ್

ಅರ್ಧ ವರಹ = 5 ಹಣ = 26 ಗ್ರೇನ್

1 ಹಣ = 4 ಬೇಳೆ = 5.2 ಗ್ರೇನ್

1 ಬೇಳೆ = $2^1/_2$ ಅಡ್ಡ = 1.3 ಗ್ರೇನ್

1 ಅಡ್ಡ = 0.52 ಗ್ರೇನ್

1 ವರಹ = 100 ಅಡ್ಡ

ಕಂಠೀರವ ನರಸರಾಜ ಒಡೆಯರ್

ಮೇಲೆ ಗಮನಿಸಿರುವಂತೆ ಕಂಠೀರವ ನರಸರಾಜ ಒಡೆಯರ್, ಶ್ರೀರಂಗಪಟ್ಟಣದಲ್ಲಿ ಟಂಕಶಾಲೆಯನ್ನು ಸ್ಥಾಪಿಸಿ, ಚಿನ್ನದ ನಾಣ್ಯಗಳನ್ನು ಟಂಕಿಸಲು ಆರಂಭಿಸಿದರು. ಇವರ ಚಿನ್ನದ ನಾಣ್ಯಗಳು ವರಹ ಮತ್ತು ಅರ್ಧ ವರಹ ಮೌಲ್ಯಗಳಲ್ಲಿ ಕಂಡುಬಂದಿವೆ. ಇವರು ಕೇವಲ ಚಿನ್ನದ ಹಣಗಳನ್ನು ಮಾತ್ರ ಅಚ್ಚು ಮಾಡಿದರು ಎನ್ನುವ ಅಭಿಪ್ರಾಯ, ಅರ್ಧ ವರಹ ನಾಣ್ಯಗಳು ಸಿಕ್ಕಿರುವುದರಿಂದ ತಪ್ಪೆಂದು ತಿಳಿದುಬರುತ್ತದೆ. ಈ ಅರ್ಧ ವರಹ ನಾಣ್ಯಗಳ ತೂಕ 26 ಗ್ರೇನ್, ಅಗಲ 0.4".

ಮು : ಲಕ್ಷ್ಮಿಯೊಡನೆ ಕುಳಿತಿರುವ ನಾಲ್ಕು ಬಾಹುಗಳ ನರಸಿಂಹ;
ನರಸಿಂಹನ ಕೈಗಳಲ್ಲಿ ಶಂಖ-ಚಕ್ರಗಳು ಕಾಣಬರುತ್ತವೆ.

ಹಿ : ಮೂರು ಸಾಲುಗಳ ನಾಗರೀ ಬರಹ
ಶ್ರೀ ಕಂಠೀ
ರವ ನರ
ಸರಾಜ



ಈ ದೊರೆಯ ಹಣ ಮೌಲ್ಯದ ನಾಣ್ಯದ ತೂಕ 5.2 ಗ್ರೇನ್, ಅಗಲ 0.25".

ಮು : ಶಂಖ-ಚಕ್ರಧಾರಿ ನರಸಿಂಹ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ

ಕಂಠೀ

ರವ

ಈ ನಮೂನೆಯ ಹಣಗಳು ಬಹಳ ಜನಾನುರಾಗಿಯಾಗಿದ್ದು, ದಕ್ಷಿಣ ಭಾರತದಲ್ಲೇ ಪ್ರಖ್ಯಾತಿಯನ್ನು ಪಡೆದವು. ಕಂಠೀರವ ನರಸರಾಜರ ಅನಂತರವೂ ಬಹಳ ಕಾಲದವರೆಗೆ ಮೈಸೂರಿನಲ್ಲಿ ಈ ನಮೂನೆಯ ಹಣ ಚಲಾವಣೆಯಲ್ಲಿತ್ತು. ಇವು ಅಗಲ ಕಂಠೀರಾಯ ಹಣ ಎಂದು ಪ್ರಸಿದ್ಧಿ ಪಡೆದಿದ್ದವು. ಇದೇ ಮಾದರಿಯ ಹಣವನ್ನು ದಿವಾನ್ ಪೂರ್ಣಯ್ಯನವರು ಅಚ್ಚು ಮಾಡಿಸಿದರು. ಅವುಗಳನ್ನು ಗಿಡ್ಡ ಕಂಠೀರಾಯ ಹಣ ಎಂದು ಕರೆಯಲಾಗುತ್ತಿತ್ತು.


ಈ ದೊರೆಯ ತಾಮ್ರದ ನಾಣ್ಯಗಳು ಆರು ನಮೂನೆಗಳಲ್ಲಿ ದೊರಕಿವೆ. ಮೊದಲನೆಯ ನಮೂನೆಯ ನಾಣ್ಯದ ತೂಕ 32 ಗ್ರೇನ್, ಅಗಲ 0.9".


ಮು : ಚುಕ್ಕೆಗಳ ವೃತ್ತದೊಳಗೆ ಶಿವಲಿಂಗ

ಹಿ : ಚುಕ್ಕೆಗಳ ವೃತ್ತದೊಳಗೆ ಎರಡು ಸಾಲುಗಳ ಕನ್ನಡ ಬರಹ

ಕಂಟಿ

ರವ






ಎರಡನೆಯ ನಮೂನೆಯ ತಾಮ್ರದ ನಾಣ್ಯದ ತೂಕ 31 ಗ್ರೇನ್.

ಮು : ಚುಕ್ಕೆಗಳ ವೃತ್ತದೊಳಗೆ ಬಲಕ್ಕಿರುವ ನವಿಲು

ಹಿ : ಮೇಲಿನ ನಾಣ್ಯದಲ್ಲಿರುವಂತೆ

ಕಂಟಿ

ರವ



ಮೂರನೆಯ ನಮೂನೆಯ ತಾಮ್ರದ ನಾಣ್ಯದ ತೂಕ 30 ಗ್ರೇನ್.

ಮು : ಚುಕ್ಕೆಗಳ ವೃತ್ತದೊಳಗೆ ಮೀನು

ಹಿ : ಮೇಲಿನ ನಾಣ್ಯದಲ್ಲಿರುವಂತೆ

ಕಂಟಿ

ರವ



ನಾಲ್ಕನೆಯ ನಮೂನೆಯ ತಾಮ್ರದ ನಾಣ್ಯದ ತೂಕ 30 ಗ್ರೇನ್.

ಮು : ಕುಳಿತಿರುವ ಗಣಪತಿ

ಹಿ : ಮೇಲಿನ ನಾಣ್ಯದಲ್ಲಿರುವಂತೆ

ಕಂಟಿ

ರವ

ಐದನೆಯ ನಮೂನೆಯ ನಾಣ್ಯದ ತೂಕ 28 ಗ್ರೇನ್.

ಮು : ಚುಕ್ಕೆಗಳ ವೃತ್ತದೊಳಗೆ ಕಾರ್ತಿಕೇಯ

ಹಿ : ಮೇಲಿನ ನಾಣ್ಯದಲ್ಲಿರುವಂತೆ

ಕಂಟಿ

ರವ



ಆರನೆಯ ನಮೂನೆಯ ನಾಣ್ಯದ ತೂಕ 32 ಗ್ರೇನ್.


ಮು : ಮೂರು ಕಮಾನುಗಳ ಮಂಡಪದೊಳಗೆ

ನಿಂತಿರುವ ದೇವತೆ

ಹಿ : ಮೇಲಿನ ನಾಣ್ಯದಲ್ಲಿರುವಂತೆ

ಕಂಟಿ

ರವ



ಈ ಮೇಲೆ ವಿವರಿಸಲಾದ ಆರು ನಮೂನೆಯ ತಾಮ್ರದ ನಾಣ್ಯಗಳು ಮೈಸೂರು ಅಥವಾ ಶ್ರೀರಂಗಪಟ್ಟಣದಲ್ಲಿ ದೊರಕದೆ, ತಮಿಳುನಾಡಿನ ಕೊಂಗು ದೇಶದಲ್ಲಿ ದೊರಕಿರುವುದು ಗಮನಾರ್ಹ. ಇವು ಸತ್ಯಮಂಗಲ, ಈರೋಡು, ಸೂಳೂರು, ಕೊಯಮತ್ತೂರು ಮತ್ತು ಕರೂರುಗಳಲ್ಲಿ ಹೆಚ್ಚಾಗಿ ಕಂಡುಬಂದಿವೆ. ನರಸರಾಜ ಒಡೆಯರ್ ಕೊಂಗು ದೇಶದ ಮೇಲೆ ದಂಡೆತ್ತಿ ಹೋಗಿ ಈ ಪ್ರದೇಶಗಳನ್ನು ತಮ್ಮ ರಾಜ್ಯಕ್ಕೆ

ಸೇರಿಸಿಕೊಂಡ ವಿಷಯ ತಿಳಿದೇ ಇದೆ. ಆದುದರಿಂದ ಈ ಪ್ರದೇಶದ ಜನಗಳ ಅನುಕೂಲಕ್ಕಾಗಿ ಈ ನಾಣ್ಯಗಳನ್ನು ನರಸರಾಜ ಒಡೆಯರ್ ಅಚ್ಚು ಹಾಕಿಸಿದರು. ಶಿವಲಿಂಗವಿರುವ ತಾಮ್ರದ ನಾಣ್ಯ ಬಲು ಮುಖ್ಯವಾದುದು. ಮದುರೆಯ ನಾಯಕರು ಶಿವಲಿಂಗವಿರುವ ನಾಣ್ಯಗಳನ್ನು ಅಚ್ಚು ಹಾಕಿಸುತ್ತಿದ್ದುದು ಎಲ್ಲರಿಗೂ ತಿಳಿದಿರುವ ವಿಷಯ. ನರಸರಾಜರು ಮದುರೆಯ ನಾಯಕರನ್ನು ಸೋಲಿಸಿದ ಮೇಲೆ, ಅವರ ನಾಣ್ಯದ ಚಿಹ್ನೆಯಾದ ಶಿವಲಿಂಗವನ್ನು ತಮ್ಮ ನಾಣ್ಯಗಳ ಮೇಲೆ ಅಳವಡಿಸಿದರೆಂದು ಹೇಳಬಹುದು.

ಇತ್ತೀಚೆಗೆ ಇದೇ ದೊರೆಗೆ ಸೇರಿದ ಐದು ನಮೂನೆಯ ತಾಮ್ರದ ನಾಣ್ಯಗಳನ್ನು ಗಣೇಶ್ ಮತ್ತು ಗಿರಿಜಾಪತಿ ಬೆಳಕಿಗೆ ತಂದಿದ್ದಾರೆ. ಇವೂ ಸೇರಿದರೆ ಈ ದೊರೆಯು ಹನ್ನೊಂದು ನಮೂನೆಯ ತಾಮ್ರದ ನಾಣ್ಯಗಳನ್ನು ಟಂಕಿಸಿರುವುದು ನಮ್ಮ ಗಮನವನ್ನು ಸೆಳೆಯುತ್ತದೆ. ಇಷ್ಟೊಂದು ವೈವಿಧ್ಯಮಯ ನಾಣ್ಯಗಳನ್ನು ಅಚ್ಚುಮಾಡಿಸಿದ ಕೀರ್ತಿ ನರಸರಾಜರಿಗೆ ಸೇರಬೇಕು. ಬಹುಶಃ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ಬಿಟ್ಟರೆ ಇಷ್ಟೊಂದು ವೈವಿಧ್ಯಮಯ ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದವರು ಇವರೊಬ್ಬರೇ ಎಂದು ಹೇಳಬಹುದು. ಈ ಎಲ್ಲ ನಾಣ್ಯಗಳ ಮೇಲೂ ಅವರ ಹೆಸರಿನ ಕನ್ನಡ ಬರಹವಿರುವುದು ಮತ್ತೊಂದು ವೈಶಿಷ್ಟ್ಯ. ಈಗ ಈ ಐದು ನಮೂನೆಯ ತಾಮ್ರದ ನಾಣ್ಯಗಳನ್ನು ಗಮನಿಸಬಹುದು.

ಮೊದಲನೆಯ ನಮೂನೆಯ ನಾಣ್ಯದ ತೂಕ 42 ಗ್ರೇನ್, ಅಗಲ 0.8".

ಮು : ವೃತ್ತದೊಳಗೆ ವೈಷ್ಣವ ನಾಮ, ಅಕ್ಕಪಕ್ಕಗಳಲ್ಲಿ ಶಂಖ-ಚಕ್ರ

ಹಿ : ವೃತ್ತದೊಳಗೆ ಎರಡು ಸಾಲುಗಳ ಕನ್ನಡ ಬರಹ

ಕಂಟಿ

ರವ

ಎರಡನೆಯ ನಮೂನೆಯ ನಾಣ್ಯದ ತೂಕ 32 ಗ್ರೇನ್, ಅಗಲ 0.7".

ಮು : ವೃತ್ತದೊಳಗೆ ಬಲಕ್ಕಿರುವ ವೃಷಭ

ಸೂರ್ಯ-ಚಂದ್ರರು

ಹಿ : ಮೇಲಿನ ನಾಣ್ಯದಂತೆ ಬರಹ

ಮೂರನೆಯ ನಮೂನೆಯ ನಾಣ್ಯದ ತೂಕ 28 ಗ್ರೇನ್; ಅಗಲ 0.7".

ಮು : ವೃತ್ತದೊಳಗೆ ಮಾನವಾಕೃತಿ (ದೇವತೆ?)

ಹಿ : ಮೇಲಿನ ನಾಣ್ಯದಂತೆ ಬರಹ

ನಾಲ್ಕನೆಯ ನಮೂನೆಯ ನಾಣ್ಯದ ತೂಕ 14 ಗ್ರೇನ್; ಅಗಲ 0.7".

ಮು : ಕುಳಿತಿರುವ ದೇವತೆ

ಹಿ : ಮೇಲಿನ ನಾಣ್ಯದಂತೆ ಬರಹ

ಐದನೆಯ ನಮೂನೆಯ ನಾಣ್ಯದ ತೂಕ 32 ಗ್ರೇನ್, ಅಗಲ 0.9".

ಮು : ಆನೆಯ ಮೇಲಿರುವ ಸವಾರ

ಹಿ : ಮೇಲಿನ ನಾಣ್ಯದಂತೆ ಬರಹ

ಒಟ್ಟಿನಲ್ಲಿ ಚಿನ್ನದ ಮತ್ತು ತಾಮ್ರದ ನಾಣ್ಯಗಳು ಮುಂದಿನ ಒಡೆಯರ್ ಅರಸರಿಗೆ ಉತ್ತಮ ಮಾದರಿಯನ್ನು ಒದಗಿಸಿದವು.

ಚಿಕ್ಕದೇವರಾಜ ಒಡೆಯರ್ (ಕ್ರಿ.ಶ. 1673-1704)

ಈ ಪ್ರಸಿದ್ಧ ದೊರೆಯ ಚಿನ್ನದ ನಾಣ್ಯಗಳು ಮಾತ್ರ ಬೆಳಕಿಗೆ ಬಂದಿವೆ. ಇವುಗಳು ವರಹ, ಅರ್ಧವರಹ ಮತ್ತು ಹಣದ ಮೌಲ್ಯಗಳಲ್ಲಿ ದೊರಕಿವೆ. ನರಸರಾಜರ ಲಕ್ಷ್ಮೀನರಸಿಂಹ ನಮೂನೆಯ ನಾಣ್ಯಗಳಿಗೆ ಬದಲು ಚಿಕ್ಕದೇವರಾಜರು ಬಾಲಕೃಷ್ಣ ನಮೂನೆಯ ಚಿನ್ನದ ನಾಣ್ಯಗಳನ್ನು ಟಂಕಿಸಿದರು.

ಇವರ ವರಹ ಮೌಲ್ಯದ ಚಿನ್ನದ ನಾಣ್ಯದ ತೂಕ 52 ಗ್ರೇನ್; ಅಗಲ 0.4".

ಮು : ಅಲಂಕೃತ ಕಮಾನಿನ ಮಂಡಪದೊಳಗೆ ನಾಟ್ಯ ಮಾಡುತ್ತಿರುವ ಬಾಲಕೃಷ್ಣ; ಬಾಲಕೃಷ್ಣನು ಅಲಂಕೃತನಾಗಿದ್ದಾನೆ; ಬಲಗೈಯಲ್ಲಿ ಬೆಣ್ಣೆಯ ಮುದ್ದೆಯಿದೆ; ಕೆಳಭಾಗದಲ್ಲಿ ಸರ್ಪ ಕಾಣುತ್ತದೆ.

ಹಿ : ಮೂರು ಸಾಲುಗಳ ನಾಗರೀ ಬರಹ; ಸಾಲುಗಳ ಮಧ್ಯೆ ಅಡ್ಡಗೆರೆಗಳು

ಶ್ರೀ ಚಿ

ಕ ದೇವ

ರಾಜ

ಅರ್ಧವರಹದ ನಾಣ್ಯದ ತೂಕ 25.7 ಗ್ರೇನ್; ಅಗಲ 0.3".

ಮು : ಮೇಲಿನ ನಾಣ್ಯದಲ್ಲಿರುವಂತೆ ಬಾಲಕೃಷ್ಣ

ಹಿ : ಮೂರು ಸಾಲುಗಳ ನಾಗರೀ ಬರಹ

ಶ್ರೀ ಚಿಕ

ದೇವರಾ

ಜ

ಹಣ ಮೌಲ್ಯದ ಚಿನ್ನದ ನಾಣ್ಯದ ತೂಕ 5 ಗ್ರೇನ್, ಅಗಲ 0.3".

ಮು : ನಿಂತಿರುವ ಚಾಮುಂಡಿ

ಹಿ : ಮೂರು ಸಾಲುಗಳ ನಾಗರೀ ಬರಹ

ಚಿಕ

ದೇವ

ರಾಜ

ಈ ದೊರೆಯ ಶಾಸನವೊಂದು, ಈ ನಾಣ್ಯದ ವಿಷಯದಲ್ಲಿ ಹೆಚ್ಚಿನ ಮಾಹಿತಿ ನೀಡುತ್ತದೆ. ಈ ನಾಣ್ಯದ ಹೆಸರು ತಾಂಡವ ಕೃಷ್ಣಮೂರ್ತಿ ದೇವರಾಯ. ಈ ದೊರೆಯು ಮದುರೆಯ ನಾಯಕನನ್ನು ಸೋಲಿಸಿದುದರ ಜ್ಞಾಪಕಾರ್ಥವಾಗಿ ಈ ನಾಣ್ಯವನ್ನು ಅಚ್ಚು ಹಾಕಿಸಿದನು. ಇಮ್ಮಡಿ ಕೃಷ್ಣರಾಜ ಒಡೆಯರ ತೊಂಡನೂರು ಶಾಸನದಲ್ಲಿಯೂ ಇದರ ಪ್ರಸ್ತಾಪವಿದೆ. ಇದರ ಪ್ರಕಾರ ಚಿಕ್ಕದೇವರಾಜರು ಮದುರೆಯ ಮೇಲೆ ವಿಜಯವನ್ನು ಸಂಪಾದಿಸಿ, ಶ್ರೀಕೃಷ್ಣನಂತೆ ಸರ್ಪದ ಮೇಲೆ ತಾಂಡವ ನೃತ್ಯ ಮಾಡಿದರು. ಅಂದರೆ ಈ ದೊರೆಯ ಮದುರೆಯ ವಿಜಯಕ್ಕೆ ಸಮಕಾಲೀನವಾಗಿ ಸಾಕಷ್ಟು ಪ್ರಾಮುಖ್ಯವಿದ್ದಿತು ಎಂದೂ ಗೊತ್ತಾಗುತ್ತದೆ.

ಮುಮ್ಮಡಿ ಕೃಷ್ಣರಾಜ ಒಡೆಯರ್ (ಕ್ರಿ.ಶ. 1799-1868)

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದರು. ಇವರ ನಾಣ್ಯಗಳಲ್ಲಿಯೂ ವೈವಿಧ್ಯ ಕಾಣಬರುತ್ತದೆ. ಇವರು ಇನ್ನೂ ಬಾಲಕರಾಗಿದ್ದುದರಿಂದ, ಆಡಳಿತವನ್ನು ನೋಡಿಕೊಳ್ಳುತ್ತಿದ್ದ ದಿವಾನ್ ಪೂರ್ಣಯ್ಯನವರು ರಾಜರ ಹೆಸರಿನಲ್ಲಿ ವರಹಗಳನ್ನು ಅಚ್ಚು ಹಾಕಿಸಿದರು. ಇವು ಇಕ್ಕೇರಿ ವರಹಗಳನ್ನೇ ಹೋಲುತ್ತಿದ್ದುದರಿಂದ, ಇವುಗಳನ್ನು ಹೊಸ ಇಕ್ಕೇರಿ ವರಹ ಎಂದು ಕರೆಯಲಾಯಿತು. ಈ ನಾಣ್ಯಗಳ ತೂಕ 52 ಗ್ರೇನ್; ಅಗಲ 0.6".

ಮು : ಕುಳಿತಿರುವ ಶಿವ ಮತ್ತು ಪಾರ್ವತಿ; ಶಿವನ ಬಲಗೈಯಲ್ಲಿ
ತ್ರಿಶೂಲ ಮತ್ತು ಎಡಗೈಯಲ್ಲಿ ಮೃಗವಿದೆ

ಹಿ : ಕನ್ನಡ ಅಕ್ಷರ ಶ್ರೀ

ಪೂರ್ಣಯ್ಯನವರು ಕಂಠೀರವ ನರಸರಾಜ ಒಡೆಯರ್ ಅಚ್ಚು ಹಾಕಿಸಿದ ನಾಣ್ಯಗಳನ್ನೇ ಅನುಕರಿಸಿ ಗಿಡ್ಡ ಕಂಠೀರಾಯ ಹಣ ಎಂಬ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದರು. ಕೃಷ್ಣರಾಜ ಒಡೆಯರು ತಾವೇ ಆಡಳಿತವನ್ನು ವಹಿಸಿಕೊಂಡ ಮೇಲೆ ಹೊಸ

ರೀತಿಯ ಅಂದರೆ ತಮ್ಮ ಹೆಸರು ಕಾಣಬರುವ ನಾಣ್ಯಗಳನ್ನು ಅಚ್ಚು ಹಾಕಿಸಲು ಪ್ರಾರಂಭಿಸಿದರು. ಇವರ ಚಿನ್ನದ ವರಹ ನಾಣ್ಯದ ತೂಕ 52 ಗ್ರೇನ್; ಅಗಲ 0.5".

ಮು : ಕುಳಿತಿರುವ ಶಿವ ಮತ್ತು ಪಾರ್ವತಿ; ಶಿವನ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಮೃಗ, ಮೇಲ್ಭಾಗದಲ್ಲಿ ಸೂರ್ಯ-ಚಂದ್ರರು

ಹಿ : ಮೂರು ಸಾಲುಗಳ ನಾಗರೀ ಬರಹ; ಬರಹದ ಮಧ್ಯೆ ಗೆರೆಗಳು

ಶ್ರೀ

ಕೃಷ್ಣರಾ

ಜ



ಈ ಚಿನ್ನದ ನಾಣ್ಯಗಳನ್ನು ಕರ್ತಾರ್ ಇಕ್ಕೇರಿ ವರಹವೆಂದು ಕರೆಯುತ್ತಿದ್ದರೆಂದು ಬುಕಾನನ್ ತಿಳಿಸುತ್ತಾನೆ. ಅಂದರೆ ಈ ನಾಣ್ಯಗಳನ್ನು ಅಚ್ಚು ಹಾಕಿಸಿದವರು. ದೊರೆಗಳು ಎಂದು ಸೂಚಿಸುವುದಕ್ಕಾಗಿ 'ಕರ್ತಾರ್' ಎನ್ನುವ ಪದವನ್ನು ಬಳಸಲಾಗುತ್ತಿತ್ತು. ಏಕೆಂದರೆ ಅನೇಕ ಸಾಮಂತರು ಮತ್ತು ಪಾಳೆಯಗಾರರು ಈ ರೀತಿಯ ಶಿವ-ಪಾರ್ವತಿ ನಾಣ್ಯಗಳನ್ನು ಅಚ್ಚು ಮಾಡುತ್ತಿದ್ದರು. ಭಿನ್ನತೆಯನ್ನು ತೋರಿಸುವುದಕ್ಕಾಗಿ ಈ ರೀತಿ ಕರೆಯಲಾಗುತ್ತಿತ್ತು.

ಮುಮ್ಮಡಿಯವರ ಬೆಳ್ಳಿಯ ನಾಣ್ಯಗಳು, ರುಪಾಯಿ, ಅರ್ಧ ರುಪಾಯಿ, ಕಾಲು ರುಪಾಯಿ, ಅಡ್ಡ ಮತ್ತು ಹಾಗ ಮೌಲ್ಯಗಳಲ್ಲಿ ದೊರಕಿವೆ. ಇವರ ಬೆಳ್ಳಿಯ ರುಪಾಯಿಯನ್ನು ರಾಜ ರುಪಾಯಿ ಎಂದು ಕರೆಯಲಾಗುತ್ತಿತ್ತು. ಇದನ್ನು ಮುಘಲ್ ದೊರೆ ಷಾ ಆಲಂ ಹೆಸರಿನಲ್ಲಿ ಅಚ್ಚು ಹಾಕಿಸಲಾಗಿತ್ತು. ಇದರ ಎರಡು ಮುಖಗಳಲ್ಲಿಯೂ ಪರ್ಷಿಯನ್ ಬರಹಗಳಿದ್ದು, ಮುಘಲ್ ನಾಣ್ಯದಂತೆಯೇ ಕಾಣುತ್ತದೆ. ಕೃಷ್ಣರಾಜರ ಹೆಸರು ಇದರಲ್ಲಿ ಕಾಣಬರುವುದಿಲ್ಲ.

ಮು : ನಾಲ್ಕು ಸಾಲುಗಳ ಪರ್ಷಿಯನ್ ಬರಹ

ಸಿಕ್ಕ ಜದ್ ಬರ್ ಕಿಶವರ್

ಸಯ ಇ ಪರ್ಲ್ ಇ ಇಲಹ್

ಹುಮಿ ಇ ದಿನ್ ಇ ಮುಹಮ್ಮದ್

ಷಾ ಆಲಂ ಪಾದ್‌ಶಾಹ್

ಹಿ : ಜರ್ಬ್ ಇ ಮಹಿಸೂರ್

ಸನ್ 47 ಜುಲುಸ್

ಈ ಬರಹದ ಅರ್ಥವೇನೆಂದರೆ, ಮುಹಮ್ಮದರ ಧರ್ಮದ ರಕ್ಷಕನೂ, ದೈವೀಶಕ್ತಿಯನ್ನು ಪ್ರತಿಫಲಿಸುವವನೂ ಆದ ಚಕ್ರವರ್ತಿ ಷಾ ಆಲಂ, ಏಳು ಪ್ರದೇಶಗಳಲ್ಲೂ ಚಲಾವಣೆಯಲ್ಲಿರುವ ನಾಣ್ಯವನ್ನು ಟಂಕಿಸಿದನು; ರಾಜನ 47ನೆಯ ಆಳ್ವಿಕೆಯ ವರ್ಷದಲ್ಲಿ ಮಹಿಸೂರ್‌ನಲ್ಲಿ ಟಂಕಿಸಲ್ಪಟ್ಟಿದೆ. ಇದರ ಮೇಲಿರುವ ಬರವಣಿಗೆಯ ವಿನ್ಯಾಸವೂ ಸುಂದರವಾಗಿದ್ದು ಮುಘಲ್ ನಾಣ್ಯಮಾದರಿಯನ್ನು ನಮಗೆ ಜ್ಞಾಪಿಸುತ್ತದೆ.

ಇದೇ ದೊರೆಯ ಅರ್ಧ ರುಪಾಯಿ ನಾಣ್ಯದ ಅಗಲ 0.75". ಇದರ ಮೇಲೆ ಒಂದು ರುಪಾಯಿ ನಾಣ್ಯದ ಮೇಲಿರುವ ಬರವಣಿಗೆಯೇ ಮುಮ್ಮುಖ ಮತ್ತು ಹಿಮ್ಮುಖಗಳಲ್ಲಿಯೂ ಕಾಣಬರುತ್ತದೆ. ಇದಕ್ಕೆ ರಾಜ ಅರ್ಧ ರುಪಾಯಿ ಎಂದು ಹೆಸರು. ಇದೇ ದೊರೆಯ ಕಾಲು ರುಪಾಯಿ ಬೆಳ್ಳಿ ನಾಣ್ಯವು ಇದೇ ರೀತಿಯ ಬರಹವನ್ನು ಹೊಂದಿದೆ. ಆದರೆ ಅಗಲ ಮತ್ತು 0.6".

ಕೃಷ್ಣರಾಜ ಒಡೆಯರು ಇನ್ನೊಂದು ರೀತಿಯ ಕಾಲು ರುಪಾಯಿಯ ಬೆಳ್ಳಿಯ ನಾಣ್ಯವನ್ನು ಟಂಕಿಸಿದರು. ಇದರ ಅಗಲ 0.6".

ಮು : ಚುಕ್ಕೆಯ ವೃತ್ತದೊಳಗೆ ನೃತ್ಯಮಾಡುತ್ತಿರುವ ಬಾಲಕೃಷ್ಣ;

ಅವನ ಬಲಗೈಯಲ್ಲಿ ಬೆಣ್ಣೆಯ ಮುದ್ದೆಯಿದೆ

ಹಿ : ಚುಕ್ಕೆಯ ವೃತ್ತದೊಳಗೆ ಮೂರು ಸಾಲುಗಳ ಪರ್ಷಿಯನ್ ಬರಹ

ಜುಲುಸ್ 1244

ಕಿಷೆನ್‌ರಾಜ್ ವಡಿಯರ್

ಜರ್ಬ್ ಇ ಮಹಿಸೂರ್

ಅಂದರೆ ಇದು ಅವರು ಸ್ವಂತ ಹೆಸರಿನಲ್ಲಿ ಟಂಕಿಸಿದ ಬೆಳ್ಳಿಯ ಕಾಲು ರುಪಾಯಿ ನಾಣ್ಯ. ಇದರಲ್ಲಿ ಬಾಲಕೃಷ್ಣನ ಚಿತ್ರ ಹಾಗೂ ರಾಜರ ಹೆಸರು, ಮೈಸೂರು ಟಂಕಶಾಲೆಯ ಹೆಸರು ಕಾಣಬರುತ್ತದೆ.

ಮುಮ್ಮಡಿಯವರು ಅಚ್ಚು ಹಾಕಿಸಿದ ಇನ್ನೊಂದು ಬೆಳ್ಳಿಯ ನಾಣ್ಯವೆಂದರೆ ಅಡ್ಡ ಮೌಲ್ಯದ ನಾಣ್ಯ. ಇದರ ಅಗಲ 0.4".


ಮು : ಚುಕ್ಕೆಯ ವೃತ್ತದೊಳಗೆ ನಾಟ್ಯ ಮಾಡುತ್ತಿರುವ ಬಾಲಕೃಷ್ಣ

ಹಿ : ಮೂರು ಸಾಲುಗಳ ಕನ್ನಡ ಬರಹ

ಮ

ಯಿಲಿ

ಹಣ



ಇವರು ಟಂಕಿಸಿದ ಹಾಗ ಎಂಬ ಬೆಳ್ಳಿಯ ನಾಣ್ಯವೂ ದೊರಕಿದೆ. ಇದರ ಅಗಲ 0.3". ಹಿಮ್ಮುಖ ಮತ್ತು ಮುಮ್ಮುಖಗಳೆರಡರಲ್ಲೂ ಇದರಲ್ಲಿ ಅಡ್ಡ ನಾಣ್ಯದಲ್ಲಿ ಕಾಣಬರುವ ಬರಹಗಳೇ ಕಾಣಬರುತ್ತವೆ.

ಈ ಮೇಲಿನ ನಾಣ್ಯದಲ್ಲಿ ಕಾಣಬರುವ ಮಯಿಲಿ (mayili) ಎನ್ನುವ ಪದದ ಬಗ್ಗೆ ವಿವರಣೆ ಅಗತ್ಯ. ಇದು ಕನ್ನಡ ಲಿಪಿಯಲ್ಲಿ ಹಾಗೂ ರೋಮನ್ ಲಿಪಿಯಲ್ಲಿ ಮೈಲೀ (meilee) ಎಂದು ಕಾಣಸಿಗುತ್ತದೆ. ಇದರ ನಿಜವಾದ ಅರ್ಥ ತಿಳಿದುಬಂದಿಲ್ಲ. ರೈಸ್ ಅವರು ಇದನ್ನು ಮೈಸೂರಲ್ಲಿ ಎನ್ನುವ ಪದದ ಸಂಕ್ಷಿಪ್ತ ರೂಪ ಎಂದು ಭಾವಿಸಿದ್ದರು. ಆದರೆ ಇದು ಸರಿಯಾದ ಅರ್ಥವನ್ನು ಕೊಡುವುದಿಲ್ಲವಾದುದರಿಂದ, ಅದು ಸಮಂಜಸವಲ್ಲವೆಂದು ಆನಂತರ ಅವರೇ ಅಭಿಪ್ರಾಯಪಟ್ಟರು. ಇತ್ತೀಚೆಗೆ ಸೋಹನ್‌ಲಾಲ್ ಸಿಸೋಡಿಯ ಅವರು ಇದಕ್ಕೆ ಇನ್ನೊಂದು ವಿವರಣೆಯನ್ನು ಕೊಡಲು ಪ್ರಯತ್ನಿಸಿದ್ದಾರೆ. ಇದರ ಸರಿಯಾದ ರೂಪ meilee. ಇದು ಮಿಂಟೆಡ್ ಬೈ ಈಸ್ಟ್ ಇಂಡಿಯ ಲಾರ್ಡ್‌ಶಿಪ್ ಇನ್ ಎಕ್ಸಿಸ್ಟಿಂಗ್ ಎಸ್ಟಾಬ್ಲಿಷ್‌ಮೆಂಟ್ ಎಂಬ ವಾಕ್ಯದಲ್ಲಿ ಪ್ರತಿ ಪದದ ಮೊದಲಕ್ಷರವನ್ನು ಸೂಚಿಸುವ ಸಂಕ್ಷಿಪ್ತ ರೂಪವೆಂದು ಅಭಿಪ್ರಾಯಪಟ್ಟಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ ಎಂದು ಹೇಳುವುದು ಕಷ್ಟವೇ ಸರಿ. ಈ ಪದ ಮೊಟ್ಟಮೊದಲನೆಯ ಬಾರಿಗೆ ಮುಮ್ಮಡಿಯವರ ನಾಣ್ಯಗಳ ಮೇಲೆ ಕಾಣಬರುತ್ತದೆ. 1831ರಲ್ಲಿ ಬ್ರಿಟಿಷ್ ಸರ್ಕಾರವು ಮಹಾರಾಜರಿಗೆ ಕಮಿಷನ್ ಒಂದನ್ನು ನಿಯಮಿಸಿತ್ತು. ಇದು ರಾಜಪ್ರತಿನಿಧಿಯಾಗಿ ಕೆಲಸ ನಿರ್ವಹಿಸಬೇಕಾಗಿತ್ತು. ಈ ದಾಖಲೆಯಲ್ಲಿ ವಿಶೇಷವಾಗಿ ಹೊಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಕೂಡದು ಎನ್ನುವುದನ್ನು ಹೇಳಲಾಗಿದೆ. ಈ ದಾಖಲೆಯಲ್ಲಿ ಹೇಳಿರುವ ಮಾತುಗಳು ಗಮನಾರ್ಹ; ಹಿಸ್ ಲಾರ್ಡ್‌ಶಿಪ್ ವಿಲ್ ಡು ಲಿಟಲ್ ವಯಲೆನ್ಸ್ ಆ್ಯಸ್ ಪಾಸಿಬಲ್ ಇನ್ ಎಕ್ಸಿಸ್ಟಿಂಗ್ ಎಸ್ಟಾಬ್ಲಿಷ್‌ಮೆಂಟ್ ಎಂಡ್ ಇನ್‌ಸ್ಟಿಟ್ಯೂಷನ್. ಆದುದರಿಂದ ಕಮಿಷನ್ ನಾಣ್ಯವನ್ನು ಟಂಕಿಸುವ ಕೆಲಸವನ್ನು

ಮಾಡಿತು. ಇದು ಮುಮ್ಮಡಿಯವರ ನೇರ ನಾಣ್ಯ ಅಲ್ಲವೆಂದು ತಿಳಿಸುವುದಕ್ಕೋಸ್ಕರ ಈ ಪದವನ್ನು ನಾಣ್ಯಗಳ ಮೇಲೆ ಬಳಸಲಾಯಿತು ಎನ್ನುವುದು ಅವರ ವಾದ. ಒಟ್ಟಿನಲ್ಲಿ ಇದರ ಅರ್ಥ ಇನ್ನೂ ವಿಶದವಾಗಬೇಕಾಗಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ತಾಮ್ರದ ನಾಣ್ಯಗಳಲ್ಲಿ ವಿಶೇಷ ವೈವಿಧ್ಯವನ್ನು ಕಾಣುತ್ತೇವೆ. ವಿವಿಧ ಮೌಲ್ಯದ ಕಾಸುಗಳೇ ತಾಮ್ರದ ನಾಣ್ಯಗಳಲ್ಲಿ ಕಾಣಬರುತ್ತವೆ. ಈಗ ದೊರಕಿರುವಂತೆ 40, 25, 20, $12^{1}/_{2}$, 10, $6^{1}/_{4}$, 5 ಮತ್ತು 2 ಕಾಸುಗಳ ಮೌಲ್ಯದ ತಾಮ್ರದ ನಾಣ್ಯಗಳು ದೊರಕಿವೆ. ನಲವತ್ತು ಕಾಸಿನ ನಾಣ್ಯವೇ ಅತಿ ಹೆಚ್ಚಿನ ಮೌಲ್ಯದ ತಾಮ್ರದ ನಾಣ್ಯ.


ಮು : ಅಲಂಕೃತ ಆನೆ; ಅದರ ಮೇಲೆ ಮಧ್ಯದಲ್ಲಿ ಶ್ರೀ ಎನ್ನುವ
ಕನ್ನಡ ಅಕ್ಷರ; ಅಕ್ಕಪಕ್ಕದಲ್ಲಿ ಸೂರ್ಯ-ಚಂದ್ರರು

ಹಿ : ಚುಕ್ಕೆಯ ವೃತ್ತದೊಳಗೆ ಮೂರು ಸಾಲುಗಳ
ಕನ್ನಡ ಬರಹ (ಕೊನೆಯ ಸಾಲು ರೋಮನ್ ಲಿಪಿ)
ಮಯಿಲಿ ಕಾ
ಸು ನಲ್ವತ್ತು
XL CASH

ಇದಕ್ಕಿಂತ ಸಣ್ಣ ಮೌಲ್ಯದ ತಾಮ್ರದ ನಾಣ್ಯವೆಂದರೆ 25 ಕಾಸಿನ ನಾಣ್ಯ. ಇದರಲ್ಲಿ ನಾಲ್ಕು ನಮೂನೆಗಳನ್ನು ಗುರುತಿಸಬಹುದು. ಮೊದಲನೆಯ ನಮೂನೆಯ ಅಗಲ 1.1".

ಮು : ವೃತ್ತದೊಳಗೆ ಆನೆಯ ಚಿತ್ರ; ಅದರ ಮೇಲೆ ಶ್ರೀ ಚಾಮುಂಡಿ ಎನ್ನುವ
ಕನ್ನಡ ಬರಹ; ಅಕ್ಕಪಕ್ಕಗಳಲ್ಲಿ ಸೂರ್ಯ-ಚಂದ್ರರು

ಹಿ : ಹೊರಮೈಯಲ್ಲಿ ವೃತ್ತಾಕಾರದ ಬರಹ
ಮಯಿಲಿ ಕಾಸು ೨೫ (ಕನ್ನಡ ಲಿಪಿ)
CASH ೨೫ (ರೋಮನ್ ಲಿಪಿ) XXV
ಒಳಗಡೆ ಮಧ್ಯದಲ್ಲಿ ಇನ್ನೊಂದು ಸಣ್ಣ ವೃತ್ತ;
ಅದರೊಳಗೆ ಕೃಷ್ಣ ಎನ್ನುವ ಕನ್ನಡ ಲಿಪಿ



ಎರಡನೆಯ ನಮೂನೆಯ ನಾಣ್ಯದ ಅಗಲ 1.0". ಮುಮ್ಮುಖದಲ್ಲಿ ಕಾಣಬರುವ ಆನೆಯು ಅಲಂಕೃತ ಹೊದಿಕೆಯನ್ನು ಹೊಂದಿದೆ. ಹಿಮ್ಮುಖದಲ್ಲಿರುವ ಬರಹವು ಚುಕ್ಕೆಗಳ ವೃತ್ತದಲ್ಲಿದೆ. ಮೂರನೆಯ ನಮೂನೆಯ ನಾಣ್ಯ ಭಿನ್ನವಾಗಿದೆ. ಇದರ ಅಗಲ 1.0".

ಮು : ಚುಕ್ಕೆಗಳ ಮತ್ತು ಗೆರೆಯ ವೃತ್ತದೊಳಗೆ ನಿಂತಿರುವ ಸಿಂಹ; ಅದರ ಮೇಲೆ ಶ್ರೀ ಚಾಮುಂಡಿ ಎನ್ನುವ ಕನ್ನಡ ಬರಹ; ಪಕ್ಕದಲ್ಲಿ ಸೂರ್ಯ-ಚಂದ್ರರು; ಕೆಳಗಡೆ ಜರ್ಬ್ ಇ ಮಹಿಸೂರ್ ಎನ್ನುವ ಪರ್ಷಿಯನ್ ಬರಹ

ಹಿ : ಮೇಲಿನ ನಾಣ್ಯದಲ್ಲಿರುವಂತೆ ಬರಹ

ನಾಲ್ಕನೆಯ ನಮೂನೆಯ ನಾಣ್ಯದ ಅಗಲ 1.0".

ಮು : ನಿಂತಿರುವ ಸಿಂಹ; ಮೇಲ್ಗಡೆ ಶ್ರೀ ಚಾಮುಂಡಿ
ಎನ್ನುವ ಕನ್ನಡ ಬರಹ; ಸೂರ್ಯ-ಚಂದ್ರರು

ಹಿ : ಚುಕ್ಕೆಗಳ ಮತ್ತು ಗೆರೆಯ ವೃತ್ತದೊಳಗೆ
XXV CASH (ರೋಮನ್ ಲಿಪಿ)
ಜರ್ಬ್ ಇ ಮಹಿಸೂರ್ (ಪರ್ಷಿಯನ್ ಲಿಪಿ)
ಮೈಲಿ ಕಾಸು ೨೫ (ಕನ್ನಡ ಲಿಪಿ)
ಮಧ್ಯದ ವೃತ್ತದಲ್ಲಿ ಕೃಷ್ಣ ಎನ್ನುವ ಕನ್ನಡ ಬರಹ





ಆನಂತರದ ಕಡಿಮೆ ಮೌಲ್ಯದ ನಾಣ್ಯವೆಂದರೆ 20 ಕಾಸುಗಳ ನಾಣ್ಯ. ಇದನ್ನು ಮೂರು ನಮೂನೆಗಳಲ್ಲಿ ನೋಡಬಹುದು. ಮೊದಲನೆಯದರ ಅಗಲ 0.9".

ಮು : ನಿಂತಿರುವ ಆನೆ; ಮೇಲೆ ಶ್ರೀ ಎನ್ನುವ ಕನ್ನಡ
ಅಕ್ಷರ; ಸೂರ್ಯ-ಚಂದ್ರರು

ಹಿ : ಮೂರು ಸಾಲುಗಳ ಬರಹ; ಮಧ್ಯದಲ್ಲಿ ಗೆರೆಗಳು
ಮಯಿಲಿ ಕಾ (ಕನ್ನಡ)
ಸು ಯಿಪ್ಪತ್ತು (ಕನ್ನಡ)
XX CASH (ರೋಮನ್)

ಎರಡನೆಯ ನಮೂನೆ ನಾಣ್ಯದ ಅಗಲ 1.0".

ಮು : ಅಲಂಕೃತ ಹೊದಿಕೆ ಮತ್ತು ಅಲಂಕೃತ ಆನೆ; ಮೇಲೆ
ಶ್ರೀ ಚಾಮುಂಡಿ ಎನ್ನುವ ಕನ್ನಡ ಬರಹ; ಸೂರ್ಯ-ಚಂದ್ರರು

ಹಿ : ನಾಲ್ಕು ಸಾಲುಗಳ ಬರಹ; ಮಧ್ಯದಲ್ಲಿ ಗೆರೆಗಳು
ಕೃಷ್ಣ (ಕನ್ನಡ)
ಮಯಿಲಿ ಕಾ (ಕನ್ನಡ)
ಸು ಯಿಪ್ಪತ್ತು (ಕನ್ನಡ)
XX CASH (ರೋಮನ್)



ಮೂರನೆಯ ನಮೂನೆಯ ನಾಣ್ಯದ ಅಗಲ 0.9".

ಮು : ಸಿಂಹ, ಮೇಲೆ ಶ್ರೀ ಚಾಮುಂಡಿ ಎಂಬ ಕನ್ನಡ ಬರಹ;
ಸೂರ್ಯ-ಚಂದ್ರರು, ಕೆಳಗಡೆ 1834

ಹಿ : ವೃತ್ತಾಕಾರದಲ್ಲಿ ಬರಹ
ಮಯಿಲಿ ಕಾಸು ೨೦ (ಕನ್ನಡ)
CASH XX (ರೋಮನ್)
ಕೆಳಗಡೆ ಜರ್ಬ್ ಇ ಮಹಿಸೂರ್ (ಪರ್ಷಿಯನ್)

ಹನ್ನೆರಡೂವರೆ ಕಾಸಿನ ನಾಣ್ಯಗಳು ತುಂಬ ವಿರಳ. ಅವುಗಳ ಅಗಲ 0.5".

ಮು : ಚುಕ್ಕೆಗಳ ವೃತ್ತದೊಳಗೆ ಸಿಂಹ; ಮೇಲ್ಗಡೆ ಶ್ರೀ ಎಂಬ ಕನ್ನಡ ಅಕ್ಷರ;
ಸೂರ್ಯ-ಚಂದ್ರರು

ಹಿ : ಮೂರು ಸಾಲುಗಳ ಬರಹ
ಕೃಷ್ಣ (ಕನ್ನಡ)
ಜರ್ಬ್ ಇ ಮಹಿಸೂರ್ (ಪರ್ಷಿಯನ್)
೧೨ ೧/೨ (ಕನ್ನಡ)

ಹತ್ತು ಕಾಸಿನ ತಾಮ್ರದ ನಾಣ್ಯಗಳು ಮೂರು ನಮೂನೆಗಳಲ್ಲಿ ಕಂಡಿಬಂದಿವೆ. ಮೊದಲನೆಯದರ ಅಗಲ 0.6".


ಮು : ಆನೆ; ಕನ್ನಡ ಅಕ್ಷರ ಶ್ರೀ;
ಸೂರ್ಯ-ಚಂದ್ರರು

ಹಿ : ಮೂರು ಸಾಲುಗಳ ಬರಹ
ಚಾ ಮಯಿಲಿ (ಕನ್ನಡ)
ಕಾಸು ೧೦ (ಕನ್ನಡ)
X CASH (ರೋಮನ್)

ಎರಡನೆಯ ನಮೂನೆ ನಾಣ್ಯದ ಅಗಲ 0.7".

ಮು : ಸಿಂಹ, ಕನ್ನಡ ಅಕ್ಷರ ಶ್ರೀ;
ಸೂರ್ಯ-ಚಂದ್ರರು; ಕೆಳಗೆ 1835

ಹಿ : ಚುಕ್ಕೆಗಳ ವೃತ್ತದೊಳಗೆ ಎರಡು ಸಾಲುಗಳ ಬರಹ
ಕೃಷ್ಣ (ಕನ್ನಡ)
ಜರ್ಬ್ ಇ ಮಹಿಸೂರ್ (ಪರ್ಷಿಯನ್)



ಮೂರನೆಯ ನಮೂನೆಯ ನಾಣ್ಯವು ಮೇಲಿನ ನಾಣ್ಯವನ್ನೇ ಎಲ್ಲ ವಿಧಗಳಲ್ಲಿಯೂ ಹೋಲುತ್ತದೆ. ಆದರೆ ಮುಮ್ಮುಖದಲ್ಲಿ ಕೆಳಭಾಗದಲ್ಲಿ 1835 ಎಂಬ ವರ್ಷದ ಬರಹವಿದೆ. 1835ರಿಂದ 1843ರವರೆಗಿನ ವರ್ಷಗಳ ನಾಣ್ಯಗಳು ದೊರಕಿವೆ.

ಆರೂ ಕಾಲು ಕಾಸಿನ ನಾಣ್ಯಗಳು ಬಹಳ ವಿರಳ. ಇವುಗಳ ಅಗಲ 0.45".

ಮು : ಸಿಂಹ; ಕನ್ನಡ ಬರಹ ಶ್ರೀ ಚಾಮುಂಡಿ; ಸೂರ್ಯ-ಚಂದ್ರರು

ಹಿ : ವೃತ್ತಾಕಾರದಲ್ಲಿ ಬರಹ
ಮಯಿಲಿ ಕಾಸು ೬ ೧/೪ (ಕನ್ನಡ)
VI 1/4 CASH (ರೋಮನ್)
ಒಳಗಿನ ಸಣ್ಣ ವೃತ್ತದಲ್ಲಿ ಕನ್ನಡ
ಬರಹ ಕೃಷ್ಣ

ಐದು ಕಾಸಿನ ತಾಮ್ರದ ನಾಣ್ಯಗಳು ಆರು ವಿವಿಧ ನಮೂನೆಗಳಲ್ಲಿ ದೊರಕಿವೆ. ಮೊದಲನೆಯದರ ಅಗಲ 0.6".

ಮು : ಅಲಂಕೃತ ಹೊದಿಕೆಯಿರುವ ಆನೆ; ಮೇಲೆ ಸೂರ್ಯ-ಚಂದ್ರರು

ಹಿ : ಮೂರು ಸಾಲುಗಳ ನಾಗರೀ ಬರಹ
ಶ್ರೀ
ಕೃಷ್ಣರಾ
ಜಾ



ಎರಡನೆಯ ನಮೂನೆಯ ನಾಣ್ಯದ ಅಗಲ 0.6".

ಮು : ವೃತ್ತದೊಳಗೆ ಕನ್ನಡ ಅಕ್ಷರ ಶ್ರೀ

ಹಿ : ಮೂರು ಸಾಲುಗಳ ಬರಹ
V CASH (ರೋಮನ್)
ಮಯಿಲಿ ಕಾ (ಕನ್ನಡ)
ಸು ೫ (ಕನ್ನಡ)



ಮೂರನೆಯ ನಮೂನೆಯ ನಾಣ್ಯದ ಅಗಲ 0.5".

ಮು : ಮೇಲಿನ ನಾಣ್ಯದಲ್ಲಿರುವಂತೆ

ಹಿ : ಚಾ ಮಯಿಲಿ ಕಾಸು ೫ (ಕನ್ನಡ)

V CASH (ರೋಮನ್)

ನಾಲ್ಕನೆಯ ನಮೂನೆಯ ನಾಣ್ಯದ ಅಗಲ 0.6".

ಮು : ಮೇಲಿನ ನಾಣ್ಯದಲ್ಲಿರುವಂತೆ

ಹಿ : ನಾಲ್ಕು ಸಾಲುಗಳ ಬರಹ

ಕೃಷ್ಣ (ಕನ್ನಡ)

ಮಯಿಲಿ (ಕನ್ನಡ)

ಕಾಸು ೫ (ಕನ್ನಡ)

V CASH (ರೋಮನ್)

ಐದನೆಯ ನಮೂನೆಯ ನಾಣ್ಯದ ಅಗಲ 0.6".

ಮು : ಸಿಂಹ; ಸೂರ್ಯ-ಚಂದ್ರರು

ಹಿ : ಎರಡು ಸಾಲುಗಳ ಬರಹ

ಕೃಷ್ಣ (ಕನ್ನಡ)

ಜರ್ಬ್ ಇ ಮಹಿಸೂರ್ (ಪರ್ಷಿಯನ್)

ಆರನೆಯ ನಮೂನೆಯ ನಾಣ್ಯದ ಅಗಲ 0.6".

ಮು : ನಾಟ್ಯ ಮಾಡುತ್ತಿರುವ ಬಾಲಕೃಷ್ಣ;

ಕೆಳಗಡೆ ವರ್ಷ 1833

ಹಿ : ಮೂರು ಸಾಲುಗಳ ಕನ್ನಡ ಬರಹ

ಮ

ಯಿಲಿ

ಕಾಸು ೫

ಎರಡು ಕಾಸಿನ ನಾಣ್ಯಗಳು ಅಷ್ಟಾಗಿ ದೊರಕಿಲ್ಲ. ಇವು ಬೆಂಗಳೂರಿನ ಟಂಕಶಾಲೆಯಲ್ಲಿ ಅಚ್ಚಾದವು. ಇವುಗಳ ಅಗಲ 0.3".

ಮು : ಸಿಂಹ; ಮೇಲ್ಗಡೆ ಸೂರ್ಯ-ಚಂದ್ರರು;
ಕೆಳಭಾಗದಲ್ಲಿ ವರ್ಷ 1843

ಹಿ : II CASH (ರೋಮನ್)
ಕಾಸು ೨ (ಕನ್ನಡ)


ಒಂದು ಕಾಸಿನ ನಾಣ್ಯ ಇದುವರೆಗೆ ದೊರಕಿಲ್ಲ. ಆದುದರಿಂದ ಈ ಮೌಲ್ಯದ ನಾಣ್ಯವು ಅಚ್ಚಾಗಲಿಲ್ಲವೆಂದು ಕೆಲವರು ಭಾವಿಸಿರುತ್ತಾರೆ. ಆದರೆ ಸಾಹಿತ್ಯ ಮತ್ತು ಶಾಸನಗಳನ್ನು ಗಮನಿಸಿದರೆ ಒಂದು ಕಾಸಿನ ಮೌಲ್ಯದ ನಾಣ್ಯ ಅಚ್ಚಾಗಿತ್ತೆಂಬುದು ಖಚಿತವಾಗುತ್ತದೆ. ಈ ಮೌಲ್ಯದ ನಾಣ್ಯ ಸಿಕ್ಕಿದರೆ ಇದು ಖಚಿತವಾಗುತ್ತದೆ.

ಕನ್ನಡ ಸಂಖ್ಯೆಯ ನಾಣ್ಯಗಳು

ಮೈಸೂರು ಸಂಸ್ಥಾನದಲ್ಲಿ ಕನ್ನಡ ಸಂಖ್ಯೆಯನ್ನುಳ್ಳ ತಾಮ್ರದ ನಾಣ್ಯಗಳು ಹೇರಳವಾಗಿ ದೊರಕುತ್ತವೆ. ಮೈಸೂರಿನ ಸುತ್ತಮುತ್ತಲ ಗ್ರಾಮಗಳಲ್ಲಿ ಈ ನಾಣ್ಯಗಳನ್ನು ತೂಕದ ಆಧಾರದ ಮೇಲೆ ಸಂಗ್ರಹಿಸುತ್ತಾರೆ. ಸಾಮಾನ್ಯವಾಗಿ ಈ ನಾಣ್ಯಗಳ ಅಗಲ 0.4" ರಿಂದ 0.6". ವಿರಳವಾಗಿ 0.7" ಅಗಲದ ನಾಣ್ಯಗಳು ದೊರಕುತ್ತವೆ. ಸಾಮಾನ್ಯವಾಗಿ ಇವುಗಳ ದಪ್ಪ 0.15". ಇವುಗಳ ತೂಕ ಸಾಮಾನ್ಯವಾಗಿ 100 ಗ್ರೇನ್‌ಗಳು. ಕೆಲವು ನಾಣ್ಯಗಳು ಸುಂದರವಾಗಿ ಕಂಡರೂ, ವಿಶೇಷವಾಗಿ ಈ ನಾಣ್ಯಗಳು ತುಂಬ ಒರಟಾಗಿರುತ್ತವೆ.

ಈ ನಾಣ್ಯಗಳ ಮುಮ್ಮುಖದಲ್ಲಿ ಚುಕ್ಕೆಯಿಂದ ಕೂಡಿದ ವೃತ್ತವಿರುತ್ತದೆ. ವೃತ್ತದ ಒಳಗೆ ಒಂದು ಅಥವಾ ಎರಡು ಕನ್ನಡ ಸಂಖ್ಯೆಗಳಿರುತ್ತವೆ. ಇದುವರೆಗೆ 1ರಿಂದ 44ರವರೆಗಿನ ಸಂಖ್ಯೆಯನ್ನುಳ್ಳ ನಾಣ್ಯಗಳು ದೊರಕಿವೆ. 33ರವರೆಗಿನ ಸಂಖ್ಯೆಯ ನಾಣ್ಯಗಳು ಹೇರಳವಾಗಿ ದೊರೆಯುತ್ತವೆ. ಆನಂತರದ ಸಂಖ್ಯೆಯ ನಾಣ್ಯಗಳು ತುಂಬ ವಿರಳ. ಒಂದು ಸಂಖ್ಯೆಯು ಮಾತ್ರ ಇದ್ದಾಗ, ಅದು ದೊಡ್ಡದಾಗಿ ಕಾಣಬರುತ್ತದೆ; ಆದರೆ ಎರಡು ಸಂಖ್ಯೆಗಳನ್ನು, ಅಂದರೆ 10ರಿಂದ ಮುಂದಿನ ಸಂಖ್ಯೆಗಳನ್ನು ಅಳವಡಿಸುವಾಗ, ಈ ಸಂಖ್ಯೆಗಳ ಗಾತ್ರ ಸಣ್ಣದಾಗುತ್ತದೆ. ಈ ಸಂಖ್ಯೆಗಳು ತುಂಬ ಚೆನ್ನಾಗಿ ಕಾಣಬರುತ್ತವೆ. ಇವು ಮುಮ್ಮಡಿಯವರ ಕಾಲಕ್ಕೆ ಸುಲಭವಾಗಿ ಹೊಂದಿಕೊಳ್ಳುತ್ತವೆ. ಈ ನಾಣ್ಯಗಳ ಹಿಮ್ಮುಖದಲ್ಲಿ ಅಡ್ಡ ಮತ್ತು ಉದ್ದ ಗೆರೆಗಳು ಕಾಣಬರುತ್ತವೆ. ಇದನ್ನು ನಾಣ್ಯಶಾಸ್ತ್ರಜ್ಞರು ಚೆಕ್ಕರ್ಡ್ ವಿನ್ಯಾಸವೆಂದು ಗುರುತಿಸುತ್ತಾರೆ. ಇದರಿಂದಾಗಿ ಅನೇಕ ನಾಣ್ಯಗಳಲ್ಲಿ ಚೌಕಾಕಾರ

ಇಲ್ಲವೇ ಆಯತಾಕಾರಗಳು ಕಾಣಬರುತ್ತವೆ. ಇವುಗಳಲ್ಲಿ ಕೆಲವು ಚಿಹ್ನೆಗಳು ಕಾಣಬರುತ್ತವೆ. ನೋಡಲು ಇಂಗ್ಲೀಷಿನ X, Y, Z ಮುಂತಾದ ಅಕ್ಷರಗಳಂತೆ ಕಾಣುವ ಈ ಚಿಹ್ನೆಗಳ ಅರ್ಥ ಏನೆಂದು ತಿಳಿದುಬಂದಿಲ್ಲ.



ಇಷ್ಟೊಂದು ಹೇರಳವಾಗಿ ದೊರೆಯುವ ಈ ನಾಣ್ಯಗಳು ಯಾರಿಗೆ ಸೇರಿದ್ದು ಎನ್ನುವ ಬಗೆಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಏಕೆಂದರೆ ಇವುಗಳ ಮೇಲೆ ದೊರೆಯ ಹೆಸರು ಕಾಣಬರುವುದಿಲ್ಲ. ಈ ನಾಣ್ಯಗಳ ಮೇಲೆ ಕಾಣಬರುವ ಸಂಖ್ಯೆಗಳ ಅರ್ಥವೇನು ಎನ್ನುವುದೂ ಪ್ರಶ್ನೆಯಾಗಿಯೇ ಉಳಿದಿದೆ. ಈ ನಾಣ್ಯಗಳು ಕೇವಲ ಮೈಸೂರು ಸಂಸ್ಥಾನದಲ್ಲಿ ಮಾತ್ರ ದೊರಕುತ್ತವೆ; ತಮಿಳುನಾಡು, ಆಂಧ್ರ ಮತ್ತು ಉತ್ತರ ಕರ್ನಾಟಕದ ಭಾಗಗಳಲ್ಲಿ ದೊರಕುವುದಿಲ್ಲವಾದುದರಿಂದ, ಇವು ಮೈಸೂರು ಒಡೆಯರ ನಾಣ್ಯಗಳೇ ಹೊರತು, ವಿಜಯನಗರದ ಅರಸರ ನಾಣ್ಯವಲ್ಲವೆಂಬುದನ್ನು ಸುಲಭವಾಗಿ ತೀರ್ಮಾನಿಸಬಹುದು.

ಈ ನಾಣ್ಯಗಳ ತೂಕ ಮತ್ತು ಅಳತೆ ಒಂದು ಸಮನಾಗಿರುವುದರಿಂದ, ಇವುಗಳ ಮೇಲಿನ ಸಂಖ್ಯೆಯು ಇವುಗಳ ಮೌಲ್ಯವನ್ನು ಸೂಚಿಸುವುದಿಲ್ಲವೆಂಬುದೂ ಖಚಿತ. ಇನ್ನು ಉಳಿದಿರುವುದು ಆಳುವ ರಾಜನ ಆಳ್ವಿಕೆಯ ವರ್ಷ. ರಾಜನು ತನ್ನ ಆಳ್ವಿಕೆಯ ವರ್ಷವನ್ನು ಸೂಚಿಸುವುದಕ್ಕಾಗಿ ಈ ರೀತಿಯ ಸಂಖ್ಯೆಯ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಅಂದರೆ 2 ಎಂಬ ಸಂಖ್ಯೆಯು ರಾಜನ ಆಳ್ವಿಕೆಯ ಎರಡನೆಯ ವರ್ಷವನ್ನು ಸೂಚಿಸದರೆ, 31 ಎನ್ನುವುದು ಅದೇ ರಾಜನ ಆಳ್ವಿಕೆಯ ಮೂವತ್ತೊಂದನೆಯ ವರ್ಷ ಎಂಬುದು ಖಚಿತವಾಗುತ್ತದೆ. ಮಿಕ್ಕ ಎಲ್ಲ ಸಂಖ್ಯೆಗಳೂ ಇದೇ ರೀತಿ ಆಳ್ವಿಕೆಯ ವರ್ಷಗಳನ್ನು ಸೂಚಿಸುತ್ತವೆ. ಅಂದರೆ ಇದನ್ನು ಒಪ್ಪಿಕೊಂಡರೆ, ಈ ನಾಣ್ಯಗಳನ್ನು ಟಂಕಿಸಿದ ರಾಜ 44 ವರ್ಷಗಳು ರಾಜ್ಯವಾಳಿರಬೇಕು ಎಂಬುದು ಗೊತ್ತಾಗುತ್ತದೆ.

ಮೈಸೂರು ಒಡೆಯರ್ ಇತಿಹಾಸವನ್ನು ಗಮನಿಸಿದರೆ, 44 ವರ್ಷಗಳು ಆಳಿದ ಯಾವ ರಾಜನೂ ಕಾಣಬರುವುದಿಲ್ಲ. ಕಂಠೀರವ ನರಸರಾಜ ಒಡೆಯರ್ ಕೇವಲ 22 ವರ್ಷಗಳು (1638-59) ರಾಜ್ಯವಾಳಿದನು. ಈ ದೊರೆಯ ನಾಣ್ಯಗಳನ್ನು ಮೇಲೆ ಗಮನಿಸಲಾಗಿದೆ. ಚಿಕ್ಕದೇವರಾಜ ಒಡೆಯರ್ 32 ವರ್ಷ (1673-1704) ಆಳಿದರು. ಮುಮ್ಮಡಿ ಕೃಷ್ಣರಾಜ ಒಡೆಯರ್ 1799ರಲ್ಲಿ ಪಟ್ಟಕ್ಕೆ ಬಂದರು. ಅವರು ಬಾಲಕನಾಗಿದ್ದುದರಿಂದ ಆಡಳಿತವನ್ನು ನೋಡಿಕೊಳ್ಳುವುದಕ್ಕಾಗಿ ದಿವಾನ್ ಪೂರ್ಣಯ್ಯನವರನ್ನು ನೇಮಿಸಲಾಯಿತು. 1831ರಲ್ಲಿ ಬ್ರಿಟಿಷರು ಮುಮ್ಮಡಿಯವರನ್ನು ಪದಚ್ಯುತಗೊಳಿಸಿದರು. ಆದರೆ ಅವರು ಮರಣ ಹೊಂದಿದ್ದುದು 1861ರಲ್ಲಿ. ದಿವಾನ್ ಪೂರ್ಣಯ್ಯನವರು 1799ರಿಂದ ಈ ನಾಣ್ಯಗಳನ್ನು ವರ್ಷಕ್ಕೆ ಒಂದರಂತೆ ಅಚ್ಚು ಹಾಕಿಸಲು ಮೊದಲು ಮಾಡಿದರು. 1831ರಲ್ಲಿ ಇವರು ರಾಜ್ಯವನ್ನು ಕಳೆದುಕೊಂಡಾಗ, ಈ ನಾಣ್ಯಗಳು ಅಚ್ಚಾಗುವುದು ನಿಲ್ಲಲಿಲ್ಲ. ಈ ಸಂಖ್ಯೆಯು ಯಾಂತ್ರಿಕವಾಗಿ ಸುಮಾರು ಹನ್ನೆರಡು ವರ್ಷಗಳ ಕಾಲ ಮುಂದುವರೆಯಿತು. ಆದುದರಿಂದ 44ರ ಸಂಖ್ಯೆಯನ್ನುಳ್ಳ ನಾಣ್ಯಗಳು ವಿರಳವಾಗಿ ದೊರಕಿವೆ. ಬಹುಶಃ ಅವರು ರಾಜ್ಯವನ್ನು ಕಳೆದುಕೊಂಡ ಮೇಲೆ ಅಂದರೆ 32ರ ಅನಂತರದ ಸಂಖ್ಯೆಯ ನಾಣ್ಯಗಳು ವಿರಳವಾಗಿರುವುದಕ್ಕೆ ಇದೇ ಕಾರಣವಿರಬೇಕು. ಈ ನಾಣ್ಯದ ಹಿಮ್ಮುಖವೂ ಕೂಡ ಮುಖ್ಯವಾದದ್ದು. ಇದರಲ್ಲಿ ಅಡ್ಡ ಮತ್ತು ಉದ್ದನೆಯ ಗೆರೆಗಳಿವೆ. ಈ ರೀತಿಯ ವಿನ್ಯಾಸ ಸಾಮಾನ್ಯವಾಗಿ ಮುಸ್ಲಿಂ ನಾಣ್ಯಗಳ ಮೇಲೆ ವಿಶೇಷವಾಗಿ ಕಾಣಬರುತ್ತವೆ. ಮುಮ್ಮಡಿಯವರ ನಾಣ್ಯಗಳಲ್ಲಿ ಪರ್ಷಿಯನ್ ಬರಹ, ಟಂಕಶಾಲೆಯ ಹೆಸರು ಪರ್ಷಿಯನ್‌ನಲ್ಲಿರುವುದನ್ನು ಆಗಲೇ ಗಮನಿಸಿದ್ದೇವೆ. ಅಂದರೆ ಮುಮ್ಮಡಿಯವರ ನಾಣ್ಯಗಳ ಮೇಲೆ ಮುಸ್ಲಿಂ ಪ್ರಭಾವವನ್ನು ಸುಲಭವಾಗಿ ಗುರುತಿಸಬಹುದು. ಈ ನಾಣ್ಯಗಳ ಹಿಂಭಾಗದಲ್ಲಿ ಮುಸ್ಲಿಂ ನಾಣ್ಯಗಳ ವಿನ್ಯಾಸವಿರುವುದರಿಂದ, ಇವು ಚಿಕ್ಕದೇವರಾಜರ ಅಥವಾ ಕಂಠೀರವ ನರಸರಾಜರ ನಾಣ್ಯಗಳಲ್ಲವೆಂಬುದೂ ಖಚಿತವಾಗುತ್ತದೆ. ಆದುದರಿಂದ ಈ ಎಲ್ಲ ಮಾಹಿತಿಗಳನ್ನೂ ಗಮನಿಸಿದರೆ ಈ ನಾಣ್ಯಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಅಚ್ಚು ಹಾಕಿಸಿದರೆಂದು ತೀರ್ಮಾನಿಸಬಹುದು. ಇಲ್ಲಿ ಒಂದೇ ಒಂದು ಪ್ರಶ್ನೆಯೆಂದರೆ, ಅವರ ಇತರ ನಾಣ್ಯಗಳು ಬರಹವನ್ನು ಹೊಂದಿವೆ; ಈ ನಾಣ್ಯಗಳಲ್ಲಿ ಮಾತ್ರ ಸಂಖ್ಯೆಗಳನ್ನು ಬಿಟ್ಟರೆ, ಬೇರೆ ಬರಹವಿಲ್ಲ. ಅಂದರೆ ಅವರು ಬರಹವುಳ್ಳ ಮತ್ತು ಬರಹವಿಲ್ಲದ ಎರಡು ರೀತಿಯ ನಾಣ್ಯಗಳನ್ನು ಟಂಕಿಸಿದರೆಂದು ತಿಳಿಯಬೇಕಾಗುತ್ತದೆ.

ಈ ನಾಣ್ಯಗಳ ಹಿಂಭಾಗದಲ್ಲಿ ಕಾಣಬರುವ ಉದ್ದ ಮತ್ತು ಅಡ್ಡಗೆರೆಯ ವಿನ್ಯಾಸವನ್ನುಳ್ಳ ಆದರೆ ಮುಮ್ಮುಖದಲ್ಲಿ ಬೇರೆ ಚಿತ್ರಗಳುಳ್ಳ ಅನೇಕ ನಮೂನೆಯ ತಾಮ್ರದ ನಾಣ್ಯಗಳು ದೊರಕಿವೆ. ಇವುಗಳ ಮೇಲೆ ಬರಹವಿಲ್ಲ. ಆದುದರಿಂದ ಹಿಮ್ಮುಖದ ವಿನ್ಯಾಸವನ್ನು ಆಧರಿಸಿ ಇವು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ನಾಣ್ಯಗಳೆಂದು

ತೀರ್ಮಾನಿಸಲಾಗಿದೆ. ಈಗ ಈ ರೀತಿಯ ನಾಣ್ಯಗಳನ್ನು ಗಮನಿಸಬಹುದು. ಇವೆಲ್ಲವೂ ತಾಮ್ರದ ನಾಣ್ಯಗಳು ಹಾಗೂ ವೃತ್ತಾಕಾರದಲ್ಲಿವೆ.

ಮೊದಲನೆಯ ನಾಣ್ಯದ ತೂಕ 40 ಗ್ರೇನ್; ಅಗಲ 0.7".


ಮು : ಕುಳಿತಿರುವ ಗಣೇಶ, ಕೆಳಭಾಗದಲ್ಲಿ ಇಲಿ

ಹಿ : ಅಡ್ಡ ಮತ್ತು ಉದ್ದನೆಯ ಗೆರೆಗಳು

ಎರಡನೆಯ ನಾಣ್ಯದ ತೂಕ 50 ಗ್ರೇನ್; ಅಗಲ 0.6".

ಮು : ಚುಕ್ಕೆಯ ವೃತ್ತದೊಳಗೆ ಶಿವಲಿಂಗ

ಹಿ : ಮೇಲಿನ ನಾಣ್ಯದಂತೆ



ಮೂರನೆಯ ನಾಣ್ಯದ ತೂಕ 52 ಗ್ರೇನ್; ಅಗಲ 0.6".

ಮು : ಬಲಕ್ಕಿರುವ ಹನುಮಾನ್

ಹಿ : ಮೇಲಿನ ನಾಣ್ಯದಂತೆ

ನಾಲ್ಕನೆಯ ನಾಣ್ಯದ ತೂಕ 48 ಗ್ರೇನ್; ಅಗಲ 0.6".

ಮು : ಕುಳಿತಿರುವ ನಾಲ್ಕು ಭುಜಗಳ ಚಾಮುಂಡಿ

ಹಿ : ಮೇಲಿನ ನಾಣ್ಯದಂತೆ

ಐದನೆಯ ನಾಣ್ಯದ ತೂಕ 52 ಗ್ರೇನ್; ಅಗಲ 0.7".

ಮು : ಚುಕ್ಕೆಗಳ ವೃತ್ತದೊಳಗೆ ಕುಳಿತಿರುವ ನಂದಿ

ಹಿ : ಮೇಲಿನ ನಾಣ್ಯದಂತೆ

ಆರನೆಯ ನಾಣ್ಯದ ತೂಕ 48 ಗ್ರೇನ್; ಅಗಲ 0.6".

ಮು : ಚುಕ್ಕೆಗಳ ವೃತ್ತದೊಳಗೆ ಸುರುಳಿಯಾಕಾರದ ಹಾವು

ಹಿ : ಮೇಲಿನ ನಾಣ್ಯದಂತೆ

ಇದನ್ನು ಸುಬ್ಬರಾಯ ಕಾಸು ಎಂದು ಕರೆಯುತ್ತಿದ್ದರು.

ಏಳನೆಯ ನಾಣ್ಯದ ತೂಕ 50 ಗ್ರೇನ್; ಅಗಲ 0.6".

ಮು : ಎಡಕ್ಕೆ ಚಲಿಸುತ್ತಿರುವ ಆನೆ

ಹಿ : ಮೇಲಿನ ನಾಣ್ಯದಂತೆ

ಎಂಟನೆಯ ನಾಣ್ಯದ ತೂಕ 50 ಗ್ರೇನ್; ಅಗಲ 0.6".

ಮು : ಚುಕ್ಕೆಗಳ ವೃತ್ತದೊಳಗೆ ಸಿಂಹ

ಹಿ : ಮೇಲಿನ ನಾಣ್ಯದಂತೆ

ಒಂಬತ್ತನೆಯ ನಾಣ್ಯದ ತೂಕ 52 ಗ್ರೇನ್; ಅಗಲ 0.6".

ಮು : ಚುಕ್ಕೆಗಳ ವೃತ್ತದೊಳಗೆ ಕತ್ತಿ

ಹಿ : ಮೇಲಿನ ನಾಣ್ಯದಂತೆ

ಹತ್ತನೆಯ ನಾಣ್ಯದ ತೂಕ 52 ಗ್ರೇನ್; ಅಗಲ 0.7".


ಮು : ಪೀಠದ ಮೇಲೆ ಕುಳಿತಿರುವ ನಾಲ್ಕು ಭುಜಗಳ ಲಕ್ಷ್ಮಿ

ಹಿ : ಮೇಲಿನ ನಾಣ್ಯದಂತೆ

ಹನ್ನೊಂದನೆಯ ನಾಣ್ಯದ ತೂಕ 52 ಗ್ರೇನ್; ಅಗಲ 0.6".

ಮು : ಎಡಕ್ಕಿರುವ ನವಿಲು


ಹಿ : ಮೇಲಿನ ನಾಣ್ಯದಂತೆ



ಹನ್ನೆರಡನೆಯ ನಾಣ್ಯದ ತೂಕ 50 ಗ್ರೇನ್; ಅಗಲ 0.6".

ಮು : ಚುಕ್ಕೆಗಳ ವೃತ್ತದಲ್ಲಿ ಗಂಟೆ (ಪಗಡೆಕಾಯಿ)


ಹಿ : ಮೇಲಿನ ನಾಣ್ಯದಂತೆ



ಹದಿಮೂರನೆಯ ನಾಣ್ಯದ ತೂಕ 40 ಗ್ರೇನ್; ಅಗಲ 0.6".

ಮು : ನಾಗಾಲೋಟದಲ್ಲಿರುವ ಕುದುರೆ

ಹಿ : ಮೇಲಿನ ನಾಣ್ಯದಂತೆ



ಹದಿನಾಲ್ಕನೆಯ ನಾಣ್ಯದ ತೂಕ 45 ಗ್ರೇನ್; ಅಗಲ 0.6".


ಮು : ಎಡಕ್ಕೆ ಚಲಿಸುತ್ತಿರುವ ಜಿಂಕೆ

ಹಿ : ಮೇಲಿನ ನಾಣ್ಯದಂತೆ

ಹದಿನೈದನೆಯ ನಾಣ್ಯದ ತೂಕ 50 ಗ್ರೇನ್; ಅಗಲ 0.6".

ಮು : ಚುಕ್ಕೆಗಳ ವೃತ್ತದೊಳಗೆ ಪಕ್ಷಿ


ಹಿ : ಮೇಲಿನ ನಾಣ್ಯದಂತೆ



ಹದಿನಾರನೆಯ ನಾಣ್ಯದ ತೂಕ 50 ಗ್ರೇನ್; ಅಗಲ 0.6"

ಮು : ಚುಕ್ಕೆಗಳ ವೃತ್ತದೊಳಗೆ ಮೀನು

ಹಿ : ಮೇಲಿನ ನಾಣ್ಯದಂತೆ



ಹದಿನೇಳನೆಯ ನಾಣ್ಯದ ತೂಕ 50 ಗ್ರೇನ್; ಅಗಲ 0.6".

ಮು : ಚುಕ್ಕೆಗಳ ವೃತ್ತದೊಳಗೆ ಗಂಡಭೇರುಂಡ;
ಅದರ ಕೊಕ್ಕಿನಲ್ಲಿ ಆನೆಗಳು

ಹಿ : ಬಲಕ್ಕಿರುವ ನಂದಿ

ಮೈಸೂರು ಒಡೆಯರ ರಾಜಲಾಂಛನ ಗಂಡಭೇರುಂಡ ವಾಗಿದ್ದರೂ, ಅದರ ಚಿತ್ರವನ್ನು ಒಳಗೊಂಡ ಒಂದು ನಾಣ್ಯವೂ ದೊರಕಿರಲಿಲ್ಲ. ಈಗ ಈ ಕೊರತೆಯು ನಿವಾರಣೆಯಾಗಿದೆ. ಗಂಡಭೇರುಂಡದ ಚಿತ್ರವಿರುವ ತಾಮ್ರದ ನಾಣ್ಯಗಳು ದೊರಕಿವೆ. ಇವುಗಳ ತೂಕ 48 ಗ್ರೇನ್; ಅಗಲ 0.6".

ಮು : ಚುಕ್ಕೆಗಳ ವೃತ್ತದೊಳಗೆ ಕೊಕ್ಕಿನಲ್ಲಿ ಆನೆಯನ್ನು ಹಿಡಿದಿರುವ ಗಂಡಭೇರುಂಡ

ಹಿ : ಅಡ್ಡ ಮತ್ತು ಉದ್ದ ಗೆರೆಗಳು

ಈ ನಾಣ್ಯದ ತೂಕ 20 ಗ್ರೇನ್; ಅಗಲ 0.6". ಗಂಡಭೇರುಂಡದ ವಿನ್ಯಾಸದಲ್ಲಿ ಭಿನ್ನತೆಯಿದೆ; ಹಾಗೇ ತೂಕದಲ್ಲಿಯೂ ಭಿನ್ನತೆಯಿದೆ.

ಮು : ಚುಕ್ಕೆಗಳ ವೃತ್ತದೊಳಗೆ ಗಂಡಭೇರುಂಡ;
ಅದರ ಕೊಕ್ಕಿನಲ್ಲಿ ಆನೆಗಳು

ಹಿ : ಅಡ್ಡ ಮತ್ತು ಉದ್ದ ಗೆರೆಗಳು

ಈ ಮೇಲಿನ ವಿವಿಧ ನಮೂನೆಯ ನಾಣ್ಯಗಳು ಒಂದೇ ತೆರನಾಗಿದ್ದು, ಅವುಗಳ ತೂಕ ಮತ್ತು ಅಗಲ ಹೆಚ್ಚು-ಕಡಿಮೆ ಒಂದೇ ರೀತಿಯದಾಗಿವೆ. ಹಿಂಭಾಗದ ವಿನ್ಯಾಸದಲ್ಲಿ ಸಾಮ್ಯವಿದೆ. ಈ ಎಲ್ಲ ಕಾರಣಗಳಿಂದ ಈ ನಾಣ್ಯಗಳು ಮುಮ್ಮಡಿಯವರಿಗೆ ಸೇರಿದ್ದೆಂದು ಭಾವಿಸಲಾಗಿದೆ.

1881ರ ಕಾನೂನಿನ ಪ್ರಕಾರ ಬ್ರಿಟಿಷ್ ನಾಣ್ಯಗಳೇ ದೇಶದ ಎಲ್ಲೆಡೆಯಲ್ಲಿಯೂ ಚಲಾವಣೆಗೆ ಬಂದವು. ಅಷ್ಟೇ ಅಲ್ಲದೆ ನಿಂತುಹೋಗಿರುವ ಮೈಸೂರು ರಾಜ್ಯದ ನಾಣ್ಯಗಳನ್ನು ಮತ್ತೆ ಟಂಕಿಸಲಾಗದು ಎನ್ನುವ ಮಾತನ್ನೂ ಅದರಲ್ಲಿ ಸೇರಿಸಲಾಯಿತು. ಹೀಗಾಗಿ ಮೈಸೂರು ಒಡೆಯರ ನಾಣ್ಯಗಳನ್ನು ಟಂಕಿಸುವುದು ನಿಂತುಹೋಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಬ್ರಿಟಿಷ್ ನಾಣ್ಯಗಳೇ ಚಲಾವಣೆಯಲ್ಲಿದ್ದವು. ಮೈಸೂರು ಸಂಸ್ಥಾನದಲ್ಲಿ ರಾಜತ್ವವು ರದ್ದಾದ ನಂತರ, ಸ್ವತಂತ್ರ ಭಾರತದ ನಾಣ್ಯಗಳೇ ಚಲಾವಣೆಗೆ ಬಂದವು.

O

ಅಧ್ಯಾಯ 9

ವಿದೇಶೀ ಮತ್ತು ಇತರ ನಾಣ್ಯಗಳು

ಕರ್ನಾಟಕವು ಪ್ರಾಚೀನ ಕಾಲದಿಂದಲೂ ಹೊರದೇಶಗಳೊಡನೆ ರಾಜಕೀಯ, ಆರ್ಥಿಕ, ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿತ್ತು. ಕರ್ನಾಟಕದ ಜನಗಳು ವಿದೇಶಗಳಿಗೆ ಹೋಗಿ ಹಿಂದಿರುಗುವಾಗ ಆ ದೇಶಗಳ ನಾಣ್ಯಗಳನ್ನು ಇಲ್ಲಿಗೆ ತರುತ್ತಿದ್ದರು. ಅದೇ ರೀತಿಯಲ್ಲಿ ವಿದೇಶೀ ವರ್ತಕರು ಕರ್ನಾಟಕಕ್ಕೆ ಬಂದಾಗ ತಮ್ಮ ದೇಶದ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಕೊಟ್ಟು ಇಲ್ಲಿ ದೊರಕುವ ಸಂಬಾರ ಮತ್ತಿತರ ಪದಾರ್ಥಗಳನ್ನು ಕೊಂಡುಕೊಳ್ಳುತ್ತಿದ್ದರು. ಮತ್ತೆ ಕೆಲವು ಸಮಯಗಳಲ್ಲಿ ವಿದೇಶೀ ರಾಯಭಾರಿಗಳು ನಮ್ಮ ರಾಜರಿಗೆ ತಮ್ಮ ದೇಶದ ಚಿನ್ನದ ನಾಣ್ಯಗಳನ್ನು ಉಡುಗೊರೆಯಾಗಿ ನೀಡುತ್ತಿದ್ದರು. ಈ ಎಲ್ಲ ಕಾರಣಗಳಿಗಿಂತ ವಿದೇಶೀ ನಾಣ್ಯಗಳು ಕರ್ನಾಟಕಕ್ಕೆ ಬರಲು ವ್ಯಾಪಾರವೇ ಮುಖ್ಯ ಕಾರಣ ಎಂಬುದು ತಿಳಿದುಬಂದಿದೆ. ಕಾಲಕ್ರಮದಲ್ಲಿ ಈ ನಾಣ್ಯಗಳು ಭೂಮಿಯಲ್ಲಿ ಹೂತುಹೋಗಿ, ಪುರಾತತ್ವ ಉತ್ಖನನಗಳ ಮೂಲಕ ಇಲ್ಲವೇ ಅಕಸ್ಮಾತ್ ಭೂಮಿಯನ್ನು ಅಗೆಯುವಾಗ, ಹೊರಕ್ಕೆ ಕಾಣಿಸಿಕೊಳ್ಳುತ್ತವೆ. ಇಂತಹ ನಾಣ್ಯರಾಶಿಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ದೊರಕಿದ್ದು, ಕರ್ನಾಟಕಕ್ಕೂ ವಿದೇಶಗಳಿಗೂ ಇದ್ದ ಸಂಬಂಧವನ್ನು ಸ್ಪಷ್ಟಗೊಳಿಸುತ್ತವೆ. ಈ ಸಂಬಂಧಗಳು ಯಾವ ರೀತಿಗೆ ಸೇರಿದವು ಎಂಬುದನ್ನು ಇತರ ಐತಿಹಾಸಿಕ ಮಾಹಿತಿಗಳೊಡನೆ ತಾಳೆ ನೋಡಿ, ಇತಿಹಾಸದ ಚೌಕಟ್ಟಿನಲ್ಲಿ ಪರೀಕ್ಷಿಸಿ ಅವುಗಳ ಮೌಲ್ಯವನ್ನು ತಿಳಿಯಬೇಕಾಗುತ್ತದೆ. ಕರ್ನಾಟಕದಲ್ಲಿ ಒಂದೇ ಒಂದು ಗ್ರೀಕ್ ನಾಣ್ಯ ದೊರಕಿದೆ. ಕೇವಲ ಇದರಿಂದಾಗಿ ಕರ್ನಾಟಕಕ್ಕೂ, ಗ್ರೀಸ್ ದೇಶಕ್ಕೂ ಸಂಬಂಧಗಳಿದ್ದವು ಎಂಬ ಏಕಪಕ್ಷೀಯ ನಿರ್ಧಾರಕ್ಕೆ ಬರಲಾಗದು. ಅದೇ ರೀತಿಯಲ್ಲಿ ಕರ್ನಾಟಕದಲ್ಲಿ ನೂರಾರು ರೋಮನ್ ನಾಣ್ಯಗಳು ಹತ್ತಾರು ಕಡೆಗಳಲ್ಲಿ ದೊರಕಿವೆ. ಅವುಗಳು ಉತ್ಖನನಗಳಲ್ಲೂ ದೊರಕಿವೆ. ಕರ್ನಾಟಕಕ್ಕೂ, ರೋಮ್ ದೇಶಕ್ಕೂ ಪ್ರಾಚೀನ ಕಾಲದಲ್ಲಿ ವ್ಯಾಪಾರ ಸಂಬಂಧಗಳು ಇದ್ದುದಕ್ಕೆ ಇತರ ಮಾಹಿತಿಗಳೂ ದೊರಕಿವೆ. ಇಂತಹ ಸಮಯದಲ್ಲಿ ರೋಮ್ ಮತ್ತು ಕರ್ನಾಟಕಗಳಿಗಿದ್ದ ವ್ಯಾಪಾರ ಸಂಬಂಧಗಳನ್ನು ಇಲ್ಲಿ ದೊರಕಿರುವ ರೋಮಿನ ನಾಣ್ಯಗಳು ದೃಢಪಡಿಸುತ್ತವೆ. ಆದುದರಿಂದ ವಿದೇಶೀ

ನಾಣ್ಯಗಳನ್ನು ಅವು ಎಲ್ಲೇ ದೊರಕಿರಲಿ, ಬಹಳ ಜಾಗರೂಕತೆಯಿಂದ ಪರಿಶೀಲಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ದೊರಕಿರುವ ವಿದೇಶೀ ನಾಣ್ಯಗಳನ್ನು ಕಾಲಕ್ರಮದ ದೃಷ್ಟಿಯಲ್ಲಿ ಈಗ ಗಮನಿಸಬಹುದು.

1. ಗ್ರೀಕ್ ನಾಣ್ಯ

ಕರ್ನಾಟಕದಲ್ಲಿ ದೊರಕಿರುವ ಅತ್ಯಂತ ಪ್ರಾಚೀನ ವಿದೇಶೀ ನಾಣ್ಯವೆಂದರೆ ಗ್ರೀಸ್ ದೇಶದ ತಾಮ್ರದ ನಾಣ್ಯ. ಇದು ಹಾಸನದಲ್ಲಿ ದೊರಕಿದ್ದು ಇದರ ತೂಕ 250 ಗ್ರೇನ್, ಅಗಲ 1.1".

ಮು : ಗುಂಗುರು ಕೂದಲು ಮತ್ತು ಮೇಕೆಯ ಕೊಂಬನ್ನು
ಹೊಂದಿರುವ ಅಲೆಗ್ಸಾಂಡರನ ಚಿತ್ರ

ಹಿ : ಕುಳಿತಿರುವ ಅಥೆನಾ ದೇವತೆ; ಬ್ಯಾಸಿಲಿಯೊಸ್
ಲೈಸಿಮಕೊಸ್ ಎನ್ನುವ ಗ್ರೀಕ್ ಬರಹ


ಇದು ಅಲೆಗ್ಸಾಂಡರನ ಸೇನಾನಿಯಾದ ಜನರಲ್ ಲೈಸಿಮಕೊಸ್ ಅಚ್ಚು ಹಾಕಿಸಿದ ನಾಣ್ಯವೆಂದು ಗೊತ್ತಾಗುತ್ತದೆ. (ಕ್ರಿ.ಪೂ. 323-281). ಈ ನಾಣ್ಯ ಸಾಂಸ್ಕೃತಿಕ ಸ್ತರದಲ್ಲಿ ದೊರಕಿಲ್ಲ. ಅಷ್ಟೇ ಅಲ್ಲದೆ ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಕರ್ನಾಟಕಕ್ಕೂ, ಗ್ರೀಸ್ ದೇಶಕ್ಕೂ ಸಂಬಂಧಗಳಿದ್ದುದಕ್ಕೆ ಯಾವ ದಾಖಲೆಗಳೂ ದೊರಕಿಲ್ಲ. ಆಕ್ಸಿರಿಂಚಸ್ ಪೆಪಿರೈ ಎಂಬ ಗ್ರೀಕ್ ಪ್ರಹಸನದಲ್ಲಿ ಕನ್ನಡ ಪದಗಳಿವೆಯೆಂದು ಕೆಲವರು ಭಾವಿಸುತ್ತಾರೆ. ಆದರೂ ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಈ ನಾಣ್ಯ ಬಂದದ್ದಕ್ಕೆ ಖಚಿತವಾದ ಮಾಹಿತಿಯಿಲ್ಲ; ಅದರ ಸಾಧ್ಯತೆಯೂ ಇಲ್ಲವೆಂದು ವಿದ್ವಾಂಸರ ಮತ. ಕರ್ನಾಟಕದ ಜನಗಳಿಗೆ ಗ್ರೀಕ್ ನಾಣ್ಯಗಳ ಪರಿಚಯವಿದ್ದಿತೆಂಬುದು ನಿಜ. ಆದರೆ ಇದು ಕ್ರಿಸ್ತಶಕದ ಎಂಟನೆಯ ಶತಮಾನದಿಂದ ಮಾತ್ರ. ದ್ರಮ್ಮ, ಲೋಹದ್ರಮ್ಮ, ಕರಿಯದ್ರಮ್ಮ, ಕಳ್ಳದ್ರಮ್ಮ ಎಂಬ ಪದಗಳು ಸಾಹಿತ್ಯದಲ್ಲಿ ಕಂಡುಬರುವುದು, ಕ್ರಿ.ಶ. ಎಂಟನೆಯ ಶತಮಾನದಿಂದೀಚೆಗೆ ಮಾತ್ರ. ಈ ಎಲ್ಲ ಐತಿಹಾಸಿಕ ಮಾಹಿತಿಗಳನ್ನು ಪರೀಕ್ಷಿಸಿದರೆ, ಈ ಗ್ರೀಕ್ ನಾಣ್ಯ ಕರ್ನಾಟಕಕ್ಕೂ, ಗ್ರೀಸಿಗೂ ಇದ್ದ ಪ್ರಾಚೀನ ಸಂಬಂಧವನ್ನು ಸೂಚಿಸುವುದಿಲ್ಲ ಎಂಬುದು ಖಚಿತವಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಗ್ರೀಕ್ ನಾಣ್ಯಗಳು ಇಲ್ಲಿ ದೊರೆತರೆ, ಈ ವಿಷಯದ ಮೇಲೆ ಹೊಸಬೆಳಕು ಬೀರಬಹುದು.

2. ರೋಮನ್ ನಾಣ್ಯಗಳು

ರೋಮನ್ ನಾಣ್ಯಗಳ ವಿಷಯಕ್ಕೆ ಬಂದರೆ ನಾವು ಹೆಚ್ಚು ಖಚಿತವಾದ ಬುನಾದಿಯ ಮೇಲೆ ನಿಲ್ಲಬಲ್ಲ ಮಾಹಿತಿಗಳು ದೊರಕುತ್ತವೆ. ಮೊದಲನೆಯದಾಗಿ ಕರ್ನಾಟಕದಲ್ಲಿ

ಹತ್ತಾರು ಕಡೆ ನೂರಾರು ರೋಮನ್ ನಾಣ್ಯಗಳು ದೊರಕಿವೆ. ಜೊತೆಗೆ ಆಂಧ್ರ, ತಮಿಳುನಾಡು ಮತ್ತು ಕೇರಳಗಳಲ್ಲೂ ಈ ನಾಣ್ಯಗಳು ವಿಶೇಷವಾಗಿ ದೊರಕಿವೆ. ಆದುದರಿಂದ ದಕ್ಷಿಣ ಭಾರತಕ್ಕೂ, ರೋಮಿಗೂ ಪ್ರಾಚೀನ ಕಾಲದಲ್ಲಿ ವಿಶೇಷವಾದ ವ್ಯಾಪಾರ ಸಂಬಂಧಗಳಿದ್ದುದು ತಿಳಿಯಬರುತ್ತದೆ. ನಮ್ಮಲ್ಲಿ ದೊರಕುವ ಸಂಬಾರ ಪದಾರ್ಥಗಳು, ಚಂದನ, ಕೆಂಪುಮಣಿಗಳು ಮತ್ತು ಇತರ ಪ್ರಶಸ್ತ ಶಿಲೆಗಳಿಗೆ ರೋಮ್ ಮತ್ತು ಇತರ ವಿದೇಶಗಳಲ್ಲಿ ಸಾಕಷ್ಟು ಬೇಡಿಕೆಯಿದ್ದಿತು. ಆದುದರಿಂದ ರೋಮಿನ ವ್ಯಾಪಾರಿಗಳು ಇಲ್ಲಿಗೆ ಬಂದು ಉತ್ತಮವಾದ ಚಿನ್ನದ ಮತ್ತು ಬೆಳ್ಳಿಯ ರೋಮನ್ ನಾಣ್ಯಗಳನ್ನು ಕೊಟ್ಟು ತಮಗೆ ಬೇಕಾದ ಪದಾರ್ಥಗಳನ್ನು ಕೊಂಡುಕೊಳ್ಳುತ್ತಿದ್ದರು. ಈ ಚಿನ್ನದ ನಾಣ್ಯಗಳು ಉತ್ತಮ ಗುಣಮಟ್ಟದ್ದಾಗಿದ್ದುದರಿಂದ, ನಮ್ಮ ವ್ಯಾಪಾರಿಗಳಿಗೆ ತುಂಬ ಪ್ರಿಯವೆನಿಸಿದವು. ಆದುದರಿಂದ ನಮ್ಮ ವ್ಯಾಪಾರಿಗಳು ಈ ವಿಷಯದಲ್ಲಿ ಜಾಸ್ತಿ ಆಸಕ್ತಿ ತೋರಿಸಿದುದರಿಂದ ನಮ್ಮ ದೇಶಕ್ಕೂ ರೋಮಿಗೂ ವ್ಯಾಪಾರ ಸಂಪರ್ಕಗಳು ಹೆಚ್ಚಾಗಲು ಆರಂಭಿಸಿದವು. ಇದಕ್ಕೆ ಅನುಕೂಲಕರವಾಗುವಂತೆ ಕ್ರಿ.ಶ. ಒಂದನೆಯ ಶತಮಾನದಲ್ಲಿ ಹಿಪ್ಪಲಸ್ ಎಂಬುವನು ಮುಂಗಾರು ಮಾರುತಗಳ ಉಪಯುಕ್ತತೆಯನ್ನು ಪತ್ತೆ ಮಾಡಿದನು. ಇದರಿಂದ ಹಡಗುಗಳಲ್ಲಿ ಯಾನ ಮಾಡುವುದು ಸುಲಭವೆಂದು ತೋರಿತು. ಭೂಮಾರ್ಗದಲ್ಲಿ ಕಳ್ಳಕಾಕರ ಭೀತಿ ಹೆಚ್ಚಿದ್ದುದರಿಂದ ಜಲಮಾರ್ಗ ಈ ವ್ಯಾಪಾರಿಗಳಿಗೆ ಒಂದು ವರವಾಗಿ ಪರಿಣಮಿಸಿತು. ಇದರ ಲಾಭವನ್ನು ಪಡೆದವರು ವ್ಯಾಪಾರಿಗಳು. ಗ್ರೀಸ್ ಅಥವಾ ರೋಮಿನಿಂದ ಹೊರಟ ಹಡಗು ಕೇವಲ ಆರು ವಾರಗಳಲ್ಲಿ ದಕ್ಷಿಣ ಭಾರತದ ಯಾವ ತೀರಪ್ರದೇಶವನ್ನಾದರೂ ಸೇರಲು ಸಾಧ್ಯವಾಯಿತು. ಆದುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ರೋಮನ್ ವ್ಯಾಪಾರಿಗಳು ಕರ್ನಾಟಕಕ್ಕೆ ವ್ಯಾಪಾರಕ್ಕಾಗಿ ಬರಲು ಆರಂಭಿಸಿದರು. ಇದಕ್ಕೆ ಅನುಕೂಲಕರವಾಗುವ ಕರಾವಳಿ ಪರಿಸ್ಥಿತಿಯನ್ನು ದಕ್ಷಿಣ ಭಾರತದಲ್ಲಿ ಶಾತವಾಹನರು, ಪ್ರಾಚೀನ ಚೋಳರು, ಚೇರರು ನಿರ್ಮಿಸಿದರು. ವಿದೇಶೀ ಬರಹಗಾರರು ತೀರಪ್ರದೇಶಗಳಲ್ಲಿದ್ದ ಬರಿಗಾಜ, ಮುಜಿರಸ್, ನೆಲ್ಸಿಂಡ, ಕಾವೇರಿಪಟ್ಟಣಂ, ಅರಿಕಮೇಡು ಮುಂತಾದ ಬಂದರುಗಳನ್ನು ಹೆಸರಿಸಿದ್ದಾರೆ. ಇವೆಲ್ಲವೂ ಸಂಪದ್ಭರಿತವಾಗಿದ್ದು ಹತ್ತಾರು ಹಡಗುಗಳು ಬಂದು ಇಲ್ಲಿ ತಂಗುತ್ತಿದ್ದು ವ್ಯಾಪಾರವನ್ನು ಸುಸೂತ್ರವಾಗಿ ಮಾಡಲು ಅನುಕೂಲವಾಗಿದ್ದವು.

ವಿದೇಶಗಳಲ್ಲಿ ಕರಿಮೆಣಸಿನಕಾಳು ಮಲೇರಿಯ ಸೇರಿದಂತೆ ಅನೇಕ ವ್ಯಾಧಿಗಳಿಗೆ ಉತ್ತಮ ಔಷಧಿಯೆಂದು ಪ್ರಸಿದ್ಧಿ ಪಡೆದಿತ್ತು. ನಮ್ಮಲ್ಲಿ ಕರಿಮೆಣಸು ಮತ್ತು ಏಲಕ್ಕಿ ಮುಂತಾದ ಸಂಬಾರ ಪದಾರ್ಥಗಳು ಹೇರಳವಾಗಿ ಬೆಳೆಯುತ್ತಿದ್ದವು. ರೋಮನ್ ವ್ಯಾಪಾರಿಗಳು ಈ ಕಾಳುಮೆಣಸನ್ನು ಕೊಂಡು, ಯುರೋಪಿನಲ್ಲಿ ಹೆಚ್ಚು ಬೆಲೆಗೆ ಮಾರಿ ಲಾಭ ಗಳಿಸುತ್ತಿದ್ದರು. ಇದರ ಜೊತೆಗೆ ರೋಮನ್ನರನ್ನು ಆಕರ್ಷಿಸಿದ ಇನ್ನೊಂದು ವಸ್ತುವೆಂದರೆ ತಿಳಿಹಸಿರು ಬಣ್ಣದ ಪಾರದರ್ಶಕ ಪಚ್ಚೆ. ರೋಮನ್ ಮಹಿಳೆಯರಿಗೆ ಈ



ಕರ್ನಾಟಕದಲ್ಲಿ ರೋಮನ್ ನಾಣ್ಯಗಳು

ಹಸಿರು ಪಚ್ಚೆಯ ಆಭರಣಗಳನ್ನು ಧರಿಸುವುದು ಗೌರವದ ಸಂಕೇತವಾಯಿತು. ಕರ್ನಾಟಕದಲ್ಲಿ ತುಮಕೂರಿನ ಸಮೀಪ ಇದು ಮತ್ತು ಇತರ ಕಡೆಗಳಲ್ಲಿ ಬೇರೆ ಪ್ರಶಸ್ತ ಶಿಲೆಗಳು ದೊರೆಯುತ್ತಿದ್ದವು. ಅಷ್ಟೇ ಅಲ್ಲದೆ ದಿನನಿತ್ಯ ಬಳಕೆಗೆ ಬೇಕಾದ ಹತ್ತಿ ಮತ್ತು ರೇಷ್ಮೆಗಳು ಕೂಡ ರೋಮನ್ ವ್ಯಾಪಾರಿಗಳಿಗೆ ಬೇಕಾಗಿದ್ದವು. ಆದುದರಿಂದ ರೋಮನ್ ವ್ಯಾಪಾರಿಗಳು ಕರ್ನಾಟಕಕ್ಕೆ ಬಂದು ಇಲ್ಲಿ ಕೊಂಚಕಾಲ ತಂಗಿದ್ದು, ಚಿನ್ನದ ನಾಣ್ಯಗಳನ್ನು ಕೊಟ್ಟು ಈ ಎಲ್ಲ ಪದಾರ್ಥಗಳನ್ನು ಕೊಂಡುಕೊಂಡು ತಮ್ಮ ಹಡಗುಗಳಲ್ಲಿ ಹಿಂದಿರುಗುವ ಪದ್ಧತಿ ಹೆಚ್ಚಾಯಿತು. ರೋಮನ್ನಿನ ಚಿನ್ನದ ನಾಣ್ಯಗಳು ಇಲ್ಲಿಗೆ ಬರುವುದು ತೀರ ಹೆಚ್ಚಾಗಿ, ರೋಮನ್ ಚಕ್ರವರ್ತಿಗೆ ಇದು ಕಳವಳಕಾರಿಯಾಗಿ ಕಂಡುಬಂದಿದ್ದು ಆಶ್ಚರ್ಯವೇನಲ್ಲ. ಪ್ಲಿನಿ ಎಂಬ ಬರಹಗಾರನ ಪ್ರಕಾರ ಒಂದು ವರ್ಷದಲ್ಲಿ ಅರ್ಧ ಮಿಲಿಯನ್ ಸ್ಟರ್ಲಿಂಗಿನಷ್ಟು ವ್ಯಾಪಾರ ಇಲ್ಲಿ ನಡೆಯುತ್ತಿದ್ದಿತು. ಇದೇನೂ ಸಾಮಾನ್ಯವಾದ ಮೊತ್ತವಲ್ಲವೆಂಬುದನ್ನು ಗಮನಿಸಬೇಕು. ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು. ಕರ್ನಾಟಕದಲ್ಲಿ ದೊರಕಿರುವ ರೋಮನ್ ಚಿನ್ನದ ನಾಣ್ಯಗಳನ್ನು ಜನಗಳು ಆಭರಣವನ್ನಾಗಿ ಬಳಸುತ್ತಿದ್ದರೆಂಬುದು ಗೊತ್ತಾಗುತ್ತದೆ. ಈ ಚಿನ್ನದ ನಾಣ್ಯಗಳಿಗೆ ಎರಡು ರಂಧ್ರಗಳನ್ನು ಮಾಡಿರುವುದರಿಂದ, ಈ ರಂಧ್ರಗಳ ಮೂಲಕ ಅವುಗಳನ್ನು ದಾರಗಳಲ್ಲಿ ಅಥವಾ ತಂತಿಗಳಲ್ಲಿ ಪೋಣಿಸಿ, ಸರವನ್ನಾಗಿ ಬಳಸುತ್ತಿದ್ದರೆಂಬ ಅಂಶವನ್ನು ಊಹಿಸಿಕೊಂಡಾಗ, ನಮ್ಮ ಜನಗಳಿಗೆ ಈ ರೋಮನ್ ಚಿನ್ನದ ನಾಣ್ಯಗಳ ಬಗೆಗಿದ್ದ ವ್ಯಾಮೋಹ ಸ್ಪಷ್ಟವಾಗುತ್ತದೆ.

ಇನ್ನು ಈ ವ್ಯಾಪಾರದ ಕಾಲಮಾನವನ್ನು ಕುರಿತು ಹೇಳುವುದಾದರೆ, ಇದು ವಿಶೇಷವಾಗಿ ಪ್ರಚಲಿತವಾಗಿದ್ದುದು ಕ್ರಿಸ್ತಶಕದ ಮೊದಲ ಶತಮಾನಗಳಲ್ಲಿ ಎಂದು ಗೊತ್ತಾಗುತ್ತದೆ. ದೊರಕಿರುವ ರೋಮನ್ ನಾಣ್ಯಗಳನ್ನು ಆಧರಿಸಿ ಹೇಳುವುದಾದರೆ ಈ ವ್ಯಾಪಾರದ ಸಾಂದ್ರತೆ ರೋಮನ್ ಚಕ್ರವರ್ತಿಗಳಾದ ಅಗಸ್ಟಸ್ (ಕ್ರಿ.ಪೂ. 31 - ಕ್ರಿ.ಶ. 14) ಮತ್ತು ಟೈಬೀರಿಯಸ್ (ಕ್ರಿ.ಶ. 14-37) ಅವರ ಕಾಲದಲ್ಲಿ ವಿಶೇಷವಾಗಿದ್ದಿತು. ಆನಂತರ ಕಡಿಮೆಯಾಗುತ್ತ ಹೋಗಿ ಬೈಜಾಂಟೈನ್ ಚಕ್ರವರ್ತಿಗಳ ಕಾಲದಲ್ಲಿ ಇಳಿಮುಖವಾಯಿತು. ರೋಮನ್ ವ್ಯಾಪಾರಿಗಳು ಹಡಗಿನಲ್ಲಿ ರೇವು ಪಟ್ಟಣಕ್ಕೆ ಬಂದು, ಅಲ್ಲಿಂದ ಕರ್ನಾಟಕದ ಒಳಭಾಗಗಳಿಗೆ ಹೋಗಿ ವ್ಯಾಪಾರ ಮುಗಿಯುವವರೆಗೆ ತಂಗುತ್ತಿದ್ದರು. ಆಗ ಅವರು ಉಪಯೋಗಿಸುತ್ತಿದ್ದ ಮಡಕೆ-ಕುಡಿಕೆಗಳನ್ನು ಹಿಂದಿರುಗುವಾಗ ಬಿಟ್ಟು ಹೋಗುತ್ತಿದ್ದರು. ರೋಮನ್ನರ ವಿಶಿಷ್ಟವಾದ ಉತ್ತಮ ಗುಣಮಟ್ಟದ 'ರೌಲೆಟೆಡ್' ಮಡಕೆಯ ಚೂರುಗಳು ಕರ್ನಾಟಕದ ಚಂದ್ರವಳ್ಳಿ, ಬನವಾಸಿ, ಸನ್ನತಿ ಮುಂತಾದ ಅನೇಕ ಸ್ಥಳಗಳಲ್ಲಿ ನಡೆದ ಉತ್ಖನನಗಳಲ್ಲಿ ದೊರಕಿವೆ.

ಕರ್ನಾಟಕದಲ್ಲಿ ಮೊಟ್ಟಮೊದಲನೆಯ ರೋಮನ್ ನಾಣ್ಯಗಳು ದೊರಕಿದ್ದು ಬೆಂಗಳೂರಿನ ಯಶವಂತಪುರದಲ್ಲಿ, ನೂರು ವರ್ಷಗಳಿಗೂ ಹಿಂದೆ. ಮೈಲೆ ಎಂಬ

ಇಂಜಿನಿಯರನು ರೈಲ್ವೆ ಹಳಿಗಳನ್ನು ಹಾಕುತ್ತಿದ್ದಾಗ ಒಂದು ಮಡಕೆಯಲ್ಲಿದ್ದ 163 ಬೆಳ್ಳಿಯ ರೋಮನ್ ನಾಣ್ಯಗಳು ದೊರಕಿದವು. ಇವುಗಳನ್ನು ಲೂಯಿ ರೈಸರು ಪರೀಕ್ಷಿಸಿ ಪ್ರಕಟಿಸಿದರು. ಇದರಲ್ಲಿ ಅಗಸ್ಟಸ್, ಟೈಬೀರಿಯಸ್, ಆಂಟೋನಿಯ, ಕ್ಲಾಡಿಯಸ್ ಮತ್ತು ಕ್ಯಾಲಿಗುಲ ದೊರೆಗಳಿಗೆ ಸೇರಿದ ನಾಣ್ಯಗಳಿವೆ. ಇವುಗಳ ಕಾಲಮಾನ ಕ್ರಿ.ಪೂ. 23ರಿಂದ ಕ್ರಿ.ಶ. 51ರವರೆಗೆ. ಇದರಲ್ಲಿ ಅಗಸ್ಟಸ್ ಚಕ್ರವರ್ತಿಯ ನಾಲ್ಕು ನಮೂನೆಯ ಬೆಳ್ಳಿಯ ನಾಣ್ಯಗಳಿವೆ.

ಮು : ಅಗಸ್ಟಸ್‌ನ ಚಿತ್ರ; ಬರಹ AUGUSTUS DIVI F

ಹಿ : ತಲೆಯನ್ನು ಕೆಳಕ್ಕೆ ಬಾಗಿಸಿರುವ ಓಡುತ್ತಿರುವ ವೃಷಭ;
ಬರಹ IMPX

ಎರಡನೆಯ ನಮೂನೆಯ ನಾಣ್ಯ ಸ್ವಲ್ಪ ಭಿನ್ನವಾಗಿದೆ.

ಮು : ಅಗಸ್ಟಸ್‌ನ ಚಿತ್ರ; ಬರಹ CAESER AUGUSTUS
F PATER DIVI ATRIE

ಹಿ : ನಿಂತಿರುವ ಗೇಯಸ್ ಮತ್ತು ಲೂಸಿಯಸ್; ಬರಹ
CL CAESER AUGUSTI F COS DESIG
PRINC JULENI





ಮೂರನೆಯ ನಮೂನೆಯ ನಾಣ್ಯದ ಬರಹದಲ್ಲಿ ಭಿನ್ನತೆಯಿದೆ.

ಮು : ಮೊದಲಿನ ನಾಣ್ಯದಲ್ಲಿರುವಂತೆ

ಹಿ : ನಾಗಾಲೋಟದಲ್ಲಿರುವ ಕುದುರೆಯ ಮೇಲೆ ಸವಾರ;
ಬರಹ AUG

ನಾಲ್ಕನೆಯ ನಮೂನೆಯ ನಾಣ್ಯದಲ್ಲಿ ಹಿಮ್ಮುಖ ಭಿನ್ನವಾಗಿದೆ.

ಮು : ಎರಡನೆಯ ನಾಣ್ಯದಲ್ಲಿರುವಂತೆ

ಹಿ : ಅಗಸ್ಟಸ್‌ನ ಚಿತ್ರ; ಬರಹ TI CAESER AUG F TR POT

ಟೈಬೀರಿಯಸ್ ಚಕ್ರವರ್ತಿಯ ಒಂದು ನಮೂನೆಯ ನಾಣ್ಯ ಹೀಗಿದೆ.

ಮು : ಟೈಬೀರಿಯಸ್‌ನ ಚಿತ್ರ; ಬರಹ TI CAESER DIVI AUG F

ಹಿ : ವೆಸ್ಟ ಎಂಬ ಸ್ತ್ರೀ ಆಸನದ ಮೇಲೆ ಕುಳಿತಿದ್ದಾಳೆ; ಬಲಗೈಯಲ್ಲಿ ಉದ್ದನೆಯ ಭರ್ಜಿ; ಎಡಗೈಯಲ್ಲಿ ಮರದ ರೆಂಬೆ; ಬರಹ PONTI F MAXIM



ಆಂಟೋನಿಗೆ ಸೇರಿದ ಒಂದು ನಾಣ್ಯ ಹೀಗಿದೆ.

ಮು : ಆಂಟೋನಿಯ ಚಿತ್ರ; ಬರಹ ANTONIA AUGUSTA

ಹಿ : ಅಲಂಕಾರ ಪಟ್ಟಿಕೆಯನ್ನುಳ್ಳ ಎರಡು ಪಂಜುಗಳು; ಬರಹ SACERDOS DIVI AUGUSTI

ಕ್ಯಾಲಿಗುಲನಿಗೆ ಸೇರಿದ ಒಂದು ನಾಣ್ಯವಿದೆ.

ಮು : ಕ್ಯಾಲಿಗುಲನ ಚಿತ್ರ; ಬರಹ C CAESER AUG GERM P M TR POT

ಹಿ : ಅಗಸ್ಟಸ್‌ನ ಚಿತ್ರ; ಬರಹ DIVVS AUG PATER PATRIAE

ಕ್ಲಾಡಿಯಸ್ ಚಕ್ರವರ್ತಿಗೆ ಸೇರಿದ ಮೂರು ನಮೂನೆಯ ನಾಣ್ಯಗಳು ದೊರಕಿವೆ. ಮೊದಲನೆಯ ನಮೂನೆಯ ನಾಣ್ಯದ ವಿವರ ಹೀಗಿದೆ.

ಮು : ಕ್ಲಾಡಿಯಸ್‌ನ ಚಿತ್ರ; ಬರಹ TI CLAD CAESER AUG PM TR PVI IMP XI

ಹಿ : ರೆಕ್ಕೆಗಳಿರುವ ಸ್ತ್ರೀ ಕೈ ಮೇಲೆತ್ತಿಕೊಂಡು ಹಾರುತ್ತಿದ್ದಾಳೆ. ಸರ್ಪಗಳು ಸುತ್ತಿಕೊಂಡಿರುವ ದಂಡವನ್ನು ಹಿಡಿದಿದ್ದಾಳೆ ಬರಹ PACI AUG

ಎರಡನೆಯ ನಮೂನೆಯ ನಾಣ್ಯ ಸ್ವಲ್ಪ ಭಿನ್ನವಾಗಿದೆ.

ಮು : ಕ್ಲಾಡಿಯಸ್‌ನ ಚಿತ್ರ; ಬರಹ TI CLAVD CAESER AUG GERM P M TR POT

ಹಿ : ಓಕ್ ಮರದ ಎಲೆಗಳು; ಬರಹ EX SLOB CIVES SERVA TO

ಮೂರನೆಯ ನಮೂನೆಯ ನಾಣ್ಯದ ಹಿಮ್ಮುಖದಲ್ಲಿ ಬದಲಾವಣೆ ಕಾಣಬರುತ್ತದೆ.

ಮು : ಮೇಲಿನ ನಾಣ್ಯದಲ್ಲಿರುವಂತೆ

ಹಿ : ಬಲಗೈ ಮೇಲೆತ್ತಿಕೊಂಡು ಆಸನದ ಮೇಲೆ ಕುಳಿತಿರುವ ಕಾನ್‌ಸ್ಟೆನ್ಸಿ; ಬರಹ CONSTANTLA AUGUSTI

1947ರಲ್ಲಿ ಸರ್ ಮಾರ್ಟಿಮರ್ ವೀಲರ್ ಅವರು ಚಂದ್ರವಳ್ಳಿಯಲ್ಲಿ ಉತ್ಖನನ ನಡೆಸಿದರು. ಅದಕ್ಕೂ ಮುಂಚೆ ಎಂ.ಎಚ್. ಕೃಷ್ಣ ಅವರು ಇಲ್ಲಿ ಉತ್ಖನನ ನಡೆಸಿದ್ದರು. ವೀಲರ್ ಅವರು ನಡೆಸಿದ ಉತ್ಖನನದಲ್ಲಿ ಚಕ್ರವರ್ತಿ ಟೈಬೀರಿಯಸ್‌ಗೆ ಸೇರಿದ ಒಂದು ನಾಣ್ಯ ದೊರಕಿದೆ. ಇದರ ತೂಕ ಗ್ರೇನ್; ಅಗಲ 0.7". ಇದು ಯಶವಂತಪುರದಲ್ಲಿ ದೊರಕಿರುವ ಇದೇ ರಾಜನ ನಾಣ್ಯಕ್ಕಿಂತ ಸ್ವಲ್ಪ ಭಿನ್ನವಾಗಿದೆ.

ಮು : ಟೈಬೀರಿಯಸ್‌ನ ಚಿತ್ರ; ಬರಹ TI CAESER DIVI AUG F AUGUSTUS

ಹಿ : ಸ್ಟೂಲಿನ ಮೇಲೆ ಕುಳಿತಿರುವ ವೆಸ್ಟ; ಒಂದು ಕೈಯಲ್ಲಿ ರೆಂಬೆಯಿದೆ; ಬರಹ PONTIF MAXIM

ಇದೇ ಉತ್ಖನನದಲ್ಲಿ ಇನ್ನೂ ಕೆಲವು ರೋಮನ್ ನಾಣ್ಯಗಳು ದೊರಕಿದ್ದವೆಂದು ತಿಳಿದುಬಂದರೂ ಅವುಗಳ ಖಚಿತ ವಿವರಗಳು ಗೊತ್ತಾಗಿಲ್ಲ. ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಕಾಲಮಾನದ ತೀರ್ಮಾನ. ಈ ನಾಣ್ಯದ ಕಾಲ ತಿಳಿದಿದ್ದರಿಂದ ಹಾಗೂ ಇದು ಸಾಂಸ್ಕೃತಿಕ ಮಣ್ಣಿನ ಸ್ತರದಲ್ಲಿ ದೊರಕಿದ್ದುದರಿಂದ, ಇಡೀ ಉತ್ಖನನದ ವಿವಿಧ ಸಂಸ್ಕೃತಿಗಳ ಕಾಲಮಾನವನ್ನು ತಿಳಿಯಲು ಸಾಧ್ಯವಾಯಿತು. ಆದುದರಿಂದ ಈ ನಾಣ್ಯ ವಿಶೇಷ ಮಹತ್ವ ಪಡೆದಿದೆ.

ಬೆಂಗಳೂರಿನ ಹೆಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿ 1965ರಲ್ಲಿ ಅಗೆಯುತ್ತಿದ್ದಾಗ ಉದ್ದನೆಯ ಕಂಠದ ಮಣ್ಣಿನ ಕುಡಿಕೆಯೊಂದು ದೊರಕಿತು. ಅದರೊಳಗೆ 256 ಬೆಳ್ಳಿಯ ನಾಣ್ಯಗಳಿದ್ದು, ಅವು ರೋಮನ್ ಚಕ್ರವರ್ತಿಗಳಿಗೆ ಸೇರಿದ್ದೆಂದು ಗೊತ್ತಾಯಿತು. ಇವುಗಳಲ್ಲಿ 29 ನಾಣ್ಯಗಳು ಅಗಸ್ಟಸ್‌ಗೆ ಸೇರಿದ್ದೆಂದೂ, ಮಿಕ್ಕ 227 ನಾಣ್ಯಗಳು, ಟೈಬೀರಿಯಸ್‌ಗೆ ಸೇರಿದ್ದೆಂದೂ ಗೊತ್ತಾಯಿತು. ಹೆಚ್ಚು ಕಡಿಮೆ ಯಶವಂತಪುರದಲ್ಲಿ ದೊರಕಿದ ಮಾದರಿಯ ನಾಣ್ಯಗಳೇ ಇದರಲ್ಲಿ ವಿಶೇಷವಾಗಿ ಕಂಡುಬಂದಿವೆ. ಆದರೆ ಸಣ್ಣಪುಟ್ಟ ಬದಲಾವಣೆಗಳು ಮಾತ್ರ ಕಂಡುಬಂದಿವೆ. ಕರ್ನಾಟಕದಲ್ಲಿ ಈವರೆಗೆ ಈ ಇಬ್ಬರು ಚಕ್ರವರ್ತಿಗಳ ನಾಣ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರಕಿರುವುದರಿಂದ, ಇವರ ಆಳ್ವಿಕೆಯ ಕಾಲದಲ್ಲಿ ವ್ಯಾಪಾರ ಸಂಪರ್ಕಗಳು ವಿಶೇಷವಾಗಿದ್ದವು ಎಂದು ತಿಳಿದುಬರುತ್ತದೆ.

ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿಗೆ ಸೇರಿದ ಅಕ್ಕಿ ಆಲೂರು ಎಂಬ ಗ್ರಾಮದಲ್ಲಿ 1977ರಲ್ಲಿ 46 ರೋಮನ್ ನಾಣ್ಯಗಳು ದೊರೆತವು. ಅವುಗಳಲ್ಲಿ ಮೂರು ನಾಣ್ಯಗಳು ರೋಮನ್ ಚಕ್ರವರ್ತಿಗಳಿಗೂ, ಮಿಕ್ಕ 43 ನಾಣ್ಯಗಳು ಅನಂತರ ಆಳಿದ ಬೈಜಾಂಟೈನ್ ಚಕ್ರವರ್ತಿಗಳಿಗೂ ಸೇರಿವೆ. ಇಲ್ಲಿ ಕಂಡುಬಂದಿರುವ ರೋಮನ್ ಚಕ್ರವರ್ತಿಗಳೆಂದರೆ ಸೆಪ್ಟಿಮಸ್ ಸೆವೆರಸ್ (ಕ್ರಿ.ಶ. 193-201) ಮತ್ತು ಕ್ಯಾರಕಲ್ಲ (ಕ್ರಿ.ಶ. 201-217). ಈ ಇಬ್ಬರ ನಾಣ್ಯಗಳು ಕರ್ನಾಟಕದಲ್ಲಿ ಬೇರೆಲ್ಲಿಯೂ ದೊರಕಿಲ್ಲವಾದುದರಿಂದ, ಈ ಕಾಲದಲ್ಲಿ ಅಂದರೆ ಕ್ರಿ.ಶ. ಮೂರನೆಯ ಶತಮಾನದ ಆರಂಭದಲ್ಲಿ ವ್ಯಾಪಾರ ಸ್ವಲ್ಪಮಟ್ಟಿಗೆ ಇಳಿಮುಖವಾಯಿತೆಂದು ಹೇಳಬಹುದು. ಇದೇ ಸಮಯಕ್ಕೆ ಶಾತವಾಹನರ ಅವನತಿಯೂ ಉಂಟಾಯಿತು ಎಂಬುದನ್ನು ಗಮನಿಸಬೇಕು. ಅಕ್ಕಿ ಆಲೂರಿನ ನಾಣ್ಯರಾಶಿಯಲ್ಲಿ ಬೈಜಾಂಟೈನ್ ಚಕ್ರವರ್ತಿಗಳಾದ ಥಿಯೋಡೋಸಿಯಸ್ (ಕ್ರಿ.ಶ. 402-450), ಮಾರ್ಶಿಯಾನ್ (ಕ್ರಿ.ಶ. 450-457), ಒಂದನೆಯ ಲಿಯೋ (ಕಿ.ಶ. 457-474), ಜೆನೊ (ಕ್ರಿ.ಶ. 474-491), ಅನಸ್ಟೇಸಿಯಸ್ (ಕ್ರಿ.ಶ. 491-518) ಮತ್ತು ಒಂದನೆಯ ಜಸ್ಟಿನ್ (ಕ್ರಿ.ಶ. 518-527) ಅವರಿಗೆ ಸೇರಿದ ನಾಣ್ಯಗಳಿವೆ. ಈ ನಾಣ್ಯಗಳು ಹೊಚ್ಚ ಹೊಸದಾಗಿದ್ದು ಚಲಾವಣೆಯಲ್ಲಿದ್ದುದಕ್ಕೆ ಯಾವ ಲಕ್ಷಣಗಳೂ ಕಾಣಬರುವುದಿಲ್ಲ. ಕೆಲವು ನಾಣ್ಯಗಳ ಮೇಲೆ ತಪ್ಪು ಬರಹಗಳಿವೆ. ಅನೇಕ ನಾಣ್ಯಗಳಲ್ಲಿ ಎರಡು ರಂಧ್ರಗಳೂ

ಇದ್ದು ಕಾಸಿನ ಸರವನ್ನು ತಯಾರಿಸಲು ಮಾಡಿದ ನಕಲಿ ನಾಣ್ಯಗಳು ಇರಬಹುದೇ ಎನ್ನುವ ಶಂಕೆಯೂ ಬರುತ್ತದೆ. ಆದರೆ ಖಚಿತವಾಗಿ ಇದನ್ನೂ ಹೇಳಲಾಗುವುದಿಲ್ಲ.



ಈ ನಾಣ್ಯರಾಶಿಯಲ್ಲಿ ಥಿಯೊಡೊಸಿಯಸ್‌ಗೆ ಸೇರಿದ ಐದು ನಮೂನೆಯ ನಾಣ್ಯಗಳಿವೆ. ಮುಖ್ಯವಾದ ಮೊದಲನೆಯ ನಮೂನೆಯ ನಾಣ್ಯದ ವಿವರ ಹೀಗಿದೆ.

ಮು : ಥಿಯೊಡೊಸಿಯಸ್ ರಾಜನ ಚಿತ್ರ; ಸುತ್ತಲೂ ಬರಹ
DN THEO DOSIUS PF AUG

ಹಿ : ಕಾನ್‌ಸ್ಟಾಂಟಿನೋಪಲಿಸ್ ದೇವತೆಯು ಬಲಗೈಯಲ್ಲಿ ಶಿಲುಬೆ ಮತ್ತು ಎಡಗೈಯಲ್ಲಿ ರಾಜದಂಡ ಹಿಡಿದಿದ್ದಾಳೆ; ಪಕ್ಕದಲ್ಲಿ ನಕ್ಷತ್ರಗಳು, ಗುರಾಣಿ ಹಾಗೂ CONOB ಎಂಬ ಬರಹ

ಮಾರ್ಸಿಯಾನ್ ದೊರೆಯ ನಾಣ್ಯದಲ್ಲಿ ಹೀಗಿದೆ:

ಮು : ಮಾರ್ಸಿಯಾನ್ ದೊರೆಯ ಚಿತ್ರ; ಬರಹ DN LEO PERPET AUG

ಹಿ : ದೇವತೆ ವಿಕ್ಟರಿಯು ಶಿಲುಬೆಯನ್ನು ಹಿಡಿದು ನಿಂತಿದ್ದಾಳೆ; ಬರಹ VICTORIA AUGGGO

ಒಂದನೆಯ ಲಿಯೊಗೆ ಸೇರಿದ ನಾಣ್ಯದ ವಿವರ ಹೀಗಿದೆ:

ಮು : ಲಿಯೊ ಚಿತ್ರ; ಬರಹ DN MARCIA NVS PF AUG

ಹಿ : ನಿಂತಿರುವ ವಿಕ್ಟರಿಯ ಚಿತ್ರ ಮತ್ತು ಬರಹ

ಜಿನೊಗೆ ಸೇರಿದ ನಾಣ್ಯದ ವಿವರ ಹೀಗಿದೆ:

ಮು : ರಾಜನ ಚಿತ್ರ; ಬರಹ DN ZENO PERP AUG

ಹಿ : ನಿಂತಿರುವ ವಿಕ್ಟರಿಯ ಚಿತ್ರ; ಬರಹ
VICTORI A AUGGGO

ಅನೆಸ್ಟೇಸಿಯಸ್‌ಗೆ ಸೇರಿದ ನಾಣ್ಯ ಹೀಗಿದೆ:

ಮು : ರಾಜನ ಚಿತ್ರ; ಬರಹ DN ANASTASIUS
PF AUG

ಹಿ : ಮೇಲಿನ ನಾಣ್ಯದಂತೆ

ಜಸ್ಟಿನ್‌ಗೆ ಸೇರಿದ ನಾಣ್ಯದ ವಿವರ ಹೀಗಿದೆ:

ಮು : ರಾಜನ ಚಿತ್ರ; ಬರಹ JUSTINUS
PP AVG

ಹಿ : ಮೇಲಿನ ನಾಣ್ಯದಂತೆ

ಒಟ್ಟಿನಲ್ಲಿ ಅಕ್ಕಿ ಆಲೂರಿನ ನಾಣ್ಯಗಳು ಕಾಲಮಾನವನ್ನು ಕ್ರಿ.ಶ. ಆರನೆಯ ಶತಮಾನದವರೆಗೆ ಕೊಂಡೊಯ್ಯುತ್ತವೆ.

ಮೈಸೂರಿನಲ್ಲಿ ಚಕ್ರವರ್ತಿ ಕಮೊಡಸ್‌ಗೆ ಸೇರಿದ ನಾಣ್ಯವೊಂದು ದೊರಕಿದ್ದಿತು. ಈಗ ಅದು ಮದ್ರಾಸಿನ ಸರ್ಕಾರಿ ಸಂಗ್ರಹಾಲಯದಲ್ಲಿದೆ. ಅದರ ವಿವರಗಳು ಹೀಗಿವೆ:


ಮು : ಕಮೊಡಸ್ ಚಕ್ರವರ್ತಿಯ ಚಿತ್ರ; ಬರಹ
LAEL AVREL COMM AUG P FEL

ಹಿ : ಹರ್ಕ್ಯುಲಸ್ ವೇಷಧಾರಿಯಾಗಿರುವ ಕಮೊಡಸ್
ಎಡಗೈಯಲ್ಲಿ ಗದೆ ಹಿಡಿದು ನಿಂತಿದ್ದಾನೆ; ಅವನ
ಭುಜದಿಂದ ಸಿಂಹದ ಪದಕವು ನೇತಾಡುತ್ತಿದೆ

ಬಿಜಾಪುರ ಜಿಲ್ಲೆಯ ಕಟ್ರಾಲ್ ಎಂಬಲ್ಲಿ 22 ರೋಮನ್ ಮತ್ತು ಬೈಜಾಂಟೈನ್ ನಾಣ್ಯಗಳು ದೊರಕಿದ್ದವು. ಅವುಗಳನ್ನು ವಿವಿಧ ಸಂಗ್ರಹಾಲಯಗಳಿಗೆ ನೀಡಲಾಯಿತು. ಅದರಲ್ಲಿ ಒಂದು ನಾಣ್ಯ ಪ್ರಿನ್ಸ್ ಆಫ್ ವೇಲ್ಸ್ ಸಂಗ್ರಹಾಲಯದಲ್ಲಿದೆ. ಆದರೆ

ಈ ನಾಣ್ಯಗಳ ವಿವರಗಳು ತಿಳಿದುಬಂದಿಲ್ಲ. ಬೆಳಗಾಂನಲ್ಲಿ ಈ ಹಿಂದೆ 30 ರೋಮನ್ ನಾಣ್ಯಗಳು ದೊರಕಿದ್ದವೆಂದು ತಿಳಿದುಬರುತ್ತದೆ. ಆದರೆ ಇವುಗಳ ವಿವರಗಳು ತಿಳಿದಿಲ್ಲ. ಇದೇ ರೀತಿ ವಡಗಾಂ ಮಾಧವಪುರದಲ್ಲಿ ಸಿಕ್ಕಿದ್ದ ಒಂದು ರೋಮನ್ ತಾಮ್ರದ ನಾಣ್ಯದ ವಿವರಗಳೂ ತಿಳಿದಿಲ್ಲ.

ಇತ್ತೀಚೆಗೆ ಮಾಲೂರು ತಾಲ್ಲೂಕಿನ ನೊಸಗೆರೆ ಎಂಬಲ್ಲಿ ಮೂರು ರೋಮನ್ ಚಿನ್ನದ ನಾಣ್ಯಗಳು, ಕೆಲವು ಒಡವೆಗಳು ಒಂದು ಮಡಕೆಯಲ್ಲಿ ಪತ್ತೆಯಾದವು. ಈ ಮೂರೂ ನಾಣ್ಯಗಳು ತುಂಬ ಜಜ್ಜಿಹೋಗಿದ್ದು, ಅವುಗಳ ಬರಹಗಳನ್ನು ಓದುವುದು ಸಾಧ್ಯವಿಲ್ಲವಾಗಿದೆ. ಇವುಗಳಲ್ಲಿ ರಂಧ್ರಗಳನ್ನು ಮಾಡಿರುವುದರಿಂದ ಸರದಲ್ಲಿ ಉಪಯೋಗಿಸುತ್ತಿದ್ದರು ಎಂಬುದು ಖಚಿತ. ಬಹುಶಃ ಇವು ಸೆಪ್ಟಿಯಸ್ ಸೆವೆರಸ್ (ಕ್ರಿ.ಶ. 193-211) ಚಕ್ರವರ್ತಿಯ ನಾಣ್ಯಗಳಿರಬೇಕೆಂದು ಊಹಿಸಲಾಗಿದೆ. ರಾಯಚೂರು ಜಿಲ್ಲೆಯ ಲಿಂಗಸುಗೂರಿನಲ್ಲಿ ಒಂದು ಚಿನ್ನದ ಬೈಜಾಂಟೈನ್ ನಾಣ್ಯ ದೊರಕಿದೆ. ಇದರ ತೂಕ 65 ಗ್ರೇನ್; ಅಗಲ 0.7". ಇದರ ಮುಮ್ಮುಖದಲ್ಲಿ ಚಕ್ರವರ್ತಿಯ ಚಿತ್ರವಿದೆ; ಬರಹ ಸ್ಫುಟವಾಗಿಲ್ಲ. ಹಿಮ್ಮುಖದಲ್ಲಿ ರಾಜದಂಡವನ್ನು ಹಿಡಿದಿರುವ ದೇವತೆಯ ಚಿತ್ರವಿದೆ; ಬರಹ ಅಸ್ಪಷ್ಟ. ಆದುದರಿಂದ ಈ ನಾಣ್ಯ ಯಾರಿಗೆ ಸೇರಿದ್ದೆಂದು ಹೇಳಲಾಗುವುದಿಲ್ಲ. ಈ ನಾಣ್ಯದಲ್ಲಿ ಎರಡು ರಂಧ್ರಗಳಿರುವುದರಿಂದ, ಇದನ್ನು ಕಾಸಿನ ಸರದಲ್ಲಿ ಬಳಸಲಾಗುತ್ತಿದ್ದಿತು ಎಂದು ಮಾತ್ರ ಹೇಳಬಹುದು. ಇವುಗಳು ಕರ್ನಾಟಕದಲ್ಲಿ ದೊರಕಿರುವ ರೋಮನ್ ನಾಣ್ಯಗಳು. ಈ ನಾಣ್ಯಗಳಿಗೆ ಸಂಬಂಧಿಸಿದಂತಹ ಕೆಲವು ಅವಶೇಷಗಳೂ ದೊರಕಿವೆ. ಈಗ ಅವುಗಳನ್ನು ಗಮನಿಸಬಹುದು.




ಮೊದಲನೆಯದಾಗಿ ಬನವಾಸಿಯಲ್ಲಿ ದೊರಕಿರುವ ಒಂದು ನಾಣ್ಯದ ಅಚ್ಚನ್ನು ಗಮನಿಸಬೇಕು. ಈಗ ಈ ಅಚ್ಚು ಬನವಾಸಿಯಲ್ಲಿರುವ ಪುರಾತತ್ವ ಸಂಗ್ರಹಾಲಯದಲ್ಲಿದೆ. ಕಪ್ಪು ಪಾಟಿ ಕಲ್ಲಿನಲ್ಲಿ ಮಾಡಲಾದ ಈ ಅಚ್ಚಿನ ಉದ್ದ 1.9"; ಅಗಲ 1.4" ಮತ್ತು ದಪ್ಪ 0.8". ಇದರ ಮೇಲ್ಭಾಗದಲ್ಲಿ ತೂಬಿನಾಕಾರದ ರಂಧ್ರವಿದೆ. ಈ ಮುಖದಲ್ಲಿ ಕೆತ್ತನೆಯಿದೆ. ಇದರಲ್ಲಿ ಅಲಂಕೃತ ಸ್ಟೂಲಿನ ಮೇಲೆ ಕುಳಿತಿರುವ ಸ್ತ್ರೀ ಚಿತ್ರವಿದೆ. ಈಕೆಯ ಬಲಗೈಯಲ್ಲಿ ರಾಜದಂಡವಿದೆ. ಎಡಗೈಯಲ್ಲಿ ಒಂದು ರೆಂಬೆಯಿದೆ. ರಾಜದಂಡ ಪಕ್ಕದಲ್ಲಿ

MAXIM ಎಂಬ ಬರಹವಿದೆ. ಇದನ್ನು ನೋಡಿದ ಯಾರಿಗಾದರೂ ಇದು ರೋಮನ್ ಚಕ್ರವರ್ತಿ ಟೈಬೀರಿಯಸ್ಸನ ನಾಣ್ಯದ ಹಿಮ್ಮುಖ ಎನ್ನುವ ಅರಿವು ಉಂಟಾಗುತ್ತದೆ. ಇದನ್ನು ಮೇಲೆ ಗಮನಿಸಿದ್ದೇವೆ. ಅಂದರೆ ಈ ವಿನ್ಯಾಸದ ಪದಕವನ್ನು ತಯಾರಿಸಲು ಈ ಅಚ್ಚನ್ನು ಬಳಸುತ್ತಿದ್ದರು ಎನ್ನುವುದು ಖಚಿತವಾಗುತ್ತದೆ. ಅಂದರೆ ಆಗಿನ ಜನಗಳು ಈ ರೋಮನ್ ಚಕ್ರವರ್ತಿಯ ಈ ನಾಣ್ಯದ ವಿನ್ಯಾಸಕ್ಕೆ ಮಾರುಹೋಗಿ ಇದನ್ನು ಪದಕದ ರೂಪದಲ್ಲಿ ತಯಾರಿಸಿ ಬಳಸುತ್ತಿದ್ದರು ಎಂದು ಗೊತ್ತಾಗುತ್ತದೆ. ಇದರಿಂದ ರೋಮನ್ ನಾಣ್ಯ ಕರ್ನಾಟಕದಲ್ಲಿ ಎಷ್ಟರಮಟ್ಟಿಗೆ ಪ್ರಭಾವ ಬೀರಿದ್ದಿತು ಎಂದು ಖಚಿತವಾಗುತ್ತದೆ. ಇದು ಕೇವಲ ಆಕಸ್ಮಿಕವಲ್ಲ ಎನ್ನುವುದು ಇದೇ ರೀತಿಯ ಇನ್ನೆರಡು ಅವಶೇಷಗಳಿಂದ ದೃಢಪಡುತ್ತದೆ. ತಲಕಾಡಿನಲ್ಲಿ ನಡೆದ ಉತ್ಖನನದಲ್ಲಿ ಕ್ರಿ.ಶ. ಒಂದನೆಯ ಶತಮಾನದ ಸ್ತರಕ್ಕೆ ಸೇರಿದ ಒಂದು ಒಲೆ, ಮೂಸೆ ಮತ್ತು ನಾಣ್ಯದ ಮಣ್ಣಿನ ಅಚ್ಚು ದೊರೆತವು. ಈ ಅಚ್ಚು ಸುಟ್ಟಮಣ್ಣಿನಿಂದ ತಯಾರಾಗಿದ್ದು, ಅದರ ಮೇಲೆ ಸ್ಟೂಲಿನ ಮೇಲೆ ಕುಳಿತಿರುವ ದೇವತೆಯ ಚಿತ್ರವಿದೆ. ಇದು ಟೈಬೀರಿಯಸ್ಸನ ನಾಣ್ಯದ ಹಿಂಭಾಗದಂತೆಯೇ ಇದೆ. ಆದುದರಿಂದ ಇಲ್ಲಿ ಈ ನಾಣ್ಯವನ್ನು ತಯಾರುಮಾಡಲು ಈ ಅಚ್ಚನ್ನು ಉಪಯೋಗಿಸುತ್ತಿದ್ದರು ಎನ್ನುವುದು ಖಚಿತ. ಅಂದರೆ ನಕಲಿ ರೋಮನ್ ನಾಣ್ಯವನ್ನು ತಯಾರಿಸಲು ಈ ಸಾಧನವನ್ನು ಬಳಸಲಾಗುತ್ತಿತ್ತು. ಆದುದರಿಂದ ರೋಮನ್ ನಾಣ್ಯಗಳು ಜನಗಳಿಗೆ ವಿಶೇಷವಾಗಿ ಪ್ರಿಯವಾಗಿದ್ದವು ಎಂದು ಊಹಿಸಬಹುದು. ಅದರ ಉದ್ದೇಶ ಏನೇ ಇರಲಿ, ಇದು ರೋಮನ್ ನಾಣ್ಯಗಳು ಎಷ್ಟು ಪ್ರಭಾವವನ್ನು ಬೀರಿದ್ದವು ಎಂಬುದನ್ನು ಸೂಚಿಸುತ್ತದೆ.



ಗುಲ್ಬರ್ಗ ಜಿಲ್ಲೆಯ ಸನ್ನತಿಯಲ್ಲಿ ನಾಲ್ಕಾರು ವರ್ಷಗಳಿಂದ ಉತ್ಖನನ ನಡೆಯುತ್ತಿದೆ. ಇದರಲ್ಲಿ ಎರಡು ಅಂಗುಲ ವ್ಯಾಸದ ಜೇಡಿಮಣ್ಣಿನ ಪದಕವು ದೊರಕಿತು. ಇದರ ಮುಮ್ಮುಖದಲ್ಲಿ ಟೈಬೀರಿಯಸ್ಸನ ಚಿತ್ರವಿದೆ. ಹಿಮ್ಮುಖದಲ್ಲಿ ಸ್ಟೂಲಿನ ಮೇಲೆ ಕುಳಿತಿರುವ ದೇವತೆಯ ಚಿತ್ರವಿದೆ. ಇದನ್ನು ನೋಡಿದ ಕೂಡಲೆ ಇದು ರೋಮನ್ ಚಕ್ರವರ್ತಿ ಟೈಬೀರಿಯಸ್ಸನ ನಾಣ್ಯದ ಮುಮ್ಮುಖ ಮತ್ತು ಹಿಮ್ಮುಖ ಎಂಬುದು ಖಚಿತವಾಗುತ್ತದೆ. ಈ ವಿನ್ಯಾಸದ ಜೇಡಿಮಣ್ಣಿನ ಪದಕವನ್ನು ಆಗಿನ ಕಾಲದಲ್ಲಿ, ಅಂದರೆ ಕ್ರಿ.ಶ.

ಒಂದು-ಎರಡನೆಯ ಶತಮಾನದಲ್ಲಿ ಜನಗಳು ಬಳಸುತ್ತಿದ್ದರೆಂದರೆ, ಈ ನಾಣ್ಯದ ವಿನ್ಯಾಸ ಎಷ್ಟೊಂದು ಜನಾನುರಾಗಿಯಾಗಿದ್ದಿತೆಂದು ಗೊತ್ತಾಗುತ್ತದೆ. ಈ ಎಲ್ಲ ಅಂಶಗಳನ್ನು ಗಮನಿಸಿದರೆ ರೋಮಿನ ನಾಣ್ಯಗಳು ವ್ಯಾಪಾರದಲ್ಲಿ ಬಳಕೆಯಾಗಿದ್ದರೆ, ಅವುಗಳ ವಿನ್ಯಾಸ ಜನಸಾಮಾನ್ಯರನ್ನೂ ಆಕರ್ಷಿಸಿ, ಆಭರಣದ ಅನುಕರಣೆಯ ವಸ್ತುವಾಯಿತು ಎಂಬುದು ಗಮನಾರ್ಹ ವಿಷಯ. ಇತರೆ ಯಾವ ವಿದೇಶೀ ನಾಣ್ಯಗಳು ರೋಮನ್ ನಾಣ್ಯಗಳಷ್ಟು




ಗಾಢವಾಗಿ ಕರ್ನಾಟಕದ ಜನಗಳ ಮೇಲೆ ಪ್ರಭಾವವನ್ನು ಬೀರಲಿಲ್ಲ ಎಂಬುದೂ ಗಮನಾರ್ಹ ಸಂಗತಿ. ಇದಕ್ಕೆ ಪೂರಕವೋ ಎಂಬಂತೆ ರೋಮಿನ ರೌಲೆಟೆಡ್ ಮಡಕೆಯನ್ನು ಅನುಕರಿಸಿದ ಮಡಕೆಗಳು ಕರ್ನಾಟಕದಲ್ಲಿ ತಯಾರಾಗುತ್ತಿದ್ದವು ಎಂಬುದು ಉತ್ಖನನಗಳಿಂದ ತಿಳಿದುಬಂದಿದೆ. ಇಂತಹ ಮಡಕೆಗಳು ಬನವಾಸಿ, ಸನ್ನತಿ, ಮಸ್ಕಿ, ತಲಕಾಡು, ಚಂದ್ರವಳ್ಳಿ ಮುಂತಾದ ಉತ್ಖನನಗಳಲ್ಲಿ ದೊರಕಿವೆ. ಇವೆಲ್ಲವೂ ರೋಮ್ ಮತ್ತು ಕರ್ನಾಟಕಗಳ ವ್ಯಾಪಾರ ಸಂಬಂಧಗಳ ದ್ಯೋತಕವೇ ಆಗಿವೆ.

3. ಚೀನೀ ನಾಣ್ಯಗಳು

ಪ್ರಾಚೀನ ಕಾಲದಿಂದ ಆಗ್ನೇಯ ಏಷ್ಯ ರಾಷ್ಟ್ರ ಮತ್ತು ದ್ವೀಪಗಳಿಗೆ ಆಂಧ್ರ, ತಮಿಳುನಾಡು ಮತ್ತು ಕರ್ನಾಟಕದ ಜನಗಳು ಹೋಗಿ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಸ್ಥಾಪಿಸುವುದು ಸಾಮಾನ್ಯ ಸಂಗತಿಯಾಗಿತ್ತು. ರಾಜೇಂದ್ರ ಚೋಳನ ಕಡಾರಂ ದಂಡಯಾತ್ರೆಯಂತೂ ಆಗ್ನೇಯ ಏಷ್ಯ ಮತ್ತು ಚೀನ ದೇಶಗಳಲ್ಲಿ ವಿಶೇಷ ಪ್ರಭಾವವನ್ನುಂಟುಮಾಡಿತು. ಇದರಿಂದಾಗಿ ಚೀನ ದಕ್ಷಿಣ ಭಾರತದೊಡನೆ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೆಚ್ಚಿಸಿಕೊಳ್ಳಲು ಅವಕಾಶವಾಯಿತು. ಕ್ರಿ.ಶ. ಹತ್ತರಿಂದ ಹದಿಮೂರನೆಯ ಶತಮಾನದವರೆಗಿನ ಕಾಲ ಸಾಂಸ್ಕೃತಿಕ ದೃಷ್ಟಿಯಿಂದ ಚೀನದಲ್ಲಿ ಉತ್ತಮ ಕಾಲ. ರಾಜಕೀಯವಾಗಿ ಚೀನದ ಸುಂಗ್ ರಾಜವಂಶವು ಅಷ್ಟೇನೂ ಯಶಸ್ಸನ್ನು ಕಾಣದೇ ಇದ್ದರೂ, ಸಾಂಸ್ಕೃತಿಕವಾಗಿ ಇದು ಮಹತ್ವದ ಕಾಲ. ಈ ಕಾಲದ ವೈಶಿಷ್ಟ್ಯವೆಂದರೆ ಚೀನೀ ಪಿಂಗಾಣಿ ಕಲೆ. ಈ ಪಿಂಗಾಣಿ ಪಾತ್ರೆಗಳಿಗೆ ಹೊರದೇಶಗಳಲ್ಲಿ ಭಾರಿ ಬೇಡಿಕೆಯಿದ್ದಿತು. ಪಶ್ಚಿಮ ರಾಷ್ಟ್ರಗಳಲ್ಲಂತೂ ಈ ಪಿಂಗಾಣಿ ಪಾತ್ರೆಗಳು ಮೇಲಂತಸ್ತಿನ

ದ್ಯೋತಕವಾಗಿತ್ತು. ಭಾರತೀಯರು ಈ ವ್ಯಾಪಾರದಲ್ಲಿ ಮಧ್ಯವರ್ತಿಗಳಾಗಿ ಭಾಗವಹಿಸುತ್ತಿದ್ದರು. ಹೆಚ್ಚಿನ ವ್ಯಾಪಾರ ಚೋಳ ರಾಜ್ಯದಿಂದ ನಡೆಯುತ್ತಿದ್ದರೂ, ಸ್ವಲ್ಪಮಟ್ಟಿಗೆ ಕರ್ನಾಟಕವೂ ಇದರಲ್ಲಿ ಭಾಗವಹಿಸುತ್ತಿತ್ತು. ಇದಕ್ಕೆ ಪೂರಕವಾಗಿ ಆ ಕಾಲದ ಪಿಂಗಾಣಿ ಕಲಾವಸ್ತುಗಳು ಕರ್ನಾಟಕದಲ್ಲಿ ದೊರಕಿವೆ. ಆದುದರಿಂದ ಕರ್ನಾಟಕದಲ್ಲಿ ಚೀನೀ ನಾಣ್ಯಗಳು ದೊರಕಿವೆ.



ಚೀನೀ ನಾಣ್ಯ ಮೊಟ್ಟಮೊದಲ ಬಾರಿಗೆ ಕರ್ನಾಟಕದಲ್ಲಿ ಪತ್ತೆಯಾದುದು 1909ರಲ್ಲಿ. ಈ ಚೀನೀ ನಾಣ್ಯ ದೊರಕಿದ್ದುದು ಚಂದ್ರವಳ್ಳಿಯಲ್ಲಿ. ಇದು ಮಿಶ್ರಲೋಹದ ಹಿತ್ತಾಳೆ ನಾಣ್ಯ, ಇದರ ವ್ಯಾಸ ಒಂದು ಅಂಗುಲ, ಇದರ ದಪ್ಪ 0.2". ಈ ನಾಣ್ಯದ ಸುತ್ತಲೂ ದಪ್ಪನಾದ ಅಂಚು ಇದೆ. ಮಧ್ಯದಲ್ಲಿ ಚೌಕವಾದ ರಂಧ್ರವಿದೆ. ಇದರ ನಾಲ್ಕೂ ಕಡೆಗಳಲ್ಲಿ ಚೀನೀ ಲಿಪಿಯ ಅಕ್ಷರಗಳಿವೆ. ಇದೇ ಮುಮ್ಮುಖ. ಹಿಮ್ಮುಖದಲ್ಲಿ ಯಾವ ಬರವಣಿಗೆಯೂ ಇಲ್ಲ. ಇದನ್ನು ಪತ್ತೆಮಾಡಿದ ಆರ್. ನರಸಿಂಹಾಚಾರ್ ಅವರು ಇದು ಕ್ರಿ.ಪೂ. ಎರಡನೆಯ ಶತಮಾನದ ನಾಣ್ಯವೆಂದು ಅಭಿಪ್ರಾಯಪಟ್ಟರು. ಇತ್ತೀಚೆಗೆ ಇದನ್ನು ಪುನಃ ಪರಿಶೀಲಿಸಿದ ಕರಷಿಮ ಎಂಬ ವಿದ್ವಾಂಸರು ಈ ಅಭಿಪ್ರಾಯವನ್ನು ತಳ್ಳಿ ಹಾಕಿ, ಈ ನಾಣ್ಯ ಸುಂಗ್ ವಂಶದ ಚಕ್ರವರ್ತಿ ಕ್ರಿ.ಶ. 1023ರಲ್ಲಿ ಅಚ್ಚು ಮಾಡಿಸಿದ್ದು ಎಂದು ದೃಢಪಡಿಸಿದರು. ಆನಂತರ ಇನ್ನೊಬ್ಬ ಜಪಾನೀ ವಿದ್ವಾಂಸರಿಗೆ ಇನ್ನೊಂದು ಚೀನೀ ನಾಣ್ಯ ಚಂದ್ರವಳ್ಳಿಯಲ್ಲಿ ದೊರಕಿತು. ಇದನ್ನು ಪರೀಕ್ಷಿಸಿದ ನಂತರ, ಇದೂ ಸುಂಗ್ ವಂಶದ ನಾಣ್ಯವೆಂದು ತಿಳಿದುಬಂದಿತು. ಸುಂಗ್ ವಂಶದ ನಾಣ್ಯಗಳು ವಿಶೇಷ ಪ್ರಮಾಣದಲ್ಲಿ ಹೊರಗಡೆಗೆ ಸಾಗಣೆಯಾಗುತ್ತಿದ್ದುದನ್ನು ಗಮನಿಸಿದ ಚಕ್ರವರ್ತಿಯು ಚೀನೀ ನಾಣ್ಯಗಳು ಹೊರಗೆ ಹೋಗುವುದನ್ನು ನಿಷೇಧಿಸಿದನು. ಆದರೂ ವ್ಯಾಪಾರಿಗಳ ಮೂಲಕ ಈ ನಾಣ್ಯಗಳು ಹೊರಗೆ ಹೋಗುತ್ತಲೇ ಇದ್ದವು.

ಹಂಪಿಯ ಉತ್ಖನನದಲ್ಲಿ ಕೆಲವು ಚೀನೀ ನಾಣ್ಯಗಳು ದೊರಕಿವೆ. ಅವುಗಳ ಅಧ್ಯಯನ ಇನ್ನೂ ನಡೆದಿಲ್ಲವಾದುದರಿಂದ ಅವುಗಳ ವಿವರಗಳು ತಿಳಿದಿಲ್ಲ. ಇತ್ತೀಚೆಗೆ ಚಂದ್ರವಳ್ಳಿಯಲ್ಲಿ ಇನ್ನೊಂದು ನಾಣ್ಯ ಪತ್ತೆಯಾಯಿತು. ಜಪಾನಿನ ವಿದ್ವಾಂಸರ ಸಹಾಯದಿಂದ ಡಾ। ಬಿ. ರಾಜಶೇಖರಪ್ಪ ಈ ನಾಣ್ಯವನ್ನು ಪ್ರಕಟಿಸಿದ್ದಾರೆ. ಇದರ ಮೇಲಿರುವ ಬರಹವನ್ನು 'ಹು ಅಂಗ್ ಸೊಂಗ್ ತೊಂಗ್ ಬಒ' ಎಂದು ಓದಲಾಗಿದೆ.

ಬಒಯು ಅನ್ ಶಕೆಯ ಎರಡನೆಯ ವರ್ಷದಲ್ಲಿ ಅಚ್ಚು ಮಾಡಿಸಲಾದ ಸುಂಗ್ ವಂಶದ ನಾಣ್ಯವಿದು ಎಂದು ಇದರ ಅರ್ಥ. ಜಿನ್‌ತ್ಸುಂಗ್ ಎಂಬ ಚಕ್ರವರ್ತಿಯು (ಕ್ರಿ.ಶ. 1022-63) ಬಒಯು ಅನ್ ಎಂಬ ಶಕೆಯನ್ನು ಆರಂಭಿಸಿದನು. ಇದು ಎರಡು ವರ್ಷಗಳ ಕಾಲ ಮಾತ್ರ ಅಸ್ತಿತ್ವದಲ್ಲಿತ್ತು. ಈ ಎರಡನೆಯ ವರ್ಷ ಕ್ರಿ.ಶ. 1039ಕ್ಕೆ ಸರಿಹೊಂದುತ್ತದೆ. ಆದುದರಿಂದ ಈ ಮೇಲಿನ ನಾಣ್ಯವನ್ನು ಜತ್ಸುಂಗ್ ಎಂಬ ದೊರೆ ಕ್ರಿ.ಶ. 1039ರಲ್ಲಿ ಅಚ್ಚು ಮಾಡಿಸಿದನೆಂದು ಈಗ ಖಚಿತವಾಗಿ ಹೇಳಬಹುದು. ಚಿತ್ರದುರ್ಗ ಮತ್ತು ಹಂಪಿಯ ಸುತ್ತಮುತ್ತ ಈ ನಾಣ್ಯಗಳು ಹಾಗೂ ಚೀನೀ ಪಿಂಗಾಣಿ ಪದಾರ್ಥಗಳು ದೊರಕಿರುವುದರಿಂದ, ಚೀನೀ ವ್ಯಾಪಾರಿಗಳು ಈ ಪ್ರದೇಶಕ್ಕೆ ಬರುತ್ತಿದ್ದಿರಬಹುದು. ಇಲ್ಲವೇ ಈ ಪ್ರದೇಶದ ವ್ಯಾಪಾರಿಗಳು ಚೀನಕ್ಕೆ ಹೋಗಿ ವ್ಯಾಪಾರ ಮಾಡಿ ಮತ್ತೆ ಇಲ್ಲಿಗೆ ಹಿಂದಿರುಗುತ್ತಿದ್ದರು ಎಂದು ಹೇಳಬಹುದು. ಇನ್ನೂ ಹೆಚ್ಚಿನ ಸಂಖ್ಯೆಯ ಚೀನೀ ನಾಣ್ಯಗಳು ಇಲ್ಲಿ ದೊರಕಿದರೆ, ಆ ಕಾಲದ ವ್ಯಾಪಾರದ ಬಗೆಗೆ ಹೊಸ ಬೆಳಕು ಚೆಲ್ಲಬಹುದು.

4. ವೆನಿಷಿಯನ್ ನಾಣ್ಯಗಳು

ಇಟಲಿಗೂ ದಕ್ಷಿಣ ಭಾರತಕ್ಕೂ ಸಾಕಷ್ಟು ಸಂಬಂಧಗಳು ಮಧ್ಯಕಾಲೀನ ಸಮಯದಲ್ಲಿದ್ದವು ಎಂಬುದಕ್ಕೆ ಅನೇಕ ಮಾಹಿತಿಗಳು ದೊರಕಿವೆ. ಅನೇಕ ಯಾತ್ರಿಕರು ವೆನಿಸ್‌ನಿಂದ ಬಂದು ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ನೆಲೆಸಿ ತಾವು ಕಂಡ ಸಂಗತಿಯನ್ನು ದಾಖಲಿಸಿದ್ದಾರೆ. ಪ್ರವಾಸಿಗಳ ರಾಜಕುಮಾರ ಎಂದು ಖ್ಯಾತನಾಗಿರುವ ಮಾರ್ಕೊಪೊಲೊ ಕರ್ನಾಟಕವನ್ನು ಸಂದರ್ಶಿಸಿ ಹದಿನಾಲ್ಕನೆಯ ಶತಮಾನದ ವಿವರಗಳನ್ನು ನೀಡಿದ್ದಾನೆ. ಇವನು ಹೊಯ್ಸಳ, ಸೇವುಣ ಮತ್ತು ಕಾಕತೀಯರ ಕಾಲದ ಚಿನ್ನದ ಪಗೋಡ (ವರಹ)ಗಳನ್ನು ವಿಶೇಷವಾಗಿ ಮೆಚ್ಚಿಕೊಂಡು ಇವು ಪೋರ್ಚುಗೀಸರ ಕ್ರುಸೆಡೊ, ಈಜಿಪ್ಟಿನ ದಿನಾರ, ವೆನಿಸಿನ ಡುಕಟ್ ಮತ್ತು ಫ್ಲಾರೆನ್ಸಿನ ಫ್ಲಾರಿನ್ ನಾಣ್ಯಗಳಿಗೆ ಸಮ ಎಂದು ವರ್ಣಿಸಿದ್ದಾನೆ. ವಿಜಯನಗರ ಕಾಲದಲ್ಲಿ ನಿಕೊಲೊ ಕೊಂತಿ ಎಂಬ ವೆನಿಸಿನ ಶ್ರೀಮಂತನು ಆರು ನೂರು ವರ್ತಕರೊಡನೆ ವಿಜಯನಗರದಲ್ಲಿದ್ದು ತಾನು ತಂದಿದ್ದ ಪದಾರ್ಥಗಳನ್ನು ಮಾರಿ ಸಾಕಷ್ಟು ಲಾಭ ಗಳಿಸಿದನು. ಬಾಲ್ಬಿ ಎಂಬ ವೆನಿಸ್ ನಗರದ ಚಿನ್ನದ ವ್ಯಾಪಾರಿಯು ಕ್ರಿ.ಶ. 1582ರಲ್ಲಿ ತನ್ನ ಊರನ್ನು ಬಿಟ್ಟು ದಕ್ಷಿಣ ಭಾರತದಲ್ಲಿ ವ್ಯಾಪಾರ ಮಾಡಿದನು. ಈ ವ್ಯಾಪಾರ ಸಂಪರ್ಕಗಳು ಕ್ರಿ.ಶ. ಹದಿನಾಲ್ಕನೆಯ ಶತಮಾನದಿಂದ ಆರಂಭವಾಗಿ ಹದಿನೆಂಟನೆಯ ಶತಮಾನದವರೆಗೆ ನಡೆಯುತ್ತಿದ್ದವು. ನಮ್ಮ ದೇಶದ ಉತ್ಪನ್ನಗಳಾದ ಸಂಬಾರ ಪದಾರ್ಥಗಳು, ಪ್ರಶಸ್ತ ಶಿಲೆಗಳು, ಪುನುಗು, ಚಂದನ, ನವಿಲು ಮುಂತಾದವುಗಳಿಗೆ ಪಶ್ಚಿಮ ರಾಷ್ಟ್ರಗಳಲ್ಲಿ ವಿಶೇಷ ಬೇಡಿಕೆಯಿದ್ದಿತು. ವೆನಿಸ್‌ನಿಂದ ವರ್ತಕರು ತಮ್ಮ ಚಿನ್ನದ ನಾಣ್ಯಗಳನ್ನು ಕೊಟ್ಟು ನಮ್ಮವರಿಂದ ಈ ಮೇಲೆ ಹೆಸರಿಸಿದ ಪದಾರ್ಥಗಳನ್ನು ಕೊಳ್ಳುತ್ತಿದ್ದರು. ಭಾರತೀಯ ವ್ಯಾಪಾರಿಗಳು ಈ ಚಿನ್ನದ ನಾಣ್ಯಗಳನ್ನು

ಖರ್ಚು ಮಾಡದೆ ಕಾಪಾಡಿಕೊಳ್ಳುತ್ತಿದ್ದರು. ಈ ದೃಷ್ಟಿಯಿಂದ ಅವರು ಜಿಪುಣರೆಂಬ ಅಪಖ್ಯಾತಿ ಗಳಿಸಿದ್ದರು. ಇಟಲಿಯ ವ್ಯಾಪಾರಿಗಳು ಬಣ್ಣ ಬಣ್ಣದ ಗಾಜುಗಳು, ಶ್ರೀಮಂತರ ದಿನನಿತ್ಯದ ಬಳಕೆಯ ವಸ್ತುಗಳು, ಫ್ಯಾಷನ್ನಿನ ಪದಾರ್ಥಗಳು ಮುಂತಾದವುಗಳನ್ನು ಭಾರತೀಯರಿಗೆ ಮಾರುತ್ತಿದ್ದರು. ಬಿಜಾಪುರದ ಸುಲ್ತಾನನು ವೆನಿಸ್ ವ್ಯಾಪಾರಿಯಿಂದ, ರೇಷ್ಮೆಯಿಂದ ತಯಾರಾದ, ಚಿನ್ನ, ಬೆಳ್ಳಿ ಮತ್ತು ಪ್ರಶಸ್ತ ಶಿಲೆಗಳ ಅಲಂಕಾರಗಳಿಂದ ಕೂಡಿದ ನಿಲುವಂಗಿಯನ್ನು ಕೊಂಡುಕೊಂಡಿದ್ದನೆಂದು ತಿಳಿದುಬರುತ್ತದೆ.

ಇಟಲಿಯ ಈ ಚಿನ್ನದ ನಾಣ್ಯಗಳು ನೋಡಲು ಸುಂದರವಾಗಿದ್ದು, ತೆಳ್ಳಗಿದ್ದುದರಿಂದ ಕಾಸಿನ ಸರಗಳನ್ನು ತಯಾರಿಸಲು ತುಂಬ ಅನುಕೂಲಕರವಾಗಿದ್ದವು. ಜೊತೆಗೆ ಈ ವೆನಿಷಿಯನ್ ನಾಣ್ಯಗಳ ಮೇಲೆ ಸಂತ ಮಾರ್ಕ್‌ನ ಹಾಗೂ ಏಸುಕ್ರಿಸ್ತನ ಚಿತ್ರಗಳಿದ್ದುದರಿಂದ ಕ್ರೈಸ್ತರಿಗೆ ಪವಿತ್ರವೆನಿಸಿದ್ದವು. ಆದರಿಂದಾಗಿ ಈ ವೆನಿಷಿಯನ್ ನಾಣ್ಯಗಳಿಗೆ ಈ ಪ್ರದೇಶದಲ್ಲಿ ಹೆಚ್ಚು ಬೇಡಿಕೆಯಿದ್ದಿತು. ವೆನಿಷಿಯನ್ ನಾಣ್ಯಗಳಿಗೆ ಡುಕಟಸ್ ಎಂದು ಹೆಸರು. ಏಕೆಂದರೆ ಅವುಗಳ ಮೇಲೆ ಆ ರೀತಿಯ ಬರಹವಿರುತ್ತಿದ್ದಿತು. ಇವು ಜೆಕ್ಕ ಎಂಬ ಟಂಕಶಾಲೆಯಲ್ಲಿ ಅಚ್ಚಾಗುತ್ತಿದ್ದುದರಿಂದ ಇವುಗಳಿಗೆ ಜೆಕ್ಕಿನ್ ಅಥವಾ ಸೆಕ್ಕಿನ್ ಎಂದೂ ಹೆಸರುಂಟು.

ಉಡುಪಿ ತಾಲ್ಲೂಕಿನ ಮಣಿಪುರ ಎಂಬಲ್ಲಿ ಹಿಂದೆ ಒಂದು ವೆನಿಷಿಯನ್ ಚಿನ್ನದ ನಾಣ್ಯವು ದೊರಕಿತ್ತು. ಇದು ಡೊಮೆನಿಕೊ ಕೊಂಟರಿನಿಗೆ (1659-74) ಸೇರಿದ ನಾಣ್ಯ. ನಂತರ ಗುಲ್ಬರ್ಗ ಜಿಲ್ಲೆಯ ಸುಲ್ತಾನ್‌ಪುರ ಎಂಬ ಗ್ರಾಮದಲ್ಲಿ, ಭೂಮಿಯನ್ನು ಅಗೆಯುತ್ತಿದ್ದಾಗ ಒಂದು ತಗಡಿನ ಪೆಟ್ಟಿಗೆಯಲ್ಲಿ 708 ನಾಣ್ಯಗಳು ಮತ್ತು ಕೆಲವು ಆಭರಣಗಳು ದೊರಕಿದವು. ಇದರಲ್ಲಿ 39 ವೆನಿಷಿಯನ್ ನಾಣ್ಯಗಳಿದ್ದವು. ಈ ಚಿನ್ನದ ನಾಣ್ಯಗಳು ಈ ಕೆಳಗೆ ಹೆಸರಿಸುವ ಡ್ಯೂಕರಿಗೆ (ಸೇನಾನಾಯಕರಿಗೆ) ಸೇರಿದ ನಾಣ್ಯಗಳಾಗಿವೆ.

ಬಾರ್ತಲೊಮಿಯೊ ಗ್ರಡೆನಿಗೊ	:	ಕ್ರಿ.ಶ. 1339-1341
ಆಂಡ್ರ್ಯೂ ಡಂಡೊಲೊ	:	ಕ್ರಿ.ಶ. 1343-1354
ಲೊರೆನ್ಝೊ ಸೆಲ್ಸಿ	:	ಕ್ರಿ.ಶ. 1361-1365
ಮಾರ್ಕೊ ಕಾರ್ನರ್	:	ಕ್ರಿ.ಶ. 1365-1368
ಆಂಡ್ರ್ಯೂ ಕೊಂಟರಿನಿ	:	ಕ್ರಿ.ಶ. 1368-1382
ಮೈಕೇಲ್ ಮೊರೊಸಿನಿ	:	ಕ್ರಿ.ಶ. 1382
ಅಂಥೋಣಿ ವೆನಿಯರ್	:	ಕ್ರಿ.ಶ. 1382-1400
ಮೈಕೇಲ್ ಸ್ಟೆನೊ	:	ಕ್ರಿ.ಶ. 1400-1413
ಥಾಮಸ್ ಮೊಸೆನಿಗೊ	:	ಕ್ರಿ.ಶ. 1414-1423

ಇವರು ರಾಜರಿದ್ದಂತೆ; ಆದರೆ ಇವರನ್ನು ಡ್ಯೂಕ್ ಅಥವಾ ಡೋಗೆ ಎಂದು ಕರೆಯಲಾಗುತ್ತದೆ. ಇವರು ಮಿಲಿಟರಿ ಸರ್ವಾಧಿಕಾರಿಯಂತೆ ರಾಜ್ಯವನ್ನು ಆಳುತ್ತಿದ್ದರು. ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ಸಹ ಇವರು ಹೊಂದಿದ್ದರು. ಇವರ ನಾಣ್ಯಗಳ ಮೇಲೆ ಇವರ ಹೆಸರು ಕಾಣಬರುವುದರಿಂದ, ಈ ನಾಣ್ಯಗಳನ್ನು ಅಚ್ಚು ಹಾಕಿಸಿದ ಡ್ಯೂಕ್ ಮತ್ತು ನಾಣ್ಯದ ತೇದಿಯನ್ನು ತಿಳಿಯಬಹುದಾಗಿದೆ. ಇವರ ನಾಣ್ಯಗಳು ಚಿನ್ನದಿಂದ ತಯಾರಾದವುಗಳಾಗಿದ್ದು ತೆಳ್ಳಗೆ ವೃತ್ತಾಕಾರದಲ್ಲಿರುತ್ತವೆ. ಇವುಗಳ ತೂಕ 52 ಗ್ರೇನ್; ಅಗಲ 0.6". ಪ್ರಾತಿನಿಧಿಕವಾಗಿ ಇವರ ಒಂದು ನಾಣ್ಯವನ್ನು ಈ ರೀತಿ ವಿವರಿಸಬಹುದು.



ಮು : ಬಿಂದುಗಳ ವೃತ್ತ; ಅದರೊಳಗೆ ಕ್ರೈಸ್ತ ಸಂತ ಮಾರ್ಕ್, ಇಟಲಿಯ ಧ್ವಜವನ್ನು (ಗೊಲ್‌ಫಲಾನ್) ಡ್ಯೂಕ್ ಅಥವಾ ಡೋಗೆಗೆ ನೀಡುತ್ತಿದ್ದಾನೆ; ಡ್ಯೂಕನು ಮಂಡಿಯೂರಿ ಕುಳಿತುಕೊಂಡು ಎರಡೂ ಕೈಗಳಿಂದ ಈ ಧ್ವಜವನ್ನು ತೆಗೆದುಕೊಳ್ಳುತ್ತಿದ್ದಾನೆ; ಸಂತ ಮಾರ್ಕನ ದೈವತ್ವವನ್ನು ತೋರಿಸುವುದಕ್ಕಾಗಿ ಅವನ ತಲೆಯ ಹಿಂದೆ ವೃತ್ತಾಕಾರದ ಪ್ರಭಾವಳಿಯನ್ನು ತೋರಿಸಲಾಗಿದೆ; ಎಡ ಮತ್ತು ಬಲಭಾಗಗಳಲ್ಲಿ ಡೋಗೆಯ ಹೆಸರು ಮತ್ತು ಬಿರುದುಗಳ ಬರಹ; (ಉದಾ: S.M. VENET ಬಿರುದು); FRAN DONA DUX (ಡ್ಯೂಕನ ಹೆಸರು)

ಹಿ : ಬಿಂದುಗಳ ವೃತ್ತ; ಅದರೊಳಗೆ ನಿಂತಿರುವ ಸಂತ ಮಾರ್ಕನ ಚಿತ್ರ; ಅವನ ಶಿರೋಭಾಗದಲ್ಲಿ ಬಿಂದುಗಳಿಂದ ರಚಿತವಾದ ವೃತ್ತಾಕಾರದ ಪ್ರಭಾವಳಿ; ಬಲಭಾಗದಲ್ಲಿ ನಾಲ್ಕು ಮತ್ತು ಎಡಭಾಗದಲ್ಲಿ ಐದು ನಕ್ಷತ್ರಗಳು; ಇವಿಷ್ಟೂ ದೀರ್ಘ ವೃತ್ತಾಕಾರದ ಬಿಂದುವಿನ ವಿನ್ಯಾಸದಲ್ಲಿವೆ; ಎಡ ಮತ್ತು ಬಲಭಾಗಗಳನ್ನು ರೋಮನ್ ಲಿಪಿಯ ಬರಹ

(ಉದಾಹರಣೆಗೆ, SIT T XPE DAT TV REGIS ISTE DVCA); ಇದರ ಅರ್ಥ : ಓ ಕ್ರಿಸ್ತನೇ, ನೀನು ಆಳುತ್ತಿರುವ ಈ ರಾಜ್ಯವು ನಿನಗೇ ಅರ್ಪಣೆ - Sit tibi Christe datus quem the rigis into ducatus)

ಈ ನಾಣ್ಯಗಳ ಮೇಲೆ ಸಂತ ಮಾರ್ಕನ ಚಿತ್ರವಿರುವುದರಿಂದ, ಕ್ರೈಸ್ತರಿಗೆ ಇದು ಪವಿತ್ರವೆನಿಸಿದೆ. ಆದುದರಿಂದ ಅನೇಕರು ಈ ನಾಣ್ಯಗಳನ್ನು ಪದಕದ ರೂಪದಲ್ಲಿ ಸರಕ್ಕೆ ಪೋಣಿಸಿಕೊಂಡು ಕತ್ತಿನಲ್ಲಿ ಹಾಕಿಕೊಳ್ಳುತ್ತಾರೆ. ಇದು ಸಿರಿಯನ್ ಕ್ರೈಸ್ತರಲ್ಲಿ ವಿಶೇಷವಾಗಿ ಕಾಣಬರುತ್ತದೆ.

ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಕೆಲವು ವೆನಿಷಿಯನ್ ನಾಣ್ಯಗಳನ್ನು ಒಳಗೊಂಡ ಮಾಲೆ ಇದೆ. ಇದರ ಅಧ್ಯಯನ ನಡೆದಿಲ್ಲವಾದುದರಿಂದ ಇದು ಯಾವ ಡ್ಯೂಕರಿಗೆ ಸಂಬಂಧಿಸಿದ್ದು ಎಂದು ತಿಳಿದುಬಂದಿಲ್ಲ.


ಗುಲ್ಬರ್ಗದಲ್ಲಿ ದೊರಕಿರುವ ವೆನಿಷಿಯನ್ ನಾಣ್ಯಗಳು ಕಾಲಮಾನ ದೃಷ್ಟಿಯಿಂದ ಮುಖ್ಯವಾದದ್ದು. ದಕ್ಷಿಣ ಭಾರತದಲ್ಲಿ ದೊರಕಿರುವ ಅತ್ಯಂತ ಪ್ರಾಚೀನವಾದ ವೆನಿಷಿಯನ್ ನಾಣ್ಯಗಳಿವು ಎಂದು ಹೇಳಬಹುದು. ವಿಜಯನಗರ ಮತ್ತು ಸುಲ್ತಾನರ ಕಾಲಕ್ಕೆ ಸೇರುವ ನಾಣ್ಯಗಳು ಇವು. ಆದುದರಿಂದ ಈ ಕಾಲದಲ್ಲಿ ಕರ್ನಾಟಕಕ್ಕೂ, ಇಟಲಿಗೂ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳು ಇದ್ದುದು ಗೊತ್ತಾಗುತ್ತದೆ. ವಿಜಯನಗರ ಕಾಲದಲ್ಲಿ ಇಟಲಿಯಿಂದ ಬಂದ ಪ್ರವಾಸಿಗಳ ಕಥನವೂ ಇದನ್ನು ದೃಢಪಡಿಸುತ್ತವೆ.

5. ಪೋರ್ಚುಗೀಸರ ನಾಣ್ಯಗಳು

ವಾಸ್ಕೋಡಗಾಮನ ನೇತೃತ್ವದಲ್ಲಿ ಕ್ರಿ.ಶ. 1498ರಲ್ಲಿ ಪೋರ್ಚುಗೀಸರು ದಕ್ಷಿಣ ಭಾರತಕ್ಕೆ ಬಂದರು. ಕಲ್ಲಿಕೋಟೆಯ ದೊರೆಯಿಂದ ವ್ಯಾಪಾರಕ್ಕೆ ಅಪ್ಪಣೆಯನ್ನು ಪಡೆದು ಮೊದಲು ವ್ಯಾಪಾರದಲ್ಲಿ ತೊಡಗಿದರು. ಕಾಲಕ್ರಮದಲ್ಲಿ ಕ್ರಿ.ಶ. 1510ರಲ್ಲಿ ಆಲ್ಬುಕರ್ಕನು ಗೋವದ ಸುತ್ತಮುತ್ತಲ ಪ್ರದೇಶಗಳನ್ನು ತನ್ನ ವಶಮಾಡಿಕೊಂಡು ಆಳ್ವಿಕೆಯನ್ನು ನಡೆಸಲು ಆರಂಭಿಸಿದನು. ಇತ್ತೀಚಿನವರೆಗೆ ಗೋವ, ಡಿಯು-ಡಾಮನ್‌ಗಳನ್ನು ಇವರು ಆಳುತ್ತಿದ್ದರು. ಅಂತಿಮವಾಗಿ ಇವರನ್ನು ಆಚೆಗೆ ಓಡಿಸಿ, ಈ ಪ್ರದೇಶಗಳನ್ನು ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸಲಾಯಿತು.

ವಿಜಯನಗರ ಕಾಲದಲ್ಲಿ ಕರ್ನಾಟಕಕ್ಕೂ ಪೋರ್ಚುಗೀಸರಿಗೂ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳು ವಿಶೇಷವಾಗಿದ್ದವು. ಕೃಷ್ಣದೇವರಾಯನು ಪೋರ್ಚುಗೀಸರೊಡನೆ ಸ್ನೇಹದಿಂದಿದ್ದನು. ಪೋರ್ಚುಗೀಸರಿಂದ ಸರಬರಾಜಾಗುತ್ತಿದ್ದ ಅಶ್ವಬಲ ವಿಜಯನಗರಕ್ಕೆ ಬಲುಮುಖ್ಯವಾಗಿದ್ದಿತು. ಆದುದರಿಂದ ವ್ಯಾಪಾರ ಸಂಪರ್ಕಗಳು ಸುಗಮವಾಗಿ ನಡೆಯುತ್ತಿದ್ದವು. ವಿಜಯನಗರಕ್ಕೆ ಸಂದರ್ಶನ ನೀಡಿದ ಪ್ರವಾಸಿಗಳಲ್ಲಿ ಪೋರ್ಚುಗೀಸರಾದ ಬಾರ್ಬೊಸ ಮತ್ತು ಡೊಮಿಂಗೆ ಪೇಸ್ ಮುಖ್ಯರಾದವರು. ಇವರ ಅನಂತರ ಇನ್ನೊಬ್ಬ ಪೋರ್ಚುಗೀಸನಾದ ನ್ಯೂನಿಜ್ ವಿಜಯನಗರಕ್ಕೆ ಬಂದನು. ಇವರ ಬರಹಗಳು ವಿಜಯನಗರ ಇತಿಹಾಸಕ್ಕೆ ಉತ್ತಮ ಆಕರಗಳಾಗಿವೆ.

ಪೋರ್ಚುಗೀಸರು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಅಚ್ಚು ಹಾಕಿಸಿದರು. ಇವರ ಚಿನ್ನದ ನಾಣ್ಯಗಳನ್ನು ಕ್ರುಸೆಡೊ ಅಥವಾ ಮನೋಲ್ ಎಂದು ಕರೆಯುತ್ತಿದ್ದರು. ಇವು ತೂಕ ಮತ್ತು ಅಳತೆಯಲ್ಲಿ ವಿಜಯನಗರದ ಹೊನ್ ಅಥವಾ ಪಗೋಡ ನಾಣ್ಯಗಳಂತೆಯೇ ಇವೆ. ವ್ಯಾಪಾರದಲ್ಲಿ ದೊರಕಿದ ವಿಜಯನಗರದ ಚಿನ್ನದ ನಾಣ್ಯಗಳನ್ನು ಕರಗಿಸಿ ಆಲ್ಬುಕರ್ಕನು ಪೋರ್ಚುಗೀಸ್ ನಾಣ್ಯಗಳನ್ನು ಟಂಕಿಸಲು ಆರಂಭಿಸಿದನು. ಇವುಗಳ ಮುಮ್ಮುಖದಲ್ಲಿ ಶಿಲುಬೆಯ ಚಿತ್ರವನ್ನು ವಿನ್ಯಾಸಗೊಳಿಸಿದನು. ಸ್ವಲ್ಪ ಕಾಲಾನಂತರ ಈ ನಾಣ್ಯಗಳ ಮೇಲೆ ಕ್ರೈಸ್ತ ಸಂತ ಥಾಮಸನ ಚಿತ್ರವನ್ನು ಅಳವಡಿಸಲಾಯಿತು. ಈ ಚಿತ್ರದಿಂದಾಗಿ ಈ ನಾಣ್ಯಗಳು ಹೆಚ್ಚು ಜನಾನುರಾಗಿಯಾದವು. ಇವರು ಬೆಳ್ಳಿಯ ನಾಣ್ಯಗಳ ಮೇಲೆ ಸಂತ ಯೋಹಾನನ ಚಿತ್ರವನ್ನು ಅಳವಡಿಸಿದರು. ಕ್ರಿ.ಶ. ಹದಿನೆಂಟನೆಯ ಶತಮಾನದ ಆದಿಭಾಗದಲ್ಲಿ ನಾಣ್ಯಗಳ ಮೇಲೆ ಆಳುವ ರಾಜನ ಚಿತ್ರವನ್ನು ಅಚ್ಚು ಹಾಕಿಸಲಾಯಿತು. ನಂತರ ರುಪಿಯ ಎನ್ನುವ ಬೆಳ್ಳಿಯ ನಾಣ್ಯಗಳನ್ನು ಬಳಕೆಗೆ ತಂದರು. ಕೊನೆಗೆ 1869ರಲ್ಲಿ ಗೋವದಲ್ಲಿದ್ದ ಟಂಕಶಾಲೆಯನ್ನು ಮುಚ್ಚಲಾಯಿತು. ಆನಂತರ ಪೋರ್ಚುಗೀಸ್ ನಾಣ್ಯಗಳನ್ನು ಬೊಂಬಾಯಿಯಲ್ಲಿದ್ದ ಬ್ರಿಟಿಷ್ ಟಂಕಶಾಲೆಯಲ್ಲಿ ಮುದ್ರಿಸಲು ಆರಂಭಿಸಿದರು.



ಉತ್ತರ ಕನ್ನಡ ಜಿಲ್ಲೆಯ ಮಿರ್ಜಾನ್ ಎನ್ನುವ ಕೋಟೆಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣದ ಅಧಿಕಾರಿಗಳು ಉತ್ಖನನ ನಡೆಸುತ್ತಿದ್ದಾಗ ಒಂದು ಪೋರ್ಚುಗೀಸರ ಚಿನ್ನದ ನಾಣ್ಯವು ದೊರಕಿತು. ಇದರ ತೂಕ 52 ಗ್ರೇನ್; ಅಗಲ 0.6". ಇದು ನಾಲ್ಕನೆಯ ಜವೊ ದೊರೆಯ ಕಾಲದಲ್ಲಿ (ಕ್ರಿ.ಶ. 1640-1656) ಗವರ್ನರ್ ಆಗಿದ್ದ ಕೊಂಡೆ ಡಿ ಸರ್ಜೀಡಸ್ ಟಂಕಿಸಿದ ನಾಣ್ಯ. ಕರ್ನಾಟಕದ ಅನೇಕ ನಾಣ್ಯ ಸಂಗ್ರಹಕಾರರಲ್ಲಿ ಪೋರ್ಚುಗೀಸ್ ನಾಣ್ಯಗಳು ದೊರಕುತ್ತವೆ.

6. ಡಚ್ ನಾಣ್ಯಗಳು


ವ್ಯಾಪಾರದ ಸೋಗಿನಲ್ಲಿ ಭಾರತಕ್ಕೆ ಬಂದ ಡಚ್ಚರು, ತಮ್ಮದೇ ಆದ ಈಸ್ಟ್ ಇಂಡಿಯ ಕಂಪೆನಿ ಆಫ್ ನೆದರ್‌ಲ್ಯಾಂಡ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಗುಜರಾತಿನಿಂದ ಹಿಡಿದು ಕೇರಳದವರೆಗೆ ವ್ಯಾಪಾರದ ಜಾಲವನ್ನು ಹರಡಿಕೊಂಡರು. ಸಂಬಾರ ಪದಾರ್ಥಗಳನ್ನು ದಕ್ಷಿಣ ಭಾರತದಲ್ಲಿ ಕೊಂಡು, ಅವುಗಳನ್ನು ಯೂರೋಪಿಗೆ ಹೆಚ್ಚಿನ ಹಣಕ್ಕೆ ಮಾರಿ ಉತ್ತಮ ಲಾಭ ಗಳಿಸಲು ಆರಂಭಿಸಿದರು. ಆದರೆ ಲಾರ್ಡ್ ಕ್ಲೈವನು ಇವರ ವಸಾಹತುಗಳನ್ನು ವಶಪಡಿಸಿಕೊಂಡು, ಇವರ ವ್ಯಾಪಾರಕ್ಕೆ ಕಡಿವಾಣ ಹಾಕಿದನು. ಆರಂಭದಲ್ಲಿ ಡಚ್ಚರು ತಮ್ಮದೇ ಆದ ಹಾಲೆಂಡ್ ಮತ್ತು ಇತರ ನಗರದ ಟಂಕಶಾಲೆಗಳಲ್ಲಿ ಅಚ್ಚಾದ ನಾಣ್ಯಗಳನ್ನೇ ಇಲ್ಲಿಯೂ ಬಳಸುತ್ತಿದ್ದರು. ಈ ಬೆಳ್ಳಿಯ ನಾಣ್ಯಗಳಿಗೆ ಡುಕಾಟೂನ್ ಎಂದು ಹೆಸರು. ಇವುಗಳ ಮುಮ್ಮುಖದಲ್ಲಿ ಕುದುರೆಯ ಮೇಲೆ ಕುಳಿತಿರುವ ರಾಜನ ಚಿತ್ರ ಹಾಗೂ Indo-Orient ಎಂಬ ಬರಹವಿದೆ. ಹಿಮ್ಮುಖದಲ್ಲಿ ಎರಡು ಸಿಂಹಗಳು ಎತ್ತಿ ಹಿಡಿದಿರುವ ರಾಜಚಿಹ್ನೆ, ಕಂಪೆನಿಯ ಹೆಸರು ಮತ್ತು ತೇದಿಗಳಿವೆ. ಇವುಗಳ ಜೊತೆಗೆ ಬೆಳ್ಳಿಯ ಮೂರು ಗಿಲ್ಡರ್, ಒಂದು ಗಿಲ್ಡರ್ ಮತ್ತು ಅರ್ಧ ಗಿಲ್ಡರ್ ನಾಣ್ಯಗಳನ್ನು ಇವರು ಟಂಕಿಸಿದರು. ಈ ನಾಣ್ಯಗಳ ಮುಮ್ಮುಖದಲ್ಲಿ ನಿಂತಿರುವ ದೇವತೆಯ ಚಿತ್ರವಿದೆ. ತಾಮ್ರದಲ್ಲಿ ಡಾಯಿಟ್ ಮತ್ತು ಅರ್ಧ ಡಾಯಿಟ್ ನಾಣ್ಯಗಳನ್ನು ಟಂಕಿಸಿದರು. ಇವುಗಳ ಮುಮ್ಮುಖದಲ್ಲಿ ಗುರಾಣಿಯ ಚಿಹ್ನೆ ಮತ್ತು ಹಿಮ್ಮುಖದಲ್ಲಿ voc ಎಂಬ ಬರಹಗಳಿವೆ. ಇವುಗಳ ಜೊತೆಗೆ ಇವರು ದಕ್ಷಿಣ ಭಾರತದಲ್ಲಿ ಬಳಕೆಗೆ ಚಿನ್ನದ ನಾಣ್ಯಗಳನ್ನು ಟಂಕಿಸಿದರು. ಇವುಗಳ ಮುಮ್ಮುಖದಲ್ಲಿ ನಾಲ್ಕು ಕೈಗಳುಳ್ಳ ಲಕ್ಷ್ಮೀ ಮತ್ತು ಹಿಮ್ಮುಖದಲ್ಲಿ ಬಿಂದುಗಳಿವೆ. ಈ ನಮೂನೆಯ ಚಿನ್ನದ ನಾಣ್ಯಗಳು ದಕ್ಷಿಣ ಭಾರತದಲ್ಲಿ ಬಹಳ ಜನಾನುರಾಗಿಯಾದವು. ಇಂದಿಗೂ ಈ ನಾಣ್ಯಗಳು ಅನೇಕರ ಮನೆಗಳಲ್ಲಿ ಪೂಜೆಗೊಳ್ಳುತ್ತಲಿವೆ. ಇಲ್ಲವೇ ಚಿನ್ನದ ಉಂಗುರಗಳಲ್ಲಿ ಕಾಣಬರುತ್ತವೆ. ಈ ನಾಣ್ಯಗಳ ಕಾಸಿನ ಸರಗಳೂ ಉಪಯೋಗದಲ್ಲಿವೆ. ಈ ನಾಣ್ಯಗಳು ನಾಗಪಟ್ಟಣಂನಲ್ಲಿ ಅಚ್ಚಾಗುತ್ತಿದ್ದವು.



ಸಣ್ಣ ಪ್ರಮಾಣದ ಚಲಾವಣೆಗಾಗಿ ಡಚ್ಚರು ತಾಮ್ರ ಮತ್ತು ಸೀಸಗಳಲ್ಲಿ ಹದಿನೈದು, ಹತ್ತು, ನಾಲ್ಕು, ಎರಡು ಮತ್ತು ಒಂದು ಕ್ಯಾಶ್ ನಾಣ್ಯಗಳನ್ನು ಮುದ್ರಿಸಿದರು. ಇವುಗಳ ಮೇಲೆ N ಎಂಬ ಅಕ್ಷರವಿದ್ದು, ಅದು ನಾಗಪಟ್ಟಣಂ ಟಂಕಶಾಲೆಯ ಸಂಕೇತ. ಮಚಲಿಪಟ್ಟಣ, ಪುದುಚೇರಿ, ಸೂರತ್, ಪುಲಿಕಾಟ್ ಮುಂತಾದ ಕಡೆಗಳಲ್ಲಿ ಚಲಾವಣೆಗೋಸ್ಕರ ಪಗೋಡ, ಪಣಂ ಮತ್ತು ಕ್ಯಾಶ್ ಮೌಲ್ಯದ ನಾಣ್ಯಗಳನ್ನು ಟಂಕಿಸಿದರು. ಕೆಲವು ನಾಣ್ಯಗಳ ಮೇಲೆ ನಾಗರೀ ಬರಹವೂ ಕಾಣಬರುತ್ತದೆ. ಡಚ್ ನಾಣ್ಯಗಳು ವಿಶೇಷವಾಗಿ ಉತ್ತರ ಕರ್ನಾಟಕದ ನಾಣ್ಯ ಸಂಗ್ರಹಕಾರರಲ್ಲಿ ದೊರಕುತ್ತವೆ. ಹಳೆ ಮೈಸೂರು ರಾಜ್ಯದ ಜಿಲ್ಲೆಗಳಲ್ಲಿ ಒಡೆಯರ್ ನಾಣ್ಯಗಳೇ ಚಲಾವಣೆಯಲ್ಲಿದ್ದುದರಿಂದ, ಡಚ್ ನಾಣ್ಯಗಳು ಅಷ್ಟಾಗಿ ಕಾಣಬರುವುದಿಲ್ಲ. ಆದರೆ ಇಂದಿಗೂ ಕೆಲವರ ಮನೆಗಳಲ್ಲಿ ಲಕ್ಷ್ಮೀ ಕಾಸು (ಚಿನ್ನ) ಪೂಜೆಗೊಳ್ಳುತ್ತಲಿದೆ. ಅವುಗಳನ್ನು ಆರಂಭಿಸಿದ ಕೀರ್ತಿ ಡಚ್ಚರಿಗೆ ಸೇರುತ್ತದೆ.

7. ಡೇನಿಷ್ ನಾಣ್ಯಗಳು

ಡೆನ್ಮಾರ್ಕಿನ ದೊರೆಯಾದ ಕ್ರಿಶ್ಚಿಯನ್, ಇತರ ವಿದೇಶೀಯರು ವ್ಯಾಪಾರವನ್ನು ಮಾಡಿ ದಕ್ಷಿಣ ಭಾರತದಿಂದ ಹಣ ಗಳಿಸುತ್ತಿರುವುದನ್ನು ಗಮನಿಸಿ, ತಾನೂ 1616ರಲ್ಲಿ ಡೇನಿಷ್ ಈಸ್ಟ್ ಇಂಡಿಯ ಕಂಪೆನಿಯನ್ನು ಸ್ಥಾಪಿಸಿದನು. ನಾಗಪಟ್ಟಣಂಗೆ




ಸಮೀಪದಲ್ಲಿರುವ ಟ್ರಾನ್ಕ್ವಿಬಾರ್ ಎಂಬ ಬಂದರಿನಿಂದ ಇವರು ವ್ಯಾಪಾರವನ್ನು ಮಾಡಲು ಆರಂಭಿಸಿದರು. ಇದರಿಂದ ಒಂದು ಡೇನಿಷ್ ವಸಾಹತು ನಿರ್ಮಾಣಗೊಂಡಿತು. 1845ರಲ್ಲಿ ಈ ಜನಗಳು ತಮ್ಮ ವ್ಯಾಪಾರ ಮತ್ತು ನಗರವನ್ನು ಬ್ರಿಟಿಷರಿಗೆ ಮಾರಿಬಿಟ್ಟು, ದಕ್ಷಿಣ ಭಾರತದಿಂದ ಹಿಂದಿರುಗಿದರು. ಈ ಇನ್ನೂರು ವರ್ಷಗಳ ಕಾಲದಲ್ಲಿ ತಮ್ಮ ಬಳಕೆಗೋಸ್ಕರ ಇವರು ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದರು. ಆಗಿನ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಚಲಾವಣೆಯಲ್ಲಿದ್ದ ಹೊನ್,

ಪಣ, ಪಗೋಡ, ಕಾಸು ಮುಂತಾದ ನಾಣ್ಯಗಳನ್ನೇ ಅನುಕರಿಸಿದರು. ಇವರ ನಾಣ್ಯಗಳ ಮುಮ್ಮುಖದಲ್ಲಿ ಕ್ರಿಶ್ಚಿಯನ್ ಎಂಬ ಹೆಸರಿನ ಮೊದಲಕ್ಷರ C ಮತ್ತು ಫ್ರೆಡರಿಕ್ ಎಂಬ ಪದದ ಮೊದಲ ಅಕ್ಷರ F, ಕಾಣಬರುತ್ತವೆ. ಹಿಮ್ಮುಖದಲ್ಲಿ ಕಂಪೆನಿಯ ಹೆಸರು ಹಾಗೂ ಕಿರೀಟವಿದೆ. ಡೇನಿಷ್ ನಾಣ್ಯಗಳು ಕರ್ನಾಟಕದಲ್ಲಿ ಅಷ್ಟಾಗಿ ಹೆಚ್ಚಿನ ಸಂಖ್ಯೆಯಲ್ಲಿ ದೊರಕಿಲ್ಲ. ಆದರೆ ಉತ್ತರ ಕನ್ನಡ, ಕುಂದಾಪುರ ಮತ್ತು ಶಿವಮೊಗ್ಗಗಳಲ್ಲಿರುವ ನಾಣ್ಯ ಸಂಗ್ರಹಕಾರರಲ್ಲಿ ಈ ನಾಣ್ಯಗಳು ವಿಶೇಷವಾಗಿ ಕಂಡುಬರುತ್ತವೆ. ಇತ್ತೀಚೆಗೆ ಬಾರಕೂರಿನಲ್ಲಿ ಡೇನಿಷ್ ನಾಣ್ಯಗಳು ದೊರಕಿದ್ದವೆಂದು ವರದಿಯಾಗಿದೆ, ಆದರೆ ವಿವರಗಳು ತಿಳಿದಿಲ್ಲ.

8. ಫ್ರೆಂಚ್ ನಾಣ್ಯಗಳು

ಕ್ರಿ.ಶ. 1664ರಲ್ಲಿ ಫ್ರೆಂಚರು ವ್ಯಾಪಾರಕ್ಕೋಸ್ಕರ ಒಂದು ಕಂಪೆನಿಯನ್ನು ಸ್ಥಾಪಿಸಿದರು. ಸೂರತ್, ಮಚಲಿಪಟ್ಟಣ ಮತ್ತು ಪಾಂಡಿಚೆರಿಗಳಲ್ಲಿ ತಮ್ಮದೇ ಆದ ಕೋಠಿಗಳನ್ನು ಕಟ್ಟಿಕೊಂಡು ವ್ಯಾಪಾರವನ್ನು ನಡೆಸುತ್ತಿದ್ದರು. ಕಾಲಕ್ರಮದಲ್ಲಿ ಅವರಿಗೆ ರಾಜಕೀಯದಲ್ಲಿ ಆಸಕ್ತಿ ಉಂಟಾಯಿತು. ಇದನ್ನು ಸಹಿಸದ ಬ್ರಿಟಿಷರು ಇವರನ್ನು ಅನೇಕ ಯುದ್ಧಗಳಲ್ಲಿ ಸೋಲಿಸಿದರು. ಕೊನೆಗೆ ಫ್ರೆಂಚರು ದಕ್ಷಿಣ ಭಾರತದಿಂದ ನಿರ್ಗಮಿಸಿದರು. ಈ ನೂರೈವತ್ತು ವರ್ಷಗಳ ಕಾಲದ ತಮ್ಮ ಚಟುವಟಿಕೆಗಳಿಗಾಗಿ ಅವರು ತಮ್ಮದೇ ಆದ ನಾಣ್ಯಗಳನ್ನು ಟಂಕಿಸಿದರು.



ಹಿಂದೂಗಳ ವಿಶ್ವಾಸವನ್ನು ಸಂಪಾದಿಸುವ ದೃಷ್ಟಿಯಿಂದ ಫ್ರೆಂಚರು, ನಾಯಕರ ಮತ್ತು ಪಾಳೆಯಗಾರರ ನಾಣ್ಯಗಳನ್ನು ಅನುಕರಿಸಿದರು. ಇದರಿಂದ ಪಗೋಡ, ಪಣಂ, ಕಾಸು ಮುಂತಾದ ಜನಾನುರಾಗಿಯಾಗಿದ್ದ ನಾಣ್ಯಗಳೇ ಇವರಿಗೆ ಮಾದರಿಯಾದವು. ಪಾಂಡಿಚೆರಿಯಲ್ಲಿ ಒಂದು ಟಂಕಶಾಲೆಯನ್ನು ಸ್ಥಾಪಿಸಿ ಅಲ್ಲಿ ಈ ನಾಣ್ಯಗಳನ್ನು ಅಚ್ಚು ಹಾಕಿಸಲು ಆರಂಭಿಸಿದರು. ಇವರು ಅಚ್ಚು ಹಾಕಿಸಿದ ಚಿನ್ನದ ನಾಣ್ಯದ ಮುಮ್ಮುಖದಲ್ಲಿ ನಾಲ್ಕು ಭುಜಗಳ ಲಕ್ಷ್ಮಿಯ ಚಿತ್ರವಿದೆ. ಹಿಮ್ಮುಖದಲ್ಲಿ ಪಾಂಡಿಚೆರಿ ಎನ್ನುವ ಬರಹವಿದೆ.

ಈ ಚಿನ್ನದ ನಾಣ್ಯ ಬಲು ಜನಾನುರಾಗಿಯಾಯಿತು. ಇವರ ಇನ್ನೊಂದು ನಮೂನೆಯ ನಾಣ್ಯದ ಮುಮ್ಮುಖದಲ್ಲಿ ನಿಂತಿರುವ ವಿಷ್ಣು ಅಥವಾ ವೆಂಕಟೇಶ್ವರನ ಚಿತ್ರವಿದೆ. ಪಕ್ಕದಲ್ಲಿ ಪತ್ನಿಯರ ಚಿತ್ರಗಳಿವೆ. ಹಿಮ್ಮುಖದಲ್ಲಿ ಕೇವಲ ಬಿಂದುಗಳಿವೆ. ಇದೇ ರೀತಿಯ ನಾಣ್ಯಗಳನ್ನು ಈಸ್ಟ್ ಇಂಡಿಯ ಕಂಪೆನಿಯವರೂ ಮುದ್ರಿಸಿದರು. ಎರಡು ಪಣ, ಒಂದು ಪಣ ಮತ್ತು ಅರ್ಧ ಪಣ ಮೌಲ್ಯದ ಬೆಳ್ಳಿಯ ನಾಣ್ಯಗಳನ್ನು ಇವರು ಅಚ್ಚು ಹಾಕಿಸಿದರು. ಕೆಲವು ನಾಣ್ಯಗಳಲ್ಲಿ ಫ್ರಾನ್ಸಿ ಕಂಪೆನಿ ಎಂಬ ಪರ್ಷಿಯನ್ ಬರಹ ಮತ್ತು ಪುಲಚೇರಿ 1750 ಎಂಬ ಬರಹಗಳಿವೆ. ಡೌಡೊ, ಅರ್ಧ ಡೌಡೊ ಮತ್ತು ಕ್ಯಾಶ್ ಮೌಲ್ಯದ ತಾಮ್ರದ ನಾಣ್ಯಗಳನ್ನೂ ಇವರು ಟಂಕಿಸಿದರು. ಇವರು ಆರ್ಕಾಟ್ ನವಾಬನ ಪರವಾನಗಿ ಪಡೆದುಕೊಂಡು ಮುಘಲ್ ನಮೂನೆಗೆ ಸೇರಿದ ನಾಣ್ಯಗಳನ್ನು ಅಚ್ಚು ಮಾಡಿದರು. ಇವುಗಳಲ್ಲಿ ಪರ್ಷಿಯನ್ ಬರಹ ಮತ್ತು ಅರ್ಧ ಚಂದ್ರಾಕೃತಿಯ ವಿನ್ಯಾಸವಿದೆ. ಈ ರೀತಿಯ ನಾಣ್ಯಗಳನ್ನು ಮುಹಮ್ಮದ್ ಷಾ, ಅಹ್ಮದ್ ಷಾ, ಎರಡನೆಯ ಆಲಂಗೀರ್ ಅವರ ಹೆಸರಿನಲ್ಲಿ ಅಚ್ಚು ಮಾಡಿದರು. ಇದರಿಂದ ಸಂತೋಷಗೊಂಡು ಮುಘಲರು ಇವರಿಗೆ ವ್ಯಾಪಾರಕ್ಕಾಗಿ ವಿಶೇಷ ಸೌಕರ್ಯಗಳನ್ನು ಮಾಡಿಕೊಟ್ಟರು. ಫ್ರೆಂಚ್ ನಾಣ್ಯಗಳು ಕರ್ನಾಟಕದ ಅನೇಕ ಕಡೆ ದೊರಕಿವೆ.

9. ಈಸ್ಟ್ ಇಂಡಿಯ ಕಂಪೆನಿ ಮತ್ತು ಬ್ರಿಟಿಷ್ ನಾಣ್ಯಗಳು


ವ್ಯಾಪಾರದ ಸೋಗಿನಲ್ಲಿ ಭಾರತಕ್ಕೆ ಬಂದು, ಸಾಮ್ರಾಜ್ಯವನ್ನೇ ಕಟ್ಟಿ ಭಾರತವನ್ನು ಆಳಿದವರು ಬ್ರಿಟಿಷರು. ಲಂಡನ್ನಿನ ವ್ಯಾಪಾರಿ ಸಂಸ್ಥೆಯೊಂದು ಕ್ರಿ.ಶ. 1613ರಲ್ಲಿ ಮುಘಲ್ ಚಕ್ರವರ್ತಿ ಜಹಾಂಗೀರ್‌ನಿಂದ ಅನುಮತಿ ಪಡೆದು ಸೂರತ್‌ನಲ್ಲಿ ಕೋಠಿಯನ್ನು ಕಟ್ಟಿಕೊಂಡು, ಕಾಲಕ್ರಮದಲ್ಲಿ ಇಡೀ ಭಾರತದಲ್ಲೇ ಪ್ರಮುಖವಾಯಿತು. ಚಂದ್ರಗಿರಿ ರಾಜನ ಅಪ್ಪಣೆ ಪಡೆದು ಮದರಾಸಿನಲ್ಲಿ ಒಂದು ಕೋಠಿಯನ್ನು ಕಟ್ಟಿ ಅದನ್ನು ಫೋರ್ಟ್ ಸೇಂಟ್ ಜಾರ್ಜ್ ಎಂದು ಕರೆಯಲಾಯಿತು. ಈ ಸಂಸ್ಥೆಯೇ ಈಸ್ಟ್ ಇಂಡಿಯ ಕಂಪೆನಿ. ಸುಮಾರು 1834ರ ಸಮಯದಲ್ಲಿ ಈ ಸಂಸ್ಥೆಯನ್ನು ಎದುರಿಸುವ ಯಾವ ರಾಜಮಹಾರಾಜರೂ ಇರಲಿಲ್ಲ. ಆದುದರಿಂದ ಇಡೀ ಭಾರತಕ್ಕೇ ಅವರು ಪ್ರಭುಗಳೆನಿಸಿದರು. 1857ರಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಹೆಜ್ಜೆಯನ್ನು ಇವರು ದಮನ ಮಾಡಿದರು. ಅನಂತರ ಸಂಸ್ಥೆಯು ಬ್ರಿಟಿಷ್ ಸರ್ಕಾರದ ಆಡಳಿತಕ್ಕೆ ನಾಂದಿಯಾಯಿತು. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ದೊರಕುವವರೆಗೆ, ಅಂದರೆ 1947ರವರೆಗೆ ಇವರು ಇಲ್ಲಿ ರಾಜ್ಯಭಾರ ನಡೆಸಿದರು. ಕೊನೆಗೆ ಈ ದೇಶವನ್ನು ಬಿಟ್ಟು ಹಿಂದಿರುಗಿದರು.

ಆರಂಭ ದೆಸೆಯಲ್ಲಿ ಈಸ್ಟ್ ಇಂಡಿಯ ಕಂಪೆನಿ ನಾಣ್ಯಗಳನ್ನು ಟಂಕಿಸುವ ವಿಷಯದಲ್ಲಿ ಸರಿಯಾದ ಮಾರ್ಗವನ್ನು ಅನುಸರಿಸಲಿಲ್ಲ. ದೇಶದ ಅನೇಕ ಸ್ಥಳಗಳಲ್ಲಿ

ಟಂಕಶಾಲೆಗಳನ್ನು ಸ್ಥಾಪಿಸಿ, ಸ್ಥಳೀಯರ ನಾಣ್ಯಗಳನ್ನೇ ಮೋಸದಿಂದ ಅಚ್ಚು ಹಾಕಿಸಲು ಮೊದಲು ಮಾಡಿತು. ಮದರಾಸಿನಲ್ಲಿ ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ಪಡೆದುಕೊಂಡು ನಾಣ್ಯಗಳನ್ನು ಟಂಕಿಸಲು ಆರಂಭಿಸಿದರು. ಜನಗಳು ಈ ನಾಣ್ಯಗಳನ್ನು ತೆಗೆದುಕೊಳ್ಳಲು ಹಿಂಜರಿಯುತ್ತಿದ್ದರು. ಆದುದರಿಂದ ಮುಘಲ್ ದೊರೆಗೆ ಗೊತ್ತಾಗದಂತೆ ಮುಘಲ್ ನಾಣ್ಯಗಳನ್ನು ಟಂಕಿಸಲು ಆರಂಭಿಸಿದರು. ಸ್ಥಳೀಯರು ಇದನ್ನು ಖಂಡಿಸಿದರು. ಕೊನೆಗೆ ಮುಘಲರ ಅಪ್ಪಣೆ ಪಡೆದು ನಾಣ್ಯಗಳನ್ನು ಅಚ್ಚು ಮಾಡಲು ಆರಂಭಿಸಿದರು. ಇವು ಒಳ್ಳೆಯ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳಾದುದರಿಂದ ಜನಗಳು ಮತ್ತು ವ್ಯಾಪಾರಿಗಳು ಇದನ್ನು ಒಪ್ಪಿಕೊಂಡರು.

ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದಲ್ಲಿ ಚಲಾವಣೆಗೋಸ್ಕರ ವಿಜಯನಗರ ನಮೂನೆಯ ನಾಣ್ಯಗಳನ್ನೇ ಕಂಪೆನಿಯು ಅಚ್ಚು ಮಾಡಿಸಲು ಆರಂಭಿಸಿತು. ಪಗೋಡ ಎಂದು ಕರೆಯುಲಾದ ವರಹ ನಾಣ್ಯಗಳ ಮೇಲೆ ವೆಂಕಟೇಶ್ವರ ಮತ್ತು ಶ್ರೀದೇವಿ-ಭೂದೇವಿಯರನ್ನು ಅಳವಡಿಸಲಾಯಿತು. 'ಶ್ರೀ ಸ್ವಾಮಿ ಪಗೋಡ' ಎಂಬ ಹೆಸರಿನ ನಮೂನೆಯ ನಾಣ್ಯ ತುಂಬ ಜನಾನುರಾಗಿಯಾಯಿತು. ಇದೇ ರೀತಿಯಲ್ಲಿ ನಿಂತಿರುವ ವಿಷ್ಣುವಿನ ಪಗೋಡ ನಾಣ್ಯಗಳು ಅಚ್ಚಾದವು. ಇದು ಮದರಾಸಿನಲ್ಲಿ ಅಚ್ಚಾದದ್ದು ಎಂದು ತೋರಿಸುವ ಸಲುವಾಗಿ ವಿಷ್ಣುವಿನ ಪಕ್ಕದಲ್ಲಿ M ಎಂಬ ಇಂಗ್ಲಿಷ್ ಅಕ್ಷರವನ್ನು ಅಳವಡಿಸಲಾಯಿತು. ಇದು ಜನಗಳಿಗೆ ಇಷ್ಟವಾಗಲಿಲ್ಲ. ಆದುದರಿಂದ ಈ ಅಕ್ಷರವನ್ನು ತೆಗೆದುಹಾಕಿ ನಕ್ಷತ್ರವಿರುವ ನಾಣ್ಯವನ್ನು ಟಂಕಿಸಲಾಯಿತು. ಇದು ಜನಾನುರಾಗಿಯಾಗಿ ಬಹಳ ಕಾಲ ಚಲಾವಣೆಯಲ್ಲಿತ್ತು. ಇನ್ನೊಂದು ನಮೂನೆಯ ಬೆಳ್ಳಿ ನಾಣ್ಯದಲ್ಲಿ ನಿಂತಿರುವ ವಿಷ್ಣು; ತೆಲುಗು-ತಮಿಳು ಬರಹ; ಹಿಮ್ಮುಖದಲ್ಲಿ ಎತ್ತರವಾದ ಗೋಪುರ; ಸುತ್ತಲೂ ನಕ್ಷತ್ರಗಳಿರುವ ನಾಣ್ಯಗಳು ವಿಷ್ಣು-ಗೋಪುರ ನಾಣ್ಯಗಳೆಂದು ಪ್ರಸಿದ್ಧವಾದವು. ದೇವಾಲಯ ಹಾಗೂ ವಿಷ್ಣುವಿನ ಬಗೆಗೆ ವಿಶೇಷ ಗೌರವ ಹೊಂದಿದ್ದ ಇಲ್ಲಿಯ ಜನಗಳಿಗೆ ಈ ರೀತಿಯ ನಾಣ್ಯ ತುಂಬ ಪ್ರಿಯವಾಯಿತು. ಇದು ಕಂಪೆನಿಗೆ ಗೌರವವನ್ನು ತಂದುಕೊಟ್ಟಿತು.

ಕಂಪೆನಿಯು ರಾಜಕೀಯವಾಗಿ ಬಲವಾದ ನಂತರ ಈ ಮೇಲಿನ ನಮೂನೆಯ ನಾಣ್ಯವನ್ನು ನಿಲ್ಲಿಸಿ, ಮುಘಲ್ ರೀತಿಯ ಮೊಹರ್ ನಾಣ್ಯಗಳನ್ನು ಟಂಕಿಸಲು ಆರಂಭಿಸಲಾಯಿತು. ಇದರಲ್ಲಿ ಈಸ್ಟ್ ಇಂಡಿಯ ಕಂಪೆನಿ ಎಂಬ ಬರಹ ಮತ್ತು ಚಿಹ್ನೆಗಳು ಮಾತ್ರ ಕಂಡುಬಂದವು. ಮತ್ತೊಂದು ನಾಣ್ಯದಲ್ಲಿ ಕಿರೀಟವನ್ನು ಎರಡು ಸಿಂಹಗಳು ಎತ್ತಿ ಹಿಡಿದಿರುವ ವಿನ್ಯಾಸ ಮತ್ತು ಈಸ್ಟ್ ಇಂಡಿಯ ಕಂಪೆನಿ ಎಂಬ ಬರಹವನ್ನುಳ್ಳ ನಾಣ್ಯಗಳು ಚಲಾವಣೆಗೆ ಬಂದವು. ಇದೇ ನಮೂನೆಯ ತಾಮ್ರದ ಕ್ಯಾಶ್ ನಾಣ್ಯಗಳು ಅಚ್ಚಾಗಲು ಆರಂಭಗೊಂಡವು.



ವಿಕ್ಟೋರಿಯ ರಾಣಿಯು 1850ರಲ್ಲಿ ಅಧಿಕಾರವನ್ನು ವಹಿಸಿಕೊಂಡ ನಂತರ ಬ್ರಿಟಿಷ್ ಸರ್ಕಾರದ ನಾಣ್ಯ ಪರಂಪರೆ ಆರಂಭವಾಯಿತು. ಕಿರೀಟಧಾರಿಣಿಯಾದ ವಿಕ್ಟೋರಿಯ ರಾಣಿಯ ಚಿತ್ರ ಮತ್ತು 'ಕ್ವೀನ್' ಎಂಬ ಬರಹದ ನಾಣ್ಯಗಳು ಅಸ್ತಿತ್ವಕ್ಕೆ ಬಂದವು. 1877ರಲ್ಲಿ ಆಕೆಯು ಚಕ್ರವರ್ತಿನಿಯಾದುದರಿಂದ, ಕ್ವೀನ್ ಎನ್ನುವ ಪದವನ್ನು ಕಿತ್ತುಹಾಕಿ, 'ಎಂಪ್ರೆಸ್' ಎಂಬ ಪದವನ್ನು ಸೇರಿಸಲಾಯಿತು. ಆಕೆಯ ಮರಣಾನಂತರ ಕಿರೀಟವಿಲ್ಲದ ಏಳನೆಯ ಎಡ್ವರ್ಡ್ ಚಕ್ರವರ್ತಿಯ ಚಿತ್ರಗಳನ್ನುಳ್ಳ ನಾಣ್ಯಗಳು ಬಳಕೆಗೆ ಬಂದವು. ಈ ರೀತಿಯ ಬೋಳುತಲೆಯ ಚಿತ್ರವಿರುವ ನಾಣ್ಯಗಳು ಭಾರತೀಯರನ್ನು ಅವಮಾನ ಮಾಡುವುದಕ್ಕೋಸ್ಕರ ಟಂಕಿಸಲಾಯಿತು ಎಂದು ಭಾವಿಸಿ, ಜನಗಳು ತಮ್ಮ ಕೋಪವನ್ನು ತೋರಿಸಿದರು. ಆನಂತರ ಕಿರೀಟವಿರುವ ಚಕ್ರವರ್ತಿಯ ಚಿತ್ರವಿರುವ ನಾಣ್ಯಗಳನ್ನೇ ಅಚ್ಚು ಹಾಕುವ ಪರಂಪರೆ ಮುಂದುವರೆಯಿತು. ಐದನೆಯ ಜಾರ್ಜ್ ದೊರೆಯ ರೂಪಾಯಿ ನಾಣ್ಯಗಳ ಮೇಲಿದ್ದ ಆನೆಯ ಚಿತ್ರ ಹಂದಿಯಂತೆ ಕಾಣುತ್ತಿತ್ತು. ಇದರಿಂದ ಮುಸ್ಲಿಮರು ರೊಚ್ಚಿಗೆದ್ದು, ಇದು ತಮ್ಮ ಮತಕ್ಕೆ ಅವಮಾನವೆಂದು ಭಾವಿಸಿದರು. ಕೂಡಲೆ ಈ ನಾಣ್ಯಗಳನ್ನು ಹಿಂತೆಗೆದುಕೊಂಡು, ಸರಿಯಾದ ಆನೆ ಚಿತ್ರವಿರುವ ರೂಪಾಯಿಗಳನ್ನು ಟಂಕಿಸಲು ಆರಂಭಿಸಿದರು. ಒಂದು ರುಪಾಯಿ, ಅರ್ಧ ರುಪಾಯಿ, ಕಾಲು ರುಪಾಯಿ ಮತ್ತು ಎರಡು ಆಣೆ ಮೌಲ್ಯದ ನಾಣ್ಯಗಳು ಅಚ್ಚಾದವು. ತಾಮ್ರದಲ್ಲಿ ಕಾಲು ಆಣೆ, ಅರ್ಧ ಪೈ ಮತ್ತು ಪೈ ನಾಣ್ಯಗಳು ಬಳಕೆಗೆ ಬಂದವು. ಆರನೆಯ ಜಾರ್ಜ್ ಚಕ್ರವರ್ತಿಯ

ಕಾಲದಲ್ಲಿ ಇದೇ ವಿನ್ಯಾಸದ ನಾಣ್ಯಗಳು ಬಳಕೆಯಲ್ಲಿದ್ದವು. ಆದರೆ ಈ ಸಮಯಕ್ಕಾಗಲೇ ವಿವಿಧ ಲೋಹಗಳ ಬೆಲೆಯು ಹೆಚ್ಚಾದುದರಿಂದ, ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಕೈಬಿಟ್ಟು, ತಾಮ್ರ ಮತ್ತು ನಿಕ್ಕಲ್ ಮಿಶ್ರಲೋಹದ ರುಪಾಯಿಗಳನ್ನು ಅಚ್ಚು ಮಾಡುವ ಪದ್ಧತಿ ಆರಂಭವಾಯಿತು. ಇವುಗಳ ಮುಮ್ಮುಖದಲ್ಲಿ ತಾಮ್ರವನ್ನು ಉಳಿಸುವ ಸಲುವಾಗಿ ರಂಧ್ರವಿರುವ ನಾಣ್ಯಗಳನ್ನು ಟಂಕಿಸಲಾಯಿತು. ಈ ಕಾಲದಲ್ಲಿ ಒಂದು ರುಪಾಯಿಗೆ ಹದಿನಾರು ಆಣೆ; ಒಂದು ಆಣೆಗೆ ಹನ್ನೆರಡು ಕಾಸು ಎಂದು ನಿರ್ಧಾರವಾಗಿತ್ತು. ಭಾರತವು 1947ರಲ್ಲಿ ಸ್ವತಂತ್ರವಾದ ನಂತರ ಹೊಸ ನಮೂನೆಯ ನಾಣ್ಯಗಳ ಪರಂಪರೆ ಬೆಳೆದು ಬಂದಿತು.



ಇವು ಇತ್ತೀಚಿನ ನಾಣ್ಯಗಳಾದುದರಿಂದ, ಇವು ಕರ್ನಾಟಕದಲ್ಲಿ ಇಂದಿಗೂ ಹೇರಳವಾಗಿ ದೊರೆಯುತ್ತವೆ. ಪುರಾತತ್ವ ಉತ್ಖನನಗಳಲ್ಲಿ ಮೇಲಿನ ಪದರಗಳಲ್ಲಿ ಈಸ್ಟ್ ಇಂಡಿಯ ಕಂಪೆನಿ ಮತ್ತು ಬ್ರಿಟಿಷ್ ಸರ್ಕಾರದ ನಾಣ್ಯಗಳು ವಿಶೇಷವಾಗಿ ದೊರಕುತ್ತವೆ.

ಬನವಾಸಿ ಮತ್ತು ತಲಕಾಡಿನ ಉತ್ಖನನಗಳಲ್ಲಿ ಈ ನಮೂನೆಯ ನಾಣ್ಯಗಳು ಮೇಲಿನ ಪದರಗಳಲ್ಲಿ ದೊರಕಿವೆ. ಇಂದಿಗೂ ಹಳ್ಳಿಗಳಲ್ಲಿ ಈ ನಾಣ್ಯಗಳು ದೊರಕುತ್ತವೆ. ಅನೇಕರು ಈ ನಾಣ್ಯಗಳನ್ನು ದೇವಾಲಯಗಳ ಹುಂಡಿಗೆ ಹಾಕಿಬಿಡುತ್ತಾರೆ. ತಿರುಪತಿಯ ವೆಂಕಟೇಶ್ವರ ದೇವಾಲಯದ ಹುಂಡಿಗಳಲ್ಲಿ ಈಸ್ಟ್ ಇಂಡಿಯ ಕಂಪೆನಿ ಮತ್ತು ಬ್ರಿಟಿಷ್ ಸರ್ಕಾರದ ನಾಣ್ಯಗಳು ಹೇರಳವಾಗಿ ಕಂಡುಬರುತ್ತವೆ. ಒಟ್ಟಿನಲ್ಲಿ ಈ ವಿದೇಶೀ ನಾಣ್ಯಗಳು ಕರ್ನಾಟಕದಲ್ಲಿ ದೊರಕಿದ್ದು ಆಯಾ ದೇಶಗಳೊಡನೆ ಕರ್ನಾಟಕ ಯಾವ ರೀತಿ ವಿವಿಧ ರೀತಿಯ ಸಂಬಂಧಗಳನ್ನು ಹೊಂದಿತ್ತು ಎಂಬುದಕ್ಕೆ ಉತ್ತಮ ಮಾಹಿತಿಗಳನ್ನು ಒದಗಿಸುತ್ತವೆ.

10. ಇತರ ನಾಣ್ಯಗಳು : ಪಶ್ಚಿಮ ಕ್ಷತ್ರಪ ನಾಣ್ಯಗಳು

ನೇರವಾಗಿ ಕರ್ನಾಟಕಕ್ಕೆ ಸಂಬಂಧಪಡದ ಕೆಲವು ಭಾರತೀಯ ನಾಣ್ಯಗಳು ಕರ್ನಾಟಕದಲ್ಲಿ ದೊರಕಿವೆ. ಕಾಲಮಾನ ದೃಷ್ಟಿಯಿಂದ ಮೊದಲು ಗಮನಿಸಬೇಕಾದವು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ದೊರಕಿದ ಪಶ್ಚಿಮ ಕ್ಷತ್ರಪ ರಾಜವಂಶದ ನಾಣ್ಯಗಳು. ಈ ನಾಣ್ಯ ರಾಶಿಯಲ್ಲಿ 61 ಬೆಳ್ಳಿಯ ನಾಣ್ಯಗಳು ಇದ್ದವು. ಈ ನಾಣ್ಯಗಳ ಸರಾಸರಿ ಅಗಲ 0.6". ಇವುಗಳು 25, 30 ಮತ್ತು 40 ಗ್ರೇನ್ ತೂಕಗಳಲ್ಲಿ ಕಂಡುಬಂದಿವೆ. ಈ ಎಲ್ಲ ನಾಣ್ಯಗಳೂ ಪಶ್ಚಿಮ ಕ್ಷತ್ರಪರ ಸಾಮಾನ್ಯ ನಮೂನೆಗಳಿಗೆ ಸೇರಿದವುಗಳೇ ಆಗಿದ್ದು, ಇವುಗಳಲ್ಲಿ ಯಾವ ವೈಶಿಷ್ಟ್ಯವೂ ಕಾಣಬರುವುದಿಲ್ಲ. ಈ ನಾಣ್ಯರಾಶಿಯಲ್ಲಿರುವ ನಾಣ್ಯಗಳು ಕ್ಷತ್ರಪ ದೊರೆಗಳಾದ ದಾಮಸೇನ, ವೀರದಾಮ, ಈಶ್ವರದತ್ತ, ವಿಜಯಸೇನ, ದಾಮಸೇನನ ಮಗ, ಇಮ್ಮಡಿ ರುದ್ರಸೇನ, ವಿಶ್ವಸಿಂಹ, ಭರ್ತೃದಾಮ, ವಿಶ್ವಸೇನ, ರುದ್ರಸೇನನ ಮಗ, ಇಮ್ಮಡಿ ರುದ್ರಸಿಂಹ ಮತ್ತು ಯಶೋದಾಮನಿಗೆ ಸೇರಿವೆ. ಒಂದು ನಾಣ್ಯವನ್ನು ಮಾತ್ರ ಗುರುತಿಸಲು ಆಗಿಲ್ಲ. ಪ್ರಾತಿನಿಧಿಕವಾಗಿ ಈ ಮೇಲಿನ ಪ್ರತಿಯೊಬ್ಬ ದೊರೆಯ ಒಂದು ನಾಣ್ಯವನ್ನು ಕೆಳಗೆ ವರ್ಣಿಸಲಾಗಿದೆ.

ದಾಮಸೇನ (ಕ್ರಿ.ಶ. 223-236)

ಮು : ಬಲಕ್ಕಿರುವ ದೊರೆಯ ಚಿತ್ರ, ಸಂಖ್ಯೆ 150

ಹಿ : ಗುಡ್ಡ; ಅದರ ಮೇಲೆ ನಕ್ಷತ್ರ ಮತ್ತು ಅರ್ಧಚಂದ್ರ;
ಬ್ರಾಹ್ಮೀ ಲಿಪಿಯ ಬರಹ, ರಾಜ್ಞೋ ಮಹಾಕ್ಷತ್ರಪಸ
ರುದ್ರಸಿಂಹ ಪುತ್ರಸ ರಾಜ್ಞೋ ಮಹಾಕ್ಷತ್ರಪಸ ದಾಮಸೇನಸ

ವೀರದಾಮ (ಕ್ರಿ.ಶ. 234-238)

ಮು : ದೊರೆಯ ಚಿತ್ರ, ಸಂಖ್ಯೆ ಅಸ್ಪಷ್ಟ

ಹಿ : ನಕ್ಷತ್ರ, ಅರ್ಧಚಂದ್ರ ಸಹಿತ ಗುಡ್ಡ; ಬ್ರಾಹ್ಮೀ ಬರಹ, ರಾಜ್ಞೋ ಮಹಾಕ್ಷತ್ರಪ..... ಪುತ್ರಸ ರಾಜ್ಞೋ ಕ್ಷತ್ರಪಸ ವೀರದಾಮ್ನಃ

ಈಶ್ವರದತ್ತ (ಕ್ರಿ.ಶ. 236-239)

ಮು : ಮೇಲಿನಂತೆ; ಸಂಖ್ಯೆ 164, 167

ಹಿ : ಗುಡ್ಡ; ಬ್ರಾಹ್ಮೀ ಬರಹ, ರಾಜ್ಞೋ ಮಹಾಕ್ಷತ್ರಪಸ ಈಶ್ವರದತ್ತಸ ವರ್ಷೇ ಪ್ರಥಮೇ

ವಿಜಯಸೇನ (ಕ್ರಿ.ಶ. 238-250)

ಮು : ಮೇಲಿನಂತೆ

ಹಿ : ಗುಡ್ಡ; ಬ್ರಾಹ್ಮೀ ಬರಹ, ರಾಜ್ಞೋ ಮಹಾಕ್ಷತ್ರಪಸ ದಾಮಸೇನ ಪುತ್ರಸ ರಾಜ್ಞೋ ಮಹಾಕ್ಷತ್ರಪಸ ವಿಜಯಸೇನಸ

ದಾಮಸೇನನ ಮಗ

ಮು : ಮೇಲಿನಂತೆ; ತೇದಿಯಲ್ಲ

ಹಿ : ಗುಡ್ಡ; ಬ್ರಾಹ್ಮೀ ಬರಹ, ರಾಜ್ಞೋ ಮಹಾಕ್ಷತ್ರಪಸ ದಾಮಸೇನ ಪುತ್ರಸ

ಇಮ್ಮಡಿ ರುದ್ರಸೇನ (ಕ್ರಿ.ಶ. 255-276)

ಮು : ರಾಜನ ಚಿತ್ರ; ತೇದಿ 187

ಹಿ : ಗುಡ್ಡ; ಬ್ರಾಹ್ಮೀ ಬರಹ, ರಾಜ್ಞೋ ಕ್ಷತ್ರಪಸ ಪುತ್ರಸ ರಾಜ್ಞೋ ಮಹಾಕ್ಷತ್ರಪಸ ರುದ್ರಸೇನಸ

ವಿಶ್ವಸಿಂಹ (ಕ್ರಿ.ಶ. 277-278)

ಮು : ರಾಜನ ಚಿತ್ರ; ತೇದಿ ಅಸ್ಪಷ್ಟ

ಹಿ : ಗುಡ್ಡ; ಬ್ರಾಹ್ಮೀ ಬರಹ, ರಾಜ್ಞೋ ಮಹಾಕ್ಷತ್ರಪಸ
ರುದ್ರಸೇನ ಪುತ್ರಸ ರಾಜ್ಞಃ ಕ್ಷತ್ರಪಸ ವಿಶ್ವಸಿಂಹಸ

ಭರ್ತೃದಾಮ (ಕ್ರಿ.ಶ. 279-295)

ಮು : ರಾಜನ ಚಿತ್ರ; ತೇದಿ 200

ಹಿ : ಗುಡ್ಡ; ಬ್ರಾಹ್ಮೀ ಬರಹ ರಾಜ್ಞೋ ಮಹಾಕ್ಷತ್ರಪಸ
ಭರ್ತೃದಾಮ್ನಃ

ವಿಶ್ವಸೇನ (ಕ್ರಿ.ಶ. 294-304)

ಮು : ರಾಜನ ಚಿತ್ರ; ತೇದಿ ಅಸ್ಪಷ್ಟ

ಹಿ : ಗುಡ್ಡ; ಬ್ರಾಹ್ಮೀ ಬರಹ, ರಾಜ್ಞೋ ಮಹಾಕ್ಷತ್ರಪಸ
ವಿಶ್ವಸೇನಸ

ರುದ್ರಸೇನನ ಮಗ

ಮು : ರಾಜನ ಚಿತ್ರ; ತೇದಿ ಅಸ್ಪಷ್ಟ

ಹಿ : ಗುಡ್ಡ; ಬ್ರಾಹ್ಮೀ ಬರಹ, ರಾಜ್ಞೋ ಮಹಾಕ್ಷತ್ರಪಸ ರುದ್ರ
ಸೇನ ಪುತ್ರಸ

ಇಮ್ಮಡಿ ರುದ್ರಸಿಂಹ (ಕ್ರಿ.ಶ. 305-315)

ಮು : ಮೇಲಿನಂತೆ

ಹಿ : ಗುಡ್ಡ; ಬ್ರಾಹ್ಮೀ ಬರಹ, ಸ್ವಾಮಿಜೀವದಾಮ ಪುತ್ರಸ
ರಾಜ್ಞಃ ಕ್ಷತ್ರಪಸ ರುದ್ರಸಿಂಹಸ

ಯಶೋದಾಮ (ಕ್ರಿ.ಶ. 317-332)

ಮು : ರಾಜನ ಚಿತ್ರ; ತೇದಿ 244

ಹಿ : ಗುಡ್ಡ; ಬ್ರಾಹ್ಮೀ ಬರಹ, ರಾಜ್ಞೋ ಕ್ಷತ್ರಪಸ ರುದ್ರಸಿಂಹಸ
ಪುತ್ರಸ ರಾಜ್ಞೋ ಕ್ಷತ್ರಪಸ ಯಶೋದಾಮ್ನಃ

ದೂರದ ಪ್ರಾಂತದ ಈ ನಾಣ್ಯಗಳು ಕರ್ನಾಟಕಕ್ಕೆ ಹೇಗೆ ಬಂದವು ಎನ್ನುವುದನ್ನು ಒಂದೇ ಒಂದು ನಾಣ್ಯರಾಶಿಯಿಂದ ಹೇಳಲು ಕಷ್ಟ. ಆ ರಾಜ್ಯದ ಪ್ರಜೆಯೊಬ್ಬನು ಕಾರಣಾಂತರಗಳಿಂದ ಇಲ್ಲಿಗೆ ಬಂದು, ಈ ನಾಣ್ಯಗಳು ಇಲ್ಲಿ ಉಳಿದಿರಬಹುದು ಇಲ್ಲವೇ ಕರ್ನಾಟಕದ ಪ್ರಜೆಯೊಬ್ಬನು ಅಲ್ಲಿಗೆ ಹೋಗಿ ಬರುವಾಗ ಈ ನಾಣ್ಯಗಳನ್ನು ಇಲ್ಲಿಗೆ ತಂದಿರಬಹುದು. ವ್ಯಾಪಾರ ಅಥವಾ ಸಾಂಸ್ಕೃತಿಕ ಕಾರಣಗಳನ್ನು ಖಚಿತವಾಗಿ ತಿಳಿಸಲು ಸಾಧ್ಯವಿಲ್ಲ. ಆದರೆ ಈ ಎರಡೂ ರಾಜ್ಯಗಳಿಗೆ ಸಂಪರ್ಕಗಳಿದ್ದವು ಎಂದು ಮಾತ್ರ ಹೇಳಬಹುದು.

11. ಚೋಳರ ನಾಣ್ಯಗಳು

ಕರ್ನಾಟಕಕ್ಕೂ, ತಮಿಳುನಾಡಿನ ಚೋಳರಿಗೂ ಪ್ರಾಚೀನ ಕಾಲದಿಂದ ವ್ಯಾಪಾರ ಮತ್ತು ರಾಜಕೀಯ ಸಂಬಂಧಗಳು ಇದ್ದವು. ಅದಕ್ಕೂ ಮುಂಚೆ ಪಲ್ಲವರಿಗೂ, ಬಾದಾಮಿಯ ಚಲುಕ್ಯರಿಗೂ ರಾಜಕೀಯವಾಗಿ ಸಂಬಂಧಗಳು ಇದ್ದವು. ಚೋಳ ದೊರೆಗಳು ಕರ್ನಾಟಕದ ಕೋಲಾರ, ಮೈಸೂರು, ಚಾಮರಾಜನಗರ, ಬೆಂಗಳೂರು, ಮಂಡ್ಯ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ತನ್ನ ಆಧಿಪತ್ಯವನ್ನು ಸ್ವಲ್ಪ ಕಾಲದವರೆಗೆ, ಅಂದರೆ ಕ್ರಿ.ಶ. ಹನ್ನೊಂದು ಮತ್ತು ಹನ್ನೆರಡನೆಯ ಶತಮಾನದಲ್ಲಿ ಸ್ಥಾಪಿಸಿದರು. ತಲಕಾಡಿನ ಗಂಗರು ಅಶಕ್ತರಾದೊಡನೆ, ಚೋಳರು ಈ ಭಾಗವನ್ನು ಸ್ವಲ್ಪಕಾಲ ತಮ್ಮದಾಗಿಸಿಕೊಂಡರು. ಆದರೆ ಕ್ರಿ.ಶ. 1116ರಲ್ಲಿ ಹೊಯ್ಸಳ ವಿಷ್ಣುವರ್ಧನನು, ಚೋಳರನ್ನು ಸಂಪೂರ್ಣವಾಗಿ ಸೋಲಿಸಿ, ಅವರು ಕರ್ನಾಟಕದಿಂದ ಕಾಲ್ತೆಗೆಯುವಂತೆ ಮಾಡಿದನು. ಇದು ಎಷ್ಟೊಂದು ಮಹತ್ವದ ವಿಜಯವಾಗಿತ್ತೆಂದರೆ, ವಿಷ್ಣುವರ್ಧನನು 'ತಲಕಾಡುಗೊಂಡ' ಎಂಬ ಬಿರುದನ್ನು ಧರಿಸಿದುದು ಮಾತ್ರವಲ್ಲದೆ, ಈ ಬಿರುದನ್ನು ಬರಹವಾಗಿ ಹೊಂದಿರುವ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಕುಲೋತ್ತುಂಗನ ಮರಣಾನಂತರ ವಿಕ್ರಮ ಚೋಳನು ಕ್ರಿ.ಶ. 1153ರವರೆಗೆ ಕೋಲಾರದ ಕೆಲವು ಭಾಗಗಳಲ್ಲಿ ತನ್ನ ಆಧಿಪತ್ಯವನ್ನು ಹೊಂದಿದ್ದನು. ಇದಾದ ಸ್ವಲ್ಪ ಸಮಯದ ನಂತರ ಚೋಳರ ಪ್ರಾಬಲ್ಯ ಸಂಪೂರ್ಣವಾಗಿ ಕಡಿಮೆಯಾಯಿತು.

ಚೋಳರು ಕರ್ನಾಟಕದ ಭಾಗಗಳಲ್ಲಿ ಆಧಿಪತ್ಯವನ್ನು ಹೊಂದಿದ್ದುದರಿಂದ, ಅಲ್ಲಿ ಚಲಾವಣೆಗೋಸ್ಕರ ತಮ್ಮದೇ ಆದ, ಅಂದರೆ ಚೋಳ ನಮೂನೆಯ ನಾಣ್ಯಗಳನ್ನು ಟಂಕಿಸಿದರು. ಇವುಗಳ ಮೇಲೆ ತಮಿಳು ಬರಹ, ಚೋಳ ದೊರೆಗಳ ಬಿರುದುಗಳು, ಲಾಂಛನಗಳು ಕಂಡುಬರುತ್ತವೆ. ಕರ್ನಾಟಕದ ಜಿಲ್ಲೆಗಳಲ್ಲಿ ದೊರಕಿರುವ ಚೋಳರ ಶಾಸನಗಳಲ್ಲಿ, ಇವರು ಟಂಕಿಸಿದ ಮಾಡೈ ಎಂಬ ನಾಣ್ಯ ಹಾಗೂ ಅದರ ಪ್ರಭೇದಗಳಾದ ರಾಜರಾಜನ್ ಮಾಡೈ, ಕುಲೋತ್ತುಂಗ ಮಾಡೈ, ಮುಡಿಗೊಂಡಶೋಳನ್ ಮಾಡೈ ಮುಂತಾದುವುಗಳ ಉಲ್ಲೇಖ ಕಾಣಬರುತ್ತದೆ. ಚಾಮರಾಜನಗರದ ಶಾಸನ ಒಂದರಲ್ಲಿ

ಅಂತಿಯಕಾಬರಣನ್ ಮಾಡೈ ಎಂಬ ನಾಣ್ಯದ ಉಲ್ಲೇಖವಿದೆ. ಇದರ ವಿವರಗಳು ಗೊತ್ತಿಲ್ಲ.

ಚೋಳರ ಅನೇಕ ತಮಿಳು ಶಾಸನಗಳಲ್ಲಿ 'ಪಳಂಗಾಸು' ಎನ್ನುವ ಪದದ ಉಲ್ಲೇಖ ಕಾಣಬರುತ್ತದೆ. ಇದರ ಅರ್ಥ ಹಳೆಯ ಕಾಸು. ಇದಕ್ಕೆ ಪ್ರತಿಯಾಗಿರುವುದು ಪುದುಕಾಸು ಅಥವಾ ಹೊಸಕಾಸು. ಇದೇ ರೀತಿಯಲ್ಲಿ ನರ್ಕಾಸು, ಅನ್ರಾಡು ನರ್ಕಾಸು, ಅನ್ರಾಡು ನಡಕ್ಕುಂ ನರ್ ಪಳಂಗಾಸು ಎನ್ನುವ ಪದಗುಚ್ಛಗಳು ಚೋಳರ ಶಾಸನಗಳಲ್ಲಿ ಕಾಣಬರುತ್ತವೆ. ನರ್ಕಾಸು ಅಂದರೆ ಅಂದಿಗೆ ಚಲಾವಣೆಯಲ್ಲಿರುವ ಕಾಸು ಎಂದರ್ಥ. ಕೆಲವು ನಾಣ್ಯಗಳು ಹಳೆಯಕಾಸುಗಳಾಗಿದ್ದರೂ, ಅವು ಅಂದಿಗೆ ಚಲಾವಣೆಯಲ್ಲಿದ್ದ ಒಳ್ಳೆಯ ನಾಣ್ಯಗಳಾಗಿ ಎಲ್ಲ ವ್ಯಾಪಾರ-ವ್ಯವಹಾರಗಳಲ್ಲಿ ಜನಗಳು ಅವುಗಳನ್ನು ಒಪ್ಪಿಕೊಳ್ಳುತ್ತಿದ್ದರು. ಅಂದರೆ ಪಳಂಗಾಸು, ಹಳೆಯದಾದರೂ ಅದು ದೈನಂದಿನ ವ್ಯವಹಾರಗಳಲ್ಲಿ ಯಾವ ಅಡಚಣೆಯೂ ಇಲ್ಲದೆ ಚಲಾವಣೆಯಲ್ಲಿದ್ದಿತು ಎಂದು ಗೊತ್ತಾಗುತ್ತದೆ. ಪಳಂಗಾಸು ಎನ್ನುವ ಪದ ಅನೇಕ ಕನ್ನಡ ಗ್ರಂಥಗಳಲ್ಲಿ ಕಾಣಬರುತ್ತದೆ. ಪಂಪಭಾರತ, ರನ್ನನ ಅಜಿತಪುರಾಣ, ನೇಮಿನಾಥನ ಲೀಲಾವತೀಪ್ರಬಂಧ, ಸಾಳುವನ ರಸರತ್ನಾಕರ ಎಂಬ ಗ್ರಂಥಗಳಲ್ಲಿ ಪಳಂಗಾಸುವಿನ ಉಲ್ಲೇಖ ಕಾಣಬರುತ್ತದೆ. ಈ ಗ್ರಂಥಗಳ ರಚಯಿತರು ಸಾಮಾನ್ಯವಾಗಿ ಪಳಂಗಾಸುವಿನ ಹೊಳೆಯುವ ಬಣ್ಣ ಮತ್ತು ಚಿನ್ನದ ಶುದ್ಧತೆಯನ್ನು ವಿಶೇಷವಾಗಿ ಮೆಚ್ಚಿಕೊಂಡಿದ್ದಾರೆ. ಅಂದರೆ ಅವು ಹಳೆಯ ನಾಣ್ಯಗಳಾದರೂ, ಅವುಗಳ ಆಂತರಿಕ ಮೌಲ್ಯ ಕಡಿಮೆಯಾಗಿರಲಿಲ್ಲ. ಅದಕ್ಕೆ ವಿರುದ್ಧವಾಗಿ ಅವುಗಳ ಮೌಲ್ಯ ಹೆಚ್ಚಾಗಿದ್ದಿತು. ಇದು ಗಮನಾರ್ಹ ವಿಷಯ. ಕೆಳಗಿನ ನಮೂನೆಯ ಚೋಳ ನಾಣ್ಯಗಳು ಕರ್ನಾಟಕದಲ್ಲಿ ದೊರಕಿವೆ.

ಉತ್ತಮ ಚೋಳ

ಇದು ಬೆಳ್ಳಿಯ ನಾಣ್ಯ; ತೂಕ 62 ಗ್ರೇನ್.

ಮು : ಮಲಗಿರುವ ಹುಲಿ; ದೀಪಸ್ತಂಭ; ಬಿಲ್ಲು; ಖಡ್ಗ

ಹಿ : ಎರಡು ಸಾಲುಗಳ ನಾಗರೀ ಬರಹ

ಉತ್ತಮ

ಚೋಳ

ಇದೇ ನಮೂನೆಯಲ್ಲಿ ಅನೇಕ ಪ್ರಬೇಧಗಳ ನಾಣ್ಯಗಳು ದೊರಕಿವೆ. ಒಂದು ಚಿನ್ನದ ನಾಣ್ಯದಲ್ಲಿ ಬರಹ ಗ್ರಂಥಲಿಪಿಯಲ್ಲಿದೆ.

ಮೊದಲನೆಯ ರಾಜರಾಜ

ಇದು ಬೆಳ್ಳಿಯ ನಾಣ್ಯ; ತೂಕ 52 ಗ್ರೇನ್.

ಮು : ಮಲಗಿರುವ ಹುಲಿ ಮತ್ತು ಮೀನು; ದೀಪಸ್ತಂಭ
ನಾಗರೀ ಬರಹ, ಶ್ರೀ ರಾಜರಾಜ

ಹಿ : ಕುಳಿತಿರುವ ರಾಜನ ಚಿತ್ರ

ಇದರಲ್ಲಿಯೂ ಅನೇಕ ಪ್ರಭೇದಗಳಿವೆ.

ಇದು ಚಿನ್ನದ ನಾಣ್ಯ; 52 ಗ್ರೇನ್; ಅಗಲ 0.75".

ಮು : ನಿಂತಿರುವ ರಾಜ

ಹಿ : ಮೂರು ಸಾಲುಗಳ ನಾಗರೀ ಬರಹ
ಶ್ರೀ
ರಾಜ
ರಾಜ

ಇದು ತಾಮ್ರದ ನಾಣ್ಯ; ತೂಕ 69 ಗ್ರೇನ್.

ಮು : ನಿಂತಿರುವ ರಾಜ

ಹಿ : ಮೂರು ಸಾಲುಗಳ ನಾಗರೀ ಬರಹ
ಶ್ರೀ
ಲಂಕಾ
ವೀರ

ಇದು ತಾಮ್ರದ ನಾಣ್ಯ; ತೂಕ 57 ಗ್ರೇನ್; ಅಗಲ 0.7".

ಮು : ನಿಂತಿರುವ ರಾಜ

ಹಿ : ಎಡಕ್ಕಿರುವ ವರಾಹ

ಇದು ತಾಮ್ರದ ನಾಣ್ಯ; ತೂಕ 72 ಗ್ರೇನ್; ಅಗಲ 0.65".

ಮು : ನಿಂತಿರುವ ಕೃಷ್ಣ

ಹಿ : ನಾಗರೀ ಬರಹ
ರಾಜ
ರಾಜ

ಇನ್ನೊಂದು ನಮೂನೆಯ ತಾಮ್ರದ ನಾಣ್ಯದಲ್ಲಿ ಕುದುರೆಯ ಸವಾರನ ಚಿತ್ರವಿದೆ;

ಮು : ಎಡಕ್ಕೆ ಚಲಿಸುತ್ತಿರುವ ಕುದುರೆ ಸವಾರರು

ಹಿ : ಮೇಲಿನ ನಾಣ್ಯದಂತೆ ಬರಹ

ಇದೇ ನಮೂನೆಯ ಇನ್ನೊಂದು ನಾಣ್ಯದಲ್ಲಿ ಮುಮ್ಮುಖದಲ್ಲಿ ಅಲಂಕೃತ ಕುದುರೆ ಇದೆ.

ಇನ್ನೊಂದು ನಮೂನೆಯ ತಾಮ್ರದ ನಾಣ್ಯದಲ್ಲಿ ಎರಡು ಕಡೆಯೂ ರಾಜನ ಚಿತ್ರವಿದೆ.

ಮು : ಕುಳಿತಿರುವ ರಾಜ ಮತ್ತು ರಾಜರಾಜ ಎನ್ನುವ ಬರಹ

ಹಿ : ಮುಮ್ಮುಖದಂತೆಯೇ ಇರುವ ವಿನ್ಯಾಸ

ಮೊದಲನೆಯ ರಾಜೇಂದ್ರ

ಇದು ಬೆಳ್ಳಿಯ ನಾಣ್ಯ; ತೂಕ 66 ಗ್ರೇನ್; ಅಗಲ 0.8".

ಮು : ಹುಲಿ, ಚಾಮರ, ಛತ್ರಿ, ದೀಪಸ್ತಂಭ; ನಾಗರೀ ಬರಹ
ಶ್ರೀ ರಾಜೇಂದ್ರ

ಹಿ : ಮುಮ್ಮುಖದಂತೆ

ಇದು ಇನ್ನೊಂದು ನಮೂನೆಯ ಬೆಳ್ಳಿಯ ನಾಣ್ಯ; ತೂಕ 62 ಗ್ರೇನ್; ಅಗಲ 0.7".

ಮು : ಹುಲಿ, ಮೀನು ಮತ್ತು ನಾಗರೀ ಬರಹ
ಗಂಗೈಕೊಂಡ
ಚೋಳ

ಹಿ : ಮುಮ್ಮುಖದಂತೆ

ಮೊದಲನೆಯ ಕುಲೋತ್ತುಂಗ

ಇದು ತಾಮ್ರದ ನಾಣ್ಯ; ತೂಕ 44 ಗ್ರೇನ್; ಅಗಲ 0.8".

ಮು : ನಿಂತಿರುವ ರಾಜ

ಹಿ : ಮೂರು ಸಾಲುಗಳ ನಾಗರೀ ಬರಹ
ಶ್ರೀ
ಕುಲೋ
ತ್ತುಂಗ

ವಿಕ್ರಮ ಚೋಳ

ಇದು ತಾಮ್ರದ ನಾಣ್ಯ; ತೂಕ 62 ಗ್ರೇನ್; ಅಗಲ 0.7".

ಮು : ನಿಂತಿರುವ ನಂದಿ; ನಾಗರೀ ಬರಹ
ವೀರ ವಿಕ್ರಮ ಚೋಳ

ಹಿ : ನಿಂತಿರುವ ರಾಜ

ಎರಡನೆಯ ರಾಜಾಧಿರಾಜ

ಮು : ನಿಂತಿರುವ ನಂದಿ; ನಾಗರೀ ಬರಹ ಮತ್ತು ಶಂಖ

ಹಿ : ನಿಂತಿರುವ ರಾಜ

ಚೋಳರ ನಾಣ್ಯಪದ್ಧತಿಯು ಹೊಯ್ಸಳ ನಾಣ್ಯಗಳ ಮೇಲೆ ಪ್ರಭಾವ ಬೀರಿತು. ಹೊಯ್ಸಳರು ತಮ್ಮ ಹಿಂದಿನವರಾದ ಕಲ್ಯಾಣದ ಚಾಲುಕ್ಯರ ನಾಣ್ಯಗಳನ್ನು ಅನುಕರಿಸದೆ, ಚೋಳರ ನಾಣ್ಯ ನಮೂನೆಯನ್ನು ಅನುಕರಿಸಿದರು. ಚೋಳರ ನಾಣ್ಯಗಳು ವಿಶೇಷವಾಗಿ ಹಳೆಯ ಮೈಸೂರು ಸಂಸ್ಥಾನದ ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ದೊರಕುತ್ತವೆ.

ಅಧ್ಯಾಯ 10

ಹಿನ್ನುಡಿ

ಇದುವರೆಗೆ ಕರ್ನಾಟಕದಲ್ಲಿ ನಾಣ್ಯಗಳು ನಡೆದುಬಂದ ದಾರಿಯನ್ನು ಗಮನಿಸಲಾಗಿದೆ. ಇದಕ್ಕಾಗಿ ಈವರೆಗೆ ದೊರಕಿರುವ ನಾಣ್ಯಗಳನ್ನೇ ಮುಖ್ಯ ಆಕರವಾಗಿ ಇಟ್ಟುಕೊಂಡಿದ್ದರೂ, ಶಾಸನಗಳ, ಕನ್ನಡ ಪ್ರಾಚೀನ ಗ್ರಂಥಗಳ ಹಾಗೂ ವಿದೇಶೀ ಬರಹಗಾರರ ಮಾಹಿತಿಗಳನ್ನು ಜೊತೆ ಜೊತೆಗೆ ಬಳಸಿಕೊಳ್ಳಲಾಗಿದೆ. ಈ ಅಧ್ಯಯನದಿಂದ ತಿಳಿದುಬರುವ ಕೆಲವು ಮುಖ್ಯ ಅಂಶಗಳನ್ನು ಗುರುತಿಸಬಹುದು. ಕರ್ನಾಟಕದಲ್ಲಿ ವಿಪುಲವಾಗಿ ನಾಣ್ಯಗಳು ದೊರಕಿದ್ದರೂ, ಅವುಗಳ ಅಧ್ಯಯನ ಸಮರ್ಪಕವಾಗಿ ನಡೆದಿಲ್ಲ. ದೊರಕಿರುವ ನಾಣ್ಯಗಳನ್ನು ಸರಿಯಾಗಿ ಪಟ್ಟಿಮಾಡಿ ಪ್ರಕಟಿಸುವ ಕಾರ್ಯವೂ ಆಗಿಲ್ಲ. ಹೀಗಾಗಿ ವಿದ್ವಾಂಸರಿಗೆ ಸಾವಿರಾರು ನಾಣ್ಯಗಳ ಪರಿಚಯವೇ ಆಗಿಲ್ಲ. ಇದೇ ಮಾತನ್ನು ನಾಣ್ಯ ಸಂಗ್ರಹಕಾರರ ಬಗೆಯೂ ಹೇಳಬೇಕು. ನಾಣ್ಯಗಳನ್ನು ಸಂಗ್ರಹಿಸುವುದು ಉತ್ತಮವಾದ ಹವ್ಯಾಸವೇ ಸರಿ; ಆದರೆ ಆ ಸಂಗ್ರಹವನ್ನು ನಾಣ್ಯಶಾಸ್ತ್ರಜ್ಞರ ಗಮನಕ್ಕೆ ತರುವುದು ಅಗತ್ಯವಾಗಿ ಮಾಡಬೇಕಾದ ಕೆಲಸ. ಇದರ ವಿಷಯದಲ್ಲಿ ಎಲ್ಲರೂ ಆಸಕ್ತಿ ವಹಿಸಬೇಕು. ನಾಣ್ಯಶಾಸ್ತ್ರಜ್ಞರು ಮತ್ತು ನಾಣ್ಯ ಸಂಗ್ರಹಕಾರರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ಎರಡೂ ಮುಖಗಳೂ ಸೇರಿದರೆ ಒಂದು ನಾಣ್ಯವಾಗುತ್ತದೆ, ಅದಕ್ಕೆ ಅರ್ಥ ಬರುತ್ತದೆ.

ನಾಣ್ಯಗಳ ಪ್ರಾಚೀನತೆಯ ದೃಷ್ಟಿಯಿಂದ ಕರ್ನಾಟಕವನ್ನು ಗಮನಿಸಿದಾಗ ಆಸಕ್ತಿಕರವಾದ ವಿಷಯಗಳು ಹೊರಹೊಮ್ಮುತ್ತವೆ. ಭಾರತದ ಪ್ರಾಚೀನತಮ ನಾಣ್ಯಗಳಾದ ಪಂಚ್ ಚಿಹ್ನೆಯ ನಾಣ್ಯಗಳೇ ಕರ್ನಾಟಕದಲ್ಲೂ ಅತ್ಯಂತ ಪ್ರಾಚೀನ ನಾಣ್ಯಗಳು. ಇವೇ ಕಾರ್ಷಾಪಣಗಳು. ಇವು ಮೌರ್ಯರ ಕಾಲದಲ್ಲಿ ಉತ್ತರ ಭಾರತದಲ್ಲಿ ತಯಾರಾಗುತ್ತಿದ್ದವು. ಈ ನಮೂನೆಯ ನಾಣ್ಯಗಳು ಕರ್ನಾಟಕದಲ್ಲಿ ದೊರಕಿದ್ದರೂ ಕೂಡ, ಸ್ಥಳೀಯವಾಗಿ ತಯಾರಾದವುಗಳೇ ಅಥವಾ ಉತ್ತರ ಭಾರತದಿಂದ ಆಮದಾದ ನಾಣ್ಯಗಳೇ ಎನ್ನುವ ವಿಷಯ ಇನ್ನೂ ಸ್ಪಷ್ಟವಾಗಿಲ್ಲ. ವೈಜ್ಞಾನಿಕ ಹಾಗೂ ರಾಸಾಯನಿಕ ಪರೀಕ್ಷೆಗಳಿಗೆ ಈ ನಾಣ್ಯಗಳನ್ನು ಒಳಪಡಿಸಿದರೆ ಇದನ್ನು ಸ್ಪಷ್ಟಪಡಿಸಬಹುದು. ಆ ಕಾರ್ಯ ಇನ್ನೂ

ಆಗಬೇಕಾಗಿದೆ. ಪ್ರಯೋಗ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಲೋಹಶಾಸ್ತ್ರಜ್ಞರು ಈ ವಿಷಯದಲ್ಲಿ ಆಸಕ್ತಿ ವಹಿಸಿದರೆ, ಕರ್ನಾಟಕದ ಪ್ರಾಚೀನ ಲೋಹಗಾರಿಕೆಯ ಬಗೆಗೆ ಬೆಳಕು ಚೆಲ್ಲಲು ಅನುಕೂಲವಾಗುತ್ತದೆ.

ಶಾತವಾಹನರ ನಾಣ್ಯಗಳು ಕರ್ನಾಟಕದಲ್ಲಿ ವಿಪುಲವಾಗಿ ದೊರಕಿಲ್ಲದಿರುವುದು ನಿಜವಾದರೂ, ಅವರ ಮೊದಲ ದೊರೆಗಳ ನಾಣ್ಯಗಳು ಇಲ್ಲಿ ದೊರಕಿರುವುದು ಬಲು ಪ್ರಮುಖವಾದ ಅಂಶ. ಇತ್ತೀಚಿನ ಉತ್ಖನನಗಳಾದ ಸನ್ನತಿ ಮತ್ತು ಕಂಗನಹಳ್ಳಿಗಳಲ್ಲಿ ಮೊದಲ ಶಾತವಾಹನ ದೊರೆಗಳ ನಾಣ್ಯಗಳು ದೊರಕಿದ್ದು, ಈ ನೆಲೆಗಳ ಪ್ರಾಚೀನತೆಯನ್ನು ಹಿಂದಕ್ಕೆ ಕೊಂಡೊಯ್ಯುತ್ತವೆ. ಮೊದಲ ಶಾತವಾಹನ ದೊರೆಗಳು ಕರ್ನಾಟಕಕ್ಕೆ ಬಂದಿರಲಿಲ್ಲ. ಇಲ್ಲಿ ಅವರಿಗೆ ರಾಜಕೀಯ ಆಸಕ್ತಿ ಇರಲಿಲ್ಲ ಎಂಬ ಸಿದ್ಧಾಂತವನ್ನು ಈ ನಾಣ್ಯಗಳು ತಪ್ಪೆಂದು ತೋರಿಸಿವೆ. ಈ ದೃಷ್ಟಿಯಿಂದ 'ಸಾತಾಹನಿಹಾರ' (ಬಳ್ಳಾರಿಯ ಸುತ್ತಮುತ್ತಲ ಸ್ಥಳ) ಶಾತವಾಹನರ ಉಗಮಸ್ಥಾನವಾಗಿದ್ದಿರಬೇಕೆಂಬ ಹಳೆಯ ಸಿದ್ಧಾಂತವನ್ನು ಈಗ ದೃಢಪಡಿಸಬಹುದೇನೋ ಎನ್ನುವ ಶಂಕೆ ಇತಿಹಾಸಕಾರರಲ್ಲಿ ಉಂಟಾಗಿದ್ದರೆ ಆಶ್ಚರ್ಯವೇನಿಲ್ಲ. ಈ ದೃಷ್ಟಿಯಿಂದ ಸನ್ನತಿ, ಕಂಗನಹಳ್ಳಿ ಮತ್ತು ಕುಂದೂರಿನ ಶಾತವಾಹನ ನಾಣ್ಯಗಳ ಅಧ್ಯಯನ ಮಾಡಬೇಕು.

ಬನವಾಸಿ ಕದಂಬರ ಚಿನ್ನದ ಪದ್ಮಟಂಕ ನಾಣ್ಯಗಳು ಒಂದು ದೃಷ್ಟಿಯಿಂದ ಕರ್ನಾಟಕದ ವೈಶಿಷ್ಟ್ಯವೆನ್ನಬೇಕು. ಅದು ಕರ್ನಾಟಕದಲ್ಲಿ ಉಗಮವಾಯಿತೇ ಎನ್ನುವ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಬೇಕಾದ ಅಗತ್ಯವಿದೆ. ಭಾರತದ ಇತರ ಭಾಗಗಳಲ್ಲಿ ಈ ಸಮಯಕ್ಕೆ ಈ ನಮೂನೆಯ ನಾಣ್ಯಗಳು ಬಳಕೆಯಲ್ಲಿದ್ದವೇ ಎಂಬುದನ್ನು ಅಧ್ಯಯನ ಮಾಡಿದರೆ, ಪದ್ಮಟಂಕದ ವಿಷಯ ಹೆಚ್ಚು ಸ್ಪಷ್ಟಗೊಳ್ಳುತ್ತದೆ.

ವರಹ ಅಥವಾ ವರಾಹ ಎಂಬ ಚಿನ್ನದ ನಾಣ್ಯ ಎಲ್ಲೆಡೆಯಲ್ಲಿಯೂ ಚಲಾವಣೆಯಲ್ಲಿದ್ದ ನಾಣ್ಯ. ಬಾದಾಮಿ ಚಲುಕ್ಯರು ತಮ್ಮ ಲಾಂಛನವಾದ ವರಾಹದ ಚಿತ್ರವನ್ನು ಈ ನಾಣ್ಯಗಳ ಮೇಲೆ ಅಳವಡಿಸಿದ್ದರಿಂದ, ಈ ನಾಣ್ಯಗಳಿಗೆ ವರಹ ಅಥವಾ ವರಾಹ ಎನ್ನುವ ಹೆಸರು ಬಂದಿತು ಎಂದು ಎಲ್ಲರೂ ಒಪ್ಪಿದ್ದಾರೆ. ಕಾಲಕ್ರಮದಲ್ಲಿ ನಾಣ್ಯಗಳ ಮೇಲೆ ವರಾಹದ ಚಿತ್ರವಿರಲಿ, ಇಲ್ಲದೇ ಇರಲಿ, ಈ ನಮೂನೆಯ ನಾಣ್ಯಗಳಿಗೆ ವರಹ ಎಂಬ ಹೆಸರೇ ಖಾಯಂ ಆಗಿ ಉಳಿದುಕೊಂಡು ಬಂದಿತು. ಈ ಪದ ಇಂದಿಗೂ ಬಳಕೆಯಲ್ಲಿದೆ. ಭಾರತೀಯ ನಾಣ್ಯಶಾಸ್ತ್ರಕ್ಕೆ ಇದು ಬಾದಾಮಿ ಚಲುಕ್ಯರ ಅಂದರೆ ಕರ್ನಾಟಕದ ಕೊಡುಗೆ ಎಂಬುದನ್ನು ಗಮನಿಸಬೇಕು.

ಕಲ್ಯಾಣ ಚಾಲುಕ್ಯರ ನಾಣ್ಯಗಳು ಆಂಧ್ರ, ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ವಿದರ್ಭ, ಮಧ್ಯಪ್ರದೇಶ ಮುಂತಾದ ಸ್ಥಳಗಳಲ್ಲಿ ದೊರಕಿದ್ದು, ಅವರ ಸಾಮ್ರಾಜ್ಯದ ವಿಸ್ತಾರಕ್ಕೆ ಸಾಕ್ಷಿಯಾಗಿವೆ. ಇದೇ ಮಾತನ್ನು ದೇವಗಿರಿಯ ಸೇವುಣರ ನಾಣ್ಯಗಳಿಗೂ

ಅನ್ವಯಿಸಬಹುದು. ಇವರು ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳರ ಸಮಕಾಲೀನರಾಗಿದ್ದುದರಿಂದ, ಕಲ್ಯಾಣದ ಚಾಲುಕ್ಯರ ಪಂಚ್ ನಾಣ್ಯದ ತಾಂತ್ರಿಕತೆ ಹಾಗೂ ಹೊಯ್ಸಳರ ದ್ವಿಮುಖ ಮುದ್ರಾ ವಿಧಾನ ತಾಂತ್ರಿಕತೆ, ಎರಡನ್ನೂ ಉಪಯೋಗಿಸಿ ತಮ್ಮ ನಾಣ್ಯಗಳನ್ನು ಟಂಕಿಸಿದರು ಎನ್ನುವುದು ಗಮನಿಸಬೇಕಾದ ಅಂಶ. ಹೊಯ್ಸಳರು ತಮಿಳುನಾಡು ಮತ್ತು ಕೇರಳಗಳಲ್ಲಿಯೂ ರಾಜಕೀಯ ಆಸಕ್ತಿ ಹೊಂದಿದ್ದರೆಂಬುದು ಶಾಸನಗಳಿಂದ ತಿಳಿದಿದ್ದ ವಿಚಾರ. ಈಗ ಹೊಯ್ಸಳರ ಗ್ರಂಥ ಲಿಪಿ ನಾಣ್ಯಗಳು ತಮಿಳುನಾಡಿನಲ್ಲಿ ದೊರಕಿದ್ದು, ಈ ವಿಷಯವನ್ನು ದೃಢಪಡಿಸುತ್ತವೆ. ಸಾಮಂತ ರಾಜರಿಂದ ಅಚ್ಚು ಹಾಕಿಸಲ್ಪಟ್ಟ ಹತ್ತಾರು ನಾಣ್ಯಗಳು ದೊರಕಿದ್ದು, ದಕ್ಷಿಣ ಭಾರತದ ಆಡಳಿತ ವ್ಯವಸ್ಥೆಯಲ್ಲಿ, ಸಾಮಂತರ ಅಂತಸ್ತಿಗೆ ಶ್ರೇಷ್ಠತೆ ದೊರಕಿದಂತಾಗಿದೆ. ಇದೊಂದು ಮಹತ್ವದ ಸಂಗತಿ. ತುಳುನಾಡಿನಲ್ಲಿ ಆಳಿದ ಆಳುಪರ ನಾಣ್ಯ ಒಂದರಲ್ಲಿ 'ಗದ್ಯಾಣ' ಎನ್ನುವ ಬರಹವಿದ್ದು, ಇಡೀ ಭಾರತೀಯ ನಾಣ್ಯಶಾಸ್ತ್ರ ಇತಿಹಾಸದಲ್ಲಿ ಈ ರೀತಿಯ ಇದೇ ಮೊದಲನೆಯ ನಾಣ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದೊಂದು ಪ್ರಮುಖವಾದ ಅಂಶ.

ವಿಜಯನಗರ ಕಾಲದ ನಾಣ್ಯಗಳ ಬಗೆಗೆ ಹೇಳುವುದಾದರೆ, ಇತಿಹಾಸಕಾರರು ಊಹಿಸಲೂ ಸಾಧ್ಯವಾಗದಷ್ಟು ಹೊಸ ನಮೂನೆಯ ನಾಣ್ಯಗಳು ಬೆಳಕಿಗೆ ಬಂದು ಈ ನಾಣ್ಯಗಳ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಈ ಹೊಸ ನಮೂನೆಗಳಲ್ಲಿ ವಿವಿಧ ದೇವತೆಗಳು, ಧಾರ್ಮಿಕ ಚಿಹ್ನೆಗಳು ಹಾಗೂ ಬರಹಗಳು ಸೇರಿವೆ. ಹ $2^1/_2$ ಮತ್ತು $1^1/_4$ ಎಂಬ ಕನ್ನಡ ಸಂಖ್ಯೆಯುಳ್ಳ ನಾಣ್ಯಗಳು ಅತ್ಯಂತ ಮಹತ್ತರವಾದವು. ಇದುವರೆಗೆ ಯಾವ ಹಿಂದೂ ನಾಣ್ಯದ ಮೇಲೂ ಮೌಲ್ಯದ ಉಲ್ಲೇಖದ ಬರಹವಿದ್ದುದು ತಿಳಿದುಬಂದಿರಲಿಲ್ಲ. ಆದುದರಿಂದ ಈ ನಾಣ್ಯವೇ ಈ ಕೀರ್ತಿಗೆ ಪಾತ್ರವಾಗಿದೆ. ವಿಜಯನಗರ ಕಾಲದಲ್ಲಿ ಬೆಳ್ಳಿಯ ನಾಣ್ಯಗಳು ಇರಲಿಲ್ಲವೆಂದು ಮೊದಲಿನ ನಾಣ್ಯಶಾಸ್ತ್ರಜ್ಞರು ಭಾವಿಸಿದ್ದರು. ಒಂದೆರಡು ಬೆಳ್ಳಿಯ ನಾಣ್ಯಗಳು ಪತ್ತೆಯಾದ ಮೇಲೆ, ಕಡಿಮೆ ಸಂಖ್ಯೆಯ ಬೆಳ್ಳಿಯ ನಾಣ್ಯಗಳನ್ನು ವಿಜಯನಗರದ ದೊರೆಗಳು ಅಚ್ಚುಮಾಡಿಸಿದ್ದರು ಎನ್ನುವ ಅಭಿಪ್ರಾಯವನ್ನು ಮಂಡಿಸಲಾಯಿತು. ಆದರೆ ಇತ್ತೀಚೆಗೆ ನೂರಾರು ವಿಜಯನಗರ ಬೆಳ್ಳಿಯ ನಾಣ್ಯಗಳು ದೊರಕಿದ್ದು, ಇವರು ಚಿನ್ನ, ಬೆಳ್ಳಿ ಮತ್ತು ತಾಮ್ರಗಳಲ್ಲಿ ಸಮಾನವಾಗಿ ನಾಣ್ಯಗಳನ್ನು ಅಚ್ಚು ಹಾಕಿಸಿದರು ಎನ್ನುವ ಅಭಿಪ್ರಾಯಕ್ಕೆ ಬರಲಾಗಿದೆ. ಬೆಳ್ಳಿಯ ನಾಣ್ಯಗಳ ಕೊರತೆ ನಿವಾರಣೆಯಾಗಿದೆ. ನೂರಾರು ವಿಜಯನಗರದ ಶಾಸನಗಳ ಮಾಹಿತಿ ಹಾಗೂ ಸಮಕಾಲೀನ ವಿದೇಶೀ ಬರಹಗಾರರ ಬರವಣಿಗೆಗಳನ್ನು ಆಧರಿಸಿ ನೋಡಿದಾಗ, ಆ ಕಾಲದ ನಾಣ್ಯದ ತಾಂತ್ರಿಕತೆ, ವ್ಯವಸ್ಥಿತ ನಿಯಂತ್ರಣ, ನಾಣ್ಯಗಳ ಪ್ರಭೇದಗಳು ಹಾಗೂ ಟಂಕಶಾಲೆಗಳ ಹೆಸರುಗಳು ಮುಂತಾದ ವಿಷಯಗಳಲ್ಲಿ ಹೊಸ ಬೆಳಕು ಚೆಲ್ಲಿದಂತಾಗಿದ್ದು, ವಿಜಯನಗರ ನಾಣ್ಯಗಳನ್ನು ಆಳವಾಗಿ ಅಭ್ಯಾಸಮಾಡಲು ಅವಕಾಶವಾಗಿದೆ.

ಮಧ್ಯಕಾಲೀನ ಸುಲ್ತಾನರು, ಪಾಳೆಯಗಾರರು, ನವಾಬರು ಮತ್ತು ಮುಘಲರ ನಾಣ್ಯಗಳ ಬಗೆಗೆ ಹೊಸ ನಮೂನೆಗಳು ದೊರಕಿವೆ. ಕರ್ನಾಟಕದಲ್ಲಿ ಎಷ್ಟೊಂದು ಮುಘಲರ ಟಂಕಶಾಲೆಗಳಿದ್ದವು ಎಂಬುದನ್ನು ಗಮನಿಸಿದಾಗ, ಆ ಸಂಖ್ಯೆ ಆಶ್ಚರ್ಯವನ್ನುಂಟುಮಾಡುತ್ತದೆ. ಇದೇ ಒಂದು ಪ್ರತ್ಯೇಕ ಅಧ್ಯಯನಕ್ಕೆ ಆಗುವಷ್ಟು ವಿಪುಲವಾಗಿದೆ. ಟೀಪು ಸುಲ್ತಾನನ ಹೊಸ ನಮೂನೆಯ ನಾಣ್ಯಗಳು ದೊರಕಿವೆ. ಇವುಗಳ ಮೇಲೆ ನಮೂದಿತವಾಗಿರುವ ಹೊಸ ಟಂಕಶಾಲೆಗಳ ಹೆಸರು ಗಮನಾರ್ಹವಾದವು. ಅಬ್ಬೂರು, ಬೇಕಲ್, ಗಂಡಿಕೋಟೆ, ಸಕ್ಕರೆಪಟ್ಟಣ ಮುಂತಾದ ಹೊಸ ಟಂಕಶಾಲೆಗಳು, ಇದುವರೆಗೆ ತಿಳಿದಿದ್ದ ಟಂಕಶಾಲೆಗಳ ಪಟ್ಟಿಗೆ ಸೇರ್ಪಡೆಯಾಗಿವೆ.

ಅನೇಕ ವಿದೇಶೀ ನಾಣ್ಯಗಳು ಕರ್ನಾಟಕದಲ್ಲಿ ದೊರಕಿದ್ದು, ಈ ದೇಶಗಳಿಗೂ ಕರ್ನಾಟಕಕ್ಕೂ ಇದ್ದ ವ್ಯಾಪಾರ ಮತ್ತು ಇತರ ಸಂಬಂಧಗಳಿಗೆ ಉತ್ತಮ ಸಾಕ್ಷಿಯಾಗಿವೆ. ಈ ದೃಷ್ಟಿಯಿಂದ ಚೀನೀ, ವೆನಿಷಿಯನ್, ರೋಮನ್ ನಾಣ್ಯಗಳು ಅಧ್ಯಯನಯೋಗ್ಯವಾಗಿವೆ. ಈ ರೀತಿ ಕರ್ನಾಟಕ ನಾಣ್ಯಗಳ ಅಧ್ಯಯನ ಇತಿಹಾಸಕಾರನಿಗೆ ಹೊಸ ಸಾಧ್ಯತೆಗಳ ಸೂಚಿಯಾಗಿವೆ.

ಕೊನೆಯದಾಗಿ, ನಾಣ್ಯಸಂಗ್ರಹಣೆಯ ಬಗೆಗೆ ಒಂದು ಮಾತು. ನಮ್ಮ ದೇಶದ ಕಾನೂನುಗಳಿಗನುವಾಗಿ ಯಾರು ಬೇಕಾದರೂ ಪ್ರಾಚೀನ ನಾಣ್ಯಗಳನ್ನು ಸಂಗ್ರಹಿಸಬಹುದು. ನಮ್ಮ ದೇಶದಲ್ಲಿ ಪ್ರಾಚೀನ ಅವಶೇಷಗಳು, ಅಂದರೆ ಒಂದು ನೂರು ವರ್ಷಗಳಿಗಿಂತ ಪ್ರಾಚೀನವಾದ ಕಲ್ಲಿನ ಶಿಲ್ಪ, ಲೋಹದ ವಿಗ್ರಹಗಳು, ಅವಶೇಷಗಳು, ವರ್ಣಚಿತ್ರಗಳು, ಕೈಬರಹಗಳು ಮುಂತಾದುವುಗಳನ್ನು ಸಂಗ್ರಹಿಸಲು ಅವುಗಳಿಗೆ ಸಂಬಂಧಿಸಿದ ಕಾನೂನುಗಳಿವೆ. ಈ ವಸ್ತುಗಳನ್ನು ಭಾರತ ಸರಕಾರದ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯಲ್ಲಿ ಸರಿಯಾದ ರೀತಿಯಲ್ಲಿ ನೋಂದಣಿ ಮಾಡಿಸಬೇಕು. ಹಾಗೆ ಮಾಡದೇ ಇದ್ದರೆ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಆದರೆ ಪ್ರಾಚೀನ ನಾಣ್ಯಗಳನ್ನು ಈ ಕಾನೂನಿನಿಂದ ಹೊರಗಿಡಲಾಗಿದೆ. ಆದುದರಿಂದ ಯಾರು ಬೇಕಾದರೂ ಋಜುಮಾರ್ಗದಲ್ಲಿ ಪ್ರಾಚೀನ ನಾಣ್ಯಗಳನ್ನು ಸಂಗ್ರಹಿಸಬಹುದು. ಆದರೆ ಈ ನಾಣ್ಯಗಳನ್ನು ನಮ್ಮ ದೇಶದಿಂದ ಹೊರದೇಶಗಳಿಗೆ ಒಯ್ಯುವ ಹಾಗಿಲ್ಲ ಮತ್ತು ಕಳುಹಿಸುವಂತೆಯೂ ಇಲ್ಲ. ಹಾಗೆ ಮಾಡಿದರೆ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಆದುದರಿಂದ ನಾಣ್ಯ ಸಂಗ್ರಹಕಾರರು ತಮ್ಮ ಹಿತದೃಷ್ಟಿಯಿಂದ ಹಾಗೂ ಅಧ್ಯಯನದ ದೃಷ್ಟಿಯಿಂದ ತಮ್ಮ ಸಂಗ್ರಹದ ಯಾದಿಯನ್ನು ಎಲ್ಲ ವಿವರಗಳೊಡನೆ ತಯಾರಿಸಿ ಇಟ್ಟುಕೊಂಡರೆ, ಅವುಗಳನ್ನು ನಿಯತಕಾಲಿಕೆಗಳಲ್ಲಿ ಪ್ರಕಟಮಾಡಲು ಅನುಕೂಲವಾಗುತ್ತದೆ. ನಾಣ್ಯವು ಸಿಕ್ಕಿದ ಸ್ಥಳ, ತೂಕ, ಅಗಲ, ದಪ್ಪ, ಮುಮ್ಮುಖ ಮತ್ತು ಹಿಮ್ಮುಖಗಳ ವಿವರಗಳು, ನಮೂನೆಯ ವಿವರ, ಪ್ರಕಟಿತ ಅಥವಾ ಅಪ್ರಕಟಿತ ಮುಂತಾದ ವಿವರಗಳನ್ನೊಳಗೊಂಡ ಪಟ್ಟಿಯನ್ನು

ನಾಣ್ಯದ ಚಿತ್ರ ಸಮೇತ ತಯಾರಿಸಿಕೊಂಡು ಇಟ್ಟರೆ, ಅಧ್ಯಯನಕ್ಕೆ ಅನುಕೂಲವಾಗುತ್ತದೆ. ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿರುವ ಅಂಜನೇರಿಯಲ್ಲಿರುವ ಭಾರತೀಯ ನಾಣ್ಯ ಸಂಶೋಧನಾ ಸಂಸ್ಥೆಯು ಪ್ರತಿವರ್ಷವೂ ವಿವಿಧ ರೀತಿಯ ನಾಣ್ಯಶಾಸ್ತ್ರ ತರಬೇತಿ ತರಗತಿಗಳನ್ನು ನಡೆಸುತ್ತದೆ. ಇವೆಲ್ಲವೂ ಸಣ್ಣ ಅವಧಿಯ ಅಂದರೆ, ಹದಿನೈದು ದಿನ, ಒಂದು ತಿಂಗಳು, ಮೂರು ತಿಂಗಳು, ಮುಂತಾದ ಅವಧಿಯ ತರಗತಿಗಳು ನಡೆಯುತ್ತವೆ. ಇವುಗಳಿಗೆ ಸೇರಿಕೊಂಡರೆ ನಾಣ್ಯಶಾಸ್ತ್ರದ ಬಗೆಗೆ ಉತ್ತಮ ಮಾಹಿತಿಗಳು ದೊರಕುತ್ತವೆ ಹಾಗೂ ಉತ್ತಮ ನಾಣ್ಯ ಸಂಗ್ರಹಕಾರರಾಗಲು ಬೇಕಾದ ಶಿಕ್ಷಣ ದೊರಕುತ್ತದೆ.

ನಾಣ್ಯಗಳು ಒಂದು ರಾಷ್ಟ್ರದ ಅಮೂಲ್ಯ ಸಾಂಸ್ಕೃತಿಕ ಸಂಪತ್ತು. ಅದನ್ನು ಉಳಿಸಿಕೊಂಡು ಮುಂದಿನ ಪೀಳಿಗೆಗೆ ಒಪ್ಪಿಸಬೇಕಾದುದು ನಾಗರಿಕರೆಲ್ಲರ ಆದ್ಯ ಕರ್ತವ್ಯ. ನಾಣ್ಯಗಳು ಸಣ್ಣ ಪ್ರಮಾಣದ ಅವಶೇಷಗಳಾದುದರಿಂದ ಅವುಗಳು ಸುಲಭವಾಗಿ ಹಾಳಾಗುತ್ತವೆ. ಸಾಮಾನ್ಯವಾಗಿ ಪ್ರಾಚೀನ ನಾಣ್ಯಗಳು ಭೂಮಿಯಲ್ಲಿ ಹುದುಗಿಹೋಗಿದ್ದು, ಮನೆಕಟ್ಟಲು ಪಾಯಕ್ಕಾಗಿ ಅಗೆಯುವಾಗ ಅಥವಾ ವ್ಯವಸಾಯಕ್ಕಾಗಿ ಭೂಮಿಯನ್ನು ಅಗೆಯುವಾಗ ಹೊರಕ್ಕೆ ಬಂದು ಕಾಣಿಸಿಕೊಳ್ಳುತ್ತವೆ. ಇದನ್ನು ಹೊರತೆಗೆದ ಕೆಲಸಗಾರರು, ಈ ವಿಷಯವನ್ನು ಯಾರಿಗೂ ತಿಳಿಸದೆ ತಮ್ಮ ತಮ್ಮಲ್ಲೇ ಹಂಚಿಕೊಂಡು, ಅಕ್ಕಸಾಲಿಗನಲ್ಲಿಗೆ ತೆಗೆದುಕೊಂಡು ಹೋಗಿ ಅವುಗಳನ್ನು ಮಾರುವುದು ಅಥವಾ ಕರಗಿಸುವುದು ಬಲು ಸಾಮಾನ್ಯವಾದ ಸಂಗತಿ. ಇದು ಗುಟ್ಟಾಗಿ ಉಳಿಯದೆ, ಕೊನೆಗೆ ಅಧಿಕಾರಿಗಳಿಗೆ ತಿಳಿದು ಪೋಲೀಸರು ಅಲ್ಲಿಗೆ ಹೋಗುವಷ್ಟರಲ್ಲಿ ಬಹುತೇಕ ನಾಣ್ಯಗಳು ಅಕ್ಕಸಾಲಿಗನ ಮೂಸೆಯಲ್ಲಿ ಕರಗಿ ಹೋಗಿರುತ್ತವೆ. ನಾಣ್ಯಗಳು ಉಳಿದಿದ್ದರೆ ಪುರಾತತ್ವ ಇಲಾಖೆಯನ್ನು ಸೇರುತ್ತವೆ. ಇದಕ್ಕೆ ಸಾಮಾನ್ಯ ಜನಗಳ ಮೌಢ್ಯವೇ ಕಾರಣ. ಆದುದರಿಂದ ನಾಣ್ಯಗಳ ಬಗೆಗೆ, ಅವುಗಳ ಇತಿಹಾಸದ ಮಹತ್ವದ ಬಗೆಗೆ ಜನಜಾಗೃತಿ ಮೂಡಿಸಬೇಕು. ಅವುಗಳು ಲೋಹದ ಬಿಲ್ಲೆಗಳಲ್ಲ; ಅವು ಇತಿಹಾಸ ಸಂದೇಶದ ವಾಹಕಗಳು ಎಂಬ ವಿಷಯವನ್ನು ಜನಗಳಿಗೆ ತಿಳಿಯಹೇಳಬೇಕು. ದಿನಪತ್ರಿಕೆಗಳು, ನಿಯತಕಾಲಿಕೆಗಳು, ರೇಡಿಯೊ, ಟಿ.ವಿ. ಮುಂತಾದ ಮಾಧ್ಯಮಗಳು ಈ ಸಂದೇಶವನ್ನು ಜನಗಳಿಗೆ ತಲುಪುವ ಕಾರ್ಯವನ್ನು ಮಾಡಬೇಕು. ಆಗಾಗ್ಗೆ ನಾಣ್ಯಗಳ ಪ್ರದರ್ಶನಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳಿಗೆ ಹಾಗೂ ಜನಸಾಮಾನ್ಯರಿಗೆ ನಾಣ್ಯಗಳ ಐತಿಹಾಸಿಕ ಮಹತ್ವವನ್ನು ತಿಳಿಸಬೇಕು. ಈ ರೀತಿ ಕಾರ್ಯಗಳನ್ನು ಹಮ್ಮಿಕೊಂಡರೆ ನಮ್ಮ ಸಾಂಸ್ಕೃತಿಕ ಅವಶೇಷಗಳಾದ ನಾಣ್ಯಗಳ ರಕ್ಷಣೆಗೆ ಅವಕಾಶವಾಗುತ್ತದೆ. ಇದು ನಮ್ಮ ಸಾಂಸ್ಕೃತಿಕ ಕರ್ತವ್ಯವೂ ಹೌದು.

○

ಡಾ। ಎ.ವಿ. ನರಸಿಂಹಮೂರ್ತಿ ಅವರು ಪುರಾತತ್ವಶಾಸ್ತ್ರದಲ್ಲಿ ಅಂತಾರಾಷ್ಟ್ರೀಯ ಮನ್ನಣೆ ಪಡೆದವರು. ಅವರು ಇಂಗ್ಲಿಷ್‌ನಲ್ಲಿ ಬರೆದ ಲೇಖನಗಳೂ, ಪುಸ್ತಕಗಳೂ ಬಹುಜನ ವಿದ್ವಾಂಸರಿಗೆ ಪ್ರಿಯವಾಗಿವೆ. ಅವರು ಇಂಗ್ಲಿಷಿನಲ್ಲಿ ಬರೆದ ನಾಣ್ಯದ ಮೇಲಣ ಗ್ರಂಥ ಪ್ರಮಾಣಗ್ರಂಥವೆಂಬ ಹೆಸರಿಗೆ ಕೀರ್ತಿತವಾಗಿದೆ. ಆ ವಿಷಯಕ್ಕೆ ಸಂಬಂಧಿಸಿದಂತೆ ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಪ್ರೊ. ಎ.ವಿ. ನರಸಿಂಹಮೂರ್ತಿ ಅವರು ಬರೆದ ಲೇಖನಗಳು ಆ ಕ್ಷೇತ್ರದ ವ್ಯಾಸಂಗಿಗಳಿಗೆ, ಆಸಕ್ತರಿಗೆ ಜ್ಞಾನದ ಹೊಸಬಾಗಿಲನ್ನು ತೆರೆಸಿದಂತಾಗಿಯೆಂದು ನಾನು ಭಾವಿಸುತ್ತೇನೆ.

ಕರ್ನಾಟಕ ನಾಣ್ಯ ಪರಂಪರೆ ಎಂಬ ಈ ಹೊತ್ತಗೆಯು ಕರ್ನಾಟಕ ನಾಣ್ಯ ಪರಂಪರೆಯ ಎರಡು ಸಾವಿರ ವರ್ಷಗಳಿಗೂ ಮೀರಿದ ಚಾರಿತ್ರಿಕ ಹೆಜ್ಜೆ ಗುರುತುಗಳನ್ನು ಹಿಡಿಯಲು ಯತ್ನಿಸಿದೆ; ಅದು ಯಶಸ್ವಿಯೂ ಆಗಿದೆ. ಕರ್ನಾಟಕಕ್ಕೆ ಹಸ್ತಪ್ರತಿ ಚರಿತ್ರೆ ಇರುವಂತೆ, ಶಾಸನಗಳ ಚರಿತ್ರೆ ಇರುವಂತೆ, ಅಕ್ಷರಶಾಸ್ತ್ರದ ಚರಿತ್ರೆ ಇರುವಂತೆ, ನಾಣ್ಯದ ಚರಿತ್ರೆಯೂ ಉಂಟು - ಇದು ಕರ್ನಾಟಕ ಸಂಸ್ಕೃತಿಯ ಮೂಲ-ಚೂಲಗಳನ್ನು ತಿಳಿಯಲು ನೆರವಾಗುತ್ತದೆ. ಈ ಗ್ರಂಥದ ಮೂಲಕ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ ವಿಶಾಲ ಮತ್ತು ವಿಶಿಷ್ಟವಾದ ಕ್ರಮದಲ್ಲಿ ಅನಾವರಣಗೊಂಡಂತಾಗಿದೆ. ಇಂಥ ಉತ್ಕೃಷ್ಟ ಕೃತಿಯನ್ನು ಸಿದ್ಧಪಡಿಸಿಕೊಟ್ಟ ಪ್ರೊ. ಎ.ವಿ. ನರಸಿಂಹಮೂರ್ತಿಯವರನ್ನು ನಾನು ಮನವಾರೆ ಅಭಿವಂದಿಸುತ್ತೇನೆ. ಕನ್ನಡ ಜನ ಈ ಪುಸ್ತಕದ ಮಹತ್ವ ತಿಳಿದು ಓದಬೇಕೆಂದು ಆಶಿಸುತ್ತೇನೆ.

ಪ್ರೊ। ಮಲ್ಲೇಪುರಂ ಜಿ. ವೆಂಕಟೇಶ್
ಅಧ್ಯಕ್ಷರು

ISBN 81-7713-125-7

ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

ಬೆಲೆ 200/-